# STUDIES
## IN THE
# SCRIPTURES

## ಸತ್ಯವೇದ ಗ್ರಂಥದಲ್ಲಿನ ಅಧ್ಯಯನಗಳು

ನ್ಯಾಯದ ಪಥವು ಹೊಳೆಯುವ ಬೆಳಕಿನಂತೆ
ಆ ಪರಿಪೂರ್ಣ ದಿನದವರೆಗೆ
ಹೆಚ್ಚು ಹೆಚ್ಚಾಗಿ ಪ್ರಜ್ವಲಿಸುತ್ತಾ ಬರುವುದು

"The Path of the Just is as the Shining Light,
Which Shineth More and More
Unto the Perfect Day"

**ಸಂಪುಟ 2** SERIES II

# ಕಾಲವು ಸಮೀಪವಾಯಿತು

# The Time is at Hand

(Kannada)

"ದೇವರ ಸನ್ನಿಧಾನದಿಂದ ವಿಶ್ರಾಂತಿ ಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು ... **ಸಮಸ್ತವನ್ನೂ ಸರಿಮಾಡುವ ಕಾಲವು ಬರುವತನಕ** ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ."
" ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ; ನೀವೆಲ್ಲರೂ ಬೆಳಕಿನವರೂ, ಹಗಲಿನವರೂ ಆಗಿದ್ದೀರಷ್ಟೆ." – ಅ.ಕೃ. 3:9–21, 1 ಥೆಸ. 5:4

# To the King of Kings and Lord of Lords

IN THE INTEREST OF
HIS CONSECRATED SAINTS,
WAITING FOR THE ADOPTION,

--AND OF--

"ALL THAT IN EVERY PLACE CALL UPON THE LORD,"
"THE HOUSEHOLD OF FAITH,"

--AND OF--

THE GROANING CREATION, TRAVAILING AND WAITING FOR THE MANIFESTATION OF THE SONS OF GOD,

## THIS WORK IS DEDICATED.

---

" To make all see what is the fellowship of the mystery which from the beginning of the world hath been hid in God." "Wherein He hath abounded toward us in all wisdom and prudence, having made known unto us the mystery of His will, according to His good pleasure which He hath purposed in Himself; that in the dispensation of the fulness of the times He might gather together in one all things, under Christ."
Eph. 3:4,5,9;1:8-10

---

Written in 1904 by Pastor Russell

# ಕಾಲವು ಸಮೀಪವಾಯಿತು

## ಲೇಖಕನ ಮುನ್ನುಡಿ

## THE AUTHOR'S FOREWORD

ಈ ಸಂಪುಟದ ಮೊದಲನೆಯ ಮುದ್ರಣವು ಸಾರ್ವಜನಿಕರಿಗೆ 1889ರಲ್ಲಿ ಕೊಡಲಾಯಿತು. ಅಂದಿನಿಂದ, ಒಂದರ ಹಿಂದೆ ಒಂದರಂತೆ ಮುದ್ರಣವು ಅನೇಕ ಭಾಷೆಗಳಲ್ಲಿ ಹೊರಟಿರುವದು, ಇಂದಿನವರೆಗೆ 1½ ಮಿಲಿಯನ್ ಪ್ರತಿಗಳು ಜನರ ಕೈಯಲ್ಲಿದೆ (1914ರ ಹೊತ್ತಿಗೆ). ಸತ್ಯವೇದವು ಒಂದು ದೈವಿಕ ಪ್ರಕಟನೆ ಎಂದು ಕೆಲವೇ ಮಂದಿ ಮಾತ್ರ ನಂಬಿರುವ ಈ ಕಾಲದಲ್ಲಿ ನಮಗೆ ಈ ಸಂಖ್ಯೆಯು ಆಶ್ಚರ್ಯವನ್ನುಂಟುಮಾಡುತ್ತದೆ. ಹಾಗೂ ಸತ್ಯವೇದದಲ್ಲಿ ಯಾರು ನಂಬಿಕೆ ಇಟ್ಟಿರುವವರೋ ಅವರು ಪ್ರವಾದನೆಯನ್ನು ಮತ್ತು ಕಾಲಗಣನೆಯನ್ನು ಮೆಚ್ಚುವವರಾಗಿದ್ದಾರೆ – ಮುಖ್ಯವಾಗಿ ಸತ್ಯವೇದದ ಕಾಲಗಣನೆ ಮತ್ತು ಸತ್ಯವೇದದಲ್ಲಿ ಲೋಕದ ಚರಿತ್ರೆ.

ಪ್ರತಿಯೊಂದು ನಾಡಿನಲ್ಲೂ ಸತ್ಯವೇದದ ಅಧ್ಯಯನ ಮಾಡುವ ದೇವಜನರಿಗೆ ಈ ಸಂಪುಟವು ಬಹಳ ಉಪಯುಕ್ತವಾಗಿದೆ ಎಂಬ ಸಾಕ್ಷ್ಯವು ದೊರೆಯುತ್ತಿರಲು, ಲೇಖಕ ಮತ್ತು ಸಂಪಾದಕನಿಗೆ ಹರ್ಷಿಲು ಒಂದು ದೊಡ್ಡ ಕಾರಣವಾಗಿದೆ– ದೇವರ ವಾಕ್ಯದ ವಾರ್ತೆಯನ್ನು ತಾಳೆ ಹಾಕಿ, ಅದರ ವಿವಿಧ ತಲೆಬರಹಗಳು ಮತ್ತು ವರ್ಗೀಕರಣಗಳು ಸತ್ಯವೇದ ವಿದ್ಯಾರ್ಥಿಗೆ ಸಹಾಯಕವಾಗಿವೆ. ಬಹು ಮುಖ್ಯವಾಗಿ ಎರಡನೆಯ ಬರೋಣದ ರೀತಿಯ ಬಗ್ಗೆ ಅದ್ಯಾಯನದಿಂದ ಬಹಳ ಮಂದಿಯು ಆಶೀರ್ವಾದವನ್ನು ಹೊಂದಿದ್ದಾರೆ ಎಂದು ತಿಳಿದುಬಂದಿದೆ – ಈ ಸಂಪುಟದಲ್ಲಿ ಬರುವ ವೇದ ವಾಕ್ಯದ ಆಧಾರಗಳ ಪ್ರಕಾರ ನಮ್ಮ ಕರ್ತನು ಮತ್ತೆ ಎಂದಿಗೂ ಮನುಷ್ಯನಾಗಿ ಈ ಭೂಮಿಗೆ ಬರುವದಿಲ್ಲ, ಆತನು ಮನುಷ್ಯನಾಗಿ ಬಂದು ತನ್ನ ಉದ್ಧೇಶಿತ ಕಾರ್ಯವನ್ನು ಸಂಪೂರ್ಣವಾಗಿ ನೆರವೇರಿಸಿ, ದೇವರ ಕೃಪೆಯಿಂದ ಎಲ್ಲಾ ಮನುಷ್ಯರಿಗೋಸ್ಕರ ಕಲ್ವೇರಿಯಲ್ಲಿ ಮರಣವನ್ನು ಅನುಭವಿಸಿದನು. ಓದುಗರ ಗಮನಕ್ಕೆ ತಂದಿರುವ ಪಾಠಗಳು, ನಮ್ಮ ಕರ್ತನು ಈಗ ಮಹಿಮೆ ಹೊಂದಿದವನು ಹಾಗೂ ತಂದೆಯ ಬಲಗಡೆಯಲ್ಲಿರುವನು, ಹಾಗೂ ಶೀಘ್ರದಲ್ಲಿ ಲೋಕದ ಅರಸನಾಗುವನು, ಎಂಬ ವಿಚಾರವನ್ನು ತಿಳಿದ ಅನೇಕರಿಗೆ ಸಹಾಯವಾಗಿದೆ ಎಂದು ಅವರ ಪತ್ರಗಳು ಸಾಕ್ಷ್ಯ ಕೊಡುತ್ತವೆ.

ಈ ಸಂಪುಟವು ದೋಷರಹಿತವೆಂದು ಸಾಧಿಸುವದಿಲ್ಲ, ಹಾಗೂ ದೇವರ ವಾಕ್ಯದಿಂದ ನೇರವಾಗಿ ಪ್ರೇರಿತವಾಗಿ ಬರೆದಿರುವದು ಎಂದು ಕೂಡ ಸಾಧಿಸುವದಿಲ್ಲ. ವ್ಯತಿರಿಕ್ತವಾಗಿ, ಸತ್ಯವೇದವು ದೈವಿಕ ಪ್ರೇರಣೆಯಿಂದ ಬರೆಯಲ್ಪಟ್ಟಿರುವದು ಎಂದು ಸಾಧಿಸುತ್ತದೆ. ಅದರ ಪ್ರಯತ್ನವು ಸತ್ಯವೇದದ ಘಟನೆಗಳನ್ನು ತಾಳೆ ನೋಡಿ ಅದರ ಮಹತ್ವಗಳ ಬಗ್ಗೆ ಸಲಹೆಯನ್ನು ಕೊಡುವದಾಗಿದೆ.

ಈ ಪಾಠದ ವಿಷಯಗಳು ಬಹಳ ಕ್ಲಿಷ್ಟವಾಗಿರಲಾಗಿ, ಇತರರು ಇದನ್ನು ಸ್ಪರ್ಷಿಸಿ ನೋಡುವದೂ ಸಹ ಬಹಳ ವಿರಳ. ಈ ಸಂಪುಟದಲ್ಲಿ ಕೊಟ್ಟಿರುವ ಹಲವಾರು ಸಲಹೆಗಳು ಸಂಪೂರ್ಣವಾಗಿ ಅಕ್ಷರಶಃ ನಿಖರತೆಯಿಂದ ನೆರವೇರಿರುವದಿಲ್ಲ ಎಂದರೆ ಆಶ್ಚರ್ಯವೇನಲ್ಲ. ಆದರೆ, ಈ ಸಂಪುಟದ ಲೇಖಕ ಮತ್ತು ಸಂಪಾದಕರು ಮತ್ತು ಸಾವಿರಾರು ಓದುಗರು ಇದರಲ್ಲಿ ಬರುವ ನಿರೂಪಣೆಯ ಬಗ್ಗೆ ನಾಚಿಕೆಪಡುವವರಲ್ಲ. ಅಲ್ಲದೇ ಸತ್ಯವೇದ ಅದ್ಯಯನದಲ್ಲಿ ಆಸಕ್ತಿ ಇರುವವರಿಗೆ ಇದರ ಪ್ರತಿಯನ್ನು ಇನ್ನೂ ಸಹ ಒದಗಿಸುತ್ತಿದ್ದಾರೆ – ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳಲು ಇದು ಬಹಳ ಆಸಕ್ತಿಪೂರಕವೂ ಮತ್ತು ಅತ್ಯಂತ ಸಹಾಯಕವೂ ಆಗಿದೆ.

ಇದರಲ್ಲಿ ಪ್ರಸ್ತುತ ಪಡಿಸಿರುವ ಸತ್ಯವೇದದ ಕಾಲಗಣನೆಯು ಆದಾಮನೊಂದಿಗೆ 6000 ವರ್ಷದ ಮಹಾ ಆರಂಭದ ದಿನವು ಮುಕ್ತಾಯವಾಗಿದೆ, ಮತ್ತು ಕ್ರಿಸ್ತನ ರಾಜ್ಯಭಾರದ ಸಾವಿರ ವರ್ಷದ ಆ ಮಹಾ ಏಳನೆಯ ದಿನವು 1874ರಲ್ಲಿ ಪ್ರಾರಂಭವಾಗಿದೆ. ಇಲ್ಲಿ ತಿಳಿಸಿರುವ ಮಿಲಿನಿಯಮ್ ಎಂದು ಈ ಸಂಪುಟವು ಹಕ್ಕು ಸಾಧಿಸುವ 42 ವರ್ಷಗಳ ಘಟನೆಗಳು, ಸತ್ಯವೇದದ ಪ್ರವಾದನೆಯೊಂದಿಗೆ ದೃಡೀಕರಿಸುತ್ತದೆ ಎಂದು ಇನ್ನು ಸಹ ಕಾಣುತ್ತೇವೆ. ಈ 42 ವರ್ಷಗಳಲ್ಲಿ ನಮ್ಮ ಕಾಲದ ಎಲ್ಲಾ ಅವಿಷ್ಕರಣಗಳು (Inventions) ಪೂರೈಸಿದೆ. ಹೊಲಿಗೆ ಯಂತ್ರ ಮೊದಲನೆಯದು, ಅದರ ಪರಿಪೂರ್ಣತೆಯನ್ನು 42 ವರ್ಷಗಳ ಹಿಂದೆಯೇ ಪಡೆಯಿತು. ಅಲ್ಲಿಂದ, ನಮಗೆ ಎಲ್ಲ ತರದ ಉಳುವ ಯಂತ್ರಗಳು ಆಯುಧಗಳು, ಕಾರ್ಯಾಗಾರ, ದಾಸ್ತಾನು ಮಳಿಗೆ, ಕಾರ್ಖಾನೆ ಮತ್ತು ಗೃಹೋಪಯೋಗಿ ಉಪಕರಣಗಳು, ಹೇರಳವಾಗಿಯೂ ಕಡಿಮೆ ಬೆಲೆಯಲ್ಲಿಯೂ ದೊರೆಯುವದು. ಇದು ಮನುಷ್ಯರ ಅವಿಷ್ಕರಣದಿಂದಾಯಿತು (Inventions). ಇವುಗಳು ಕೆಲಸದ ಸಮಯವನ್ನು ಕಡಿಮೆಗೊಳಿಸುತ್ತವೆ, ಬೆವರಿಳಿವ ಮುಖವನ್ನು (sweat of face) ದೂರ ಮಾಡುತ್ತದೆ. ಇದನ್ನು ಸತ್ಯವೇದವು ಶಾಪದೊಡನೆ ಗುರುತಿಸಿಕೊಳ್ಳುತ್ತದೆ.

ಈ 42 ವರ್ಷಗಳಲ್ಲಿ ಲೋಕದಲ್ಲಿ ಸಮೃದ್ಧಿಯು ಸಾವಿರದಷ್ಟು ಹೆಚ್ಚಾಗಿದೆ ಎಂದು ಖಂಡಿತವಾಗಿ ಹೇಳಬಹುದು. ಮತ್ತು ನಾವು ಜ್ಞಾಪಿಸಿಕೊಳ್ಳುವದಾದರೆ 42 ವರ್ಷಗಳ ಹಿಂದೆ ಪೂರಾ 6000 ವರ್ಷಗಳು ಮನುಷ್ಯರು ಪ್ರಯತ್ನ ಪಡುತಿದ್ದರು, ಆದರೆ ಹಿಂದಿನ 6000 ವರ್ಷಗಳಲ್ಲಿ ಸಾಧಿಸಲಾಗದ್ದನ್ನು ಕೇವಲ 42 ವರ್ಷಗಳಲ್ಲಿ ಸಾವಿರದಷ್ಟನ್ನು ಲೋಕವು ಸಾಧಿಸಿದೆ ಎಂಬದು ಒಂದು ಪವಾಡವೇ ಆಗಿದೆ. ಇದು ಖಂಡಿತವಾಗಿ ನಾವು ಏಳನೇ ದಿನವನ್ನು ಪ್ರವೇಶಿಸಿದ್ದೇವೆ ಎಂದು ಈ ಸಂಪುಟದಲ್ಲಿ ಸಾಧಿಸುವದನ್ನು ದೃಢೀಕರಿಸುತ್ತದೆ. ನಾವು ಈಗಾಗಲೇ ಒಂದು ಜನಾಂಗವಾಗಿ ಅನುಭವಿಸುತ್ತಿರುವದು ಬರಲಿರುವ ಆಶೀರ್ವಾದಗಳ ಪ್ರಕಾಶವನ್ನು ಮುಂದಾಗಿ ನೋಡುತ್ತಿದ್ದೇವೆ – ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು ಹಾಗೂ ಲೋಕದಲ್ಲಿರುವ ಕತ್ತಲನ್ನು, ಅಜ್ಞಾನವನ್ನು, ಅಂಧಶ್ರದ್ದೆಯನ್ನು ಹೊರಡಿಸುವನು !

ಲೇಖಕನು 40 ವರ್ಷಗಳಿಂದ ತಾನು ಬೋಧಿಸುತ್ತಿರುವದನ್ನು ಈ 'ಅನ್ಯಜನಾಂಗಗಳ ಕಾಲ'ವು ಕಾಲಗಣನೆಯ ಪ್ರಕಾರ ಕ್ರಿ.ಶ 1914ರ ಶರತ್ಕಾಲದಲ್ಲಿ ಕೊನೆಗೊಂಡಿತು ಎಂಬುದಾಗಿ ಸಂಪುಟವು ತಿಳಿಸಿರುವದು. 'ಅನ್ಯಜನಾಂಗಗಳ ಕಾಲ' ಎಂಬ ಪದ ಪ್ರಯೋಗವು ಸತ್ಯವೇದದಲ್ಲಿ ವರ್ಷಗಳನ್ನು ಅಥವಾ ಕಾಲದ ಅವಧಿಯನ್ನು ಸೂಚಿಸುತ್ತದೆ. ಆ ಕಾಲದ ಅವಧಿಯಲ್ಲಿ ಲೋಕದ ಅನ್ಯಜನಾಂಗಗಳ ದೇಶಗಳು ಎಲ್ಲರ ಮೇಲೆ ನಿಯಂತ್ರಣವನ್ನು ತೆಗೆದುಕೊಳ್ಳಲು ಅನುಮತಿಯಿತ್ತು. ಶಾರೀರಿಕ ಇಸ್ರಾಯೇಲ್ಯರಿಂದ ಅವರ ಸ್ವಂತ ರಾಜ್ಯದಿಂದ ತೆಗೆದುಹಾಕುವದರ ಹಾಗೂ ಬಾಧ್ಯಸ್ಥನಾದ ಮೆಸ್ಸಿಯನ ಕೈಯಿಂದ ದೇವರ ರಾಜ್ಯವು ಸ್ಥಾಪನೆಯಾಗುವ ಮಧ್ಯಂತರದಲ್ಲಿ ಅನ್ಯಜನಾಂಗಗಳು ನಿಯಂತ್ರಣ ಸಾಧಿಸಿದರು – ಯೆಹೆಜ್ಕೇಲನು 21:27.

1914ರಲ್ಲಿ ಸ್ಪಷ್ಟವಾಗಿ ಸತ್ಯವೇದದಲ್ಲಿ ಗುರುತಿಸಿರುವದೇನೆಂದರೆ, ಅನ್ಯಜನಾಂಗಗಳ ಆಳ್ವಿಕೆಯ ಗುತ್ತಿಗೆಯ ಕಾಲ ಅಥವಾ ಲೋಕವನ್ನು ಆಳಲು ಅನುಮತಿಸಿರುವ ಕಾಲ, ಎಂದರೆ ಆ ಕಾಲಕ್ಕೆ ಅವರು (ಯೆಹೂದ್ಯರು) ಸಂಪೂರ್ಣವಾಗಿ ಆಳುವ ಶಕ್ತಿಯನ್ನು ಕಳೆದುಕೊಂಡಿದ್ದರು ಅಥವಾ, ಅವರ ಗುತ್ತಿಗೆಯ ಕಾಲವು ಮುಗಿದುಹೋಗುವದು ಹಾಗೂ ಅವರನ್ನು ಹೊರಹಾಕುವದು ಪ್ರಾರಂಭವಾಗುವದು ಎಂದು ನಮಗೆ 1889ರಲ್ಲಿ ಗೊತ್ತಿರಲು ಸಾಧ್ಯವಿರಲಿಲ್ಲ. ಕರ್ತನ ಎರಡನೆಯದೇ ಕಾರ್ಯಕ್ರಮ ಎಂದು ನಾವು ಗ್ರಹಿಸುತ್ತೇವೆ. ಹಾಗಾಗಿ, ಆಗಸ್ಟ್ 1914, ಪ್ರವಾದನೆಯಲ್ಲಿ ತಿಳಿಸಿರುವ ಅನ್ಯಜನಾಂಗಗಳ ಕಾಲವು ಪ್ರಸ್ತುತ ನಡೆಯುತ್ತಿರುವ ಮಹಾ ಹೋರಾಟವನ್ನು ಪ್ರಾರಂಭಿಸಿತು, ಹಾಗೂ ಸತ್ಯವೇದದ ಪ್ರಕಾರ, ಎಲ್ಲಾ ರೀತಿಯ ಮನುಷ್ಯರ ಆಡಳಿತಗಳನ್ನು ನಿರ್ನಾಮಗೊಳಿಸುವದು, ಹಾಗೂ ದೇವರ ಪುತ್ರನ ರಾಜ್ಯವನ್ನು ಸ್ಥಾಪಿಸಲು ದಾರಿ ಮಾಡಿಕೊಡುವದು.

ನಾವು ಪರದೆಯ ಹಿಂದೆ ನೋಡಲಾರೆವು, ನಾವು ನಮ್ಮ ಮಹೋನ್ನತ ಕರ್ತನ ಮತ್ತು ಈಗಾಗಲೇ ಮಹಿಮೆ ಹೊಂದಿರುವ ಆತನ ಸಭೆಯ ಸದಸ್ಯರ ಮಾರ್ಗದರ್ಶದ ಪ್ರಗತಿಯನ್ನು ನೋಡಲಾರೆವು. ನಮ್ಮ ಆಲೋಚನೆಯೆನೆಂದರೆ ಹೇಗೋ ನಮ್ಮ ಕರ್ತನು ಈ ಲೋಕದ ವಹಿವಾಟನು ಈಗ ತನ್ನ ಕೈಗೆ ತೆಗೆದುಕೊಳ್ಳುತ್ತಿದ್ದಾನೆ, ಆದರೆ ಕಳೆದುಹೋದ ಕಾಲದಲ್ಲಿ ಹಾಗೆ ಮಾಡಿರಲಿಲ್ಲ ಎನ್ನವದಾಗಿದೆ. ಈಗ ಪ್ರಾರಂಭವಾಗಿರುವ ಮಹಾ ಸಂಕಟದ ಸಮಯವು, ಮೆಸ್ಸೀಯದ ರಾಜ್ಯದ ಸ್ಥಾಪನೆಯ ಕಾಲ ಮತ್ತು ಸ್ಥಿತಿಗೆ ನಿಕಟವಾಗಿ ಸಂಬಂಧಿಸಿರುವ ದೈವಿಕ ಘೋಷಣೆ ಎಂದು ನಮಗೆ ಗೊತ್ತಿದೆ. ಅದನ್ನು ಕರ್ತನು ತಾನೆ ತಿಳಿಸುತ್ತಾನೆ, ಆ ಕಾಲದಲ್ಲಿ ಆತನು ತನಗಾಗಿ ಮಹಾ ಬಲವನ್ನು ಆಡಳಿತವನ್ನು ತೆಗೆದುಕೊಳ್ಳುತ್ತಾನೆ, ಜನಾಂಗಗಳು ಭ್ರಾಂತಿಗೊಳ್ಳುವರು ಮತ್ತು ದೇವರ ರೌದ್ರಕ್ಕೆ ಗುರಿಯಾಗುವರು. ಕೆಲವು ಕಾಲದ ನಂತರ ಸತ್ತವರಿಗೆ ನ್ಯಾಯತೀರ್ಪಾಗುವದು, ಮತ್ತು ದೇವರ ಸೇವಕರಿಗೆ ಪ್ರತಿಫಲವನ್ನು ಕೊಡೋಣವಾಗುವದು, ಚಿಕ್ಕವರು ದೊಡ್ಡವರು ಮೊದಲುಗೊಂಡು ಭೂಮಿಯ ಮೇಲೆ ಭ್ರಷ್ಟಾಚಾರದ ಪ್ರಭಾವವನ್ನು ಹೊಂದಿ ಅವಿಧೇಯತೆಯ ಮೊಂಡರೆಲ್ಲರೂ ನಾಶಕ್ಕೊಳಗಾಗುವರು (ಪ್ರಕಟನೆ 21:8).

ಕ್ರಿ.ಶ. 1914 ವರ್ಷದ ಬಗ್ಗೆ ಸತ್ಯವೇದ ವಿದ್ಯಾರ್ಥಿಗಳ ನಿರೀಕ್ಷೆಯು ಲೋಕದವರಿಗೆಲ್ಲಾ ತಿಳಿದಿತ್ತು. ಹಾಗೂ ಈಗ ನಡೆದಂತಹ ಮಹತ್ತರವಾದ ಯುದ್ಧವು ಶುರುವಾದಾಗ, ಕಲಹದ ಗಾಳಿಯು ಆಕ್ರೋಶದಿಂದಲೂ ಮತ್ತು ನಾಶಕರವಾಗಿಯೂ ಬೀಸತೊಡಗಿದಾಗ, ಸಾವಿರಾರು ಮಂದಿ ತಾವು ಅನ್ಯಜನಾಂಗದ ಕಾಲದ ಅಂತ್ಯವನ್ನು ಕುರಿತು ಕೇಳಿದ ಮತ್ತು ಓದಿದ ವಿಷಯವನ್ನು ಜ್ಞಾಪಿಸಿಕೊಂಡರು. ಇಂದಿಗೆ ಸಾವಿರಾರು ಮಂದಿ ನಾವು ಜೀವಿಸುತ್ತಿರುವ ಕಾಲದ ಬಗ್ಗೆ ಅರಿತು ಪೂರ್ತಿಯಾಗಿ ಮೆಚ್ಚುವವರಾಗಿದ್ದಾರೆ. ಇದರ ಪ್ರಭಾವವು ಬಹಳ ಸಹಾಯಕವೂ ಮತ್ತು ಸ್ಫೂರ್ತಿದಾಯಕವೂ ಆಗಿದೆ. ನಾವು ಕರ್ತನ ದಿನದಲ್ಲಿದ್ದೇವೆ ಎಂಬುದನ್ನು ತಿಳಿಯುವದು, ಹಾಗೂ ಶೀಘ್ರದಲ್ಲೇ ಆತನ ಎಲ್ಲಾ ಸಂತರು ಪುನರುತ್ಥಾನದ ಬದಲಾವಣೆಯಿಂದ ಕರ್ತನಲ್ಲಿ ಒಟ್ಟುಸೇರುವರು ಎಂಬದು ಸತ್ಯವೇದ ವಿದ್ಯಾರ್ಥಿಗಳಿಗೆ ಉತ್ತೇಜಿಸುವದಾಗಿದೆ ಮತ್ತು ಪ್ರೋತ್ಸಾಹಿಸುವದಾಗಿದೆ. ಅವರನ್ನು ಲೋಕದಿಂದ, ಅದರ ಭೀತಿಗಳು ಮತ್ತು ಆಕಾಂಕ್ಷೆಗಳಿಂದ ಬೇರ್ಪಡಿಸಿ, ಅವರ ಕಣ್ಣುಗಳು ಜೀವದ ಕಿರೀಟವನ್ನು ದೃಷ್ಟಿಸುವಂತೆ ಮಾಡುತ್ತದೆ. ಅದನ್ನು ಕರ್ತನು ಆತನನ್ನು ಪ್ರೀತಿಸುವವರಿಗಾಗಿ ಮಾತ್ರವೇ ಕಾದಿರಿಸಿದ್ದಾನೆ.

ಅನ್ಯಜನಾಂಗಗಳ ಸಮಯದ ಅಂತ್ಯದಲ್ಲಿ ಕರ್ತನ ಭಕ್ತರು ಆತನೊಡನೆ ಮಹಿಮೆಯಲ್ಲಿ ಸೇರುವರು ಎಂಬುದಾಗಿ ಲೇಖಕನು ಈ ಪುಸ್ತಕದಲ್ಲಿ ಒಪ್ಪಿಕೊಂಡಿದ್ದಾನೆ. ಇದು ಒಂದು ಸ್ವಾಭಾವಿಕವಾದ ತಪ್ಪು, ಆದರೆ ಕರ್ತನು ತನ್ನ ಜನರನ್ನು ಆಶೀರ್ವದಿಸಲು ಅದನ್ನು ರದ್ದುಮಾಡಿದ್ದಾನೆ. ಅಕ್ಟೋಬರ್ 1914ರ ಮೊದಲು, ಸಭೆಯು ಮಹಿಮೆ ಹೊಂದಲು ಒಟ್ಟಾಗುವರು ಎಂಬು ಆಲೋಚನೆಯು, ಖಂಡಿತವಾಗಿ ಬಹಳ ಉತ್ತೇಜಿಸುವ ಮತ್ತು ಪರಿಶುದ್ಧಗೊಳಿಸುವ ಪರಿಣಾಮವನ್ನು ಸಾವಿರಾರು ಜನರ ಮೇಲೆ ಬೀರಿತು. ಹಾಗಾಗಿ, ಎಲ್ಲರೂ ಆ ತಪ್ಪಿಗಾಗಿಯೂ ಕರ್ತನನ್ನು ಸ್ತುತಿಸಬಹುದು. ಅನೇಕರು, ವಾಸ್ತವವಾಗಿ, ಸಭೆಯು ಉನ್ನತಕ್ಕೇರುವ ನಿರೀಕ್ಷೆ ಎದುರುನೋಡಿದಂತೆ ಸಮಯದಲ್ಲಿ ನೆರವೇರಲಿಲ್ಲ ಎಂಬದಕ್ಕಾಗಿ , ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸಬಹುದು, ಮತ್ತು ನಾವು, ದೇವಜನರಾಗಿ, ಪವಿತ್ರಗೊಳ್ಳಲು ಹಾಗು ಪ್ರಭುವಿನೊಡನೆ ಭಾಗವಹಿಸಲು ಆತನ ಜನರಿಗೆ ಸುವಾರ್ತೆಯನ್ನು ಸಾರಲು ಮತ್ತಷ್ಟು ಅವಕಾಶಗಳು ದೊರೆಯಿತು.

ನಮ್ಮ ತಪ್ಪು ಅನ್ಯಜನಾಂಗಗಳ ಸಮಯದ ಅಂತ್ಯವನ್ನು ಕುರಿತಾಗಿರಲಿಲ್ಲ, ನಾವು ತಪ್ಪಾದ ನಿರ್ಣಯವನ್ನು ತಲುಪಿದೆವು, ಹೇಗಾದರೂ, ಅದು ಕರ್ತನಿಂದ ಅಧಿಕೃತಗೊಂದಿರಲಿಲ್ಲ. ನಾವು ಸತ್ಯವೇದದಲ್ಲಿ ಕೆಲವು ಸಮನಾಂತರಗಳನ್ನು ಯೆಹೂದ್ಯ ಯುಗ ಮತ್ತು ಸುವಾರ್ತಾ ಯುಗದಲ್ಲಿ ನೋಡಿದೆವು. ನಾವು ಈ ಸಮನಾಂತರಗಳನ್ನು ನಾಮಾಂಕಿತ ವ್ಯವಸ್ಥೆಗಳಿಗೆ ಎರಡರಲ್ಲೂ ಅಂತ್ಯದಲ್ಲಿ ನಾಶನಕ್ಕೆ ನಡೆಸುತ್ತವೆ ಎಂಬದನ್ನು ಗಮನಿಸಬೇಕಿತ್ತು. ಹಾಗಾಗಿ, ನೂತನ ಸೃಷ್ಠಿಯ ಮಹಿಮೆಯ ಸಮಯವನ್ನು ಸೂಚಿಸುವದಿಲ್ಲ. ಈ ವಿವರಣೆಯು **"ಕಾಲವು ಸಮೀಪವಾಯಿತು"** ಅದ್ಯಯನದ ಓದುಗರಿಗೆ ಸಹಾಯಕವಾಗಿರುತ್ತದೆ. ಹಿಂದೆ ಬಹಳ ಮಂದಿಗೆ ಆಶೀರ್ವಾದವು ಬಂದಿರುವಂತೆ ಮುಂದೆಯೂ ಈ ಸಂಪುಟವನ್ನು ಓದುವ ಇತರ ಸಾವಿರಾರ ಜನರಿಗೂ ಬರುವದೆಂಬದರಲ್ಲಿ ಎಂಬದರಲ್ಲಿ ನಮಗೆ ಅನುಮಾನವಲ್ಲ. ಇದರೊಡನೆ ಲೇಖಕನ ಪ್ರಾರ್ಥನೆಯು ಅನುಸರಿಸುತ್ತದೆ.

ಸಹೋದರ ಚಾರ್ಲ್ಸ್ ಟಿ. ರಸಲ್ (Charles T. Russell.)
ಬ್ರೂಕ್ಲಿನ್, ನೂಯಾರ್ಕ್, ಅಕ್ಟೋಬರ್ 1, 1916.



**Pastor Russell**

# <u>ಕೃತಜ್ಞತೆಗಳು</u>

ಸತ್ಯವೇದದಲ್ಲಿರುವ ಪ್ರವಾದನೆ ಮತ್ತು ಸತ್ಯಾಂಶಗಳನ್ನು ಅನೇಕ ವಿಮರ್ಶೆ ಮತ್ತು ವ್ಯಾಖ್ಯಾನಗಳೊಂದಿಗೆ ಭಾಷಾಂತರಿಸಲು ಪ್ರೇರೇಪಣೆಯನ್ನು ದಯಪಾಲಿಸಿದ ಮಹೋನ್ನತವಾದ ಯೆಹೋವ ದೇವರಿಗೂ ಮತ್ತು ನಮ್ಮೆಲ್ಲರ ಕರ್ತನೂ, ರಕ್ಷಕನೂ ಆದ ಯೇಸು ಕ್ರಿಸ್ತನಿಗೂ ಕೃತಜ್ಞತಾ ಸ್ತೋತ್ರಗಳು.

ಈ ಪುಸ್ತಕವು ಮೂಲತಃ ಆಂಗ್ಲ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು, ಸಹೋದರರಾದ ಪಾಸ್ಟರ್: ಚಾರ್ಲ್ಸ್ ಟಿ. ರಸಲ್‌ರವರು (Pastor Charles T. Russel) ಸತ್ಯವೇದ ಆಧಾರಿತ, ಪವಿತ್ರಾತ್ಮಪ್ರೇರಿತರಾಗಿ ಬರೆಯಲ್ಪಟ್ಟಿರುವ ಗ್ರಂಥಶ್ರೇಣಿಯ ಆರು ಸಂಪುಟಗಳಲ್ಲೊಂದಾದ "**ಕಾಲವು ಸಮೀಪವಾಯಿತು**" ಎಂಬ ಎರಡನೇ ಸಂಪುಟದಿಂದ ಭಾಷಾಂತರಿಸಲಾಗಿದೆ. ಇದನ್ನು ಕನ್ನಡಕ್ಕೆ ಭಾಷಾಂತರಿಸಿದ ಸಹೋದರರಾದ ಅಸ್ವಾಲ್ಡ್ ಎಗ್ಬರ್ಟ್ ಅಮ್ಮಣ್ಣನವರಿಗೆ ಸತ್ಯವೇದ ವಿದ್ಯಾರ್ಥಿಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು. ಈ ಭಾಷಾಂತರವು ಕನ್ನಡವನ್ನು ಬಲ್ಲ ಎಲ್ಲಾ ಸಹೋದರ ಸಹೋದರಿಯರಿಗೆ ಒಂದು ವಿಶೇಷವಾದ ಕೊಡುಗೆಯಾಗಿದೆ. ದೇವರ ನಾಮಕ್ಕೆ ಅನಂತ ಅನಂತ ಸ್ತೋತ್ರವಾಗಲಿ.

ಕಡೆಯದಾಗಿ ಇದರ ಮುದ್ರಣಕ್ಕೆ ಮುಂಚೆ ಈ ಭಾಷಾಂತರವನ್ನು ಪರಿಷ್ಕರಿಸಿದ ಹಿರಿಯ ಸಹೋದರಿಗೂ, ಇದಕ್ಕಾಗಿ ಸಹಕರಿಸಿದ ಅನೇಕ ಸಹೋದರ-ಸಹೋದರಿಯರಿಗೂ ಮತ್ತು ಈ ಪುಸ್ತಕವನ್ನು ತಮ್ಮ ಕೆಲಸವೆಂದೇ ಪರಿಗಣಿಸಿ, ಶ್ರಮಿಸಿ ಅಂದವಾಗಿ ಮುದ್ರಿಸಿಕೊಟ್ಟ ಡಾನ್ ಪ್ರಿಂಟಿಂಗ್ ಸರ್ವೀಸ್‌ರವರಿಗೂ (Dawn Printing Service) ನಮ್ಮ ಹೃದಯಪೂರ್ವಕ ವಂದನೆಗಳು.

ಸರ್ವಶಕ್ತನಾದ ಯೆಹೋವ ದೇವರ ಆಶೀರ್ವಾದ
ಮತ್ತು
ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಕೃಪೆಯು ಈ ಪುಸ್ತಕವನ್ನು ಓದುವವರೆಲ್ಲಗೊಂದಿಗಿದ್ದು ಆ ದೈವಜ್ಞಾನವನ್ನು ಪಡೆದು ಆತ್ಮೀಕ ಅಭಿವೃದ್ಧಿ ಹೊಂದಿಕೊಳ್ಳಲಿ ಎಂದು ಹಾರೈಸುತ್ತೇವೆ.

## ಅಧ್ಯಯನ – 1

## ದೈವಿಕವಾಗಿ ನೇಮಕವಾದ ವಿಶೇಷ ಕಾಲಘಟ್ಟಗಳು ಮತ್ತು ಸಮಯಗಳು

**Special Times and Seasons Divinely Appointed**

ದೈವಿಕವಾಗಿ ನೇಮಕವಾದ ಸಮಯ ಮತ್ತು ಕಾಲಘಟ್ಟಗಳು. ಯಾಕೆ ಹೆಚ್ಚು ಸ್ಪಷ್ಟವಾಗಿ ಹೇಳಲ್ಪಟ್ಟಿಲ್ಲ – ಸೂಕ್ತ ಸಮಯದಲ್ಲಿ ಬಹಿರಂಗಗೊಳಿಸಲ್ಪಡುತ್ತವೆ – ಸಮಯ ಮತ್ತು ಕಾಲಗಳನ್ನು ತಿಳುಕೊಳ್ಳುವ ಪ್ರಮಾಣಿಕ ಬಯಕೆ ಪ್ರಶಂಸನೀಯ – ಅಡ್ವೆನ್ಟಿಸ್ಟ್‌ಗಳ ತಪ್ಪುಗಳು – ಸಕಾಲದ ಪ್ರವಾದನೆಯ ನಿಜವಾದ ಉದ್ದೇಶ – ನಮ್ಮ ಪ್ರಸ್ತುತ ಸ್ಥಾನ. ಮುಂಬರುವ ಅಧ್ಯಾಯಗಳ ಉದ್ದೇಶ. .................1

## ಅಧ್ಯಯನ – 2

## ಸತ್ಯವೇದದ ಕಾಲಗಣನೆ

**Bible Chronology**

ಪ್ರವಾದನೆಯನ್ನು ಅರ್ಥಮಾಡಿಕೊಳ್ಳಲು ಕಾಲಗಣನೆಯು ಅಗತ್ಯವಾಗಿದೆ. ಸತ್ಯವೇದದಲ್ಲಿ ಅತ್ಯವಶ್ಯವಾದ ಮಾಹಿತಿಯು ಒದಗಿಸಲ್ಪಟ್ಟಿವೆ. ಆದಾಮನ ಸೃಷ್ಟಿಯಿಂದ ಪ್ರಾರಂಭಗೊಂಡು ಕ್ರಿ.ಶ. 1873 ರವರೆಗೆ ಆರು ಸಾವಿರ ವರ್ಷಗಳು. ಈ ಮಹಾ ಕಾಲಾವಧಿಗಳಲ್ಲಿ ಸತ್ಯವೇದದ ಘಟನಾವಳಿಗಳ ಹೇಳಿಕೆ. ಸವಿಸ್ತಾರವಾಗಿ ಅದರ ಪರೀಕ್ಷೆ. ಸೃಷ್ಟಿಯಿಂದ ಪ್ರಳಯದ ನೀರು ಒಣಗಿಹೋಗುವವರೆಗೆ. ಅಬ್ರಹಾಮನ ಒಡಂಬಡಿಕೆಯವರೆಗೆ. ಧರ್ಮಶಾಸ್ತ್ರವು ಕೊಡಲ್ಪಡುವವರೆಗೆ. ಕುಲಗಳ ನಡುವೆ ಕಾನಾನಿನ ವಿಭಜನೆ. ನ್ಯಾಯಸ್ಥಾಪಕರುಗಳ ಕಾಲ. ಅರಸುಗಳ ಕಾಲ. ಪಾಳುಬೀಳುವಿಕೆಯ ಕಾಲಮಾನ. ಕ್ರಿ.ಶ.1873ರವರೆಗೆ. ನಮ್ಮ ಆಂಗ್ಲ ಸತ್ಯವೇದವು ಯಾವುದರಲ್ಲಿ ಬಿಷೋಪ್ ಉಷರನ ಪ್ರಕಾರವಾದ ಕಾಲಗಣನೆಯಿಂದ ಭಿನ್ನವಾಗಿದೆ. ನಮ್ಮ ಕರ್ತನ ನಿಜವಾದ ಜನ್ಮ ದಿನಾಂಕ. .................13

## ಅಧ್ಯಯನ – 3

## ಕ್ರಿಸ್ತನ ಮೊದಲನೆ ಆಗಮನದಲ್ಲಿ ಕಾಲ–ಪ್ರವಾದನೆಯ ನೆರವೇರಿಕೆ – ದಾನಿಯೇಲ 9:23–27

**The fulfilment of Time-Prophecy at the First Advent of Christ**
**- Dan. 9:23-27**

ದಾನಿಯೇಲನ ಪ್ರವಾದನೆಯ ಎಪ್ಪತ್ತು ವಾರಗಳು. ಆ ಸಮಯದೊಳಗಾಗಿ ಪ್ರಕಟವಾಗುವಂತೆ ಮುಂಚಿತವಾಗಿ ತಿಳಿಸಲ್ಪಟ್ಟಿರುವ ಘಟನೆಗಳು. ಮೆಸ್ಸೀಯನ ಆಗಮನ ಕಾಲದ ಸೂಚನೆ ಮತ್ತು ಇದಕ್ಕೆ ಸಂಬಂಧಿಸಿದ ತತ್ವಗಳು ಸೂಚಿತವಾಗಿರುವ ರೀತಿಯಲ್ಲಿ ಪ್ರಕಟವಾಗಿವೆ. ಇತರೆ ಕಾಲ–ಪ್ರವಾದನೆಗಳಿಗೆ ಕೀಲಿಕೈ. ಮೆಸ್ಸೀಯನು ಶಿಲುಬೆಗೆ ಹಾಕಲ್ಪಡುವ ಕಾಲವು ಸೂಚಿತವಾಗಿದೆ. ಇಸ್ರಾಯೇಲ್ಯರು ಒಂದು ಜನಾಂಗವಾಗಿರುವ ಭಾಗ್ಯವು ನೀತಿವಂತಿಕೆಯಲ್ಲಿ ಕುಂಠಿತವಾಗಿದೆ, ಆದರೆ ವೈಯುಕ್ತಿಕವಾಗಿ ಮುಂದುವರೆದಿದೆ. ಮಹಾ ಪವಿತ್ರನನ್ನು ಅಬಿಷೇಕಿಸುವುದು. ಖಿನ್ನರಾದವರ ಮೇಲೆ ತೊಂದರೆಗಳು ಸುರಿಯಲ್ಪಟ್ಟಿವೆ. ................31

## ಅಧ್ಯಯನ – 4

## ಅನ್ಯದೇಶಗಳವರ ಸಮಯ

**The Times of The Gentiles**

ಅನ್ಯಜನಗಳ ಕಾಲ ಯಾವುದು? ಅದರ ಪ್ರಾರಂಭವು; ಅದರ ವಿಸ್ತಾರವು; ಕ್ರಿ.ಶ 1914 ರಲ್ಲಿ ಅದರ ಮುಕ್ತಾಯವು. ಅನುಸರಿಸುವ ಘಟನೆಗಳು, ಮುಂಬರುವ ಘಟನೆಗಳು. ಅಕ್ಷರಶಃವಾದ ಮತ್ತು ಸಾಂಕೇತಿಕವಾದ ಕಾಲಗಳು. ಒಂದು ಅಪೂರ್ವವಾದ ಮಾದರಿ. ಪ್ರಸ್ತುತ ಸೂಚನೆಗಳು. ಅನ್ಯಜನರ ಆಡಳಿತವನ್ನು ತೊಡೆದುಹಾಕುವ ದೇವರ ರಾಜ್ಯವು. ಆದುದರಿಂದ ಅದು ಮುಕ್ತಾಯವಾಗುವ ಮೊದಲು, 1914 ರ ಒಳಗೆ ವ್ಯವಸ್ಥೆ ಮಾಡಲ್ಪಟ್ಟಿದೆ. ಅನ್ಯಜನರ ರಾಜ್ಯಗಳು ಯಾಕೆ ವಿರೋಧಿಸಿದವು? ಹೇಗೆ ಮತ್ತು ಯಾವಾಗ ಎಲ್ಲರೂ ಇದನ್ನು ಅಂತಿಮವಾಗಿ ಸಂತೋಷದಿಂದ ಒಪ್ಪಿಕೊಳ್ಳುವರು. "ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಆ ಆಲಯವನ್ನು ವೈಭವದಿಂದ ತುಂಬಿಸುವೆನು". .................37

## ಅಧ್ಯಯನ – 5

## ನಮ್ಮ ಕರ್ತನ ಪುನರಾಗಮನ ಮತ್ತು ಕಾಣಿಸಿಕೊಳ್ಳುವ ರೀತಿ

### The Manner of our Lord's Return and Appearing

ಇತರೆ ದೈವಿಕ ಯೋಜನೆಗಳ ಲಕ್ಷಣಗಳೊಂದಿಗೆ ನಮ್ಮ ಕರ್ತನ ದ್ವಿತೀಯಾಗಮನದ ವಿಧಾನದ ಸಾಮರಸ್ಯ – ಕ್ರೈಸ್ತ ಸಭೆಯು ಆತನನ್ನು ಹೇಗೆ ಮತ್ತು ಯಾವಾಗ ನೋಡಬಹುದು? ಹೇಗೆ ಮತ್ತು ಯಾವಾಗ ಕರ್ತನ ಮಹಿಮೆಯು ಎಲ್ಲಾ ಮಾಂಸಧಾರಿಗಳೂ ಒಟ್ಟಾಗಿ ನೋಡುವಂತೆ ಪ್ರಕಟಗೊಳ್ಳುತ್ತದೆ? ಸುವ್ಯಕ್ತವಾಗಿ ಸಂಘರ್ಷ ಇರುವ ಹೇಳಿಕೆಗಳು ಸಾಮರಸ್ಯವಾಗಿ ಕಂಡುಬರುತ್ತವೆ. ಆತನು ಕಳ್ಳನಂತೆ ಬರುತ್ತಾನೆ, ಬಾಹ್ಯತೋರಿಕೆಯಿಂದ ಅಲ್ಲ; ಆದಾಗ್ಯೂ ಆಜ್ಞಾಘೋಷದೊಡನೆ ಶಬ್ದದೊಂದಿಗೆ, ಮತ್ತು ಮಹಾ ತುತ್ತೂರಿಯ ಧ್ವನಿಯೊಂದಿಗೆ ಬರುತ್ತಾನೆ. ಆತನು ಪ್ರತಿಕಾರ ತೆಗೆದುಕೊಳ್ಳುವವನಾಗಿ ಉರಿಯುವ ಅಗ್ನಿಯಲ್ಲಿ ಪ್ರಕಟಗೊಳ್ಳುತ್ತಾನೆ. ಆದಾಗ್ಯೂ ಆತನು ಯಾವ ರೀತಿಯಲ್ಲಿ ಹೋಗಿರುವನೋ ಅದೇ ರೀತಿಯಲ್ಲಿಯೇ ಬರುತ್ತಾನೆ. ಈ ಸಂಬಂಧದಲ್ಲಿ ಪ್ರವಾದನೀಯ ಕಾಲದ ಮಹತ್ವವನ್ನು ತೋರಿಸಲಾಗಿದೆ. ಪ್ರಸ್ತುತ ಸೂಚನೆಗಳ ಸಾಮರಸ್ಯ. ..................55

## ಅಧ್ಯಯನ – 6

## ಭೂಮಿಯ ಮಹಾ ಜೂಬಿಲಿ ಸಂವತ್ಸರ

### Earth's Great Jubilee

ಮೋಶೆ ಮುಂತಿಳಿಸಿದ ಪ್ರಕಾರ "ಸಮಸ್ತವನ್ನೂ ಸರಿಪಡಿಸುವ ಸಮಯ" ಅದರ ಪ್ರಾರಂಭದ ದಿನವು ಸೂಚಿತವಾಗಿದೆ. ಮಹಾ ಪುನರ್‌ವಶಕಾರನು ಬರುವವರೆಗೆ ಅವು ಪ್ರಾರಂಭವಾಗವು. ಧರ್ಮಶಾಸ್ತ್ರದ ಪುರಾವೆ. ಪ್ರವಾದಿಗಳಿಂದ ಸಮರ್ಥಿಸುವ ಸಾಕ್ಷ್ಯಗಳು. ಇವುಗಳಿಂದ ಸೆಳೆದ ತಾರ್ಕಿಕ ನಿರ್ಣಯಗಳನ್ನು ಪ್ರತ್ಯೇಕವಾಗಿ ಮತ್ತು ಒಟ್ಟಾಗಿ ಪರಿಗಣಿಸುವುದು. ಪ್ರಸ್ತುತ ಸೂಚನೆಗಳ ಸಾಮರಸ್ಯ. .................. 98

## ಅಧ್ಯಯನ – 7

## ಸಮಾನಾಂತರವಾದ ದೈವಸಂಕಲ್ಪದ ಹಂಚಿಕೆಗಳು

### The Parallel Dispensations

ಯೆಹೂದ್ಯ ಯುಗವು ಸುವಾರ್ತಾ ಯುಗದ ಛಾಯೆಯಾಗಿದೆ, ಎರಡು ದೈವೇಚ್ಛೆ ಹಂಚಿಕೆಗಳ ನಡುವಣ ಗಮನಾರ್ಹವಾದ ಅನುರೂಪತೆಯುಳ್ಳ ಸಮಾನತೆಗಳಿದ್ದರೂ ಅವುಗಳು ಭಿನ್ನವಾಗಿವೆ. ಕ್ರೈಸ್ತ ಯುಗಾರಂಭದ ಶ್ರೇಷ್ಟತೆ, ಪ್ರತಿಸಂಕೇತ. ಶಾರೀರಿಕ ಮತ್ತು ಆತ್ಮೀಕ ಇಸ್ರಾಯೇಲ್ಯರು ತದ್ವಿರುದ್ದಗೊಂಡಿದ್ದಾರೆ. ಪ್ರಮುಖವಾದ ಸಮಾನಾಂತರಗಳನ್ನು ಪರೀಕ್ಷಿಸಲಾಗಿದೆ. ಸಮಯದ ಸಮಾನಾಂತರವನ್ನು ವಿಶೇಷವಾಗಿ ಗಮನಿಸಲಾಗಿದೆ. ಶಾರೀರಿಕ ಇಸ್ರಾಯೇಲ್ಯರ ಕೃಪೆಯ ಕಾಲಾವಧಿ. ಕೃಪೆಯಿಂದ ತೆಗೆಯಲ್ಪಡುವ ಅವರ ಸಮಯ. ಅವಕೃಪೆಯ ಕಾಲಾವಧಿ ಕೃಪೆಯ ಕಾಲಾವಧಿಗೆ ಸಮವೆಂದು ಪ್ರವಾದನೆಯಿಂದ ತೋರಿಸಲಾಗಿದೆ. ಅವರ ಅವಕೃಪೆಯ ಕಾಲಾವಧಿ ಆತ್ಮೀಕ ಇಸ್ರಾಯೇಲ್ಯರ ಉನ್ನತ ಕರೆಯ ಕಾಲಾವಾಧಿಯಾಗಿದೆ ಎಂಬುದಕ್ಕೆ ಅಪೋಸ್ತಲರ ಸಾಕ್ಷ್ಯ. ಸುವಾರ್ತಾ ಯುಗದ ವಿಸ್ತಾರವು ಈ ರೀತಿಯಾಗಿ ಪರೋಕ್ಷವಾಗಿ ಆದರೂ ಸ್ಪಷ್ಟವಾಗಿ ತೋರಿಸಲಾಗಿದೆ. ಸತ್ಯವೇದದ ಕಾಲಗಣನೆಗಳ, ಜೂಬಿಲಿ ಸಾಕ್ಷ್ಯ, ಅನ್ಯಜನರ ಸಮಯಗಳು ಮತ್ತು ಈ ಸಮಾನಾಂತರವಾದ, ಉತ್ತರಿಸಲಾಗದ, ನಿರ್ಧಾರಾತ್ಮಕವಾದ ಮತ್ತು ತೃಪ್ತಿಕರವಾದ ಸಂಗತಿಗಳುಳ್ಳ ಇತರೆ ಪ್ರವಾದನೆಗಳೊಂದಿಗೆ ಇರುವ ಸಾಮರಸ್ಯ. .................. 116

## ಅಧ್ಯಯನ – 8

## ಎಲೀಯನು ಬರುತ್ತಾನೆ

### Elias Shall First Come

ಈ ಮುಖ್ಯವಾದ ಪ್ರವಾದನೆಯು ಎರಡನೆಯ ಬರೋಣಕ್ಕೆ ಎಷ್ಟರಮಟ್ಟಿಗೆ ಸಂಬಂಧಿಸಿದೆ. ಸ್ನಾನಿಕನಾದ ಯೋಹಾನನಲ್ಲಿ ಇದು ಭಾಗಶಃ ಮತ್ತು ಸಾಂಕೇತಿಕವಾಗಿ ನೆರವೇರಿದೆ. ನಿಜವಾದ ನೆರವೇರಿಕೆ. ಪವಿತ್ರ ಬೆಟ್ಟದ ಮೇಲಿನ ದರ್ಶನ. ಸಾಂಕೇತಿಕ ಎಲೀಯ ಮತ್ತು ಪ್ರತಿ ಸಾಂಕೇತಿಕ

ಎಲೀಯ ಇವುಗಳ ನಡುವಣ ಗಮನೀಯವಾದ ಅನುರೂಪತೆಗಳು. ಕಾಲವು ಸಮೀಪಿಸಿದೆ. ಹೊರನೋಟ. ಎಲೀಯನ ಉತ್ತರಾಧಿಕಾರಿಯಾದ ಎಲೀಷನು.. . . . . . . . . . . . . . . . . . . 144

## ಅಧ್ಯಯನ – 9

## ಅಧರ್ಮ ಸ್ವರೂಪನು – ಕ್ರಿಸ್ತ ವಿರೋಧಿ

### The Man of Sin - Antichrist

ಕ್ರಿಸ್ತವಿರೋಧಿಯು ವೃದ್ಧಿಯಾಗಬೇಕು, ಪ್ರಕಟಗೊಳ್ಳಬೇಕು ಮತ್ತು ಕರ್ತನ ದಿನದ ಮುಂಚೆ ಜಜ್ಜಲ್ಪಡಬೇಕು. ಈ ಪ್ರಸ್ತಾಪದ ವಿರೋಧವಾದ ದೃಷ್ಟಿಕೋನವನ್ನು ಪರಿಶಿಲಿಸಲಾಗಿದೆ, ಪ್ರವಾದನೀಯ ವರ್ಣನೆ, ಕ್ರಿಸ್ತ ವಿರೋಧಿಯ ಜನನ. ಆತನ ಕ್ಷಿಪ್ರವಾದ ಅಭಿವೃದ್ಧಿ. ಚಾರಿತ್ರಿಕ ಚಿತ್ರಣ ಮತ್ತು ಸತ್ಯವೇದದ ವಿವರಣೆ ಇವುಗಳ ಒಪ್ಪಿಗೆ. ಆತನ ರಾಜ್ಯದ ಕಪಟತೆ, ಆತನ ಶಿರಸ್ಸು ಮತ್ತು ಬಾಯಿಯು ಗಮನಾರ್ಹವಾದುದು. ಆತನ ದೇವದೂಷಣೆಯ ಉಬ್ಬರದ ಮಾತುಗಳು. ಆತನ ದೇವದೂಷಣಾ ಬೋಧನೆಗಳು. ಆತನಿಂದ ಅತ್ಯುನ್ನತ ಭಕ್ತರುಗಳ ಬಳಲಿಕೆ. ಆತನ ಸಹಸ್ರಮಾನದ ಆಡಳಿತ. ಕ್ರಿಸ್ತ ವಿರೋಧಿಯನ್ನು ಆತ್ಮೀಕ ಕತ್ತಿಯಿಂದ ಬಡಿಯಲಾಯಿತು. ಆತನ ಅಂತಿಮ ಹೋರಾಟ ಮತ್ತು ಅಂತ್ಯ.. . . . . . . . . . . . . . . . . . . 155

## ಅಧ್ಯಯನ – 10

## ಕಾಲವು ಸಮೀಪಿಸಿದೆ

### The Time is at Hand

ಯಾವುದೂ ಅಡ್ಡಬರುವುದಿಲ್ಲ. ಕ್ರಿಸ್ತನ ರಾಜ್ಯದ ಸ್ಥಾಪನೆ, ಪ್ರಗತಿಯಲ್ಲಿರುವ ಈ ಕಾರ್ಯವು ಪ್ರವಾದನೆಗಳ ಸಾಕ್ಷ್ಯಕ್ಕೆ ಹೊಂದಿಕೆಯಾಗುತ್ತದೆ. ಪ್ರಪಂಚದಾದ್ಯಂತ ಇರುವ ಬುದ್ಧಿವಂತರು ಇದನ್ನು ಹೆಚ್ಚಾಗಿ ನೋಡುವರು. ನಿರೀಕ್ಷಿಸುವ ಸಂತರುಗಳು ಹೆಚ್ಚು ಸುಸ್ಪಷ್ಟಾಗಿ ನೋಡುವರು. ಸರಿಯಾದ ಮಾರ್ಗದಲ್ಲಿ ಎಲ್ಲರೂ ಕಣ್ಣುತೆರೆಯಬೇಕಾದ ಪ್ರಾಮುಖ್ಯತೆ. . . . . . . . . . . . . . . . . . . 216

* * * * * * *

# ನಮ್ಮ ನಂಬಿಕೆ



ನಾನು ಒಬ್ಬನೇ ಸತ್ಯದೇವರನ್ನು ನಂಬುತ್ತೇನೆ. ಆತನೊಬ್ಬನಿಗೇ **"ಯೆಹೋವ"** ಎಂದು ಹೆಸರು. ಆತನು ರಾಜಾಧಿರಾಜನೂ, ಕರ್ತರ ಕರ್ತನೂ, ತಾನೊಬ್ಬನೇ ಅಮರತ್ವವುಳ್ಳವನೂ, ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ. ಯಾರೂ ಕಾಣಲಾರರು. ಆತನಿಗೆ ಮಾನವೂ, ನಿತ್ಯಾಧಿಪತ್ಯವೂ ಇರಲಿ, ಆಮೆನ್. [ಯೋಹಾನ 17:3; ಕೀರ್ತನೆ 83:18; 1ತಿಮೋಥಿ. 6:15, 16; ವಿಮೋ. 6:3; ಯೋಹಾನ 1:18; 1 ಕೊರಿಂಥ 8:5,6.]

ಯೆಹೋವ ದೇವರ ಒಬ್ಬನೇ ಮಗನೂ, ನಮ್ಮ ಕರ್ತನೂ, ರಕ್ಷಕನೂ ಆದ **"ಯೇಸುಕ್ರಿಸ್ತ"**ನನ್ನೂ ನಂಬುತ್ತೇನೆ.

ಈತನು ದೇವರ ಪ್ರತಿರೂಪನೂ, ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನೂ ಆಗಿದ್ದಾನೆ. ಯೆಹೋವನು ಯೇಸುಕ್ರಿಸ್ತನ ಮೂಲಕವಾಗಿ ಸಮಸ್ತವನ್ನೂ ಉಂಟುಮಾಡಿ ಯೇಸುಕ್ರಿಸ್ತನನ್ನು ಸಮಸ್ತಕ್ಕೂ ಭಾಧ್ಯಸ್ಥನನ್ನಾಗಿ ನೇಮಿಸಿರುವನು. ಸಮಸ್ತವೂ ಯೇಸುಕ್ರಿಸ್ತನಲ್ಲಿ ನೆಲೆಸಿರುವುದೆಂದು ನಂಬುತ್ತೇನೆ. [ಕೊಲೊಸ್ಸೆ. 1:15,16; ಎಫೆಸ. 1:2; ಯೋಹಾನ 3:16]

ಈತನು ದೇವಸ್ವರೂಪನಾಗಿದ್ದರೂ, ದೇವರಿಗೆ ಸರಿಸಮಾನನಾಗಿರುವನೆಂಬ ಅಮೂಲ್ಯ ಪದವಿಯನ್ನು (ಬಿಡಲೊಲ್ಲೆನು) ಕೊಳ್ಳೆ ಎಂದೆಣಿಸದೆ, ತನ್ನನ್ನು ಬರಿದು ಮಾಡಿಕೊಂಡು, ದಾಸನ ರೂಪವನ್ನು ಧರಿಸಿಕೊಂಡು, ಮನುಷ್ಯರಿಗೆ ಸದೃಷ್ಯನಾಗಿ, ಪಾಪಗಳಿಂದ ಮರಣವನ್ನು ಅನುಭವಿಸುತ್ತಿರುವ ಮಾನವರನ್ನು ರಕ್ಷಿಸುವುದಕ್ಕೋಸ್ಕರವಾಗಿ ತನ್ನನ್ನು ತಾನೇ ಬರಿದುಮಾಡಿಕೊಂಡು, ಎಲ್ಲರನ್ನೂ ಬಿಡಿಸಿಕೊಳ್ಳಲು ಮನುಷ್ಯನಾಗಿ, ಜೀವವನ್ನೇ ಕೊಟ್ಟು ದೇವರಿಗೂ ಮನುಷ್ಯರಿಗೂ ಸಮಾಧಾನವನ್ನುಂಟು ಮಾಡಿದನೆಂದು ನಂಬುತ್ತೇನೆ. [ ಯೋಹಾನ. 10:36; ಫಿಲಿ. 2:6,7; ಯೆಶಾಯ 53:4,5]

ಆದುದರಿಂದ ದೇವರು ಈತನನ್ನು ಸತ್ತವರೊಳಗಿಂದ ಎಬ್ಬಿಸಿ ತನ್ನ ಹಾಗೆಯೇ ಕುಮಾರನನ್ನೂ ಜೀವವುಳ್ಳವನಾಗಿರುವಂತೆ ಉಂಟುಮಾಡಿ, ಬೇರೆ ಎಲ್ಲಾದಕ್ಕೂ ಮೇಲಾದ ಜೀವ ಕೊಟ್ಟು, ತನ್ನ ಮಹಿಮೆಯಿಂದ ಬಲಗಡೆಯಲ್ಲಿ ಕುಳಿತುಕೊಳ್ಳುವಂತೆ ಮಾಡಿದನು ಎಂಬುದನ್ನು ನಂಬುತ್ತೇನೆ. [ಅ.ಕೃ. 3:15; ಯೋಹಾನ 5:26; ಫಿಲಿ. 2:9]

ಯೇಸುಕ್ರಿಸ್ತನೇ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿಯೂ, ಸಭೆಯೆಂಬ ಶರೀರಕ್ಕೂ ಶಿರಸ್ಸಾಗಿಯೂ ಇದ್ದಾನೆ ಎಂಬುದನ್ನೂ ನಂಬುತ್ತೇನೆ. [1ತಿಮೋಥಿ. 2:5; ಎಫೆಸ 1:23; ಕೊಲೊಸ್ಸೆ. 1:18]

ಯೇಸುಕ್ರಿಸ್ತನು ಪರಲೋಕಕ್ಕೆ ಏರಿಹೋಗಿ ತಾನು ವಾಗ್ದಾನ ಮಾಡಿದ "ಪರಿಶುದ್ಧಾತ್ಮ" ಶಕ್ತಿಯನ್ನು ನಂಬಿಕೆಯುಳ್ಳ ತನ್ನ ಸಭೆಗೆ ಕೊಟ್ಟು , ದೈವಚಿತ್ತವನ್ನು ಅವರಿಗೆ ಪ್ರಕಟಿಸಿ, ಬಲಿಯ ಜೀವನದಲ್ಲಿ ಅವರನ್ನು ನಡೆಸಿಕೊಂಡು ಬರುತ್ತಿದ್ದಾನೆ ಎಂಬುದನ್ನೂ ನಂಬುತ್ತೇನೆ. [ಅ. ಕೃ. 1:11; ಲೂಕ 1:35, 24:49; ರೋಮಾಪುರ. 12:1]

ತಂದೆಯು ಹೇಳಿದ ಕಾಲದವರೆಗೆ ಸಭೆ ಬಲಿ ಎಂಬ ಮರಣಕ್ಕೆ ಒಳಪಟ್ಟು ಪ್ರಥಮ ಪುನರುತ್ಥಾನವನ್ನು ಹೊಂದುವ ತನ್ನ ಸಭೆಯಾದ ಸಕಲ ಪರಿಶುದ್ಧರಾದವರೊಡನೆ ಈ ಭೂಮಿಯನ್ನು ನೀತಿಗನುಸಾರ ನ್ಯಾಯವಿಚಾರಣೆ ಸಕಲ ದೊರೆತನವನ್ನೂ, ಅಧಿಕಾರವನ್ನೂ, ಶಕ್ತಿಯನ್ನೂ ಸರಿಪಡಿಸಿ, ಎಂದಿಗೂ ನಾಶವಾಗದ ತನ್ನ ನೀತಿಯುಳ್ಳ ಸಮಾಧಾನದ ರಾಜ್ಯವನ್ನು ಸ್ಥಾಪಿಸುವನೆಂದು ನಂಬುತ್ತೇನೆ. [ ಯೂದ 14,15; ಎಫೆಸ. 1:9; ಪ್ರಕಟನೆ 20:4,6; ದಾನಿ. 7:27; ಕೀರ್ತನೆ 72:2; 2 ಪೇತ್ರ 3:13; 1ಕೊರಿಂಥ 15:24]

ಮರಣ ಹೊಂದಿದ ಬೇರೆ ಎಲ್ಲಾ ಜನಾಂಗದವರೂ ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಅವರವರು ತಮ್ಮ ತಮ್ಮ ತರಗತಿಯಲ್ಲಿ ಜೀವಿತರಾಗಿ ಎದ್ದು ಕ್ರಿಸ್ತನು ತನ್ನ ಮರಣದಿಂದ ಸಂಪಾದಿಸಿದ ನಿತ್ಯಜೀವವನ್ನು ಹೊಂದಲು ಕ್ರಿಸ್ತನ ಮಾರ್ಗದಲ್ಲಿ ನಡೆದು ಪೂರ್ಣರಾಗುವರು. ಆದರೆ ಮನಃಪೂರ್ವಕವಾಗಿ ನಂಬದವರು ಎರಡನೆಯ ಮರಣದಲ್ಲಿ ನಾಶವಾಗುವರು ಎಂಬುದನ್ನೂ ನಂಬುತ್ತೇನೆ. [ಪ್ರಕ. 20:6,14,15; 1ಕೊರಿ. 15:23; ಯೋಹಾ. 5:28,29; ಯೆಶಾ. 2:2,4, 26:9; ಅ.ಕೃ. 3:23]

ಎಲ್ಲಾ ಶತ್ರುಗಳನ್ನೂ ಕ್ರಿಸ್ತನು ತನ್ನ ಪಾದಪೀಠವಾಗಿ ಮಾಡಿಕೊಳ್ಳುವ ತನಕ ಆಳ್ವಿಕೆ ಮಾಡಿ, ಕೊನೇ ಶತ್ರುವಾದ ಮರಣವನ್ನು ನಾಶಮಾಡಿ, ಸಮಸ್ತವನ್ನೂ (ಏದೇನಿನಲ್ಲಿ ಇದ್ದಂತೆ) ಸರಿಪಡಿಸಿ, ತಂದೆಯಾದ ಯೆಹೋವನಿಗೆ ರಾಜ್ಯವನ್ನು ಒಪ್ಪಿಸಿ ಯೆಹೋವನಿಗೆ ಕ್ರಿಸ್ತನೇ ಅಧೀನನಾಗುವನು. ಹೀಗೆ ದೇವರು ಸಮಸ್ತರಲ್ಲಿ ಸಮಸ್ತವೂ ಆಗುವನು ಎಂದು ನಂಬುತ್ತೇನೆ. ಆಮೆನ್. [1 ಕೊರಿಂಥ. 15:25–28; ಯೆಶಾಯ 11:3,9; 35ನೇ ಅಧ್ಯಾಯ, 65:17, ಪ್ರಕಟನೆ 21:24]

********

# 350

**10.10.10.10.**

1. ಎನ್ನೊಂದಿಗಿರು, ಸಂಜೆಯಾಯಿತು;
ಸಂದ್ಹೋಗುತ್ತೇ ಈ ಜೀವಕಾಲವು;
ಎನ್ನೊಂದಿಗಿರು, ದಿವ್ಯ ಮಿತ್ರನೇ,
ಅನಾಥನಾಥ ನೀನು ಅಲ್ಲವೇ?

2. ಓ ಯೇಸು, ನಿನ್ನ ಮುಖದರ್ಶನ
ಒಂದೊಂದು ಕ್ಷಣವು ಅವಸರ
ಪ್ರಕಾಶ ಮೋಡ ಯಾವದಿದ್ದರೂ,
ನೀನಿದ್ದರೆ ನನಗೆ ಹಿತವು.

3. ನಿನ್ನ ಸುಮುಖವನ್ನು ಕಂಡರೆ,
ಸುಖದುಃಖ ಉಭಯಸಮವೇ
ಓ ಮೃತ್ಯು ! ನಿನ್ನ ಕೊಂಡಿಹೋಯಿತು.
ಸಮಾಧಿಯೇ, ನಿನ್ನನ್ನು ಗೆದ್ದೆನು.

4. ಜೀವಾಂತ್ಯಕಾಲದಲ್ಲಿ, ಕರ್ತನೇ,
ನಿನ್ನನ್ನು ಆತುಕೊಂಡು ಸಾಯುವೆ;
ಆ ಮೇಲೆ ಸ್ವರ್ಗೋದಯವಾಗಲು
ಎಂದೆಂದೂ ನೀನು ನನ್ನ ಭಾಗವು.

* * * * * * *

# ಅಧ್ಯಯನ – 1 Study I

# ದೈವಿಕವಾಗಿ ನೇಮಕವಾದ ವಿಶೇಷ ಕಾಲಘಟ್ಟಗಳು ಮತ್ತು ಸಮಯಗಳು

## Special Times and Seasons Divinely Appointed

**ದೈವಿಕವಾಗಿ ನೇಮಕವಾದ ಸಮಯ ಮತ್ತು ಕಾಲಘಟ್ಟಗಳು. ಯಾಕೆ ಹೆಚ್ಚು ಸ್ಪಷ್ಟವಾಗಿ ಹೇಳಲ್ಪಟ್ಟಿಲ್ಲ – ಸೂಕ್ತ ಸಮಯದಲ್ಲಿ ಬಹಿರಂಗಗೊಳಿಸಲ್ಪಡುತ್ತವೆ – ಸಮಯ ಮತ್ತು ಕಾಲಗಳನ್ನು ತಿಳುಕೊಳ್ಳುವ ಪ್ರಮಾಣಿಕ ಬಯಕೆ ಪ್ರಶಂಸನೀಯ – ಅಡ್ವೆನ್ಟಿಸ್ಟ್‌ಗಳ ತಪ್ಪುಗಳು – ಸಕಾಲದ ಪ್ರವಾದನೆಯ ನಿಜವಾದ ಉದ್ದೇಶ – ನಮ್ಮ ಪ್ರಸ್ತುತ ಸ್ಥಾನ. ಮುಂಬರುವ ಅಧ್ಯಾಯಗಳ ಉದ್ದೇಶ.**

ಯುಗಗಳ ಯೋಜನೆಯಲ್ಲಿರುವ ಮಾನವರ ರಕ್ಷಣೆಯ ಬಗ್ಗೆ ದೈವಿಕ ವ್ಯವಸ್ಥೆಯ ಪ್ರಮುಖ ಅಂಶಗಳನ್ನು ಪವಿತ್ರವಾದ ಧರ್ಮಗ್ರಂಥಗಳ ದೃಷ್ಟಿಕೋನದಲ್ಲಿ ನಿಮ್ಮ ಮುಂದಿಡಲು ನಾವು ಪ್ರಯತ್ನಪಡುತ್ತೇವೆ. ಹೀಗಾಗಿ ಈ ಅಧ್ಯಾಯದ ಉದ್ದೇಶ ಅದೇ ಪ್ರಮಾಣದಲ್ಲಿ, ಆ ಯೋಜನೆಯ ವಿವಿಧ ಲಕ್ಷಣಗಳ ನೆರವೇರುವಿಕೆಗೆ ಸುನಿಶ್ಚಿತವಾದ ಸಮಯ ಮತ್ತು ಕಾಲಗಳನ್ನು ಗೊತ್ತುಪಡಿಸುವುದಾಗಿದೆ. ಅಂದರೆ, ಯೋಜನೆಯ ಪ್ರಗತಿಯಂತೆ, ಅದನ್ನು ಅನುಸರಿಸುವ ಅದರ ಪ್ರತಿಯೊಂದು ಲಕ್ಷಣವೂ ಕಾಲಕ್ಕೆ ಸರಿಯಾಗಿ ನೆರವೇರಿದೆ ಹಾಗೂ ಈ ಭೂಮಿಯ ಮೇಲಿರುವ ಎಲ್ಲಾ ಮಾನವರ ಆಶೀರ್ವಾದಯುತ ಅಭಿವೃದ್ಧಿಯ ಕಾಲವು ಈಗ ಸಮೀಪಿಸಿದೆ – ಆದಿ. 28:14; ಗಲಾತ್ಯ 3:16.

ಸುವಾರ್ತಾ ಯುಗದ ದೀರ್ಘವಾದ ಶತಮಾನಗಳಲ್ಲಿ, ಸಭೆಯು ತನ್ನ ಕರ್ತನು ಆದೇಶಿಸಿದಂತೆ "ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ" ಎಂದು ಪ್ರಾರ್ಥಿಸಿದೆ. ಆದರೆ, ಸಮಯವು ದೀರ್ಘವಾಗಿರುವುದರಿಂದ, ತೂಕಡಿಸುವ ಮಕ್ಕಳಂತೆ, ಅನೇಕರು ಆ ಮಾತುಗಳ ಪ್ರಾಮುಖ್ಯತೆಯನ್ನು ಮರೆತು ಹೋಗಿದ್ದು ಅವುಗಳು ಅವರ ತುಟಿಯಲ್ಲಿಯೇ ಸತ್ತುಹೋಗಿವೆಯೇನೋ ಎಂಬಂತೆ ತೋರಿಬರುತ್ತಿದೆ. ಯಾರ ಹೃದಯಗಳು ಇನ್ನೂ ಕರ್ತನಿಗೆ ನಿಷ್ಠೆಯುಳ್ಳವುಗಳಾಗಿವೆಯೋ ಅವರಿಗೆ ನಾವು ಅಪೋಸ್ತಲನ – "ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತು ಇದನ್ನೆಲ್ಲಾ ಮಾಡಿರಿ. ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದಕ್ಕಿಂತ ಈಗ ನಮ್ಮ ವಿಮೋಚನೆಯ ಕಾಲವು ಹತ್ತಿರವಾಯಿತು" (ರೋಮಾ. 13:11,12), "ಇರುಳು ಬಹಳ ಮಟ್ಟಿಗೆ ಕಳೆಯಿತು; ಮಿಲಿಯಾಂತರದ ಹಗಲು ಸಮೀಪವಾಯಿತು'' "ಬಾಗಿಲಲ್ಲೇ ಅದೆ" (ಮತ್ತಾಯ 24,33) ಎಂಬ ಮಾತುಗಳನ್ನು ಗಮನಿಸಬಹುದು. ಸ್ನಾನಿಕನಾದ ಯೋಹಾನನು "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" (ಮತ್ತಾಯ 3:2) ಎಂದು ಹೇಳಿದ್ದರೂ ಕರ್ತನ ಮೊದಲ ಆಗಮನದಲ್ಲಿದ್ದಂತೆ ಅದಿನ್ನೂ ಭ್ರೂಣಾವಸ್ಥೆಯಲ್ಲಿ ಅಥವಾ ಆರಂಭದಾವಸ್ಥೆಯಲ್ಲಿ ಇಲ್ಲ (ಯೋಹಾನ 18:36,37 ವಚನಗಳು). ಅದು ಅಧಿಕಾರಯುಕ್ತವಾಗಿ ಮತ್ತು ಮಹಾ ವೈಭವದೊಡನೆ ಇನ್ನೂ ಸಹ ಬಲದಿಂದಲೂ, ಮಹಿಮೆಯಿಂದಲೂ ಬರಬೇಕಾಗಿದೆ ಎಂಬ ಅರ್ಥ ನೀಡುತ್ತವೆ.

ಹೇಗಾದರೂ ಯುಗಗಳ ಯೋಜನೆಯ ಬಗ್ಗೆ ಕೂಲಂಕುಶವಾಗಿ ಅಧ್ಯಯನ ಮಾಡಿದವರು ಮಾತ್ರವೇ ಆ ಯೋಜನೆಯ ವಿವಿಧ ಲಕ್ಷಣಗಳ ಅಭಿವೃದ್ಧಿಗಳ ಕುರಿತಾಗಿ ಮತ್ತು ಅವುಗಳ ಅಂತಿಮ ನೆರವೇರಿಕೆಯ ಬಗ್ಗೆ ಈ ಸಂಪುಟದ ಬೋಧನೆಗಳನ್ನು ಮೆಚ್ಚಿಕೊಳ್ಳಲು ಸಿದ್ಧರಾಗುತ್ತಾರೆ. ಹಿಂದಿನ ಸಂಪುಟಗಳ ಬೋಧನೆಗಳನ್ನು ಸಾದ್ಯಂತವಾಗಿ ಗ್ರಹಿಸಿಕೊಳ್ಳದ ಹೊರತು ಯಾರೂ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾರರೆಂದು ನಿರೀಕ್ಷಿಸಲಾಗಿದೆ. ಹಾಗಿಲ್ಲದ ಪಕ್ಷದಲ್ಲಿ ಇದು ಅವರಿಗೆ ಸೂಕ್ತ ಸಮಯದ ಹೊತ್ತು ಹೊತ್ತಿನ ಆಹಾರವಾಗದು. ನಾವು ಅದನ್ನು ಸ್ವೀಕರಿಸುವ ಸಿದ್ಧತೆ ಮಾಡಿಕೊಂಡಾಗ ಮಾತ್ರವೇ ಸತ್ಯವು ಹೊತ್ತು ಹೊತ್ತಿನ ಆಹಾರವಾಗುವುದು. ಒಂದು ಮಗುವಿಗೆ ಅಂಕಿ ಅಂಶಗಳ ಮತ್ತು ಭಾಷೆಯ ಶಿಕ್ಷಣವಿಲ್ಲವಾದರೆ ಅದು ಗಣಿತದ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದಿಲ್ಲ. ದೈವಿಕ ಸತ್ಯತೆಯ ಬಗ್ಗೆಯೂ ಹಾಗೆಯೇ. ಅದು ಹಂತ ಹಂತವಾಗಿ ಕಟ್ಟಲ್ಪಡುವುದು, ಅದರ ಅರ್ಥವನ್ನು ಗ್ರಹಿಸಿಕೊಳ್ಳಲು ಒದಗಿಸಿರುವ ಹಂತಗಳನ್ನು ಜಾಗರೂಕತೆಯಿಂದ ಹತ್ತಬೇಕಾಗುತ್ತದೆ. ಖಂಡಿತವಾಗಿಯೂ, ನಾವು ಮುಂದಿಡುವ ಒಂದೊಂದು ಹೆಜ್ಜೆಯನ್ನೂ ಅವುಗಳು ನಿಜವಾದ ಹೆಜ್ಜೆಯಾಗಿದೆಯೋ ಇಲ್ಲವೋ ಎಂಬ ಅಂಜಿಕೆಯಿಲ್ಲದೆ ದೇವರ ವಾಕ್ಯದ ಮೂಲಕವಾಗಿ ಅದನ್ನು ರುಜುವಾತುಪಡಿಸಿಕೊಳ್ಳುತ್ತೇವೆ. ದೇವರ ಮೇಲೆ ನಿಸ್ಸಂಶಯವಾದ ನಂಬಿಕೆ ಇಡುವವರು ಮಾತ್ರವೇ ಮತ್ತು ಯಾರಿಗೆ "ಕರ್ತನು ಇಂತೆನ್ನುತ್ತಾನೆ" ಎಂಬ ಮಾತು ಎಲ್ಲಾ ಗೊಂದಲಗಳಿಗೂ ಸಂಶಯಗಳಿಗೂ ಕೊನೆಯಾಗಿದೆಯೋ ಅಂಥವರು ಮಾತ್ರವೇ ದೇವರಾತ್ಮನ ಮೂಲಕ ಸುಧಾರಿಸಿದ ಸತ್ಯಕ್ಕೆ ಅದು ಸಲ್ಲತಕ್ಕದಾಗುವಂತೆ ಸತ್ಯಸಂಗತಿಗಳಿಗೆ ನಡೆಸಲ್ಪಡುತ್ತಾರೆ. ಮಾತ್ರವಲ್ಲದೆ, ಸತ್ಯವೆಂದು ಅದೇ ಅಧಿಕಾರದಿಂದ ರುಜುವಾತುಪಟ್ಟಿರುವ

ಹಳೆಯ ಸಂಗತಿಗಳಲ್ಲಿಯೂ ದೃಢಗೊಳ್ಳುತ್ತಾರೆ.

ಈ ರೀತಿಯಲ್ಲಿರುವವರಿಗೆ ಮಾತ್ರ ದೇವರು ಮಾರ್ಗದರ್ಶನ ಮಾಡುವ ಪ್ರಸ್ತಾಪನೆ ಮಾಡುತ್ತಾನೆ. ಸುಗ್ಗಿ ಸಮಯವಾದ, ಯುಗದ ಅಂತ್ಯದಲ್ಲಿ, ದೇವರು ಈ ಹಿಂದೆ ಆತನ ಪ್ರಾಮಾಣಿಕ ಮತ್ತು ಭಕ್ತಿಪೂರ್ವಕ ಮಕ್ಕಳಿಗೂ ತಿಳಿಸದ ಇನ್ನೂ ಅನೇಕ ಸತ್ಯ ಸಂಗತಿಗಳು ಯುಕ್ತ ಸಮಯದಲ್ಲಿ ಬಯಲಾಗುತ್ತವೆ. ಪ್ರವಾದಿಯಾದ ಹಬಕ್ಕೂಕನು ಅಂತ್ಯಕಾಲದಲ್ಲಿ ದೇವರ ಯೋಜನೆಯ ಭವ್ಯವಾದ ನೆರವೇರಿಕೆಯ ಬಗ್ಗೆ “ಅದು ಕ್ಲುಪ್ತ ಕಾಲದಲ್ಲಿ ನೆರವೇರತಕ್ಕದ್ದು” (ಹಬಕ್ಕೂಕ 2:3) ಎಂದು ತಿಳಿಸುವುದರ ಮೂಲಕವಾಗಿ ದೇವರ ಯೋಜನೆಯ ನೆರವೇರಿಕೆಯ ಭವ್ಯವಾದ ದರ್ಶನದ ಬಗ್ಗೆ ಸತ್ಯವನ್ನಲ್ಲದೆ ಸುಳ್ಳಾಡಬಾರದು. ಕೆಲವು ದೇವರ ಮಕ್ಕಳಿಗೆ ಅದನ್ನು ಅವರು ಅದರ ನಿರ್ದೇಶನಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಂತೆ ಹಲಗೆಯ ಮೇಲೆ ಬರೆದು ಸರಳವಾಗಿಯೇ ಹೇಳಬೇಕಾಗುತ್ತದೆ. ಅವರ ಈ ಸಾಧನೆಯಿಂದ ಇತರರೂ ಸಹ ಅವುಗಳನ್ನು ಸರಳವಾಗಿ ಓದಿಕೊಳ್ಳಬಹುದು. ದಾನಿಯೇಲನೂ ಸಹ, ಜ್ಞಾನವು ವೃದ್ಧಿಗೊಳ್ಳಬೇಕು – ಬುದ್ಧಿವಂತರು ನಂಬಿಕೆಯ ಮೂಲಕ ದರ್ಶನವನ್ನು ಅರ್ಥಮಾಡಿಕೊಳ್ಳಬೇಕು (ದಾನಿಯೇಲ 12:4,9,10) ಎಂದು ಪ್ರಕಟಿಸಿದ್ದಾನೆ.

ಇಲ್ಲಿ ನಮ್ಮ ಉದ್ದೇಶವೇನೆಂದರೆ ಯಥೇಚ್ಛವಾದ ಮಾನವ ಕಲ್ಪನೆಗಳನ್ನು ಆಧರಿಸಿ ಯಾರೂ ಪ್ರವಾದಿಸಬಾರದು ಮತ್ತು ಅವುಗಳು ಯಾವುದೇ ಅರ್ಥದಲ್ಲಿ ಪವಿತ್ರ ಬರಹಗಳಲ್ಲಿ ಬರೆದಿರುವುದಕ್ಕಿಂತ ಹೆಚ್ಚಾದ ಬುದ್ಧಿವಂತಿಕೆಯಿಂದ ಕೂಡಿರಬಾರದು ಎಂಬುದೇ. ಆದುದರಿಂದ ಮಾನವ ಅನ್ವೇಷಣೆಗಳನ್ನೆಲ್ಲವನ್ನೂ ವರ್ಜಿಸಿ ನಾವು ದೈವಿಕ ಸತ್ಯದ ಕಾರಂಜಿಗೆ ಸಮೀಪರಾಗುತ್ತೇವೆ. ಪ್ರವಾದನೆಗಳನ್ನು ಪ್ರವಾದನಾ ಬೆಳಕಿನಲ್ಲಿಯೂ ಅದರ ನೆರವೇರಿಕೆಗಳ ಪ್ರಕಟನೆಯನ್ನು ಹಲಗೆಯ ಮೇಲೆ ಅವನ್ನು ಕೆತ್ತಲು, ಹಾಗೂ ದೇವರು ಅದನ್ನು ಮುದ್ರೆ ಹಾಕಿರುವುದಾಗಿ ತಿಳಿಸುತ್ತಾನೆ (ಹಬಕ್ಕೂಕ 2:2). ಆದ ಕಾರಣ ಅವುಗಳು ಈ ಅಂತ್ಯ ಸಮಯದ ಮೊದಲೇ ಅರ್ಥವಾಗಬಾರದು. ಆದರೆ ಅವುಗಳು ನಂತರದಲ್ಲಿ ಅರ್ಥವಾಗುವುದೆಂಬ ಭರವಸೆ ನೀಡಿದ್ದಾನೆ.

ಈ ಸಂಪುಟದಲ್ಲಿ ನಾವು ದೇವರು ಗೊತ್ತುಪಡಿಸಿದ ಸಮಯಗಳ ಮತ್ತು ಕಾಲಗಳ ಬಗ್ಗೆ ಸಾಕ್ಷಿಯ ಸರಪಳಿಯನ್ನು ನೀಡುವವರಾಗಿದ್ದೇವೆ. ಇದರ ಪ್ರತಿಯೊಂದು ಕೊಂಡಿಯೂ ಸತ್ಯವೇದಕ್ಕನುಸಾರವಾಗಿ ಬಲವುಳ್ಳದಾಗಿದೆ. ನಾವು ಅದನ್ನು ಒಟ್ಟಾಗಿ ನೋಡುವಾಗ, ಸಂಬಂಧದಲ್ಲಿ ಅವುಗಳು ಒಂದು ಮತ್ತೊಂದನ್ನು ಸ್ಥಿರಪಡಿಸುತ್ತವೆ, ಎಷ್ಟೋ ವಿಶಾಲವಾದ ಮತ್ತು ವ್ಯಾಪಕವಾದ, ಎಷ್ಟೋ ಆಳವಾದ ವಿನ್ಯಾಸವುಳ್ಳ, ಸಾಮರಸ್ಯವುಳ್ಳ ಯೋಜನೆಯನ್ನು ಅಷ್ಟೇ ಸಮರ್ಪಕವಾಗಿ ಅದು ಪೂಜ್ಯಭಾವದ ಅಭ್ಯಾಸಶೀಲರಿಗೆ ಮತ್ತು ವಿಚಾರಿಸುವವರಿಗೆ ಸಾಕ್ಷ್ಯನೀಡುತ್ತದೆ, ಅದು ಮಾನವ ಆಲೋಚನೆಯು ಅಗಲ ಮತ್ತು ಆಳವನ್ನು ಮೀರುವುದಾಗಿರುವುದರಿಂದ ಮಾನವ ಮೂಲದಲ್ಲಿ ಉತ್ಪತ್ತಿ ಅಸಾಧ್ಯ.

ಸುವಾರ್ತಾಯುಗದ ಅಂತ್ಯವು ಯೆಹೂದ್ಯ ಯುಗದ ಅಂತ್ಯದಂತೆಯೇ ಸುಗ್ಗಿಕಾಲ ಎಂದು ಕರೆಯಲ್ಪಟ್ಟಿದೆ (ಮತ್ತಾಯ 9:37; 13:24,30,39). ಅದರಂತೆ ಇದೂ ಸಹ ನಾಲ್ವತ್ತು ವರ್ಷಗಳದ್ದಾಗಿದೆ; ಪ್ರವಾದನಾ ಸಾಕ್ಷ್ಯದ ಕಿರಣವು ವಿಶೇಷವಾಗಿ ಈ ಯುಗದ ಸುಗ್ಗಿಗಳ ಮೇಲೆ ವಿಶೇಷವಾಗಿ ಕೇಂದ್ರೀಕರಿಸಲ್ಪಟ್ಟಿದೆ. ಅದರಲ್ಲಿ ಯೆಹೂದ್ಯ ಕಾಲದ ಎಲ್ಲಾ ಬೆಳಕು ಅದರ ಸಾಂಕೇತಿಕ ಲಕ್ಷಣಗಳ ನಿಮಿತ್ತ ವೈಭವಯುತವಾದ ಮಧ್ಯಬಿಂದುವಾಗಿ ಒಮ್ಮುಖವಾಗಿ ಸೇರಿಹೋಗುತ್ತದೆ. ಈ ಬೆಳಕಿನಲ್ಲಿ ನಾವೀಗ ನಮ್ಮ ದೇವರ ಗಂಭೀರವಾದ ಹೆಜ್ಜೆಗಳನ್ನು ಕಳೆದುಹೋದ ಕಾಲದಲ್ಲಿ ನೀಡಿದ ದೀರ್ಘದರ್ಶನದಲ್ಲಿ ಮಾತ್ರವಲ್ಲ ಆತನ ಯೋಜನೆಯ ಪ್ರಸ್ತುತ ಪರಿಶ್ರಮದಲ್ಲಿಯೂ ನಿರ್ದಿಷ್ಟವಾಗಿ ಕಾಣಬಹುದಾಗಿದೆ. ಅದು ಮಾತ್ರವಲ್ಲ, ಬರಲಿರುವ ಸಂಗತಿಗಳನ್ನೂ ನಮಗೆ ತೋರಿಸುವೆನೆಂಬ ಆತನ ವಾಗ್ದಾನದ (ಯೋಹಾನ 16:13) ಪ್ರಕಾರವೂ ಸಹ ನಾವು ಈ ದರ್ಶನದ ಅದ್ಭುತವಾದ ಸ್ಫುಟತೆಯೊಡನೆ ಬರಲಿರುವ ಸಹಸ್ರಮಾನಕಾಲದಲ್ಲಿ ಸರ್ವರಿಗೂ ಇರುವ ಆತನ ವಿಶಾಲವಾದ ಕಾರ್ಯನೀತಿಯನ್ನು ಎಲ್ಲಾ ಸಂಗತಿಗಳ ಭವ್ಯವಾದ ಪುನಃವಶದ ನೆರವೇರಿಕೆಯುವರೆಗೂ ನೋಡುತ್ತೇವೆ. ಈ ಸುಗ್ಗಿಯ ಕಾಲದಲ್ಲಿ ಅನೇಕ ಮಹಾ ಮತ್ತು ಅದ್ಭುತ ಘಟನೆಗಳು ಕೇಂದ್ರಿಕೃತಗೊಂಡಿರುವುದನ್ನೂ ಕಂಡುಕೊಳ್ಳುತ್ತೇವೆ. ಅದರಲ್ಲಿ ಇಕ್ಕಟ್ಟಿನ ಕಾಲವು, ಯೆಹೋವನ ದಿನವು. ಕ್ರಿಸ್ತವಿರೋಧಿಯ ಅಂತ್ಯ ಮತ್ತು ಸಂಪೂರ್ಣವಾದ ಉರುಳಿಸುವಿಕೆಯೂ ಮತ್ತು, ಮಹಾ ಬಾಬೇಲಿನ ಪತನವೂ, ಯೆಹೂದ್ಯರ ಹಿಂತಿರುಗುವಿಕೆಯ ಭಾಗ್ಯದ ಪ್ರಾರಂಭವೂ; ನಮ್ಮ ಕರ್ತನ ಎರಡನೆಯ ಬರುವಿಕೆ ಹಾಗೂ ಆತನ ರಾಜ್ಯ ಸ್ಥಾಪನೆ ಹಾಗೂ ಭಕ್ತಜನರ ಪುನರುತ್ಥಾನ ಮತ್ತು ಪ್ರತಿಫಲವೂ ಕಂಡುಬರುತ್ತವೆ.

ನಾವು ಪ್ರವಾದನೆಯಲ್ಲಿ ಸುಗ್ಗಿಕಾಲದ ಆರಂಭವೂ, ಅಂತ್ಯವೂ ಮತ್ತು ಅವುಗಳಲ್ಲಿ ನಡೆಯಬೇಕಾದ ಘಟನೆಗಳು ಸ್ಪಷ್ಟವಾಗಿ ಗುರುತಿಸಿರುವುದನ್ನು ಕಾಣುತ್ತೇವೆ. ಇದರ ಬಗ್ಗೆ ಗಮನ ಸೆಳೆಯಲು ಪ್ರವಾದನೆಗಳ ವಿವಿಧ ಶ್ರೇಣಿಗಳು ಉಚ್ಛ ಸ್ಥಾನಕ್ಕೇರುವ ಸಮಯಗಳ ತಾತ್ಪರ್ಯವನ್ನು ಪತ್ತೆ ಹಚ್ಚುವುದು ಈ ಸಂಪುಟದ ಉದ್ದೇಶವಾಗಿದೆ. ಅದರ ಸಾಕ್ಷ್ಯವನ್ನು ಪಡೆಯುವಂತೆ ಓದುವವನಿಗೆ ಕೇಳಿಸಿಕೊಳ್ಳುವ

ಕಿವಿಗಳು ಇರಬೇಕು (ಪ್ರಕಟನೆ 2:7 ಮತ್ತು ಮತ್ತಾಯ 11:15). ಮತ್ತು ಹಲವಾರು ಪೂರ್ವಕಲ್ಪಿತ ಅಭಿಪ್ರಾಯಗಳನ್ನು ತ್ವರಿತವಾಗಿ ತೊಡೆದು ಹಾಕಬೇಕಾಗುತ್ತದೆ. ಯಾಕೆಂದರೆ ಆತನು ದೇವವಾಕ್ಯದೊಂದಿಗಿರುವ ಅವುಗಳ ಸಾಮರಸ್ಯವನ್ನು ನೋಡಲು ಬರುವವನಾಗಿದ್ದಾನೆ. ಆ ರೀತಿಯ ಮನಸ್ಸುಳ್ಳವರಿಗೆ ಮತ್ತು ಈ ಸಂಪುಟದ ಪುಟಗಳನ್ನು ಅವುಗಳ ವ್ಯವಸ್ಥೆಗಳಿಗೆ ತಕ್ಕಂತೆ ತಾಳ್ಮೆಯಿಂದಲೂ ಜಾಗರೂಕತೆಯಿಂದಲೂ ಅನುಸರಿಸುವವರಿಗೆ ಇದು ಆಶೀರ್ವಾದವಾಗಿರಲಿಕ್ಕಿದೆ ಎಂಬುದನ್ನು ನಾವು ಅನುಮಾನಿಸುವುದಿಲ್ಲ. ಇದರ ಪಾಠಗಳು ಒಳ್ಳೆಯ ಮತ್ತು ಪ್ರಾಮಾಣಿಕ ಮನಸ್ಸುಳ್ಳವರಿಂದ ಸ್ವೀಕಾರಗೊಂಡರೆ ಅದು ಅವರನ್ನು ಈ ಲೋಕದಿಂದ ಬೇರ್ಪಡಿಸುವ ಮತ್ತು ಅವುಗಳನ್ನು ಧ್ಯಾನಗಾರನಿಗೆ ಗೋಧಿಯನ್ನು ಪಕ್ವಗೊಳಿಸುವ ಶಕ್ತಿಯಾಗುತ್ತದೆ. ಹೀಗೆ ಸಂತರನ್ನು ತ್ವರಿತಗೊಳಿಸಿ, ಪಕ್ವಗೊಳಿಸಿ, ಗೋಧಿಯನ್ನು ಹಣಜಿಯನ್ನು ಬೇರ್ಪಡಿಸುವ ಕಾರ್ಯವು ಈ ಸುಗ್ಗಿ ಕಾಲದಲ್ಲಿ ಪ್ರಕಟವಾಗುತ್ತಿರುವ ನಮ್ಮ ಕರ್ತನಿಂದ ವಿನ್ಯಾಸಗೊಂಡ ಈ ಪ್ರವಾದನೆಗಳ ಉದ್ದೇಶವು ಇದೇ ಆಗಿದೆ ಎಂದು ನಾವು ಗ್ರಹಿಸಿಕೊಳ್ಳುತ್ತೇವೆ.

ಆಳವಾಗಿ ವಿನ್ಯಾಸಗೊಂಡಿದ್ದು ಸ್ಪಷ್ಟವಾಗಿ ಸಿದ್ಧಪಡಿಸಿರುವ ದೇವರ ಕ್ರಮಬದ್ಧವಾದ ಯುಗಗಳ ನಕ್ಷೆಯು ಹಿಂದಿನ ಸಂಪುಟದಲ್ಲಿ ಕಂಡುಬರುವ ದೈವಿಕ ಯೋಜನೆಯು ಅದ್ಭುತವಾದ ಉದ್ದೇಶಗಳನ್ನು ಹೊಂದಿದ್ದಾಗಿದ್ದು ಅದನ್ನು ನೋಡಲು ಅನುಮತಿಸಲ್ಪಟ್ಟವರು ಮಾತ್ರವೇ ಅದರಲ್ಲಿ ದೇವರು ಬಹಿರಂಗಪಡಿಸಿರುವ ಸಮಯ ಮತ್ತು ಕಾಲಗಳ ಬಗ್ಗೆ ಕಂಡುಕೊಳ್ಳಲು ಬಹಳಷ್ಟು ಉತ್ಸುಕರಾಗಿರುತ್ತಾರೆ. ಈ ಪ್ರಸ್ತಾಪದ ಬಗ್ಗೆ ಅವರ ಆಸಕ್ತಿಯು ಆಶೀರ್ವಾದವು ಎಲ್ಲರಿಗೂ ಕಾದಿರಿಸಲ್ಪಟ್ಟದೆ ಎಂದು ಕಂಡುಕೊಳ್ಳದಿದ್ದ ಹಿಂದಿನ ಕಾಲದವರಿಗಿಂತ ಬಹಳ ಪಟ್ಟು ಹೆಚ್ಚಾಗಿಯೇ ಇರುತ್ತದೆ. ದೇವರ ನಿಷ್ಠಾವಂತ ಮಕ್ಕಳು ಮಹಿಮೆಯ ರಾಜನು ಬರುವುದನ್ನು ಮತ್ತು ಅಂಧಕಾರದ ಅಧಿಪತಿಯು ಬಂಧಿಸಲ್ಪಡುವುದನ್ನು; ಬೆಳಕಿನ ಮಕ್ಕಳು ಸೂರ್ಯನಂತೆ ಯಾವಾಗ ಪ್ರಕಾಶಿಸುತ್ತಾರೆ, ಮತ್ತು ಅಂಧಕಾರವು ಯಾವಾಗ ಚದುರಿಹೋಗುತ್ತದೆ; ಭಕ್ತರುಗಳು ಯಾವಾಗ ದೈವಿಕ ಮಕ್ಕಳಾಗಿ ಸ್ವೀಕರಿಸಲ್ಪಡುತ್ತಾರೆ, ನರಳುವ ಸೃಷ್ಟಿಗಳು ಭ್ರಷ್ಟಾಚಾರದ ಬಂಧನದಿಂದ ಯಾವಾಗ ಬಿಡುಗಡೆ ಹೊಂದುತ್ತಾರೆ, ಯಾವಾಗ ನಮ್ಮ ಪರಲೋಕ ತಂದೆಯ ಭವ್ಯವಾದ ಗುಣಲಕ್ಷಣಗಳು ಆಶ್ಚರ್ಯಚಕಿತ ಪ್ರಪಂಚದವರಿಗೆ ಪ್ರಕಟಗೊಳ್ಳುತ್ತವೆ ಮತ್ತು ನೀತಿವಂತಿಕೆಯನ್ನು ಪ್ರೀತಿಸುವವರೆಲ್ಲರೂ ತಮ್ಮ ಹೃದಯಗಳನ್ನು ಪ್ರೀತಿಯಿಂದಲೂ ವಿಧೇಯತೆಯಿಂದಲೂ ಆರಾಧನಾಪೂರ್ವಕವಾಗಿ ಮಣಿಯುವಂತೆ ಯಾವಾಗ ಮಾಡುತ್ತದೆ ಎಂಬಿವುಗಳನ್ನು ತಿಳುಕೊಳ್ಳಲು ಹಂಬಲಿಸುತ್ತಾರೆ.

ಅಂಥಾಃ ಆಕಾಂಕ್ಷೆರಹಿತರಾಗಿರುವದೆಂದರೆ, ದೇವರ ಯೋಜನೆಗಳ ಬಗ್ಗೆ ಮೆಚ್ಚುಗೆಯಾಗಲೀ ಆಸಕ್ತಿಯಾಗಲೀ ಏನೂ ಇಲ್ಲದೇ ಇರುವುದು. ಅಪೋಸ್ತಲರುಗಳು, ಪ್ರವಾದಿಗಳು ಮತ್ತು ದೇವದೂತರುಗಳು ಇವರೆಲ್ಲರೂ ಆಕಾಂಕ್ಷೆಯುಳ್ಳವರಾಗಿ ಪ್ರಾಮಾಣಿಕತೆಯಿಂದ ಪ್ರವಾದಿಗಳ ಮೂಲಕ ಯಾವಾಗ ದೇವರಾತ್ಮನು ಸೂಚಿಸಲ್ಪಡುತ್ತಾನೆ ಎಂಬುದನ್ನು ಹುಡುಕುತ್ತಾ ಇದ್ದರೆ, ಮಕ್ಕಳ ಪಾಲಿನ ಈ ಆಸಕ್ತಿಯು ದೇವರಿಗೆ ಸಂಪ್ರೀತಿಯನ್ನುಂಟು ಮಾಡುವುದಾಗಿತ್ತು. ಆತನು ಇದುವರೆಗೂ ಯಾವುದೇ ಗಣನೀಯ ಪ್ರಮಾಣದಲ್ಲಿ ಅಂಥಾಃ ಬಯಕೆಗಳನ್ನು ತಣಿಸಿದ್ದಿಲ್ಲ. ಯಾಕೆಂದರೆ ಅದಕ್ಕೆ ಯುಕ್ತ ಸಮಯವು ಇನ್ನೂ ಬಂದಿರಲಿಲ್ಲ. ಆತನು ಒಮ್ಮೆಯಾದರೂ ಅಂಥಾಃ ಆಸಕ್ತಿಯನ್ನು ಗದರಿಸಿದ್ದೂ ಇಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಇದರ ಬಗ್ಗೆ ಅನ್ವೇಷಿಸಿದ ದಾನಿಯೇಲನನ್ನು ಅತಿಪ್ರಿಯನೆಂದು ಕರೆದು ಆತನ ವಿಚಾರಣೆಗಳಿಗೆ ತನ್ನ ಸ್ಥಿರವಾದ ಯೋಜನೆಯನ್ನು ಕುರಿತು ಉತ್ತರಗಳನ್ನು ನೀಡಿದನು.

ಹೀಗಾಗಿ, ಇಂತಹ ತಪಾಸಣೆಯು ದೇವರ ರಹಸ್ಯಗಳನ್ನು ಅನುಚಿತವಾಗಿ ಬೇಹುಗಾರಿಕೆ ಮಾಡುವದೆಂದು ಪರಿಗಣಿಸಬಾರದು. ದೇವರು ತನ್ನ ಯೋಜನೆಗಳಲ್ಲಿ ಅಂಥಾ ಆಸಕ್ತಿಯನ್ನು ಪ್ರಕಟಿಸಿ ಆ ಮೂಲಕವಾಗಿ ಪರಿಶುದ್ಧ ಗ್ರಂಥಗಳಲ್ಲಿ ಹುಡುಕುವಂತೆ ಮಾಡುತ್ತಿದ್ದನು ಮತ್ತು ದೃಢವಾದ ಪ್ರವಾದನಾ ವಾಕ್ಯಕ್ಕೆ ನಮ್ಮ ಗಮನ ಸೆಳೆಯುತ್ತಿದ್ದನು. ಈ ರೀತಿಯಲ್ಲಿ ಆ ಯುಕ್ತವಾದ, ಕಾಯುವ ಮನೋವೃತ್ತಿಯಲ್ಲಿದ್ದು ಅದು ಸೂಕ್ತಕಾಲದಲ್ಲಿ ಬರುವ ಸತ್ಯವನ್ನು ಬೇಗನೇ ತಿಳುಕೊಳ್ಳುವಂತೆ ಮಾಡುತ್ತಿತ್ತು. "ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ನಮ್ಮ ಮತ್ತು ನಮ್ಮ ಸಂತತಿಯವರ ಪಾಲಾಗಿವೆ" (ಧರ್ಮೋ. 29:29). ಆದುದರಿಂದ, ನಾವು ನಮ್ಮನ್ನು ದೇವರ ವಾಕ್ಯಕ್ಕೆ ಸೀಮಿತಗೊಳಿಸಿಕೊಂಡಲ್ಲಿ, ಮತ್ತು ಅಪ್ರಯೋಜಕವಾದ ಊಹಾಪೋಹಗಳನ್ನು ತಡೆಗಟ್ಟುವುದಾದರೆ, ನಾವು ಸುರಕ್ಷತಾ ಪ್ರದೇಶದಲ್ಲಿರುತ್ತೇವೆ. ದೇವರ ಯೋಜನೆಗಳು, ಸಮಯಗಳು ಮತ್ತು ಕಾಲಗಳು ಪರಿಶುದ್ಧ ಗ್ರಂಥಗಳಲ್ಲಿ ದಾಖಲಿಸದೇ ಹೋಗಿದ್ದಲ್ಲಿ, ಯಾರೂ ಅವುಗಳನ್ನು ಅಲ್ಲಿ ಕಾಣುತ್ತಿದ್ದಿಲ್ಲ. ದೇವರು ನಿಜವಾಗಿಯೂ ತಾನು ಎಂದೆಂದೂ ಗುಪ್ತವಾಗಿಡಬೇಕಾಗಿದ್ದ ಸಂಗತಿಗಳಲ್ಲಿ ಯಾವುದನ್ನೂ ತನ್ನ ಪ್ರವಾದಿಗಳ ಮತ್ತು ಅಪೋಸ್ತಲರ ಮೂಲಕ ದಾಖಲಿಸುತ್ತಿರಲಿಲ್ಲ. ಸೂಕ್ತವಾದ ಸಮಯದಲ್ಲಿ ಮತ್ತು ಕ್ರಮ ಪ್ರಕಾರವಾಗಿ

ದಾಖಲಾದ ದೇವರ ಯೋಜನೆಯ ಅದರ ಕಾಲ ಮತ್ತು ಸಮಯಗಳನ್ನು ತಿಳಿಸುವ ಪ್ರತಿಯೊಂದು ವೈಶಿಷ್ಟ್ಯಪೂರ್ಣ ಸಂಗತಿಯೂ ಅದನ್ನು ಗಮನಿಸುವವರಿಗೆ ಪ್ರಕಟವಾಗುತ್ತಿತ್ತು. ಆದರೆ ಅದರ ಸಮಯ ಲಕ್ಷಣಗಳೊಂದಿಗಿನ ಆತನ ಯೋಜನೆಯು ಅದಕ್ಕೆ ನಿಗದಿಪಡಿಸಿದ ಅಂತ್ಯ ಕಾಲದವರೆಗೆ ಅರ್ಥವಾಗುತ್ತಿರಲಿಲ್ಲ (ದಾನಿಯೇಲ 12:9.10). ದೇವರು ತನ್ನ ರಹಸ್ಯಗಳನ್ನು ಬಯಲುಪಡಿಸುವವರೆಗೆ ಕಲಿಕೆಯಾಗಲೀ, ಧರ್ಮಶ್ರದ್ಧೆ ಯಾಗಲೀ ಅವುಗಳನ್ನು ಕಂಡುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರವಾದನೆಗಳು ಎಲ್ಲರ ಕಣ್ಣುಮುಂದೆ ಶತಮಾನಗಳ ಕಾಲದಿಂದ ನಿಂತಿರುವುದಾದರೂ ಸೂಕ್ತ ಸಮಯದವರೆಗೆ ಅವುಗಳನ್ನು ಬಿಚ್ಚಿ ಓದುವುದು ಸಾಧ್ಯವಿಲ್ಲ.

ಕರ್ತನ ಕೆಲವು ಶಿಷ್ಯರು ದೇವರ ರಾಜ್ಯ ಸ್ಥಾಪಿತವಾಗುವ ಸೂಕ್ತ ಸಮಯದ ಬಗ್ಗೆ ಆತನನ್ನು ವಿಚಾರಿಸಿದಾಗ, ಅದು ಪ್ರಕಟವಾಗಲು ತಕ್ಕ ಸಮಯವಲ್ಲದ್ದರಿಂದ ಆತನು "ತಂದೆಯು ಸ್ವಂತ ಅಧಿಕಾರದಲ್ಲಿರುವ ಕಾಲಗಳನ್ನೂ, ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ" (ಅ.ಕೃ. 1:7) ಎಂದು ಉತ್ತರಿಸುತ್ತಾನೆ. ಮತ್ತೊಂದು ಸಂದರ್ಭದಲ್ಲಿ ಇದೇ ವಿಷಯವಾಗಿ ಅವರು ಮತ್ತೊಮ್ಮೆ ಕೇಳುವಾಗ ಆತನು "ಇದಲ್ಲದೆ ಆ ದಿನದ ವಿಷಯವಾಗಲೀ, ಆ ಘಳಿಗೆಯ ವಿಷಯವಾಗಲೀ ನನ್ನ ತಂದೆಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯದು. ಪರಲೋಕದಲ್ಲಿರುವ ದೇವದೂತರಿಗೂ ತಿಳಿಯದು; ಮಗನಿಗೂ ತಿಳಿಯದು. ಆ ಕಾಲವು ಯಾವಾಗ ಬರುವುದೋ ನಿಮಗೆ ಗೊತ್ತಿಲ್ಲವಾದ್ದರಿಂದ ನೋಡಿಕೊಳ್ಳಿರಿ. ಜಾಗರೂಕರಾಗಿರಿ .... ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ ಹೇಳುತ್ತೇನೆ ಎಚ್ಚರವಾಗಿರಿ" ಅಂದನು (ಮಾರ್ಕ 13:32,33,37).

ಕರ್ತನ ಈ ಮಾತುಗಳನ್ನು ತಂದೆ ದೇವರಲ್ಲದೇ ಬೇರೆ ಯಾರೂ ಆತನ ಸಮಯ ಮತ್ತು ಕಾಲಗಳನ್ನು ಅರಿಯರು ಎಂದು ಅರ್ಥ ಮಾಡಿಕೊಳ್ಳಬಾರದು. ಈ ಕಾರಣದಿಂದ ನಾವು ಈ ಸಮಯಗಳನ್ನೂ, ಕಾಲಗಳನ್ನೂ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ನಮ್ಮ ಕರ್ತನು ಇವುಗಳನ್ನು ತಿಳುಕೊಳ್ಳಲು ಸಾಧ್ಯವಿಲ್ಲ ಎಂಬುದು ಇನ್ನು ಮುಂದೆ ರುಜುವಾತಾಗುವುದಿಲ್ಲ. ಸತ್ಯಸಂಗತಿಯೆಂದರೆ, ತಂದೆಯ ಸಮಗ್ರ ಯೋಜನೆಯನ್ನೂ ಮತ್ತು ಆತನ ಸಮಯ ಹಾಗೂ ಕಾಲಗಳನ್ನೂ ಈಗ ಗ್ರಹಿಸಿಕೊಳ್ಳಬಹುದಾಗಿದೆ ಎಂಬುದಕ್ಕೆ ಹಾಗೂ ನಾವು ಪ್ರಸ್ತುತ ಸೈತಾನನ ಆಧಿಪತ್ಯದ ಅಂತ್ಯದಲ್ಲಿ ಮತ್ತು ಸಹಸ್ರಮಾನದ ಉದಯಕಾಲದಲ್ಲಿ ಜೀವಿಸುತ್ತಿದ್ದು ಜ್ಞಾನವು ವೃದ್ಧಿಗೊಳ್ಳುವಾಗ ಅವುಗಳನ್ನು ಅರ್ಥಮಾಡಿ ಕೊಳ್ಳಬಹುದು ಎಂಬುದಕ್ಕೆ ರುಜುವಾತಾಗಿದೆ (ದಾನಿಯೇಲ 12:4,10). ಪ್ರವಾದನೆಗಳು ಎಂದೆಂದೂ ಅರ್ಥವಾಗದಂತೆ ವಿನ್ಯಾಸಗೊಂಡಿದ್ದರೆ, ಅದನ್ನು ನೀಡಿದ್ದಕ್ಕೆ ಯಾವುದೇ ಸಮಂಜಸವಾದ ಉದ್ದೇಶವಿರುತ್ತಿದ್ದಿಲ್ಲ.

ಪ್ರಭುವಿನ ಈ ಹೇಳಿಕೆಗಳು ಸೂಚಿಸುವುದೇನೆಂದರೆ ದೇವರು ತನ್ನ ಯೋಜನೆಯ ವಿವಿಧ ಭಾಗಗಳನ್ನು ಮನಬಂದಂತೆ. ಅಡ್ಡಾದಿಡ್ಡಿಯಾದ ರೀತಿಯಲ್ಲಿ ಇಟ್ಟಿಲ್ಲ, ಆದರೆ ಆತನು ತನ್ನ ಸಮಯಗಳನ್ನೂ ಕಾಲಗಳನ್ನೂ ತನ್ನ ಪ್ರತಿಯೊಂದು ಮಹಾಕಾರ್ಯಕ್ಕೆ ತಕ್ಕಂತೆ ನಿರ್ದಿಷ್ಟವಾದ ರೀತಿಯಲ್ಲಿ ನಿಗದಿಪಡಿಸಿದ್ದಾನೆ. ಆತನ ಅಪರಿಮಿತ ಶಕ್ತಿ ಮತ್ತು ಜ್ಞಾನವು ಯಾವುದೇ ರೀತಿಯ ವಿಫಲತೆ ಅಥವಾ ನಿಧಾನಗತಿ ಇಲ್ಲವೆಂಬುದನ್ನು ಖಾತರಿಪಡಿಸುತ್ತದೆ.

ಈ ವಚನಗಳು ಅದುವರೆಗೆ ತಂದೆಯಾದ ದೇವರು ತನ್ನ ಯೋಜನೆಗೆ ಸಂಬಂಧಿಸಿದ ಸಮಯ ಮತ್ತು ಕಾಲಗಳನ್ನು ಯಾರೊಬ್ಬರಿಗೂ, ನಮ್ಮ ಕರ್ತನಾದ ಯೇಸುವಿಗೂ ಬಹಿರಂಗಪಡಿಸದೇ ಇರುವುದರ ಬಗ್ಗೆಯೂ ಪ್ರಭಾವಬೀರುತ್ತದೆ. ನಮ್ಮ ಕರ್ತನು ಸಮಯ ಮತ್ತು ಕಾಲಗಳ ಬಗ್ಗೆ ಆಸಕ್ತಿ ತೋರಿದವರಿಗೆ ಗದರಿಸಿದನು ಮತ್ತು ಅಂಥಾಃ ವಿಚಾರಣೆಗಳನ್ನು ಈ ಮಾತುಗಳು ನಿಷೇಧಿಸುತ್ತವೆ ಎಂಬುದರ ಸಾಮಾನ್ಯವಾದ ಊಹನೆಗೆ ದೃಢಪಡಿಸುವುದರಿಂದ ದೂರವಾಗಿ ಅವುಗಳಿಗೆ ವ್ಯತಿರಿಕ್ತವಾದುದು ಸತ್ಯವಾಗಿದೆ. ಆತನ ಮಾತುಗಳು ಸ್ಪಷ್ಟವಾಗಿ ಸಮಯ ಮತ್ತು ಕಾಲಗಳು ಇನ್ನೂ ಅವರಿಗೆ ತಿಳಿಯುವಂತೆ ಕೊಡಲ್ಪಡದೇ ಇದ್ದರೂ, ಅವುಗಳು ಕೆಲವೊಮ್ಮೆ ಬಹಳ ಮುಖ್ಯವಾಗುತ್ತವೆ. ಆತನು ಯಾವುದೇ ಅಲಕ್ಷ್ಯವು ಬಾರದಂತೆ ಅದರ ಬಗ್ಗೆ ಲಕ್ಷ್ಯವಿಡಲು, ಮತ್ತು ಆಗ ಅವರು ಆ ಸೂಕ್ತ ಸಮಯವು ಯಾವಾಗ ಬರುವುದೆಂದು ತಿಳುಕೊಳ್ಳುವಂತೆ ಅದನ್ನು ನಿರಂತರವಾಗಿ ಎಚ್ಚರಿಕೆಯಿಂದ ಗಮನಿಸಲು ಹೇಳುತ್ತಾನೆ.

ಅವರು ಎಚ್ಚರವಾಗಿದ್ದು ಗಮನಿಸುತ್ತಿರುವ ಸಂಗತಿಗಳು ಅವರಿಗೆ ಕಾಣದೇ ಹೋದಾಗ್ಯೂ ಅವರು ಅದನ್ನು ಕಾಲಾಂತರಗಳಿಂದ ಗಮನಿಸುತ್ತಲೇ ಬಂದಿದ್ದಾರೆ. ಪರಂತು ಅವರು ಬಹಳಷ್ಟು ಆಶೀರ್ವಾದ ಹೊಂದಿದ್ದಾರೆ ಮತ್ತು ಹಾಗೆ ಮಾಡುವುದರಿಂದ ಈ ಲೋಕದಿಂದ ಪ್ರತ್ಯೇಕಿಸಲ್ಪಟ್ಟವರಾಗಿದ್ದಾರೆ; ಅದೇ ವೇಳೆ 'ತಕ್ಕ ಸಮಯದಲ್ಲಿ' ಜೀವಿಸುವವರು ವಿಧೇಯತೆಯಿಂದ ಎಚ್ಚರವಾಗಿದ್ದು ಗಮನಿಸುತ್ತಾ ಬಂದಿದ್ದು ಅವರು ಅದನ್ನು ತಿಳುಕೊಳ್ಳುತ್ತಾರೆ, ನೋಡುತ್ತಾರೆ, ಅರ್ಥಮಾಡಿಕೊಳ್ಳುತ್ತಾರೆ. ಅವರಿಗೆ ಈ ಸುಗ್ಗಿಕಾಲದ ಅದ್ಭುತವಾದ ಘಟನೆಗಳ ಮಧ್ಯದಲ್ಲಿ ಅದರ ಬಗ್ಗೆ ತಿಳುವಳಿಕೆ ಇಲ್ಲದೆ ಇರುವುದಿಲ್ಲ. ಯಾವುದೇ ಸಮಯದಲ್ಲಿ ಅದನ್ನು ಗಮನಿಸಲು ನಿರ್ಲಕ್ಷಿಸಿದಲ್ಲಿ, ಪ್ರಭುವು ಹೆಚ್ಚಿನ ಒತ್ತು ನೀಡಿದುದರ ಬಗೆಗಿನ ಆಶೀರ್ವಾದಗಳನ್ನು ಅವರು ಕಳೆದುಕೊಳ್ಳುತ್ತಾರೆ,

ಮತ್ತು ಈ ಲೋಕದ ದೇವರ ಪೂರ್ವಕಲ್ಪಿತ ಅಭಿಪ್ರಾಯಗಳಿಂದ ಅಥವಾ ಜೀವನದ ಅನೇಕ ಸಂಗತಿಗಳ ವಿಪರೀತತೆಯ ಮತ್ತು ಪ್ರಸ್ತುತ ಹಿತಾಸಕ್ತಿಗಳ ಕಾರಣ ಅವರು ತಮ್ಮನ್ನು ಕುರುಡರಾಗಿ ಮಾಡಿಕೊಂಡಿದ್ದಾರೆಂದು ಸಾಬೀತು ಪಡಿಸಿಕೊಳ್ಳುತ್ತಾರೆ ಮತ್ತು ಕರ್ತನಿಗೆ ಸಂಪೂರ್ಣವಾಗಿ ತಮ್ಮನ್ನು ಪ್ರತಿಷ್ಠೆ ಮಾಡಿಕೊಳ್ಳುವ ಹಾಗೂ ದೇವರ ರಾಜ್ಯವನ್ನು, ಮುಂಬರುವ ನಿತ್ಯಜೀವವನ್ನು ಹುಡುಕುವ ತಮ್ಮ ಪ್ರಮಾಣವನ್ನೂ ನಿರ್ಲಕ್ಷಿಸುತ್ತಾರೆ.

ಅಪೋಸ್ತಲನಾದ ಪೇತ್ರ ಮತ್ತು ಪೌಲರು ಈ ಸಮಯ ಮತ್ತು ಕಾಲಗಳ ಬಗ್ಗೆ ಗಮನಸೆಳೆಯುವವರಾಗಿದ್ದಾರೆ. 2 ಪೇತ್ರ 1:16ರಲ್ಲಿ ಪೇತ್ರನು ಈ ವಿಷಯವಾಗಿ "ನಾವು ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ" ಎಂದು ಘೋಷಿಸುತ್ತಾನೆ. ಯಾಕೆಂದರೆ ಪೇತ್ರನು ಕ್ರಿಸ್ತನ ರಾಜ್ಯವು ಮಹಿಮೆಯಿಂದ ಬರವದನ್ನು ಮತ್ತು ಪ್ರಜ್ವಲಿಸುವ ಉಡುಪಿನೊಂದಿಗೆ ಬರಲಿರುವ ಕ್ರಿಸ್ತನನ್ನು, ಆತನೊಡನೆ ಎಲೀಯ ಮತ್ತು ಮೋಶೆಯನ್ನು ರೂಪಾಂತರ ಬೆಟ್ಟದಲ್ಲಿ ಕಂಡ ದರ್ಶನದಲ್ಲಿ ಈಗಾಗಲೇ ಕಣ್ಣಾರೆ ಕಂಡಿದ್ದಾನೆ. ಇಲ್ಲಿ ಮೋಶೆಯು ದೇವರ ರಾಜ್ಯದಲ್ಲಿ ಭೂಲೋಕದ ಪ್ರತಿನಿಧಿಗಳಾದ ಪುರಾತನ ಪಿತೃಗಳನ್ನು ಪ್ರತಿನಿಧಿಸಿದರೆ ಎಲೀಯನು ಸುವಾರ್ತಾ ಯುಗದ ಜಯಶಾಲಿಗಳನ್ನು ಪ್ರತಿನಿಧಿಸುವ ವನಾಗಿದ್ದಾನೆ (ಇಬ್ರಿಯ 11:38–40). ಒಟ್ಟಾರೆ ಈ ದೃಶ್ಯವು ನೀತಿಯ ಸಲುವಾಗಿ ಶ್ರಮೆಪಟ್ಟು, ಆಯ್ಕೆಯನ್ನು ಕೃಪೆಗನುಸಾರವಾಗಿ ಪೂರೈಸಿದ ನಂತರದಲ್ಲಿ ಬರಲಿರುವ ಮಹಿಮೆಯ ಪೂರ್ವಛಾಯೆಯಾಗಿದೆ. ಪೇತ್ರನು ತನ್ನ ದರ್ಶನವನ್ನು ವಿವರಿಸುವಾಗ ಪ್ರವಾದನಾ ಸಾಕ್ಷ್ಯದ ಬಗ್ಗೆ ಸೂಚಿಸುತ್ತಾ "ಇದಲ್ಲದೆ ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷಕೊಡುವುದೇ ಒಳ್ಳೇದು" (2 ಪೇತ್ರ 1:19) ಎಂದಿದ್ದಾನೆ. ಎಲ್ಲಾ ಪ್ರವಾದನೆಗಳೂ ಆಗ ಯಾರಿಂದಲೂ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾದ್ಯವಿಲ್ಲ ವಾದುದರಿಂದ ಎಲ್ಲಾ ಭಕ್ತರೂ ಗಮನಿಸುವ ಪ್ರವೃತ್ತಿಯನ್ನು ಹೊಂದಿರಬೇಕಾದ ಅಗತ್ಯತೆ ಇದೆ ಎಂಬುದನ್ನು ಆತನು ಬಲ್ಲವನಾಗಿದ್ದನು. ಆಕಾಶದ ಕಡೆ ನೋಡುವುದಲ್ಲ, ಆದರೆ ದೇವರು ಪುನರ್‌ವಶಪಡಿಸುವ ಬಗ್ಗೆ ಮತ್ತು ಪುನಃವಶದ ಕಾಲಗಳ ಬಗ್ಗೆ ತನ್ನ ಪರಿಶುದ್ಧ ಪ್ರವಾದಿಗಳ ಮೂಲಕ ನುಡಿದುದರ ಎಲ್ಲವುಗಳ ನೆರವೇರಿಕೆಯನ್ನು ಗಮನಿಸುವುದಾಗಿದೆ. ಇದು ಅವರ ಸಾಕ್ಷಿಯ ಎಷ್ಟೋ ವಿಶಾಲವಾದ ಮುಖ್ಯವಾದ ಭಾಗವಾಗಿದೆ. ಪ್ರವಾದನೆಯು ನಮಗೆ ವಿನೂತನವಾದ ಮುಖ್ಯವಾದ ಸತ್ಯಗಳನ್ನೊಳ ಗೊಂಡಿದ್ದು ದಿನದ ಉದಯವಾಗುವ ಕಾಲವೆಲ್ಲಾ ದೊರಕುತ್ತದೆ ಎಂಬ ಆಶ್ವಾಸನೆಯನ್ನು ಆತನು ನಮಗೆ ನೀಡುತ್ತಾನೆ.

ಪೌಲನು ಪ್ರಕಟಪಡಿಸುವುದೇನೆಂದರೆ "ಸಹೋದರರೇ, ಈ ಸಂಗತಿಗಳು ನಡೆಯಬೇಕಾದ ಕಾಲಗಳನ್ನೂ, ಘಳಿಗೆಗಳನ್ನೂ ಕುರಿತು ನಿಮಗೆ ಬರೆಯುವುದು ಅವಶ್ಯವಿಲ್ಲ. ರಾತ್ರಿ ಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವುದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲಾ. (ನಿಶ್ಯಬ್ದವಾಗಿ, ಸದ್ದಿಲ್ಲದೆ ಬರುತ್ತದೆ. ಬಂದ ನಂತರ, ಅನೇಕರಿಗೆ ಕೆಲವು ಕಾಲ ತಾವು ಅದರೊಳಗೆ ಇದ್ದೇವೆಂದು ಗೊತ್ತಾಗುವುದಿಲ್ಲ.) ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆಯು ಬರುವ ಪ್ರಕಾರ ಬರುವುದು (ಕಳೆದ ಆರು ಸಹಸ್ರವರ್ಷಗಳಿಗೆ ಹೋಲಿಸುವಾಗ ಅದು ಫಕ್ಕನೇ ಬರುವುದು. ಯಾಕೆಂದರೆ ನಮ್ಮ ದಿನಗಳನ್ನು ಹಬೆ ಮತ್ತು ವಿದ್ಯುಚ್ಛಕ್ತಿಗಳ ವೇಗದ ದಿನ ಎನ್ನುತ್ತಾರೆ – ಮಿಂಚಿನಂತೆ ಫಕ್ಕನೇ ಅಲ್ಲವಾದರೂ ಅದು ಫಕ್ಕನೇ ಬರುವಂಥಾದ್ದು) ಅವು ತ್ವರಿತವಾದ ದಿನಗಳಾಗಿವೆ ಅವರು ಹೇಗೂ ತಪ್ಪಿಸಿಕೊಳ್ಳಲಾರರು. ಆದರೆ ಸಹೋದರರೇ ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದಲ್ಲ, ನೀವು ಕತ್ತಲೆಯುಲ್ಲಿರುವವರಲ್ಲ" – 1 ಥೆಸ. 5;1–4.

ಎಲ್ಲಾ 'ಸಹೋದರರ' ಬಳಿಯೂ ದೀಪವಿದೆ, ಅದುವೇ ಪೇತ್ರನು ಪ್ರಸ್ತಾಪಸಿದ ಪ್ರವಾದನೆಯ ಖಚಿತವಾದ ಮಾತು. ಕತ್ತಲೆಯಲ್ಲೊಂದು ಬೆಳಕು. ಓರ್ವ ನಿಷ್ಠಾವಂತ, ವಿನೀತರಾದ ದೇವರ ವಾಕ್ಯದ ವಿದ್ಯಾರ್ಥಿಗಳಾಗಿ ಸಹೋದರರ ಉಚಿತವಾದ ಮನೋವೃತ್ತಿಯನ್ನು ಇಟ್ಟುಕೊಳ್ಳುವಾಗ ಅವರು ಯಾವ ಸಮಯದಲ್ಲಿಯೂ ಕತ್ತಲೆಯಲ್ಲಿರುವವರಲ್ಲ. ಸೂಕ್ತಸಮಯದಲ್ಲಿ ದೊರೆಯುವ ಆಹಾರದಂತೆ ಅವರಿಗೆ ಸತ್ಯದ ಸರಬರಾಜಾಗುತ್ತದೆ. ದೇವರೊಂದಿಗೆ ಸಂಪೂರ್ಣ ಸಾಮರಸ್ಯದಿಂದ ಜೀವಿಸುವ ಯಾರೊಬ್ಬರನ್ನೂ ಅವಶ್ಯವಾದ ಸತ್ಯದ ಬಗ್ಗೆ ತಿಳುವಳಿಕೆ ಇಲ್ಲದಂತೆ ಬಿಡುವುದಿಲ್ಲ. ಅವರಿಗೆ ಸೂಕ್ತ ಸಮಯದಲ್ಲಿ ಸತ್ಯವು ಆಹಾರದ ರೂಪದಲ್ಲಿ ದೊರೆಯುವುದು. ದೇವರೊಂದಿಗೆ ಸಂಪೂರ್ಣವಾದ ಸಾಮರಸ್ಯದಲ್ಲಿರುವ ಯಾರನ್ನೂ ಅವರು ಕತ್ತಲೆಯಲ್ಲಿ ತಡಕಾಡದಂತೆ ತಮ್ಮ ಮಾರ್ಗದಲ್ಲಿ ಬೆಳಕನ್ನು ಕಂಡುಕೊಳ್ಳುವಂತೆ ಅವಶ್ಯವಾದ ಸತ್ಯದ ಬಗ್ಗೆ ತಿಳುವಳಿಕೆ ಇಲ್ಲದಂತೆ ಎಂದೂ ಬಿಡುವುದಿಲ್ಲ. ಅಬ್ರಹಾಮ ಮತ್ತು ಲೋಟ ಇವರು ಸೋದೋಮಿನ ನಾಶನದ ಬಗ್ಗೆ ಮುಂಚಿತವಾಗಿಯೇ ತಿಳಿದಿದ್ದರು. ದೇವರು "ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವುದು ಸರಿಯೋ" (ಆದಿ

18:17) ಎಂದು ಕೇಳುತ್ತಾನೆ. ನೋಹನು ಪ್ರಳಯದ ಸಮಯವನ್ನು ಮೊದಲೇ ತಿಳಿದು ಹಡಗನ್ನು ಕಟ್ಟುತ್ತಾನೆ ಮತ್ತು ಅದರೊಳಗೆ ಪ್ರವೇಶಿಸುವ ದಿನವನ್ನೂ ಆತನಿಗೆ ಮೊದಲೇ ತಿಳಿಸಲಾಗಿತ್ತು. ಕ್ರಿಸ್ತನ ಮೊದಲ ಆಗಮನದ ಕಾಲದಲ್ಲಿ ಸಿಮೆಯೋನನು, ಅನ್ನಳು ಮತ್ತು ಮೂಡಣ ಪಂಡಿತರು ಮೆಸ್ಸೀಯನ ಆಗಮನದ ನಿರೀಕ್ಷೆಯಲ್ಲಿದ್ದರು. ನಿಜವಾಗಿಯೂ ಆಗಿನ ಕಾಲದಲ್ಲಿ ಈ ನಿರೀಕ್ಷೆಯು ಸರ್ವೇ ಸಾಮಾನ್ಯವಾಗಿತ್ತು (ಲೂಕ 2:25–38; ಮತ್ತಾಯ 2:2; ಲೂಕ 3:15). ದೇವರು ಈ ರೀತಿಯಾಗಿ ಸೇವಕರ ಮನೆಯಲ್ಲಿ ವ್ಯವಹರಿಸುವವನಾದರೆ, ಆತನು ಮಕ್ಕಳ ಮನೆಯಲ್ಲಿ ಇದನ್ನು ಕಡಿಮೆಯಾಗಿ ಮಾಡುವನೋ?. ನಮ್ಮ ಕರ್ತನೂ ಶಿರಸ್ಸೂ ಆಗಿರುವಾತನು ಹೇಳುತ್ತಾನೆ, "ಇನ್ನು ಮೇಲೆ ನಾನು ನಿಮ್ಮನ್ನು ಆಳುಗಳೆನ್ನುವುದಿಲ್ಲ; ಯಜಮಾನನು ಮಾಡುವಂಥದ್ದು ಆಳಿಗೆ ತಿಳಿಯುವುದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ; ತಂದೆಯ ಕಡೆಯಿಂದ ನಾನು ಕೇಳಿದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ" (ಯೋಹಾನ 15: 15) ಎನ್ನುತ್ತಾನೆ. ಉಚಿತ ಸಮಯಗಳ ಬಗ್ಗೆ ಯೇಸು ಖಚಿತವಾಗಿ ಬಲ್ಲವನಾಗಿದ್ದನು. ಯಾಕೆಂದರೆ, ಆತನೇ ದೇವರ ಯೋಜನೆಗಳನ್ನು ನೆರವೇರಿಸತಕ್ಕವನಾಗಿದ್ದನು. ಮತ್ತು ಆತನು ಅದನ್ನು ಬದಲಿಸದ ಹೊರತು, ಆತನು ತನ್ನ ಕಾರ್ಯದಲ್ಲಿ ಅದನ್ನು ತನ್ನ ನಿಕಟವರ್ತಿಗಳಿಗೆ ಅಂದರೆ ಆತನ ಸ್ನೇಹಿತರುಗಳಿಗೆ, ಭಕ್ತರಿಗೆ ತಿಳಿಸುತ್ತಿದ್ದನು.

ಆಗ, ನಿಶ್ಚಿತರೂಪದಲ್ಲಿ ಬರೆದಿರುವಂತೆ "ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು" (ಆಮೋಸ 3:7) ಎಂಬುವ ವಿಚಾರವು ನಮಗೆ ಬೋಧಿಸುತ್ತದೆ. ಆತನು ಬಹಿರಂಗಪಡಿಸುವುದು ಹೆಚ್ಚಾಗಿ ಅವರಿಗಾಗಿ ಅಲ್ಲ, ನಮಗಾಗಿ ಅಂದರೆ ಸುವಾರ್ತಾ ಸಭೆಗಾಗಿ (1ಪೇತ್ರ 1:12). ಆದುದರಿಂದ ಕರ್ತನ ದಿನವು ಬರುವಾಗ ನಿಶ್ಚಯವಾಗಿ ನಿಷ್ಠಾವಂತರು ಅವುಗಳನ್ನು ಗ್ರಹಿಸದಂತೆ ಅವರನ್ನು ಅಂಧಕಾರದಲ್ಲಿ ಬಿಡುವುದಿಲ್ಲ. ಕಳ್ಳನಂತಾಗಲೀ, ಉರುಲಿನಂತಾಗಲೀ ಆ ದಿನವು ಅವರ ಮೇಲೆ ಫಕ್ಕನೇ, ಅರಿವಿಲ್ಲದೇ ಬರುವಂತಾದ್ದಲ್ಲ. ಅವರು ಅದನ್ನು ಗಮನಿಸುತ್ತಿರುತ್ತಾರೆ ಮತ್ತು ಆ ವಿಷಯದ ಬಗ್ಗೆ ವಾಗ್ದತ್ತ ಬೆಳಕು ಸಕಾಲಕ್ಕೆ ಬರುವುದಾಗಿದೆ.

ಸಹೋದರರು ತಕ್ಕ ಸಮಯಗಳನ್ನೂ, ಕಾಲಗಳನ್ನೂ ತಿಳುಕೊಳ್ಳುವರು. ಅವರು ಅಂಧಕಾರದಲ್ಲಿರುವುದಿಲ್ಲವೆಂದು ಪೌಲನು ಖಂಡಿತವಾಗಿ ಹೇಳುವಂತೆ "ನೀವು ಕತ್ತಲೆಯುವರಲ್ಲ, ನೀವೆಲ್ಲರೂ ಬೆಳಕಿನವರೂ, ಹಗಲಿನವರೂ ಆಗಿದ್ದೀರಷ್ಟೇ. ನಾವು ರಾತ್ರಿಯವರೂ ಅಲ್ಲ, ಕತ್ತಲೆಯವರೂ ಅಲ್ಲ" (1 ಥೆಸ. 5:5) ಎಂದಿದ್ದಾನೆ. ಅಂಥವರು ಸತ್ಯದಲ್ಲಿ ಹುಟ್ಟಿದವರು ಮತ್ತು ಸತ್ಯದಲ್ಲಿಯೇ ಅವರು ಸೇರಿದ ಆ ಪರಿಪೂರ್ಣವಾದ ದಿನದತ್ತ ಅಭಿವೃದ್ಧಿ ಹೊಂದುವವರೂ ಆಗಿದ್ದಾರೆ – ಯಾಕೋಬ 1:18, ಯೋಹಾನ 17:17,19.

ಇಲ್ಲಿ ಮತ್ತು ಇತರೆ ಪರಿಶುದ್ಧ ಬರಹಗಳಲ್ಲಿ ಸರ್ವನಾಮಗಳಾದ (Pronouns) (ನೀವು ಮತ್ತು ನಿಮಗೆ ಹಾಗೂ ಅವರು ಮತ್ತು ಅವರನ್ನು) 'ye and you, and they and them' ಇವುಗಳು ಉಲ್ಲೇಖಿಸಿರುವ ವರ್ಗಗಳನ್ನು ಭಕ್ತರನ್ನು ಈ ಲೋಕದವರಿಂದ ಯಾವ ರೀತಿಯಲ್ಲಿ ವ್ಯತ್ಯಾಸಗೊಳಿಸುತ್ತದೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಿರಿ. ಕರ್ತನ ದಿನದಲ್ಲಿ ಪ್ರಕಟವಾಗುವ ಮಹತ್ವಗಳ ಮತ್ತು ಪ್ರವೃತ್ತಿಗಳ ಬಗ್ಗೆ ಭಕ್ತರುಗಳು ಹೊಂದಿರುವ ಜ್ಞಾನವು ಲೋಕದವರ ಅಜ್ಞಾನಕ್ಕಿಂತ ವ್ಯತಿರಿಕ್ತವಾಗಿರುತ್ತದೆ. "ಸಹೋದರರೇ, ಈ ಸಂಗತಿಗಳು ನಡೆಯಬೇಕಾದ ಕಾಲಗಳನ್ನೂ, ಘಳಿಗೆಗಳನ್ನೂ ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ" (1 ಥೆಸಲೋನಿಕ 5:1). "ಸಮಾಧಾನವಾಗಿಯೂ, ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುವಾಗಲೇ ಫಕ್ಕನೇ ಅವರ ಮೇಲೆ ನಾಶನವು ಎರಗಿ ಬರುವುದು. . . ಅವರು ಅದರಿಂದ ತಪ್ಪಿಸಿಕೊಳ್ಳಲಾರರು. ಆದರೆ, ಸಹೋದರರೇ ಆ ದಿನವು ನಿಮ್ಮ ಮೇಲೆ ಕಳ್ಳನಂತೆ ಹಠಾತ್ತಾಗಿ ಬರತಕ್ಕದ್ದಲ್ಲ. ನೀವು ಕತ್ತಲೆಯಲ್ಲಿರುವವರಲ್ಲ. ನೀವೆಲ್ಲರೂ ಬೆಳಕಿನ ಮಕ್ಕಳಾಗಿದ್ದೀರಿ". "ನಿಮ್ಮ ವಿಷಯದಲ್ಲಿ ಜಾಗರೂಕರಾಗಿರ್ರಿ, ಅತಿ ಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯವು ಭಾರವಾಗಿರಲಾಗಿ ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಫಕ್ಕನೆ ಬರುವದು. [ಆದುದರಿಂದ ಎಚ್ಚರದಿಂದಿದ್ದು ನಿಮ್ಮನ್ನೂ ಹಾಗೂ ಪ್ರವಾದನಾ ವಚನಗಳನ್ನು ಗಮನಿಸಿರಿ]. ಬರಲಿರುವ ಈ ಎಲ್ಲಾ ಸಂಗತಿಗಳೂ ಹಾದುಹೋಗುವಾಗ ನೀವು ಅವುಗಳಿಂದ ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವುದಕ್ಕೂ ನೀವು ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರಿ" – ಲೂಕ 21:24–36.

ನಂತರದಲ್ಲಿ, ಕರ್ತನ ದಿನದಲ್ಲಿ ಜೀವಿಸುವ ದೇವರ ಮಗುವು ಅಜ್ಞಾನದಲ್ಲಿ ಮತ್ತು ಅಂಧಕಾರದಲ್ಲಿ ಉಳುಕೊಳ್ಳುವುದೆಂದರೆ ಆತನು ಈ ಲೋಕದ ಸಂಗತಿಗಳಿಂದ ತುಂಬಿಹೋಗಿದ್ದಾನೆ ಎಂಬ ಸತ್ಯ ಸಂಗತಿಯಿಂದಾಗಲೀ ಅಥವಾ ಈ ಲೋಕದ ಚಿಂತೆಗಳಿಂದ ಮಿತಿಮೀರಿದವನಾಗಿದ್ದಾನೆ ಮತ್ತು ಈ ಲೋಕದ ಆತ್ಮನಿಂದ ಅಮಲೇರಿದ್ದಾನೆ ಎಂಬುದು ಅನ್ವಯವಾಗುತ್ತದೆ. ಎರಡು ಪ್ರಕರಣಗಳಲ್ಲಿಯೂ ಆತನು ತನ್ನ ದೀಪವನ್ನು

ಸರಿಪಡಿಸಿಕೊಂಡು ಅದು ಉರಿಯುತ್ತಾ ಇರುವಂತೆ ಎಣ್ಣೆಹಾಕುವುದನ್ನು [ಅಂದರೆ ತನ್ನ ಹೃದಯವನ್ನು ಮತ್ತು ಮನಸ್ಸನ್ನು ದೇವರ ವಾಕ್ಯದಿಂದ ಸತ್ಯದ ಆತ್ಮನಿಂದ ತುಂಬಿಸಿಕೊಳ್ಳಲು] ಉದಾಸೀನತೆಯಿಂದ ಅಲಕ್ಷಿಸಿದ್ದಾನೆ, ಎಂದರ್ಥ.

ಪ್ರವಾದಿಗಳಿಂದ ಮುಂತಿಳಿಸಿದಂತೆ ಸಮಯ ಮತ್ತು ಕಾಲಕ್ಕೆ ಹಾಗೂ ಯೋಜನೆಯ ವಿವರಗಳಿಗೆ ಹೆಚ್ಚು ಸಂಬಂಧವಿದ್ದರೂ, ಅವರು ಹೇಳಿದ ಪ್ರವಾದನೆಗಳ ತಾತ್ಪರ್ಯವನ್ನು ಅರಿಯದೇ ಹೋದರೆಂದು ಅರಿಕೆಮಾಡಿದ್ದಾರೆ (ದಾನಿಯೇಲ 12:8; ಯೆಹೆಜ್ಕೇಲ 20:49; ಮತ್ತಾಯ 13:17; 1 ಪೇತ್ರ 1:10–12 ಇವುಗಳನ್ನು ನೋಡಿರಿ), ಗೂಢಾರ್ಥದಲ್ಲಿಯೂ ಮತ್ತು ಸಾಂಕೇತಿಕ ಭಾಷೆಯಲ್ಲಿಯೂ ಹೇಳಿದ ಮತ್ತು ಭವಿಷ್ಯದ ಸಂಗತಿಗಳೊಂದಿಗೆ ಜೋಡನೆಗೊಂಡ ಮಾತುಗಳನ್ನು ಆಗಲೇ ಅರ್ಥಮಾಡಿಕೊಳ್ಳುವುದು ಅಸಾಧ್ಯ. ಪ್ರಾಚೀನ ಕಾಲದಲ್ಲಿಯೇ ದಾಖಲಿಸಲ್ಪಟ್ಟಿದ್ದರೂ, ದೈವಿಕ ಜ್ಞಾನಕ್ಕೂ ಮತ್ತು ವ್ಯವಸ್ಥೆಗಳಿಗೂ ಸಾಕ್ಷ್ಯವನ್ನು ಹೊಂದಿದ್ದರೂ ಅವುಗಳು ನೆರವೇರುವ ಕಾಲದಲ್ಲಿ ಜೀವಿಸುವವರ ಕಲಿಯುವಿಕೆಗಾಗಿಯೇ ಇದೆ, ಅದನ್ನು ನುಡಿದವರಿಗಾಗಿ ಅಲ್ಲ (ರೋಮಾ. 15:4). ಅವರು ದೇವರ ಯೋಜನೆಯ ವಿವಿಧ ಸಂಬಂಧಿತ ವೈಶಿಷ್ಟ್ಯಗಳಿಗಾಗಿ ಮತ್ತು ಮಾನವ ಚರಿತ್ರೆಗಳು ಪ್ರಕಟವಾಗುವದಕ್ಕೆ ಕಾಯುತ್ತಿದ್ದರು. ಇವುಗಳು ದೇವರ ವ್ಯವಸ್ಥೆಯಿಂದ, ಅವರಿಗೆ ಬಯಲಾಗಬೇಕು ಮತ್ತು ಸಮಾಧಾನದಿಂದ ಅನ್ವೇಷಿಸುತ್ತಿರುವ ದೇವರ ಮಕ್ಕಳನ್ನು ಈ ಯುಗವು ಅಂತ್ಯವಾಗುವ ಸೂಕ್ತ ಹಾಗೂ ಶೋಧನೆಯ ಸಮಯದಲ್ಲಿ "ಕೆಡುಕಿನ ದಿನ" ಸಂಕಟದ ಸಮಯದಲ್ಲಿ ತಕ್ಕ ಆಹಾರವಾಗಿ ಉತ್ಕರ್ಷಗೊಳಿಸಬೇಕು ಮತ್ತು ಅವುಗಳ ನಡುವೆಯಲ್ಲಿ ನೂತನ ಶಕ ಮತ್ತು ದೈವೇಚ್ಛೆಯು ಉದಯಿಸುತ್ತವೆ.

ಸಮಯದ ಬಗೆಗಿನ ದೈವಿಕವಾದ ವ್ಯವಸ್ಥೆಯನ್ನು ಪ್ರವಾದನೆಯನ್ನು ವಿಶದಗೊಳಿಸುವ ಒಂದು ಆಧುನಿಕ ತಂತ್ರದ ಸಾಧನವನ್ನು ಕೆಲ ಬೃಹತ್ ಬೊಕ್ಕಸಗಳು ಉಪಯೋಗಿಸುತ್ತಿದ್ದು ಅದಕ್ಕೆ 'ಸಂಯೋಜನಾ ಸಾಂದರ್ಭಿಕ ಬೀಗ' (Combination Time Lock) ಎಂಬುದಾಗಿ ಕರೆಯುತ್ತಾರೆ. ಇತರೆ ಕಾಂಬಿನೇಷನ್ ಲಾಕ್ಸ್ / ಸಂಯೋಜನಾ ಬೀಗಗಳಂತೆ ಅದರ ಕೀಲಿ ಅಥವಾ ಹಿಡಿಕೆಯು ಬೀಗದಲ್ಲಿಯೇ ಸತತವಾಗಿ ಉಳಿದು ಕೊಂಡಿರುತ್ತದೆ. ಅದರ ನಿರ್ವಹಣೆಯ ಕೆಲವು ವಿಶಿಷ್ಟವಾದ ಚಲನೆಗಳನ್ನು ಬಲ್ಲಾತನು ಮಾತ್ರವೇ ಅದನ್ನು ತೆಗೆಯಲು ಸಾಧ್ಯ. ಒಂದು ಚಿಕ್ಕ ವ್ಯತ್ಯಾಸವೂ ವಿಷಯವನ್ನು ಬಿಗಡಾಯಿಸುತ್ತದೆ ಮತ್ತು ಬೀಗ ತೆಗೆಯುವುದು ಮತ್ತಷ್ಟು ಕಷ್ಟವಾಗುತ್ತದೆ. ಇಂಥಾಃ ಕಾಂಬಿನೇಷನ್ ಲಾಕ್‌ಗಳು ಬೊಕ್ಕಸದ ನೆಲಮಾಳಿಗೆಯಲ್ಲಿ ಕೆಲವೊಂದು ವಿಶಿಷ್ಟವಾದ ಲಕ್ಷಣಗಳನ್ನು ಸೇರಿಸಿಕೊಂಡಿರುತ್ತವೆ. ಆ ಕಾರಣ ರಾತ್ರಿ ಸಮಯದಲ್ಲಿ ಮುಚ್ಚಿದ ಬಾಗಿಲುಗಳನ್ನು ಮಾರನೆಯ ಬೆಳಿಗ್ಗೆ ನಿಗದಿಪಡಿಸಿರುವ ಸಮಯದವರೆಗೆ ತೆಗೆಯಲು ಸಾಧ್ಯವಾಗುವುದಿಲ್ಲ. ಮಾತ್ರವಲ್ಲದೆ ಬೀಗದಲ್ಲಿ ಸಿದ್ಧಪಡಿಸಿದ ಸಂಯೋಜನೆಯ ಸರಿಯಾದ ಜೋಡನೆಯಿಂದ ಮಾತ್ರವೇ ಅದು ಪ್ರತಿಕ್ರಿಯಿಸುತ್ತದೆ.

ಅದರಂತೆ ಪರಲೋಕದ ತಂದೆಯು ಸಹ ತನ್ನ ಯೋಜನೆಯ ಅನೇಕ ಲಕ್ಷಣಗಳನ್ನು ರಾತ್ರಿ ಸಮಯದಲ್ಲಿ ಮುಚ್ಚಿಟ್ಟು ಅವುಗಳು ತಾನು ನಿಶ್ಚಯಪಡಿಸಿರುವ ಅದರ ಪುನಃವಶದ ಮುಂಜಾನೆಯ ಸೂಕ್ತ ಸಮಯದವರೆಗೆ ತೆರೆದುಕೊಳ್ಳದಂತೆ ನಿಶ್ಚಯಪಡಿಸಿ ಅದನ್ನು ತನ್ನ ಮಹಾ ಟೈಮ್ ಲಾಕ್ ಮೂಲಕ ಮುದ್ರೆಹಾಕಿದ್ದಾನೆ. ನಂತರದಲ್ಲಿ ಯೆಹೋವನಿಂದ ಪ್ರತಿಷ್ಠೆ ಹೊಂದಿದಾತನು, ಆ ಕೀಲಿ ಕೈಯನ್ನು ಹೊಂದಿದವನು ಮತ್ತು ಅದರ ಜೋಡನೆಯನ್ನು ಬಲ್ಲಾತನು ಅದನ್ನು "ನೇಮಕವಾದ ಕಾಲದಲ್ಲಿ" ತೆರೆಯುವನು, ನಂತರದಲ್ಲಿ ಯಾರೂ ಅದನ್ನು ಮುಚ್ಚಲಾಗದು (ಪ್ರಕಟನೆ 3:7), ಆತನು ಜ್ಞಾನದ ಭಂಡಾರದ ಬಗ್ಗೆ ಆಸಕ್ತಿಯುಳ್ಳವರಿಗೆ ಅದನ್ನು ಪಡಕೊಳ್ಳಲು ಪ್ರವಾದನೆಗಳ ಕೀಲಿಕೈನ ಕಾರ್ಯಾಚರಣೆಗೆ ಅವಶ್ಯವಾದ ಮಾಹಿತಿಯನ್ನು ಕೊಟ್ಟು ನಂತರದಲ್ಲಿ ಅದನ್ನು ತೆರೆಯುತ್ತಾನೆ. ಮತ್ತು ಆಗ ನಾವು ದೈವಿಕ ಜ್ಞಾನಭಂಡಾರವನ್ನು ತೆರೆಯಬಹುದು, ಯಾಕೆಂದರೆ ಮುಂಜಾವಿನ ಸಮಯದ ಬೆಳಕು ಬಂದಿರುತ್ತದೆ, ಆದಾಗ್ಯೂ, ಬಹಳ ಮುಂಚಿತವಾಗಿ ಪೂರ್ಣವಾದ ಬೆಳಕು ಇನ್ನೂ ಲೋಕಕ್ಕೆ ಬಂದಿರಲಿಕ್ಕಿಲ್ಲ. ಆದರೆ ಸೂಚನೆಗಳನ್ನು ಜಾಗರೂಕತೆಯಿಂದ ಗಮನಿಸಿ, ಕೀಲಿ ಕೈಗೆ ಅದರ ವಿನ್ಯಾಸಕಾರನು ಮಾಡಿರುವ ಸರಿಯಾದ ಜೋಡನೆಯನ್ನು ಅಳವಡಿಸಿದಾಗಲೇ ಜ್ಞಾನಭಂಢಾರವು ನಮಗಾಗಿ ತೆರೆದುಕೊಳ್ಳುತ್ತದೆ.

ನಿಜವಾಗಿಯೂ ಈ ದೃಷ್ಟಾಂತವು ದೇವರ ಯೋಜನೆಯ ಎಲ್ಲಾ ಭಾಗಗಳಿಗೆ ಯುಕ್ತವಾಗಿದೆ; ಪ್ರತಿಯೊಂದು ಸತ್ಯವೂ ಮತ್ತು ಪ್ರತಿಯೊಂದು ಪ್ರವಾದನೆಯೂ ಒಂದು ಭವ್ಯವಾದ ಜೋಡನೆಯ ಭಾಗವಾಗಿದೆ. ಈಗ ಮುಂಜಾನೆಯಾಗಿರುವುದರಿಂದ ಇದನ್ನು ತೆರೆಯಬಹುದು. ಯಾಕೆಂದರೆ ಮಹಾ ಸಮಯ ಸಂಯೋಗದ ಚಿಲಕ ಈಗ ಹಿಂದಕ್ಕೆ ಸರಿಸಲ್ಪಟ್ಟಿದೆ ಮತ್ತು ಈ ಭವ್ಯ ಜೋಡನೆಯು ಒಮ್ಮೆ ತೆರೆದರೆ, ಅಷ್ಟೇ ಭವ್ಯವಾಗಿ ದೇವರ ಜ್ಞಾನದ, ನ್ಯಾಯದ, ಪ್ರೀತಿಯ ಮತ್ತು ಶಕ್ತಿಯ ಮಿತಿಯಿಲ್ಲದ ಭಂಡಾರವು ಸಂಪೂರ್ಣವಾಗಿ ತೆರೆದುಕೊಳ್ಳುತ್ತದೆ. ಅದನ್ನು ತೆರೆಯುವವನು ಹಿಂದೆಂದಿಗಿಂತಲೂ ನಿಶ್ಚಯವಾಗಿ ದೇವರನ್ನು ತಿಳಿದುಕೊಳ್ಳುವನು.

ನಮ್ಮ ಕರ್ತನು ಆತನ ಸಮಯ ಮತ್ತು ಕಾಲಗಳ ಬಗ್ಗೆ ಸಂತೋಷದಿಂದ ಏನನ್ನು ತೋರಿಸುತ್ತಾನೆಂದು ನಾವು ಪರಿಶುದ್ಧ ಗ್ರಂಥವನ್ನು ಪೂಜ್ಯಭಾವದಿಂದ ಪರೀಕ್ಷಿಸೋಣ, ಇತ್ತೀಚೆಗೆ ಆತನು ಯೋಜನೆಗಳ ಭವ್ಯವಾದ ಹೊರ ರೇಖೆಗಳನ್ನು ನಮಗೆ ಸ್ಪಷ್ಟಪಡಿಸಿರುವುದರಿಂದ, ನಾವು ಯುಕ್ತವಾಗಿ ಆತನ ಸಮಯವು ಅದರ ಲಕ್ಷಣಗಳ ಜ್ಞಾನವನ್ನು ತಿಳಿಸಲು ನಮ್ಮನ್ನು ನಡೆಸುವ ಕಾಲ ಸಮೀಪಿಸುತ್ತಿದೆ ಎಂದು ನಿರೀಕ್ಷಿಸಬಹುದು. ಸಮಯ ಮತ್ತು ಕಾಲಗಳು ಹಿಂದಿನ ಕಾಲದಲ್ಲಿ ಬುದ್ದಿವಂತಿಕೆಯಿಂದ ಅಡಗಿಸಲ್ಪಟ್ಟಿದ್ದವು. ಈ ರೀತಿಯಾಗಿ ಭಕ್ತರು ಎದೆಗುಂದುವಿಕೆಯಿಂದ ಪಾರಾಗಿದ್ದರು, ಯಾಕೆಂದರೆ ಸಮಯವು ದೀರ್ಘವಾಗಿತ್ತು; ಆದರೆ ಕಾಲವು ಅದರ ಭವ್ಯವಾದ ನೆರವೇರಿಕೆಯನ್ನು ತಲುಪಲು ಹತ್ತಿರವಾಗುತ್ತಿರುವಾಗ, ಭಕ್ತರು ಅದನ್ನು ತಿಳುಕೊಳ್ಳುವ ಭಾಗ್ಯವನ್ನು ಹೊಂದಿದವರಾಗಿ ತಮ್ಮ ತಲೆಗಳನ್ನು ಎತ್ತಿ ತಮ್ಮ ಬಿಡುಗಡೆಯ ಕಾಲವು ಸಮೀಪಿಸಿಯದೆ ಎಂದು ಸಂತೋಷಪಡುತ್ತಾರೆ (ಲೂಕ 21:28). ಸಮಯದ ಪ್ರಕಟಣೆಯು ಕಡೆಯ ಕಾಲದಲ್ಲಿ ಭಕ್ತರಿಗೆ ಹೆಚ್ಚು ಲಾಭದಾಯಕವೂ ಉತ್ತೇಜನಕಾರಿಯೂ ಆಗಿದೆ. ಯಾಕೆಂದರೆ ಅದು ಮೊದಲೇ ತಿಳಿಸಲ್ಪಟ್ಟಿದ್ದರೆ ನಷ್ಟಕರವೂ ಮತ್ತು ಎದೆಗುಂದಿಸುವುದೂ ಎನಿಸುತ್ತಿತ್ತು.

ಸ್ಪಷ್ಟವಾಗಿ ನಮ್ಮ ದೇವರು ಕ್ರಮಬದ್ಧತೆಯ ದೇವರಾಗಿದ್ದಾನೆ. ಆತನು ಮಾಡುವ ಎಲ್ಲವುಗಳೂ ಮೊದಲೇ ವ್ಯವಸ್ಥೆಪಡಿಸಿದ ಯೋಜನೆಗೆ ಅನುಸಾರವಾಗಿಯೇ ಇರುತ್ತವೆ ಮತ್ತು ಆತನು ನಿಶ್ಚಯಿಸಿದ ಸಮಯಗಳು, ಕಾಲಗಳು ಆ ಯೋಜನೆಯ ಭಾಗದಲ್ಲಿ ಕ್ಷುಲ್ಲಕವೋ ಅಥವಾ ಅಮುಖ್ಯವಾದವುಗಳೋ ಅಲ್ಲ. ಯೇಸು ತಕ್ಕ ಸಮಯದಲ್ಲಿ ಜನಿಸಿದನು ಎಂಬುದನ್ನು ಗಮನಿಸಿ. "ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು" (ಗಲಾತ್ಯ 4:4). ಮುಂಚೆಯೂ ಅಲ್ಲ, ನಂತರವೂ ಅಲ್ಲ, ಆದರೆ ಕಾಲವು ಪರಿಪೂರ್ಣವಾದುದಕ್ಕೆ ಸರಿಯಾಗಿ. ಮಾರ್ಕ 1:15ರಲ್ಲಿರುವ "ಕಾಲವು ಪರಿಪೂರ್ಣವಾಯಿತು. ದೇವರ ರಾಜ್ಯವು ಸಮೀಪಿಸಿತು. ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ" ಎಂಬ ನಮ್ಮ ಕರ್ತನ ಮೊಟ್ಟ ಮೊದಲನೇ ಬೋಧನೆಯು ಕಾಲವೆಂಬುದಕ್ಕೆ ಸಂಬಂಧಿಸಿದ್ದಾಗಿತ್ತು. ರೋಮಾ. 5:6ರಲ್ಲಿ ಹೇಳಿರುವಂತೆ "ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು". 1 ಕೊರಿಂಥ15:3,4ರಲ್ಲಿ ನಾವು ನೋಡುವಂತೆ "ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು". ಆತನ ಸೇವಾಕಾಲದಲ್ಲಿ ಅನೇಕ ಸಾರಿ ಆತನನ್ನು ಹಿಡಿಯಲು ಬಯಸಿದರು, ಆದರೆ ಅದು ಅವರಿಂದ ಸಾಧ್ಯವಾಗಲಿಲ್ಲ. "ಆತನನ್ನು ಹಿಡಿಯುವುದಕ್ಕೆ ನೋಡುತ್ತಿದ್ದರು, ಆದರೆ ಆತನ ಕಾಲ ಇನ್ನೂ ಬಾರದೇ ಇದ್ದ ಕಾರಣ ಯಾರೂ ಆತನ ಮೇಲೆ ಕೈಹಾಕಲಿಲ್ಲ" (ಯೋಹಾನ 7:30) ಎಂದು ಬರೆದದೆ.

ಕಾಲ ಪ್ರವಾದನೆಗಳು ಕೇವಲ ಆಸಕ್ತಿಯನ್ನು ತಣಿಸುವುದಕ್ಕೋಸ್ಕರ ಕೊಟ್ಟಿರುವಂತವುಗಳಲ್ಲ. ಆದರೆ ದೇವರ ವಾಕ್ಯದ ವಿದ್ಯಾರ್ಥಿಗಳಿಗೆ ಮುಂತಿಳಿಸಿದ ಸಂಗತಿಗಳು ಯಾವಾಗ ಬರಲಿವೆ ಎಂಬುದನ್ನು ಗ್ರಹಿಸಲು ಸಹಕಾರಿಯಾಗಿವೆ. ಉದಾಹರಣೆಗೆ, ಪ್ರಥಮ ಆಗಮನದ ಸಮಯ ಮತ್ತು ರೀತಿಯನ್ನು ನಾವು ಪ್ರವಾದನೆಗಳಲ್ಲಿ ಗುರುತಿಸುವೆವಾದರೂ, ಕ್ರಿಸ್ತನು ಬರುವವರೆಗೂ ಅದನ್ನು ಯಾರೂ ಅರ್ಥಮಾಡಿಕೊಂಡಿರಲಿಲ್ಲ. ಆಗ ಧರ್ಮಶಾಸ್ತ್ರವನ್ನು ಅಭ್ಯಾಸಮಾಡಿದವರು ಮಾತ್ರವೇ ಆತನು ದೇವರು ತಾನೇ ನಿಶ್ಚಯಪಡಿಸಿ ಪ್ರವಾದನೆಗಳ ಮೂಲಕ ಪ್ರಕಟಿಸಿದ್ದ ಯೇಸುಕ್ರಿಸ್ತನೆಂಬಾತನು ಎಂದು ಗುರುತಿಸಿದರು. ಅದೇ ರೀತಿಯಲ್ಲಿ ದ್ವಿತೀಯಾಗಮನದ ಸಮಯ ಮತ್ತು ಕಾಲದ ಪ್ರವಾದನೆಯು ಆ ಘಟನೆಗಳ ಕ್ರಮವು ಹಾಗೂ ಆ ಸಮಯದ ಕರ್ತವ್ಯಗಳು ಆ ಘಟನೆಗಳು ಸಂಭವಿಸುವ ಕಾಲ ಬರುವಾಗಲೇ ಅರ್ಥವಾಗುತ್ತದೆ. ಯಾರೊಬ್ಬರೂ ಹಳೆ ಒಡಂಬಡಿಕೆಯ ಬರಹಗಳಲ್ಲಿ ದಿನಾಂಕಗಳಿಗೆ ಕೊಟ್ಟಿರುವ ಗಣನೀಯವಾದ ಆದ್ಯತೆಯನ್ನು ಮತ್ತು ಕೆಲವಕ್ಕೆ ಗುರುತಿಸಿರುವ ನಿಖರತೆಗಳನ್ನು ಬಹಳ ಸಾರಿ ಅವುಗಳು ಅಷ್ಟೊಂದು ಮಹತ್ವವಾದುವುಗಳಲ್ಲ ಅಂದೆನಿಸಿದ್ದರೂ ಇಂದೂ ಸಹ, ಅವುಗಳನ್ನು ಆಲೋಚನಾಪೂರ್ವಕವಾಗಿ ಗಮನಿಸದೆ ಓದಿಕೊಳ್ಳಲಾರರು. ನಿಕಟವರ್ತಿಯಾದ ವಿದ್ಯಾರ್ಥಿಯು ಈ ವಿವಿಧ ದಿನಾಂಕಗಳು ಮತ್ತು ಕಾಲಾನುಸಾರವಾದ ಉಲ್ಲೇಖಗಳು ಇತಿಹಾಸದಲ್ಲಿ ವಿಶಿಷ್ಟವಾಗಿ ಕಂಡುಬರುವ ಎರಡು ಗಮನಾರ್ಹ ಮತ್ತು ಪ್ರಾಮುಖ್ಯ ಘಟನೆಗಳಾದ ಈ ಲೋಕವಿಮೋಚಕನಾದ ನಮ್ಮ ಕರ್ತನ ಪ್ರಥಮ ಮತ್ತು ದ್ವಿತೀಯಾಗಮನಗಳ ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳ ಬಹುಮುಖ್ಯ ನಿದರ್ಶನದ ಅದ್ಭುತ ಸರಪಣಿಯ ಕೊಂಡಿಗಳಾಗಿವೆ ಎಂದು ಕಂಡುಕೊಳ್ಳುತ್ತಾನೆ.

ಹೆಚ್ಚಿನ ಕ್ರೈಸ್ತರು ಈ ವಿಷಯದ ಬಗ್ಗೆ ಉದಾಸೀನರಾಗಿರುವರು ಎಂಬ ಸತ್ಯಸಂಗತಿಯಿಂದಾಗಿ ಆತನ ಪ್ರಸನ್ನತೆಯನ್ನು ಪ್ರೀತಿಸುವವರೂ ಮತ್ತು ಆತನಿಂದ ಅಂಗೀಕೃತರಾಗಲು ಬಯಸುವವರೂ ಅದೇ ರೀತಿಯ ಉಗುರು ಬೆಚ್ಚಗಿನ ಸ್ಥಿತಿ ತಲುಪಲು ಕಾರಣವಿಲ್ಲ.

ದೇವರ 'ಸ್ನೇಹಿತರನ್ನು' ಹೊರತುಪಡಿಸಿ ಶಾರೀರಿಕವಾಗಿ ಇಸ್ರಾಯೇಲ್ಯರಾದವರು ತಮ್ಮ ಸಂದರ್ಶನಾ

ಸಮಯವನ್ನು ತಿಳುಕೊಳ್ಳಲಿಲ್ಲವಾದುದರಿಂದ ಮುಗ್ಗರಿಸಿದರು (ಲೂಕ 19:44), ಮತ್ತು ಇಸ್ರಾಯೇಲ್ಯರಲ್ಲಿ ಹೆಸರಿಗೆ ಮಾತ್ರದ ಯೆಹೂದ್ಯ ಮನೆಯವರು ಮತ್ತು ಹೆಸರಿಗೆ ಮಾತ್ರದ ಕ್ರೈಸ್ತ ಮನೆಯವರು ಇವರಿಬ್ಬರೂ ಮುಗ್ಗರಿಸುತ್ತಾರೆಂದು ಪ್ರವಾದಿಗಳು ಮುಂಚಿತವಾಗಿಯೇ ತಿಳಿಸಿದ್ದರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು (ಯೆಶಾಯ 8:14). ಅಂತ್ಯದಲ್ಲಿನ ಅಥವಾ ದೈವ ವ್ಯವಸ್ಥೆಯ ಪ್ರತಿಯೊಂದು ಸುಗ್ಗಿಯ ಕಾಲದಲ್ಲಿ 'ಉಳಿದವರು' (remnant) ಮಾತ್ರವೇ ದೊರಕಲಿರುವ ಸತ್ಯವನ್ನು ಸ್ವೀಕರಿಸಿ ಅದನ್ನು ಮೆಚ್ಚಿಕೊಳ್ಳಲು ಸಿದ್ಧವಾಗುತ್ತಾರೆ ಮತ್ತು ಆ ಕಾರಣದಿಂದ ದೈವಿಕ ಹಂಚಿಕೆಯ ಉದಯಕಾಲದ ವಿಶೇಷ ಭಾಗ್ಯಗಳಿಗೆ ಮತ್ತು ಆಶೀರ್ವಾದಗಳಿಗೆ ಪ್ರವೇಶಿಸುತ್ತಾರೆ. ಈ ಯುಗದ ಅಂತ್ಯಕಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಗತ ಕ್ರೈಸ್ತನಿಗೆ ತಾನು 'ಉಳಿದವರು' (remnant) ಗುಂಪಿನಲ್ಲಿ ಒಬ್ಬನೆಂದು, ಉಗುರು ಬೆಚ್ಚಗಿನವರಲ್ಲಿ ಒಬ್ಬನಲ್ಲವೆಂದೂ, ಉತ್ಸಾಹಶೂನ್ಯನಲ್ಲವೆಂದೂ, ನಾಮಾಂಕಿತ ಕ್ರೈಸ್ತರ ಉದಾಸೀನ ಸಮೂಹದವನಲ್ಲವೆಂದು ಕಂಡುಕೊಳ್ಳುವುದು ಉಳಿಯುತ್ತದೆ. ಇವರೆಲ್ಲರೂ ಮುಗ್ಗರಿಸುತ್ತಾರೆ ಎಂದು ಪ್ರವಾದಿಗಳು, ನಮ್ಮ ಕರ್ತನು ಮತ್ತು ಅಪೋಸ್ತಲರುಗಳು ಮುಂತಿಳಿಸಿದ್ದಾರೆ ಮತ್ತು ಶಾರೀರಿಕ ಇಸ್ರಾಯೇಲ್ಯರ ಪರಂಪರೆಯಲ್ಲಿ ಪೂರ್ವಛಾಯೆಯಾಗಿ ಕಂಡು ಬಂದು, ಅದು ಅವರ ಛಾಯೆ ಇಲ್ಲವೆ ನಮೂನೆಯೆಂದು ಪ್ರಕಟಿಸಲ್ಪಡುತ್ತದೆ.

ಆದರೆ ಸಮಯದ-ಪ್ರವಾದನೆಯು ಸೂಕ್ತ ಸಮಯದಲ್ಲಿ ಬಹಳ ಅನುಕೂಲವಾಗಿದ್ದು ಸುಗ್ಗಿ ಮತ್ತು ಇತರೆ ಸಂಗತಿಗಳಿಗೆ ಸಂಬಂಧಿಸಿದ ದೇವರ ಯೋಜನೆಯ ವಿವಿಧ ಲಕ್ಷಣಗಳನ್ನು ತೋರಿಸುತ್ತಿರುವಾಗ, ನಮ್ಮ ಕರ್ತನ ಬರೋಣ ಮತ್ತು ದರ್ಶನ ವಿಧಾನದ ಸತ್ಯ ಜ್ಞಾನವು ಅವಶ್ಯವಾಗಿದೆ. ಇದರ ಸೂಕ್ತ ಕಾಲ ಮತ್ತು ಸಂದರ್ಭದ ಬಗ್ಗೆ ಜಾಗರೂಕ ಗಮನವನ್ನು ಕೋರಲಾಗಿದೆ. ಈ ಎಲ್ಲಾ ಜ್ಞಾನದ ಹಿಂದೆ ಪವಿತ್ರತೆ ಮತ್ತು ನಮ್ರತೆ ಇರಬೇಕು ಮತ್ತು ಇವುಗಳು ದೇವರ ಮಕ್ಕಳು ತಮ್ಮ ಹೃದಯದಲ್ಲಿರುವ ಪೂರ್ವಾಗ್ರಹಿತ ಸಂಗತಿಗಳನ್ನು ತೆಗೆದಿಟ್ಟು ಅದರ ಸ್ವೀಕಾರಕ್ಕೆ ದಾರಿಮಾಡಿಕೊಡುವುದಾಗಬೇಕು ಮತ್ತು ಯಾವುದು ಪ್ರಕಟವಾಗಿದೆ ಎಂಬುದನ್ನು ತಿಳುಕೊಳ್ಳುವಂತೆ ಪರಿಶ್ರಮಪೂರ್ವಕವಾಗಿ ಹುಡುಕಬೇಕು. ಹೀಗಾಗಿ ಮೊದಲನೆಯ ಆಗಮನದಲ್ಲಿ, ನಿಷ್ಠಾವಂತ ಪ್ರತಿಷ್ಠಿತರು, ವಿನೀತರು ಮಾತ್ರವೇ ಸಮಯವನ್ನು ವಿಧಾನವನ್ನೂ ಅರಿತುಕೊಂಡರು. ಪ್ರಾಪಂಚಿಕ ವಿಷಯುಗಳಲ್ಲಿ ತುಂಬಿಹೋದವರು, ಸಮೃದ್ಧ ಸ್ಥಿತಿಯುಳ್ಳವರು ಪ್ರವಾದನೆಗಳನ್ನೂ ಅಥವಾ ಅದು ನೆರವೇರುವ ಸಮಯದ ಸೂಚನೆಗಳನ್ನಾಗಲೀ ಸುಗ್ಗಿಯು ಗತಿಸಿಹೋಗುವವರೆಗೂ ಮತ್ತು ವಿಶೇಷ ಕೃಪೆಯು ಬೇಸಿಗೆಯು ಅಂತ್ಯವಾಗುವವರೆಗೂ ಅರಿತುಕೊಳ್ಳಲಾರರು.

ಯೆಹೂದ್ಯ ಯುಗದ ಸುಗ್ಗಿಯ ಅಂತ್ಯಕಾಲದಲ್ಲಿ, ನಿಜವಾಗಿಯೂ ನಮ್ರರೂ ನಿಷ್ಠಾವಂತರೂ ಆದ ಇಸ್ರಾಯೇಲ್ಯರು ನಿರೀಕ್ಷಣೆಯ ಸ್ಥಿತಿಯಲ್ಲಿದ್ದರು. ಆದರೆ, ಪ್ರಾಪಂಚಿಕ ಮನಸ್ಸುಳ್ಳ ಮತ್ತು ತಮ್ಮ ಬಗ್ಗೆ ಸ್ವಯಂನೀತಿವಂತಿಕೆಯುಳ್ಳವರಿಗೆ ಹೋಲಿಸಿದರೆ ಬಹಳ ವ್ಯತ್ಯಾಸವುಳ್ಳವರಾಗಿದ್ದರು; ಹೀಗಾಗಿ ಅವರು ದೇವರ ಯೋಜನೆಯನ್ನು ಅದು ವ್ಯವಸ್ಥಿತವಾಗಿರುವಂತೆ ಸ್ವೀಕರಿಸಲು ಸಿದ್ಧರಾಗಿರುವುದಲ್ಲದೆ ಸತ್ಯವು ತಮ್ಮ ಸಂಪರ್ಕಕ್ಕೆ ಬರುವಾಗ ಅದನ್ನು ಕೇಳಿಸಿಕೊಂಡು ಪರೀಕ್ಷಿಸಲೂ ಸಹಾ ಸಿದ್ಧರಾಗಿರುತ್ತಾರೆ. ನಮ್ಮ ಕರ್ತನು ಸ್ವಯಂ ತೃಪ್ತರೂ, ತಪ್ಪು ಕಂಡುಹಿಡಿಯುವವರೂ, ವಕ್ರತೆ, ಅಂಧತ್ವದ ಅಥವಾ ನುಣುಚಿಕೊಳ್ಳುವ ಉತ್ತರಗಳನ್ನು ನೀಡುವ ಫರಿಸಾಯರುಗಳನ್ನು ವಿಸರ್ಜಿಸಿದುದಲ್ಲದೆ ಅದೇ ಸಮಯದಲ್ಲಿ, ನಮ್ರತೆಯುಳ್ಳವರಾಗಿದ್ದು ಪ್ರಾಮಾಣಿಕತೆಯಿಂದ ಹುಡುಕುವವರಿಗೆ ಸತ್ಯವು ಮತ್ತಷ್ಟು ಸ್ಪಷ್ಟವಾಗುವಂತೆ ಜಾಗರೂಕತೆ ವಹಿಸುತ್ತಾನೆ (ಮತ್ತಾಯ 13:10–17; 16:1–4; ಮಾರ್ಕ 7:1–23; ಲೂಕ 18:18–30; ಯೋಹಾನ 1:45–5; ಲೂಕ 24:13–32 ಮತ್ತು 33–49; ಯೋಹಾನ 20:24–28; 21:1–12 ನೋಡಿರಿ). ಅಹಂಕಾರಿಗಳು, ಸ್ವಯಂ ತೃಪ್ತಿಯುಳ್ಳವರು ಮತ್ತು ಅವರನ್ನು ಅನುಸರಿಸುವವರೆಲ್ಲರೂ ಮುಗ್ಗರಿಸುವರು (ಮತ್ತಾಯ 15:14). ಅದೇ ಸಮಯದಲ್ಲಿ ವಿನಯಶೀಲರೂ ಸತ್ಯಕ್ಕೆ ಹಸಿದವರೂ ಸತ್ಯಕ್ಕಾಗಿ ಪ್ರಾಮಾಣಿಕತೆಯಿಂದ ವಿಚಾರಿಸುತ್ತಾರೆ. ನಮ್ಮ ಕರ್ತನು ಗೂಢಾರ್ಥಗಳನ್ನು ವ್ಯಾಖ್ಯಾನಿಸುವವನಾಗಿ ಅಂಥವರಿಗೆ "ಪರಲೋಕ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟಿದೆ; ಅವರಿಗೆ ಕೊಟ್ಟಿಲ್ಲ. ನಿಜ ಇಸ್ರಾಯೇಲ್ಯರಲ್ಲಿ ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವುದಕ್ಕೆ ಕಾರಣವೇನೆಂದರೆ, ಅವರಿಗೆ ಕಣ್ಣಿದ್ದರೂ ಕಾಣುವುದಿಲ್ಲ, ಕಿವಿಯಿದ್ದರೂ ಕೇಳುವುದಿಲ್ಲ ಮತ್ತು ತಿಳುಕೊಳ್ಳುವುದಿಲ್ಲ" (ಮತ್ತಾಯ 13:36; ಮಾರ್ಕ. 4:10) ಎಂದಿದ್ದಾನೆ.

ಈ ಯುಗವು ಸಮಾಪ್ತಿಯಾಗುವಾಗಲೂ ಹೀಗೆಯೇ ಆಗುವುದು. ಸತ್ಯವು ಇಲ್ಲಿ ಅಲ್ಲಿ ಎಂಬಂತೆ ಪ್ರಾಮಾಣಿಕರನ್ನೂ, ದೀನರನ್ನೂ ಪ್ರತ್ಯೇಕಿಸುತ್ತದೆ ಮತ್ತು ಅವರಿಗೆ ತಕ್ಕಕಾಲದಲ್ಲಿ ಈಗ ಸಿಗುವ ಜ್ಞಾನಕ್ಕೆ ಮುನ್ನಡೆಸುತ್ತದೆ ಮತ್ತು ಅವರು ನಾಮಾಂಕಿತ ಕ್ರೈಸ್ತ ಸಮೂಹದೊಂದಿಗೆ ಎಡವಿಬೀಳದಂತೆ ಅವರನ್ನು ಬಲಪಡಿಸಿ ಅವರಿಗೆ ಜ್ಞಾನೋದಯವನ್ನುಂಟುಮಾಡುತ್ತದೆ. ಅದೇ ಸಮಯದಲ್ಲಿ ಉಗುರು ಬೆಚ್ಚಗಿನ ಸ್ಥಿತಿಯಲ್ಲಿರುವವರೂ ಮತ್ತು ಸ್ವಯಂತೃಪ್ತರೂ ತಮ್ಮ ಹೃದಯದ ಅನುಚಿತ ಸ್ಥಿತಿಯಿಂದಾಗಿ ಸಲ್ಲಬೇಕಾದ ತಕ್ಕ

ಕಾಲದ ಸತ್ಯವನ್ನು ನಿರಾಕರಿಸುತ್ತಾರೆ. ಆದುದರಿಂದ ಅವರು ಆತನ ಮದಲಗಿತ್ತಿಯಾಗಲು ಅನರ್ಹರೆಂದು ಕರ್ತನಿಂದ ತಿರಸ್ಕರಿಸಲ್ಪಡುತ್ತಾರೆ (ಎಫೆಸ 4:1; 1, ಕೊರಿ. 9:27).

ಕರ್ತನ ಕಾರ್ಯಗಳ ಮತ್ತು ಯೋಜನೆಗಳ ಜ್ಞಾನವು ಅಷ್ಟೊಂದು ಮುಖ್ಯವಾದವುಗಳಲ್ಲ ಎಂದು ಭಾವಿಸುವುದು ಘೋರ ಅಪರಾಧವಾಗಿರುವಾಗ ಕ್ರೈಸ್ತ ಕೃಪಾಗುಣಗಳನ್ನೇ ದೇವರು ಬಯಸುವವನಾಗಿದ್ದಾನೆ, ಮತ್ತು ಇವುಗಳು ಉತ್ತಮತರದವುಗಳಾಗಿ ಅಜ್ಞಾನದಿಂದ ರಕ್ಷಿಸಲ್ಪಡುತ್ತವೆ. ಈ ಸಂಗತಿಗಳು ಪರಿಶುದ್ಧಬರಹಗಳಲ್ಲಿ ಎಷ್ಟೋ ವಿಭಿನ್ನ ರೀತಿಯಲ್ಲಿ ಪ್ರಸ್ತುತಿಗೊಂಡಿವೆ! ಅವುಗಳು ಕ್ರೈಸ್ತ ಕೃಪಾಗುಣಗಳನ್ನು ಮಾತ್ರವೇ ಬೆಳೆಸಿಕೊಳ್ಳುವಂತೆ ಸಮಾಲೋಚನೆ ನೀಡುವುದು ಮಾತ್ರವಲ್ಲದೆ ಹೃದಯದ ಸ್ಥಿತಿಯನ್ನು ಸ್ಥಿರತೆಯಿಂದ ಕಾಪಾಡಿಕೊಳ್ಳುವಂತೆಯೂ ಉಪದೇಶಿಸುತ್ತವೆ. ಅವು ನಮಗೆ ಸತ್ಯವನ್ನು, ವಿಶೇಷವಾಗಿ ದೇವರ ಪ್ರಸನ್ನತೆಯ ಸತ್ಯವನ್ನು ಸೂಕ್ತಸಮಯದಲ್ಲಿ ಅಂದರೆ, ದೈವಸಂಕಲ್ಪದ ಬದಲಾವಣೆಗಳು ಉಂಟಾಗುವಾಗ ಗ್ರಹಿಸಿಕೊಳ್ಳುವಂತೆ ಮಾಡುತ್ತವೆ. ದೈವಸಂಕಲ್ಪದ ಜ್ಞಾನವು ಯೆಹೂದ್ಯ ಯುಗದ ಅಂತ್ಯದಲ್ಲಿದ್ದಂತೆಯೇ ಈ ಯುಗದ ಅಂತ್ಯದಲ್ಲಿಯೂ ಅಷ್ಟೇ ಮುಖ್ಯವಾಗಿದೆ. ಆಗ ಸಲ್ಲಬೇಕಿದ್ದ ಸತ್ಯವನ್ನು ಗ್ರಹಿಸದೇ ಹೋದವರು ಆಗ ಹೊಂದಿಕೊಳ್ಳಬೇಕಾದ ಅನುಗ್ರಹಗಳನ್ನು ಹೊಂದಿಕೊಳ್ಳದೇ ಹೋದರು. ಹಾಗೆಯೇ ಈ ಯುಗದ ಅಂತ್ಯದಲ್ಲಿಯೂ; ಈಗ ಸಲ್ಲಬೇಕಾದ ಸತ್ಯವನ್ನು ಗ್ರಹಿಸದೇ ಹೋಗುವವರು, ಅಪನಂಬಿಕೆ ಮತ್ತು ಲೋಕಾಚಾರಗಳಿಂದ ಕುರುಡಾಗಿದ್ದು, ಈಗ ದೊರೆಯುಲಿರುವ ವಿಶೇಷ ಅನುಗ್ರಹಗಳನ್ನು ಹೊಂದಿಕೊಳ್ಳಲಾರರು. ಅವರು ಜಯಿಸಿ ಬಂದವರಲ್ಲ, ಆದುದರಿಂದ ಕ್ರಿಸ್ತನ ಮದಲಗಿತ್ತಿಯಾಗಲು ಮತ್ತು ಭಕ್ತರ ಭವ್ಯವಾದ ಬಾಧ್ಯತೆಯಲ್ಲಿ ಜೊತೆ ವಾರಸುದಾರರಾಗಿ ಆತನೊಡನೆ ಪ್ರವೇಶಿಸಲು ಯೋಗ್ಯರಲ್ಲ. ಈ ಯುಗದಲ್ಲಿ, ಸತ್ಯವು ಅದರ ಸ್ವೀಕರಿಸುವಿಕೆಗೆ ಪ್ರತಿಕೂಲ ಪರಿಸ್ಥಿತಿಗಳಲ್ಲಿ ದೇವರಿಗೆ ವಿಧೇಯರಾಗಲು ನಮಗೆ ಪ್ರಾಮಾಣಿಕತೆಯ ಪರೀಕ್ಷೆಯಾಗುತ್ತದೆ. ಆದುದರಿಂದ ಒಂದು ಕುಡುಗೋಲು ಒಳ್ಳೆಯವುಗಳನ್ನು ಕೆಟ್ಟದವುಗಳಿಂದ, ಗೋಧಿಯನ್ನು ಹಣಜಿಯಿಂದ ಪ್ರತ್ಯೇಕಿಸುತ್ತದೆ.

ಪ್ರವಾದನಾ ಸಮಯದ ಅಧ್ಯಯನವನ್ನು ದುರುಪಯೋಗಪಡಿಸಿರುವ 'ದ್ವಿತೀಯ ಆಗಮನಕಾರರಿಂದಲೂ' 'Second Adventists' ಮತ್ತು ಬೇರೆಯವರಿಂದಲೂ ದ್ವೇಷ ಹುಟ್ಟಿಸುವ ಭಾವನೆಯು ಅಂಟಿಕೊಳ್ಳುತ್ತದೆ ಮತ್ತು ನಿರ್ಧಾರಿತ ಸಮಯದಲ್ಲಿ ಘಟನೆಗಳನ್ನು ಗ್ರಹಿಸುವ ಅನುಗತವಾದ ವಿಫಲತೆಗಳು ಉಂಟಾಗುತ್ತದೆ. ಆದರೆ ಇದೂ ಸಹ ದೇವರ ಯೋಜನೆಯಾಗಿದ್ದು ಯಾವ ಒಂದು ವರ್ಗಕ್ಕೆ ಅದು ಉದ್ದೇಶಿತವಾಗಿದೆಯೋ, ಅವರನ್ನು ಹೊರತುಪಡಿಸಿ ಉಳಿದವರಿಗೆ ಅಗೋಚರಪಡಿಸುವ ಅದಕ್ಕೆ ಅವಿಧೇಯತೆ ಮತ್ತು ಪರಿಹಾಸ್ಯವನ್ನು ಹೊಂದಿಕೊಳ್ಳಲು ಅನುಮತಿಸಿ, ಆ ಯೋಜನೆಯನ್ನು ಈ ಲೋಕದ ಬುದ್ಧಿವಂತರಿಂದಲೂ, ಲೋಕದ ವಿವೇಕಿಗಳೂ ಅದನ್ನು ಗ್ರಹಿಸದಂತೆ ಮರೆಮಾಡುವ ಭಾಗವಾಗಿದೆ ಎಂದು ನಾವು ಕಂಡುಕೊಳ್ಳುತ್ತೇವೆ (ಮತ್ತಾಯ 11:25). ಇದು ಗೌರವ ಸ್ಥಳವಾದ ಯೆರೂಸಲೇಮಿನಲ್ಲಿ ಜನಿಸಿದ ಯೇಸುವನ್ನು ''ನಜರಾಯ'ನೆಂದು ಕರೆಯುವಂತೆ (ಮತ್ತಾಯ 2:23) ನಜರೇತೆಂಬ ಆ ತಿರಸ್ಕಾರ ಸ್ಥಳಕ್ಕೆ ಕಳುಹಿಸಿಕೊಡುವ ದೇವರ ಯೋಜನೆಯಂತೆಯೇ ಎಂಬುದನ್ನು ನಾವು ಅನುಮಾನಿಸುವುದಿಲ್ಲ. ಆ ದಿನದಲ್ಲಿದ್ದ ಲೋಕದ ಬುದ್ಧಿವಂತರು ಮತ್ತು ದೂರದೃಷ್ಟಿಯುಳ್ಳವರು "ಒಳ್ಳೇದೇನಾದರೂ ನಜರೇತಿಂದ ಬರುವುದೊಂಟೋ? (ಯೋಹಾನ 1:46) ಎಂದು ಹೇಳಿದಂತೆ ಈ ದಿನವೂ ಸಹ ಪ್ರವಾದನಾ ಸಮಯವು ಅಥವಾ ಯೇಸುವಿನ ದ್ವೀತಿಯ ಆಗಮನಕ್ಕೆ ಸಂಬಂಧಿಸಿದಂತೆ ಅನೇಕರು ಅವರನ್ನು "Adventist" ಎಂದು ಕರೆಯುತ್ತಾರೆ. "ಆಗಮನವಾದದಿಂದ "Adventism" ಏನಾದರೂ ಒಳ್ಳೆಯದು ಬರಬಹುದೋ? ಎಂದು ಹೇಳುವಂತಿದೆ. ಆದರೂ, ಆಗಮನವಾದಿಗಳು "Adventist" ಸಮಯಕ್ಕೆ ಸಂಬಂಧಿಸಿದ ಅನೇಕ ಪ್ರವಾದನೆಗಳು ಇನ್ನೂ ನೆರವೇರಿಲ್ಲ ಎಂದು ಮತ್ತು ಯೇಸುವಿನ ದ್ವಿತೀಯಾಗಮನವು ಸತ್ಯವಾದದಲ್ಲಿನ ಬಹುಮುಖ್ಯ ಪ್ರಸ್ತಾಪವಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ.

ಯೆಹೂದ್ಯರಾದ ಪ್ರಥಮ ಆಗಮನಾವಾದಿಗಳು ಮತ್ತು ದ್ವಿತೀಯಾಗಮನವಾದಿಗಳು ಅವರಲ್ಲಿ ಕೆಲವರು ಮಾತ್ರವೇ ಅವರು ಸತ್ಯವನ್ನು ಸೂಕ್ಷ್ಮವಾಗಿ ಗ್ರಹಿಸಿ ತಿಳುಕೊಂಡಾಗ್ಯೂ ತಪ್ಪು ನಿರೀಕ್ಷಣೆಗಳಿಂದ ಬಹುಮಟ್ಟಿಗೆ ಅದನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುವುದರಲ್ಲಿ ವಿಫಲರಾಗಿರುವುದರಿಂದ ಅವರೆಲ್ಲರ ಬಗ್ಗೆ ನಮಗೆ ಬಹಳಷ್ಟು ಅನುಕಂಪವಿದೆ. ನಮ್ಮ ಪುನರಾಗಮನವಾದಿ ಸ್ನೇಹಿತರು ಕರ್ತನ ಹಿಂದಿರುಗುವಿಕೆಯ ರೀತಿ ಮತ್ತು ಉದ್ದೇಶಗಳ ಬಗ್ಗೆ ಪರಿಶುದ್ಧ ಬರಹಗಳಲ್ಲಿ ಬೋಧಿಸಿರುವುದನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಇದರ ಪರಿಣಾಮವಾಗಿ ಅವರು ಆತನನ್ನು ಈಗ ಇರುವಂತೆಯೇ ನೋಡಲು ನಿರೀಕ್ಷಿಸುತ್ತಿಲ್ಲ, ಆದರೆ ಹಿಂದೆ ಇದ್ದಂತೆಯೇ ನೋಡಲಪೇಕ್ಷಿಸುತ್ತಾರೆ. ಅವರು ಆತನು ಬರುವ ಉದ್ದೇಶವು ಎಲ್ಲರ ಹೃದಯಗಳಲ್ಲಿ ಗಾಬರಿ ಮತ್ತು ಭಯವನ್ನುಂಟು ಮಾಡುವುದಾಗಿದೆ. ಭಕ್ತರನ್ನು ಹೊರತುಪಡಿಸಿ, ಆತನ ಉದ್ದೇಶವು ಆಯ್ದುಕೊಂಡವರನ್ನು

ಒಟ್ಟುಗೂಡಿಸುವುದು ಮತ್ತು ಮನುಕುಲದ ಇತರರೆಲ್ಲರನ್ನೂ ನಾಶಪಡಿಸಿ ಈ ಲೋಕವನ್ನು ಸುಟ್ಟುಹಾಕುವುದು ಎಂದು ಅವರು ಪರಿಗಣಿಸುತ್ತಾರೆ. ಇಂಥಾಃ ಕಲ್ಪನೆಗಳನ್ನಿಟ್ಟುಕೊಂಡು ಅವರು ಕಾಲದ ಪ್ರವಾದನೆಯು ಲೋಕವನ್ನು ದೇವರ ಕಡೆಗೆ ಹೊಡೆದು ಓಡಿಸುವ ಬಾರುಕೋಲೆಂದು ಉಪಯೋಗಿಸುತ್ತಾರೆ. ಆದರೆ ಈ ಲೋಕವು ಶಾಂತವಾಗಿ ನೋಡುತ್ತಾ ಇವರುಗಳು ಅವಿವೇಕವುಳ್ಳ ಉತ್ಸಾಹಿಗಳು, ಮತ್ತು ದೇವರಿರುವುದಾದರೆ ಆತನು ಹೆಚ್ಚು ವಿವೇಚನೆಯುಳ್ಳವನು ಮತ್ತು ಅದಕ್ಕಿಂತಲೂ ನ್ಯಾಯವಂತನಾಗಿದ್ದಾನೆ ಎಂದು ಹೇಳುತ್ತದೆ. ಕಾಲಾನುಕಾಲದಿಂದ ಲೋಕದ ವಿನಾಶದ ಬಗ್ಗೆ ಮುಂತಿಳಿಸುವಿಕೆಯು ವಿಫಲವಾಗುತ್ತಿರುವುದರಿಂದ, ಲೋಕದ ತಿರಸ್ಕಾರ ಹೆಚ್ಚು ಹೆಚ್ಚು ತೀಕ್ಷ್ಣವಾಗುತ್ತಿದೆ – ಈವರೆಗೆ ಪ್ರವಾದನಾ ಸಮಯದ ಹೇಳುವಿಕೆಯ ಬಗ್ಗೆ ಸಂಶಯದ ಮುಗುಳುನಗೆ ಅಥವಾ ಅಗೌರವದ ದೃಷ್ಟಿಯಿಂದ ನೋಡಲಾಗುತ್ತದೆ. ಇದಲ್ಲದೆ ಸಾಮಾನ್ಯವಾಗಿ ಆ ಪ್ರವಾದನೆಯನ್ನು ಮತ್ತು ದೇವರ ಪ್ರಕಟನೆಯ ಘಟನಾವಳಿಗಳನ್ನು ಚೆನ್ನಾಗಿ ಬಲ್ಲ ಕ್ರೈಸ್ತರೂ ಸಹಾ ಇದೇ ದೃಷ್ಠಿಯಲ್ಲಿ ನೋಡುತ್ತಾರೆ.

**ಆದರೆ ಯಾವನು ಲೋಕದ ಅಂಧಕಾರದ ಅಸಂತೋಷವನ್ನು ಸಹಿಸಿಕೊಂಡು ಅಚಲನಾಗಿರುವನೋ, ಅದಾವದನ್ನೂ ಗಮನಿಸದೆ ನಸುನಗುತ್ತಾನೋ; ಯಾವನನ್ನು ಸಂಕಷ್ಟದ ಸಮುದ್ರಗಳು ಮುಳುಗಿಸಲಾರದೋ ಅದಲ್ಲದೆ ಸೈತಾನನ ತಂತ್ರೋಪಾಯಗಳ ವಂಚನೆಗೊಳಗಾಗದೆ ಇರುವನೋ ಅವನೇ ಧನ್ಯನು.**

ದೇವರು ಕಾಲ ಪ್ರವಾದನೆಗಳನ್ನು ಅಂಥಾಃ ಉದ್ದೇಶದಿಂದ ಒದಗಿಸಲಿಲ್ಲ, ಅಥವಾ ಆತನು ಈ ಲೋಕವನ್ನು ಆ ರೀತಿಯಾಗಿ ಪರಿವರ್ತಿಸಲು ಪ್ರಯತ್ನಿಸುವುದಿಲ್ಲ. ಯಾಕೆಂದರೆ, ತಂದೆಯನ್ನು ಆರಾಧಿಸುವವರು ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕೆಂದು (ಯೋಹಾನ 4:23) ಕರ್ತನು ಹೇಳಿದ್ದಾನೆ. ಅಂಥವರು ಆತನ ಸೇವೆಯನ್ನು ಮಾಡಲು ಭಯಪಡುವಂತೆ ಅಲ್ಲ. ಆತನು ಮಾನವರನ್ನು ವಿಧೇಯತೆಗಾಗಿ ಭಯಬೀಳಿಸುವುದಾದಲ್ಲಿ, ಆತನು ನಮ್ಮ ಪುನರಾಗಮನವಾದಿ ಸ್ನೇಹಿತರು ರುಜುವಾತುಪಡಿಸುವಂತೆ ಸಮಯವನ್ನು ಪ್ರಕಟಿಸುವುದಕ್ಕಿಂತ ಇನ್ನೂ ಹೆಚ್ಚಿನ ಕೆಲವೊಂದು ಯಶಸ್ವಿ ಪದ್ಧತಿಯನ್ನು ಯೋಚಿಸುತ್ತಿದ್ದನು. ಪ್ರವಾದನಾ ಕಾಲವು ಈ ಲೋಕವನ್ನು ಭೀತಿಗೊಳಿಸುವುದಕ್ಕಾಗಿ ಅಥವಾ ಈ ಲೋಕಕ್ಕೆ ಬೇರೆ ಯಾವುದೇ ರೀತಿಯಲ್ಲಾದರೂ ನೀಡಲ್ಪಟ್ಟಿಲ್ಲ. ಆದರೆ ಅದು ಜ್ಞಾನಪ್ರಕಾಶ ಕೊಡಲು, ಬಲಪಡಿಸುವುದಕ್ಕಾಗಿ, ಸಮಾಧಾನಪಡಿಸುವುದಕ್ಕಾಗಿ, ಪ್ರೋತ್ಸಾಹಿಸುವುದಕ್ಕಾಗಿ ಮತ್ತು ಯುಗದ ಅಂತ್ಯದಲ್ಲಿನ ಕಷ್ಟದ ಸಮಯದಲ್ಲಿ ಸಭೆಗೆ ಮಾರ್ಗದರ್ಶನ ನೀಡುವುದಕ್ಕಾಗಿ ಕೊಡಲ್ಪಟ್ಟಿದೆ. ಆದುದರಿಂದ, "ದುಷ್ಟರು ದುಷ್ಟರಾಗಿಯೇ ನಡೆಯುವರು. ಅವರಲ್ಲಿ ಯಾರಿಗೂ ವಿವೇಕವಿರದು; ಜ್ಞಾನಿಗಳಿಗೆ ವಿವೇಕವಿರುವುದು" (ದಾನಿಯೇಲ 12:10) ಎಂದು ಬರೆದದೆ. ಹೀಗಾಗಿ ದುಷ್ಟರು ಅದನ್ನು ಅರ್ಥಮಾಡಿಕೊಳ್ಳಲಾರರು. ಆದರೆ ಜ್ಞಾನಿಗಳು ಮಾತ್ರವೇ ಅದನ್ನು ಅರ್ಥಮಾಡಿಕೊಳ್ಳುತ್ತಾರೆ. ಇವರುಗಳಿಗೆ ಇದು ಆಹಾರದ ಕಾಲವಾಗುತ್ತದೆ ಮತ್ತು ಇದು ಇತರೆ ಆಹಾರದೊಂದಿಗೆ ಅದನ್ನು ಉಪಯೋಗಿಸುವವರನ್ನು ಅವರು ಯುಗವು ಸಮಾಪ್ತಿಯಾಗುವ ಅಂತಿಮ ದಿನವಾದ ಆ ದುರ್ದಿನವನ್ನು ಎದುರಿಸಿ ನಿಲ್ಲುವಂತೆ ಅವರ ಸುತ್ತಲೂ ಪ್ರಕಟವಾಗುವ ಸಂಗತಿಗಳನ್ನು ಅರಿತುಕೊಳ್ಳುವಂತೆ, ಅವರು ಹೆದರಿಕೆಯಿಂದಾಗಲೀ, ಭಯದಿಂದಾಗಲೀ ನಾಶವಾಗದಂತೆ, ತಪ್ಪಾದ ಯೋಜನೆಗಳು ಮತ್ತು ವಿಚಾರಸರಣಿಗಳಿಂದ ಹಾಗೂ ಈ ದಿನಗಳಲ್ಲಿ ಹೆಚ್ಚಾಗಿರುವ ವಿಜ್ಞಾನವೆಂದು ತಪ್ಪಾಗಿ ಕರೆಯುವ ಸಂಗತಿಗಳು ಆವರಿಸಿದ್ದರೂ ಅದು ಅವರನ್ನು ನುಂಗಿಹಾಕದಂತೆ ಬಲಪಡಿಸುವುದು. ಮತ್ತು ಅದೇ ಪ್ರಕಾರವಾಗಿ ಅವರು ನಾಶಗೊಳಿಸುವ ಬೆಂಕಿಯ ತೊಂದರೆಯಲ್ಲಿ ದೇವರಿಗೆ ಮತ್ತು ಆತನ ಯೋಜನೆಗಳಿಗೆ ಸಾಕ್ಷಿಗಳಾಗಿ ಮತ್ತು ಜನರ ಬೋಧಕರುಗಳಾಗಿ – ಯೆಹೋವನ ಯೋಜನೆಯ ಪರಿಣಾಮಗಳನ್ನು ತೋರಿಸಿಕೊಡುವವರು, ರಾಜ ಮಾರ್ಗವನ್ನು ಸರಿಪಡಿಸಿ, ಜನಾಂಗಗಳಿಗೆ ಧ್ವಜವನ್ನೆತ್ತುವರು – ಯೆಶಾಯ 62:10.

ಕಾಲದ ಪ್ರವಾದನೆಯ ಉದ್ದೇಶವು, ಎಷ್ಟು ಮುಖ್ಯವಾದದ್ದು ಮತ್ತು ಅತ್ಯಗತ್ಯವಾದುದು ಎಂದರೆ ಆ ಕಾಲದಲ್ಲಿ ದೇವರ ಮನುಷ್ಯನು ಪರಿಪೂರ್ಣನೂ, ಸುಸಜ್ಜಿತನೂ ಆಗುವನು. ಈ ಪ್ರವಾದನಾ ಸಮಯದ ಸಾಕ್ಷ್ಯವಿಲ್ಲದೆ ನಾವು ಕರ್ತನ ಈ ದಿನದ ಘಟನೆಗಳನ್ನು ನೋಡಬಹುದು, ಆದರೆ ಅದನ್ನು ಮತ್ತು ಅದರಲ್ಲಿನ ನಮ್ಮ ಕರ್ತವ್ಯಗಳನ್ನೂ, ಸವಲತ್ತುಗಳನ್ನೂ ಅರ್ಥಮಾಡಿಕೊಳ್ಳದಿರಬಹುದು. ಈ ಲೋಕವೂ ಮತ್ತು ಹೆಸರಿಗೆ ಮಾತ್ರದ ಸಭೆಯು, ದೈವೇಚ್ಛೆಯ ಬದಲಾವಣೆಗಳು ಈಗ ಕಾಣಲಿವೆ ಎಂಬುದರ ಪರಿವೆಯಿಲ್ಲದೆ ಅವಿವೇಕಿಗಳಾಗಿ ಇನ್ನೂ ನಿದ್ರಿಸುತ್ತಿರುವಾಗ, ನಿಜವಾಗಿ ಪ್ರತಿಷ್ಠೆಗೊಂಡಿರುವ ಯಾರೊಬ್ಬರೂ ಸಹಸ್ರಮಾನ ದಿನವು ಉದಯವಾಗುವ ಮುನ್ನ ಅರುಣೋದಯದಲ್ಲಿ ತಮ್ಮ ಮಾತುಗಳ ಮತ್ತು ಕ್ರಿಯೆಗಳ ಮಾರ್ಗದರ್ಶಿಯಾದ ಪ್ರವಾದನಾ ಸಮಯದ ಸಾಕ್ಷ್ಯವನ್ನು ಕಡಿಮೆಯದೆಂದು ನಿರ್ಣಯಿಸದಿರಲಿ. ಈ ಪ್ರವಾದನಾ ಸಮಯದ ಸಾಕ್ಷ್ಯಗಳು ಲೇಖಕನ ಗಮನವನ್ನು ಜಾಗರೂಕತೆಯಿಂದ ದೇವರ ಯೋಜನೆಯ ಇತರೆ

ಲಕ್ಷಣದ ಕಡೆಗೆ ಹೆಚ್ಚಾಗಿ ಸೆಳೆಯುವವುಗಳಾಗಿವೆ. ಇವುಗಳಿಗೆ ನೀಡಿದ ಲಕ್ಷ್ಯವು ವಿದ್ಯಾರ್ಥಿಗೆ ಶಾಶ್ವತವಾದ ಲಾಭವನ್ನು ತರುವ ಫಲವನ್ನು ನೀಡುತ್ತದೆ. ಆತನಿಗೆ "ಪ್ರಸ್ತುತ ಸತ್ಯವನ್ನು" ತಿಳಿಸುವುದಲ್ಲದೆ, ಪರಿಶುದ್ಧ ಗ್ರಂಥಗಳಲ್ಲಿನ ದೇವರ ಸಮಸ್ತ ಸತ್ಯಗಳಿಗೆ ಹೆಚ್ಚಿನ ಒತ್ತಡ ನೀಡಿ ದೇವರ ಯೋಜನೆಗಳು ಆ ಸಮಯದಲ್ಲಿ ಒಟ್ಟಾಗಿ ವಿಚಾರಪರವಾಗಿ ಆತನ ಭವ್ಯವಾದ ಉದ್ದೇಶಗಳ ಪ್ರಗತಿಗಾಗಿ ಕಾರ್ಯವೆಸಗುತ್ತವೆ ಎಂಬ ಸಾಕ್ಷ್ಯವನ್ನು ಒದಗಿಸುತ್ತದೆ.

ಈ ಲೋಕವು ಅಗ್ನಿಗೆ ಆಹುತಿಯಾಗುವ ಮತ್ತು ಇತರೆ ಸಂಗತಿಗಳ ಸಮಯವನ್ನು ನಿಗದಿತಪಡಿಸುವುದರ ಭವಿಷ್ಯವಾಣಿಯನ್ನು ಆಗಮನಾವಾದಿಗಳು (Adventists) ಮಾಡಿದರು. ಇದು ಘಟನೆಗಳ ಗುಣಲಕ್ಷಣಗಳ ಬಗ್ಗೆ ಹೆಚ್ಚಾಗಿ ತಿಳಿಸಿದೆ ಎಂದು ಕಂಡುಬರುತ್ತದೆ. ಆದರೆ ಸಮಯವನ್ನು ನಿಗದಿಪಡಿಸಿರುವದು ತಪ್ಪಾಗಿದೆ. ಯೆಹೂದ್ಯರಂತೆ ಅವರೂ ಸಹ ಸರಿಯಾದ ಸಮಯದಲ್ಲಿ ತಪ್ಪಾದ ಸಂಗತಿಗಳನ್ನು ಹುಡುಕಿ ನೋಡುವ ತಪ್ಪು ಮಾಡಿದರು. ಇದು ಸತ್ಯವನ್ನು ಗ್ರಹಿಸಿಕೊಳ್ಳುವಲ್ಲಿ ಅವರ ವಿಫಲತೆಗೆ ಎರಡನೆಯ ಕಾರಣವಾಗಿದೆ, ಆದರೂ ಅದರ ಪ್ರಾಥಮಿಕ ಕಾರಣವೆಂದರೆ ಅದು ಸ್ಪಷ್ಟವಾದ ಪ್ರಕಟನೆಗೆ ಸಕಾಲವಾಗಿರಲಿಲ್ಲ. ಆದಾಗ್ಯೂ ಅದು ಭಕ್ತರಿಗೆ ದೇವರ ಪ್ರತ್ಯಕ್ಷತೆಯನ್ನು ಕಾಣುವಂತೆ, ಆತನ ಆಗಮನದ ಮುನ್ನ ನಿರಾಶೆಗೊಳ್ಳುವಂತೆ, ಮದಲಿಂಗನನ್ನು ಭೇಟಿಯಾಗಲು ಮುಂದಾಗುವಂತೆ, ಭಕ್ತರನ್ನು ಕದಡುವ ಸಮಯವಾಗಿತ್ತು. ಈ ಎಲ್ಲಾ ಸಂಗತಿಗಳೂ ನಮ್ಮ ಕರ್ತನು ಹೇಳಿದ ಹತ್ತು ಮಂದಿ ಕನ್ಯೆಯರ ಸಾಮ್ಯದಲ್ಲಿ ಸೂಚಿತವಾಗಿವೆ. ಮತ್ತು ಇದನ್ನು ಇನ್ನು ಮುಂದೆ ದೀರ್ಘವಾಗಿ ತೋರಿಸಲಾಗುವುದು. ಹಿಂದಿನ ಸಂಪುಟದಲ್ಲಿ ತೋರಿಸಿದಂತೆ, ಕರ್ತನ ದಿನದಲ್ಲಿ ಈ ಭೂಲೋಕವನ್ನು ನಾಶಗೊಳಿಸುವ ಬೆಂಕಿಯು ಸಾಂಕೇತಿಕವಾಗಿದೆಯೇ ಹೊರತು ಅಕ್ಷರಶಃವಾದುದ್ದಲ್ಲ. ಮುಂದಿನ ಅಧ್ಯಾಯಗಳಲ್ಲಿ "ಆಗಮನವಾದಿಗಳು" (Adventists) ವಿಫಲಗೊಂಡವುಗಳೆಂದು ವಿರ್ಜಿಸಿರುವ ಕೆಲವೊಂದು ಕಾಲ ಪ್ರವಾದನೆಗಳು ವಿಫಲಗೊಂಡವುಗಳಲ್ಲ, ಸರಿಯಾದವುಗಳು; ಅವುಗಳು ಈ ಸಮಯದ, ಈಗಾಗಲೇ ಹಾದಿಹಿಡಿಯಲು ಸಿದ್ಧವಾಗಿರುವ ಸಾಂಕೇತಿಕ ಬೆಂಕಿಯನ್ನು ಗುರುತಿಸುವವುಗಳಾಗಿವೆ.

ಈ ಭೂಮಿಯ ಅಕ್ಷರಶಃವಾದ ಸುಡುವಿಕೆಯ ಅಡಿಯ ಕಷ್ಟದಲ್ಲಿ ಶ್ರಮೆಪಡುತ್ತಿರುವ ಆಗಮನದ ಜನರು "Advent People" ಎಲ್ಲಾ ಪ್ರವಾದನಾ ಅವಧಿಗಳನ್ನು ಒಂದು ಹುದುವಾದ ಸಮಾಪ್ತಿ ದಿನದ ಇಪ್ಪತ್ನಾಲ್ಕು ಗಂಟೆಗಳಿಗೆ ಅನ್ವಯಿಸಲು ಒತ್ತಾಯಪೂರ್ವಕವಾಗಿ ಪ್ರಯತ್ನಿಸುವವರಾಗಿದ್ದಾರೆ. ಈ ರೀತಿಯಲ್ಲಿ ಅವರು ಕೆಲವು ಪ್ರವಾದನೆಗಳಿಗೆ ದೌರ್ಜನ್ಯವನ್ನುಂಟುಮಾಡಿ ಅವನ್ನು ಬೇರೆಯವುಗಳೊಂದಿಗೆ ಹೊಂದಿಸಿ ಮುಕ್ತಾಯ ಗೊಳಿಸುವವರಾಗಿದ್ದಾರೆ. ಆದರೆ ದೈವಿಕ ಯೋಜನೆಯ ಸ್ಪಷ್ಟವಾದ ಅವಲೋಕನವು ವಿವಿಧ ಕಾಲಾವಧಿಯ ಪ್ರವಾದನೆಗಳ ಸಾಮರಸ್ಯವನ್ನು ಬಹಿರಂಗಪಡಿಸುತ್ತದೆ ಮತ್ತು ಅದನ್ನು ತಿರುಚುವ, ಅಥವಾ ಯಾವುದಕ್ಕೂ ಹಾನಿಪಡಿಸುವ, ಅದನ್ನು ಬೇರೆಯವುಗಳೊಂದಿಗೆ ಹೊಂದಿಕೆ ಮಾಡುವ ಯಾವುದೇ ಅಗತ್ಯತೆಗಳಿಲ್ಲ. ನಾವು ಮುಂದಿನ ಅಧ್ಯಾಯಗಳಲ್ಲಿ ಪ್ರಮುಖವಾದ ಪ್ರವಾದನೆಗಳನ್ನು ಯಶಸ್ವಿಯಾಗಿ ಪರೀಕ್ಷಿಸಲು (ಸಮಾಲೋಚನೆ ಮಾಡಲು) ಆರಂಭಿಸುವಂತೆ, ನಾವು ಒಂದು ಕಲ್ಪನೆಯನ್ನೂ ಹುಟ್ಟುಹಾಕುವುದಿಲ್ಲ, ಮತ್ತು ಎಲ್ಲಾ ಪ್ರವಾದನಾ ಅವಧಿಗಳನ್ನು ಅದಕ್ಕೆ ವಾಲಿಸಲು ಪ್ರಯತ್ನ ಮಾಡುವುದಿಲ್ಲ, ಆದರೆ, ನಾವು ಜಾಗರೂಕತೆಯಿಂದ ಪ್ರತಿಯೊಂದು ಅವಧಿಯನ್ನೂ ಅದು ಪೂರ್ಣ ಗೊಳ್ಳುವವರೆಗೆ ಕಂಡುಹಿಡಿದು, ನಂತರದಲ್ಲಿ ರಹಸ್ಯಗಳನ್ನು ಬಯಲುಮಾಡಲು ಆ ಸಮರ್ಥನು ಸೂಚಿಸಿರುವಂತೆ ಒಟ್ಟಾರೆಯಾಗಿ ಒಂದು ವಿಚಾರಸರಣಿ ಅಥವಾ ಯೋಜನೆಯನ್ನು ಹಣೆಯುತ್ತೇವೆ. ದೇವರ ಯೋಜನೆಯ ಕ್ರಮ ಮತ್ತು ಸಾಮರಸ್ಯವು ಅದರ ಕಾಲಘಟ್ಟದಲ್ಲಿ ಮತ್ತು ಅವಧಿಗಳಲ್ಲಿ ಹಿಂದಿನ ಸಂಪುಟದಲ್ಲಿಯೂ ಭವ್ಯವಾದ ಲಕ್ಷಣಗಳೊಡನೆ ಪ್ರಕಟಗೊಂಡಿದೆ ಮತ್ತು ಯುಗಗಳ ರೇಖಾಪಟ್ಟಿಯಲ್ಲಿಯೂ (Chart of the Ages) ನಕ್ಷೆಗೊಂಡಿದೆ. ಪ್ರವಾದನಾ ಫಲಕದಲ್ಲಿ ಸೂಚಿಸಿರುವ ಸಮಯದ ಯುಗಗಳ ಮಹಾ ಘಂಟೆಯು ಭಾರಿಸುವಾಗ, ಮುಂತಿಳಿಸುವ ಘಟನೆಗಳು ದೇವರ ಭವಿಷ್ಯವಾಣಿಯಂತೆ ಅನುಸರಿಸಿ ಹೋಗುವುದೇ ನಿಶ್ಚಿತ.

* * * * * * *

# ಅಧ್ಯಯನ – 2 Study II

# ಸತ್ಯವೇದದ ಕಾಲಗಣನೆ

## Bible Chronology

**ಪ್ರವಾದನೆಯನ್ನು ಅರ್ಥಮಾಡಿಕೊಳ್ಳಲು ಕಾಲಗಣನೆಯು ಅಗತ್ಯವಾಗಿದೆ. ಸತ್ಯವೇದದಲ್ಲಿ ಅತ್ಯವಶ್ಯವಾದ ಮಾಹಿತಿಯು ಒದಗಿಸಲ್ಪಟ್ಟಿವೆ. ಆದಾಮನ ಸೃಷ್ಟಿಯಿಂದ ಪ್ರಾರಂಭಗೊಂಡು ಕ್ರಿ.ಶ. 1873 ರವರೆಗೆ ಆರು ಸಾವಿರ ವರ್ಷಗಳು. ಈ ಮಹಾ ಕಾಲಾವಧಿಗಳಲ್ಲಿ ಸತ್ಯವೇದದ ಘಟನಾವಳಿಗಳ ಹೇಳಿಕೆ. ಸವಿಸ್ತಾರವಾಗಿ ಅದರ ಪರೀಕ್ಷೆ. ಸೃಷ್ಟಿಯಿಂದ ಪ್ರಳಯದ ನೀರು ಒಣಗಿಹೋಗುವವರೆಗೆ. ಅಬ್ರಹಾಮನ ಒಡಂಬಡಿಕೆಯವರೆಗೆ. ಧರ್ಮಶಾಸ್ತ್ರವು ಕೊಡಲ್ಪಡುವವರೆಗೆ. ಕುಲಗಳ ನಡುವೆ ಕಾನಾನಿನ ವಿಭಜನೆ. ನ್ಯಾಯಸ್ಥಾಪಕರುಗಳ ಕಾಲ. ಅರಸುಗಳ ಕಾಲ. ಪಾಳುಬೀಳುವಿಕೆಯ ಕಾಲಮಾನ. ಕ್ರಿ.ಶ.1873ರವರೆಗೆ. ನಮ್ಮ ಆಂಗ್ಲ ಸತ್ಯವೇದವು ಯಾವುದರಲ್ಲಿ ಬಿಷೋಪ್ ಉಷರನ ಪ್ರಕಾರವಾದ ಕಾಲಗಣನೆಯಿಂದ ಭಿನ್ನವಾಗಿದೆ. ನಮ್ಮ ಕರ್ತನ ನಿಜವಾದ ಜನ್ಮ ದಿನಾಂಕ.**

ಈ ಅಧ್ಯಾಯದಲ್ಲಿ ಆದಾಮನ ಸೃಷ್ಟಿಯಿಂದ ಕ್ರಿ.ಶ. 1872 ರವರೆಗೆ ಆರು ಸಾವಿರ ವರ್ಷಗಳು ಪೂರೈಸಿದೆಯೆಂದು ನಾವು ಸತ್ಯವೇದದ ಸಾಕ್ಷ್ಯಗಳನ್ನು ಪ್ರಸ್ತುತಿಗೊಳಿಸುತ್ತೇವೆ, ಮತ್ತು ಅಂದಿನಿಂದ ಕ್ರಿ.ಶ. 1872ರಿಂದೀಚೆಗೆ ನಾವು ಕಾಲಾನುಸಾರವಾಗಿ ಏಳನೆಯ ಸಹಸ್ರಮಾನ ಅಥವಾ ಮಿಲಿನಿಯಂ ವರ್ಷವನ್ನು ಪ್ರವೇಶಿಸುತ್ತೇವೆ ಮತ್ತು ಇದರ ಮುನ್ಸೂಚನೆಯು ಕರ್ತನ ದಿನ, ಇದು ಸಂಕಷ್ಟದ ದಿನವಾಗಿದ್ದು ಈ ಲೋಕದ ರಾಜ್ಯಗಳು ಛಿದ್ರ ಛಿದ್ರವಾಗಿ ಸಮಗ್ರ ಪರಲೋಕದ ಕೆಳಗೆ ದೇವರ ರಾಜ್ಯವು ಸ್ಥಾಪಿತಗೊಳ್ಳುವುದಕ್ಕೆ ಸಾಕ್ಷಿಯಾಗುತ್ತದೆ.

ಕಾಲಗಣನೆಗಳು ಪ್ರವಾದನಾ ಕಾಲಗಳನ್ನು ಪರೀಕ್ಷೆ ಮಾಡುವ ತಳಹದಿಯಾಗಿ ಅವಶ್ಯವಾಗಿವೆ. ಕಾಲದ ಪ್ರವಾಹದಲ್ಲಿ ನಾವು ಎಲ್ಲಿದ್ದೇವೆ ಎಂಬುದನ್ನು ಮೊಟ್ಟಮೊದಲಿಗೆ ನಿಶ್ಚಯಪಡಿಸಿಕೊಳ್ಳಬೇಕು; ಮತ್ತು ಇದರ ಲೆಕ್ಕಾಚಾರ ಮಾಡುವಂತೆ ನಮಗೆ ನಂಬಲರ್ಹ ದಿನಾಂಕಗಳು ಬೇಕಾಗುತ್ತವೆ. ಆದುದರಿಂದ ನಾವು ಮೊದಲಿಗೆ ಕಾಲಗಣನೆಯ ಪ್ರಸ್ತಾಪವನ್ನು ಕ್ರಮಬದ್ಧವಾಗಿ ಕೈಗೆತ್ತಿಕೊಳ್ಳುತ್ತೇವೆ. ಮತ್ತು ಮಾನವ ಚರಿತ್ರೆಯ ಸಂಪೂರ್ಣ ಕಾಲಗಣನೆಯು ಮಾನವನ ಸೃಷ್ಟಿಯ ಅಗತ್ಯತೆಯಿಂದ ಪ್ರಾರಂಭಗೊಳ್ಳಬೇಕಾಗುತ್ತದೆ.

ಮಾನವನು ಸೃಷ್ಟಿಯಾದಂದಿನಿಂದ ಕಾಲದ ವ್ಯಾಪ್ತಿಯನ್ನು ವಿಧವಿಧವಾಗಿ ಅಂದಾಜಿಸಲಾಗಿದೆ. ಸತ್ಯವೇದದ ದಾಖಲೆಯನ್ನು ಒಪ್ಪಿಕೊಳ್ಳುವವರಲ್ಲಿ, ಭಿನ್ನಾಭಿಪ್ರಾಯವು ಸ್ವಲ್ಪ ಮಾತ್ರವೇ ಇದ್ದಿರಬಹುದು; ಆದರೆ ಅದನ್ನು ಅಲ್ಲಗಳೆಯುವವರಲ್ಲಿ ಈ ಭಿನ್ನಾಭಿಪ್ರಾಯವು ವಿಪರೀತವಾಗುತ್ತಾ ಸಾವಿರ ವರ್ಷಗಳಿಂದ ನೂರಾರು ಸಹಸ್ರ ವರ್ಷಗಳಷ್ಟು ಬದಲಾವಣೆಗಳು ಕಂಡುಬರುತ್ತವೆ. ಈ ಊಹಾಪೋಹಗಳು ಅಂಥಾಃ ಅಳತೆಗೆಟ್ಟ ತೀರ್ಪುಗಳ ಮೇಲೆ ಆತುಕೊಂಡಿದ್ದು ಅತಿ ಅಲ್ಪವಾದ ಕಾರಣವನ್ನು ಮಾತ್ರವೇ ಒದಗಿಸುತ್ತವೆ. ಉದಾಹರಣೆಗೆ, ಸ್ವಿಜರ್‌ಲ್ಯಾಂಡ್ ಮತ್ತು ಐರ್‌ಲ್ಯಾಂಡ್‌ಗಳಲ್ಲಿನ ಜೌಗು ಪ್ರದೇಶದ ಗಣನೀಯ ಆಳದಲ್ಲಿ ಬೆಳೆಯುವ ಸಸ್ಯಗಳ (Peat bogs) ತುದಿಯಲ್ಲಿ ಕಾಣಿಸಿಕೊಳ್ಳುವ ಕಲ್ಲಿನಂತಿರುವ ಅಂಬಿನ ತಲೆಗಳನ್ನು ಅದರ ಮಟ್ಟವು ಒಮ್ಮೆ ತಳದಲ್ಲಿದ್ದು ಇವುಗಳ ಗುಂಪುಗಳು ಅವುಗಳ ಸುತ್ತಲೂ ಮತ್ತು ಅವುಗಳ ಮೇಲಕ್ಕೂ ಬೆಳೆಯುವುದೆಂಬುದಕ್ಕೆ ಸಾಕ್ಷ್ಯವಾಗಿ ತೆಗೆದುಕೊಳ್ಳಲಾಗುತ್ತದೆ. ಅಂಥಾಃ ಬೆಳವಣಿಗೆಗೆ ತಗಲುವ ಅವಶ್ಯಕ ಕಾಲವನ್ನು ಪ್ರಸ್ತುತದಲ್ಲಿನ ಶತಮಾನ ದರದ ಬೆಳವಣಿಗೆಗನುಸಾರ ಲೆಕ್ಕಿಸಲಾಗುವುದಾಗಿದ್ದು ಅದು ಬಹಳಷ್ಟು ಕಡಿಮೆಯದಾಗಿದೆ. ಅವುಗಳ ಆವರಣಗಳು ನಿಜವಾಗಿದ್ದಲ್ಲಿ ಆ ಮಾನವನು ನೂರಾರು ಸಹಸ್ರವರ್ಷಗಳ ಹಿಂದೆ ಜೀವಿಸಿದ್ದನೆಂಬುದು ರುಜುವಾತುಗೊಳ್ಳುತ್ತದೆ. ಆದರೆ, ಇತರೆ ಭೂವಿಜ್ಞಾನಿಗಳು ಒಳ್ಳೆಯ ಕಾರಣಗಳಿಂದ ಈ ಸಸ್ಯಗಳು ಬಹಳ ಮೃದುವಾಗಿದ್ದು ಅದರ ಚಕಮಕಿಸುವ ಅಂಬಿನಂತಹ ತಲೆಗಳು ಕೆಲವು ಶತಮಾನಗಳಲ್ಲಿ ಕ್ರಮೇಣ ಬಹಳ ಆಳವಾಗಿ ಸುಲಭದಿಂದ ಮುಣುಗಬಹುದು ಎಂಬುದನ್ನು ತೋರಿಸುತ್ತಾರೆ.

ನಾವು ಉಲ್ಲೇಖಿಸುವ ಮತ್ತೊಂದು ದೃಷ್ಟಾಂತವೆಂದರೆ ನೈಲ್ ಕಣಿವೆಯಲ್ಲಿನ ತೆಳ್ಳಗಿರುವ ಮಣ್ಣಿನಲ್ಲಿ ಜಲಸಂಧಿಯ ಅಳತೆ ಮಾಡುವಾಗ ಎರಡು ಇಟ್ಟಿಗೆಗಳು ಕಂಡುಬಂದವು. ಒಂದು 20 ಗಜ ಆಳದಲ್ಲಿ ಮತ್ತೊಂದು 24 ಗಜ ಆಳದಲ್ಲಿ. ನಾವು ನದಿಯು ಉಂಟುಮಾಡುವ ವಾರ್ಷಿಕ ಸಾಂದ್ರತೆಯನ್ನು ನೂರು ವರ್ಷಕ್ಕೆ ಎಂಟು ಅಂಗುಲದಂತೆ ಲೆಕ್ಕಮಾಡುವುದಾದರೆ ಈ ಇಟ್ಟಿಗೆಯಲ್ಲಿ ಮೊದಲನೆಯ ಇಟ್ಟಿಗೆಯ ವಯಸ್ಸನ್ನು 12,000 ವರ್ಷಗಳೆಂದೂ, ಎರಡನೆಯ ಇಟ್ಟಿಗೆಯ ವಯಸ್ಸು 14,000 ವರ್ಷಗಳೆಂದು ನಿಗದಿಪಡಿಸಬಹುದು. ಸದೃಶ್ಯ ಲೆಕ್ಕಾಚಾರದ (Analogous Calculations) ಅರ್ಥದಲ್ಲಿ ಬರ್‌ಮಯ್‌ಸ್ಟರ್ (Burmeister) ಎಂಬ ಪ್ರಖ್ಯಾತ ಭೂವಿಜ್ಞಾನಿಯು ಐಗುಪ್ತದ ಮಣ್ಣಿನ ಮೇಲೆ

ಮನುಷ್ಯನ ಪ್ರಥಮ ಕಾಣಿಸಿಕೊಳ್ಳುವಿಕೆ ಎಪ್ಪತ್ತೆರಡು ಸಹಸ್ರ ವರ್ಷಗಳಾಗಿದ್ದಿರಬಹುದು ಎಂದು ಅಂದಾಜಿಸಿದ್ದಾನೆ ಮತ್ತು ಡ್ರಾಪರ್ (Draper) ಎಂಬ ಮತ್ತೊಬ್ಬ ಭೂವಿಜ್ಞಾನಿಯು ಹಿಮಪ್ರವಾಹ ಯುಗದ ಗಮನಾರ್ಹ ಕಡೆಯ ಲಕ್ಷಣಗಳನ್ನು ಕಂಡ ಯೂರೋಪಿನ ಮನುಷ್ಯನ ಪ್ರಾಚೀನತೆಯು 250,000 ವರ್ಷಗಳೆಂದು ನಿಯೋಜಿಸುತ್ತಾನೆ (Ref. Prof N. Joly in "Man Before Metals: page 183).

ನಾವು ಸಹಾ ಈ ಮಹಾ ವ್ಯಕ್ತಿಗಳಂತೆ ಅಂದಾಜಿಸುವವರಾದರೆ ನಿಜವಾಗಿಯೂ ನಾವು ಸಹ ಅದೇ ಮಹಾ ಲೆಕ್ಕಾಚಾರವನ್ನು ಮುಟ್ಟುತ್ತೇವೆ. ಆದರೆ ಇತರೆ ನದಿಗಳ ದಂಡೆಯು ಕೆಲವೊಮ್ಮೆ ಏಕೈಕ ಅಲೆಯಿಂದಾಗಿ ನೀರಿನಲ್ಲಿ ಕೊಚ್ಚಿಹೋಗುವುದಾಗಿದ್ದು ಅವುಗಳು ತಮ್ಮ ತಳವನ್ನು ಬದಲಾಯಿಸಿಕೊಳ್ಳುತ್ತವೆ. ಅದರಂತೆ ನೈಲ್ ನದಿಯ ಜಿಗುಟು ಮಣ್ಣಿನ ಶೇಖರಣೆಯು ಸಹ ಬಹಳ ಕ್ರಮವಿಲ್ಲದ್ದಾಗಿದ್ದು ಸಾಧ್ಯತೆಗಿಂತ ಹೆಚ್ಚಾಗಿದೆಯೋ ಎಂಬುದನ್ನು ವಿಚಾರಿಸುವಲ್ಲಿ ನಾವು ಸಾಕಷ್ಟು ಅವೈಜ್ಞಾನಿಕರಾಗಿದ್ದೇವೆ. ಪುನಃ ನಾವು ನೋಹನ ಕಾಲದ ಪ್ರವಾಹವನ್ನು ಸತ್ಯವೇದದಲ್ಲಿ ನಿರ್ದಿಷ್ಟ ರೂಪದಲ್ಲಿ ಹೇಳಿದಂತೆ ಮಾತ್ರವಲ್ಲ, ಅನ್ಯ ಜನಾಂಗಗಳ ಇತಿಹಾಸಗಳಲ್ಲಿ ಕಾಪಾಡಿಕೊಂಡಿರುವಂತೆಯೂ ನೆನಪುಮಾಡಿಕೊಳ್ಳುತ್ತೇವೆ ಮತ್ತು ಅವುಗಳು ಶತಮಾನವೊಂದಕ್ಕೆ ಎಂಟು ಇಂಚುಗಳಿಗಿಂತ ಇನ್ನೆಷ್ಟರ ಮಟ್ಟಿನ ಕೆಸರು ಮತ್ತು ಭಗ್ನಾವಶೇಷಗಳನ್ನು ಉಂಟುಮಾಡಿದ್ದಿರಬಹುದೆಂದು ಆಶ್ಚರ್ಯಪಡುತ್ತೇವೆ. ಇದಲ್ಲದೆ ಈ ಸಂಗತಿಗಳು ಮಹಾನುಭಾವರ ಮನಸ್ಸಿಗೆ ಯಾಕೆ ಗೋಚರ ವಾಗಿಲ್ಲವೆಂದು ಸಹ ಅಚ್ಚರಿಗೊಳ್ಳುತ್ತೇವೆ. ಯಾಕೆಂದರೆ, ಎರಡು ಇಟ್ಟಿಗೆಗಳನ್ನು ನೀರಿನಿಂದ ತುಂಬಿಕೊಂಡು ಬಹಳಷ್ಟು ಮೃದುವಾಗಿರುವ ಜೇಡಿಮಣ್ಣಿಗೆ ಬಿಸಾಕಿದಾಗ ಅವು ಕೆಸರು ಮಣ್ಣಿಗಿಂತ ಗಾಢವಾಗಿದ್ದು ತಮ್ಮ ಸ್ವಂತ ತೂಕಕ್ಕಿಂತ ಬಹಳ ದೂರದಲ್ಲಿ ಮುಳುಗುತ್ತವೆ. ಎರಡು ಇಟ್ಟಿಗೆಗಳ ಆಳತೆಯಲ್ಲಿ ವ್ಯತ್ಯಾಸವಿರುವ ಕಾರಣ ಅವೈಜ್ಞಾನಿಕ ಆಲೋಚನೆಯುಳ್ಳವರಿಗೆ ಎರಡು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಮನುಷ್ಯರೂ ಎರಡೂ ಇಟ್ಟಿಗೆಗಳನ್ನು ಒಂದೇ ರೀತಿಯಾಗಿ ಮಾಡಿದ್ದರು ಎಂಬುದಕ್ಕಿಂತ, ಅದರಲ್ಲಿ ಒಂದು ಅಂಚಿನ ಪ್ರಕಾರವಾಗಿ ಅಥವಾ ತುದಿಯ ಪ್ರಕಾರವಾಗಿ ಮತ್ತೊಂದು ಚಪ್ಪಟೆಯಾಗಿ ಬಿದ್ದಿರಬಹುದು ಮತ್ತು ಇದು ನಿಧಾನವಾಗಿ ಮುಳುಗುತ್ತದೆ ಎಂಬ ಭಾವನೆ ಉಂಟಾಗುತ್ತದೆ.

ಮಾನವನ ಅಸ್ಥಿಪಂಜರವೊಂದು ಮಿಸಿಸಿಪ್ಪಿ ನದಿಯ ಹಿಂದಿನ ದಂಡೆಯಲ್ಲಿ ಕಂಡು ಬಂದು ಬಹಳ ವರ್ಷಗಳೇನು ಆಗಿರುವುದಿಲ್ಲ. ಕೆಲವು ಭೂವಿಜ್ಞಾನಿಗಳು ಕೆಸರಿನ, ಜಿಗುಟು ಮಣ್ಣಿನ ಅನೇಕ ಪದರುಗಳು ಅಸ್ಥಿಪಂಜರವನ್ನು ಆವರಿಸಿ ಎಷ್ಟು ಸಹಸ್ರ ವರ್ಷಗಳನ್ನು ಸೂಚಿಸಬಹುದು ಎಂಬಿತ್ಯಾದಿಯಾಗಿ ಲೆಕ್ಕಾಚಾರ ಮಾಡತೊಡಗಿದರು. ಭ್ರಾಂತಿಕಾರಕವಾಗಿ ಅವರಿಗೆ ಬಲು ಉಪಯುಕ್ತವಾದ ಇತಿಹಾಸ ಪೂರ್ವ ಮಾನವನ ಮಾದರಿ ದೊರೆಯಿತು ಎಂದುಕೊಂಡರು. ಆದರೆ, ನಂತರದಲ್ಲಿ ಅಸ್ಥಿಪಂಜರದ ಹಲವಾರು ಅಡಿಗಳ ಕೆಳಗೆ, ಸುಮಾರು ಐವತ್ತು ವರ್ಷಗಳಿಗೂ ಕಡಿಮೆ ಅವಧಿಯಲ್ಲಿ ಹಿಂದೆ ಮಿಸಿಸಿಪ್ಪಿಯಲ್ಲಿ ಉಪಯೋಗಿಸುತ್ತಿದ್ದ ಮಟ್ಟವಾದ ದೋಣಿಯ ಭಾಗಗಳು ಕಂಡು ಬಂದವು. ಇದು ಅವರ ಲೆಕ್ಕಾಚಾರಗಳನ್ನೆಲ್ಲಾ ಸಂಪೂರ್ಣವಾಗಿ ತಲೆಕೆಳಗಾಗಿ ಮಾಡಿತು ಮತ್ತು ಈ ಪ್ರಪಂಚವು ಸತ್ಯವೇದ ಬೋಧಿಸುವುದಕ್ಕಿಂತ ಸಹಸ್ರಾರು ನೂರು ವರ್ಷಗಳ ಹಿಂದಿನದು ಎಂಬುದಕ್ಕೆ ಮತ್ತೊಂದು ಮನುಷ್ಯರ ಸಾಕ್ಷ್ಯದಿಂದ ಮಾನವ ಜಾತಿಯನ್ನು ಬಿಡುಗಡೆಗೊಳಿಸಿತು.

ಈ ಕಾಲಗಣನೆಯ ಪ್ರಸ್ತಾಪದ ಬಗ್ಗೆ ಅಸಂಗತವಾದ ಮತ್ತು ಪೂರ್ಣ ನಂಬಲು ಅನರ್ಹವಾದ ಭೂವಿಜ್ಞಾನಿಗಳ ಊಹನೆಗಳನ್ನು ಬಿಟ್ಟು, ನಾವು ಮಾನವ ಇತಿಹಾಸದ ಮಾಹಿತಿಗಾಗಿ ಮನವಿ ಮಾಡುತ್ತೇವೆ. ಮತ್ತು ನಾವು ಏನನ್ನು ಕಂಡುಕೊಳ್ಳುತ್ತೇವೆ? ಅತಿ ಪುರಾತನವಾದ ಅನ್ಯ ಜನಾಂಗಗಳ ದೇಶಗಳ ಚರಿತ್ರೆಯು ಮೂರು ಸಾವಿರವರ್ಷಗಳಿಗಿಂತ ಕಡಿಮೆಯಾದುದನ್ನು ಸ್ಪಷ್ಟವಾಗಿ ಮತ್ತು ನಿರ್ದಿಷ್ಟವಾಗಿ ಗುರುತಿಸಬಹುದು. ಇದಕ್ಕಿಂತ ಹಿಂದಿನವುಗಳು ಅಂಧತ್ವವಾದುದೂ, ಅನಿಶ್ಚಿತವಾದುದೂ, ಪೌರಾಣಿಕವಾದುದೂ, ಕಾಲ್ಪನಿಕವೂ ಆಗಿದ್ದು ನಂಬಲು ಅನರ್ಹವಾದ ಸಂಪ್ರದಾಯಗಳಿಂದ ಕೂಡಿದವುಗಳಾಗಿವೆ. ರೋಮನ್ ಇತಿಹಾಸವು ಅಷ್ಟೊಂದು ಪುರಾತನವಾಗಿ ವಿಸ್ತೃತಗೊಳಿಸುವುದಿಲ್ಲ. ಯಾಕೆಂದರೆ ರೋಮ್ ದೇಶವನ್ನು ಕಂಡು ಹಿಡಿದೇ ಕೇವಲ ಇಪ್ಪತ್ತೇಳು ನೂರು ವರ್ಷಗಳಾಗಿವೆ. ಅದರ ಮೊದಲ ಶತಮಾನವು ಅನಿಶ್ಚಿತವಾದ ಪದ್ಧತಿಗಳಿಂದ ಸುತ್ತಲ್ಪಟ್ಟಿದೆ. ಮೂರು ಸಾವಿರ ವರ್ಷಗಳ ಹಿಂದಿನ ಬ್ಯಾಬಿಲೋನಿನ, ಸಿರಿಯಾದ ಮತ್ತು ಐಗುಪ್ತದ ಇತಿಹಾಸವು ಅವರ ದಾಖಲೆಗಳು ತುಣುಕು ತುಣುಕಾಗಿವೆ ಮತ್ತು ಅತ್ಯಂತ ಅಗೋಚರಗಳಿಂದ ಕೂಡಿತ್ತು ಎಂದು ನಮಗೆ ತಿಳಿಸುತ್ತದೆ. ಚೈನಾ ದೇಶದ ಇತಿಹಾಸವು ನಮ್ಮನ್ನು ಟಿಚೋವ್ ರಾಜವಂಶಕ್ಕೆ (Tchou dynasty) ಕೊಂಡೊಯ್ಯುತ್ತದೆ. ಅಲ್ಲಿ ಚೈನಾ ಇತಿಹಾಸದ ಘಟನೆಗಳು ಹೆಚ್ಚು ನಂಬಲರ್ಹವಾಗಿ ಪ್ರಾರಂಭಗೊಳ್ಳುತ್ತವೆ, ಗ್ರೀಸ್ ದೇಶವು ಹಿಂದಿನ ಮೂರು ಸಾವಿರ ವರ್ಷಗಳಿಂದ ತನ್ನ ಪಾಂಡಿತ್ಯಕ್ಕೆ ಹೆಸರಾಗಿದ್ದು, ಅದರಿಂದ ಎಲ್ಲಾ ದೇಶಗಳನ್ನೂ ಮೀರಿ ನಾವು ಕಳೆದ ಇಪ್ಪತ್ತಾರು ನೂರು ವರ್ಷಗಳಲ್ಲಿ ನಿಖರ ಚರಿತ್ರೆಯನ್ನು ನಿರೀಕ್ಷಿಸಬಹುದು. ಆದರೆ ಅದಕ್ಕಿಂತ ಮುಂಚೆ ಅಲ್ಲ. ಅದಕ್ಕೆ ಮುಂಚೆ ನಾವು ಕಾಲ್ಪನಿಕತೆಗೆ,

ಪೌರಾಣಿಕ ಅಥವಾ ಗ್ರೀಸಿನ ಇತಿಹಾಸಪೂರ್ವ ಸಂಗತಿಗಳಿಗೆ ಬರುತ್ತೇವೆ. ಈ ಲೋಕದ ಮೇಲಿನ ಮಾನವನ ಮೊದಲ ಮೂರು ಸಾವಿರ ವರ್ಷಗಳ ಸಮಂಜಸವಾದ ಮತ್ತು ಕರಾರುವಕ್ಕಾದ ವಿವರಗಳು ಸತ್ಯವೇದದಲ್ಲಿ ಮಾತ್ರವೇ ನಮಗೆ ಲಭಿಸುತ್ತವೆ. ಈ ಸತ್ಯವು ದೈವಿಕ ಮೂಲದ, ನಿರ್ದೇಶನ ಮತ್ತು ಸಂರಕ್ಷಣೆಗೆ ಖಚಿತವಾಗಿ ಸಾಮರಸ್ಯವುಳ್ಳದ್ದಾಗಿದೆ ಎಂದು ಸಮರ್ಥಿಸುತ್ತದೆ.

ಇತಿಹಾಸದೊಂದಿಗೆ ಹೇಗೋ, ದಿನಾಂಕ ಗಳೊಂದಿಗೂ ಹಾಗೆಯೇ; ಸತ್ಯವೇದವನ್ನು ಒತ್ತಟ್ಟಿಗಿಟ್ಟು, ಈ ಲೋಕವು ಕ್ರಿ.ಪೂ.776ರ ಹಿಂದಿನ ಕಾಲಗಣನೆಗಳನ್ನು ಪತ್ತೆಹಚ್ಚಲು ಸಾಧ್ಯವಿಲ್ಲ. ಈ ಪ್ರಸ್ತಾಪದ ಬಗ್ಗೆ ನಾವು ಯಾಲೆ ಕಾಲೇಜಿನ ಪ್ರೊ॥ ಫಿಷರ್ ಎಂಬುವವರನ್ನು ಉಲ್ಲೇಖಿಸುತ್ತೇವೆ. ಅವರು ಹೇಳುವುದೇನೆಂದರೆ – ದಿನಾಂಕಗಳನ್ನು ಸ್ಥಿರಪಡಿಸುವ ನಿಖರವಾದ ಪದ್ಧತಿಯನ್ನು ನಾವು ನಿಧಾನವಾಗಿ ತಲುಪಿದ್ದೇವೆ. ಶಕಗಳ (ಯುಗ) ಶೋಧನಾಕಾರ್ಯವನ್ನು ಇದುವರೆಗೆ ಮುಂದುವರೆಸುವುದು ಅಗತ್ಯವಾಗಿದೆ. ಘಟನೆಗಳ ದಿನಾಂಕಗಳನ್ನು ಗೊತ್ತುಪಡಿಸುವ ಅತ್ಯಂತ ಮುಂಚಿನ ನಿಶ್ಚಿತ ಸಮಯವು ನಬೊನಸ್ಸಾರ್ (Nabonassaar) ಎಂಬಾತನ ಕಾಲದಲ್ಲಿ ಅಂದರೆ ಕ್ರಿ.ಪೂ. 747ರಲ್ಲಿ ಬ್ಯಾಬಿಲೋನಿನಲ್ಲಿ ಸ್ಥಾಪಿತವಾಯಿತು. ಗ್ರೀಕರು (ಸುಮಾರು ಕ್ರಿ.ಪೂ. 300ರಿಂದ) ಮೊದಲ ದಾಖಲಾತಿಯಾದ ಕ್ರಿ.ಪೂ. 776ರಲ್ಲಿ ನಡೆದ ಒಲಂಪಿಕ್ಸ್‌ನಿಂದ ದಿನಾಂಕಗಳನ್ನು ಗೊತ್ತುಪಡಿಸುವುದನ್ನು ಪ್ರಾರಂಭಿಸಿದರು. ಈ ಒಲಂಪಿಕ್ ಕ್ರೀಡೆಗಳು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತವೆ. ಹೀಗಾಗಿ ಪ್ರತಿ ಒಲಂಪಿಕ್ ಪಂದ್ಯಾವಳಿಗಳ ನಡುವಿನ ಅವಧಿ ನಾಲ್ಕು ವರ್ಷಗಳು. ರೋಮನ್ನರು ರೋಮ್ ದೇಶವನ್ನು ಕಂಡು ಹಿಡಿದ ನಂತರದ ಕೆಲವು ಶತಮಾನಗಳಲ್ಲಿ ಅಲ್ಲದಿದ್ದರೂ ಆ ಘಟನೆಯಿಂದಲೇ ಅಂದರೆ ಕ್ರಿ.ಪೂ.753ರಿಂದಲೇ ದಿನಾಂಕಗಳನ್ನು ಗೊತ್ತುಪಡಿಸುವವರಾದರು.

ಹೆಚ್ಚಿನ ಸಾಕ್ಷಿಗಾಗಿ ಬಹಳ ಪುರಾತನವಾದ ಚರಿತ್ರೆಗಳೆಂದು ಹೇಳಿಕೊಳ್ಳುವವುಗಳು ಭ್ರಾಂತಿಕಾರಕವೂ ಮತ್ತು ಪೌರಾಣಿಕ ಸಂಪ್ರದಾಯಗಳಿಂದ ತುಂಬಿಹೋಗಿದ್ದು ಕಾಲಗಣನೆಯ ಮಾಹಿತಿಯನ್ನು ಅಮೌಲ್ಯಗೊಳಿಸಿವೆ ಮತ್ತು ಅವುಗಳು ಪರಿಗಣಿಸಲು ಅನರ್ಹವಾಗಿವೆಯೆಂದು ನಾವು 'ಕಾಲಗಣನೆ' ಎಂಬ ಶೀರ್ಷಿಕೆಯುಳ್ಳ ಅಮೇರಿಕದ ವಿಶ್ವಕೋಶದಿಂದ ಈ ಕೆಳಕಂಡಂತೆ ಉಲ್ಲೇಖಿಸುತ್ತೇವೆ:–

"ಪುರಾತನ ದೇಶಗಳ ಚರಿತ್ರೆಯು, ಇದರಲ್ಲಿ ಇಬ್ರಿಯರ ಪ್ರಕರಣವನ್ನು ಹೊರತುಪಡಿಸಿ ಸಾವಿರಾರು ಅಥವ ಮಿಲಿಯಾಂತರ ವರ್ಷಗಳ ಹಿಂದಿನ ಪೌರಾಣಿಕ ಕಾಲಗಳಿಗೆ ಹೋಗಿ; ದಾಖಲೆಗಳು ಚಾರಿತ್ರಿಕ ವಿಷಯಾಂಶವನ್ನು ವಹಿಸಿಕೊಂಡು ಪ್ರಾರಂಭಗೊಂಡ ಮೇಲೆಯೂ, ವ್ಯತ್ಯಾಸಗಳು ಬಹಳವಾಗಿರುತ್ತವೆ . . . . . . . ಅಸ್ಸೀರಿಯಾದ, ಬ್ಯಾಬಿಲೋನಿಯಾದ ಮತ್ತು ಐಗುಪ್ತದ ಶಾಸನಗಳು ಗತಿಸಿದ ಭಾಷೆಗಳಲ್ಲಿದ್ದು ಅವುಗಳ ಅಕ್ಷರಗಳು ಬಹಳ ಹಿಂದೆಯೇ ಅಪ್ರಚಲಿತವಾಗಿವೆ . . . . . ಗ್ರೀಕ್ ಮತ್ತು ರೋಮಿನ ದಿನಾಂಕಗಳು . . . . ಪ್ರಥಮ ಒಲಂಪಿಕ್ ಕ್ರೀಡೆಯಿಂದ ಅಂದರೆ ಕ್ರಿ.ಪೂ. 776ರಿಂದ ಮತ್ತು ರಾಯಭಾರಿ ಕಛೇರಿ ಸ್ಥಾಪನೆಗೊಂಡ ಕ್ರಿ.ಪೂ. 510ರಿಂದ ಪ್ರಮಾಣಿಕರಿಸಲ್ಪಟ್ಟಿವೆ. ಅದರ ಹಿಂದೆ ಅವುಗಳು ಪ್ರಧಾನವಾಗಿ ಕಂದಾಚಾರದವುಗಳು ಅಥವಾ ಕಲ್ಪಿತ ವಾದವುಗಳು. ಹೆರೋಡಾಟಸ್ (Herodotus) ಎಂಬುವನ ಕಾಲದ ಅಂದರೆ ಕ್ರಿ.ಪೂ. 450ಕ್ಕೆ ಅಥವಾ ಅದರ ಒಂದು ಇಲ್ಲವೆ ಎರಡು ಶತಮಾನಗಳ ಘಟನೆಗಳಿಗೆ ಮಾತ್ರವೇ ಮೌಲ್ಯವುಳ್ಳದ್ದಾಗಿದೆ.

ಕ್ಲಿಂಟನ್ ಎಂಬುವವರು ಮಾಡಿದ ಗ್ರೀಸಿಯನ್ ಕಾಲಗಣನೆಯಲ್ಲಿ ಮಾಡಿದ ಆನ್ವೇಷಣಾ ಕಾರ್ಯದಲ್ಲಿ (283) "ಇಬ್ರಿಯ ಗ್ರಂಥಗಳಲ್ಲಿರುವ ಚರಿತ್ರೆಯಲ್ಲಿ ಪ್ರಸ್ತುತಿ ಪಡಿಸಿರುವ ಸಂಗತಿಗಳು . . . . ಗ್ರೀಕಿನ ಹಿಂದಿನ ವಿವರಗಳಿಗೆ ವ್ಯತಿರಿಕ್ತವಾಗಿವೆ" ಎಂದಿದ್ದಾರೆ. ಎರಡನೆಯದರಲ್ಲಿ ನಾವು ಕವಿಗಳಿಂದ ಕಾಪಾಡಲ್ಪಟ್ಟಿರುವ ಕೆಲವೊಂದು ಅಸ್ಪಷ್ಟ ಸತ್ಯಸಂಗತಿಗಳನ್ನು ಅತ್ಯಂತ ಕಷ್ಟದಿಂದ ಕಂಡುಹಿಡಿಯುತ್ತೇವೆ. ಆ ಕವಿಗಳು ತಮ್ಮ ಕವಿತೆಗಳ ಮತ್ತು ಅದ್ಭುತ ಕಥೆಗಳ ಎಲ್ಲಾ ಸೊಬಗಿನಲ್ಲಿ ತಾವು ಮೌಖಿಕ ಸಂಪ್ರದಾಯಗಳಲ್ಲಿ ಕೇಳಿದಂಥವುಗಳನ್ನು ಮಾತ್ರವೇ ವರ್ಣಿಸಿದ್ದಾರೆ. ಇಬ್ರಿಯ ಜನಾಂಗದ ವಾರ್ಷಿಕ ವೃತ್ತಾಂತಗಳಲ್ಲಿ, ನಮಗೆ ಸಮಕಾಲೀನರು ತಮ್ಮ ಸ್ಫೂರ್ತಿಯ ಮಾರ್ಗದರ್ಶನದಲ್ಲಿ ಬರೆದ ಅಧಿಕೃತವಾದ ಹೇಳಿಕೆಗಳು ದೊರೆಯುತ್ತವೆ. ಅವರು ವಿತರಿಸಿದವುಗಳು ನಮಗೆ ದುಪ್ಪಟ್ಟು ಅನುಮೋದನೆಯಿಂದ ನಮಗೆ ದೊರೆಯುತ್ತವೆ. ಅವುಗಳು ಕೇವಲ ಮಾನವ ಸಾಕ್ಷಿಗಳಾಗಿ ದಾಖಲಾಗುವಲ್ಲಿ ಸತ್ಯವಾಗಿ ದೈವಿಕ ಸ್ಫೂರ್ತಿಯಿಂದ ಸಹಾಯ ಹೊಂದಿವೆ ಮತ್ತು ಅವುಗಳ ಸಾಕ್ಷ್ಯಗಳು ನ್ಯಾಯಸಮ್ಮತವಾಗಿವೆ"

ದೇವರು ನಮಗೆ ಒದಗಿಸಿರುವ ಮೊದಲನೆಯ ಮೂರು ಸಾವಿರ ವರ್ಷಗಳ ಐತಿಹಾಸಿಕ ಗ್ರಂಥವಾದ ಸತ್ಯವೇದವು ಮಾತ್ರವೇ ಚರಿತ್ರೆಯಲ್ಲಿ, ಸ್ಮಾರಕಗಳಲ್ಲಿ ಮತ್ತು ಶಾಸನಗಳಲ್ಲಿ ಹೇಳಲ್ಪಟ್ಟ ಮೊದಲ ಹೆಸರಾದ ಆದಾಮನಿಂದ ಪ್ರಾರಂಭವಾಗುವ ಏಕೈಕ ಕೃತಿಯಾಗಿದೆ. ಆತನ ಹೆಸರು ಸೃಷ್ಟಿಯ ಮತ್ತು ಮರಣದ ಸಮಯಗಳಲ್ಲಿ ದಾಖಲಾಗಿದೆ. ಆತನಿಂದ ಆತನ ಸಂತತಿಯವರ ಹೆಸರು ಮತ್ತು ಜೀವಿತ ವರ್ಷದೊಂದಿಗೆ ಅನುಕ್ರಮದಿಂದ ಬರುವ ಕೊಂಡಿಗಳೊಡನೆ ಸುಮಾರು ನಾಲ್ಕು ಸಾವಿರ

ವರ್ಷಗಳವರೆಗೂ ಕಂಡುಹಿಡಿಯಬಹುದು. ಇದು ನಮಗೆ ಈ ಸಂಬಂಧಿತವಾದ ಸ್ಪಷ್ಟವಾದ ಚರಿತ್ರೆಯನ್ನು ಜಾತ್ಯಾತೀತ ಇತಿಹಾಸದವರೆಗೂ ಉತ್ತಮವಾಗಿ ಸಿದ್ಧಾಂತಪಡಿಸುತ್ತದೆ. ನಾವು ನೋಡುವಂತೆ, ಸತ್ಯವೇದದ ದಾಖಲೆಯು ಕ್ರಿಪೂ 536ರ ವರೆಗೆ ಅಂದರೆ ಕೋರೇಷ (Cyrus) ಎಂಬಾತನ ಆಳ್ವಿಕೆಯ ಮೊದಲನೆಯ ವರ್ಷದವರೆಗೂ ವಿಸ್ತಾರಗೊಂಡಿದೆ. ಇದು ಉತ್ತಮವಾಗಿ ಸ್ಥಿರಪಡಿಸಿದ ಮತ್ತು ಸಾಮಾನ್ಯವಾಗಿ ಒಪ್ಪಿತವಾಗುವ ದಿನಾಂಕವಾಗಿದೆ. ಎಲ್ಲಿವರೆಗೆ ಲೌಕಿಕ ಚರಿತ್ರೆಯಲ್ಲಿ ಭರವಸೆ ಇಡಲಾಗುತ್ತದೋ ಅಲ್ಲಿ ಸತ್ಯವೇದದ ಕಾಲಗಣನೆಗಳ ಎಳೆಯು ಕೈಬಿಡಲ್ಪಡುತ್ತದೆ. ದೇವರು ಈ ರೀತಿಯಲ್ಲಿ ತನ್ನ ಮಕ್ಕಳಿಗೆ ಸ್ಪಷ್ಟವಾದ ಸಂಬಂಧಿತವಾದ ದಾಖಲೆಯನ್ನು ಪ್ರಸ್ತುತ ಸಮಯದವರೆಗೂ ಒದಗಿಸಿಕೊಟ್ಟಿದ್ದಾನೆ. ಸತ್ಯವೇದವು ಅದರ ಪ್ರವಾದನೆಗಳಿಂದಲೂ, ಚರಿತ್ರೆಗಳನ್ನು ಪೂರಕಗೊಳಿಸುತ್ತದೆ. ಏಳನೆಯ ಸಹಸ್ರ ವರ್ಷದ ಅಂತ್ಯದಲ್ಲಿ ನಡೆಯುವ "ಸಮಸ್ತವನ್ನೂ ಸರಿಪಡಿಸುವ ಕಾಲ ಪೂರ್ಣಗೊಳಿಸುವಿಕೆಯವರೆಗೂ, ಹೊಸಯುಗದಲ್ಲಿಂದ ನಂತರ ನಿತ್ಯನಿರಂತರವಾದ ಆಶೀರ್ವಾದದ ದಿನಾಂಕವು ಆರಂಭವಾಗುವವರೆಗೂ ಸತ್ಯವೇದದಲ್ಲಿ ಕೊಡಲ್ಪಟ್ಟಿದೆ. ಈ ಕಾರಣದಿಂದ ಸತ್ಯವೇದವು ಮಾನವ ಚರಿತ್ರೆಯ ಸಮಗ್ರ ದೃಷ್ಟಿಕೋನವನ್ನು ಒದಗಿಸುವ ಪ್ರಪಂಚದ ಏಕೈಕ ದಾಖಲೆಯಾಗಿದೆ. ಅದು ನಮಗೆ ಆದಿಕಾಂಡದಲ್ಲಿ ಪರದೈಸನ್ನು ಕಳಕೊಂಡಾಗಿನಿಂದ ಪ್ರಕಟನೆಯಲ್ಲಿನ ಪರದೈಸನ್ನು ಪುನರ್‌ವಶಪಡಿಸುವವರೆಗೆ ನಮ್ಮನ್ನು ಕೊಂಡೊಯ್ದು ಮನುಷ್ಯಕುಲವನ್ನು ನಿತ್ಯನಿರಂತರ ಮಾಡುವ ಮಾರ್ಗಕ್ಕೆ ನಡೆಸುತ್ತದೆ. ಇತಿಹಾಸ ಮತ್ತು ಪ್ರವಾದನೆಗಳನ್ನು ಒಟ್ಟಾಗಿ ತೆಗೆದುಕೊಂಡು ಸತ್ಯವೇದವು ಸೃಷ್ಟಿಯಿಂದ ಪತನದವರೆಗೆ, ಪತನದಿಂದ ಸಂಧಾನ ಹಾಗೂ ಪುನಃವಶದವರೆಗೆ ಒಂದು ವಿಹಂಗಮ ನೋಟವನ್ನು ಒದಗಿಸುತ್ತದೆ. ಹೀಗಾಗಿ ಸತ್ಯವೇದವು ಸಮಗ್ರ ಚರಿತ್ರೆಯ ಒಂದು ನಕ್ಷೆಯಾಗಿದೆ. ಅದಲ್ಲದೆ. ಖರೆಯಾಗಿ ಹೇಳಿರುವಂತೆ "ಇತಿಹಾಸವು ಹೇಗೆ ನದಿಯು ಅರಿಯದ ಮೂಲದಿಂದ ಹರಿದು ಅರಿಯದ ಸಮುದ್ರಕ್ಕೆ ಹರಿಯುವಂತಿರುತ್ತದೆ" .ಆದರೆ ಅದರ ಮಾರ್ಗದರ್ಶನದಲ್ಲಿ ನಾವು ಈ ನದಿಗಳನ್ನು ಅವುಗಳ ಉಗಮಗಳವರೆಗೆ ಕಂಡುಹಿಡಿಯಬಹುದು ಮತ್ತು ಅವುಗಳೂ ನಿತ್ಯತೆಯ ಸಾಗರದಲ್ಲಿ ಭವ್ಯವಾಗಿ ಅಂತ್ಯಗೊಳ್ಳುವುದನ್ನು ನೋಡಬಹುದು.

ಆದುದರಿಂದ, ಸತ್ಯವೇದ ಒಂದರಲ್ಲಿಯೇ ನಾವು ಸಾಮರಸ್ಯವಿಲ್ಲದ ಅವಧಿಗಳ ದಾಖಲೆಗಳನ್ನು, ಕಾಲಗಣನೆಯ ಅಸಾಮರಸ್ಯತೆಗಳನ್ನು ಸರಿಪಡಿಸುವುದನ್ನು ನಿರೀಕ್ಷಿಸಬಹುದು, ಇವುಗಳು ಮಾನವ ಚರಿತ್ರೆಯ ವಾರ್ಷಿಕ ವೃತ್ತಾಂತಗಳನ್ನು ಮೊಟ್ಟಮೊದಲ ದೃಷ್ಟಿಯಲ್ಲಿಯೇ ಒಂದರೊಂದಿಗೆ ಮತ್ತು ಪಕೃತಿಯ ಅವಧಿಗಳಲ್ಲಿ ಸಾಮರಸ್ಯವಿರುವಂತೆ ಪ್ರಸ್ತುತಿಪಡಿಸುತ್ತದೆ.

"ಮಾನವ ಸೃಷ್ಟಿಯು ಎಷ್ಟು ವರ್ಷಗಳ ಹಿಂದೆ ನೆರವೇರಿತು?" ಎಂಬ ಪ್ರಶ್ನೆಯಿಂದ ಪ್ರಾರಂಭಿಸುವಲ್ಲಿ ನಾವು ಪ್ರವಾದನೆಗಳನ್ನು ನೀಡುವವನು ಮತ್ತು ಅವುಗಳನ್ನು ಅಂತ್ಯವಾಗುವ ಸಮಯವನ್ನು ಅರ್ಥವಾಗುವಂತೆ ಹೇಳಿದಾತನು ಆ ಪ್ರವಾದನೆಗಳನ್ನು ಯಥಾವತ್ತಾಗಿ ಗೊತ್ತುಮಾಡುವ ಮಾಹಿತಿಯನ್ನೂ ಒದಗಿಸುತ್ತಾನೆ ಎಂದು ವಿಶ್ವಾಸವಿಡಬೇಕು ಹಾಗೂ ವಿಶ್ವಾಸವುಳ್ಳವರಾಗಿದ್ದೇವೆ. ಹೇಗಾದರೂ, ಈ ಸಂಗತಿಗಳನ್ನು ಕೇವಲ ಮೇಲ್ನೋಟದಿಂದ ಮೇಲೆ ಓದುವವರಿಗೆ ಅಥವಾ ಸತ್ಯವನ್ನು ಅನುಮಾನಿಸುವ ಅಪ್ರಮಾಣಿಕರಿಗೆ ಮನದಟ್ಟಾಗುವಂತೆ ಸರಳವಾಗಿ ಹೇಳಲ್ಪಟ್ಟವುಗಳೆಂದು ಯಾರಾದರೂ ನಿರೀಕ್ಷಿಸುವವರಾದರೆ ಅವರು ಆಶಾಭಂಗಪಡುವರು. ದೇವರ ಸಮಯಗಳು ಮತ್ತು ಕಾಲಗಳು ಈಗ ಮನದಟ್ಟಾಗುವ ರೀತಿಯಲ್ಲಿಯೇ ಕೊಡಲ್ಪಟ್ಟಿವೆಯಾದರೂ ಅದು ದೇವರ ಪರಿಚಯ ವುಳ್ಳವರಿಗೆ ಮಾತ್ರ. ಅವರು ಮಾತ್ರವೇ ಆತನ ಗುಣಲಕ್ಷಣಗಳ ಪದ್ಧತಿಗಳನ್ನು ಗ್ರಹಿಸುವರು. ಇದಕ್ಕೆ ಕೊಡಲ್ಪಟ್ಟ ಸಾಕ್ಷ್ಯವೆಂದರೆ– "ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು" (2 ತಿಮೋ. 3:17). ಈ ಪ್ರವೀಣರುಗಳಿಗೆ ತಮ್ಮ ಪರಲೋಕದ ತಂದೆಯು ಮುನ್ನಡೆಸುವ ಎಲ್ಲಾ ಹಾದಿಗಳಲ್ಲಿ ನೋಡುವವರಾಗಿ ನಡೆಯದೆ ನಂಬಿಕೆಯಿಂದಲೇ ನಡೆಯಬೇಕೆಂಬುದು ಅವರಿಗೆ ತಿಳಿದದೆ. ಈ ರೀತಿಯಾಗಿ ನಡೆಯಲು ಸಿದ್ಧರಾಗುವಂತೆ ಎಲ್ಲರ ಗಮನಕ್ಕೆ ತರಲು ನಾವು ಅಪೇಕ್ಷಿಸುವುದೇನೆಂದರೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ದೇವರ ವಾಕ್ಯದ ದೃಢವಾದ ಹೇಳಿಕೆಗಳು ಸಮಂಜಸವಾದ ವಿಶ್ವಾಸಕ್ಕೆ ನಿಖರವಾದ ಬುನಾದಿಯಾಗಿದೆ ಎಂಬುದೇ.

ನಾವಿಲ್ಲಿ ಸೆಪ್ಟ್ಯುಆಜೆಂಟ್ (Septuagint) (ಅಂದರೆ ಕ್ರಿ.ಪೂ. 270ರಲ್ಲಿ 72 ಮಂದಿ ಭಾಷಾಂತರಕಾರರಿಂದ ರಚಿಸಲ್ಪಟ್ಟಿತೆಂದು ಹೇಳಲಾದ ಬೈಬಲ್‌ನ ಹಳೆಯ ಒಡಂಬಡಿಕೆಯ ಗ್ರೀಕ ಭಾಷಾಂತರ) ಮತ್ತು ಹಳೆ ಒಡಂಬಡಿಕೆಯಲ್ಲಿನ ಇಬ್ರಿಯ ಗ್ರಂಥಗಳ ಅರ್ಹತೆಗಳ ಹಾಗೂ ಅದರಲ್ಲಿರುವ ಕಾಲಗಣನೆಯ ಮಾಹಿತಿಯ ವ್ಯತ್ಯಾಸ ಮುಂತಾದವುಗಳನ್ನು ಕುರಿತು ಚರ್ಚಿಸುವುದಿಲ್ಲ, ಆದರೆ ಮೊದಲನೆಯದು ಐಗುಪ್ತರ ಅನುವಾದವಾಗಿದೆ ಮತ್ತು ಎರಡನೆಯದು ಇಬ್ರಿಯ ದಾಖಲೆಗಳ ಮೂಲ ಸ್ವರೂಪವಾಗಿದೆ ಎಂಬ ಓದುಗರ ಹೇಳಿಕೆಯನ್ನು ನಾವು ನಂಬುತ್ತೇವೆ ಮತ್ತು ನಾವಾಗಿಯೇ ತೃಪ್ತಿಗೊಳ್ಳುತ್ತೇವೆ; ಈ ಸತ್ಯಗಳನ್ನು ಇಬ್ರಿಯರು ಸುಮಾರಾಗಿ ಅಂಧವಿಶ್ವಾಸವುಳ್ಳ

ಶ್ರದ್ಧೆಯಿಂದ ಆ ಪವಿತ್ರ ಬರಹಗಳ ಸಂಕ್ಷಿಪ್ತ ಬರಹದ ಲವಶೇಷವನ್ನೂ ಬಿಡದೆ ಕಾಪಾಡಿಕೊಂಡಿದ್ದಾರೆ ಎಂಬುದು ಇವುಗಳು ಇಬ್ರಿಯ ಮೂಲದ್ದೆಂಬುದಕ್ಕೆ ಬಲಯುತವಾದ ಸಾಕ್ಷಿಯಾಗಿದೆ. ವಿದ್ವಾಂಸರುಗಳಿಂದ ಇದರ ಸ್ವೀಕಾರವು ಸರ್ವೇ ಸಾಮಾನ್ಯವಾಗಿದೆ ಮತ್ತು ಈ ಸಂಪುಟದಲ್ಲಿ ನಾವು ಅದರಲ್ಲಿನ ದಿನಾಂಕ ಮುಂತಾದವುಗಳನ್ನು ಅನುಸರಿಸುತ್ತೇವೆ.

ಇಲ್ಲಿ ನಾವು ಆದಾಮನ ಸೃಷ್ಟಿ ಕಾಲದಿಂದ ಕ್ರಿಸ್ತಶಕ 1873 ರವರೆಗೆ ಆರು ಸಾವಿರ ವರ್ಷಗಳು ಎಂಬ ಸಾಕ್ಷ್ಯವನ್ನು ನೀಡುತ್ತೇವೆ. ಏಳನೆಯ ಸಹಸ್ರವರ್ಷವು ಕ್ರಿಸ್ತನ ಆಳ್ವಿಕೆಯ ಕಾಲದ ಪ್ರಾರಂಭ, ಮಹಾಸಬ್ಬತ್ತು ಈ ಲೋಕದ ಪುನರ್‌ವಶವು ನಡೆಯುವ ದಿನ ಎಂಬುದಕ್ಕೆ ಸತ್ಯವೇದದಲ್ಲಿ ಯಾವುದೇ ನೇರವಾದ ಹೇಳಿಕೆ ಇಲ್ಲವಾದರೂ, ಸತ್ಯವೇದದ ಗೌರವಾನ್ವಿತ ಸಂಪ್ರದಾಯಕ್ಕೆ ಯಾವುದೇ ಸಮಂಜಸವಾದ ಬುನಾದಿ ಇಲ್ಲದೆ ಇಲ್ಲ. ಸಾಂಕೇತಿಕ ಜನರಾದ ಇಸ್ರಾಯೇಲ್ಯರಿಗೆ ನೀಡಲ್ಪಟ್ಟ ಧರ್ಮಶಾಸ್ತ್ರದಲ್ಲಿ ಪ್ರಯಾಸ ಮತ್ತು ಪರಿಶ್ರಮಗಳ ಆರು ದಿನಗಳ ನಂತರ ದಣಿವಾರಿಸಿಕೊಳ್ಳುವಂತೆಯೂ ಕೆಲಸದಿಂದ ವಿಶ್ರಮಿಸಿ ಕೊಳ್ಳುವಂತೆಯೂ ಒಂದು ದಿನ ಅನುಸರಿಸಲಾಗುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಆರು ಸಹಸ್ರ ವರ್ಷಗಳಲ್ಲಿ ಸಮಸ್ತ ಸೃಷ್ಟಿಯು ಶ್ರಮಪಟ್ಟು ದುಡಿದು, ಪಾಪದ ದಾಸತ್ವ ಮತ್ತು ಮರಣದ ತೊಡಕಿನಿಂದ ತಮ್ಮನ್ನು ಬಿಡಿಸಿಕೊಳ್ಳುವಂತೆ ವೃಥಾ ಪ್ರಯಾಸಪಟ್ಟು ವೇದನೆಪಟ್ಟಿತು (ರೋಮಾ. 8:22) ಮತ್ತು ಭವ್ಯವಾದ ಸಹಸ್ರಮಾನ ದಿನದಂದು ಕಷ್ಟಪಟ್ಟು ಭಾರ ಹೊತ್ತವರೆಲ್ಲರೂ ಕುರುಬನೂ, ಆತ್ಮಗಳ ಪ್ರಧಾನ ಗುರುವೂ ಆದ ಕ್ರಿಸ್ತನ ಬಳಿಗೆ ಬಂದು ಆತನ ಮೂಲಕ ವಿಶ್ರಾಂತಿಯನ್ನೂ, ಚೈತನ್ಯವನ್ನೂ ಮತ್ತು ಪುನಃವಶವನ್ನೂ ಪಡಕೊಳ್ಳುವರು. ಇದರಲ್ಲಿ ಆತನ ಅಮೂಲ್ಯ ರಕ್ತದ ಅರ್ಹತೆಯ ಮೂಲಕ, ಅವರು ಪಶ್ಚಾತ್ತಾಪವನ್ನೂ, ಪಾಪಪರಿಹಾರವನ್ನೂ ಕಂಡು ಕೊಳ್ಳಬಹುದು. ಸಾಂಕೇತಿಕ ಆ ಏಳನೆಯ ದಿನದಲ್ಲಿ ಆತನು ಬಲಹೀನ ಮನುಷ್ಯರನ್ನು "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ" ಎಂದು ವಿಚಾರಿಸುತ್ತಾನೆ. ಮತ್ತು ಅವನ ವಿಶ್ವಾಸ ಮತ್ತು ವಿಧೇಯತೆಯ ಉತ್ತರಕ್ಕೆ ಅನುಸಾರವಾಗಿ ಅವನಿಗೆ ಶಕ್ತಿಕೊಟ್ಟು ಅವನು ತಮ್ಮ ಹಾಸಿಗೆಗಳನ್ನು ಎತ್ತಿಕೊಂಡು ನಡೆಯುವಂತೆ ಮಾಡುತ್ತಾನೆ (ಯೋಹಾನ 5:6–9; ಮತ್ತಾಯ 12;10–13 ಯೋಹಾನ 7:23; ಲೂಕ: 13; 11–16: 14:1–5). ಆದುದರಿಂದ, ಪ್ರತಿ ಸಾಂಕೇತಿಕ ಸಬ್ಬತ್ತಿನಂದು. ಸಹಸ್ರಮಾನ ಕಾಲದಲ್ಲಿ, ಸಮಸ್ತ ಲೋಕಕ್ಕೆ "ಯಾರೇ ಆಗಲಿ, ಅವರು ವಿಶ್ವಾಸ ಮತ್ತು ವಿಧೇಯತೆಯಲ್ಲಿ ಹೆಜ್ಜೆ ಇಡುವವರಾದರೆ ನಿತ್ಯ ನಿರಂತರವಾದ ಜೀವ ಮತ್ತು ಆರೋಗ್ಯಪಡಕೊಳ್ಳಬಹುದು" ಎಂಬ ಪ್ರಕಟನಾ ಘೋಷಣೆಯಾಗುತ್ತದೆ.

ನಾವು ಈಗಾಗಲೇ ಗಮನಿಸಿದ ಸತ್ಯವನ್ನು ಕಡೆಗಣಿಸಬಾರದು (ಸಂಪುಟ 1: ಅಧ್ಯಾಯ 8). ಅದರಲ್ಲಿರುವಂತೆ ದಿನ ಎಂಬುದು ಅನಿಶ್ಚಿತ, ಕೇವಲ ದೀರ್ಘ ಅಥವಾ ಅಲ್ಪಕಾಲೀನ ಸಮಯದ ಅವಧಿಯನ್ನಷ್ಟೇ ಸೂಚಿಸುತ್ತದೆ. ಅಪೋಸ್ತಲನಾದ ಪೇತ್ರನು ತಿಳಿಸುವಂತೆ ಈ ಲೋಕದ ಇತಿಹಾಸದ ಏಳು ಸಹಸ್ರ ವರ್ಷಗಳ ಅವಧಿಯು ದೇವರ ಎಣಿಕೆಯಲ್ಲಿ ಏಳನೆಯ ದಿನವಾಗಿದೆ ಎಂಬುದನ್ನು **"ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ, ಸಾವಿರ ವರ್ಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮರೆಯಬೇಡಿರಿ. . . ಕರ್ತನ ದಿನವು ಬರುತ್ತದೆ"** (2 ಪೇತ್ರ : 3:8,10) ಎಂಬಿತ್ಯಾದಿ ಮಾತುಗಳಲ್ಲಿ ತಿಳಿಸಿದ್ದಾನೆ.

ಹಾಗಾದರೆ, ಈ ಲೋಕದ ಏಳು ಸಹಸ್ರ ವರ್ಷಗಳ ಇತಿಹಾಸವು ಒಂದು ಯುಗದ ಅವಧಿಯಾಗಿದ್ದು, ಕ್ರಿಸ್ತನ ಆಳ್ವಿಕೆಯ ಪ್ರಾರಂಭವನ್ನು ವಿಶೇಷವಾಗಿ ನಾವು ಗಮನಿಸುವುದಾದರೆ, ಅದು ಕ್ರಿಸ್ತಶಕ 1873ರಲ್ಲಿ ಪ್ರಾರಂಭವಾಯಿತು ಎಂದು ತೋರಿಸುವಲ್ಲಿ ನಾವು ಈಗಾಗಲೇ ಅದರಲ್ಲಿದ್ದೇವೆ ಎಂದು ರುಜುವಾತು ಪಡಿಸುತ್ತೇವೆ. ಇದು ನಾವು ಹಿಂದಿನ ಸಂಪುಟಗಳಲ್ಲಿ ಗಮನಿಸಿರುವಂತೆ ಪರಿಶುದ್ಧ ಬರಹಗಳು ಸಹಸ್ರಮಾನದ ಉದಯ ಅಥವಾ ಕರ್ತನ ದಿನವು ಈ ಲೋಕದವರ ಮೇಲೆ ಮತ್ತು ನಾಮಾಂಕಿತ ಕ್ರೈಸ್ತ ಸಭೆಯ ಮೇಲೆ ಅಂಧಕಾರವೂ ಉಗ್ರ ಬಿರುಗಾಳಿಯೂ ಅವರಿಸಿ, ಬಹಳಷ್ಟು ಸಂಕಟಗಳನ್ನುಂಟುಮಾಡುತ್ತದೆ ಆದರೆ ಈ ಉದಯದ ಮೊದಲ ಪ್ರಕಾಶವು ಭಕ್ತ ಜನರಿಗೆ ಪೂರ್ಣವಾದ ನೆಮ್ಮದಿ ಮತ್ತು ಉಲ್ಲಾಸವನ್ನುಂಟು ಮಾಡುತ್ತದೆ ಮತ್ತು ಈ ನೆಮ್ಮದಿಯನ್ನು ಅವರು ಸುವಾರ್ತೆಗಳಲ್ಲಿರುವ ನಿರೀಕ್ಷೆಯ ಮೂಲಕ ಸೆಳೆದುಕೊಳ್ಳುತ್ತಾರೆ ಮತ್ತು ಇದು ಒಂದು ಲಂಗರಿನಂತಿದ್ದು, ಕಷ್ಟ ಸಮಯವನ್ನು ಮೀರಿ ಪ್ರವೇಶಿಸುತ್ತದೆ ಮತ್ತು ಸಹಸ್ರಮಾನದ ಉದಯ ಮತ್ತು ಭವ್ಯತೆಯಲ್ಲಿ ಭದ್ರಗೊಳಿಸುತ್ತದೆ ಎಂಬ ಸಂಗತಿಗಳನ್ನು ನಮ್ಮ ಮನಸ್ಸಿಗೆ ತರುತ್ತದೆ. – ಅವರುಗಳು ಕಷ್ಟದ ಸಮಯದ ಆಚೆಯಲ್ಲಿ ಕ್ರಿಸ್ತನ ಭವ್ಯವಾದ ಆಳ್ವಿಕೆ ಮತ್ತು ವಾಗ್ದತ್ತ ಆಶೀರ್ವಾದಗಳನ್ನು ಕಂಡುಕೊಳ್ಳುತ್ತಾರೆ.

ಇಂದಿನ ಲೋಕದ ಸಾಮಾನ್ಯ ಸ್ಥಿತಿಯು, ಮತ್ತು ಕ್ರಿಸ್ತಶಕ 1873ರಂದೀಚೆಗೆ ಸೋಷಿಯಲಿಸಂ, ನಿಹಿಲಿಸಂ ಮತ್ತು ಕಮ್ಯುನಿಸಂ (Socialism, Nihilism and Communism) ಕ್ಷೇತ್ರಗಳಲ್ಲಿ ನಡೆದ ತ್ವರಿತವಾದ ಬೆಳವಣಿಗೆಗಳಿಂದಾಗಿ ಮುಚ್ಚುಮರೆಯಿಲ್ಲದೆ ಅವುಗಳ ಉದ್ದೇಶವು ಇದ್ದ ಅಧಿಕಾರವನ್ನು ಉರುಳಿಸಿ, ಲೋಕದ ಸಂಪತ್ತನ್ನು ಪುನರ್‌ಹಂಚಿಕೆಮಾಡುವುದಾಗಿದ್ದು ನಿಶ್ಚಿತವಾಗಿಯೂ ನಾವು ನಿರೀಕ್ಷಿಸುವವುಗಳ

ಸಾಮರಸ್ಯದಿಂದ ಹೊರಗಾಗಿರುವುದಿಲ್ಲ. ಆದಾಗ್ಯೂ, ಕೆಲವು ವಿಷಯಗಳಲ್ಲಿ ಈ ಸಂಗತಿಗಳು ಕಾನೂನು, ನೆಮ್ಮದಿ ಮತ್ತು ಶಾಂತಿ ಇವುಗಳನ್ನು ಪ್ರೀತಿಸುವವರಿಂದ ನಿಷೇಧ ಹೊಂದಬಹುದಾಗಿದೆ. ಬರಲಿರುವ ಅರಾಜಕ ಸ್ಥಿತಿ ಮತ್ತು ತೊಂದರೆಗಳು ದೇವರ ಕಾರ್ಯಭಾರವಾಗಿದ್ದು ಇನ್ನೂ ಸಂಪೂರ್ಣವಾದ ಮತ್ತು ದೀರ್ಘಕಾಲ ನೆಲೆಸುವ ಶಾಂತಿ ನೆಮ್ಮದಿಯುಳ್ಳ ಕಾನೂನು ಪರಿಸ್ಥಿತಿಯನ್ನು ಸ್ಥಾಪಿಸಬಲ್ಲದು, ಮತ್ತು ಅವರು ಸಾಗುತ್ತಿರುವ ಮಿತಿಮೀರಿದ ಭಯದ ವಾತಾವಾರಣದಿಂದ ಬಿಡುಗಡೆ ಹೊಂದುವವರಾಗಿರುತ್ತಾರೆ ಎಂದು ನೋಡಬಲ್ಲರು.

ಇದು ಕಾಲಗಣನೆಯ ಏಕೈಕ ಮೌಲ್ಯವಾಗಿರುವ ಏಳನೆಯ ಯುಗಾರಂಭ ಅಥವಾ ಸಹಸ್ರಮಾನವನ್ನು ಸೂಚಿಸುತ್ತಿಲ್ಲ: ಈ ವೇಳೆಯಲ್ಲಿ ನಾವು ಕಾಲಗಣನೆಗಳಿಂದ ಸ್ವತಂತ್ರವಾಗಿರುವ ಪ್ರವಾದನೆಯ ಕೆಲವಾರು ಸಾಲುಗಳನ್ನು ವಿಶೇಷವಾಗಿ ಪ್ರಸ್ತುತಿಪಡಿಸುತ್ತೇವೆ, ಈ ಪ್ರವಾದನಾ ಸಾಲುಗಳನ್ನು ಸ್ಥಿರಪಡಿಸಲು ಇದೊಂದು ಮಾನದಂಡವಾಗಿದೆ. ಪ್ರವಾದನಾ ಬೋಧನೆಗಳ ಬಗ್ಗೆ ಇರುವ ಈ ಎರಡು ವರ್ಗಗಳ ನಡುವಣ ಸಮರ್ಪಕ ಒಪ್ಪಂದವು ಕೆಲವು ಕಾಲಗಣನೆಗಳ ಮೇಲೆ ನಿರ್ಭರವೂ, ಮತ್ತೆ ಕೆಲವು ಅವುಗಳಿಂದ ಸ್ವಂತಂತ್ರವಾದವೂ ಆಗಿವೆ ಎಂಬುದಕ್ಕೂ ಹಾಗೂ ಈ ಅನ್ವಯಗಳ ಯಥಾರ್ಥತೆಗೆ ಮಾತ್ರವಲ್ಲ, ಈ ಸಾಮರಸ್ಯತೆಯನ್ನು ತೋರಿಸುವ ಕಾಲಗಣನೆಗಳ ಯಥಾರ್ಥತೆಗೂ ಸಹ ಬಲವಾದ ಸಾಕ್ಷ್ಯವಾಗಿದೆ; ಅದೇ ತತ್ವದ ಮೇಲೆ, ತೆರೆಯಲು ಕಷ್ಟಕರವೆಂದು ಕಂಡು ಬರುವ ಖಜಾನೆಯನ್ನು ತೆರೆಯಬಲ್ಲ ಆ ಒಂದು ಕೀಲಿಕೈಯು ಸ್ಪಷ್ಟವಾಗಿ ಆ ಖಜಾನೆಯ ನಿಜವಾದ ಕೀಲಿಕೈಯಾಗಿದೆ. ಈ ಕೆಳಗೆ ನೀಡಿರುವ ಕಾಲಗಣನೆಗಳು ಕ್ರಿಸ್ತನ ರಾಜ್ಯಕ್ಕೆ ಸಂಬಂಧಿಸಿದ ಹಲವಾರು ಪ್ರವಾದನಾ ಹೇಳಿಕೆಗಳ ಸಂಬಂಧಿತ ಕ್ರಮ ಮತ್ತು ಸಮಯವನ್ನು ತಿಳಿಸುವುದರ ಮೂಲಕ ಅವುಗಳ ಸ್ಥಿರತೆಯನ್ನು ಸಮರಸಗೊಳಿಸುತ್ತವೆ. ಕಾಲಗಣನೆಯು ಕಾಂಡ ಇಲ್ಲವೆ ಕೈಹಿಡಿಯಂತಿದ್ದು ಅದರಿಂದ ಎಲ್ಲಾ ಪ್ರವಾದನಾ ಸಮಯದ ಸಾಕ್ಷ್ಯಗಳನ್ನು ಕೀಲಿಯ ಗುರುತುಗಳು ಅಥವಾ ಬೀಗದ ಫಿರತಿಗಳಂತೆ ಒಟ್ಟಾಗಿ ಹಿಡಿಯಲ್ಪಟ್ಟಿದ್ದು ತನ್ನ ಕಾರ್ಯಾಚರಣೆ ಮಾಡುವುದಾಗಿದೆ.

## A.M. 6000 ವರ್ಷಗಳವರೆಗಿನ ಕಾಲಗಣನೆಗಳ ಸಂಕ್ಷಿಪ್ತ ಹೇಳಿಕೆ

## A condensed Statement of Chronology to the Year A.M. 6000

ಕಾಲಗಣನೆಗಳ ಅವಧಿಯ ಬಗ್ಗೆ ಇರುವ ಈ ಕೆಳಗಣ ಸಂಕ್ಷಿಪ್ತ ಹೇಳಿಕೆಯನ್ನು "ಸತ್ಯವೇದದ ಕಾಲಗಣನೆಗಳು" ಎಂದು ಯುಕ್ತವಾಗಿ ಹೇಳಬಹುದು. ಯಾಕೆಂದರೆ ಸತ್ಯವೇದದ ದಾಖಲೆಗಳು ಮಾತ್ರವೇ ಕೋರೇಷನ ಪ್ರಥಮ ವರ್ಷ ಕ್ರಿ.ಪೂ. 536ರ ವರೆಗೆ ಅನುಸರಿಸಲಾಗುತ್ತಿದ್ದ ಈ ದಿನಾಂಕವನ್ನು ಉತ್ತಮವಾಗಿ ಪ್ರಮಾಣೀಕರಿಸಿ ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರುಗಳು ಒಪ್ಪಿಕೊಂಡಿದ್ದಾರೆ. ಇಲ್ಲಿಗೆ ಸತ್ಯವೇದದ ಕಾಲಗಣನೆಗಳ ಎಳೆಯು ಮುಕ್ತಾಯಗೊಳ್ಳುತ್ತದೆ. ಈ ಅವಧಿಯ ಸ್ವಲ್ಪ ಆಚೆಗೆ ಲೌಕಿಕ ಚರಿತ್ರೆಯು ಪ್ರಾರಂಭಗೊಂಡು ಅದು ನಂಬಲರ್ಹವಾಗಿದೆ. ಇದು ತನ್ನಷ್ಟಕ್ಕೆ ತಾನೇ, ದೈವಿಕ ನಿದರ್ಶನ ಮತ್ತು ಮೇಲ್ವಿಚಾರಣೆ ಇರುವ ಪುರಾವೆಯಾಗಿ, ಎಲ್ಲಿಯವರೆಗೆ ನಮಗೆ ಸಹಾಯ ಮಾಡಿಕೊಳ್ಳಲಾರೆವೋ ಅಲ್ಲಿಯವರೆಗೆ ಗುರುತಿಸಲ್ಪಡುತ್ತದೆ.

ನಾವು ನಿರ್ದಿಷ್ಟವಾಗಿ ಈ ಪ್ರತಿಯೊಂದು ಅವಧಿಯನ್ನು ಪರಿಗಣಿಸುವಾಗ, ಓದುಗನು ಈ

### ಆದಾಮನ ಸೃಷ್ಟಿಯಿಂದೀಚೆಗೆ

### From the Creation of Adam

| | | |
|---|---|---|
| ಜಲಪ್ರಳಯವು ಅಂತ್ಯಗೊಳ್ಳುವವರೆಗೆ | ....................... | 1656 ವರ್ಷಗಳು |
| ಅಲ್ಲಿಂದ ಅಬ್ರಹಾಮನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವವರೆಗೆ | ....................... | 427 ವರ್ಷಗಳು |
| ಅಲ್ಲಿಂದ ದೇಶಾಂತರ ಪ್ರಯಾಣ ಮತ್ತು ಧರ್ಮಶಾಸ್ತ್ರವನ್ನು ನೀಡುವವರೆಗೆ | ....................... | 430 ವರ್ಷಗಳು |
| ಅಲ್ಲಿಂದ ಕಾನಾನ್‌ನ ಪ್ರದೇಶದ ವಿಭಜನೆಯವರೆಗೆ | ....................... | 46 ವರ್ಷಗಳು |
| ನ್ಯಾಯಸ್ಥಾಪಕರುಗಳ ಕಾಲಾವಧಿ | ....................... | 450 ವರ್ಷಗಳು |
| ಅರಸುಗಳ ಕಾಲಾವಧಿ | ....................... | 513 ವರ್ಷಗಳು |
| ದೇಶ ಪಾಳುಬಿದ್ದ ಕಾಲಾವಧಿ | ....................... | 70 ವರ್ಷಗಳು |
| ಅಲ್ಲಿಂದ ಕ್ರಿ.ಶ. 1 ರವರೆಗೆ | ....................... | 536 ವರ್ಷಗಳು |
| ಅಲ್ಲಿಂದ ಕ್ರಿ. ಶ. 1873 ರವರೆಗೆ | ....................... | 1872 ವರ್ಷಗಳು |
| **ಒಟ್ಟು** | ....................... | 6000 ವರ್ಷಗಳು |

ಅವಧಿಗಳನ್ನು ತಾನೇ ಚಿತ್ರಿಸಿಕೊಳ್ಳಲಿ, ಮತ್ತು ದೇವರ ವಾಕ್ಯದಲ್ಲಿ ನಮ್ಮ ನಂಬಿಕೆಯು ಹೇಗೆ ಭದ್ರವಾಗಿ ನೆಲೆಗೊಂಡಿದೆ ಎಂಬುದನ್ನು ಕಂಡುಕೊಳ್ಳಲಿ. ಹಳೆ ಒಡಂಬಡಿಕೆಯ ಚಾರಿತ್ರಿಕ ಹೇಳಿಕೆಗಳಲ್ಲಿ ಎರಡು ವಿಂಗಡನೆಗಳನ್ನು ನಾವು ಕಾಣಬಹುದಾಗಿದೆ. ಆದಾಗ್ಯೂ ದೇವರು ಈ ಎರಡು ವಿಂಗಡನೆಗಳ ನಡುವೆ ಸೇತುವೆಯೊಂದನ್ನು ಒದಗಿಸಿದ್ದಾನೆ ಎಂಬುದನ್ನು ಹೊಸಒಡಂಬಡಿಕೆಯಲ್ಲಿ ನಾವು ನೋಡುತ್ತೇವೆ. ದೇವರು ಈಗಾಗಲೇ ಇತರೆ ಸತ್ಯಗಳ ಬಗ್ಗೆ ಮಾಡಿರುವಂತೆ ಇಲ್ಲಿಯೂ ತನ್ನ ಸಮಯ ಮತ್ತು ಕಾಲಗಳನ್ನು ಬಹಿರಂಗಪಡಿಸುವ ಸೂಕ್ತಕಾಲ ಬರುವವರೆಗೆ ಮರೆಮಾಡುವಂತೆ ದಾಖಲೆಗಳ ವ್ಯವಸ್ಥೆಮಾಡಿದ್ದಾನೆ ಎಂಬ ಭರವಸೆಯನ್ನು ಇನ್ನೂ ನಮ್ಮಲ್ಲಿ ಹೆಚ್ಚಿಸುತ್ತದೆ.

ನಾವೀಗ ಮುಂಬರುವ ಕಾಲಗಳನ್ನು ಮೇಲಿನ ಕ್ರಮದಲ್ಲಿಯೇ ಕೋರೇಷನ ಆಡಳಿತಾವಧಿಯವರೆಗೆ ಪ್ರತ್ಯೇಕವಾಗಿ ಪರೀಕ್ಷಿಸೋಣ. ನೀವು ನಿಮ್ಮ ಸತ್ಯವೇದವನ್ನು ಕೈಯಲ್ಲಿ ಹಿಡಿದುಕೊಂಡು ಪ್ರತಿಯೊಂದು

**ಆದಾಮನ ಸೃಷ್ಟಿಯಿಂದ ಪ್ರವಾಹವು ಬತ್ತಿಹೋಗುವವರೆಗಿನ ಅವಧಿಯಲ್ಲಿನ ಕಾಲಗಣನೆಗಳು**

**Chronology of the Period from the Creation of Adam to the Day the Flood was Dried Up**

| | |
|---|---|
| ಆದಾಮನು ತನ್ನ ಜೀವಿತದ 130ನೇ ವಯಸ್ಸಿನಲ್ಲಿ 'ಸೇತನು' ಎಂಬ ಮಗನನ್ನುಪಡೆದನು(ಆದಿ5:3) | – 130 ವರ್ಷಗಳು |
| ಸೇತನು 105 ವರ್ಷದವನಾದಾಗ ಎನೋಷನನ್ನು ಪಡೆದನು (ಆದಿ5:6) | – 105 ವರ್ಷಗಳು |
| ಎನೋಷನು 90 ವರ್ಷದವನಾದಾಗ ಕೇನಾನನನ್ನು ಪಡೆದನು (ಆದಿ5:9) | – 90 ವರ್ಷಗಳು |
| ಕೇನಾನನು 70 ವರ್ಷದವನಾದಾಗ ಮಹಲಲೇಲನನ್ನು ಪಡೆದನು (ಆದಿ5:12) | – 70 ವರ್ಷಗಳು |
| ಮಹಲಲೇಲನು 65 ವರ್ಷದವನಾದಾಗ ಯೆರೆದನನ್ನು ಪಡೆದನು (ಆದಿ 5:15) | – 65 ವರ್ಷಗಳು |
| ಯೆರೆದನು 162 ವರ್ಷದವನಾದಾಗ ಹನೋಕನನ್ನು ಪಡೆದನು (ಆದಿ 5:18) | – 162 ವರ್ಷಗಳು |
| ಹನೋಕನು 65 ವರ್ಷದವನಾದಾಗ ಮೆತೂಷೆಲಹನನ್ನು ಪಡೆದನು (ಆದಿ 5:21) | – 65 ವರ್ಷಗಳು |
| ಮೆತೂಷೆಲಹನು 187 ವರ್ಷದವನಾದಾಗ ಲೆಮೆಕನನ್ನು ಪಡೆದನು (ಆದಿ 5:25) | – 187 ವರ್ಷಗಳು |
| ಲೆಮೆಕನು 182 ವರ್ಷದವನಾದಾಗ ನೋಹನನ್ನು ಪಡೆದನು (ಆದಿ 5:28) | – 182 ವರ್ಷಗಳು |
| ಭೂಮಿಯ ಮೇಲೆ ಜಲಪ್ರಳಯವುಂಟಾದಾಗ ನೋಹನು ಆರುನೂರು ವರ್ಷದವನಾಗಿದ್ದನು (ಆದಿ.7:6) | – 600 ವರ್ಷಗಳು |
| **ಒಟ್ಟು ಆದಾಮನ ಸೃಷ್ಟಿಯಿಂದ ಪ್ರಳಯದ ನೀರು ಬತ್ತುವವರೆಗೆ (ಆದಿ 8:13)** | **–1656 ವರ್ಷಗಳು** |

*ಇದಕ್ಕಿಂತ ಸರಳವಾದದ್ದು ಮತ್ತು ನಿಖರವಾದ ದಿನಗಳನ್ನು ತಿಳಿಸಬಲ್ಲದ್ದು ಮತ್ತೊಂದಿಲ್ಲ. ನಾವೀಗ ಮುಂದಿನ ಅವಧಿಯನ್ನು ಪರೀಕ್ಷಿಸೋಣ :*

**ಪ್ರಳಯಕಾಲದಿಂದ ಅಬ್ರಹಾಮನೊಡನೆ ಮಾಡಿಕೊಂಡ ಒಡಂಬಡಿಕೆಯವರೆಗಿನ ಮತ್ತು ಆತನ ತಂದೆಯಾದ ತೆರಹನ ಮರಣದವರೆಗಿನ ಅವಧಿ**

**Period from the Flood to the Covenant with Abraham at the Death of Terah, His Father**

| | |
|---|---|
| ಜಲಪ್ರಳಯದ ಎರಡು ವರ್ಷಗಳ ನಂತರ ಶೇಮನು ಅರ್ಪಕ್ಷದನನ್ನು ಪಡೆದನು (ಆದಿ. 11:10 ) | – 02 ವರ್ಷಗಳು |
| ಅರ್ಪಕ್ಷದನು ಮೂವತ್ತೈದು ವರ್ಷದವನಾಗಿದ್ದಾಗ ಶೆಲಹನನ್ನು ಪಡೆದನು (ಆದಿ. 11:12) | – 35 ವರ್ಷಗಳು |
| ಶೆಲಹನು ಮೂವತ್ತು ವರ್ಷದವನಾಗಿದ್ದಾಗ ಎಬರನನ್ನು ಪಡೆದನು (ಆದಿ. 11:14) | – 30 ವರ್ಷಗಳು |
| ಎಬರನು ಮೂವತ್ತನಾಲ್ಕು ವರ್ಷದವನಾಗಿದ್ದಾಗ ಪೆಲಗನನ್ನು ಪಡೆದನು (ಆದಿ. 11:16) | – 34 ವರ್ಷಗಳು |
| ಪೆಲಗನು ಮೂವತ್ತು ವರ್ಷದವನಾಗಿದ್ದಾಗ ರೆಗೂವನನ್ನು ಪಡೆದನು (ಆದಿ. 11:18) | – 30 ವರ್ಷಗಳು |
| ರೆಗೂವನು ಮೂವತ್ತೆರಡು ವರ್ಷದವನಾಗಿದ್ದಾಗ ಸೆರೂಗನನ್ನು ಪಡೆದನು (ಆದಿ. 11:20) | – 32 ವರ್ಷಗಳು |
| ಸೆರೂಗನು ಮೂವತ್ತು ವರ್ಷದವನಾಗಿದ್ದಾಗ ನಾಹೋರನನ್ನು ಪಡೆದನು (ಆದಿ. 11:22) | – 30 ವರ್ಷಗಳು |
| ನಾಹೋರನು ಇಪ್ಪತ್ತೊಂಬತ್ತು ವರ್ಷದವನಾಗಿದ್ದಾಗ ತೆರಹನನ್ನು ಪಡೆದನು (ಆದಿ 11:24) | – 29 ವರ್ಷಗಳು |
| ತೆರಹನು ಇನ್ನೂರೈದು ವರ್ಷದವನಾಗಿದ್ದಾಗ ಮರಣ ಹೊಂದಿದನು (ಆದಿ. 11:32) | – 205 ವರ್ಷಗಳು |
| **ಒಟ್ಟು** | **– 427 ವರ್ಷಗಳು** |

ಉಲ್ಲೇಖನವನ್ನೂ ಪರಿಶೀಲಿಸುವಾಗ ಇವುಗಳು ಮನುಷ್ಯರ ಮಾತುಗಳಲ್ಲ ದೇವರ ಮಾತುಗಳೇ ಎಂಬುದಾಗಿ ನೀವು ಇವನ್ನು ಸ್ವೀಕರಿಸುತ್ತೀರಿ.

ಇದು ಸಹ ಸರಳವೂ ನಿಖರವಾದುದೂ ಆಗಿದೆ. ಆದರೆ ಮುಂದಿನ ಅವಧಿಯನ್ನು ಸುಲಭವಾಗಿ ಪತ್ತೆಹಚ್ಚಲಾಗದು. ಯಾಕೆಂದರೆ ಕಾಲಗಣನೆಯ ನೇರವಾದ ಪಥವು ಇಸ್ರಾಯೇಲ್ಯರು ಐಗುಪ್ತದಿಂದ ನಿರ್ಗಮಿಸಿದ ಮೇಲೆ ಭಗ್ನಗೊಂಡಿದೆ. ಆದುದರಿಂದ ನಾವು ಪೌಲ ಮತ್ತು ಸ್ತೆಫನರು ಪವಿತ್ರಾತ್ಮನ ವಕ್ತಾರರಾಗಿ ಈ ಕೊಂಡಿಯನ್ನು ಒದಗಿಸದೇ ಹೋಗಿದ್ದಲ್ಲಿ ಪೂರ್ತಿಯಾಗಿ ಸರಿಯಾದ ಮಾರ್ಗದಲ್ಲಿ ಮುಂದುವರೆಯಲು ಸಾಧ್ಯವಾಗುತ್ತಿರಲಿಲ್ಲ.

## ಅಬ್ರಹಾಮನೊಡನೆ ಮಾಡಿಕೊಂಡ ಒಡಂಬಡಿಕೆಯಿಂದ ನ್ಯಾಯವಿಧಿಗಳನ್ನು (ಧರ್ಮಶಾಸ್ತ್ರ) ನೀಡುವವರೆಗಿನ ಅವಧಿ

## The Period from the Covenant with Abraham to the giving of the Law

ಈ ಅವಧಿಯು 430 ವರ್ಷಗಳು ಎಂದು ಪೌಲನು ತಿಳಿಸುತ್ತಾನೆ (ಗಲಾತ್ಯ 3:17). ಈ ಒಡಂಬಡಿಕೆಯು ಇಸ್ರಾಯೇಲ್ಯರಿಗೆ ಕಾನಾನ್ ದೇಶವನ್ನು ಶಾಶ್ವತವಾದ ಸ್ವತ್ತಾಗಿ ನೀಡುವ ವಾಗ್ದಾನವಾಗಿದ್ದು ಅಬ್ರಹಾಮ, ಇಸಾಕ ಮತ್ತು ಯಾಕೋಬನಿಗೆ ಅನೇಕ ಸಲ ಪುನಃ ದೃಢೀಕರಿಸಲ್ಪಟ್ಟಿದ್ದರೂ ಅದು ಅದೇ ಒಡಂಬಡಿಕೆಯಾಗಿತ್ತು (ಆದಿ. 17:7,8; 13:14–18; 26:3,4; 35:9–12: 46:2–4; 50:24). ಆದಿಕಾಂಡ 12:1–5,7 ಮತ್ತು ಅ.ಕೃ.:7:2–5 ರಲ್ಲಿ ತುಲನಾತ್ಮಕವಾಗಿ ತೋರಿಬರುವಂತೆ, ಅಬ್ರಹಾಮನು ಅದನ್ನು ಪಡಕೊಳ್ಳಲು ಇರುವ ಎಲ್ಲಾ ಷರತ್ತುಗಳನ್ನು ಸಂಪೂರ್ಣವಾಗಿ ಸಮ್ಮತಿಸಿದ ನಂತರವೇ ಈ ಒಡಂಬಡಿಕೆಯನ್ನು (ಹಿಂದಿನ ವಾಗ್ದಾನಕ್ಕನುಸಾರವಾಗಿ) ಮಾಡಲಾಯಿತು. ಅಂದರೆ, ಆತನು ಕಾನಾನನ್ನು ಪ್ರವೇಶಿಸಿದ ಕೂಡಲೇ (ಆತನು ಇದನ್ನು ಕಾನಾನಿನ ಮಾರ್ಗದಲ್ಲಿ ಹಾರಾನಿನಲ್ಲಿ ತನ್ನ ತಂದೆಯ ಮರಣವಾದ ಕೂಡಲೇ) ಮಾಡಿದನು. ತೆರಹನ ಮರಣದ ನಂತರ, ಒಡಂಬಡಿಕೆಯ ದಿನಾಂಕವನ್ನು ಪಡಕೊಂಡು, ಸ್ತೆಫನನ ಹೇಳಿಕೆಯಲ್ಲಿ ದೃಢಪಡುವಂತೆ, ಮತ್ತು ಪೌಲನ ಹೇಳಿಕೆಯಂತೆ ಧರ್ಮಶಾಸ್ತ್ರವು ಒಡಂಬಡಿಕೆಯ ನಾನೂರು ಮೂವತ್ತು ವರ್ಷಗಳ ನಂತರ ನೀಡಲ್ಪಟ್ಟಿತು. ಈ ರೀತಿಯಲ್ಲಿ ಮುರಿದುಹೋಗಿದ್ದ ಹಳೆಒಡಂಬಡಿಕೆಯ ಕಾಲಗಣನೆಗೆ ಸೇತುವೆಯೊಂದು ನೂತನ ಒಡಂಬಡಿಕೆಯಿಂದ ದೊರೆಯಿತು. ಆದರೆ, ನಾವು ಈ ವರದಿಯನ್ನು ಜಾಗರೂಕತೆಯಿಂದ ಓದಿಕೊಳ್ಳೋಣ ಮತ್ತು ಈ ಸೇತುವೆಯು ಕಟ್ಟಲ್ಪಟ್ಟ ವೈಶಿಷ್ಟ್ಯತೆಯನ್ನು ಗುರುತಿಸೋಣ.

"ಯೆಹೋವನು ಅಬ್ರಹಾಮನಿಗೆ – (ಹಿಂದಿನ, ಮೆಸೊಪೊತಾಮ್ಯ ಅಥವಾ ಕಲ್ದಿಯರ ಊರ್ ಎಂಬ ಪಟ್ಟಣವನ್ನು ಬಿಡುವ ಮೊದಲು) ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. (ಹಾಗೆಮಾಡಿದರೆ) ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು" (ಆದಿ. 12:1,2 ಹೋಲಿಸಿ ಅ.ಕೃ. 7:2) ಎಂದು ಹೇಳಿದನು. ದೇವರು ಅಬ್ರಹಾಮನೊಡನೆ ಆತನ ತಂದೆಯಾದ ತೆರಹನು ತೀರಿಕೊಳ್ಳುವ ಮತ್ತು ಆತನು ಹಾರಾನ್ ಅಥವಾ ಖಾರಾನ್ ಪಟ್ಟಣದಲ್ಲಿ ವಾಸಿಸುವ ಮೊದಲೇ ಈ ಒಡಂಬಡಿಕೆಯ ಬಗ್ಗೆ ಪ್ರಸ್ತಾಪಿಸಿದ್ದನು ಎಂಬುದನ್ನು ಇದು ಸೂಚಿಸುತ್ತದೆ. ಆದರೆ ಈ ಒಡಂಬಡಿಕೆಯನ್ನು ಯಥಾರ್ಥಗೊಳಿಸುವಂತೆ ಅಬ್ರಹಾಮನ ನಂಬಿಕೆ ಮತ್ತು ವಿಧೇಯತೆ ಮುಂತಾದ ಕೆಲವೊಂದು ಕರಾರುವಾಕ್ಕಾದ ಸಂಗತಿಗಳು ಅವಶ್ಯಕವಾದ ಬೇಡಿಕೆಗಳಾಗಿದ್ದವು. ಈ ಕರಾರುವಾಕ್ಕಾದ ಸಂಗತಿ ಏನೆಂದರೆ, ಆತನು ತನ್ನ ಬಂಧು ಬಳಗವನ್ನು ಬಿಟ್ಟು ದೇವರು ನಿರ್ದೇಶಿಸುವ ಸ್ಥಳಕ್ಕೆ ಹೊರಡುವುದರ ಮೂಲಕ ದೇವರು ಮಾಡಲಿರುವ ಅಂಥಾಃ ವಾಗ್ದಾನದ ಬಗ್ಗೆ ತನ್ನ ನಂಬಿಕೆಯನ್ನು ಪ್ರಕಟಿಸಬೇಕು. ಇದನ್ನು ಅಬ್ರಹಾಮನು ನೆರವೇರಿಸಿದನು. ಆತನ ಹೆಂಡತಿ, ತಮ್ಮನ ಮಗನಾದ ಲೋಟನು ಮತ್ತು ವೃದ್ಧ ತಂದೆಯು ಸಹ ಆತನ ವಿಶ್ವಾಸದಲ್ಲಿ ಪಾಲುದಾರರಾದುದರಿಂದ ಅವರೂ ಆತನ ಸಂಪತ್ತಿನಲ್ಲಿಯೂ ಪಾಲುದಾರರಾಗ ಬಯಸಿದರು ಮತ್ತು ಇದಕ್ಕೆ ಅವರಿಗೆ ಅನುಮತಿ ದೊರೆಯಿತು. ನಾಲ್ವರೂ ವಾಗ್ದತ್ತ ದೇಶಗಳ ಕಡೆಗೆ ಹೊರಟರು. ಅಬ್ರಹಾಮನ ತಂದೆಯಾದ ತೆರಹನು ಮಾರ್ಗ ಮಧ್ಯದಲ್ಲಿಯೇ ಹಾರಾನಿನಲ್ಲಿ ತೀರಿಕೊಂಡನು. ಅನಂತರದಲ್ಲಿ ಅಬ್ರಹಾಮನು ಕಾನಾನಿಗೆ ಸೇರಿದನು, ಅಲ್ಲಿ ಆತನು ಸುರಕ್ಷಿತನಾಗಿದ್ದು ಒಡಂಬಡಿಕೆಗೆ ಬದ್ಧನಾಗಬಹುದೆಂದು ಭಾವಿಸಿದನು. ಸ್ತೆಫನನು ಹೇಳುವಂತೆ "ಅವನ (ಅಬ್ರಹಾಮನ) ತಂದೆ ಸತ್ತ ಮೇಲೆ ದೇವರು ಅವನನ್ನು ಅಲ್ಲಿಂದ ನೀವು ಈಗ ವಾಸವಾಗಿರುವ ಈ ದೇಶಕ್ಕೆ ಬರಮಾಡಿದನು" (ಅ.ಕೃ. 7:4, ಆದಿ. 12:4). ಆತನು ಕಾನಾನನ್ನು ಸೇರಿದ ಸ್ವಲ್ಪ ನಂತರದಲ್ಲಿ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು (ಆದಿ. 12:5–7). ಹೀಗಾಗಿ ನಮ್ಮ ಬಳಿಯಲ್ಲಿ ಒಡಂಬಡಿಕೆಯ ದಿನಾಂಕವಿದೆ ಮತ್ತು ತೆರಹನ ಮರಣದ ಮರುಕ್ಷಣದಲ್ಲಿ ನಿಗದಿ ಪಡಿಸಿದ್ದ ನಾನೂರ ಮೂವತ್ತು ವರ್ಷಗಳ ಪ್ರಾರಂಭವಿದೆ. ಹಾಗೂ ಈ ಕಾಲಗಣನೆಗಳ ಕೊಂಡಿಯು ನ್ಯಾಯವಿಧಿಗಳನ್ನು ನೀಡುವುದರಲ್ಲಿ ಅಂತ್ಯಗೊಳ್ಳುತ್ತದೆ. ಧರ್ಮಶಾಸ್ತ್ರದ ಮೊದಲನೆಯ ಲಕ್ಷಣವು ಪಸ್ಕ, ಇದು ಇಸ್ರಾಯೇಲ್ಯರು

ಐಗುಪ್ತ ಪಟ್ಟಣವನ್ನು ಬಿಟ್ಟದಿನವೇ ಸ್ಥಾಪಿತವಾಯಿತು – ವಿಮೋ. 12:41–43,47,50,51.

ಇವುಗಳ ಸಾಮರಸ್ಯದಲ್ಲಿ ನಾವು "ಇಸ್ರಾಯೇಲ್ಯರು ಐಗುಪ್ತದಲ್ಲಿ ನಾನೂರ ಮೂವತ್ತು ವರುಷ ವಾಸವಾಗಿದ್ದರು. ಆ ನಾನೂರ ಮೂವತ್ತು ವರ್ಷಗಳು ಕಳೆದ ನಂತರ ಅದೇ ದಿವಸದಲ್ಲಿ ಯೆಹೋವನ ಸೈನ್ಯಗಳೆಲ್ಲಾ ಐಗುಪ್ತ ದೇಶವನ್ನು ಬಿಟ್ಟು ಹೊರಟುಹೋದವು. ಆ ದಿನದಲ್ಲಿ ಯೆಹೋವನು ಇಸ್ರಾಯೇಲ್ಯರನ್ನು ಸೈನ್ಯಸೈನ್ಯವಾಗಿ ಐಗುಪ್ತದಿಂದ ಹೊರಗೆ ಬರಮಾಡಿದನು" – ವಿಮೋ. 12:40–42,51.

ಕೆಲವರು ಮೋಶೆಯ ಹೇಳಿಕೆಗೂ, ಪೌಲನ ಹೇಳಿಕೆಗೂ ಸಾಮರಸ್ಯವಿಲ್ಲವೆಂದು ಭಾವಿಸಬಹುದು (ವಿಮೋ. 12: 40–42 ಮತ್ತು ಗಲಾತ್ಯ 3:17). ಒಂದು ಐಗುಪ್ತದಲ್ಲಿ ಇಸ್ರಾಯೇಲ್ಯರ ಸ್ವಲ್ಪಕಾಲ ತಂಗುವಿಕೆಯು ನಾನೂರ ಮೂವತ್ತು ವರ್ಷಗಳು ಎಂಬುದನ್ನು ದೃಢಪಡಿಸುತ್ತದೆ ಮತ್ತೊಂದು ಅಬ್ರಹಾಮನ ಒಡಂಬಡಿಕೆಯಿಂದ ನ್ಯಾಯವಿಧಿಗಳ ನೀಡುವಿಕೆಗೆ ನಾನೂರ ಮೂವತ್ತು ವರ್ಷಗಳಾದವು ಎಂದು ಹೇಳುತ್ತದೆ. ಇದರಿಂದ ಅಬ್ರಹಾಮನು ಕಾನಾನಿಗೆ ಬಂದು ಧರ್ಮಶಾಸ್ತ್ರವು ನೀಡಲ್ಪಡುವುದಕ್ಕೆ ನಾನೂರ ಮೂವತ್ತು ವರ್ಷಗಳು ಮಾತ್ರವೇ ಸಂದಿದ್ದರೆ ಇಸ್ರಾಯೇಲ್ಯ ಮಕ್ಕಳು ಐಗುಪ್ತದಲ್ಲಿ ವಾಸಿಸಿದ ಕಾಲವು ಇನ್ನೂ ಕಡಿಮೆಯಾಗಿದ್ದಿರಬಹುದು ಎಂಬ ಅಲೋಚನೆ ಯುಂಟಾಗುತ್ತದೆ. ಆದರೆ, ಈ ಹೇಳಿಕೆಯಲ್ಲಿ ಇಸ್ರಾಯೇಲ್ಯರು ಐಗುಪ್ತದಲ್ಲಿ ನಾನೂರ ಮೂವತ್ತು ವರ್ಷಗಳ ಕಾಲ ತಂಗಿದ್ದರು ಎಂದಲ್ಲ, ಆದರೆ ಆ ಜನರ ಸಂಪೂರ್ಣ ತಂಗುವಿಕೆಯ ಕಾಲದಲ್ಲಿ ಅವರು ಐಗುಪ್ತದಲ್ಲಿ ಕೆಲವು ವರ್ಷಗಳು ವಾಸವಾಗಿದ್ದರು ಮತ್ತು ಅವರ ಒಟ್ಟಾರೆ ತಂಗುವಿಕೆಯ ಪೂರ್ಣಾವಧಿ ನಾನೂರ ಮೂವತ್ತು ವರ್ಷಗಳಾಗಿದ್ದವು ಎಂಬುದನ್ನು ಗಮನಿಸಬೇಕು. "ಇಸ್ರಾಯೇಲ್ಯರ ಮಕ್ಕಳು ಐಗುಪ್ತದಲ್ಲಿ ವಾಸಮಾಡಿದ ಕಾಲ ನಾನೂರ ಮೂವತ್ತು ವರ್ಷಗಳು. ಈಗ ಉಲ್ಲೇಖಿಸಿರುವ ವಾಸಮಾಡಿದ ಕಾಲವು ಅಬ್ರಹಾಮನು ಮೊದಲು ಕಾನಾನ್ ದೇಶವನ್ನು ಪ್ರವೇಶ ಮಾಡಿದಂದಿನಿಂದ ಪ್ರಾರಂಭಗೊಳ್ಳುತ್ತದೆ (ಇಬ್ರಿಯ 11:8,9). "ಇಸ್ರಾಯೇಲ್ಯರು ಅಬ್ರಹಾಮನಲ್ಲಿಯೂ, ಇಸಾಕನಲ್ಲಿಯೂ, ಯಾಕೋಬನಲ್ಲಿಯೂ ನೆಲೆಯಾಗಿದ್ದಾರೆ ಮತ್ತು ಲೇವಿಯು ಕೂಡಾ ಅಬ್ರಹಾಮನ ಭಾಗವನ್ನು ಕೊಟ್ಟಹಾಗಾಯಿತೆಂದು ಹೇಳಬಹುದು. ಹೇಗೆಂದರೆ ಮೆಲ್ಕಿಜೆದೇಕನು ಲೇವಿಯ ಮೂಲ ಪುರಷನನ್ನು ಎದುರುಗೊಂಡಾಗ ಲೇವಿಯು ತತ್ವರೂಪವಾಗಿ ಇವನೊಳಗೆ ಇದ್ದನು" ಎಂಬಂತೆ. – (ಇಬ್ರಿಯ 7:9,10).

ಅಬ್ರಹಾಮನೊಡನೆ ಮಾಡಿದ ಒಡಂಬಡಿಕೆಯು ಆತನು ಹಾರಾನ್ ಅಥವಾ ಚಾರಾನನ್ನು ಬಿಟ್ಟು ವಾಗ್ದತ್ತ ದೇಶವಾದ ಕಾನಾನಿನಲ್ಲಿ ಹೆಜ್ಜೆ ಇಟ್ಟಂದಿನಿಂದ ಜಾರಿಗೆ ಬಂತು. ಆ ಸಮಯದಿಂದ, ಆತನು ಮತ್ತು ಆತನಲ್ಲಿದ್ದ ಎಲ್ಲಾ ಇಸ್ರಾಯೇಲ್ಯರೂ ಇನ್ನೂ ವಾಗ್ಧತ್ತ ಆಶೀರ್ವಾದಗಳಿಗೆ ಬಾಧ್ಯರಾದರು. ಅವರು ಯಾತ್ರಿಕರೂ, ಅಲ್ಲಲ್ಲಿ ತಂಗುವವರೂ ಆಗಿದ್ದು ವಾಗ್ದಾನವು ನೆರವೇರುವಂತೆ ದೇವರನ್ನೇ ಕಾದುಕೊಂಡಿದ್ದರು. ಈ ತಂಗುವಿಕೆಯು ನಾನೂರು ಮೂವತ್ತು ವರ್ಷಗಳ ಕಾಲ ಮುಂದುವರೆಯಿತು. ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಹೋಗಿ ಧರ್ಮಶಾಸ್ತ್ರದ ಮೊದಲನೆಯ ಲಕ್ಷಣವನ್ನು ಅಂದರೆ ಪಸ್ಕದ ಆಚರಣೆಯನ್ನು ಪಡಕೊಂಡ ದಿನದವರೆಗೂ. ಆದುದರಿಂದ, ಮೋಶೆ ಮತ್ತು ಪೌಲರ ಹೇಳಿಕೆಗಳು ನಿಖರವಾಗಿ ಅದೇ ಅವಧಿಗೆ ಸೂಚಿತವಾಗಿದ್ದು ಆ ರೀತಿಯಲ್ಲಿ ಅದು ಅಬ್ರಹಾಮನ ಒಡಂಬಡಿಕೆಯಿಂದ ಧರ್ಮಶಾಸ್ತ್ರವು ಕೊಡಲ್ಪಡುವವರೆಗೆ ನಾನೂರ ಮೂವತ್ತು ವರ್ಷಗಳು ಸಂದಿವೆ ಎಂಬುವ ಸಕಾರಾತ್ಮಕವಾದ ಸಾಕ್ಷಿಯನ್ನು ನೀಡುವುದಾಗಿದೆ. ಪೌಲನು ಪಸ್ಕಹಬ್ಬವು ದೇವರ ನ್ಯಾಯವಿಧಿಗಳ ಪ್ರಾರಂಭ ಎಂಬುದಕ್ಕೆ ಹೆಚ್ಚಿನ ಒತ್ತಾಸೆಯನ್ನು ನೀಡುವವನಾಗಿದ್ದಾನೆ. ಇದನ್ನು ಮೋಶೆಯು ಸಹ ತೋರಿಸಿಕೊಟ್ಟಿದ್ದಾನೆ (ವಿಮೋ. 12:42,43,47,50) ಮತ್ತು ಮೋಶೆಯು ನಿಖರವಾದ ಅವಧಿಯ ಬಗ್ಗೆ ಒಂದು ದಿನದ ಮಟ್ಟಿಗೂ ವಿಶೇಷ ಒತ್ತು ಕೊಡುವವನಾಗಿದ್ದಾನೆ.

ಹೀಗೆ ಮೂರನೆಯ ಅವಧಿಯು ನಮ್ಮ ಮುಂದೆ ಸ್ಪಷ್ಟವಾಗಿ ಸ್ಥಾಪಿತಗೊಂಡಿದೆ. ಈ ಕಾಲಗಣನೆಗಳ ಸರಪಳಿಯಲ್ಲಿ ನಾವು ಒಂದೊಂದು ದಿನಕ್ಕೂ ದೇವರ ನಿರ್ದಿಷ್ಟತೆಯನ್ನು ಗುರುತಿಸಿ ಅದನ್ನು ತೋರಿಸಿ ಕೊಡುವಾಗ, ಅದು ನಮಗೆ ಭರವಸೆಯನ್ನುಂಟು ಮಾಡುತ್ತದೆ. ವಿಶೇಷವಾಗಿ ಅಂಥಾಃ ನಿಖರತೆಯಲ್ಲಿ ಆದಿಸಭೆಗಳಿಗೆ ವಿಶೇಷವಾದ ಆಸಕ್ತಿ ಇದ್ದಿಲ್ಲ ಮತ್ತು ಅದನ್ನು ಬೇರಾವುದಕ್ಕಲ್ಲದೇ ಪ್ರಸ್ತುತ ಉಪಯೋಗಕ್ಕಾಗಿಯೇ ಕೊಡಲ್ಪಟ್ಟಿದೆ.

## ಇಸ್ರಾಯೇಲ್ಯರ ನಿರ್ಗಮನ ಕಾಲದಿಂದ ಕುಲಗಳ ನಡುವೆ ಕಾನಾನ್ ಪ್ರದೇಶದ ಹಂಚುವಿಕೆಯವರೆಗಿನ ಅವಧಿ

## Period from The Exodus to the Division of Canaan Among the Tribes

ಇಸ್ರಾಯೇಲಿನ ನಾಲ್ವತ್ತು ವರ್ಷಗಳು ಅಥವಾ "ಅರಣ್ಯದೊಳಗೆ ದೇವರು ಪರೀಕ್ಷಿಸಿದ ದಿನ" (ಧರ್ಮೋ. 8;2:, ಕೀರ್ತನೆ 95:8–10; ಇಬ್ರಿಯ 3:8.9) ಕಾನಾನಿನ ಆರು ವರ್ಷಗಳ ಯುದ್ಧದಲ್ಲಿ ಮತ್ತು ಕುಲಗಳ ಮಧ್ಯೆ ಆ ದೇಶದ ವಿಭಜನೆಯಲ್ಲಿ ಮುಂದುವರೆಯಿತು. ಒಂದು

ವರ್ಷ, ಒಂದು ತಿಂಗಳು ಮತ್ತು ಐದು ದಿನಗಳು ಅವರು ಐಗುಪ್ತವನ್ನು ಬಿಟ್ಟು, ಪಾರಾನ್ ಸೇರಲು ಸಿನಾಯಿಯನ್ನು ಬಿಡುವವರೆಗೆ ಕಳೆದುಹೋಯಿತು (ಅರಣ್ಯ 33:3, 10:11–13), ನಂತರದಲ್ಲಿ ಗೂಢಾಚಾರರನ್ನು ಪಾರಾನ್ ಆರಣ್ಯದಿಂದ ಕಾದೇಶ್ ಬರ್ನೇಯದ ಅರಣ್ಯದವರೆಗೂ ಕಳುಹಿಸಿಕೊಡಲಾಯಿತು (ಅರಣ್ಯ 13:3–26; 32:8–13). ಇವರಲ್ಲಿ ಒಬ್ಬನಾದ ಕಾಲೇಬನು ದೇಶದ ವಿಭಜನೆಯಲ್ಲಿ ತನ್ನ ಭಾಗವನ್ನು ಕೇಳುವಾಗ (ಯೆಹೋಶುವ 11:23; 10:42) ಹೇಳಿದನು: "ಯೆಹೋವನ ಸೇವಕನಾದ ಮೋಶೆಯು ಆ ದೇಶವನ್ನು ಸಂಚರಿಸಿ ನೋಡುವುದಕ್ಕೋಸ್ಕರ ಕಾದೇಶ್ ಬರ್ನೇಯದಿಂದ ಕಳುಹಿಸುವಾಗ ನನಗೆ ನಾಲ್ವತ್ತು ವರ್ಷವಾಗಿತ್ತು ....." (ಯೆಹೋಶುವ 14:7). "ಯೆಹೋವನು ಈ ಮಾತುಗಳನ್ನು ಮೋಶೆಗೆ ಹೇಳಿದಂದಿನಿಂದ ಇಸ್ರಾಯೇಲ್ಯರು ಅರಣ್ಯದಲ್ಲಿ ಅಲೆಯುತ್ತಿದ್ದ ವರ್ಷಗಳೂ ಸೇರಿ ನಾಲ್ವತ್ತೈದು ವರ್ಷಗಳು ದಾಟಿದವು" (ಯೆಹೋಶುವ 14:7,10). ಈ ರೀತಿಯಲ್ಲಿ ಆ ದೇಶವನ್ನು ಬೇಹುಗಾರಿಕೆ ಮಾಡುವಲ್ಲಿಂದ ಮೊದಲುಗೊಂಡು ಕುಲಗಳ ಮಧ್ಯೆ ಅದನ್ನು ವಿಭಜನೆ ಮಾಡುವವರೆಗೂ ನಾಲ್ವತ್ತೈದು ವರ್ಷಗಳು ಸಂದವು ಎಂದು ತೋರಿಬರುತ್ತದೆ. ಯೆಹೋಶುವ ಹೇಳಿರುವಂತೆ ಮತ್ತು ನಿರ್ಗಮನದಿಂದ ಗೂಢಾಚರರನ್ನು ಕಳುಹಿಸುವವರೆಗೆ ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚಾಗಿ ಒಟ್ಟು ನಾಲ್ವತ್ತಾರು ಚಿಲ್ಲರೆ* ವರ್ಷಗಳಾಗಿವೆ. ಇದರಲ್ಲಿ ಅನೇಕ ಬರಹಗಳಲ್ಲಿ ವಿಶೇಷವಾಗಿ ಅ.ಕೃ. 7:36 ಮತ್ತು ಇಬ್ರಿಯ 3:9 ದೇಶ ವಿಭಜನೆಯ ಉಳಿದ ಆರು ವರ್ಷಗಳು ಕಾನಾನ್‌ನಲ್ಲಿ ಜಯಿಸುತ್ತಾ, ವಾಗ್ದತ್ತ ಭೂಮಿಯನ್ನು ಆಕ್ರಮಿಸುತ್ತಾ ವ್ಯಯವಾಯಿತು.

## ನ್ಯಾಯಸ್ಥಾಪಕರುಗಳ ಕಾಲಾವಧಿ
## The Period of The Judges

ನಾವೀಗ ದೇಶ ವಿಭಜನೆಯಿಂದ ಸೌಲನು ರಾಜನಾಗಿ ಅಭಿಷೇಕ ಹೊಂದುವವರೆಗಿನ ಕಾಲಗಣನೆಗಳ ಬಲು ಕಷ್ಟದ ಭಾಗಕ್ಕೆ ಬಂದಿದ್ದೇವೆ. ನ್ಯಾಯಸ್ಥಾಪಕರುಗಳು ನಿರಂತರವಾಗಿ ಆ ಹುದ್ದೆಯನ್ನು ತುಂಬದೇ ಹೋದಾಗ್ಯೂ ಇದನ್ನು ಸಾಮಾನ್ಯವಾಗಿ 'ನ್ಯಾಯಸ್ಥಾಪಕರ ಕಾಲ' ಎಂಬುದಾಗಿ ಕರೆಯುತ್ತಾರೆ. ನ್ಯಾಯಸ್ಥಾಪಕರ ಪುಸ್ತಕ ಮತ್ತು 1 ಸಮುವೇಲನ ಪುಸ್ತಕವು ಒಟ್ಟು ಹತ್ತೊಂಬತ್ತು ಅವಧಿಗಳನ್ನು ನೀಡುತ್ತವೆ ಮತ್ತು ಇದು ಒಟ್ಟಾರೆ 450 ವರ್ಷಗಳ ಅವಧಿ ಎಂಬುದಾಗಿ ಅಂದಾಜಿಸಲಾಗಿದೆ; ಆದರೆ ಅವುಗಳು ಅಲ್ಲಲ್ಲಿ ಸಂಪರ್ಕವನ್ನು ಕಳೆದುಕೊಂಡಿವೆ ಇಲ್ಲವೆ ಮುರಿದುಕೊಂಡಿದೆ, ಕೆಲವೊಮ್ಮೆ ಒಂದರ ಮೇಲೊಂದು ದಾಟಿ ಹೋಗಿದೆ ಅಥವಾ ತೊಡಕಿಸಲ್ಪಟ್ಟಿದ್ದು ನಾವು ಅವುಗಳಿಂದ ಯಾವುದೇ ನಿಶ್ಚಿತವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಈ ಪ್ರಸ್ತಾಪದ ಬಗ್ಗೆ ಹೊಸಒಡಂಬಡಿಕೆಯು ಕೊರತೆಯುಳ್ಳವುಗಳನ್ನು ಒದಗಿಸದೇ ಹೋಗಿದ್ದಲ್ಲಿ ಇತರರು ಮಾಡಿದಂತೆ ನಾವೂ ಯಾವುದೇ ಸಕಾರಾತ್ಮಕ ಸಂಗತಿಗಳು ದೊರೆಯುವುದಿಲ್ಲ ಎಂಬ ನಿರ್ಧಾರಕ್ಕೆ ಬರುವಂತೆ ನಿರ್ಬಂಧಿತರಾಗುತ್ತಿದ್ದೆವು. ಪೌಲನು ಹೇಳುವಂತೆ ದೇವರು ಅವರ ರಾಜ್ಯವನ್ನು ವಿಭಜಿಸಿದ ಮೇಲೆ ಅವರುಗಳಿಗೆ ಸುಮಾರು ನಾನೂರ ಐವತ್ತು ವರ್ಷಗಳ ಕಾಲ ಪ್ರವಾದಿಯಾದ ಸಮುವೇಲನವರೆಗೆ ನ್ಯಾಯಾಧಿಪತಿಗಳನ್ನು ಒದಗಿಸಿಕೊಟ್ಟನು. ನಂತರದಲ್ಲಿ ಅವರು ಅರಸನನ್ನು ಬಯಸಿದರು. ದೇವರು ಅವರಿಗೆ ಸೌಲನನ್ನು ಅರಸನ್ನಾಗಿ ಒದಗಿಸಿದನು (ಅ.ಕೃ 13::19–21).

A.V. ಭಾಷಾಂತರದಲ್ಲಿ ಕಂಡು ಬರುವ 'about' ಎಂಬುದು ಗ್ರೀಕ್ ಪದ 'hos' ಎಂಬುದರ ಅನುವಾದ. ಮತ್ತು ಇದು 'During' ಅಥವಾ 'while' ಎಂಬ ಪದಗಳ ಅರ್ಥ ಹೊಂದಿದೆ. ಇದೇ ಗ್ರಂಥಕರ್ತನು ಇತರೆ ಮೂರು ಕಡೆಗಳಲ್ಲಿ ಈ ಪದವನ್ನು ಉಪಯೋಗಿಸಿದ್ದಾನೆ ಆದರೆ A.V. ಭಾಷಾಂತರದಲ್ಲಿ ಇದು 'while' ಎಂಬುದಾಗಿ ಭಾಷಾಂತರಗೊಂಡಿದೆ (ಅ.ಕೃ. 1:10,10:17; ಲೂಕ. 24:32). ಈ ಪರಿಚ್ಛೇದವನ್ನು "He gave unto them judges during the space of four hundred and fifty years" ಎಂದು ಇನ್ನೂ ಉತ್ತಮವಾಗಿ ಭಾಷಾಂತರಿಸಬಹುದಿತ್ತು. ಸಿರಿಯಾಕ್ ಭಾಷೆಯಲ್ಲಿ "And for four hundred and fifty years he gave them Judges until the Samuel the Prophet" the last of the judges ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ.

ಈ ನ್ಯಾಯಸ್ಥಾಪಕರುಗಳ ಅವಧಿಯ ವಿಸ್ತಾರದ ಬಗೆಗಿನ ಅಪೋಸ್ತಲರ ಈ ಹೇಳಿಕೆಯು ಈ ಸಮಸ್ಯೆಯನ್ನು ಬಗೆಹರಿಸುವಂತೆ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಎರಡು ಸಂದರ್ಭಗಳಲ್ಲಿ

---

* ನಾವು ಪೂರ್ಣ ವರ್ಷಗಳನ್ನು ಮಾತ್ರವೇ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ, ಕರಾರುವಕ್ಕಾದ ಲೆಕ್ಕಾಚಾರ ಸಾಧ್ಯವಿಲ್ಲ. ಕೆಲವೊಮ್ಮೆ ವರ್ಷಗಳ ಅಪೂರ್ಣಾಂಕಗಳು ಚಿದ್ಕೀಯನ ಆಳ್ವಿಕೆಯಲ್ಲಿದ್ದಂತೆ ಬಹಳ ಉದ್ದವಿರುತ್ತವೆ. ಕೆಲವೊಮ್ಮೆ ಅಲ್ಪವಿರುತ್ತವೆ. ಚಿದ್ಕೀಯನು ಹನ್ನೊಂದು ವರ್ಷಗಳ ಆಳ್ವಿಕೆ ಮಾಡಿದನೆಂದು ಹೇಳಲಾಗುತ್ತದೆ (2 ಪೂರ್ವ. 36:11; ಯೆರೆ. 52:1); ಆದರೂ ನಂತರದ ಅಧ್ಯಾಯದಲ್ಲಿನ 3 ರಿಂದ 7ನೇ ವಚನಗಳಲ್ಲಿ ಆತನು ಆಳಿದ್ದು ಹತ್ತು ವರುಷ ನಾಲ್ಕು ತಿಂಗಳು ಒಂಬತ್ತು ದಿನಗಳೆಂದು ನೋಡುತ್ತೇವೆ. ಈ ಅಪೂರ್ಣ ಭಾಗವು ತಮ್ಮೊಳಗೆ ಸಮತೋಲನ ಮಾಡಿಕೊಳ್ಳುತ್ತವೆ. ಮತ್ತು ಕರ್ತನು ಇದನ್ನು ರದ್ದುಪಡಿಸಿ ತರ್ಕಸಬಹುದಾದ ಫಲಿತಾಂಶಗಳಿಂದ ಇದರ ಮತ್ತು ನಿಖರತೆಯನ್ನು ಆಗಲೇ ಗಮನಿಸಿದ ದೀರ್ಘಾವಧಿಗಳಲ್ಲಿಯೂ. ದೇವರ ಪಾಲನೆಯಲ್ಲಿ ವಿಶದಗೊಳಿಸಿರುವಂತೆ ಮತ್ತು ವಿಶಿಷ್ಟವಾಗಿ ಈ ಪ್ರಕರಣದಲ್ಲಿ ಕಂಡುಬರುವಂತೆ ಒಂದು ದಿನವೆಂದು ವ್ಯವಸ್ಥೆ ಮಾಡಿದ್ದಾನೆ ಎಂಬುದು ನಮ್ಮ ದೃಢನಿಶ್ಚಯವಾಗಿದೆ – ಆದಿ. 7:11; 7;13, ವಿಮೋ. 12: 40,41.

ಮಾತ್ರವೇ ಒಡಂಬಡಿಕೆಯಿಂದ ಧರ್ಮಶಾಸ್ತ್ರದವರೆಗೆ ನಾನೂರ ಮೂವತ್ತು ವರ್ಷಗಳು ಮತ್ತು ಈ ನ್ಯಾಯಸ್ಥಾಪಕರುಗಳ ಅವಧಿಯಲ್ಲಿ ಹಳೆಒಡಂಬಡಿಕೆಯ ಕಾಲಗಣನೆಯ ಬಗ್ಗೆ ಯಾವುದಾದರೂ ಸಮಂಜಸವಾದ ಅನಿಶ್ಚಿತತೆ ಇದ್ದಿರಬಹುದು ಮತ್ತು ಇವೆರಡನ್ನೂ ಹೊಸದರಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಇದು ಕೇವಲ ಅದಕ್ಕಿಂತ ಹೆಚಿನದೇನು ಅಲ್ಲದ ಹಾಗೆಯೇ ಆಗಿದ್ದಿರಬಹುದೆಂದು ನಾವು ಊಹಿಸಬಹುದೋ? ದೇವರು ಹಳೆ ಒಡಂಬಡಿಕೆಯ ದಾಖಲೆಗಳನ್ನು ಅಪೂರ್ಣವಾಗಿಟ್ಟು ಈ ವಿಷಯವನ್ನು ಮುಚ್ಚಿಹಾಕಿದ್ದಾನೆ ಮತ್ತು ನಂತರದಲ್ಲಿ ಈ ಕೊರತೆಯನ್ನು ಹೊಸ ಒಡಂಬಡಿಕೆಯಲ್ಲಿ ಒದಗಿಸಿದ್ದಾನೆ ಮತ್ತು ಇದರಿಂದ ಸೂಕ್ತ ಸಮಯದಲ್ಲಿ ಅದಕ್ಕೆ ಗಮನ ಹರಿಸುವಾಗ, ಈ ಲೆಕ್ಕವನ್ನು ಹೋಲಿಕೆ ಮಾಡಲು ಸಾಕಷ್ಟು ಆಸಕ್ತಿಯುಳ್ಳವರು ಮಹಾಸಮಯಪಾಲಕನ ಮೇಲೆ ಆತುಕೊಂಡವರಿಗೆ ಬೋಧಿಸುವಂತೆ ತಪ್ಪಿಹೋಗಿರುವ ಕೊಂಡಿಯನ್ನು ಕಂಡುಕೊಳ್ಳಬಹುದು ಎಂದು ಭಾವಿಸುವುದು ಹೆಚ್ಚು ಸಮಂಜಸವಾಗಬಹುದು.

| | | | | |
|---|---|---|---|---|
| ಸೌಲನ ಅವಧಿ | ........... | (ಅ.ಕೃ. 13:21) | ........... | 40 ವರ್ಷಗಳು |
| ದಾವೀದನ ಆಳ್ವಿಕೆ | ........... | (1 ಪೂರ್ವ 29:27) | ........... | 40 ವರ್ಷಗಳು |
| ಸೊಲೊಮೋನನ ಆಳ್ವಿಕೆ | ........... | (2 ಪೂರ್ವ 9:30) | ........... | 40 ವರ್ಷಗಳು |
| ರೆಹಬ್ಬಾಮನ ಆಳ್ವಿಕೆ | ........... | (2 ಪೂರ್ವ 12:13) | ........... | 17 ವರ್ಷಗಳು |
| ಅಬೀಯನ ಆಳ್ವಿಕೆ | ........... | (2 ಪೂರ್ವ 13:2) | ........... | 03 ವರ್ಷಗಳು |
| ಆಸನ ಆಳ್ವಿಕೆ | ........... | (2 ಪೂರ್ವ 16:13) | ........... | 41 ವರ್ಷಗಳು |
| ಯೆಹೋಷಫಾಟನ ಆಳ್ವಿಕೆ | ........... | (2 ಪೂರ್ವ 20:31) | ........... | 25 ವರ್ಷಗಳು |
| ಯೆಹೋರಾಮನ ಆಳ್ವಿಕೆ | ........... | (2 ಪೂರ್ವ 21:20) | ........... | 08 ವರ್ಷಗಳು |
| ಅಹಜ್ಯನ ಆಳ್ವಿಕೆ | ........... | (2 ಪೂರ್ವ 22:2) | ........... | 01 ವರ್ಷ |
| ಅತಲ್ಯಳ ಆಳ್ವಿಕೆ | ........... | (2 ಪೂರ್ವ 22:12) | ........... | 06 ವರ್ಷಗಳು |
| ಯೆಹೋವಾಷನ ಆಳ್ವಿಕೆ | ........... | (2 ಪೂರ್ವ 24:01) | ........... | 40 ವರ್ಷಗಳು |
| ಅಮಚ್ಯನ ಆಳ್ವಿಕೆ | ........... | (2 ಪೂರ್ವ 25:1) | ........... | 29 ವರ್ಷಗಳು |
| ಉಜ್ಜೀಯನ ಆಳ್ವಿಕೆ | ........... | (2 ಪೂರ್ವ 26:3) | ........... | 52 ವರ್ಷಗಳು |
| ಯೋತಾಮನ ಆಳ್ವಿಕೆ | ........... | (2 ಪೂರ್ವ 27:1) | ........... | 16 ವರ್ಷಗಳು |
| ಅಹಾಜನ ಆಳ್ವಿಕೆ | ........... | (2 ಪೂರ್ವ 28:1) | ........... | 16 ವರ್ಷಗಳು |
| ಹಿಜ್ಕೀಯನ ಆಳ್ವಿಕೆ | ........... | (2 ಪೂರ್ವ 29:1) | ........... | 29 ವರ್ಷಗಳು |
| ಮನಸ್ಸೆಯನ ಆಳ್ವಿಕೆ | ........... | (2 ಪೂರ್ವ 33.1) | ........... | 55 ವರ್ಷಗಳು |
| ಆಮೋನನ ಆಳ್ವಿಕೆ | ........... | (2 ಪೂರ್ವ 33:21) | ........... | 02 ವರ್ಷಗಳು |
| ಯೋಷೀಯನ ಆಳ್ವಿಕೆ | ........... | (2 ಪೂರ್ವ 34:1) | ........... | 31 ವರ್ಷಗಳು |
| ಯೋಹೋಯಾಕೀಮನ ಆಳ್ವಿಕೆ | ........... | (2 ಪೂರ್ವ 36: 5) | ........... | 11 ವರ್ಷಗಳು |
| ಚಿದ್ಕೀಯನ ಆಳ್ವಿಕೆ | ........... | (2 ಪೂರ್ವ 36:11) | ........... | 11 ವರ್ಷಗಳು |
| | | ಒಟ್ಟು | ........... | **513 ವರ್ಷಗಳು** |

### ಅರಸುಗಳ ಕಾಲ
### The Period of King

ಸೌಲನ ಆಳ್ವಿಕೆಯು ಕಡೆಯ ನ್ಯಾಯಾಧಿಪತಿಯ ನಂತರದಲ್ಲಿ ಅಥವಾ ನಾಲ್ವತ್ತು ವರ್ಷಗಳ ಅವಧಿಯಲ್ಲಿ, ಮೇಲೆ ಹೇಳಿದಂತೆ ದಾವೀದನು ಅರಸನಾಗಿ ಅಭಿಷೇಕ ಹೊಂದುವವರೆಗೆ; ಆತನನ್ನು ಅನುಸರಿಸಿ ದಾವೀದನ ಸಾಲಿನಲ್ಲಿನ ಅರಸುಗಳ ಅವಧಿಯನ್ನು ಪೂರ್ವಕಾಲದ ವೃತ್ತಾಂತದಲ್ಲಿ ಹೀಗೆ ಗುರುತಿಸಬಹುದು :–

### ದೇಶವು ಪಾಳುಬಿದ್ದ ಎಪ್ಪತ್ತು ವರ್ಷಗಳ ಕಾಲ
### The Severity Years of Desolation

ಇದು ನಮ್ಮನ್ನು ಆ ದೇಶವು ಪಾಳುಬಿದ್ದ ಕಾಲಾವಧಿಗೆ ಕೊಂಡೊಯ್ಯುತ್ತದೆ. ಅದು ಎಪ್ಪತ್ತು ವರ್ಷಗಳು ಇದ್ದು ಕೋರೆಷನ ಮೊದಲ ವರ್ಷದಲ್ಲಿ ಆ ಜನರು ಬಾಬೇಲಿನಿಂದ ಪುನಃವಶವಾದಾಗ ಅಂದರೆ ಕ್ರಿ.ಪೂ. 536ರಲ್ಲಿ ಮುಕ್ತಾಯಗೊಳ್ಳುತ್ತದೆ (2 ಪೂರ್ವ 36:20,23). ಈ ದಿನಾಂಕವು ಪ್ರಾಪಂಚಿಕ ಇತಿಹಾಸದಲ್ಲಿ ಉತ್ತಮವಾಗಿ

ಸ್ಥಾಪಿತಗೊಂಡಿದೆ. ಇದರಾಚೆ ಸತ್ಯವೇದದ ಘಟನಾವಳಿಗಳು ವಿಸ್ತರಣೆಗೊಳ್ಳುವುದಿಲ್ಲ.

### ಪುನಃಸ್ಥಾಪನಾ ಕಾಲದಿಂದ ಕ್ರಿ.ಶ. 1873ರ ವರೆಗಿನ ಕಾಲಾವಧಿ
### Period from the Restoration to A.D. 1873

ಎಪ್ಪತ್ತು ವರ್ಷಗಳ ಪಾಳು ಬಿದ್ದ ಅವಧಿಯ ಅಂತ್ಯದಲ್ಲಿ ಕೋರೆಷನ ಮೊದಲನೆಯ ವರ್ಷದಲ್ಲಿ ಬಾಬೇಲಿನಿಂದ ಯೆಹೂದ್ಯರು ಪುನಃಸ್ಥಾಪನೆಗೊಳ್ಳುವ ಕಾಲಾವಧಿಯಾದ ಕೋರೆಷನ ಮೊದಲನೆಯ ವರ್ಷದಿಂದ ಕ್ರಿ.ಶ. 01 ಎಂದು ಕರೆಯಲ್ಪಡುವವರೆಗಿನ ಸಂಗತಿಗಳು ಸತ್ಯವೇದದಲ್ಲಿ ದೊರೆಯುವುದಿಲ್ಲ. ಆದರೆ, ಈ ಹಿಂದೆ ಹೇಳಿದಂತೆ, ಅದು ಒಂದು ಪ್ರಾಪಂಚಿಕ ಇತಿಹಾಸವಾಗಿ 536 ವರ್ಷಗಳ ಅವಧಿ ಉತ್ತಮವಾಗಿ ಸ್ಥಾಪಿತಗೊಂಡಿದೆ. ಟಾಲೆಮಿ (Ptolemy) ಎಂಬ ಗ್ರೀಕ್–ಐಗುಪ್ತ ವಿದ್ವಾಂಸ, ಜಿಯೋಮೀಟರ್ ಮತ್ತು ಖಗೋಳ ಶಾಸ್ತ್ರಜ್ಞನು ಈ ಅಂಕೆಗಳನ್ನು ಬಲು ಚೆನ್ನಾಗಿ ಸ್ಥಾಪಿತಗೊಳಿಸಿದ್ದಾನೆ. ಇವುಗಳು ವಿದ್ವಾಂಸರುಗಳಿಂದ ಸಾಮಾನ್ಯವಾಗಿ ಒಪ್ಪಿಗೆಯಾಗಿವೆ ಮತ್ತು ಇದನ್ನು ಟಾಲೆಮಿ ಕೆನಾನ್ (Ptolemy Canon) ಎಂದು ಕರೆಯುತ್ತಾರೆ.

ಈ ರೀತಿಯಾಗಿ ನಾವು ಸೃಷ್ಟಿಯಿಂದ ಕ್ರೈಸ್ತ ಯುಗದವರೆಗಿನ ಒಂದು ಸ್ಪಷ್ಟವಾದ ಮತ್ತು ಸಂಪರ್ಕವುಳ್ಳ ಕಾಲಗಣನೆಗಳ ಸಾಲನ್ನು ಕಂಡುಕೊಳ್ಳುತ್ತೇವೆ ಮತ್ತು ಇದು ನಾಲ್ಕು ಸಾವಿರದ ಒಂದು ನೂರಾ ಇಪ್ಪತೆಂಟು ವರ್ಷಗಳಾಗಿವೆ (4128 years). ಕ್ರೈಸ್ತ ಯುಗದ 1872 ವರ್ಷಗಳೂ ಸೇರಿ ಕ್ರಿಸ್ತಶಕ 1873ನೇ ವರ್ಷದವರೆಗೆ ಆರು ಸಾವಿರ ವರ್ಷಗಳಾಗುತ್ತವೆ.

### ಇದನ್ನೂ ಮತ್ತು ಉಷರನ ಕಾಲಗಣನೆಯನ್ನೂ ಹೋಲಿಸಲಾಗಿದೆ
### (This and Usher's Chronology Compared)

ಮೇಲಣ ಕಾಲಗಣನೆಯು A.V ಯ ಮಾರ್ಜಿನ್ ನಲ್ಲಿರುವ ಉಷರ್ ಅವರ ಕ್ರಾನಾಲಜಿ (USHER's CHRONOLOGY) ಯಿಂದ ವಿಭಿನ್ನವಾಗಿದೆ ಎಂಬುದು ಕೆಲವರಿಗೆ ಕುತೂಹಲಕಾರಿಯಾಗಿದೆ. ಇವರೆಡರ ಭಿನ್ನತೆಯು ಪಾಳುಬಿದ್ದ ಎಪ್ಪತ್ತು ವರ್ಷಗಳ ಅವಧಿಯವರೆಗೆ ನೂರಾ ಇಪ್ಪತ್ನಾಲ್ಕು ವರ್ಷಗಳಾಗುತ್ತವೆ. ಈ ಬೇಧವು ಕೆಳಕಂಡಂತೆ 18,4,2 ಮತ್ತು 100 ವರ್ಷಗಳೆಂಬ ನಾಲ್ಕು ಅವಧಿಗಳುಂಟಾಗಿದೆ.

ಉಷರ್ (Usher) ಎಂಬಾತನು ಮೇಲೆ ಹೇಳಿದ ದಿನಾಂಕಗಳ 70 ವರ್ಷಗಳ ಪಾಳು ಬಿದ್ದ ಅವಧಿಯನ್ನು ಮೇಲೆ ತಿಳಿಸಿರುವುದಕ್ಕಿಂತ 18 ವರ್ಷಗಳಗಿಂತ ಮುಂಚಿತವಾಗಿ ಸೂಚಿಸಿರುತ್ತಾನೆ. ಅಂದರೆ, ಯೂದಾಯದ ಅರಸನಾದ ಚಿದ್ಕೀಯನ ಸಿಂಹಾಸನಾ ಪದಚ್ಯುತಿಗೂ ಮುಂಚಿನವುಗಳು. ಯಾಕೆಂದರೆ ಬಾಬೇಲಿನ ಅರಸನು ಆ ಸಮಯದಲ್ಲಿ ಅನೇಕರನ್ನು ಸೆರೆಗೆ ಒಯ್ದನು* (2 ಪೂರ್ವ 36:9,10; 17,2, ಅರಸು 24:8–16). ಆತನು ಸ್ಪಷ್ಟವಾಗಿ ಈ ಎಪ್ಪತ್ತು ವರ್ಷಗಳನ್ನು ಸೆರೆಹಿಡಿದ ಅವಧಿಯೆಂದು ಪರಿಗಣಿಸುವ ಅಸಾಮಾನ್ಯವಾದ ತಪ್ಪನ್ನು ಮಾಡುವುದಿಲ್ಲ. ಆದರೆ ಕರ್ತನು ಅವನ್ನು ಆ ದೇಶದ ಎಪ್ಪತ್ತು ವರ್ಷಗಳ ಪಾಳುಬಿದ್ದ ಅವಧಿಯೆಂದು ಪ್ರಕಟಿಸುತ್ತಾನೆ. ಆ ದೇಶವು ಯಾವ ನಿವಾಸಿಯೂ ಇಲ್ಲದಂತೆ ಪಾಳುಬಿದ್ದಿರಬೇಕಿತ್ತು. ಆದರೆ, ಚಿದ್ಕೀಯನ ಪದಚ್ಯುತಿಯ ಮೊದಲು ಹಾಗಿರಲಿಲ್ಲ (2 ಅರಸು 24:14). ಆದರೆ, ಇಸ್ರಾಯೇಲ್ಯರಲ್ಲಿ ಕಡು ಬಡವರಾದ ಕೆಲವರು ಮಾತ್ರವೇ ದ್ರಾಕ್ಷೆಯನ್ನು ಸಜ್ಜುಮಾಡಲು ಒಕ್ಕಲಿಗರಂತೆ ಅಲ್ಲಿಯೇ ಉಳುಕೊಂಡರೂ ಚಿದ್ಕೀಯನ ಪದಚ್ಯುತಿಯನ್ನು ಅನುಸರಿಸಿದ ಪಾಳುಬೀಳುವಿಕೆಯು ಪೂರ್ಣವಾದುದು (2 ಅರಸು 25:12). ಯಾಕೆಂದರೆ, ದೊಡ್ಡವರೂ, ಸಣ್ಣವರೂ ಒಳಗೊಂಡು ಈ ಎಲ್ಲಾ ಜನರೂ, ಸ್ವಲ್ಪ ಕಾಲದಲ್ಲಿಯೇ ಕಸ್ದೀಯರಿಗೆ ಹೆದರಿ ಓಡಿಹೋದರು (ವಚನ 26). ಇದರಲ್ಲಿ ಯಾವ ಅನುಮಾನವೂ ಇರಕೂಡದು; ಆದುದರಿಂದ ಈ ದೇಶದ ಪಾಳುಬಿದ್ದ ಅವಧಿಯನ್ನು ಲೆಕ್ಕಹಾಕುವಾಗ, ನಾವು ಮಾಡಿದಂತೆ ಚಿದ್ಕೀಯನ ಆಳ್ವಿಕೆಯು ಅಂತ್ಯವಾಗುವವರೆಗಿನ ಎಲ್ಲಾ ಅವಧಿಗಳನ್ನೂ ಪರಿಗಣಿಸಬೇಕಾಗುತ್ತದೆ.

ನಾಲ್ಕು ವರ್ಷಗಳ ವ್ಯತ್ಯಾಸವು ಯೆಹೋರಾಮನ ಆಳ್ವಿಕೆಯ ಕಾಲದ್ದು. ಉಷರನು ಈ ಆಳ್ವಿಕೆಯನ್ನು ನಾಲ್ಕು ವರ್ಷಗಳು ಎನ್ನುತ್ತಾನೆ. ಆದರೆ ಸತ್ಯವೇದವು ಅದನ್ನು ಎಂಟು ವರ್ಷಗಳು ಎಂದು ಹೇಳುತ್ತದೆ (2 ಪೂರ್ವ: 21:5; 2 ಅರಸು 8:17).

ಎರಡು ವರ್ಷಗಳ ವ್ಯತ್ಯಾಸದಲ್ಲಿ, ಒಂದು ವರ್ಷವು ಆಹಾಜನ ಆಳ್ವಿಕೆಯಲ್ಲಿ ಕಂಡುಬರುತ್ತದೆ. ಇದನ್ನು ಉಷರನು ಹದಿನೈದು ಎಂದಿದ್ದಾನೆ. ಆದರೆ ಸತ್ಯವೇದವು ಅದನ್ನು ಹದಿನಾರು ಎನ್ನುತ್ತದೆ (2 ಪೂರ್ವ 28:1; 2 ಅರಸು 16:2). ಮತ್ತೊಂದು ಯೆಹೋವಾಷನ ಕಾಲದಲ್ಲಿ ಕಂಡುಬರುತ್ತದೆ. ಅದನ್ನು ಉಷರನು ಮೂವತ್ತೊಂಬತ್ತು ಎಂದು ಎಣಿಕೆಮಾಡಿದರೆ, ಸತ್ಯವೇದವು ಅದನ್ನು ನಾಲ್ವತ್ತು ಎಂದು ಹೇಳುತ್ತದೆ (2 ಅರಸು 12:1; 2 ಪೂರ್ವ 24:1).

ಈ ಎಲ್ಲಾ ವ್ಯತ್ಯಾಸಗಳಿಗೆ ಕಾರಣ ಉಷರನು ಓರ್ವ ಯೆಹೂದ್ಯ ಇತಿಹಾಸಕಾರ ಜೋಸೆಫಸ್ ಎಂಬುವವನನ್ನು ಹಿಂಬಾಲಿಸಲು ಅಥವಾ ಹಿಂಬಾಲಿಸಲು ಪ್ರಯತ್ನಿಸಿದ್ದೇ

* ಗಮನಿಸಿ: ಈ ಭಾಗಶಃ ಪಾಳುಬಿಳುವಿಕೆಯು ಹನ್ನೊಂದು ವರ್ಷಗಳಲ್ಲಿ ಕಾಣಿಸಿಕೊಂಡಿತು. ಚಿದ್ಕೀಯನ ಪದಚ್ಯುತಿಯ ಹಿಂದಿನ ಹದಿನೆಂಟು ವರ್ಷಗಳಲ್ಲಿ ಅಲ್ಲ.

ಕಾರಣ ಎಂದು ನಾವು ಊಹಿಸಬಹುದು. ಜೋಸೆಫಸ್ಸನ ಲೆಕ್ಕಾಚಾರಗಳೆಲ್ಲವೂ ಈಗ ಸಾಮಾನ್ಯವಾಗಿ ಅಜಾಗರೂಕತೆಯುಳ್ಳದ್ದು ಮತ್ತು ತಪ್ಪಾದವುಗಳು ಆಗಿದ್ದವು ಎಂದು ಗುರುತಿಸಲಾಗಿದೆ. ಆದುದರಿಂದ, ನಾವು ಸತ್ಯವೇದದ ಮೇಲೆ ಮಾತ್ರವೇ ಆತುಕೊಳ್ಳತಕ್ಕದ್ದು ಮತ್ತು ದೇವರು ತಾನೇ ತನ್ನ ಸ್ವಂತ ವಿವರಣಾಕಾರನಾಗಿದ್ದಾನೆ.

ಅರಸರುಗಳ ಕಾಲದಲ್ಲಿ ಈ ಇಪ್ಪತ್ನಾಲ್ಕು ವರ್ಷಗಳ ವ್ಯತ್ಯಾಸವಲ್ಲದೆ, ಮೇಲೆ ಸತ್ಯವೇದ ಕಾಲಗಣನೆಗಳು ಮತ್ತು ಉಷರನ ಕಾಲಗಣನೆಗಳಲ್ಲಿ ಮತ್ತೊಂದು ವ್ಯತ್ಯಾಸವೂ ಇದೆ, ಅದೇನೆಂದರೆ, ನ್ಯಾಯಸ್ಥಾಪಕರ ಕಾಲದಲ್ಲಿ ಒಂದು ನೂರು ವರ್ಷಗಳು. ಇಲ್ಲಿ ಉಷರನು 1 ಅರಸು 6:1ರಲ್ಲಿ ಹೇಳಿರುವ "ಇಸ್ರಾಯೇಲ್ಯರು ಐಗುಪ್ತದೇಶವನ್ನು ಬಿಟ್ಟ ನಾನೂರ ಎಂಭತ್ತನೆಯ (480) ವರುಷದ ಅಂದರೆ ಇಸ್ರಾಯೇಲ್ಯರ ಅರಸನಾದ ಸೊಲೊಮೋನನ ಆಳಿಕೆಯ ನಾಲ್ಕನೆಯ ವರ್ಷದ ಎರಡನೆಯ ತಿಂಗಳಾದ ವೈಶಾಖ ಮಾಸದಲ್ಲಿ ..." ಎಂಬಿತ್ಯಾದಿ ಮಾತುಗಳಿಂದ ತಪ್ಪಿಹೋಗಿದ್ದಾನೆ. ಅದನ್ನು ಐನೂರ ಎಂಭತ್ತನೆಯ (580) ವರ್ಷ ಎಂಬುದಾಗಿ ಓದಿಕೊಳ್ಳಬೇಕಿತ್ತು. ಬಹುಶಃ ಇದು ನಕಲು ಮಾಡುವಾಗ ಉಂಟಾದ ತಪ್ಪಾಗಿದ್ದಿರಬಹುದು. ನಾವು ಸೊಲೊಮೋನನ ನಾಲ್ಕನೆಯ ವರ್ಷಕ್ಕೆ ದಾವೀದನ ನಾಲ್ವತ್ತು ವರ್ಷಗಳನ್ನು ಮತ್ತು ಸೌಲನ ನಾಲ್ವತ್ತು ವರ್ಷಗಳ ಅವಧಿಯನ್ನು ಕೂಡಿಸಿದರೆ ಮತ್ತು ಐಗುಪ್ತವನ್ನು ಬಿಟ್ಟು ದೇಶ ವಿಭಜನೆಯವರೆಗಿನ ನಾಲ್ವತ್ತಾರು ವರ್ಷಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ನಮಗೆ ನೂರಾಮೂವತ್ತು ವರ್ಷಗಳು ದೊರೆಯುತ್ತವೆ. ಅದನ್ನು ನಾನೂರಾ ಎಂಬತ್ತು ವರ್ಷಗಳಿಂದ ಕಳೆದರೆ ನ್ಯಾಯಸ್ಥಾಪಕರ ಪುಸ್ತಕದಲ್ಲಿ ಮತ್ತು ಪೌಲನು ಹೇಳಿರುವ ನಾನೂರ ಐವತ್ತು ವರ್ಷಗಳ ಬದಲಾಗಿ ನ್ಯಾಯಸ್ಥಾಪಕರ ಕಾಲಾವಧಿಗೆ ಈ ಮುಂಚೆ ತೋರಿಸಿದಂತೆ ಕೇವಲ ಮುನ್ನೂರು ಐವತ್ತು ವರ್ಷಗಳು ಉಳಿಯುತ್ತವೆ. ಇಬ್ರಿಯ ಕಥಾಪಾತ್ರವಾದ ದಲೇತ್ (Daleth) (4) ಬಹಳವಾಗಿ ಹೋಲಿಕೆಯಾಗುವ hay (5) ಎಂಬ ಗುರುತಿಗೆ ಹೋಲಿಕೆಯಾಗುತ್ತದೆ. ಆದುದರಿಂದ ಬಹುಶಃ ಇದು ನಕಲುಗಾರನ ಪ್ರಮಾದವಾಗಿದ್ದಿರ ಬಹುದೆಂಬುದು ನಮ್ಮ ಅನಿಸಿಕೆ ಮತ್ತು ಈ ಕಾರಣದಿಂದ ಈ ತಪ್ಪಾಗಿದೆ ಎಂಬುದು ನಮ್ಮ ಊಹೆಯಾಗಿದೆ. ಈ ಸ್ಥಿತಿಯಲ್ಲಿ ನಾವು 1 ಅರಸು 6:1 ರಲ್ಲಿ ಇರುವ ಐನೂರಾ ಎಂಬತ್ತು ವರ್ಷಗಳು ಎಂಬುದನ್ನು ಇತರೆ ಹೇಳಿಕೆಗಳೊಂದಿಗೆ ಸಮರ್ಪಕವಾದ ಹೊಂದಾಣಿಕೆ ಯಲ್ಲಿದೆ ಎಂದು ಓದಿಕೊಳ್ಳಬೇಕಾಗುತ್ತದೆ.

ಈ ರೀತಿಯಲ್ಲಿ ದೇವರ ವಾಕ್ಯವು ಯಾವುದಾದರೂ ಕಾರಣಗಳಿಂದ ನುಸುಳಿರಬಹುದಾದ* ಕೆಲವೊಂದು ಸಣ್ಣ ಪುಟ್ಟ ತಪ್ಪುಗಳನ್ನು ಸರಿಪಡಿಸುತ್ತದೆ. ಕಾಲಾವಧಿಯಲ್ಲಿ ಕಂಡು ಬರುವ ಇಂಥಾಃ ಬಿರುಕುಗಳಿಗೆ ನೂತನ ಒಡಂಬಡಿಕೆಯು ಸ್ಫೂರ್ತಿದಾಯಕ ಸಾಕ್ಷ್ಯಗಳ ಸೂಕ್ತ ಸೇತುವೆಯಾಗಿದೆ.

ಹಾಗಾಗಿ, ಅನಂತರದಲ್ಲಿ ಉಷರನು ಕ್ರಿ.ಶ. 01ರ ದಿನಾಂಕವನ್ನು ಆದಾಮನ ಸೃಷ್ಟಿಯಿಂದ 4005 ವರ್ಷಗಳಂತೆ ಎಂದು ಗುರುತಿಸುತ್ತಾನೆ, ಆದರೆ ನಾವು ಕಂಡುಕೊಂಡಂತೆ ಸತ್ಯವೇದದ ದಾಖಲೆಗಳ ಪ್ರಕಾರ ಅದು 4129 ಆಗಬೇಕಿದೆ ಮತ್ತು ಈ ರೀತಿಯಲ್ಲಿ ಕ್ರಿ.ಶ. 1872ನೇ ವರ್ಷವು ಈ ಪ್ರಪಂಚದ 6000ನೇ ವರ್ಷವಾಗುತ್ತದೆ ಮತ್ತು ಕ್ರಿ.ಶ. 1873ನೇ ವರ್ಷವು 7000ನೇ ವರ್ಷಾವಧಿಯ ಅಂದರೆ ಏಳನೆಯ ಮಿಲಿಯಾಂತರ ವರ್ಷಗಳ ಪ್ರಾರಂಭವಾಗುತ್ತದೆ ಅಥವಾ ಭೂಮಿಯ ಇತಿಹಾಸದ ಸಾವಿರ ವರ್ಷದ ದಿನವಾಗುತ್ತದೆ.

ಈ ರೀತಿಯಲ್ಲಿ ಸತ್ಯವೇದ ಮಾತ್ರದಿಂದ ಸೃಷ್ಟಿಯಿಂದ ಉತ್ತಮವಾಗಿ ಸಿದ್ಧಾಂತಪಡಿಸಿದ ಲೌಕಿಕ ಇತಿಹಾಸದವರೆಗೆ ಕಲೆಹಾಕಿದ ಕಾಲಗಣನೆಯು ಸ್ಪಷ್ಟವೂ, ಪ್ರಬಲವೂ ಆಗಿದೆ, ದೈವಿಕ ಒದಗಿಸುವಿಕೆಯ ವೈಶಿಷ್ಟ್ಯಪೂರ್ಣ ಸಾಕ್ಷಗಳನ್ನು ಸಹಾ ಕ್ರಮೇಣವಾಗಿ ಬಿಚ್ಚಿಕೊಳ್ಳುವಂತೆ ಅದರ ಅಂತರಂಗದಲ್ಲಿ ಹುದುಗಿಸಿಕೊಂಡಿದೆ. ಇವುಗಳು ಕ್ರೈಸ್ತ ಯುಗದ ನಂಬಲರ್ಹ ದಿನಾಂಕಗಳೊಡನೆ ಮತ್ತು ಅದರ ಪೂರ್ವದಲ್ಲಿನ ಹಲವು ಶತಮಾನಗಳಲ್ಲಿ ತನ್ನ ಕೈಯಲ್ಲಿಟ್ಟುಕೊಂಡು ಅದೇ ಸಮಯ ಪ್ರವಾಹದಲ್ಲಿ ಸರಿಯಾಗಿ ನಾವು ಅದರ ನೆಲೆಯನ್ನು ಕಂಡುಕೊಳ್ಳುವಂತೆ ಮಾಡುತ್ತದೆ. ನಾವು ನಿಜವಾಗಿ ಏಳನೆಯ ಸಹಸ್ರಮಾನದ ಯುಗವನ್ನು ಅದರ ಪ್ರಾರಂಭವು ಪ್ರವಾದಿಗಳು ಮುಂತಿಳಿಸಿದಂತೆ ಅಂಧಕಾರವುಳ್ಳದ್ದೂ, ತೊಂದರೆಗಳಿಂದ ಕೂಡಿದ್ದೂ ಎಂದು ತಿಳಿದಿದ್ದರೂ, ಬಿರುಗಾಳಿ–ಮೋಡಗಳು ಅಲ್ಲಿ ಕೂಡಿದ್ದು ಕತ್ತಲು ಹೆಚ್ಚಾಗುತ್ತಿದ್ದರೂ ನಾವು ಅದರೊಳಗೆ ಪ್ರವೇಶಿಸುತ್ತಿದ್ದೇವೆ ಎಂಬುದನ್ನು ಗ್ರಹಿಸಿಕೊಂಡು ಸಂತೋಷಿಸುತ್ತಾ ಆಶಾಭಾವನೆಯಿಂದ ನಮ್ಮ ಶಿರಸ್ಸನ್ನು ಎತ್ತಲು ಪ್ರಾರಂಭಿಸುತ್ತೇವೆ

---

* ಇದೇ ತರಹದ ವ್ಯತ್ಯಾಸವನ್ನು 2 ಅರಸು 24:8ರಲ್ಲಿರುವುದನ್ನು 2 ಪೂರ್ವಕಾಲವೃತ್ತಾಂತ 36:9ರೊಂದಿಗೆ ಹೋಲಿಸುವಾಗ ಗಮನಿಸುತ್ತೇವೆ, ಯೋಹೋಯಾಖೀನನು ಅರಸನಾದಾಗ ಹದಿನೆಂಟು ವರ್ಷದವನಾಗಿದ್ದನು ಎಂತಲೂ, ಮತ್ತೊಂದು ತಪ್ಪಾಗಿ ಎಂಟು ವರ್ಷದವನಾಗಿದ್ದನು ಎಂತಲೂ ಹೇಳುತ್ತವೆ. ಆತನು ಕೇವಲ ಮೂರು ತಿಂಗಳ ಕಾಲ ರಾಜ್ಯಭಾರ ಮಾಡಿದಾಗ ಯೆಹೋವನ ದೃಷ್ಟಿಯಲ್ಲಿ ಕೆಟ್ಟವುಗಳನ್ನೇ ಮಾಡಿದನು. ಯೆಹೋವನು ಅವನನ್ನು ಸೆರೆವಾಸ ಮುಂತಾದವುಗಳಿಗೆ ಒಪ್ಪಿಸಿ ಶಿಕ್ಷಿಸಿದನು. ಇಂಥಾಃ ತಪ್ಪುಗಳು ಸಾಮಾನ್ಯವಾಗಿ ಆಗುತ್ತಲೇ ಇರುತ್ತವೆ, ಆದರೆ ದೇವರು ನಕಲು ಮಾಡುವವರ ತಪ್ಪುಗಳು ಪ್ರಕಟವಾಗುವಂತೆ ತನ್ನ ವಾಕ್ಯಗಳನ್ನು ರಕ್ಷಿಸಿದ್ದಾನೆ ಮತ್ತು ಆತನ ವಾಕ್ಯದ ಸಾಮರಸ್ಯವು ನಂಬಿಕೆಗೆ ವ್ಯಾಪಕವಾದ ಬುನಾದಿಯನ್ನು ಒದಗಿಸುತ್ತದೆ.

## ನಮ್ಮ ಕರ್ತನ ಜನನ ದಿನ
## The Date of Our Lord's Birth

ಆರನೇ ಶತಮಾನದಲ್ಲಿ ಅಂದರೆ, ಪರ್ಷಿಯಾದ ಅರಸನಾಗಿದ್ದ ಕೊರೇಷನ ಮೊದಲನೆಯ ವರ್ಷದ ನಂತರದ 536ನೇ ವರ್ಷದಲ್ಲಿ* ಕ್ರೈಸ್ತ ಸಭೆಯು ನಮ್ಮ ಕರ್ತನ ಜನನದಿಂದ ಸಮಯವನ್ನು ಲೆಕ್ಕ ಹಾಕಲು ಪ್ರಾರಂಭಿಸಿತು ಮತ್ತು ಈಗ ಇರುವಂತೆ ಅದನ್ನು "ಕ್ರಿಸ್ತ ಶಕ" (ಕ್ರಿ.ಶ = A.D.) ಎಂದು ಗೊತ್ತುಪಡಿಸಿದರು; ಅವರು ಅದನ್ನು ಸರಿಯಾಗಿ ಇಟ್ಟರೋ ಇಲ್ಲವೋ ಎಂಬುದು ಈಗ ತಾನೇ ಕೊಟ್ಟ ಕಾಲಗಣನೆಗೆ ದಕ್ಕೆಯನ್ನುಂಟು ಮಾಡುವುದಿಲ್ಲ. ಇದು ಆದಾಮನ ಸೃಷ್ಟಿಯಿಂದ 6000 ನೇ ವರ್ಷದಲ್ಲಿ ಕ್ರಿಸ್ತಶಕ 1872ರಲ್ಲಿ ಮುಕ್ತಾಯಗೊಳ್ಳುತ್ತದೆ ಎಂಬುದನ್ನು ತೋರಿಸುತ್ತದೆ. ಯಾಕೆಂದರೆ, ಇದು ಕ್ರಿಸ್ತಶಕ ಎಂದು ಗೊತ್ತುಪಡಿಸಿದಂದಿನಿಂದ 1872 ವರ್ಷಗಳಾಗುತ್ತವೆ ಮತ್ತು ಅದು ನಮ್ಮ ಕರ್ತನು ಜನಿಸಿದ ವರ್ಷವಾಗಿರಲಿ ಅಥವಾ ಬಿಡಲಿ ಅದು ಕೊರೇಷನ ಮೊದಲ ವರ್ಷವು ಆ ವರ್ಷಕ್ಕಿಂತ (ಕ್ರಿ.ಶ.) 536 ವರ್ಷಗಳಷ್ಟು ಹಿಂದಿನದಾಗಿತ್ತು.

ನಾವು ಇದನ್ನು ಬಹುಶಃ ಸಮಯ ಹೊಂದಿರುವ ದೃಷ್ಟಾಂತವಾಗಿ ಒಂದು ಗೆರೆ ಮತ್ತು ಸ್ಟಾರ್‌ನೊಂದಿಗೆ ಉತ್ತಮವಾಗಿ ಈ ರೀತಿಯಲ್ಲಿ ವಿವರಿಸಬಹುದು: ಕ್ರಿ.ಪೂ__________*____________ಕ್ರಿ.ಶ. ಕೆಳಗಿನ ಗೆರೆಯು ಆದಾಮನ ಸೃಷ್ಟಿಯಿಂದ ಕ್ರಿ.ಶ. 1873 ರವರೆಗೆ ಭೂಲೋಕದ ಇತಿಹಾಸದವರೆಗಿನ 6000 ವರ್ಷಗಳನ್ನು ಪ್ರತಿನಿಧಿಸಲಿ; ನಕ್ಷತ್ರ (*)ವು ಕ್ರಿಪೂ ಮತ್ತು ಕ್ರಿ.ಶ. ಇವುಗಳ ಮಧ್ಯೆಯಲ್ಲಿರುವ ತಿರುವು ಅಂಶವನ್ನು ಪ್ರತಿನಿಧಿಸಲಿ. ಈ ಎರಡೂ ಅಂಶಗಳನ್ನು ಎರಡು ರೀತಿಯಲ್ಲಿಯೂ ಚಲಿಸುವಂತೆ ಮಾಡಿದರೂ ಅದು ವರ್ಷಗಳ ಹೆಸರನ್ನು ಬದಲಿಸುತ್ತದೆಯೇ ಹೊರತು ಸಮಸ್ತ ಅವಧಿಯ ವಿಸ್ತಾರತೆಯನ್ನು ಬದಲಿಸುವುದಿಲ್ಲ. ಕ್ರಿ.ಶ. ಅಂಶವನ್ನು ಹಿಂದಕ್ಕೆ ಚಲಿಸಿದರೆ ಒಂದು ವರ್ಷವು ಕ್ರಿಸ್ತಪೂರ್ವ (ಕ್ರಿ.ಪೂ. = B.C.) ಕಡಿಮೆಯಾಗುತ್ತದೆ. ಒಂದು ವರ್ಷ ಮುಂದಕ್ಕೆ ಚಲಿಸುವಾಗ ಅದು ಒಂದು ವರ್ಷ ಹೆಚ್ಚು ಕ್ರಿಸ್ತ ಶಕ (ಕ್ರಿ.ಶ) ಆಗುತ್ತದೆ. ಆದರೆ ಕ್ರಿ.ಪೂ. ಮತ್ತು ಕ್ರಿ.ಶ.ಗಳ ಮೊತ್ತವು ಆಗಲೂ ಒಂದೇ ಆಗಿರುತ್ತದೆ. ಯಾಕೆಂದರೆ ಒಂದರಿಂದ ತೆಗೆದುಕೊಂಡ ಮೊತ್ತವು ಯಾವಾಗಲೂ ಮತ್ತೊಂದಕ್ಕೆ ಕೂಡುವುದಾಗಿದೆ. ಪರಂತು ನಾವೀಗ ಸಂಕ್ಷಿಪ್ತವಾಗಿ ನಮ್ಮ ಕರ್ತನ ಜನನ ದಿನವನ್ನು ಪರೀಕ್ಷಿಸೋಣ. ಅದು ನಮ್ಮ ಮುಂದಿನ ಅಧ್ಯಯನಗಳಿಗೆ ಅನುಕೂಲವಾಗುತ್ತದೆ.

ನಾವು ಹುದುವಾಗಿ ಒಪ್ಪಿಕೊಂಡ ಕ್ರಿಸ್ತಪೂರ್ವವು ನಾಲ್ಕು ವರ್ಷಗಳ ಮೊತ್ತಕ್ಕೆ ಸರಿಯಾಗಿಲ್ಲ, ನಮ್ಮ ಕರ್ತನು ಕ್ರಿ.ಪೂ. ಎಂದು ನಿಶ್ಚಯಿಸಿರುವುದಕ್ಕಿಂತ ನಾಲ್ಕು ವರ್ಷಗಳ ಹಿಂದೆಯೇ ಅಂದರೆ ಕ್ರಿ.ಪೂ. 4ರಲ್ಲಿ ಜನಿಸಿದನು ಎನ್ನುವುದು ವಿದ್ವಾಂಸರುಗಳಲ್ಲಿ ಸಂಪ್ರದಾಯವಾಗಿಬಿಟ್ಟಿದೆ. ಈ ವಿಚಾರಸರಣಿಯನ್ನು ಅಮೇರಿಕನ್ ವರ್ಷನ್ ಪ್ರಕಾಶಕರು (A.V. Publishers) ಅನುಸರಿಸುತ್ತಿದ್ದಾರೆ. ಕ್ರಿ.ಪೂ. 4 ನಮ್ಮ ಕರ್ತನ ನಿಜವಾದ ಜನನ ದಿವಸವೆಂದು ನಾವು ಒಪ್ಪಿಕೊಳ್ಳುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಆತನು ನಮ್ಮ ಸಾಮಾನ್ಯ ಕಾಲ ಕ್ರಿಸ್ತಶಕಕ್ಕಿಂತ ಕೇವಲ ಒಂದು ವರ್ಷ ಮೂರು ತಿಂಗಳ ಹಿಂದೆಯಷ್ಟೇ ಕ್ರಿ.ಪೂ.2ರ ಅಕ್ಟೋಬರ್ ತಿಂಗಳಲ್ಲಿ ಕರ್ತನ ಜನನವಾಯಿತು ಎಂದು ನಾವು ಕಂಡುಕೊಳ್ಳುತ್ತೇವೆ.

ಅನೇಕರು ಕ್ರಿಸ್ತಶಕವನ್ನು ಇನ್ನೂ ನಾಲ್ಕು ವರ್ಷಗಳ ಹಿಂದೆಯೇ ಪ್ರಾರಂಭಿಸಿ ಕರ್ತನ ಜನನವನ್ನು ಕರಾರುವಾಕ್ಕಾಗಿ ಗುರುತು ಮಾಡಬಹುದಿತ್ತು ಎಂಬ ಹಕ್ಕಿನ ಹೇಳಿಕೆಗೆ ಸಾಮಾನ್ಯವಾದ ಕಾರಣವೇನೆಂದರೆ, ಯೆಹೂದ್ಯ ಇತಿಹಾಸಕಾರನಾದ ಜೊಸೆಫಸ್ ಎಂಬಾತನ ಮಹಾ ಹೆರೋದನ ಆಳ್ವಿಕೆಯ ವ್ಯಾಪ್ತಿಯ ಬಗೆಗಿನ ಕೆಲವೊಂದು ಹೇಳಿಕೆಗಳೊಂದಿಗೆ ಹೊಂದಾಣಿಕೆಯನ್ನು ವ್ಯಕ್ತಪಡಿಸುವ ಅಭಿಲಾಷೆಯಾಗಿದೆ.

ಆತನ ಒಂದು ಹೇಳಿಕೆಯ ಪ್ರಕಾರ, ಈ ಹೆರೋದನು ಕ್ರಿ.ಶ. ಎಂದು ಎಣಿಕೆ ಮಾಡಿದ ವರ್ಷದಿಂದ ಮೂರು ವರ್ಷಗಳ ಹಿಂದೆ ಮರಣಪಟ್ಟನು ಎಂದು ಕಂಡುಬರುತ್ತದೆ. ಇದು ನಿಜವಾಗಿದ್ದ ಪಕ್ಷದಲ್ಲಿ ನಮ್ಮ ಕರ್ತನು ಕ್ರಿ.ಪೂ. 4ರಲ್ಲಿ ಜನಿಸಿದನು ಎಂಬುದು ನಿಜವಾಗುತ್ತದೆ. ಯಾಕೆಂದರೆ, ಹೆರೋದನು ಬೆತ್ಲೆಹೇಮಿನಲ್ಲಿ ಮಕ್ಕಳನ್ನು ಸಂಹರಿಸಲು ಆಜ್ಞೆ ವಿಧಿಸಿದ್ದನು. ಶಿಶುವಾದ ಯೇಸುವು ಆತನಿಂದ ಬಿಡುಗಡೆ ಹೊಂದಿದನು (ಮತ್ತಾಯ 2:14–16). ಆದರೆ ಈ ಜೊಸೆಫಸ್‌ನ ಹೇಳಿಕೆಯು ನಂಬಲರ್ಹವೇ ? ಹೆರೋದನು ಕ್ರಿಸ್ತಶಕಕ್ಕೆ ನಾಲ್ಕು ವರ್ಷ ಮೊದಲು ಮರಣಿಸಿದನೇ ? ಇಲ್ಲ, ಎಂದು ನಾವು ಉತ್ತರಿಸುತ್ತೇವೆ : ಜೊಸೆಫೆಸ್ ಒಬ್ಬನೇ ನಿರ್ಧಾರ ಮಾಡಲು ಆತನಿಗೆ ಸಾಕಷ್ಟು ಅಧಿಕಾರವಿಲ್ಲ. ಯಾಕೆಂದರೆ ಆತನ ದಾಖಲೆಗಳಲ್ಲಿ ಹಲವಾರು ದೋಷಗಳಿವೆ ಎಂದು ತಿಳಿದುಬಂದಿದೆ.

ಆದರೂ, ಈ ಅಭಿಪ್ರಾಯವು ಚಾಲ್ತಿಯಲ್ಲಿದೆ. ಕ್ರಿ.ಪೂ. ನಾಲ್ಕು ಎಂಬುದು ಸಾಮಾನ್ಯವಾಗಿ ಒಪ್ಪಿಗೆ ಪಡೆದಿದೆ ಮತ್ತು ಐತಿಹಾಸಿಕ ಘಟನೆಗಳನ್ನೂ, ಮತ್ತು ದಿನಾಂಕಗಳನ್ನೂ ಯಾವುದೋ ರೀತಿಯಲ್ಲಿ ಈ ವಾದಕ್ಕೆ ಬೆಂಬಲಿಸುವಂತೆ ತಿರುಚಲಾಗಿದೆ. ಕ್ರಿ.ಪೂ. ನಾಲ್ಕು ಎಂಬುದು ಸರಿಯಾದ ದಿನಾಂಕ ಎಂಬುದಕ್ಕೆ ಇರಬಹುದಾದ ಸಮರ್ಥನೆಯಲ್ಲಿ ಜೊಸೆಫಸ್ಸನು ಹೇಳುವಂತೆ ಹೆರೋದನ ಮರಣದ ಸ್ವಲ್ಪವೇ

* ಕ್ರಿ.ಶ. ವರ್ಷವು ಆರನೆಯ ಶತಮಾನದಲ್ಲಿ ಡಿಯೊನಿಸಿಯಸ್ ಎಕ್ಸಿಗಸ್ (Dionysius Exiguss) ಮತ್ತು ಆ ಕಾಲದ ಇತರ ವಿದ್ವಾಂಸರುಗಳಿಂದ ಪ್ರಾರಂಭವಾಯಿತು. ಆದರೂ ಇದು ಮುಂದಿನ ಎರಡು ಶತಮಾನಗಳವರೆಗೆ ಸಾಮಾನ್ಯವಾದ ಉಪಯೋಗದಲ್ಲಿ ಬರಲಿಲ್ಲ.

ಮುನ್ನ ಚಂದ್ರ ಗ್ರಹಣವೊಂದು ಸಂಭವಿಸಿತ್ತು ಎಂಬುದೂ ಒಂದಾಗಿದೆ. ಆ ಚಂದ್ರ ಗ್ರಹಣದ ಬಗ್ಗೆ ತಿಳಿದಿರುವ ಸಂಗತಿಗಳೆಂದರೆ: ಹೆರೋದನು ದೇವಸ್ಥಾನದ ಮುಂದುಗಡೆಯ ದ್ವಾರದ ಮೇಲೆ ಒಂದು ಬೃಹತ್ತಾದ ಬಂಗಾರದ ಹದ್ದನ್ನು ಇರಿಸಿದ್ದನು. ಇಬ್ಬರು ಪ್ರಸಿದ್ಧ ಯೆಹೂದಿಗಳಾದ ಮತ್ತೀಯ ಮತ್ತು ಯೂದ ಎಂಬುವವರು ಆ ಬಂಗಾರದ ಹದ್ದಿನ ಮೂರ್ತಿಯನ್ನು ಕಿತ್ತುಹಾಕುವಂತೆ ಕೆಲವು ಯುವಕರನ್ನು ಪ್ರಚೋದಿಸಿದರು, ಅವರು ಹಾಗೆಯೇ ಮಾಡಲಾಗಿ ಅವರನ್ನು ಬಂಧಿಸಿ ಗಲ್ಲಿಗೇರಿಸಲಾಯಿತು. ಈ ಸಂಗತಿಯನ್ನು ಸ್ಪಷ್ಟ ಪಡಿಸುವಂತೆ, ಜೊಸೆಫಸ್ಸನು ಆ ಸಮಯದಲ್ಲಿ ಮತ್ತೊಬ್ಬ ಮತ್ತೀಯನಿದ್ದನು. ಆತನು ಮಹಾ ಯಾಜಕನಾಗಿದ್ದನು. ಹಾಗೂ ಬಂಡಾಯ ಪ್ರಚೋದನೆಯ ಹಂಬಲವುಳ್ಳವ ನಾಗಿರಲಿಲ್ಲ ಎಂಬುದನ್ನು ಇದಕ್ಕೆ ಸಂಬಂಧಿಸುತ್ತಾನೆ. ನಂತರಲ್ಲಿ ಆತನು ಅದಕ್ಕೆ "ಹೆರೋದನು ಆತನ ಮಹಾಯಾಜಕತನವನ್ನು ರದ್ದುಗೊಳಿಸಿದನು ಮತ್ತು ಬಂಡಾಯವೆದ್ದ ಇನ್ನೊಬ್ಬ ಮತ್ತೀಯನನ್ನು ಆತನ ಸಂಗಡಿಗರೊಂದಿಗೆ ಜೀವಂತವಾಗಿ ಸುಟ್ಟುಹಾಕಿದನು, ಮತ್ತು ಅದೇ ರಾತ್ರಿ ಚಂದ್ರ ಗ್ರಹಣವುಂಟಾಯಿತು" ಎಂಬುದನ್ನು ಕೂಡಿಸುತ್ತಾನೆ. ಇದು ಹೆರೋದನ ಕಟ್ಟಕಡೆಯ ಮಹಾಕಾರ್ಯವೆಂಬುದಾಗಿ ದಾಖಲೆ ಗೊಂಡಿದೆ ಮತ್ತು ಅದಕ್ಕೆ ದಿನಾಂಕವೊಂದನ್ನು ನೀಡಲಾಗಿದ್ದು ಆ ದಿನಾಂಕವು ಬಹುಶಃ ಮೇಲೆ ಹೇಳಿದ ಚಂದ್ರಗ್ರಹಣವನ್ನು ಗುರುತಿಸುವ ಜೊಸೆಫಸ್ಸನ ಕ್ರಿ.ಪೂ. 4ರ ದಿನಾಂಕದೊಂದಿಗೆ ಹೊಂದಾಣಿಕೆಯಾಗಬಹುದು.

ಕೆಲವೊಮ್ಮೆ ಒಂದೇ ವರ್ಷದಲ್ಲಿ ಸ್ಪಷ್ಟವಾಗಿ ವಿಶಿಷ್ಟ ಸಂದರ್ಭಗಳಲ್ಲಿ ನಾಲ್ಕು ಚಂದ್ರಗ್ರಹಣಗಳು ಉಂಟಾಗಬಹುದು. ಕೆಲವು ವಿಚಿತ್ರ ಸಂದರ್ಭಗಳನ್ನು ಹೊರತುಪಡಿಸಿ ಅಂಥಾ ದಾಖಲೆಗಳು ಏನನ್ನೂ ರುಜುವಾತುಪಡಿಸುವುದಿಲ್ಲ. ರಾತ್ರಿಯ ಸಮಯ, ವರ್ಷದ ಸಮಯ ಮತ್ತು ಅಸ್ಪಷ್ಟವಾದ ಪ್ರಮಾಣ ಇವುಗಳೆಲ್ಲಾ ಹಲವಾರು ಸಮಯದಲ್ಲಿದ್ದಂತೆ ಈಗಲೂ ಕೊಡಲ್ಪಟ್ಟಿದ್ದು ದಾಖಲೆಯು ಬಹಳ ಮೌಲ್ಯವುಳ್ಳದ್ದಾಗಿದೆ; ಆದರೆ ನಾವೀಗ ಪರಿಗಣಿಸುತ್ತಿರುವ ಪ್ರಕರಣದಲ್ಲಿ, ಈ ರೀತಿಯಾಗಿ ಯಾವುದೂ ಇರುವುದಿಲ್ಲ; ಆದುದರಿಂದ ಕಾಲಗಣನೆಗೆ ಸಂಬಂಧಿಸಿದಂತೆ ದಾಖಲೆಯಿಂದ ಯಾವುದೂ ರುಜುವಾತುಗೊಂಡಿಲ್ಲ. ಜೊಸೆಫಸ್ಸನು ಈ ಘಟನೆಯ ಮುನ್ನ ಪಾಲಿಸಲಾದ ಉಪವಾಸದ ಬಗ್ಗೆ ಹೇಳುತ್ತಾನೆ, ಆದರೆ ಯಾವ ಉಪವಾಸ, ಮತ್ತು ಎಷ್ಟು ಸಮಯದ ಹಿಂದೆ ಎಂಬುದನ್ನು ಹೇಳಿರುವುದಿಲ್ಲ.

ಯಾವಾಗಲೂ ಆಗುವಂತೆ, ಕ್ರಿ.ಪೂ. 4ರಲ್ಲಿ ಒಂದೇ ಒಂದು ಚಂದ್ರಗ್ರಹಣವಾಗಿದೆ. ಆದರೆ ಕ್ರಿ.ಪೂ. 1 ರಲ್ಲಿ ಮೂರು ಚಂದ್ರಗ್ರಹಣಗಳು ಉಂಟಾಗಿವೆ. ಕ್ರಿ.ಪೂ. 4ರಲ್ಲಿನ ಚಂದ್ರಗ್ರಹಣವು ಭಾಗಶಃವಾದುದು (partial) (ಆರು ಅಂಕ ಅಥವಾ ½ ಚಂದ್ರ ಮಾತ್ರ ಮಬ್ಬಾಗಿರುವುದು. ಆದರೆ ಕ್ರಿ.ಪೂ. 1 ರಲ್ಲಿ ನಡೆದ ಎಲ್ಲಾ ಮೂರು ಚಂದ್ರಗ್ರಹಣಗಳೂ ಪೂರ್ಣ ಪ್ರಮಾಣದ್ದಾಗಿದ್ದವು. ಚಂದ್ರನು ಪೂರ್ತಿಯಾಗಿ ಮಂಕಾಗಿದ್ದನು ಮತ್ತು ನಿಜವಾಗಿಯೂ ದೀರ್ಘಕಾಲದ್ದಾಗಿದ್ದು ಘಟನೆಯನ್ನು ಹೆಚ್ಚು ಗಮನಾರ್ಹವಾಗಿ ಮಾಡಿದ್ದವು. ಹೀಗಾಗಿ ಈ ಚಂದ್ರಗ್ರಹಣದ ವಿಚಾರ ಸರಣಿಗೆ ಯಾವುದೇ ಪ್ರಾಮುಖ್ಯತೆಯಲ್ಲಿ ಅದು ನಿಶ್ಚಯವಾಗಿಯೂ ಮೊದಲು ಹೇಳಿದ್ದ ದಿನಾಂಕ ಕ್ರಿ.ಪೂ.4ರ ಪರವಾಗಿರುವುದಿಲ್ಲ.

ದುರದೃಷ್ಟವಷಾತ್, ಹೆರೋದನ ಮರಣದ ಸಮಂಜಸವನ್ನು ಯಾವುದೇ ನಂಬಲರ್ಹ ಇತಿಹಾಸಕಾರನೂ ನೀಡಿರುವುದಿಲ್ಲ. ಜೊಸೆಫಸ್ಸನ್ನು ಇತಿಹಾಸದ ಕೆಲವೊಂದು ಮುಖ್ಯ ಕಾಲಾವಧಿಗಳನ್ನು ಮತ್ತು ಕೆಲವೊಂದು ಘಟನೆಗಳ ದಿನಾಂಕಗಳನ್ನೂ ನೀಡುತ್ತಾನೆ. ಆದರೆ, ಈ ದಿನಾಂಕಗಳು ನಂಬಲರ್ಹವಲ್ಲ. ಅವುಗಳಲ್ಲಿ ಕೆಲವು ಹೆರೋದನು ಕ್ರಿ.ಪೂ.4ರಲ್ಲಿ ತೀರಿಕೊಂಡನು ಎಂದು ತಿಳಿಸುತ್ತವೆ. ಆದರೆ ಉಳಿದವು ಈ ದಿನಾಂಕದೊಂದಿಗೆ ರಾಜಿಮಾಡಿಕೊಳ್ಳುವುದಿಲ್ಲ. ಉದಾಹರಣೆಗೆ ಆತನ ಮರಣವು ಆತನು 70 ವರ್ಷದವನಾಗಿದ್ದಾಗ ಉಂಟಾಯಿತೆಂದು ಹೇಳುತ್ತದೆ, ಆತನನ್ನು ಗಲಿಲಾಯದ ದೇಶಾಧಿಪತಿಯನ್ನಾಗಿ ಕ್ರಿ.ಪೂ. 47ರಲ್ಲಿ ನಿಯೋಜನೆ ಗೊಳಿಸಲಾಗಿತ್ತು. ಆ ಸಮಯದಲ್ಲಿ ಆತನು 25 ವರ್ಷದವನಾಗಿದ್ದನು ಎಂದು ಜೊಸೆಫಸ್ಸನು ಹೇಳುತ್ತಾನೆ. (Ant. 149:2). ಆ ಪ್ರಕಾರ ಆತನ ಜನನದ ವರ್ಷವು ಕ್ರಿ.ಪೂ.72 (47+25). 70ನೇ ವಯಸ್ಸಿನಲ್ಲಿ ಆತನು ಮರಣವನ್ನಪ್ಪಿದ್ದರೆ ಅದು ಕ್ರಿ.ಪೂ. 4ರ ಬದಲಾಗಿ ಕ್ರಿ.ಪೂ. 2 ಎಂದಾಗುತ್ತದೆ.

ಈ ಸಂಬಂಧದಲ್ಲಿ, ಹೆರೋದನ ಮರಣ ದಿನಾಂಕದ ಬಗ್ಗೆ ವಿದ್ವಾಂಸರ ನಡುವಣ ಅಭಿಪ್ರಾಯ ಬೇಧವುಂಟೆಂದು ಚೆನ್ನಾಗಿ ಗಮನಿಸಬಹುದು. ಹೀಗಾಗಿ ಕ್ರಿ.ಶ. 4 ಎಂಬುದು ಮತ್ತಾಯ 2:14–16 ರೊಂದಿಗೆ ಸಾಮರಸ್ಯವುಳ್ಳದ್ದಾಗಿದೆ ಎಂಬುದಕ್ಕೆ ಯಾವ ಕಾರಣವೂ ಇಲ್ಲವೆಂಬುದು ಸ್ಥಿರಪಡುತ್ತದೆ. ಫಾಸ್ಸೆಟ್ಸ್ ಬೈಬಲ್ ವಿಶ್ವಜ್ಞಾನಕೋಶವು (Faussetts' Bible encyclopaedia) ಹೇಳುವಂತೆ ಹೆರೋದನು ಸುಮಾರು 20 ವರ್ಷ ವಯಸ್ಸಿನಲ್ಲಿಯೇ ದೇಶಾಧಿಪತಿಯಾಗಿ ನೇಮಕಗೊಂಡನು. ಇದು ಆತನ ಮರಣವು 70ನೇ ವಯಸ್ಸಿನಲ್ಲಿ ಅಂದರೆ ಕ್ರಿ.ಶ. 2ರಲ್ಲಿ ಆಯಿತೆಂದು ತಿಳಿಸುತ್ತದೆ. ವಿಶ್ವಜ್ಞಾನಕೋಶ ಕಥೇರಿಯ ಮತ್ತು ಸ್ಮಿತ್‌ರವರ ಬೈಬಲ್ ಶಬ್ದಕೋಶ (A Chamber's Cyclopaedia ಮತ್ತು Smith's Bible Dictionary) ಇವುಗಳು ಆ ಸಮಯದಲ್ಲಿ ಆತನ ವಯಸ್ಸು ಹದಿನೈದು

ವರ್ಷಗಳಾಗಿತ್ತು ಎಂದು ತಿಳಿಸುತ್ತವೆ. ಅದು ಆತನ ಮರಣವು ಕ್ರಿ.ಶ. 7 ಎಂದು ತಿಳಿಸುತ್ತದೆ, ಆಪೆಲ್‌ಟನ್ಸ್ ವಿಶ್ವಕೋಶದ ಕಾಲಗಣನೆಯು (Appleton's Encyclopaedia) ಹೇಳುತ್ತದೆ :– ಜೊಸೆಫ್ಫಸ್ನನು ಸಹ ದಿನಾಂಕಗಳನ್ನು ನೀಡುತ್ತಾನೆ. ಆದರೆ ಆತ ನನ್ನನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು ಅಜಾಗರೂಕತೆ ಆಗುತ್ತದೆ ಎಂಬುದಾಗಿ.

ಈಗ ನಾವು ಈ ಪ್ರಸ್ತಾಪಕ್ಕೆ ಸಂಬಂಧಿಸಿದ ಸತ್ಯವೇದದ ಸಾಕ್ಷ್ಯಗಳ ವಿಷಯದಲ್ಲಿ ಮುಂದುವರೆ ಯುತ್ತೇವೆ. ಇದು ಹುದುವಾದ ಯುಗದೊಂದಿಗೆ ನಿಕಟವಾಗಿ ಒಪ್ಪಿಗೆಯುಳ್ಳದ್ದಾಗಿದೆ ಮತ್ತು ನಮ್ಮ ಕರ್ತನ ಜನನವು ಕೇವಲ ಜನವರಿ, ಕ್ರಿ.ಶ.1ರ ಒಂದು ವರ್ಷ ಮೂರು ತಿಂಗಳ ಹಿಂದೆಯಷ್ಟೇ ಜರುಗಿತು ಎಂಬುದನ್ನು ತೋರಿಸುತ್ತದೆ.

ನಮ್ಮ ಕರ್ತನ ಸೇವಾವಧಿಯು ಮೂರುವರೆ ವರ್ಷದ್ದಾಗಿತ್ತು. ವರ್ಷಗಳ ಅರವತ್ತೊಂಬತ್ತು ಸಾಂಕೇತಿಕ ವಾರಗಳು (ದಾನಿಯೇಲ 9:24–27). ಆತನ ದೀಕ್ಷಾಸ್ನಾನ ಮತ್ತು ಮೆಸ್ಸಿಯನಾಗಿ ಪ್ರತಿಷ್ಠೆಗೊಳ್ಳುವುದಕ್ಕೆ ಹಿಡಿಯಿತು. ಕಡೆಯ 70ನೇ ವಾರದಲ್ಲಿ (ಏಳು ವರ್ಷಗಳು) ಇಸ್ರಾಯೇಲ್ಯರ ಅನುಗ್ರಹವು ಪ್ರಾರಂಭವಾಯಿತು. ಆ ಎಪ್ಪತ್ತನೆಯ ವಾರದ ಮಧ್ಯದಲ್ಲಿ ಆತನ ಸೇವೆಯು ಪ್ರಾರಂಭಗೊಂಡು 3 1/2 ವರ್ಷಗಳ ನಂತರಲ್ಲಿ ಆತನು ಛೇಧಿಸಲ್ಪಟ್ಟನು. ಆತನು ಶಿಲುಬೆಗೆ ಹಾಕಲ್ಪಟ್ಟನು. ಸುಮಾರು ಯಾವುದೇ ವರ್ಷದ ಏಪ್ರಿಲ್ 01ರಂದು ಪಸ್ಕ ಹಬ್ಬದ ದಿನದಂದು ಆತನನ್ನು ಶಿಲುಬೆಗೆ ಜಡಿಯಲಾಯಿತೆಂಬುದು ನಮಗೆ ತಿಳಿದದೆ. ಏಪ್ರಿಲ್ ತಿಂಗಳಲ್ಲಿ ಮುಕ್ತಾಯಗೊಂಡ ಆತನ ಸೇವೆಯು ಪ್ರಾರಂಭವಾದುದರಿಂದ ಮೂರುವರೆ ವರ್ಷಗಳು ಬಹುಶಃ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಗಿದ್ದಿರಬಹುದು. ಮತ್ತು ಯಾವುದೇ ವರ್ಷದ ಅಕ್ಟೋಬರ್ ಆತನ ನಿಜವಾದ ಜನನದ ತಿಂಗಳಾಗಿದ್ದಿರಬಹುದು. ಯಾಕೆಂದರೆ ಆತನಿಗೆ ಮೂವತ್ತು ವರ್ಷಗಳಾದ ಮೇಲೆ ಆತನು ಸೇವೆ ಪ್ರಾರಂಭಿಸಲು ತಡಮಾಡಲಿಲ್ಲ, ಆತನು ಜನಿಸಿದ ಮತ್ತು ವಿಧೇಯನಾದ ಧರ್ಮಶಾಸ್ತ್ರದ ಪ್ರಕಾರ (ಆದರ ಅಡಿಯಲ್ಲಿ ಆತನು ಜನಿಸಿದನು ಮತ್ತು ಅದಕ್ಕೆ ವಿಧೇಯನಾಗಿದ್ದನು) ಆತನು ಮೂವತ್ತು ವರ್ಷದವನಾಗುವ ಮೊದಲು ಹಾಗೆ ಮಾಡುವಂತಿರಲಿಲ್ಲ. "ಯೇಸು ಉಪದೇಶಮಾಡುವುದಕ್ಕೆ ಪ್ರಾರಂಭಿಸಿದಾಗ ಹೆಚ್ಚು ಕಡಿಮೆ ಮೂವತ್ತು ವರ್ಷದವನಾಗಿದ್ದನು" (ಲೂಕ 3:23) ಎಂದು ಓದುತ್ತೇವಲ್ಲವೆ?.

ಸ್ನಾನಿಕನಾದ ಯೋಹಾನನು ನಮ್ಮ ಕರ್ತನಿಗಿಂತ ಆರು ತಿಂಗಳು ದೊಡ್ಡವನು (ಲೂಕ 1:26,36). ಆದುದರಿಂದ ಆತನು ಧರ್ಮಶಾಸ್ತ್ರದ ಪ್ರಕಾರ ಮೂವತ್ತು ವರ್ಷ ಪ್ರಾಯದವನು. (ಧರ್ಮಶಾಸ್ತ್ರದ ಪ್ರಕಾರ ಅರಣ್ಯ 4:3, ಲೂಕ 3:23 ಮುಂತಾದವುಗಳು) ಮತ್ತು ಯೇಸುವು ಆ ಪ್ರಾಯವನ್ನು ತಲುಪಿ ತನ್ನ ಸೇವೆಯನ್ನು ಪ್ರಾರಂಭಿಸುವ ಆರು ತಿಂಗಳು ಮೊದಲು ಯೋಹಾನನು ಉಪದೇಶಿಸಲು ತೊಡಗಿದನು. ಸ್ನಾನಿಕನಾದ ಯೋಹಾನನ ಸೇವೆಯ ಪ್ರಾರಂಭವು ರೋಮ್‌ನ ಮೂರನೆಯ ಚಕ್ರವರ್ತಿಯಾದ ತಿಬೇರಿಯನು ಪಟ್ಟಕ್ಕೆ ಬಂದ ಹದಿನೈದನೆಯ ವರುಷದಲ್ಲಿ, ಪೊಂತ್ಯ ಪಿಲಾತನು ಯೂದಾಯಕ್ಕೆ ಅಧಿಪತಿಯೂ, ಹೆರೋದನು ಗಲಿಲಾಯಕ್ಕೆ ಉಪರಾಜನೂ, ಅವನ ತಮ್ಮನಾದ ಫಿಲಿಪ್ಪನು ಇತುರಾಯ, ತ್ರಕೋನೀತಿ ಸೀಮೆಗಳಿಗೆ ಉಪರಾಜನೂ, ಲುಸ್ಯನು ಅಬಿಲೇನೆಗೆ ಉಪರಾಜನೂ, ಅನ್ನನೂ, ಕಾಯಫನೂ ಮಹಾಯಾಜಕ ರಾಗಿದ್ದಾಗ ಪ್ರಾರಂಭವಾಯಿತು (ಲೂಕ 3:1–2). ಇದು ಸ್ಪಷ್ಟವಾಗಿ ನಿಗದಿಪಡಿಸಿದ ದಿನಾಂಕವಾಗಿದೆ ಎಂಬುದರಲ್ಲಿ ಯಾವುದೇ ಸಮಂಜಸವಾದ ಅನುಮಾನವೂ ಇರುವುದಿಲ್ಲ. ಔಗುಸ್ತ್ಯ ಸೀಸರನ ಮರಣಾನಂತರ ತಿಬೇರಿಯನು ರೋಮ್ ವರ್ಷ 767ರಲ್ಲಿ ಚಕ್ರವರ್ತಿಯಾದನು ಅದು ಕ್ರಿಶ. 14 ಆಗಿದೆ.

ಆದರೆ, ಅವುಗಳು ಹೆರೋದನಿಗೆ ಸಂಬಂಧಪಟ್ಟ ಜೊಸೆಫಸ್ಸನ ನಿಷ್ಕೃಷ್ಟವಲ್ಲದ ಲೆಕ್ಕಾಚಾರಗಳಿಂದ ಉಂಟಾಗಿದ್ದು ಆತನು ತನ್ನ ಹೇಳಿಕೆಗಳೊಂದಿಗೆ ಸಾಮರಸ್ಯಗೊಳ್ಳುವುದಕ್ಕಾಗಿ ಯೇಸುವಿನ ಜನನವನ್ನು ಕ್ರಿಪೂ 4 ಎಂದು ನಿಗದಿಪಡಿಸುತ್ತಾ ಲೂಕನು ಸ್ಪಷ್ಟವಾಗಿ ಹೇಳಿದ ದಿನಾಂಕಕ್ಕೆ ಕಷ್ಟದಿಂದಲೇ ಸರಿದೂಗಿಸುವ ಪ್ರಯತ್ನಮಾಡುತ್ತಾನೆ ಮತ್ತು ಕ್ರಿ.ಪೂ. 4 ಎಂಬ ವಿಚಾರ ಸರಣಿಯೊಂದಿಗೂ ಸಾಮರಸ್ಯಗೊಳಿಸಲು ಹೆಣಗುತ್ತಾನೆ. ಈ ಅಂತ್ಯವನ್ನು ನೆರವೇರಿಸುವಲ್ಲಿ ಅವರು ತಿಬೇರೀಯನು ಔಗುಸ್ತ್ಯನು ತೀರಿಕೊಳ್ಳುವ ಸುಮಾರು ಮೂರು–ನಾಲ್ಕು ವರ್ಷಗಳ ಹಿಂದೆಯೇ, ಆತನು ಚಕ್ರಾಧಿಪತ್ಯವನ್ನು ಪೂರ್ಣವಾಗಿ ಸ್ಥಾಪಿಸಿಕೊಳ್ಳುವ ಮುನ್ನವೇ ತನ್ನ ಅಧಿಕಾರವನ್ನು ಚಲಾಯಿಸಲು ಆರಂಭಿಸಿದ್ದನು ಎಂದು. ಹೀಗಾಗಿ ಆತನ ಆಳ್ವಿಕೆಯನ್ನು ಆ ದಿನಾಂಕದಿಂದಲೇ ಎಣಿಕೆಮಾಡಿದ್ದಿರಬೇಕು ಎಂದು ಹೇಳುತ್ತಾರೆ .

ಆದರೆ, ಈ ವಿಷಯವನ್ನು ಇತಿಹಾಸದ ಪುಟಗಳ ಮೂಲಕ ವಿಚಾರಣೆಮಾಡುವ ಯಾರಿಗಾದರೂ ಅಂಥಾಃ ಊಹಾಪೋಹಗಳು ಬುಡವಿಲ್ಲದ್ದು ಎಂದು ಕಂಡು ಬರುತ್ತದೆ. ತಿಬೇರೀಯನನ್ನು ಔಗುಸ್ತ್ಯನು ಉನ್ನತ ಪದವಿಗೆ ಏರಿಸಿದ್ದನೆಂಬುದು ಸತ್ಯ. ಆದರೆ ಅವರ ವಿಚಾರ ಸರಣಿ ಹೇಳುವಂತೆ ಅದು ಔಗುಸ್ತನ ಮರಣದ ನಾಲ್ಕು ವರ್ಷಗಳ ಹಿಂದೆ ಅಲ್ಲ, ಆದರೆ ಹತ್ತು ವರ್ಷಗಳ ಹಿಂದೆಯೇ, ಕ್ರಿ.ಶ. ನಾಲ್ಕರಲ್ಲಿ. ಆದರೆ ಆತನಿಗೆ ನೀಡಲ್ಪಟ್ಟ ಅಧಿಕಾರವು ಈ

ಹಿಂದೆ ಇತರರಿಗೆ ನೀಡಲ್ಪಟ್ಟ ಅಧಿಕಾರದಷ್ಟೇ ಆಗಿತ್ತು. ಅದು ಯಾವುದೇ ಅರ್ಥದಲ್ಲಿ ಸಾರ್ವಭೌಮಿಕ ಅಧಿಕಾರವಾಗಿರಲಿಲ್ಲ ಮತ್ತು ಯಾವುದೇ ಅರ್ಥದಲ್ಲಿ ಅದು ಆತನ ಆಳ್ವಿಕೆಯ ಪ್ರಾರಂಭವಲ್ಲ, ಮತ್ತು ಆತನು ಕೇವಲ ಮೇಲ್ನೋಟದ ವಾರಸುದಾರ. ಅತ್ಯಂತ ಉತ್ಪ್ರೇಕ್ಷೆಯ ಭಾಷೆಯಲ್ಲಿ ಹೇಳಿದರೂ ಆತನ 'ಆಡಳಿತ' ಔಗುಸ್ತನ ಮರಣದ ಮುನ್ನ ಪ್ರಾರಂಭವಾಗಿಲ್ಲ ಮತ್ತು ಆತನು ಕ್ರಿ.ಶ.14ರಲ್ಲಿಯೇ ರೋಮನ್ನರ ಕೈಯಲ್ಲಿದ್ದ ಆಡಳಿತ ಮಂಡಲಿಯ (ಸೆನೆಟ್) ಅಧಿಕಾರವನ್ನು ಸ್ವತಃ ಸ್ಥಾಪಿಸಿಕೊಂಡಿದ್ದನು ಎಂದೂ ಹೇಳಲಾಗದು.

ಇತಿಹಾಸವು ಹೇಳುವಂತೆ 'ಒಬ್ಬ ಚಕ್ರವರ್ತಿಯ ವಯಸ್ಸು ಕ್ಷೀಣಾವಸ್ಥೆಯಲ್ಲಿರುವಾಗ ಆತನಿಗೆ ಒಬ್ಬ ಭಾಗಿದಾರನ ಅವಶ್ಯಕತೆ ಇರುತ್ತದೆ'. ಅದರಂತೆ ಕ್ರಿ.ಶ. ನಾಲ್ಕರಲ್ಲಿ ತಿಬೇರೀಯನನ್ನು ಅಂಗೀಕರಿಸಿ ಆತನ ದುರೀಣ ಅಧಿಕಾರವನ್ನು ನವೀಕರಿಸಲಾಗಿತ್ತು – ತಿಬೇರಿಯನ್, ರೀಸ್ ವಿಶ್ವಕೋಶ (TIBERIUS, Rees' Cyclopaedia).

"ಆತನು (ಔಗುಸ್ತ್ಯನು) ಹಾಗೆಯೇ ಸರ್ಕಾರದಲ್ಲಿನ ತನ್ನ ಅಧಿಕಾರವನ್ನು ತಿಬೇರಿಯನಿಗೆ ಹಂಚಿಕೊಡಲು ನಿರ್ಧರಿಸಿದನು .... ಈ ವಿಧಿಯುಕ್ತವಾದ ನೇಮಕವು ಆತನನ್ನು ಧುರೀಣನನ್ನಾಗಿ ಮಾಡಿ ಆತನಿಗೆ ಅಗ್ರಿಪ್ಪನು ನಂತರದ ಕಾಲದಲ್ಲಿ ಅನುಭಸುತ್ತಿದ್ದ ಸ್ಥಾನಮಾನವನ್ನೇ ನೀಡುವುದಾಗಿತ್ತು. ಇದು ಸಾರ್ವತ್ರಿಕವಾಗಿ ಆತನನ್ನು ಚಕ್ರಾಧಿಪತ್ಯದ ಮೊದಲನೆಯ ಸ್ಥಾನಕ್ಕೆ ಪರಿಚಯಿಸುವುದಾಗಿತ್ತು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ .... ಪರಂಪರೆಯ ಕಾರ್ಯಕ್ರಮವನ್ನು ಮಹತ್ವಪೂರ್ಣವಾಗಿ ಪ್ರತಿಬಿಂಬಿಸುತ್ತದೆ; ತಿಬೇರಿಯನು ಆಡಳಿತ ಮಂಡಲಿಯ, ಜನರ, ಮತ್ತು ಸೈನ್ಯದ ಪ್ರಧಾನ ಸ್ಥಾನವನ್ನು ಅಲಂಕರಿಸುವಂತೆ ಆಜ್ಞೆ ಮಾಡಲಾಗಿತ್ತು". ಅದೇ ಸಮಯದಲ್ಲಿ ನೆರವೇರಿದ ದತ್ತು ಸ್ವೀಕಾರದ ದಿನಾಂಕ ಜೂನ್ 27, (A.U,C. 757), A,D.4 – Merivale's History of Romans, Vol. IV., 220, 221.

ಹೀಗಾಗಿ, ತಿಬೇರಿಯ ಸೀಸರನ ಮೊದಲನೆಯ ವರ್ಷದ ಆಳ್ವಿಕೆಯು ಔಗುಸ್ತ್ಯನು ಸಾಯುವ ಹಿಂದಿನ ಮೂರು ನಾಲ್ಕು ವರ್ಷಗಳಲ್ಲ ಎಂಬ ಒಂದು ನಿರ್ಧಾರಾತ್ಮಕವಾದ ರುಜುವಾತು ಇದೆ. ಔಗುಸ್ತನ ಕಾಲದಲ್ಲಿ ಆತನಿಗೆ ನೀಡಿದರೆನ್ನಲಾದ ಗೌರವಗಳು ಆತನಿಗೆ ಔಗುಸ್ತನ ಮರಣಕ್ಕಿಂತ ನಾಲ್ಕು ವರ್ಷಗಳ ಹಿಂದೆ ಅಲ್ಲ, ಹತ್ತು ವರ್ಷಗಳ ಹಿಂದೆಯೇ ನೀಡಲ್ಪಟ್ಟಿದ್ದವು ಮತ್ತು ಅವುಗಳು ಯಾವುದೇ ಅರ್ಥದಲ್ಲಿ ಸಾರ್ವಭೌಮಿಕ ಗೌರವಗಳು ಆಗಿರಲಿಲ್ಲ.

ಆದುದರಿಂದ ನಾವು ಲೂಕನ ಸುವಾರ್ತೆಯ 3:1ರಲ್ಲಿರುವ ದಿನಾಂಕವನ್ನು ಪರಿಗಣಿಸಬಹುದಾಗಿದೆ. ಇದು ಹೊಸ ಒಡಂಬಡಿಕೆಯಲ್ಲಿರುವ ಏಕೈಕ ದಿನಾಂಕ ಎಂಬುದಕ್ಕೆ ಮಾತ್ರವಲ್ಲದೆ ಅದು ನಿಸ್ಸಂದಿಗ್ಧವಾದುದು. ಅದನ್ನು ಪರಿಶೀಲಿಸಿದವರ ಮನದಲ್ಲಿ ಆ ಬಗ್ಗೆ ಯಾವುದೇ ಅನುಮಾನಗಳಿರುವುದಿಲ್ಲ. ತಿಬೇರಿಯನು ತನ್ನ ಆಳ್ವಿಕೆಯನ್ನು ಕ್ರಿ.ಶ. 14ರಲ್ಲಿ ಪ್ರಾರಂಭಿಸಿದನು. ಆದುದರಿಂದ ಆತನ ಆಳ್ವಿಕೆಯ ಹದಿನೈದನೆಯ ವರ್ಷವು ಕ್ರಿ.ಶ. 29 ಆಗುತ್ತದೆ. ಅದೇ ವರ್ಷದಲ್ಲಿ ಸ್ನಾನಿಕನಾದ ಯೋಹಾನನು ತನ್ನ ಸೇವೆಯನ್ನು ಪ್ರಾರಂಭಿಸಿದನು ಎಂಬುದಾಗಿ ಲೂಕನು ಹೇಳುತ್ತಾನೆ (ಲೂಕ 3:1–3). ನಮ್ಮ ಕರ್ತನ ಮೂವತ್ತನೆಯ ಜನನ ದಿವಸವು ಮತ್ತು ಆತನ ಸೇವೆಯ ಆರಂಭವು ಅಕ್ಟೋಬರ್ ತಿಂಗಳಲ್ಲಿ ಆಗುವುದರಿಂದ, ಮತ್ತು ಯೋಹಾನನ ಜನನ ದಿವಸ ಮತ್ತು ಆತನ ಸೇವೆಯ ಆರಂಭವು ಅದಕ್ಕಿಂತ ಆರು ತಿಂಗಳ ಹಿಂದೆ ಆಗಿರುವುದರಿಂದ, ಯೋಹಾನನು ತನ್ನ ಸೇವೆಯನ್ನು ವಸಂತಋತುವಿನಲ್ಲಿ ಅಂದರೆ ಸುಮಾರು ಏಪ್ರಿಲ್ ತಿಂಗಳಲ್ಲಿ ಆತನು ಮೂವತ್ತು ಪ್ರಾಯವನ್ನು ಮುಟ್ಟಿದ ಯೋಜನಾಕಾರ್ಯಗಳನ್ನು ಕೂಡಲೇ ಪ್ರಾರಂಭಿಸಿದನು. ಯಾಕೆಂದರೆ ಕರ್ತನ ಕಾರ್ಯಗಳು ಯಾವಾಗಲೂ ಕರಾರುವಕ್ಕಾದ ಸಮಯದಲ್ಲಿಯೇ ನೆರವೇರುವುವು. ಹಾಗಾದರೆ, ಆಗ ಯೋಹಾನನು ಕ್ರಿ.ಶ. 29ರಲ್ಲಿ ಸುಮಾರು ಏಪ್ರಿಲ್ 01ನೇ ದಿನಾಂಕದಂದು ಮೂವತ್ತು ವರ್ಷದವನಾಗಿದ್ದನು. ಆದಕಾರಣ ಆತನು ಕ್ರಿ.ಪೂ. 2*ರಲ್ಲಿ ಜನಿಸಿದನು. ಕ್ರಿಸ್ತನ ಜನನವು ಆರು ತಿಂಗಳ ನಂತರ ಎಂದರೆ ಕ್ರಿ.ಪೂ. 1ನೇ ಅಕ್ಟೋಬರ್ ತಿಂಗಳ 2ನೇ ದಿನಾಂಕವಿದ್ದಿರಬೇಕು.

ಪುನಃ ಸ್ಪಷ್ಟವಾಗಿರುವುದೇನೆಂದರೆ ಯೇಸುಕ್ರಿಸ್ತನು ಕ್ರಿ.ಶ. 33 ಏಪ್ರಿಲ್ 03ರ ಶುಕ್ರವಾರದಂದು ಶಿಲುಬೆಗೆ ಹಾಕಲ್ಪಟ್ಟನೆಂಬುದಕ್ಕೆ ಬಲವಾದ ಸಾಕ್ಷ್ಯಾಧಾರವಿದೆ. ಆತನನ್ನು ಶಿಲುಬೆಗೆ ಹಾಕಿದ ಘಟನೆಯು ನಿಸಾನ್ ತಿಂಗಳ 14ನೇ ದಿನಾಂಕದ ಮುಕ್ತಾಯದಲ್ಲಿ ನೆರವೇರಿತು ಎಂಬ ಸತ್ಯವಿದೆ. ಆದರೆ ಆ ದಿನವು ಶುಕ್ರವಾರವಾಗಿರುವುದು ಬಹಳ ಅಪರೂಪ. ಆದರೆ ಕ್ರಿ.ಶ. 33ರಲ್ಲಿ ಹಾಗೆಯೇ ಆಗಿದ್ದು ಅದು ಆ ದಿನವನ್ನು ಪ್ರಮಾಣಗಳಿಂದ ಸಾಧ್ಯಂತವಾಗಿ ಸಿದ್ಧಪಡಿಸುತ್ತದೆ. ಯೇಸುವಿನ ಜನನವನ್ನು ಕ್ರಿ.ಪೂ. 4 ಎಂದು ಗಣನೆಗೆ ತೆಗೆದುಕೊಂಡಿರುವ ಉಷರನು ಸಹ ಆತನನ್ನು ಕ್ರಿ.ಶ. 33 ರಲ್ಲಿ ಶಿಲುಬೆಗೆ ಹಾಕಲಾಯಿತು ಎಂಬುದನ್ನು ಬಲವಂತಪೂರ್ವಕವಾಗಿ ಒಪ್ಪಿಕೊಂಡಿದ್ದಾನೆ. . ಉಷರನ ಸಾಮಾನ್ಯ ಭಾಷಾಂತರ ಸತ್ಯವೇದ (Common Version Bible) ದಲ್ಲಿನ ಲೂಕ 2:21

* ದಿನಾಂಕ ಲೆಕ್ಕಾಚಾರಗಳ ರೂಢಿಯಿಲ್ಲದ ಓದುಗರ ಅನುಕೂಲಕ್ಕಾಗಿ, ನಾವು ಕ್ರಿ.ಶ. 29ರ ಆರಂಭದಲ್ಲಿ ಕೇವಲ 28 ವರ್ಷಗಳು ಮಾತ್ರವೇ ಗತಿಸಿದ್ದವು ಎಂಬ ಸತ್ಯವನ್ನು ಗಮನಕ್ಕೆ ತರುತ್ತೇವೆ. ಇಪ್ಪತ್ತೊಂಬತ್ತು ಎಂಬುದು ಪ್ರಾರಂಭವಾಗಿತ್ತು.

ಮತ್ತು ಮತ್ತಾಯ 2:1 ರಲ್ಲಿನ ಅಂಚುಗೆರೆಯಲ್ಲಿರುವ (margin) ದಿನಾಂಕಗಳನ್ನು ಮತ್ತಾಯ 27 ಮತ್ತು ಲೂಕ 23ನೇ ಅಧ್ಯಾಯಗಳಲ್ಲಿನ ಅಂಚುಗೆರೆಯ (margin) ದಿನಾಂಕಗಳೊಡನೆ ಹೋಲಿಸಿರಿ. ಶಿಲುಬೆಗೆ ಹಾಕಲಟ್ಟ ದಿನಾಂಕ ಕ್ರಿ.ಶ. 33 ಆಗಿರುವಾಗ, ಕ್ರಿಸ್ತನು ಕ್ರಿ.ಪೂ. 4ರಲ್ಲಿ ಜನಿಸಿದ್ದರೆ ಆತನು ತೀರಿಕೊಂಡಾಗ ಆತನಿಗೆ 36 ವರ್ಷಗಳಾಗಿದ್ದವು ಎಂದಾಗುತ್ತದೆ ಮತ್ತು ಆತನ 30ನೇ ವರ್ಷದಲ್ಲಿ ಪ್ರಾರಂಭವಾದ ಸೇವೆ 36ನೇ ವರ್ಷದವರೆಗೆ ಒಟ್ಟು ಆರು ವರ್ಷಗಳಾಗಿ ಬಿಡುತ್ತದೆ. ಆದರೆ ನಮ್ಮ ಕರ್ತನ ಸೇವಾವಧಿಯು ಕೇವಲ ಮೂರುವರೆ ವರ್ಷಗಳು ಮಾತ್ರವೇ ಆಗಿತ್ತು ಎಂಬುದು ಸ್ಪಷ್ಟ. ಇದು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಸತ್ಯವಾಗಿದ್ದು ದಾನಿಯೇಲ ಪ್ರವಾದನೆಯಲ್ಲಿ ಹೇಳಿರುವಂತೆ ಮೆಸ್ಸೀಯನ ಛೇಧನೆಯು ಇಸ್ರಾಯೇಲ್ಯರ ಕೃಪೆಯ ಎಪ್ಪತ್ತನೇ ವಾರದ ಮಧ್ಯದಲ್ಲಿ ನಡೆಯಿತು ಎಂಬ ಮಾತುಗಳಿಂದ ರುಜುವಾತುಗೊಂಡದೆ (ದಾನಿಯೇಲ 9ನೇ ಅಧ್ಯಾಯ ಓದಿರಿ).

ಹೀಗಾಗಿ ಕ್ರಿಸ್ತನ ಜನನವು ಸಾಮಾನ್ಯ ಯುಗವಾದ ಕ್ರಿಸ್ತಶಕ 1, ಒಂದು ವರ್ಷ ಮೂರು ತಿಂಗಳ ಹಿಂದೆಯೇ ಆಯಿತೆಂಬುದು ಪುನಃ ರುಜುವಾತುಗೊಂಡಿದೆ. ಯಾಕೆಂದರೆ ಆತನ ಸೇವಾವಧಿಯು ಆತನ ಮೂವತ್ತಮೂರುವರೇ ವರ್ಷ ಪ್ರಾಯದಲ್ಲಿ ಅಂದರೆ ಕ್ರಿ.ಶ. 3ನೇ ಏಪ್ರಿಲ್ 33ರಂದು ಮುಕ್ತಾಯಗೊಂಡಿತು, ಇದರಿಂದ ಆತನ ಜನನವು ಆ ದಿನಾಂಕದಿಂದ ಮೂವತ್ತ ಮೂರುವರೆ ವರ್ಷಗಳ ಹಿಂದೆ ಆಯಿತು. ಏಪ್ರಿಲ್ ಕ್ರಿ.ಶ. 33ರ ಹಿಂದಿನ ಮೂವತ್ತೆರಡು ವರ್ಷ ಮೂರು ತಿಂಗಳು ಕ್ರಿ.ಶ 1 ರ ಜನವರಿ ತಿಂಗಳ 3ನೇ ದಿನಾಂಕವಾಗುತ್ತದೆ.

ಆ ದಿನಾಂಕದಿಂದ ಇನ್ನೂ ಒಂದು ವರ್ಷ ಮೂರು ತಿಂಗಳು ಹಿಂದಕ್ಕೆ ಹೋದಾಗ ನಮ್ಮ ಕರ್ತನು ಬೆತ್ಲೆಹೇಮಿನಲ್ಲಿ ಜನಿಸಿದ ದಿನ ಕ್ರಿ.ಪೂ 2ರ ಅಕ್ಟೋಬರ್ ತಿಂಗಳ 3ನೇ ದಿನಾಂಕವಾಗುತ್ತದೆ. ಯೆಹೂದ್ಯರು ಉಪಯೋಗಿಸುತ್ತಿದ ಚಂದ್ರಮಾನ ಸಮಯ ಮತ್ತು ಈಗ ಚಾಲನೆಯಲ್ಲಿರುವ ಸೂರ್ಯಮಾನ ಸಮಯಕ್ಕೂ ಇರುವ ವ್ಯತ್ಯಾಸವು ಕೆಲವು ದಿನಗಳದ್ದಾಗಿರುತ್ತದೆ.. ಆದುದರಿಂದ ನಿಖರವಾದ ದಿನಾಂಕವು ಸೆಪ್ಟೆಂಬರ್ 27 ಎಂಬುದು ನಿಶ್ಚಯವಾಗುವುದಿಲ್ಲ, ಆದರೆ ಅದು ಕ್ರಿ.ಪೂ.2ರ ಅಕ್ಟೋಬರ್ 1 ಎಂಬುದು ಬಹುಶಃ ಸರಿಯಾಗಿದೆ. ಅದಕ್ಕಿಂತ ಒಂಬತ್ತು ತಿಂಗಳ ಮೊದಲು ನಮಗೆ ಕ್ರಿಸ್ಮಸ್ ಸಮಯವನ್ನು ಬಹುಶಃ ಕ್ರಿ.ಪೂ. 3 ಎಂದಾಗಿಸುತ್ತದೆ. ಯಾಕೆಂದರೆ, ಆ ದಿನದಲ್ಲಿಯೇ ಆತನು ಈ ಲೋಕವು ಉಂಟಾಗುವದಕ್ಕೇ ಮೊದಲೇ ಪರಲೋಕದ ತಂದೆಯೊಡನೆ ಇದ್ದ ತನ್ನ ಮಹಿಮೆಯನ್ನು ತ್ಯಜಿಸಿ, ಮಾನವ ಸ್ವರೂಪಧಾರಣೆ ಪ್ರಾರಂಭವಾಗಿದ್ದು. ಬಹುಶಃ ಇದುವೇ ಯೇಸು ಕ್ರಿಸ್ತನ ಜನನ (ಕ್ರಿಸ್ಮಸ್)ವನ್ನು ಡಿಸೆಂಬರ್ 25ರಂದು ಆಚರಿಸಲು ಕಾರಣವಾಗಿದ್ದಿರಬಹುದು. ಕ್ರೈಸ್ತ ಸಭಾ ಚರಿತ್ರೆಯ ಕೆಲವು ಇತಿಹಾಸಕಾರರು ಕ್ರಿಸ್ಮಸ್ ಆಚರಿಸುವ ಆ ದಿನವು ಗೇಬ್ರಿಯೇಲ್ ದೂತನು ಕನ್ಯೆಯಾದ ಮರಿಯಳನ್ನು ಸಂಧಿಸಿ ಕ್ರಿಸ್ತನ ಜನನವನ್ನು ಸಾರಿದ ದಿನವಾಗಿತ್ತು ಎಂದು ಹೇಳುತ್ತಾರೆ (ಲೂಕ 1:26). ಖಚಿತವಾಗಿ ಆ ಚಳಿಗಾಲದ ಮಧ್ಯಂತರ ದಿನದಲ್ಲಿ ಕುರುಬರು ಹೊಲದಲ್ಲಿದ್ದುಕೊಂಡು ತಮ್ಮ ಕುರಿಗಳನ್ನು ಮೇಯಿಸುತ್ತಿದ್ದರು ಎಂಬ ಸತ್ಯವೇದದ ಮಾತುಗಳೊಂದಿಗೆ ಒಪ್ಪಿಗೆಯಾಗುವುದಿಲ್ಲ.

"Lift up your heads, desponding pilgrims
Give to the winds your needless fears;
He who has died on Calvary's mountain
Soon is to reign a thousand years,

A thousand years! Earth's coming glory-
'Tis the glad day so long forertold:
'Tis the brightmorn of Zion's glory,
Prophets foresaw in times of old

"Tell the whole world these blessed tidings;
Speak of the time of rest that nears;
Tell the oppressed of every nation,
Jubilee lasts a thousand years.

"What if the clouds do for a moment
Hide the blue sky where morn appears?
Soon the glad sun of promise given
Rises to shine a thousand years"

**- Bonar**

*"ನಿಮ್ಮ ತಲೆ ಎತ್ತಿ, ನಿರಾಶರಾದ ಯಾತ್ರಿಕರೇ*
*ನಿಮ್ಮ ಅನವಶ್ಯಕವಾದ ಭಯವನ್ನು ಗಾಳಿಯಲ್ಲಿ ತೂರಿಬಿಡಿ;*
*ಕಲ್ವೇರಿಯ ಗುಡ್ಡದಲ್ಲಿ ಮರಣಿಸಿದವನು*
*ಶೀಘ್ರವೇ ಸಾವಿರ ವರುಷಗಳು ಆಳುವನು"*
*"ಒಂದು ಸಾವಿರ ವರುಷಗಳು ! ಭೂಮಿಗೆ*
*ಮಹಿಮೆಯುಂಟಾಗುವುದು.*

*ಅದು ಹರ್ಷದ ದಿನ ಬಹಳ ಹಿಂದೆಯೇ ಮುಂತಿಳಿಸಲಾಗಿದೆ.*
*ಚಿಯೋನಿನ ವೈಭವದ ಪ್ರಜ್ವಲ ಹಗಲು,*
*ಪ್ರವಾದಿಗಳು ಹಿಂದೆಯೇ ಮುಂದಾಲೋಚಿಸಿದ್ದರು"*
*"ಇಡೀ ಲೋಕಕ್ಕೆ ಈ ಶುಭ ವರ್ತಮಾನವನ್ನು ತಿಳಿಸಿ;*
*ಬರಲಿರುವ ವಿಶ್ರಾಂತ ಕಾಲದ ಬಗ್ಗೆ ನುಡಿಯಿರಿ;*
*ತುಳಿತಕ್ಕೊಳಗಾದ ಪ್ರತಿಯೊಂದೂ ದೇಶಕ್ಕೆ ತಿಳಿಸಿರಿ;*

*ಜುಬಿಲಿಯು ಒಂದು ಸಾವಿರ ವರುಷದವರೆಗೆ*
*ಮುಂದುವರೆಯುವುದು"*
*"ಹಗಲು ಹುಟ್ಟುವಾಗ ಮೋಡವು ನೀಲಾಕಾಶವನ್ನು*
*ಕೆಲವು ಕ್ಷಣ ಮರೆಮಾಡಿದರೇನೀಗ ?*
*ವಾಗ್ದಾನ ಮಾಡಿರುವ ಹರುಷದ ಸೂರ್ಯನು*
*ಉದಯಿಸಿ ಸಾವಿರ ವರ್ಷ ಆಳುವನು"*

* * * * * * *

# ಅಧ್ಯಯನ – 3 Study III

# ಕ್ರಿಸ್ತನ ಮೊದಲನೆ ಆಗಮನದಲ್ಲಿ ಕಾಲ–ಪ್ರವಾದನೆಯ ನೆರವೇರಿಕೆ

**– ದಾನಿಯೇಲ 9:23–27**

## The fulfilment of Time-Prophecy at the First Advent of Christ

**- Dan. 9:23-27**

**ದಾನಿಯೇಲನ ಪ್ರವಾದನೆಯ ಎಪ್ಪತ್ತು ವಾರಗಳು. ಆ ಸಮಯದೊಳಗಾಗಿ ಪ್ರಕಟವಾಗುವಂತೆ ಮುಂಚಿತವಾಗಿ ತಿಳಿಸಲ್ಪಟ್ಟಿರುವ ಘಟನೆಗಳು. ಮೆಸ್ಸೀಯನ ಆಗಮನ ಕಾಲದ ಸೂಚನೆ ಮತ್ತು ಇದಕ್ಕೆ ಸಂಬಂಧಿಸಿದ ತತ್ವಗಳು ಸೂಚಿತವಾಗಿರುವ ರೀತಿಯಲ್ಲಿ ಪ್ರಕಟವಾಗಿವೆ. ಇತರೆ ಕಾಲ–ಪ್ರವಾದನೆಗಳಿಗೆ ಕೀಲಿಕೈ. ಮೆಸ್ಸೀಯನು ಶಿಲುಬೆಗೆ ಹಾಕಲ್ಪಡುವ ಕಾಲವು ಸೂಚಿತವಾಗಿದೆ. ಇಸ್ರಾಯೇಲ್ಯರು ಒಂದು ಜನಾಂಗವಾಗಿರುವ ಭಾಗ್ಯವು ನೀತಿವಂತಿಕೆಯಲ್ಲಿ ಕುಂಠಿತವಾಗಿದೆ, ಆದರೆ ವೈಯುಕ್ತಿಕವಾಗಿ ಮುಂದುವರೆದಿದೆ. ಮಹಾ ಪವಿತ್ರನನ್ನು ಅಭಿಷೇಕಿಸುವುದು. ಖಿನ್ನರಾದವರ ಮೇಲೆ ತೊಂದರೆಗಳು ಸುರಿಯಲ್ಪಟ್ಟಿವೆ.**

"ಈ ದೈವೋಕ್ತಿಯನ್ನು ಯೋಚಿಸು. ಈ ದರ್ಶನವನ್ನು ಗ್ರಹಿಸಿಕೊ, ಅಧರ್ಮವನ್ನು ಕೊನೆಗಾಣಿಸುವುದು, ಪಾಪಗಳನ್ನು ತೀರಿಸುವುದು, ಅಪರಾಧವನ್ನು ನಿವಾರಿಸುವದು, ಸನಾತನ ಧರ್ಮವನ್ನು ಸ್ಥಾಪಿಸುವುದು, ಕನಸನ್ನೂ, ಪ್ರವಾದಿಯ ನುಡಿಯನ್ನೂ ಮುದ್ರೆಹಾಕಿ ಯಥಾರ್ಥ ಮಾಡುವದು. ಅತಿಪರಿಶುದ್ಧವಾದುದನ್ನು ಅಭಿಷೇಕಿಸುವದು, ಇವೆಲ್ಲಾ ನೆರವೇರುವದಕ್ಕೆ ಮೊದಲು ನಿನ್ನ ಜನಕ್ಕೂ, ನಿನ್ನ ಪರಿಶುದ್ಧ ಪುರಕ್ಕೂ ಎಪ್ಪತ್ತು ವಾರಗಳು ಕಳೆಯಬೇಕು ಎಂದು ನಿಷ್ಕರ್ಷೆಯಾಗಿದೆ **(ದಾನಿ. 9:24)**.

ಇದನ್ನು ತಿಳಿದು ಮಂದಟ್ಟು ಮಾಡಿಕೋ. ಯೆರೂಸಲೇಮು ಜೀರ್ಣೋದ್ಧಾರವಾಗಿ ಕಟ್ಟಲ್ಪಡಲಿ ಎಂಬ ದೈವೋಕ್ತಿಯು ಹೊರಡುವಂದಿನಿಂದ ಅಭಿಷಿಕ್ತನಾದ ಪ್ರಭುವು ಬರುವದರೊಳಗೆ ಏಳು ವಾರ ಕಳೆಯಬೇಕು! (7+60+2=69 ವಾರಗಳು). ಅದು ಪುನಃ ಕಟ್ಟಲ್ಪಟ್ಟು ಅರುವತ್ತೆರಡು ವಾರ ಇರುವದು; ಅದಕ್ಕೆ ಚೌಕವೂ ಕಂದಕವೂ ಇರುವವು; ಆ ಕಾಲವು ಬಹು ಕಷ್ಟಕಾಲ **(ದಾನಿ.9.25)**.

ಅರುವತ್ತೆರಡು ವಾರಗಳಾದ ಮೇಲೆ ಅಭಿಷಿಕ್ತನೊಬ್ಬನು ಛೇಧಿಸಲ್ಪಡುವನು; ಅವನಿಗೆ ಏನೂ ಇರದು; ನುಗ್ಗುವ ಪ್ರಭುವಿನ ಜನರು ಪಟ್ಟಣವನ್ನು ಪವಿತ್ರಾಲಯವನ್ನು ಹಾಳುಮಾಡುವರು (ರೋಮ್‌ನ ಅರಸನಾದ ತೀತನ ಸೈನ್ಯ). ತುಂಬಿತುಳುಕುವ ಪ್ರಳಯವು ಪಟ್ಟಣವನ್ನು ಕೊನೆಗಾಣಿಸುವದು; ಅಂತ್ಯದವರೆಗೂ ಯುದ್ಧವಾಗುವದು, ನಿಶ್ಚಿತ ನಾಶನಗಳು ಸಂಭವಿಸುವವು **(ದಾನಿ. 9.26)**.

ಆ ಪ್ರಭುವು ಮೆಸ್ಸೀಯನು ಒಂದು ವಾರದ ಮಟ್ಟಿಗೆ [70ನೆಯ ಅಥವಾ ಕೃಪಾ ಒಡಂಬಡಿಕೆಯ ಕೊನೆಯ ವಾರ] ಬಹುಜನರೊಂದಿಗೆ ದೃಢವಾದ ಒಡಂಬಡಿಕೆಯನ್ನು ಮಾಡಿಕೊಳ್ಳುವನು; [ಮೆಸ್ಸೀಯನು] ಅರ್ಧವಾರ ಯಜ್ಞ ನೈವೇದ್ಯಗಳನ್ನು ನಿಲ್ಲಿಸುವನು; ಅಸಹ್ಯಗಳನ್ನು ವಾಹನ ಮಾಡಿಕೊಂಡು ಒಬ್ಬ ಘಾತುಕನು ಹಾರಿಬಂದು ದೇವರ ನಿಶ್ಚಿತ ಯೋಜನೆಯಂತೆ ಪ್ರಳಯವು ಅವನನ್ನು ಮುಳುಗಿಸುವತನಕ ಹಾಳು ಮಾಡುವನು (ಜನರು – ಯೆರೂಸಲೇಮ್‌ನ್ನು ಪ್ರತಿನಿಧಿಸುವವರು) – ದಾನಿಯೇಲ 9:23–27 .

ಈ ಪ್ರವಾದನೆಯು ಯೆಹೂದ್ಯ ಯುಗದ ಸುಗ್ಗಿಯ ಪ್ರಾರಂಭವನ್ನು, ಮತ್ತು ಪ್ರಮುಖ ಕೊಯಿಲುಗಾರನಾದ ನಮ್ಮ ಕರ್ತನ ಪ್ರಸನ್ನತೆಯನ್ನು ಅಲ್ಲಿ ಗುರುತು ಪಡಿಸುತ್ತಿರುವಾಗ, ಸುವಾರ್ತಾಯುಗದ ಸುಗ್ಗಿಯ ಪ್ರಾರಂಭವನ್ನು ಗುರುತಿಸುವ ಮತ್ತು ಅದರಲ್ಲಿ ನಮ್ಮ ಕರ್ತನು ತನ್ನ ದ್ವಿತೀಯಾಗಮನದಲ್ಲಿ ಮುಖ್ಯ ಕೊಯಿಲುಗಾರನಾಗಬೇಕಾಗಿರುವ ಹಲವಾರು ಪ್ರವಾದನೆಗಳು ಇನ್ನೂ ಸ್ಪಷ್ಟತೆಯೊಡನೆ ಇವೆ, ಇದರಲ್ಲಿ ಪ್ರವಾದನಾ ನೆರವೇರಿಕೆಯು ಸಾಮಾನ್ಯವಾಗಿ ಕಂಡುಬರುತ್ತದೆ ಮತ್ತು ಇನ್ನೂ ಕಾಣಬೇಕಾಗಿರುವ ಮತ್ತೊಂದು ಪ್ರವಾದನೆಯಲ್ಲಿರುವ ಅಂಶಗಳನ್ನು ಸ್ಥಿರಪಡಿಸುತ್ತದೆ.

ಅನೇಕ ಪ್ರವಾದನೆಗಳು ಒಟ್ಟಾಗಿ ಕ್ರಿಸ್ತನ ದ್ವಿತೀಯಾಗಮನದ ದಿನಾಂಕವನ್ನು ನಿಗದಿಪಡಿಸಿ, ದೃಢಪಡಿಸುವಾಗ, ಇದೊಂದು ಮಾತ್ರವೇ ಪ್ರಥಮಾಗಮನದ ಕುರಿತಾಗಿದೆ. ಇದರ ನೆರವೇರಿಕೆಯು ಪೂರ್ಣವಾಗಿ ಸ್ಥಾಪಿತಗೊಂಡರೆ, ಅದು ನಮಗೆ ಎರಡನೇ ಬರೋಣಕ್ಕೆ ಸಂಬಂಧಪಟ್ಟವುಗಳನ್ನು ಎಣಿಕೆ ಹಾಕಲೂ ಮತ್ತು ನಿರ್ಣಯಿಸಲು ಸಹಾಯಕವಾಗುತ್ತದೆ. ಈ ಕಾರಣದಿಂದ ನಾವಿಲ್ಲಿ ನೆರವೇರಿದ ಪ್ರವಾದನೆಗೆ ಸ್ಥಳ ಕೊಡುವವರಾಗಿದ್ದೇವೆ. ಯಾಕೆಂದರೆ ಇದರಲ್ಲಿ ಸ್ಥಾಪಿತಗೊಂಡಿರುವ ಹಲವಾರು ದಿನಾಂಕಗಳನ್ನು ದ್ವಿತಿಯಾಗಮನಕ್ಕೆ ಸಂಬಂಧಪಟ್ಟ ಪ್ರವಾದನೆಗಳೆಂದು, ಪರಿಗಣಿಸಿಕೊಂಡು ಅದು ಇನ್ನೂ ಮುಂದೆ ನೆರವೇರುವದು ಎಂದು ಅರ್ಥ ಮಾಡಿಕೊಳ್ಳವುದು ಅಗತ್ಯವಾಗಿದೆ.

ದಾನಿಯೇಲನ ಗ್ರಂಥದ 2,4,7 ಮತ್ತು 8ನೇ ಅಧ್ಯಾಯಗಳಲ್ಲಿ ನಾವು ನೋಡುವಂತೆ ಆತನ ಪ್ರವಾದನೆಗಳಿಗೆ ಸಂಬಂಧಪಟ್ಟಂತೆ ದಾನಿಯೇಲನಿಗೆ ಹಲವಾರು ದರ್ಶನಗಳನ್ನು ತೋರಿಸಲಾಯಿತು. ಈ ಎಲ್ಲವುಗಳಲ್ಲಿ ಅನ್ಯಜನರ ಮತ್ತು ಯೆಹೂದ್ಯೇತರ ರಾಜ್ಯಗಳ ಅಭ್ಯುದಯ ಮತ್ತು ಉನ್ನತಿಯನ್ನು ತೋರಿಸಲಾಗಿದೆ. ಆದರೆ, ಆತನ ವಿಶೇಷ ಆಸಕ್ತಿ ಇಸ್ರಾಯೇಲ್ಯರ ಬಗ್ಗೆ ಆಗಿದೆ. ಆತನಿಗೆ ಇಸ್ರಾಯೇಲ್ಯರ ಭವಿಷ್ಯದ ಬಗ್ಗೆ ತಿಳಿಸಲ್ಪಟ್ಟಿಲ್ಲ, ಆದರೆ ಆತನು ಯೆರೆಮೀಯನ ಪ್ರವಾದನೆಯ (ಯೆರೆಮೀಯ ಅಧ್ಯಾಯ 29:10; 2 ಪೂರ್ವ. 36:20–23) ಮೂಲಕ ಯುದಾಯದ ಪಾಳುಬೀಳುವಿಕೆಯು ಎಪ್ಪತ್ತು ವರ್ಷಗಳವರೆಗೆ ಮುಂದುವರೆಯುತ್ತದೆ ಎಂಬುದನ್ನೂ ಮತ್ತು ಆ ಅವಧಿಯ ಸಮಾಪ್ತಿಯು ಸಮೀಪಿಸುತ್ತಿದೆ ಎಂಬುದನ್ನು ತಿಳುಕೊಂಡಿದ್ದನು (ದಾನಿ. 9:2). ಆತನು ದೇವರ ಕೃಪೆಯು ಇಸ್ರಾಯೇಲ್ಯರಿಗೆ ಹಿಂತಿರುಗಲಿ ಎಂದು ನಿಷ್ಠಾಪೂರ್ವಕವಾಗಿ ಪ್ರಾರ್ಥಿಸುತ್ತಿದ್ದನು (ವ. 17–19). ಇದಕ್ಕೆ ದೇವರು ಆತನಿಗೆ ದೇವದೂತನ ಮೂಲಕ ಹಿಂದೆ ತಿಳಿಸಿದವುಗಳು ದೇವರ ಉತ್ತರವಾಗಿತ್ತು.

ಇಸ್ರಾಯೇಲ್ಯರ ಚರಿತ್ರೆಯ ಬಿಟ್ಟುಹೋದ ಅವಧಿಯು (ತೆಗೆದುಹಾಕಲ್ಪಟ್ಟ ಅಥವಾ ನಿಶ್ಚಯಿಸಿದ್ದ ಅವಧಿ) ಇಲ್ಲಿ ಒಂದು ಕೊಡಲ್ಪಟ್ಟ ಪ್ರಾರಂಭದ ನಿರ್ದಿಷ್ಟ ಕಾಲದಿಂದ, ಇಸ್ರಾಯೇಲನ್ನು ಪುನಃವಶಪಡಕೊಂಡು ಅದನ್ನು ಕಟ್ಟುವವರೆಗೆ (ದೇವಾಲಯವನ್ನಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ) ಎಪ್ಪತ್ತು ವಾರಗಳು ಎಂಬುದಾಗಿ ತೋರಿಸಲ್ಪಟ್ಟಿದೆ. ಈ ಕಾಲಾವಧಿಯಲ್ಲಿ ಅನೇಕ ಸಂಗತಿಗಳನ್ನು ನೆರವೇರಿಸಬೇಕಾಗಿದೆ; ನಗರವನ್ನು ಅನುಕೂಲಕರವಲ್ಲದ ಪರಿಸ್ಥಿತಿಯಲ್ಲಿ, ತೊಂದರೆಗಳ ಸಮಯದಲ್ಲಿ ಪುನಃ ನಿರ್ಮಾಣಮಾಡಬೇಕಾಗಿದೆ (ನೆಹೆಮೀಯ, ಅಧ್ಯಾಯ 4). ಪಾಪವು ಅಪರಾಧಗಳಿಗಾಗಿ ಮಾಡುವ ಮೈತ್ರಿಸಂಧಾನದಿಂದ ಮುಕ್ತಾಯಗೊಳ್ಳುವುದು; ಮತ್ತು ನೀತಿ ನಿರ್ಣಯವು (ಸಮರ್ಥನೆಯು) ಸ್ಥಾಪಿತಗೊಳ್ಳಲಿದೆ – ವರ್ಷದಿಂದ ವರ್ಷಕ್ಕೆ ಹೋರಿ ಮತ್ತು ಹೋತಗಳ ರಕ್ತದಿಂದಾದಂತಲ್ಲ, ಆದರೆ ಕ್ರಿಸ್ತನ ಬಲಿದಾನದ ಮೂಲಕ ಉಂಟಾದ ಸತ್ಯವಾದ, ಸದಾ ಇರುವ ನೀತಿವಂತಿಕೆಯ ಮೂಲಕ. ಒಂದು ನೂತನ ಉತ್ತಮ ಸಮರ್ಪಣೆಯು ಸಾಂಕೇತಿಕ ಯಜ್ಞಸಮರ್ಪಣೆಯನ್ನು ಮುಕ್ತಾಯಗೊಳಿಸುತ್ತದೆ ಎಂಬುದನ್ನು ದಾನಿಯೇಲನಿಗೆ ಪರಿಚಯಗೊಳಿಸಲಾಗಿತ್ತು.

ಈ ಅವಧಿಯಲ್ಲಿ, ಇಸ್ರಾಯೇಲ್ಯರು ಬಹು ದಿನದಿಂದ ಎದುರುನೋಡುತ್ತಿದ್ದ ವಿಮೋಚಕನಾದ ಮೆಸ್ಸೀಯನು ಆಗಮಿಸುತ್ತಾನೆ ಮತ್ತು ಏಳು ವಾರಗಳು ಮತ್ತು ಅರವತ್ತು ಹಾಗೂ ಎರಡು ವಾರಗಳು ಅಥವಾ ಅರವತ್ತೊಂಬತ್ತು ವಾರಗಳನ್ನು ಮೆಸ್ಸೀಯನ ಪ್ರಸನ್ನತೆಯ ಕಾಲವೆಂದು ಹೇಳಲಾಗುತ್ತದೆ. ನಂತರದಲ್ಲಿ ಆತನ ಸಂಪರ್ಕ ತಪ್ಪಿಹೋಗುತ್ತದೆ, ಆದರೆ ಆತನಾಗಿಯೇ ಅಲ್ಲ. ಆದುದರಿಂದ, ಮೆಸ್ಸೀಯನ ಆಗಮನದಿಂದ, ಒಂದು ವಾರ ಅಂದರೆ, ವಾಗ್ದತ್ತ ಭಾಗ್ಯದ ಕಡೆಯ ವಾರವು ಉಳಿದುಕೊಳ್ಳುತ್ತದೆ. ಆ ವಾರದ ಮಧ್ಯದಲ್ಲಿ ಆತನು ತನ್ನ ಆತ್ಮವನ್ನೇ ಪಾಪಪರಿಹಾರಕ್ಕಾಗಿ ಸಮರ್ಪಿಸುವುದರ ಮೂಲಕ ಸಾಂಕೇತಿಕ ಯಜ್ಞವನ್ನು ಕೊನೆಗಾಣಿಸುತ್ತಾನೆ – ಯೆಶಾಯ 53:10–12.

ಈ ಎಪ್ಪತ್ತು ವಾರಗಳು ಅಥವಾ ನಾನೂರತೊಂಬತ್ತು ದಿನಗಳು, ನಾನೂರ ತೊಂಬತ್ತು ವರ್ಷಗಳನ್ನು ಪ್ರತಿನಿಧಿಸುತ್ತದೆ, ಪ್ರತಿಯೊಂದು ಸಾಂಕೇತಿಕ ದಿನವೂ ಒಂದು ವರ್ಷವನ್ನು ಪ್ರತಿನಿಧಿಸುತ್ತದೆ. ಈ ರೀತಿಯಲ್ಲಿ ಸಂಪೂರ್ಣವಾದ ನೆರವೇರಿಕೆಯುಂಟಾಗಿ ಈ ಕಾಲ ಪ್ರವಾದನೆಯು ಮಾತ್ರವೇ ಮೊದಲ ಆಗಮನಕ್ಕೆ ನೇರವಾಗಿ ಸಂಬಂಧಿಸಿದೆ., ಇದೇ ರೀತಿಯಲ್ಲಿ ಒಂದು ದಿನವು ಒಂದು ವರ್ಷವನ್ನು ಸೂಚಿಸುತ್ತದೆ ಎಂಬುವ ಕೀಲಿಕೈ, ಇದುವರೆಗೂ ಗುಪ್ತವಾಗಿದ್ದ ಬೇರೆ ಪ್ರವಾದನೆಗಳು ಇನ್ನು ಮುಂದೆ ಸ್ಪಷ್ಟವಾಗಿ ತಿಳಿಯುವದಕ್ಕೆ ಒದಗಿಸಲ್ಪಟ್ಟಿದೆ. ದಾನಿಯೇಲ ಮತ್ತು ಇತರೆ ಯೆಹೂದಿಗಳು ಈ ಪ್ರವಾದನೆಯನ್ನು ಒಂದುವೇಳೆ ಆರಿಸಿಕೊಂಡರೆ ಅದು ನಂಬಲಾಗದ್ದು ಎಂದು ಪರಿಗಣಿಸುವಂತೆ ಮತ್ತು ಕಾಲಕ್ರಮೇಣ ಅದನ್ನು ಮರೆತುಬಿಡುವಂತೆ ರಚಿಸಲ್ಪಟ್ಟಿದೆ. ಅಥವಾ "ಇಸ್ರಾಯೇಲ್ ಜನರನ್ನು ಸಂತೈಸುವವನು ಯಾವಾಗ ಬಂದಾನೆಂದು ಹಾರೈಸುತ್ತಿದ್ದರು" (ಲೂಕ 2:25). ಅದನ್ನು ನೆನಪಿಸಿಕೊಳ್ಳಬಹುದು ಮತ್ತು ಅವರು ಆ ಸಮಯವನ್ನು ಯೆಹೆಜ್ಕೇಲನ ಗ್ರಂಥದಲ್ಲಿ (4:6) ಸಾಂಕೇತಿಕ ಎಂಬುದಾಗಿ ತೀರ್ಮಾನಕ್ಕೆ ಬರಬಹುದು, ನಂಬಿಗಸ್ತರು ಮಾತ್ರವೇ ಮೆಸ್ಸೀಯನನ್ನು ನಿರೀಕ್ಷಿಸುತ್ತಾರೆ ಎಂಬುದು ನಿಶ್ಚಯ. ಮತ್ತು "ಎಲ್ಲಾ ಮನುಷ್ಯರೂ ಯೇಸುವಿನ ಆಗಮನವನ್ನು ಆತನು ಬಂದ ರೀತಿಯಲ್ಲಿ ಆತನನ್ನು ಸ್ವೀಕರಿಸಲು ಸಾದ್ಯವಾಗದಿದ್ದರೂ ಅದನ್ನು ಎದುರು ನೋಡುವವರಾಗಿದ್ದರು" ಎಂಬುದಾಗಿ ಲೂಕ 3:15ರಲ್ಲಿ ಬರೆಯಲ್ಪಟ್ಟಿದೆ.

ಅರವತ್ತೊಂಬತ್ತು ಸಾಂಕೇತಿಕ ವಾರಗಳು ಅಥವಾ ನಾನೂರ ಎಂಬತ್ತ ಮೂರು ವರ್ಷಗಳು ರಾಜಾಧಿರಾಜನಾದ ಮೆಸ್ಸೀಯನನ್ನು ಸಂಧಿಸುತ್ತೇವೆಯೇ ಹೊರತು ಬೆತ್ಲೆಹೇಮಿನಲ್ಲಿ ಯೇಸುವಿನ ಜನನವನ್ನಲ್ಲ ಎಂಬುದನ್ನು ಗಮನಿಸಬೇಕು. ಇಬ್ರಿಯ ಪದವಾದ 'ಮೆಸ್ಸೀಯ' ಎಂಬುದು ಗ್ರೀಕ್ ಪದವಾದ "ಕ್ರೈಸ್ಟ್" (ಕ್ರಿಸ್ತ) ಗೆ ಹೊಂದಾಣಿಕೆಯಾಗುತ್ತದೆ. ಇದರ ಅರ್ಥ 'ಅಭಿಷಿಕ್ತನು' (anointed) ಎಂಬುದಾಗಿದೆ. ಇದೊಂದು

ಬಿರುದಾಗಿದೆಯೇ ಹೊರತು ಹೆಸರಲ್ಲ. ಯೇಸುವು ದೀಕ್ಷಾಸ್ನಾನ ಹೊಂದಿಕೊಳ್ಳುವವರೆಗೆ ಅಭಿಷಿಕ್ತನೂ, ಮೆಸ್ಸೀಯನೂ, ಕ್ರಿಸ್ತನೂ ಆಗಿರಲಿಲ್ಲ (ಅ.ಕೃ 10:37,38 ಮತ್ತು ಮತ್ತಾಯ 3:16 ಇವುಗಳೊಂದಿಗೆ ಹೋಲಿಸಿರಿ). ಆತನು ಸ್ನಾನಿಕನಾದ ಯೋಹಾನನಿಂದ ಸ್ನಾನದೀಕ್ಷೆ ಪಡೆದು ನೀರಿನಿಂದ ಹೊರಬಂದಕೂಡಲೇ ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟನು. ಇದು ಆತನು ಪುರುಷತ್ವವನ್ನು ತಲುಪಿದ ನಂತರ ಉಂಟಾಯಿತು. ಅದು ಆತನ ಮೂವತ್ತನೆಯ ವರ್ಷಪ್ರಾಯದಲ್ಲಿ ಆತನು ಜನಿಸಿದ ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವೇ ಆಯಿತು. ಆತನು ಅದರ ಪ್ರಭುತ್ವವನ್ನು ಅದರ ಎಲ್ಲಾ ಷರತ್ತುಗಳನ್ನು ನೆರವೇರಿಸಿ, ಅದನ್ನು ಶಿಲುಬೆಗೆ ಜಡಿದು ಮುಕ್ತಾಯ ಗೊಳಿಸುವವರೆಗೂ ಆತನೂ, ಪ್ರತಿಯೊಬ್ಬ ಯೆಹೂದ್ಯನೂ ಅದಕ್ಕೆ ಬದ್ಧನಾಗಿದ್ದನು. ಆದುದರಿಂದ ಪ್ರವಾದನೆಯ ಅರವತ್ತೊಂಬತ್ತು ವಾರಗಳು ಕಾಲಕಾಲಕ್ಕೆ ಆತನ ಸ್ನಾನದೀಕ್ಷೆ ಮತ್ತು ಅಭಿಷೇಕದವರೆಗೆ ಮುಟ್ಟಿತು, ಅದಕ್ಕಿಂತ ಮುಂಚೆ ಆತನು ಮೆಸ್ಸೀಯ ಅಥವಾ ಕ್ರಿಸ್ತ ಅಥವಾ ಅಭಿಷಿಕ್ತನಾಗಿರಲಿಲ್ಲ. ಆದುದರಿಂದ, ಆ ಅರವತ್ತೊಂಬತ್ತು ವಾರಗಳು ಅಥವಾ ನಾನೂರ ಎಂಬತ್ತು ಮೂರು ವರ್ಷಗಳು ಕ್ರಿ.ಶ. 29ರ ಶರತ್ಕಾಲದಲ್ಲಿ ಮುಕ್ತಾಯಗೊಂಡಿತು, ಮತ್ತು ಅಲ್ಲಿಗೆ ಪ್ರವಾದನೆಯ ಆ ಭಾಗವು ನೆರವೇರಿತು. "ಯೆರೂಸಲೇಮು ಜೀರ್ಣೋದ್ಧಾರವಾಗಿ ಕಟ್ಟಲ್ಪಡಲಿ ಎಂಬ ದೈವೋಕ್ತಿಯು ಹೊರಡುವಂದಿನಿಂದ ಅಭಿಷಿಕ್ತನಾದ ಪ್ರಭುವು ಬರುವುದರೊಳಗಾಗಿ ಏಳುವಾರಗಳು ಕಳೆಯಬೇಕು! ಅದು ಪುನಃ ಕಟ್ಟಲ್ಪಟ್ಟು ಅರವತ್ತೆರಡು ವಾರ ಇರುವುದು" ಎಂದು ದಾನಿಯೇಲ 9:25ರಲ್ಲಿ ಓದುತ್ತೇವೆ– ಅರಸನಾದ ಮೆಸ್ಸೀಯನವರೆಗೆ ಏಳು ವಾರಗಳು, ಅರವತ್ತು ಮತ್ತು ಎರಡು (ಅರವತ್ತೊಂಬತ್ತು) ವಾರಗಳು. ಆಗ ಪ್ರಾರಂಭಗೊಂಡು, ಉಳಿದವುಗಳಂತೆ ದಿನವೊಂದಕ್ಕೆ ಒಂದು ವರ್ಷದಂತೆ ಎಪ್ಪತ್ತು ವಾರಗಳು ನೆರವೇರುವುದನ್ನು ನಾವು ಕಾಣುತ್ತೇವೆ.

ಈ ವಿಷಯದ ಬಗ್ಗೆ ಅನೇಕ ಬರಹಗಾರರು ಈ ಅವಧಿಯನ್ನು ಪಾರಸಿಯ ಅರಸನಾಗಿದ್ದ ಅರ್ತಷಸ್ತನ (Artaxerxes) ಏಳನೆಯ ವರ್ಷದಿಂದ ಅಂದರೆ ಎಜ್ರನಿಗೆ ನಿಯೋಗವೊಂದನ್ನು ನೀಡಿದಂದಿನಿಂದ (ಎಜ್ರ. 7:7–14) ಲೆಕ್ಕ ಮಾಡಲು ಪ್ರಾರಂಭಿಸಿರುತ್ತಾರೆ. ಆಗ ಕೋರೆಷನ ಶಾಸನ ಜಾರಿಯಾಯಿತೆಂದು ಊಹಿಸಲಾಗಿದೆ (ಎಜ್ರ 1:3; 5:13, 6:1–12). ಆದರೆ ಕೋರೆಷನ ಆಜ್ಞೆಯು ಯೆಹೋವನ ಮಂದಿರವನ್ನು ಮತ್ತು ಅದರ ಅಂಗಳದ ಗೋಡೆಯನ್ನು ನಿರ್ಮಿಸುವುದಾಗಿತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಆದರೆ ಮತ್ತೊಂದು ಶಾಸನವು ನೆಹೆಮೀಯನಿಗೆ ಅರ್ತಷಸ್ತನ (Artaxerxes) ಇಪ್ಪತ್ತನೆಯ ವರ್ಷದಲ್ಲಿ ಯೆರೂಸಲೇಮಿನ ಪೌಳಿಗೋಡೆಗಳನ್ನು ಪುನಃನಿರ್ಮಾಣ ಮಾಡುವಂತೆ ನೀಡಲಾಗಿತ್ತು. ಆ ಸಮಯದಲ್ಲಿ ಅದು ಇನ್ನೂ ದುರಸ್ತಿಗೊಂಡಿರಲಿಲ್ಲ (ನೆಹೆಮೀಯ 2:3–8; 6:15; 7:1). ಯೆರೂಸಲೇಮನ್ನು ಪುನಃವಶಪಡಿಸಿಕೊಂಡು ಅದನ್ನು ಪುನರ್‌ನಿರ್ಮಾಣ ಮಾಡಬೇಕೆನ್ನುವ ಈ ಶಾಸನದ ದಿನದಿಂದ ದಾನಿಯೇಲನ ಪ್ರವಾದನೆಯನ್ನು ಗಣನೆಗೆ ತೆಗೆದುಕೊಳ್ಳಬೇಕು.. ಈ ಸಮಗ್ರ ವಿಚಾರವು ಇದರೊಡನೆ ಸಾಮರಸ್ಯಗೊಳ್ಳುತ್ತದೆ. ಅದರಲ್ಲಿ ಒಂದು ಕಾಣಬಹುದಾದ ಆಕ್ಷೇಪಣೆಯೆಂದರೆ, ಈ ಬಗ್ಗೆ ಯೆಶಾಯನ ಪ್ರವಾದನೆಯಲ್ಲಿ ಕೋರೆಷನ ಬಗ್ಗೆ "ಅವನು ನನ್ನ ಪಟ್ಟಣವನ್ನು ತಿರುಗಿ ಕಟ್ಟಿ ಕ್ರಯುವನ್ನಾಗಲೀ, ಬಹುಮಾನವನ್ನಾಗಲೀ ಕೇಳಿಕೊಳ್ಳದೆ ಸೆರೆಯಾದ ನನ್ನ ಜನರನ್ನು ಬಿಡುಗಡೆ ಮಾಡುವನು ಎಂದು ಸೇನಾಧೀಶ್ವರನಾದ ಯೆಹೋವನು ಅನ್ನುತ್ತಾನೆ" (ಯೆಶಾಯ 45:13) ಎಂದು ಹೇಳಿಯದೆ. ಈ ಸುವ್ಯಕ್ತವಾದ ಆಕ್ಷೇಪಣೆಗೆ ನಾವು ಉತ್ತರಿಸುವುದೇನೆಂದರೆ – ಇಲ್ಲಿ ತರ್ಜುಮೆಗೊಂಡ 'City' (ಪಟ್ಟಣ) ಎಂಬ ಪದವು 'ir' ಎಂಬುದಾಗಿದೆ ಮತ್ತು ಇದು ಗೋಡೆಗಳುಳ್ಳ ಪ್ರದೇಶವನ್ನು ಸೂಚಿಸುವುದಾಗಿದೆ. ದೇವಾಲಯದ ಪೌಳಿಗೋಡೆಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ ಮತ್ತು ಇದರೊಂದಿಗೆ ಮೇಲಿನ ಸತ್ಯಸಂಗತಿಗಳು ಒಪ್ಪಿಗೆಯಾಗುತ್ತವೆ. ಇದೇ 'ir' ಎಂಬ ಪದವನ್ನು 2 ಅರಸು 20:4 ರಲ್ಲಿ 'ಮಧ್ಯಪ್ರಾಕಾರ' ಎಂದು ಭಾಷಾಂತರಗೊಳಿಸಲಾಗಿದೆ.

ನೆಹೆಮೀಯನ ನಿಯೋಗದ ದಿನಾಂಕವನ್ನು ಸಾಮಾನ್ಯವಾಗಿ ಕ್ರಿ.ಪೂ. 445 ಎಂದು ಹೇಳಲಾಗುತ್ತದೆ. ಆದರೆ ಕಾಲಗಣನೆಗಳ ಬಗ್ಗೆ ಡಾ॥ ಡೇಲ್ ಎಂಬುವವರ ಶೋಧನಾ ಕಾರ್ಯದಲ್ಲಿ (449 ಮತ್ತು 531) ಮತ್ತು ಡಾ॥ ಆಡಿ ಪ್ರೈಸ್ಟೈಲ್ (Dr. Adi Preistlie) "Harmony of the Evangelists" (ಪುಟ 24–38) ಎಂಬ ಪ್ರಬಂಧದಲ್ಲಿ ಈ ಹುದುವಾದ ದೃಷ್ಟಿಕೋನವನ್ನು ಒಂಬತ್ತು ವರ್ಷಗಳಷ್ಟು ಕಡಿಮೆಯೆಂದು ತೋರಿಸಲಾಗಿದೆ ಮತ್ತು ಇದು ಕ್ರಿ.ಪೂ. 454 ನ್ನು ನೆಹೆಮೀಯನ ನಿಯೋಗದ ನಿಜವಾದ ವರ್ಷವೆಂದು ತೋರಿಸುತ್ತದೆ. ಮತ್ತೂ ಈ ದಿನಾಂಕದೊಡನೆ ಯೆರೂಸಲೇಮನ್ನು ಪುನಃ ನಿರ್ಮಾಣ ಮಾಡಬೇಕೆನ್ನುವ ಆಜ್ಞೆಯ ಬಗ್ಗೆ ದಾನಿಯೇಲನ ಭವಿಷ್ಯವಾಣಿಯು (9:25) ಒಪ್ಪುತ್ತದೆ.

ಅರವತ್ತೊಂಬತ್ತು ವಾರಗಳು (7+62) ಅಥವಾ ನಾನೂರ ಎಂಬತ್ತಮೂರು ವರ್ಷಗಳು ಅರಸನಾದ ಮೆಸ್ಸೀಯನನ್ನು (ಅಬಿಷಕ್ತನು) ತಲುಪುತ್ತದೆ, ಆದುದರಿಂದ ಈ ಅವಧಿಯಾದ ಅರವತ್ತೊಂಬತ್ತು ಸಾಂಕೇತಿಕ ವಾರಗಳು ಅಥವಾ ನಾನೂರ ಎಂಬತ್ತ ಮೂರು ವರ್ಷಗಳಿಂದ ನಾವು

ಕ್ರಿ.ಪೂ. ನಾನೂರ ಐವತ್ತನಾಲ್ಕು ವರ್ಷಗಳನ್ನು ಯೆರೂಸಲೇಮನ್ನು ಪುನಃವಶಪಡಿಸಿಕೊಂಡು ಪುನಃ ನಿರ್ಮಾಣ ಮಾಡುವಂತೆ ಕಳೆಯುತ್ತೇವೆ ಇದರಲ್ಲಿ ಉಳಿಯುವ ಕ್ರಿ.ಶ. 29 ಅಭಿಷಿಕ್ತನಾದ ಮೆಸ್ಸೀಯನು ಪ್ರಕಟವಾದ ವರ್ಷವಿದ್ದಿರಬೇಕು. ಇದು ನಾವೀಗಾಗಲೇ ತೋರಿಸಿದ್ದರೊಂದಿಗೆ ಅಂದರೆ ಯೇಸುವು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಪಡಕೊಂಡು ನಂತರ ಪವಿತ್ರಾತ್ಮನಿಂದ ಅಭಿಷೇಕ ಹೊಂದಿಕೊಂಡದ್ದು ಸುಮಾರು ಅಕ್ಟೋಬರ್ ತಿಂಗಳ 3ನೇ ದಿನಾಂಕವಿದ್ದಿರಬೇಕು ಎಂಬುದರ ಬಗ್ಗೆ ಸರಿಯಾಗಿ ಹೊಂದಾಣಿಕೆಯಾಗುತ್ತದೆ. ಆ ಸಮಯದಲ್ಲಿ ಯೇಸುವು ಹಿಂದಿನ ಪರಿಚ್ಛೇಧದಲ್ಲಿ ಹೇಳಿದಂತೆ ಆತನ ನಿಜವಾದ ಜನನ ದಿನಾಂಕದ ಪ್ರಕಾರ ಮೂವತ್ತು ವರ್ಷ ಪ್ರಾಯದವನಾಗಿದ್ದನು.

ನಮ್ಮ ಕರ್ತನ ಸೇವಾವಧಿಯು ಮೂರುವರೆ ವರ್ಷಗಳದ್ದಾಗಿದ್ದು ಪಸ್ಕದ ಸಮಯದಲ್ಲಿನ ಆತನ ಶಿಲುಬೆಯ ಮರಣದಲ್ಲಿ ಅಂದರೆ ಕ್ರಿ.ಶ. 33ರ ವಸಂತ ಋತುವಿನಲ್ಲಿ ಮುಕ್ತಾಯಗೊಂಡಿತು. ಇದರಲ್ಲಿ ಆತನು ವಾಗ್ದತ್ತ ಅನುಗ್ರಹದ ಉಳಿದ ಅಥವಾ ಕಡೆಯ ವಾರ (ಏಳು ವರ್ಷಗಳ) ಬಗೆಗಿನ ಪ್ರವಾದನೆಯನ್ನು ಕರಾರುವಕ್ಕಾಗಿ ನೆರವೇರಿಸುತ್ತಾನೆ. ಅದೇನೆಂದರೆ "ಅರವತ್ತೊಂಬತ್ತು (7+62) ವಾರಗಳ ನಂತರ ಮೆಸ್ಸೀಯನು ಛೇದಿಸಲ್ಪಡುವನು (Douay translation "be Slain"), ಆದರೆ ತನಗಾಗಿ ಅಲ್ಲ* ವಾರದ ಮಧ್ಯದಲ್ಲಿ (ಉಳಿದ 70ನೇ ವಾರ) ಆತನು ಯಜ್ಞ, ನೈವೇದ್ಯಗಳನ್ನು ನಿಲ್ಲಿಸುವನು"

ಧರ್ಮಶಾಸ್ತ್ರ ಪ್ರಕಾರ ಅಲ್ಲಿಯವರೆಗೆ ನಡೆಯುತ್ತಿದ್ದ ಬಲಿ, ಯಜ್ಞಗಳು ಸ್ಥಗಿತಗೊಳ್ಳುತ್ತವೆ; ಯಾಜಕರುಗಳು ನಂತರ ದಿನಗಳಲ್ಲಿ ಪಶುಗಳನ್ನು, ಸುಗಂಧ ದ್ರವ್ಯಗಳನ್ನು ಆರ್ಪಿಸಲಿಲ್ಲವೆಂದಲ್ಲ. ಅವುಗಳನ್ನು ವರ್ಷಂಪ್ರತಿ ಅರ್ಪಿಸಲಾಗುತ್ತಿತ್ತು, ಆದರೆ ಅವುಗಳು ಯೆಹೋವನಿಂದ ಸ್ವೀಕೃತಿಗೊಳ್ಳಲಿಲ್ಲ, ಹೀಗಾಗಿ ಅವುಗಳು ಯಾವುದೇ ಅರ್ಥದಲ್ಲಿ ಪಾಪಪರಿಹಾರ ಯಜ್ಞವಾಗಿರಲಿಲ್ಲ. ನಮ್ಮ ಕರ್ತನು ತನ್ನನ್ನು ತಾನೇ ಸಮರ್ಪಿಸಿಕೊಂಡದ್ದರಿಂದ ನಿಜವಾದ ಯಜ್ಞವು ನೆರವೇರಿತು (ಇಬ್ರಿಯ 9:26). ಹೀಗಾಗಿ, ಯೆಹೋವನು ಇನ್ನು ಮುಂದೆ ಯಾವುದೇ ಬೇರೆ ಯಜ್ಞಗಳನ್ನು ಮಾನ್ಯಮಾಡಲಿಲ್ಲ ಮತ್ತು ಅವುಗಳ ಅಗತ್ಯತೆಯೂ ಇದ್ದಿಲ್ಲ.

ಆದುದರಿಂದ, ತನ್ನನ್ನು ಮೂರೂವರೆ ವರ್ಷಗಳ ಕಾಲ ಸಮರ್ಪಿಸಿಕೊಳ್ಳುತ್ತಾ ಬಂದ ಮೆಸ್ಸೀಯನು ತನ್ನ ಕಾರ್ಯವನ್ನು ಕ್ರೂಜೆಯಲ್ಲಿ ಮಾಡಿ ಮುಗಿಸಿದನು (ಯೋಹಾನ 19:30). ಈ ರೀತಿಯಲ್ಲಿ ಆತನು ಪಾಪವನ್ನು ಅಂತ್ಯಗಾಣಿಸಿದನು. ಮಾನವರ ಅಪರಾಧಗಳಿಗಾಗಿ ದೇವರೊಡನೆ ಸಂಪೂರ್ಣವಾದ ಸಂಧಾನವನ್ನು ಸಾಧಿಸಿದನು. ಈ ರೀತಿಯಾಗಿ ಸಾಂಕೇತಿಕ ಜನರಾದ ಇಸ್ರಾಯೇಲ್ಯರಿಗೆ ಸಾಂಕೇತಿಕವಾಗಿದ್ದ ವಾರ್ಷಿಕವಾದ ನೀತಿನಿರ್ಣಯದ ಬದಲಾಗಿ ಆತನು ಸಮಸ್ತ ಮಾನವಕುಲಕ್ಕೆ ಪಾಪದಿಂದ ನಿತ್ಯನಿರಂತರವಾದ ನೀತಿನಿರ್ಣಯವನ್ನು ಸಾಧಿಸಿದನು. ಮೆಸ್ಸೀಯನ ಮರಣವು ಸಹ ಒಂದು ಮುದ್ರೆಯಂತಿದೆ, ಮುಂಬರುವ ಆಶೀರ್ವಾದಗಳಿಗೆ ಇರುವ ಎಲ್ಲಾ ದರ್ಶನಗಳ ಮತ್ತು ಪ್ರವಾದನೆಗಳ ನೆರವೇರಿಕೆಯ ಖಾತರಿಯನ್ನು ನೀಡುವುದಾಗಿದೆ ಮತ್ತು ಲೋಕವು ಸೃಷ್ಟಿಯಾದಂದಿನಿಂದ ಆತನ ಪವಿತ್ರ ಪ್ರವಾದಿಗಳ ಮೂಲಕ ನುಡಿಯಲ್ಪಟ್ಟ ಸಮಸ್ತವನ್ನೂ ಸರಿಪಡಿಸುವ ಕಾಲವಾಗಿದೆ (ಅ.ಕೃ. 3:21). ಅಬ್ರಹಾಮನ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಇವೆರಡರಲ್ಲೂ ಇರುವ ಎಲ್ಲಾ ವಾಗ್ದಾನಗಳೂ ಆತನ ಸ್ವಂತ ಅಮೂಲ್ಯ ರಕ್ತದ ಮೂಲಕ ಸುರಕ್ಷಿತಗೊಂಡಿವೆ, ಖಚಿತವಾಗಿದೆ. (ಲೂಕ 22:20. 1 ಕೊರಿಂಥ 11:25), ಅವುಗಳು ನಮಗೆ ಪಶುಗಳ, ಹೋತಗಳ ರಕ್ತಕ್ಕಿಂತ, ಉತ್ತಮ ಸಂಗತಿಗಳನ್ನು ಅಂದರೆ ಆತನನ್ನು ಸ್ವೀಕರಿಸುವವರಿಗೆ ದೊರೆಯುವ, ನಿತ್ಯನಿರಂತರವಾದ ನೀತಿನಿರ್ಣಯ, ಪಾಪಗಳನ್ನು ತೀರಿಸುವುದು ಮುಂತಾದವುಗಳಲ್ಲಿ ತಿಳಿಸುತ್ತವೆ. ಉಳಿದ ಅಥವಾ ಎಪ್ಪತ್ತನೆಯ ವಾರದ ನಂತರದ ಅರ್ಧಭಾಗದಲ್ಲಿ, ಯೆಹೂದ್ಯರ ಕೃಪಾಕಾಲದ ಕೊನೆಯ ವಾರದಲ್ಲಿ, ಪಂಚಾಶತ್ತಮದಿಂದ ಪ್ರಾರಂಭವಾಗಿ ಮೂರೂವರೆ ವರ್ಷಗಳಲ್ಲಿ ಅತನನ್ನು ಅನುಸರಿಸಿದವರು, ಆ ಜನಾಂಗದಲ್ಲಿನ ಅತ್ಯಂತ ಪರಿಶುದ್ಧರಾದವರು ಯೇಸು ಅರವತ್ತೊಂಬತ್ತನೆಯ ವಾರದ ಅಂತ್ಯದಲ್ಲಿರುವಾಗ ದೇವರ ಪರಿಶುದ್ಧಾತ್ಮನ ಮೂಲಕ ಅಭಿಷೇಕಿಸಲ್ಪಟ್ಟನು.

ಈ ರೀತಿಯಲ್ಲಿ ಈ ಪ್ರವಾದನೆಯ ವಚನ ಇಪ್ಪತ್ತನಾಲ್ಕರಲ್ಲಿ ಹೇಳಿದ ಹೇಳಿಕೆಗಳು ನೆರವೇರಿದವು; ಆತನ ಜನಕ್ಕೂ, ಆತನ ಪರಿಶುದ್ಧ ಪಟ್ಟಣಕ್ಕೂ ಪ್ರತ್ಯೇಕಿಸಲು ಎಪ್ಪತ್ತು ವಾರಗಳು ನಿರ್ಧರಿಸಲ್ಪಟ್ಟಿತು. (ಅ) ಅಧರ್ಮವನ್ನು ಕೊನೆಗಾಣಿಸುವುದು, ಪಾಪಗಳನ್ನು ತೀರಿಸುವುದು, ಅಪರಾಧವನ್ನು ನಿವಾರಿಸುವುದು, ನೂತನ ಧರ್ಮವನ್ನು ಸ್ಥಾಪಿಸುವುದು, (ಆ) ಕನಸನ್ನು ಪ್ರವಾದಿಯ ನುಡಿಯನ್ನೂ ಮುದ್ರೆ ಹಾಕಿ ಯಥಾರ್ಥ ಮಾಡುವುದು, (ಇ) ಅತಿ ಪರಿಶುದ್ಧವಾದದ್ದನ್ನು ಅಭಿಷೇಕಿಸುವುದು,

* "ತನಗಾಗಿ ಅಲ್ಲ" (but Not for himself) ಎಂಬ ಹೇಳಿಕೆಯು ಇತರೆ ಭಾಷಾಂತರಗಳಲ್ಲಿ ವಿವಿಧ ರೀತಿಯಲ್ಲಿ ತರ್ಜುಮೆಗೊಂಡಿದೆ. ಅವುಗಳಲ್ಲಿ ಹಲವು ನಮ್ಮ ಮುಂದಿವೆ, ಆದರೆ ನಮ್ಮ ಅಭಿಪ್ರಾಯದಲ್ಲಿ A.V. ಯಲ್ಲಿರುವುದು ಎಲ್ಲವುಗಳಿಗಿಂತಲೂ ಉತ್ತಮವಾಗಿದೆ.

ಆ ಕಾರ್ಯವು ಮೆಸ್ಸಿಯನು ಪ್ರತ್ಯಕ್ಷನಾಗುವ ವಾರಾಂತ್ಯದವರೆಗೆ ಈ ಪ್ರವಾದನೆಯು ಮುಂದೂಡಲ್ಪಡುತ್ತದೆ ಎಂಬುದನ್ನು ತೋರಿಸುವುದಿಲ್ಲ. ನಿಸ್ಸಂದೇಹವಾಗಿ ಅವರು ಮೆಸ್ಸೀಯನಿಗಾಗಿ ಸಿದ್ಧಮಾಡಿಕೊಳ್ಳಬೇಕಾದ, ಸರ್ವಸಾಮಾನ್ಯವಾಗಿ ಈ ಲೋಕವನ್ನು ಆಶೀರ್ವದಿಸುವಂತೆ ಅವರ ಪಾಲಿನ ಮಹಾ ನೈತಿಕ ಸುಧಾರಣೆಯನ್ನು ಗ್ರಹಿಸಿಕೊಳ್ಳುತ್ತಾರೆ. ಶತಮಾನಗಳ ಅನುಭವಗಳಿಂದಲೂ ಅವರು ತಾವು ತಮ್ಮ ಪಾಪಗಳನ್ನು ತೆಗೆದುಹಾಕಲು ಮತ್ತು ತಮ್ಮ ಅಪರಾಧಗಳನ್ನು ಸಂಧಾನಪಡಿಸಿಕೊಳ್ಳಲು ಬಲವಿಲ್ಲದವರು ಹಾಗೂ ಈ ಪಾಪವನ್ನು ತೊಡೆದು ಹಾಕುವ ಮಹಾಕಾರ್ಯವನ್ನು ನೆರವೇರಿಸಲು ಮತ್ತು ದೋಷಾರೋಪಣೆ ಹೊಂದಿದವರಿಗೆ ನೀತಿನಿರ್ಣಯ ಕೊಡಲು ಪರಿಪೂರ್ಣ ಈಡುಬಲಿಯ ಅಗತ್ಯವಿದೆ ಎಂಬುದನ್ನು ಕಲಿತುಕೊಳ್ಳಲಿಲ್ಲ.

ಮತ್ತೊಂದೆಡೆಯಲ್ಲಿ, ಮೆಸ್ಸೀಯನು ಕಡೇ ವಾರದ ಮಧ್ಯಭಾಗದಲ್ಲಿ ಛೇದಿಸಲ್ಪಡುತ್ತಾನೆ (ಮರಣಿಸುತ್ತಾನೆ) ಎಂದು ತೋರಿಸುವ ದಾನಿಯೇಲನ ಪ್ರವಾದನೆಯು ಆತನ ಜನ ಸಮೂಹದವರು ಕಪಟಿಗಳು, ಅನ್ಯಾಯದಿಂದ ತುಂಬಿದವರೂ ಆಗಿದ್ದುದರಿಂದ ಅವರನ್ನು ಕಡೇ ವಾರದ ಮಧ್ಯದಲ್ಲೇ ಹೊರಹಾಕಲಾಗುವುದು (ಮತ್ತಾಯ 23:38) ಎಂಬುದನ್ನು ತೋರಿಸುವುದಿಲ್ಲ. ಮತ್ತೊಂದು ಪ್ರವಾದಿಯು ಆತನು ಈ ನೀತಿಯ ಕಾರ್ಯವನ್ನು ಕ್ಲುಪ್ತವಾಗಿ ಪೂರ್ತಿಗೊಳಿಸುತ್ತಾನೆ (ರೋಮಾ. 9:28) ಮತ್ತು ನೀತಿವಂತಿಕೆಯಲ್ಲಿ ಅದನ್ನು ಮೊಟಕುಗೊಳಿಸುತ್ತಾನೆ ಮತ್ತು ಮಹಾ ಪರಿಶುದ್ಧನ ಅಭಿಷೇಕದ ಹೊರತಾಗಿ ಎಲ್ಲವೂ ಕ್ರಿಸ್ತನ ಸೇವೆಯ ಅರ್ಧವಾರದಲ್ಲಿಯೇ ಮುಕ್ತಾಯವಾಗುವುದು (ಮೂರೂವರೆ ವರ್ಷದಲ್ಲಿ) ಎಂದು ಹೇಳಿದ್ದಾನೆ.

ಆದರೆ, ಎಪ್ಪತ್ತನೆಯ ವಾರದ ಶೇಷ ಭಾಗದ ಬಗ್ಗೆ ಏನು? ಅದರ ಮೂರೂವರೆ ವರ್ಷವು ಶಿಲುಬೆಯನ್ನು ಮೀರಿ ವಿಸ್ತಾರಗೊಂಡಿದೆಯೋ? ಯೆಹೋವನು ಇಸ್ರಾಯೇಲ್ಯರ ಮೇಲಿನ ಎಪ್ಪತ್ತು ವಾರಗಳ ತನ್ನ ಕೃಪಾಕಾಲವನ್ನು ಪಕ್ಕಕ್ಕೆ ಸರಿಸಿದ್ದಾನೆಯೋ? ಮತ್ತು ನಿಜವಾಗಿ ಅವರಿಗೆ ಅರವತ್ತೊಂಬತ್ತೂವರೆ ಮಾತ್ರ ನೀಡಿದ್ದಾನೆಯೋ? ಮೊದಲನೆಯ ನೋಟಕ್ಕೆ ಅದು ಹಾಗೆ ಕಾಣುವುದು, ವಿಶೇಷವಾಗಿ ವಾರದ ಮಧ್ಯದಲ್ಲಿ ಆತನ ಮರಣದ ಐದು ದಿನಗಳ ಹಿಂದೆ ಯೇಸು ಆ ಪಟ್ಟಣವನ್ನು ಕುರಿತಾಗಿ ಕಣ್ಣೀರಿಟ್ಟು "ಈ ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" ಎಂದನು ಎಂಬುದನ್ನು ನೆನಪುಮಾಡಿಕೊಳ್ಳುವಾಗ ನಮಗೆ ಹಾಗೆ ಕಂಡುಬರುವುದು. ಆದರೆ, ಹಾಗಲ್ಲ, ಯೆಹೋವನಿಗೆ ಪ್ರಾರಂಭದಿಂದ ಅಂತ್ಯದವರೆಗೆ ಎಲ್ಲವೂ ಗೊತ್ತಿದೆ. ಆತನು ಎಪ್ಪತ್ತು ವಾರಗಳು ವಾಗ್ದಾನ ಮಾಡಿದಾಗ, ಅದು ಅದೇ ಅರ್ಥವನ್ನು ಸೂಚಿಸಿತು. ಆದುದರಿಂದ ಆತನು ಆ ಜನರ ಮೇಲಿನ ಕೃಪೆಯನ್ನು ಶಿಲುಬೆಗೆ ಹಾಕಿದ ನಂತರದ ಮೂರೂವರೆ ವರ್ಷ ಕಾಲವೂ ನೋಡಿಕೊಳ್ಳಬೇಕು, ಅಷ್ಟಾದರೂ ಅವರು ಒಂದು ರಾಷ್ಟ್ರೀಯವಾಗಿ ಪಾಳುಬಿದ್ದವರಾದರು.

ಇಸ್ರಾಯೇಲ್ಯರು ಒಂದು ರಾಷ್ಟ್ರವಾಗಿ ಪ್ರಮುಖ ಅಥವಾ ಆತ್ಮೀಕ ದಯೆಯನ್ನು ಸ್ವೀಕಾರಮಾಡಲು ಯೋಗ್ಯರಾಗಿರಲಿಲ್ಲ (ಅಥವಾ ಈ ಲೋಕದ ದಯೆಯನ್ನು ಸಹಾ) ಎಂಬುದು ದೇವರು ಮೊದಲೇ ಕಂಡುಕೊಂಡಂತೆ ಮತ್ತು ಮೊದಲೇ ಹೇಳಿದಂತೆ ಅವರು ಮೆಸ್ಸೀಯನನ್ನು ತಿರಸ್ಕರಿಸಿದ್ದರಲ್ಲಿ ಸಿದ್ಧಾಂತಗೊಳ್ಳುತ್ತದೆ. ಆದುದರಿಂದ ಅವರಿಗಾದ ತಮ್ಮ ರಾಷ್ಟ್ರೀಯ ಪರೀಕ್ಷೆಯನ್ನು ಅವರ ಎಪ್ಪತ್ತನೇ ವಾರದ ಮಧ್ಯ ಭಾಗ ಆದ ಮೇಲೆಯೂ ಮುಂದುವರಿಸುವುದು ಅವರಿಗೆ ಲಾಭಧಾಯಕವಾಗಿರಲಿಲ್ಲ. ಅದು ಅಲ್ಲಿಯೇ ಕಡಿತಗೊಂಡಿತು. ಆಗ, ಅವರ ಆಲಯವು ಅವರಿಗೆ ಬರಿದಾಗಿಬಿಟ್ಟಿತು, ಆಗ ಅವರು ಖಿನ್ನರಾದರು, ಕೃಪೆಯಿಂದಲೂ ತಿರಸ್ಕೃತರಾದರು. ಉಳಿದ ಅವಧಿಯ ಮೂರುವರೆ ವರ್ಷಗಳು ಉಳಿದವರಾದ (remnants) ಅತ್ಯಂತ ಪರಿಶುದ್ಧರು, ಪವಿತ್ರರು, ಅತ್ಯಂತ ಯೋಗ್ಯರಾದ ಇವರುಗಳಿಗೆ ಈ ಅನುಗ್ರಹವು ಬಹಳ ಹೆಚ್ಚಾಯಿತು, ಏಕೆಂದರೆ ಇವರಿಗೆ ಮಾತ್ರವೇ ಉಪಯುಕ್ತವಾಗಿತ್ತು (ಯೆಶಾಯ 10:22–23, ರೋಮಾ. 9:28 ಹೋಲಿಸಿ). ದಯೆಯ ಹೆಚ್ಚಳ ಹೊಂದಿದವರಲ್ಲಿ ಮೂರೂವರೆ ವರ್ಷಗಳಲ್ಲಿ ಪ್ರತ್ಯೇಕ ಗಮನಹರಿಸಿ, ಸೇವೆಯಲ್ಲಿ ತೊಡಗಿದ ಉಳಿದವರು, ಆತ್ಮನ ಹಂಚಿಕೆಯ ಹೆಚ್ಚಿನ ಸೌಕರ್ಯವನ್ನು ಪಡಕೊಂಡವರು ಮಾತ್ರವೇ ಇದ್ದರು. ಇದು ಪಂಚಾಶತ್ತಮದ ಶಿಷ್ಯರೊಂದಿಗೆ ಪ್ರಾರಂಭವಾಗಿ ಆ ದೇಶದ ಎಲ್ಲಾ ಮಾಗಿದ ಗೋಧಿ ಕಾಳನ್ನೂ ವಿಶೇಷ ಕೃಪೆಯ ಕಾಲದಲ್ಲೆಲ್ಲಾ ಪಸರಿಸಿತು. ಮೊದಲಿನ ಕೆಲವು ದಿನಗಳ ಫಲಿತಾಂಶಕ್ಕಾಗಿ ಅ.ಕೃ. 2:41 ಮತ್ತು 4:4 ಇವುಗಳನ್ನು ನೋಡಿರಿ.

ಯೇಸುಕ್ರಿಸ್ತನು ಎಲ್ಲರಿಗಾಗಿ ಮರಣವನ್ನು ಅನುಭವಿಸಬೇಕಾದರೂ, ಸುವಾರ್ತೆಯು ಎಲ್ಲರಿಗೂ ಪ್ರಚುರಪಡಿಸ ಬೇಕಾಗಿದೆಯಾದರೂ, ಆತನು ಶಿಷ್ಯರಿಗೆ ನೀಡಿದ ಆದೇಶಗಳೆಂದರೆ ಅವರು ಯೆರೂಸಲೇಮಿನಲ್ಲಿ ಅದನ್ನು ಪ್ರಾರಂಭಿಸಬೇಕು ಎಂಬುದೇ ಅಥವಾ ಅವರು ಆ ವಿಶೇಷಕಾರ್ಯವನ್ನು ಬಿಟ್ಟು ಬಿಡಬಾರದು ಹಾಗೂ ನೂತನ ದೈವನಿರ್ವಹನೆಯ ಭಾಗ್ಯವನ್ನು ಮೂರೂವರೆ ವರ್ಷಗಳವರೆಗೆ ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಿದ ಕೃಪೆಯು ನೆರವೇರುವವರೆಗೂ ಮತ್ತು ದೇವರು ಅವರನ್ನು ವಿಶೇಷವಾಗಿ ಅನ್ಯಜನಗಳ ಬಳಿಗೂ, ಯೆಹೂದ್ಯರ ಬಳಿಗೂ ಕಳುಹಿಸಿಕೊಡುವವರೆಗೂ ಅದನ್ನು ಇತರೆ ಯಾರಿಗೂ ನೀಡಕೂಡದು ಎಂಬವುಗಳೇ (ಅ.ಕೃ. 10ನೇ ಅಧ್ಯಾಯ).

ಕೊರ್ನೇಲ್ಯನ ಪರಿವರ್ತನೆಯ ಸರಿಯಾದ ದಿನಾಂಕವನ್ನು ಕಾಲಗಣನೆಗಳನ್ನು ಅಧ್ಯಯನ ಮಾಡುವವರು ಮಾತ್ರವೇ ಊಹಿಸಬಹುದು. ಆದುದರಿಂದ ಅದು ಕ್ರಿ.ಶ. 37 ರಿಂದ 40ರ ಅವಧಿಯಲ್ಲಿ ನಡೆದಿರಬಹುದೆಂದು ವಿವಿಧ ರೀತಿಯ ಲೆಕ್ಕಾಚಾರ ಮಾಡಲಾಗಿದೆ. ಆದರೆ ನಾವೀಗ ಪರಿಗಣಿಸುತ್ತಿರುವುದು ಈ ಗುರುತಿಸಲ್ಪಟ್ಟ ಪ್ರವಾದನೆಯ ದೃಷ್ಟಿಯಲ್ಲಿ ಅದು ಕ್ರಿ.ಶ. 36ರ ಶರತ್ಕಾಲವಾಗಿತ್ತು ಎಂಬುದರ ಬಗ್ಗೆ ನಾವು ಸಂದೇಹಪಡುವುದಿಲ್ಲ. ಅಲ್ಲಿಗೆ ಎಪ್ಪತ್ತು ವಾರಗಳು ಅಥವಾ ನಾನೂರ ತೊಂಬತ್ತು ವರ್ಷಗಳ ಇಸ್ರಾಯೇಲ್ಯರ ಮೇಲಣ ಕೃಪಾಕಾಲವು ಮುಕ್ತಾಯಗೊಳ್ಳುತ್ತದೆ. ಅವರ ಈ ಪ್ರತ್ಯೇಕವಾಗಿದ್ದ ವಿಶೇಷ ಕೃಪೆಯು ಅಲ್ಲಿಗೆ ಮುಕ್ತಾಯಗೊಳ್ಳುವುದರಿಂದ, ಬಹಳಷ್ಟು ಸಕಾಲಿಕವಾಗಿ ಅನ್ಯಜನರಿಗೆ ಸುವಾರ್ತೆಯನ್ನು ಕಳುಹಿಸಿಕೊಡುವುದು ಎಂದು ಗುರುತಿಸಬೇಕು. ನಂತರದಲ್ಲಿ ಇಸ್ರಾಯೇಲ್ಯರಿಂದ ಸುವಾರ್ತೆಯನ್ನು ಇಲ್ಲದಂತೆ ಮಾಡಲಿಲ್ಲ, ಆದರೆ ಉಳಿದವರು ಪೂರ್ವಾಗ್ರಹ ಪೀಡಿತರಾದ್ದರಿಂದ ಅವರನ್ನು ಕಡಿಮೆ ಕೃಪಾಸ್ಥಾನದಲ್ಲಿ ಇಟ್ಟಿತು ಮತ್ತು ಅವರನ್ನು ಅನ್ಯಜನರೊಂದಿಗೇ ಸಮನಾಗಿ ಪರಿಗಣಿಸಲಾಯಿತು. ಹೆಚ್ಚು ಪವಿತ್ರರಾದವರನ್ನು ಈಗಾಗಲೇ ಆರಿಸಿಕೊಳ್ಳಲಾಗಿತ್ತು, ಸುವಾರ್ತೆಯು ಇನ್ನು ಮುಂದೆ ಅವರಿಗೆ ಮಾತ್ರವೇ ಪ್ರತ್ಯೇಕವಾಗಿ ಮಿತಿಯಾಗಿರಲಿಲ್ಲ, ಆದರೆ ಅದು ಕೇಳಿಸಿಕೊಳ್ಳುವ ಕಿವಿಯುಳ್ಳ ಎಲ್ಲಾ ಜೀವಿಗೂ ಮುಕ್ತವಾಗಿತ್ತು.

ಎಪ್ಪತ್ತು ವಾರಗಳ ನಂತರ ವಚನ ದಾನಿ. 9:26, 27ರ ಕಡೆಯ ಭಾಗದಲ್ಲಿ ಹೇಳಿರುವಂತೆ ಸಂಕಟಗಳು ಮತ್ತು ತೊಂದರೆಗಳು ಉಂಟಾದವು. ರೋಮಿನ ಅರಸನು ಬಂದನು, ನಗರವನ್ನೂ, ದೇವಾಲಯುವನ್ನೂ ನಾಶನಗೊಳಿಸಿದನು. ಮತ್ತು ಒಂದು ಪ್ರವಾಹದಂತೆ ಆತನು ತನ್ನ ಹಿಂದೆ ದಾರುಣವಾದ ಅಪ್ರಯೋಜಕಗಳನ್ನು, ನಾಶವಾದವುಗಳನ್ನು ಬಿಟ್ಟುಹೋದನು. ಮತ್ತು ಅವರು ನಿರಾಕರಿಸಿದ ಮೆಸ್ಸೀಯನು ಆ ಜನರಿಗೆ ಸಂಭವಿಸುವಂತೆ ಅಂದಿನಿಂದ ಹಲವಾರು ಕೆಡುಕುಗಳಿಗೆ ಅನುಮತಿಸಿದನು ಮತ್ತು ಅವುಗಳ ಪೂರ್ಣ ನೆರವೇರಿಕೆಯವರೆಗೂ, ಅವರು ಅದನ್ನು ಮುಳುಗಿಸುವವರೆಗೂ ಮತ್ತು ಆತನು ಅವರಿಗೆ "ಯೆರೂಸಲೇಮಿನೊಂದಿಗೆ ಹೃದಯಂಗಮವಾಗಿ ಮಾತನಾಡಿರಿ; ಅದಕ್ಕೆ ಗಡುವು ತೀರಿತು, ವಿಧಿಸಿದ ದೋಷಫಲವೆಲ್ಲಾ ನೆರವೇರಿತು" (ಯೆಶಾಯ 40:1,2) ಎಂದು ಹೇಳುವವರೆಗೂ ಅದನ್ನು ಅನುಮತಿಸಿದನು. ಅದೇ ಸಮಯದಲ್ಲಿ "ನಿಶ್ಚಯಪಡಿಸಿದ್ದ ದೈವಸಂಕಲ್ಪವು ನೆರವೇರಲೇಬೇಕು. ನಾಶವಾದವರ ಮೇಲೆ (ಅಥವಾ ತೊರೆದು ಬಿಟ್ಟ ಜನರ ಮೇಲೆ) ಮತ್ತು ಅವರ ಪಾತ್ರೆಯು ದುಃಖದಿಂದ ತುಂಬುವ ಆ ದಿನದವರೆಗೂ ಅಂದರೆ: ಕರ್ತನ ಹೆಸರಿನಲ್ಲಿ ಬರುವಾತನಿಗೆ ಆಶೀರ್ವಾದ" ಎಂದು ಅವರು ಹೇಳುವ ದಿನದವರೆಗೂ ಸುರಿಸಲ್ಪಡುವುದು. ಇಸ್ರಾಯೇಲ್ಯರ ಆ ಬಿಡುಗಡೆಯ ದಿನವು ಈಗ ಉದಯವಾಗುತ್ತಿದೆ, ದೇವರಿಗೆ ಸ್ತೋತ್ರವಾಗಲಿ!; ಅವರ ಸಂಕಟಗಳು ಮತ್ತು ವ್ಯಾಕುಲತೆಗಳು ಇನ್ನೂ ಮುಕ್ತಾಯದಲ್ಲಿಲ್ಲ, ಪೂರ್ವಾಗ್ರಹಿತವಾಗಿ ಕುರುಡಾಗಿರುವ ಅವರ ಮನಸ್ಸು ತಾವು ಇರಿದಾತನನ್ನು ಅಸ್ಪಷ್ಟವಾಗಿ ನೋಡುವಾಗ ಪ್ರತಿ ಘಳಿಗೆಯೂ ಸಮಯವನ್ನು ತ್ವರೆಪಡಿಸುತ್ತದೆ ಮತ್ತು ಅವರು ಇದ್ದೊಬ್ಬ ಮಗನನ್ನು ಕಳೆದುಕೊಂಡಂತೆ ಆತನಿಗಾಗಿ ಗೋಳಾಡುವರು (ಜೆಕರ್ಯ 12:10).

ಈ ಪರಿಚ್ಛೇಧವನ್ನು ಓದುವ ಅನೇಕರು ಇಲ್ಲಿ ಪರೀಕ್ಷೆಗೆ ಒಳಗಾಗುವವರು. ಅನೇಕ ಗೊಂದಲಗಳಲ್ಲಿ ಬೀಳುವರು ಮತ್ತು ಪ್ರವಾದನಾ ವಾತುಗಳು ಅಣಿಗೊಂಡಿರುವುದನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗುವರು, ಅರಸನಾದ ಮೆಸ್ಸೀಯನನ್ನು, ರೋಮಿನ ಅರಸನೊಂದಿಗೆ ಮಿಶ್ರಮಾಡಿಕೊಳ್ಳುವ ಗೊಂದಲ ಮುಂತಾದವುಗಳಿಗೆ ಒಳಗಾಗುವರು. ಆದುದರಿಂದ ನಾವು ಈ ಪರಿಚ್ಛೇಧವನ್ನು ಈ ಅಧ್ಯಾಯದ ಪ್ರಾರಂಭದಲ್ಲಿ ಅಣಿಗೊಳಿಸಿರುವುದಕ್ಕೆ ಅನುಗುಣವಾಗಿ, ಆವರಣದಲ್ಲಿ ಬರೆಯಲಾಗಿರುವ ಸಂಖ್ಯೆ, ವಾಕ್ಯ, ಉಪವಾಕ್ಯಗಳನ್ನು ಮತ್ತು ವಿವರಣಾ ಅಭಿಪ್ರಾಯಗಳನ್ನು ಗಮನಿಸುವವರಾಗಿ ಬಹಳ ಜಾಗರೂಕತೆಯಿಂದ ಓದಿಕೊಳ್ಳಬೇಕೆಂಬ ಸಲಹೆಯನ್ನು ನೀಡುತ್ತೇವೆ.

* * * * * * *

# ಅಧ್ಯಯನ – 4 Study IV

# ಅನ್ಯದೇಶಗಳವರ ಸಮಯ

## The Times of The Gentiles

**ಅನ್ಯಜನಗಳ ಕಾಲ ಯಾವುದು? ಅದರ ಪ್ರಾರಂಭವು; ಅದರ ವಿಸ್ತಾರವು; ಕ್ರಿಶ 1914 ರಲ್ಲಿ ಅದರ ಮುಕ್ತಾಯವು. ಅನುಸರಿಸುವ ಘಟನೆಗಳು, ಮುಂಬರುವ ಘಟನೆಗಳು. ಅಕ್ಷರಶಃವಾದ ಮತ್ತು ಸಾಂಕೇತಿಕವಾದ ಕಾಲಗಳು. ಒಂದು ಅಪೂರ್ವವಾದ ಮಾದರಿ. ಪ್ರಸ್ತುತ ಸೂಚನೆಗಳು. ಅನ್ಯಜನರ ಆಡಳಿತವನ್ನು ತೊಡೆದುಹಾಕುವ ದೇವರ ರಾಜ್ಯವು. ಆದುದರಿಂದ ಅದು ಮುಕ್ತಾಯವಾಗುವ ಮೊದಲು, 1914 ರ ಒಳಗೆ ವ್ಯವಸ್ಥೆ ಮಾಡಲ್ಪಟ್ಟಿದೆ. ಅನ್ಯಜನರ ರಾಜ್ಯಗಳು ಯಾಕೆ ವಿರೋಧಿಸಿದವು? ಹೇಗೆ ಮತ್ತು ಯಾವಾಗ ಎಲ್ಲರೂ ಇದನ್ನು ಅಂತಿಮವಾಗಿ ಸಂತೋಷದಿಂದ ಒಪ್ಪಿಕೊಳ್ಳುವರು. "ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಆ ಆಲಯವನ್ನು ವೈಭವದಿಂದ ತುಂಬಿಸುವೆನು".**

[ಈ ಅಧ್ಯಾಯದಲ್ಲಿ ನಾವು ಪರಿಗಣಿಸಲಿರುವ ಪ್ರಸ್ತಾಪವು 1ನೇ ಸಂಪುಟದ 13ನೇ ಅಧ್ಯಾಯದಲ್ಲಿನ ಪ್ರಸ್ತಾಪಕ್ಕೆ ಬಹಳ ನಿಕಟವಾದ ಸಂಬಂಧವನ್ನು ಹೊಂದಿರುವುದರಿಂದ ಓದುಗರು ಅವನ್ನು ಪುನರಾವಲೋಕಿಸುವುದರಿಂದ ಹೆಚ್ಚಿನ ಸಹಾಯಗಳನ್ನು ಹೊಂದಿಕೊಳ್ಳುತ್ತಾರೆ].

**"ಅನ್ಯದೇಶದವರ ಸಮಯಗಳು ಪೂರೈಸುವತನಕ ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವುದು" (ಲೂಕ. 21:24).**

'ಅನ್ಯದೇಶದವರ ಸಮಯ' ಎಂಬ ಮಾತು ನಮ್ಮ ಕರ್ತನಿಂದಲೇ ಪ್ರಪಂಚದ ಇತಿಹಾಸ ಕಾಲದಲ್ಲಿ ದೇವರ ಸಾಂಕೇತಿಕ ರಾಜ್ಯವನ್ನು, ಇಸ್ರಾಯೇಲ್ಯರ ರಾಜ್ಯವನ್ನು ತೆಗೆದುಹಾಕುವ (ಯೆಹೆಜ್ಕೇಲ 21:25–27) ಮತ್ತು ಅದರ ಪ್ರತಿಸಂಕೇತಿಕವಾದ ದೇವರ ರಾಜ್ಯವನ್ನು ಸ್ಥಾಪಿಸುವ ಮಧ್ಯಾವಧಿಗೆ ಅನ್ವಯಿಸಲ್ಪಟ್ಟಿದೆ ಮತ್ತು ಆ ಕಾಲದಲ್ಲಿ ಕ್ರಿಸ್ತನು ತನ್ನ ಭಕ್ತರಿಂದ ಮಹಿಮೆಯನ್ನು ಮತ್ತು ಆತನನ್ನು ನಂಬುವವರೆಲ್ಲರಿಂದ ಮೆಚ್ಚುಗೆಯನ್ನು ಹೊಂದಿಕೊಳ್ಳುವನು*

ಈ ಮಧ್ಯಾವಧಿಯಲ್ಲಿ, ಈ ಲೋಕದ ಸಾಮ್ರಾಜ್ಯವು ಅನ್ಯಜನಗಳ ಸರಕಾರಗಳಿಂದ ಬಳಕೆಯಾಗುತ್ತಿರುತ್ತದೆ; ಮತ್ತು ದೈಹಿಕ ಹಾಗೂ ಆತ್ಮೀಕವಾದ ಇಸ್ರಾಯೇಲ್ ಈ ಅಧಿಕಾರಕ್ಕೆ ಅಧೀನರಾಗಿರುತ್ತಾರೆ ಮತ್ತು ಅವರ ಅವಧಿಯು ಮುಗಿಯುವವರೆಗೂ ಅಧೀನರಾಗಿರಬೇಕಾಗುತ್ತದೆ. ನಮ್ಮ ದೇವರು ಈ ಸರ್ಕಾರಗಳನ್ನು ಒಪ್ಪಿಕೊಳ್ಳುವುದೂ ಇಲ್ಲ ಅಥವಾ ಮೆಚ್ಚಿಕೊಳ್ಳುವುದೂ ಇಲ್ಲ, ಆದರೆ ಆತನು ಅವರ ಈ ಚಕ್ರಾಧಿಪತ್ಯವನ್ನು ಮಾನ್ಯಮಾಡುತ್ತಾನೆ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ದೇವರು ವಿವೇಕಯುತವಾಗಿ ಈ ಚಕ್ರಾಧಿಪತ್ಯವನ್ನು ಸೂಕ್ತ ಸಮಯದವರೆಗೂ ಮುಂದರವರೆಯಲು ಅನುಮತಿಸಿದ್ದಾನೆ.

ಭೂಮಿಯ ದೊರೆತನವನ್ನು ದೇವರು ಮೂಲದಲ್ಲಿ ಆದಾಮನಿಗೆ ದಯಪಾಲಿಸಿದನು. ಅದನ್ನು ಆದಾಮನು ವಶಪಡಿಸಿಕೊಂಡು ನೀತಿಯಿಂದ ಆಳುವಂತೆ ಆಜ್ಞಾಪಿಸಿದನು (ಆದಿ 1:28). ಆದರೆ ಆದಾಮನು ಇದರಲ್ಲಿ ಸೋತುಹೋದನು. ಈ ಚಕ್ರಾಧಿಪತ್ಯವನ್ನು ಪಾಪವು ಮುಟ್ಟುಗೋಲಾಗಿಸಿಕೊಂಡು ಆತನಿಂದ ವಶಪಡಿಸಿಕೊಂಡಿತು. ನಂತರದಲ್ಲಿ ದೇವದೂತರುಗಳಿಗೆ ಅದನ್ನು ನಿಯಂತ್ರಿಸುವ ಅನುಮತಿ ದೊರೆಯಿತು. ಆದರೆ ಪತನಗೊಂಡಿದ್ದ ಆ ಜನಾಂಗವನ್ನು ಮೇಲೆತ್ತುವ ಬದಲು ಅವರಲ್ಲಿ ಕೆಲವರು ತಮ್ಮ ತಕ್ಕ ಸ್ಥಾನವನ್ನು ಬಿಟ್ಟು, ಪಾಪಕ್ಕೆ ಒಳಗಾದರು. ಜಲಪ್ರಳಯದ ನಂತರ, ದೇವರು ಪಾಪಿಗಳಿಗೆ ಅಗತ್ಯವಾದ ಸಹಾಯಗಳನ್ನು ನೀಡುವ, ಸಾಯಲಿರುವ ಜನಾಂಗವನ್ನು ಉದ್ಧಾರಮಾಡುವ, ಅವರೊಳಗಿಂದ ಒಬ್ಬ ವಿಮೋಚಕನನ್ನು, ಆಳುವಾತನನ್ನು ಮತ್ತು ಬೋಧಕನನ್ನು ಎಬ್ಬಿಸುವ ತನ್ನ ಉದ್ದೇಶವನ್ನು ಅಬ್ರಹಾಮನಿಗೆ ಪ್ರಕಟಿಸುವವನಾಗಿ "ನಿನ್ನ ಜನಾಂಗದ ಮೂಲಕ ಈ ಲೋಕದ ಎಲ್ಲಾ ಕುಟುಂಬಗಳೂ ಆಶೀರ್ವಾದ ಹೊಂದಿಕೊಳ್ಳುವರು" ಎಂದು ಪ್ರಕಟಿಸಿದನು.

ಇದು ಈ ಪ್ರಪಂಚದ ಮೇಲೆ ರಾಷ್ಟ್ರೀಯ, ವಿಶ್ವ ಚಕ್ರಾಧಿಪತ್ಯದ ಬಹಳ ಹಿಂದಿನ ಸಲಹೆಯಾಗಿದೆ. ಮತ್ತು ದೇವರಿಂದ ಬರುವ ಈ ಸಲಹೆಯು, ವಿಶೇಷ ಔಚಿತ್ಯವೆಂದೂ. ಈ ಆಡಳಿತಗಾರನ ಎಲ್ಲರ ಮೇಲಣ ವಿಶೇಷ ಶ್ರೇಷ್ಠತೆಯಾಗಿದೆ ಎಂದೂ ಅಭಿಪ್ರಾಯ ಪಡಲಾಗುತ್ತದೆ ಮತ್ತು ಅಂಥಾಃ ಆಡಳಿತಗಾರನ ಪ್ರಜೆಯಾಗಿರುವುದು ಹೆಚ್ಚಿನ ಭಾಗ್ಯವಾಗಿದೆ. ಅಬ್ರಹಾಮನಿಗೆ ಮಾಡಿದ ಈ ವಾಗ್ದಾನವು ಆತನ ಪೀಳಿಗೆಯವರ, ಇಸ್ರಾಯೇಲ್ಯರ ಹೃದಯ ಮತ್ತು ಮನಸ್ಸುಗಳನ್ನು ತುಂಬಿದೆ ಮತ್ತು ಅವರ ಸಂಬಂಧಿಗಳಾದ ಮೋವಾಬ್ಯರಿಗೂ, ಏದೋಮ್ಯರಿಗೂ ಚಿರಪರಿಚಿತವಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅಂಥಾಃ ರಾಷ್ಟ್ರೀಯ ನಿರೀಕ್ಷೆಯು ಇತರೆ ರಾಷ್ಟ್ರಗಳಿಗೆ ತಿಳಿದು ಬಂತು ಎಂಬುದು

* ಕಟ್ಟುನಿಟ್ಟಾಗಿ ಹೇಳುವುದಾದರೆ, ಅನ್ಯಜನಗಳ ಸಮಯವು ದೇವರು ಈ ಲೋಕದ ಚಕ್ರಾಧಿಪತ್ಯವನ್ನು ಯೆಹೂದ್ಯೇತರ ಜನಾಂಗದವರಿಗೆ ಗುತ್ತಿಗೆಯಾಗಿ ಕೊಟ್ಟ ಕಾಲವಾಗಿದೆ.

ಒಂದು ಸಾಧ್ಯತೆಯಾಗಿದೆ. ಮತ್ತು ಅದು ತಿಳಿದಿದ್ದರೆ ಹೆಮ್ಮೆಯು ಅವರ ಮನಸ್ಸಿನಲ್ಲಿ ತಾವು ಮಹಾ ಜನಾಂಗವಾಗಬೇಕೆಂಬ, ವಿಶ್ವ ಚಕ್ರಾಧಿಪತ್ಯವನ್ನು ಹೊಂದಿಕೊಳ್ಳಬೇಕೆಂಬ, ಮತ್ತು ಎಲ್ಲಾ ರೀತಿಯಲ್ಲಿಯೂ ಆಳಲು, ಬೋಧಿಸಲು ಯುಕ್ತರಾಗಿರಬೇಕು ಮತ್ತು ಆ ರೀತಿಯಲ್ಲಿ ಅಬ್ರಹಾಮನ ಯಾವುದೇ ಪೀಳಿಗೆಯವರಂತೆ ಜನಾಂಗವನ್ನು ಆಶೀರ್ವದಿಸಬೇಕೆಂಬ ಆಶೆಯನ್ನು ಅವರಲ್ಲಿ ಹುಟ್ಟಿಹಾಕುತ್ತದೆ ಎನ್ನಲು ಸಂಶಯವೇ ಇಲ್ಲ.

ವಿಶ್ವ ಚಕ್ರಾಧಿಪತ್ಯವನ್ನು ಹೊಂದಿಕೊಳ್ಳಬೇಕೆಂಬ ಇಸ್ರಾಯೇಲ್ಯರ ನಿರೀಕ್ಷೆಯು, ಆ ರೀತಿಯಾಗಬೇಕೆಂಬ ರಾಷ್ಟ್ರಗಳ ಆಯ್ಕೆಯಾಗಿರದೆ, ದೇವರ ಆಯ್ಕೆಯು ಮತ್ತು ಬಲವು ಅವರಿಗೆ ಅನುಗ್ರಹವಾಗಿ ಪ್ರಕಟವಾಯಿತಲ್ಲದೆ ಇತರೆ ರಾಷ್ಟ್ರಗಳಿಗೂ ಹರಡಿದಂತೆ ತೋರಿಬರುತ್ತದೆ. ಈ ಎಲ್ಲಾ ಘಟನೆಗಳಲ್ಲಿಯೂ ಈ ಅನ್ಯ ರಾಜರುಗಳು ಮತ್ತು ಜನರು ತಮ್ಮ ಚಕ್ರಾಧಿಪತ್ಯವು ತಾವು ಆರಾಧಿಸುವ ದೇವರ ಕೃಪಾವರವಾಗಿದೆ ಎಂಬುದಾಗಿ ಒಪ್ಪಿಕೊಂಡಿದ್ದರು ಎಂದು ನಾವು ಕಾಣುತ್ತೇವೆ. ಇದೇ ಆಲೋಚನೆಗೆ ಸಣ್ಣಪುಟ್ಟ ದೊರೆಗಳು, ಅರಸರುಗಳು, ಮತ್ತೂ ಬಹಳಷ್ಟು ಶಕ್ತಿಶಾಲಿ ರಾಜರುಗಳು, ಚಕ್ರವರ್ತಿಗಳು ಇನ್ನೂ ಅಂಟಿಕೊಂಡಿದ್ದಾರೆ. ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಎಷ್ಟೇ ಬಲಹೀನರಾಗಿದ್ದರೂ ಪರವಾಗಿಲ್ಲ, ಎಷ್ಟೇ ದುರಾಚಾರಿಗಳೂ ಮತ್ತು ತಮ್ಮನ್ನು ತಾವು ಆಳಲಾಗದವರೂ ಆಗಿದ್ದರೂ ಪರವಾಗಿಲ್ಲ, ಅವರು ದೇವರು ತಮ್ಮನ್ನು ತಮ್ಮ ಕುಟುಂಬವನ್ನು ಈ ಇಡೀ ಲೋಕವನ್ನೇ ಆಳಲು ಮತ್ತು ಆಶೀರ್ವದಿಸಲು(?) ವಿಶೇಷವಾಗಿ ಆಯ್ಕೆಮಾಡಿಕೊಂಡಿದ್ದಾನೆ ಎಂಬ ಬಹುಮಟ್ಟಿನ ಮೂರ್ಖ ಮಟ್ಟದ ಆಲೋಚನೆಯನ್ನು ಹೊಂದಿದ್ದರು. ಈ ವಿಚಾರಸರಣಿಯನ್ನು ಅನೇಕ ಮಂದಿ ಜನರು ಒಪ್ಪಿಕೊಂಡಿದ್ದರು. ಅವರ ಬಿರುದು, ವಂಶವರ್ಣನೆಗಳಲ್ಲಿ, ಪದಕ. ನಾಣ್ಯ ಮತ್ತು ಕಾಗದಗಳಲ್ಲಿ ದೇವರ "ದಯೆಯಿಂದ ________________ ಎಂಬ ಅರಸ" ಎಂಬುದಾಗಿ ಬರೆಸುತ್ತಿದ್ದರು.

ಈ ರೀತಿಯಲ್ಲಿ ಇಸ್ರಾಯೇಲ್ಯರು ಈ ಪ್ರಪಂಚದ ಮೇಲೆ ವಾಗ್ದತ್ತವಾದ ಚಕ್ರಾಧಿಪತ್ಯಕ್ಕಾಗಿ ನಿರೀಕ್ಷಿಸುತ್ತಾ ಕಾಯುತ್ತಿದ್ದು ಕೆಲವೊಮ್ಮೆ ವಿಶೇಷವಾಗಿ ಅರಸರಾದ ದಾವೀದ ಮತ್ತು ಸೊಲೊಮೋನನ ಆಳ್ವಿಕೆಯ ಕಾಲದಲ್ಲಿ ಅದರ ನೆರವೇರಿಕೆ ತಮ್ಮ ಕೈಗೆಟುಕಲಿದೆ ಎಂಬ ಭ್ರಮೆಯಲ್ಲಿದ್ದರು, ವಿಶ್ವ ಚಕ್ರಾಧಿಪತ್ಯದ ಬಯಕೆಯು ಸಾಮಾನ್ಯವಾಗಿ ಇತರೆ ರಾಷ್ಟ್ರಗಳಲ್ಲಿಯೂ ಇರುವುದಾಗಿತ್ತು. ವಾಗ್ದಾನದ ನಿಜವಾದ ಬೀಜವು ಒಂದು ಚಕ್ರಾಧಿಪತ್ಯವನ್ನು ವಹಿಸಿಕೊಳ್ಳುವವರೆಗೆ ದೇವರು ಇಸ್ರಾಯೇಲ್ಯರಿಂದ ಕಿರೀಟವನ್ನು ಇನ್ನೇನು ತೆಗೆದುಬಿಡಬೇಕೆಂದಿರುವಾಗ, ಆತನು ಅನ್ಯರಾಷ್ಟ್ರಗಳು ಅದನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲಿ, ಲೋಕವನ್ನು ಆಳುವ ಪ್ರಯೋಗದ ಪ್ರಯತ್ನಮಾಡಲಿ, ಆ ರೀತಿಯಲ್ಲಿ ಈ ಲೋಕದವರು ಸಹ ಪ್ರಸ್ತುತ ಪಾಪಭರಿತ ಪರಿಸ್ಥಿತಿಯಲ್ಲಿ ಸ್ವಯಂ ಆಳ್ವಿಕೆಮಾಡುವುದರ ತಮ್ಮ ಸ್ವಂತ ಪ್ರಯತ್ನಗಳ ನಿರರ್ಥಕತೆಯು ಅನುಭವವಾಡಲಿ ಎಂದು ನಿರ್ಧರಿಸಿದನು. ಆತನು ಆದಾಮನಿಂದ ವಶಪಡಿಸಿಕೊಂಡ ಚಕ್ರಾಧಿಪತ್ಯವನ್ನು ದೇವದೂತರುಗಳಿಗೆ ಅವರು ಆಳುವ ಮತ್ತು ಲೋಕವನ್ನು ಆಶೀರ್ವದಿಸುವ ಅಸಮರ್ಥತೆಯನ್ನು ನಿರೂಪಿಸಲು ವಹಿಸಿಕೊಟ್ಟಂತೆಯೇ ಆತನು ಈಗ ಆ ಸಾಮ್ರಾಜ್ಯವನ್ನು ಅನ್ಯಜನಗಳ ವಶಕ್ಕೆ ಅವರು ಆತನ ಸಹಾಯವಿಲ್ಲದೆ ತಮ್ಮ ವಿವಿಧ ಕ್ರಮಗಳನ್ನು ಪ್ರಯತ್ನಿಸುವಂತೆ ಒಪ್ಪಿಸಿಕೊಡುತ್ತಾನೆ ಮತ್ತು ಅದರ ಹಕ್ಕುದಾರನಾದ ದೇವರ ಅಭಿಷಕ್ತನು ಬಂದು ಆ ಚಕ್ರಾಧಿಪತ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡು ಅದರ ಉದ್ದೇಶಗಳನ್ನೆಲ್ಲಾ ನೆರವೇರಿಸುವವರೆಗಿನ ಮಧ್ಯದ ಸಮಯವನ್ನು ತುಂಬಿಸುವಂತೆ ಈ ವಿವಿಧ ಪ್ರಯೋಗಗಳನ್ನು ಅನೇಕ ಮೌಲ್ಯವುಳ್ಳ ಅವಶ್ಯಕ ಪಾಠಗಳನ್ನಾಗಿ ದೇವರು ಅನುಮತಿಸುತ್ತಾನೆ.

ಶಾರೀರಿಕ ಇಸ್ರಾಯೇಲ್ಯರು ಆತ್ಮೀಕ ಇಸ್ರಾಯೇಲ್ಯರ ಸುವಾರ್ತಾ ಸಭೆಯ ನಮೂನೆಯಾಗಿದ್ದು ಅದನ್ನು ಹೆಚ್ಚಾದ ಅರ್ಥದಲ್ಲಿ : ರಾಜವಂಶಸ್ಥ ಯಾಜಕತ್ವವುಳ್ಳ ಪವಿತ್ರ ಜನಾಂಗವೆಂದು ಕರೆಯಲಾಗಿದೆ (1 ಪೇತ್ರ 2:9) ಮತ್ತು ಇದೂ ತಕ್ಕ ಸಮಯದಲ್ಲಿ ಕೆಲವು ವಿಷಯಗಳಲ್ಲಿ ಕ್ರಿಸ್ತನ ರಾಜ್ಯದ ನಮೂನೆಯಾಗಿರುವಂತೆ ಅವರ ರಾಜ್ಯವು ಎಲ್ಲಾ ಜನಾಂಗಗಳನ್ನೂ ಆಳುವುದೂ, ಆಶೀರ್ವದಿಸುವುದೂ ಆಗಿದೆ. ಇದರ ಪರಿಣಾಮವಾಗಿ ಈ ಲೋಕದ ಚಕ್ರಾಧಿಪತ್ಯವನ್ನು ಅನ್ಯಜನಗಳಿಗೆ ವಹಿಸಿಕೊಡುವಾಗ, ಆತನು ಈ ನಮೂನೆಯ ರಾಜ್ಯವು ಇನ್ನು ಮುಂದೆ ಮಾನ್ಯತೆಯನ್ನು ಹೊಂದಿಕೊಳ್ಳದಂತೆ ಅದರ ಸಾಂಕೇತಿಕ ಕಿರೀಟವನ್ನು ತೆಗೆಯುವುದು ಅಗತ್ಯವಾಗಿದೆ. ಆತನು ಇದನ್ನು ಅವರು ಭ್ರಷ್ಟರೂ, ವ್ಯರ್ಥರಾದವರೂ, ವಿಗ್ರಹಾರಾಧಕರೂ ಆಗಿದ್ದು, ಅವರ ರಾಷ್ಟ್ರೀಯ ವಿಶೇಷತೆಯ ಅನುಪಾತದಲ್ಲಿ ಈ ವಿಶ್ವಚಕ್ರಾಧಿಪತ್ಯದ ಏಳಿಗೆ ಮಾಡಲು ಯೋಗ್ಯರಲ್ಲ ಎಂದು ಸಾಬೀತುಪಡಿಸಿದ್ದಾನೆ. ಇದು ಅರಸನಾದ ಚಿದ್ಕೀಯನ ಕಾಲದಲ್ಲಿ ಆಗಿತ್ತು. ದೈವಿಕ ತೀರ್ಪು ಪ್ರವಾದನೆಯ ಈ ಮಾತುಗಳಲ್ಲಿ ವ್ಯಕ್ತವಾಗಿದೆ– "ಕರ್ತನಾದ ಯೆಹೋವನು ಇಂತೆನ್ನುತ್ತಾನೆ – ಮುಂಡಾಸವನ್ನು ಕಿತ್ತು ಬಿಡು! ಕಿರೀಟವನ್ನು ಎತ್ತಿಹಾಕು! ಎಲ್ಲವೂ ವ್ಯತ್ಯಾಸವಾಗಲಿ; ಕೆಳಗಿನದನ್ನು ಮೇಲೆ ಮಾಡು, ಮೇಲಿನದನ್ನು ಕೆಳಗೆ ಮಾಡು; ನಾನು ದೊಬ್ಬಿ ಬಿಡುವೆನು, ದೊಬ್ಬಿ ಬಿಡುವೆನು, ದೊಬ್ಬಿ ಬಿಡುವೆನು; (ರಾಜ್ಯಕ್ಕೆ) ಬಾಧ್ಯರು ಬರುವವರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು" – ಯೆಹೆಜ್ಕೇಲ 21: 24–27.

ಈ ರೀತಿಯಲ್ಲಿ ಕಿರೀಟವು ಅಥವಾ ಚಕ್ರಾಧಿಪತ್ಯಗಳು ಉರುಳುವುದು ನೆರವೇರಿವೆ. ಮೊದಲಿಗೆ ಈ ರೀತಿಯಾಗಿ ಬಾಬೇಲಿನಲ್ಲಿ ಆಯಿತು, ನಂತರ ಮೇದ್ಯ ಪಾರಸೀಯ, ನಂತರ ಗ್ರೀಸ್, ತದನಂತರ ರೋಮ್ ರಾಜ್ಯಗಳು ರೂಪಿತಗೊಂಡವು. ಈ ಸಾಮ್ರಾಜ್ಯಗಳ ಗುಣಲಕ್ಷಣವು ಇತಿಹಾಸದಲ್ಲಿ ದಾಖಲಾಗಿರುವಂತೆಯೇ ಪ್ರವಾದಿಗಳ ವಿವರಣೆಗಳೊಡನೆ ಯಥಾವತ್ತಾಗಿ ಹೊಂದಿಕೆ ಯಾಗುವುದನ್ನು ನಾವು ನೆಬೂಕದ್ನೆಚ್ಚರನು ಕಂಡ ಮಹಾಪ್ರತಿಮೆಯ ದರ್ಶನ ಮತ್ತು ದಾನಿಯೇಲನು ಕಂಡ ನಾಲ್ಕು ಮೃಗಗಳ ದರ್ಶನ ಮುಂತಾದವುಗಳಲ್ಲಿ ಕಾಣಬಹುದು. ಈ ರೀತಿಯಲ್ಲಿ ಕ್ರಿಸ್ತನು ಇಸ್ರಾಯೇಲ್ ಸಿಂಹಾಸನದ ಮತ್ತು ಸಮಗ್ರ ಭೂಲೋಕದ ಬಾಧ್ಯಸ್ಥನಾದ ಅಧಿಕಾರಿಯು. ತನ್ನ ಅಮೂಲ್ಯ ರಕ್ತದ ಮೂಲಕ ಕೊಂಡುಕೊಂಡಿರುವುದನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವವರೆಗೂ ಇಸ್ರಾಯೇಲ್ ಸಾಮ್ರಾಜ್ಯಕ್ಕೆ ತುಳಿತಕ್ಕೊಳಗಾಗುವ ಸ್ಥಿತಿಯು ಮುಂದುವರೆಯುವುದು. ನಾವು ಕಂಡುಕೊಂಡಂತೆ, ಆತನ, ಈ ಲೋಕದಲ್ಲಿನ ಐದನೆಯ ವಿಶ್ವ ಸಾಮ್ರಾಜ್ಯವಾಗಿದ್ದು, ಆಕಾಶದ ಕೆಳಗಣ ದೇವರ ರಾಜ್ಯವಾಗಿದೆ. ಆದರೆ ಭಿನ್ನವಾದ ಹಿಂದಿನ ನಾಲ್ಕು ಸಾಮ್ರಾಜ್ಯಗಳು ಸೂಕ್ತ ಸಮಯದವರೆಗೆ ಅನುಮತಿಸಲ್ಪಟ್ಟಿತ್ತು ಮತ್ತು ಒಪ್ಪಿಗಾಪೂರ್ವಕವಲ್ಲದಿದ್ದರೂ ಮಾನ್ಯಮಾಡಲ್ಪಟ್ಟಿತ್ತು. ಆದರೆ ಈ ರಾಜ್ಯವು ಒಪ್ಪಿಗೆ ಪಡೆದಿದ್ದು, ದೇವರಿಂದಲೇ ಈ ಲೋಕದ ಮೇಲೆ ಆತನ ಪ್ರತಿನಿಧಿಯಿಂದ ಸ್ಥಾಪಿತವಾಗಿದೆ. ಅದು ದೇವರ ರಾಜ್ಯವಾಗಿದೆ, ಯೆಹೋವನು ಅಭಿಷೇಕಿಸಿದವನ ರಾಜ್ಯವಾಗಿದೆ. ಅದು ಕ್ರಮೇಣವಾಗಿ ಸುವಾರ್ತಾಯುಗವು ಮುಕ್ತಾಯವಾಗುವ ಮಹಾ ಸಂಕಟದ ಸಮಯದಲ್ಲಿ ಸ್ಥಾಪಿತವಾಗಲಿದೆ. ಅದರ ಮಧ್ಯದಲ್ಲಿ ಪ್ರಸ್ತುತ ಸಾಮ್ರಾಜ್ಯಗಳು ಮಹಾ ಗೊಂದಲದಲ್ಲಿ ಸಾಗುತ್ತಾ ಕಡೆಗೆ ಸಂಪೂರ್ಣವಾಗಿ ನಾಶವಾಗುತ್ತದೆ.

ಈ ಅಧ್ಯಾಯದಲ್ಲಿ ನಾವು ಅನ್ಯದೇಶಗಳವರ ಪೂರ್ಣ ಅಂತ್ಯವು ಅಂದರೆ ಅವರ ಸಾಮ್ರಾಜ್ಯದ ಗೇಣಿಯ ಅವಧಿಯ ಅಂತ್ಯವು ಕ್ರಿ.ಶ 1914ರಲ್ಲಿ ತಲುಪುತ್ತದೆ. ಆ ದಿನಾಂಕವು ಅಸಮರ್ಪಕ ಮಾನವನ ಆಳ್ವಿಕೆಯು ಬೇರ್ಪಡುವುದನ್ನು ಕಂಡುಕೊಳ್ಳುತ್ತದೆ. ಮತ್ತು ಇದನ್ನು ಪರಿಶುದ್ಧಬರಹಗಳಲ್ಲಿ ಸ್ಥಾಪಿತವಾದ ಸತ್ಯಸಂಗತಿ ಎಂದು ಗಮನಿಸುವುದಾದಲ್ಲಿ ಅದು ರುಜುವಾತು ಪಡಿಸುವುದೇನಂದರೆ:

ಮೊದಲನೆಯದಾಗಿ, ಆ ದಿನಾಂಕದಲ್ಲಿ ನಮ್ಮ ಕರ್ತನು ಕಲಿಸಿಕೊಟ್ಟ ಪ್ರಾರ್ಥನೆಯಲ್ಲಿ ನಾವು 'ನಿನ್ನ ರಾಜ್ಯವು ಬರಲಿ' ಎಂದು ನಾವು ಪ್ರಾರ್ಥಿಸುವ ದೇವರ ರಾಜ್ಯವು ತನ್ನ ನಿಯಂತ್ರಣವನ್ನು ಪಡೆದುಕೊಳ್ಳಲು ಪ್ರಾರಂಭಿಸುತ್ತದೆ ಮತ್ತು ಸ್ವಲ್ಪಕಾಲದಲ್ಲಿಯೇ ಈ ಲೋಕದ ಪ್ರಸ್ತುತ ಸಂಸ್ಥೆಗಳ ಅವಶೇಷಗಳ ಮೇಲೆ ಸ್ಥಾಪಿತಗೊಳ್ಳುತ್ತದೆ.

ಎರಡನೆಯದಾಗಿ, ಈ ಸಾಮ್ರಾಜ್ಯವನ್ನು ಈ ರೀತಿಯಾಗಿ ತೆಗೆದುಕೊಳ್ಳುವ ಅಧಿಕಾರ ಯಾರಿಗಿದೆಯೋ ಆತನು ಭೂಲೋಕದ ಹೊಸ ಅರಸನಾಗಿ ಕಾಣಿಸಿಕೊಳ್ಳುತ್ತಾನೆ. ಅದು ಮಾತ್ರವಲ್ಲ, ಆತನು ಆ ದಿನಾಂಕದ ಗಣನೀಯ ಅವಧಿಯ ಮುನ್ನವೇ ಹಾಜರಾಗಿರುತ್ತಾನೆ. ಯಾಕೆಂದರೆ, ಈ ಅನ್ಯರ ಸಾಮ್ರಾಜ್ಯಗಳ ಉರುಳಿಸುವಿಕೆಯು ನೇರವಾಗಿ ಆತನು ಅವುಗಳನ್ನು ಕುಂಬಾರನ ಮಡಿಕೆಯಂತೆ ಚೂರುಚೂರಾಗಿ ಮಾಡುವುದರಿಂದ (ಕೀರ್ತನೆ 2:9; ಪ್ರಕಟನೆ 2:27) ಮತ್ತು ಅವುಗಳ ಸ್ಥಾನದಲ್ಲಿ ತನ್ನ ಸ್ವಂತ ನೀತಿಯುತ ಸರ್ಕಾರವನ್ನು ಸ್ಥಾಪಿಸುವುದರಿಂದ ಉಂಟಾಗುತ್ತದೆ.

ಮೂರನೆಯದಾಗಿ, ಈ ರೀತಿಯಲ್ಲಿ ಉರುಳಿಸುವ ಅಂತ್ಯದ ಸ್ವಲ್ಪ ಸಮಯದ ಮುಂಚೆ ದೇವರಿಂದ ಮಾನ್ಯತೆಪಡೆದ ಸಭೆಯ ಕೊನೆಯ ಸದಸ್ಯನು, ರಾಜವಂಶಸ್ಥ ಯಾಜಕನು, 'ಕ್ರಿಸ್ತನ ದೇಹ ಸದಸ್ಯವಾಗಿರುವಾತನು ಆತನ ಶಿರಸ್ಸಿನಿಂದ ಮಹಿಮೆಹೊಂದಿಕೊಳ್ಳುವನು. ಯಾಕೆಂದರೆ, ಪ್ರತಿಯೊಬ್ಬ ಸದಸ್ಯನೂ ಕ್ರಿಸ್ತನೊಂದಿಗೆ ಆ ರಾಜ್ಯದಲ್ಲಿ ಆತನ ಸಹ ಬಾಧ್ಯಸ್ತನಾಗಿ ಆಳಬೇಕು. ಪ್ರತಿಯೊಬ್ಬ ಸದಸ್ಯನಿಲ್ಲದೇ ಅದು ಪೂರ್ಣವಾಗಿ ಸ್ಥಾಪಿತಗೊಳ್ಳುವುದಿಲ್ಲ.

ನಾಲ್ಕನೆಯದಾಗಿ, ಆ ಕಾಲದಿಂದ ಮುಂದಿನ ಕಾಲಕ್ಕೆ ಯೆರೂಸಲೇಮನ್ನು ಅನ್ಯಜನಗಳು ತುಳಿದಾಡುವ ಸ್ಥಳವಾಗಿರುವುದಿಲ್ಲ. ಆದರೆ ಅದು ದೈವಿಕ ಅವಕೃಪೆಯೆಂಬ ಧೂಳಿನಿಂದ ಮೇಲೇಳುವುದು, ಆದರಣೆ ಹೊಂದುವುದು; ಯಾಕೆಂದರೆ ಅನ್ಯಜನರ ಕಾಲವು ಸಂಪೂರ್ಣವಾಗಿ ಮುಗಿದುಹೋಗಿದೆ.

ಐದನೆಯದಾಗಿ, ಆ ದಿನಾಂಕದೊಳಗೆ ಅಥವ ಇನ್ನೂ ಬೇಗನೇ ಇಸ್ರಾಯೇಲ್ಯರ ಕುರುಡುತನವು ಮುಗಿದುಹೋಗಲು ಪ್ರಾರಂಭವಾಗುತ್ತದೆ. ಯಾಕೆಂದರೆ "ಒಂದು ಪಾಲಿನ ಅವರ ಮೊಂಡುತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವುದು" (ರೋಮಾ. 11:25) ಅಥವಾ ಮತ್ತೊಂದು ಮಾತುಗಳಲ್ಲಿ ಕ್ರಿಸ್ತನ ದೇಹದ ಅಂಗಗಳಾಗಲಿರುವವರು ಅಥವಾ ಆತನ ಮದಲಗಿತ್ತಿಯಾಗಲಿರುವವರು ಅನ್ಯಜನಗಳಲ್ಲಿನ ಪೂರ್ಣ ಸಂಖ್ಯೆಯಲ್ಲಿ ಸದಸ್ಯರಾಗಿ ಆಯ್ಕೆಗೊಳ್ಳುತ್ತಾರೆ.

ಆರನೆಯದಾಗಿ, "ಜನಾಂಗವು ಉಂಟಾದಂದಿನಿಂದ ಅಂದಿನವರೆಗೂ ಸಂಭವಿಸದ ಸಂಕಟವು ಸಂಭವಿಸುವುದು ಮತ್ತು ಲೋಕಾದಾದ್ಯಂತ ಅರಾಜಕತೆಯ ಆಡಳಿತವು

ಪರಾಕಾಷ್ಠೆಯನ್ನು ತಲುಪುವುದು" ಮತ್ತು ಆಗ ಜನರು ಸ್ಥಬ್ಧರಾಗಲು ಯೆಹೋವನೇ ದೇವರೆಂದೂ ಹಾಗೂ ಆತನು ಭೂಲೋಕದಲ್ಲಿ ಮಹೋನ್ನತ ಸ್ಥಿತಿಗೆ ಏರಿಸಲ್ಪಡುತ್ತಾನೆ ಎಂಬುದನ್ನೂ ಕಲಿತುಕೊಳ್ಳುತ್ತಾರೆ (ಕೀರ್ತನೆ 46:10). ಸಮುದ್ರದ ಭೋರ್ಗರೆಯುವ ಅಲೆಗಳು, ಕರಗುವ ಭೂಮಿ, ಬೀಳುವ ಪರ್ವತಗಳು ಮತ್ತು ಉರಿಯುತ್ತಿರುವ ಆಕಾಶಮಂಡಲ ಎಂಬ ಸಾಂಕೇತಿಕ ಭಾಷೆಯಲ್ಲಿ ಹೇಳಲ್ಪಟ್ಟ ಸಂಗತಿಗಳ ಪರಿಸ್ಥಿತಿಯು ಆಗ ದಾಟಿ ಹೋಗುವುದು ಮತ್ತು "ನೂತನ ಆಕಾಶ" ಮತ್ತು "ನೂತನ ಭೂಮಂಡಲವು" ಅದರ ಸಮಾಧಾನಕರ ಆಶೀರ್ವಾದಗಳೊಂದಿಗೆ ಪ್ರಾರಂಭವಾಗುವದನ್ನು ಸಂಕಷ್ಟಕ್ಕೆ ಎಸೆಯಲ್ಪಟ್ಟ ಮಾನವ ಕುಲವು ಗುರುತಿಸುವುದು. ಆದರೆ ದೇವರಿಂದ ಅಭಿಷಕ್ತನಾದವನು ಮತ್ತು ಆತನು ಯುಕ್ತನಾದ ನೀತಿವಂತಿಕೆಯ ಹಕ್ಕುದಾರನು ಮೊದಲಿಗೆ ಸಂಕಷ್ಟ ಸಮಯವನ್ನು ಎದುರಿಸಿದ ದೇವರ ಮಕ್ಕಳ ಸಮೂಹದವರಿಂದಲೂ, ನಂತರದಲ್ಲಿ ಅದು ಮುಕ್ತಾಯಗೊಳ್ಳುವ ಸಮಯದಲ್ಲಿ ಶಾರೀರಿಕ ಇಸ್ರಾಯೇಲ್ಯರಿಂದ ಹಾಗೂ ಅಂತಿಮವಾಗಿ ಜನಸಾಮಾನ್ಯರೆಲ್ಲರಿಂದಲೂ ಗುರುತಿಸಲ್ಪಡುವನು. ಈ ವರ್ಗವನ್ನು ಯುಗಗಳ ನಕ್ಷೆಯಲ್ಲಿ (Chart of Ages, Vol 1, 235 to 239ನಲ್ಲಿ) 'm' ಮತ್ತು 't' ಯಾಗಿ ಗುರುತಿಸಲ್ಪಟ್ಟಿದೆ.

ಏಳನೆಯದಾಗಿ, ಆ ದಿನಾಂಕದ ಮುನ್ನ ದೇವರ ರಾಜ್ಯವು, ಅಧಿಕಾರದಲ್ಲಿ ರಚಿಸಲ್ಪಟ್ಟದ್ದಾಗಿ ಈ ಲೋಕದಲ್ಲಿರುತ್ತದೆ. ನಂತರದಲ್ಲಿ ಅದು ಅನ್ಯಜನರ ಪ್ರತಿಮೆಯನ್ನು ಬಡಿದು ನುಚ್ಚುನೂರಾಗಿಸುತ್ತದೆ (ದಾನಿಯೇಲ 2:34) ಮತ್ತು ಈ ರಾಜರುಗಳ ಶಕ್ತಿಯನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ. ಅದರ ಸ್ವಂತ ಶಕ್ತಿ ಮತ್ತು ಪ್ರಭುತ್ವವು ತ್ವರಿತಗತಿಯಲ್ಲಿ ಅದರ ವಿವಿಧ ಪ್ರಭಾವಗಳಿಂದ ಮತ್ತು ಸಂಸ್ಥೆಗಳಿಂದ ಸ್ಥಾಪಿತವಾಗಿರುವ ಕಬ್ಬಿಣ ಮತ್ತು ಜೇಡಿಮಣ್ಣಿನ ಸಾಮಾಜಿಕ ಮತ್ತು ಕ್ರೈಸ್ತ ಮಂದಿರಗಳ ವ್ಯವಸ್ಥೆಯ ಅಧಿಕಾರವನ್ನು ಪುಡಿಮಾಡಿ ಚದುರಿಸಿಬಿಡುತ್ತದೆ.

### ಅನ್ಯಜನಗಳ ಸಮಯದ ಆರಂಭ, ಕ್ರಿ. ಪೂ. 606
### The Beginning of Gentile Times, 606 B.C.

ಅನ್ಯಜನಗಳ "ಆ ಸಮಯದವರೆಗೆ"* ಎಂಬ ನಮ್ಮ ಕರ್ತನ ಮಾತು ನೆರವೇರುತ್ತದೆ ಎಂಬುದು ಅನ್ಯಜನಗಳ ಸಮಯಕ್ಕೆ ನಿಶ್ಚಿತವಾಗಿ ನೇಮಕವಾದ ಮಿತಿ ಇದೆ ಎಂಬ ಅರ್ಥವನ್ನು ನೀಡುತ್ತದೆ; ಯಾಕೆಂದರೆ, ಮಿತಿ ಇಲ್ಲದ, ನಿಶ್ಚಿತವಿಲ್ಲದ ಅವಧಿಯನ್ನು ನೆರವೇರಿತು ಎಂದು ಹೇಳಲಾಗದು. ಹೀಗಾಗಿ ಅನ್ಯಜನಗಳ ಸಮಯಕ್ಕೆ ಒಂದು ಪ್ರಾರಂಭವಿದೆ, ಅದು ನಿಗದಿಪಡಿಸಿದ ಕಾಲದವರೆಗೆ ಮಾತ್ರ ಇರುತ್ತದೆ ಮತ್ತು ನೇಮಕಗೊಂಡ ಸಮಯದಲ್ಲಿ ಅಂತ್ಯಗೊಳ್ಳುತ್ತದೆ.

ಅನ್ಯಜನಗಳ ಸಮಯದ ಪ್ರಾರಂಭವನ್ನು ಪರಿಶುದ್ಧ ಬರಹದಲ್ಲಿ ಸ್ಪಷ್ಟವಾಗಿ ಗೊತ್ತುಮಾಡಬಹುದಾಗಿದೆ. ಆದುದರಿಂದ ಅವರು ನಮಗೆ ಅದರ ವ್ಯಾಪ್ತಿ ಮತ್ತು ನಿಗದಿತ ಸಮಯದ ವಿಸ್ತಾರವನ್ನು ಅಥವಾ ಅನ್ಯಜನಗಳ ಸಾಮ್ರಾಜ್ಯದ ಗುತ್ತಿಗೆಯ ಅವಧಿಯನ್ನು ಒದಗಿಸಿದರೆ ಅದು ಯಾವಾಗ ಮುಕ್ತಾಯಗೊಳ್ಳುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಸತ್ಯವೇದವು ಈ ನಿಗದಿತ ಅವಧಿಯನ್ನು ಒದಗಿಸುತ್ತದೆ, ಅದು ನೆರವೇರಲೇ ಬೇಕಾಗಿದೆ; ಆದರೆ ಅದು ಬರೆಯುವಾಗ ಅಥವಾ ಕಾಲಾವಧಿ ಮುಗಿಯುವವರೆಗೆ ಅಥವಾ ಐತಿಹಾಸಿಕ ಘಟನೆಗಳು ತನ್ನ ಬೆಳಕನ್ನು ಅದರ ಮೇಲೆ ಚೆಲ್ಲದ ಹೊರತು ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ಒದಗಿಸಲ್ಪಟ್ಟಿದೆ; ಆಗಲೂ ಸಹ, ಅದಕ್ಕಾಗಿ ಕಾಯುತ್ತಿರುವವರು ಮತ್ತು ಲೋಕದ ಚಿಂತೆಯಲ್ಲಿ ಮಿತಿಮೀರಿ ಮುಳುಗದೆ ಇರುವವರು ಮಾತ್ರ ಅದನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ಅನ್ಯಜನಗಳ ಕಾಲಾವಧಿ ಕ್ರಿ.ಪೂ. 606 ರಿಂದ ಕ್ರಿ.ಶ. 1914ನ್ನೂ ಸೇರಿಸಿದಂತೆ ಒಟ್ಟು 2520 ವರ್ಷಗಳು ಎಂಬುದಕ್ಕೆ ಸತ್ಯವೇದದ ಸಾಕ್ಷ್ಯವು ಸ್ಪಷ್ಟವಾಗಿದೆ ಮತ್ತು ದೃಢವುಳ್ಳದ್ದಾಗಿದೆ. ಈ ವಿಶ್ವಸಾಮ್ರಾಜ್ಯದಿಂದ ಅನ್ಯಜನಗಳ ಸಾಮ್ರಾಜ್ಯಗಳ ಸರ್ಕಾರದ ಗುತ್ತಿಗೆಯ ಅವಧಿಯು ನಾವೀಗಾಗಲೇ ಕಂಡುಕೊಂಡಂತೆ ನೆಬೂಕದ್ನೆಚ್ಚರನಿಂದ ಆರಂಭವಾಗಿದೆ – ಆತನ ಆಳ್ವಿಕೆ ಪ್ರಾರಂಭವಾದಾಗ ಅಲ್ಲ, ಆದರೆ ಕರ್ತನ ಸಾಂಕೇತಿಕ ರಾಜ್ಯವು ತೀರಿಹೋಗಿ ಸಮಸ್ತ ಲೋಕದ ಆಧಿಪತ್ಯವು ಅನ್ಯಜನಗಳ ಕೈಯಲ್ಲಿ ಉಳುಕೊಂಡ ಮೇಲೆ ಪ್ರಾರಂಭವಾಯಿತು. ಅನ್ಯಜನಗಳ ಸಮಯದ ಪ್ರಾರಂಭದ ದಿನಾಂಕವು ನಿಶ್ಚಯವಾಗಿ ಕರ್ತನ ಸಾಂಕೇತಿಕ ರಾಜ್ಯದ ಮತ್ತು ಅದರ ಕಡೆಯ ಅರಸನಾಗಿದ್ದ ಚಿದ್ಕೀಯನಿಂದ ಕಿರೀಟವನ್ನು ತೆಗೆದು ಬಿಟ್ಟಂದಿನಿಂದ ಗುರುತಿಸಲ್ಪಡುತ್ತದೆ.

ಪ್ರವಾದಿಯ ಮಾತುಗಳಂತೆ (ಯೆಹೆಜ್ಕೇಲ 21:25–27) ಕಿರೀಟವು ಚಿದ್ಕೀಯನಿಂದ ಕಸಿದುಕೊಳ್ಳಲ್ಪಟ್ಟಿತು ಮತ್ತು ಯೆರೂಸಲೇಮ್ ನೆಬೂಕದ್ನೆಚ್ಚರನ ಸೈನ್ಯದಿಂದ ಮುತ್ತಿಗೆ ಹಾಕಲ್ಪಟ್ಟು ನಾಶಹೊಂದಿತು. ಹಾಗೆಯೇ ಅದು ಎಪ್ಪತ್ತು

* ಇಲ್ಲಿ ಸಮಯ ಎಂಬ ಪದವನ್ನು ಗ್ರೀಕಿನ Kairos ಎಂಬ ಪದದಿಂದ ತರ್ಜುಮೆ ಮಾಡಲಾಗಿದೆ. ಅದರ ಅರ್ಥ ನಿಗದಿತ ಸಮಯ. ಇದೇ ಪದವನ್ನು ಮಾರ್ಕ 1:15; 1 ತಿಮೋ. 6:15; ಪ್ರಕಟನೆ 12:14; ಅ.ಕೃ. 3:19; 17:26 ಇವುಗಳಲ್ಲಿಯೂ ಕಾಣಬಹುದಾಗಿದೆ. ಅ.ಕೃ. 1:7ರಲ್ಲಿನ ಸಮಯಗಳು (Seasons) ಎಂಬ ಪದವೂ ಈ ಗ್ರೀಕ್ ಪದದಿಂದಲೇ ಬಂದದ್ದು.

ವರ್ಷಗಳ ಕಾಲ ಅಂದರೆ ಕೋರೇಷನು ಅದನ್ನು ಪುನಃನಿರ್ಮಾಣ ಮಾಡುವ ಮೊದಲನೆಯ ವರ್ಷದವರೆಗೂ (2 ಪೂರ್ವ. 36:21–23) ಉಳಿದುಕೊಂಡಿತು. ನಂತರದಲ್ಲಿ ಅದು ಪುನರ್ ನಿರ್ಮಾಣಗೊಂಡರೂ, ಸೆರೆಯಾದವರು ಹಿಂತಿರುಗಿದರೂ, ಇಸ್ರಾಯೇಲ್ಯರಿಗೆ ಅಂದಿನಿಂದ ಇಂದಿನವರೆಗೆ ಎಂದಿಗೂ ಮತ್ತೊಬ್ಬ ರಾಜನಿರಲಿಲ್ಲ, ಅವರು ತಮ್ಮ ನಾಡಿಗೆ ಪುನಃ ಸ್ಥಾಪನೆಗೊಂಡರೂ ಮತ್ತು ಕೋರೇಷನಿಂದ ವೈಯುಕ್ತಿಕ ಸ್ವಾತಂತ್ರ್ಯವನ್ನು ಹೊಂದಿಕೊಂಡರೂ, ಅವರು ಒಂದು ರಾಷ್ಟ್ರವಾಗಿ ಸತತವಾಗಿ ಪರ್ಷಿಯನ್ನರಿಗೆ, ಗ್ರೀಸಿಯನ್ನರಿಗೆ ಮತ್ತು ರೋಮನ್ನರಿಗೆ ಅಧೀನರಾಗಿಯೇ ಇದ್ದರು. ನಮ್ಮ ಕರ್ತನ ಪ್ರಥಮ ಆಗಮನ ಕಾಲದಲ್ಲಿ ಅವರು ಕೊನೆಯವರ ನೊಗದಡಿ ಜೀವಿಸುತ್ತಿದ್ದರು. ಪಿಲಾತ ಮತ್ತು ಹೆರೋದ ಇವರುಗಳು ಕೈಸರನ ಪ್ರತಿನಿಧಿಗಳಾಗಿದ್ದರು.

ಈ ವಿಚಾರಗಳು ನಮ್ಮ ಮುಂದೆ ಇರುವಾಗ, ನಾವು ಅನ್ಯಜನರ ಸಮಯದ ಪ್ರಾರಂಭದ ದಿನಾಂಕವನ್ನು ಕಂಡುಕೊಳ್ಳಲು ಸಿದ್ಧರಾಗುತ್ತೇವೆ; ಕೋರೆಷನ ಆಳ್ವಿಕೆಯ ಮೊದಲನೆಯ ವರ್ಷವು ಸ್ಪಷ್ಟವಾಗಿ ನಿಗದಿಪಡಿಸುವ ದಿನಾಂಕವಾಗಿದೆ. ಪ್ರಾಪಂಚಿಕ ಹಾಗೂ ಧಾರ್ಮಿಕ ಚರಿತ್ರೆಗಳೆರಡೂ ಟಾಲೆಮಿಯ ಕಟ್ಟಳೆಯೊಂದಿಗೆ (Ptolemy's Canon) ಸಹಮತ ಹೊಂದಿದ್ದು ಅದನ್ನು ಕ್ರಿ.ಪೂ. 536 ಎಂದು ಹೇಳುತ್ತವೆ. ಒಂದು ವೇಳೆ ಕ್ರಿ.ಪೂ. 536ನೇ ವರ್ಷದಲ್ಲಿ ಎಪ್ಪತ್ತು ವರ್ಷಗಳ ಯೆರೂಸಲೇಮಿನ ಪಾಳುಬೀಳುವಿಕೆಯು ಅಂತ್ಯಗೊಂಡು ಯೆಹೂದ್ಯರ ಪುನಃವಶವು ಪ್ರಾರಂಭವಾಗಿದ್ದಲ್ಲಿ, ಆ ರಾಜ್ಯವು ಕ್ರಿ.ಪೂ. 536ರ ಸ್ವಲ್ಪ ಮೊದಲು ಅವನತಿ ಹೊಂದಿತು ಎಂದಾಗುತ್ತದೆ. ಅಂದರೆ ಕ್ರಿ.ಪೂ 536+ 70 ಅಥವಾ ಕ್ರಿ.ಪೂ. 606. ಇದು ನಮಗೆ ಅನ್ಯಜನಗಳ ದಿನಾಂಕವು ಕ್ರಿ.ಪೂ. 606 ಎಂಬುದನ್ನು ದೃಢಪಡಿಸುತ್ತದೆ.

ಈ ಪ್ರಾಪಂಚಿಕ ಅಥವಾ ಅನ್ಯಜನಗಳ ಸರ್ಕಾರಗಳ ಅಧಿಕಾರಕ್ಕೆ ದೇವರ ಗುತ್ತಿಗೆಯ ಕಾಲವನ್ನು ಗುರುತಿಸುವಾಗ ಅವುಗಳು ಪತನಗೊಳ್ಳುವುದು ಮಾತ್ರವಲ್ಲ, ಅವು ಕಿತ್ತುಹಾಕಲ್ಪಡುತ್ತವೆ ಮತ್ತು ಅವುಗಳ ಸಮಯವು ಮುಕ್ತಾಯಗೊಳ್ಳುವಾಗ ಕ್ರಿಸ್ತನ ರಾಜ್ಯವು ಅದನ್ನು ಕೈಗೂಡಿಸಿಕೊಳ್ಳುತ್ತದೆ. ಮಾತ್ರವಲ್ಲದೆ, ದೇವರು ಆ ರಾಜ್ಯವನ್ನು ಅಭಿಷೇಕಿಸಿದವನಿಗೆ ಕೊಡಲು ಆ ಗುತ್ತಿಗೆಯ ಕಾಲವು ತೀರುವವರೆಗೆ, ಅನ್ಯಜನಗಳ ಸಮಯವು ಪೂರ್ಣಗೊಳ್ಳುವವರೆಗೂ ತೆಗೆದುಕೊಳ್ಳುವುದಿಲ್ಲ ಎಂಬುದನ್ನೂ ನಾವು ತಿಳಿಯುತ್ತೇವೆ. ಇದರ ಪರಿಣಾಮವಾಗಿ, ಪೋಪನ ಅಧಿಕಾರವು ಈ ಲೋಕವನ್ನು ಮುನ್ನಡೆಸಿತು, ದೇವರ ರಾಜ್ಯವು ಪಂಚಾಶತ್ತಮ ದಿನದಂದು ಸಿದ್ಧಿಗೆ ಬಂತು ಮತ್ತು ರೋಮನ್ ಚಕ್ರಾಧಿಪತ್ಯವು ಪೋಪನ ಅಧೀನದಲ್ಲಿರುವ ಕ್ರೈಸ್ತತ್ವಕ್ಕೆ ಪರಿವರ್ತನೆ (ಪೋಪನ ಅಧಿಕಾರ) ಹೊಂದಿದಾಗ ಸಂಪೂರ್ಣವಾಗಿ ಸ್ಥಾಪಿತವಾಯಿತು ಮತ್ತು ಇದು ಐಹಿಕ ಮತ್ತು ಆತ್ಮೀಕ ಸಾಮ್ರಾಜ್ಯಗಳೆರಡನ್ನೂ ಈ ಲೋಕದಲ್ಲಿ ಹೊಂದಿಕೊಂಡಿತು ಎಂಬ ತಪ್ಪು ಕಲ್ಪನೆಯನ್ನು ವಿರೋಧಿಸುವ ರಕ್ಷಣೆ ದೃಢತೆಯನ್ನು ನಾವಿಲ್ಲಿ ಸರಿಯಾಗಿ ಪಡಕೊಳ್ಳುತ್ತೇವೆ. ಈ ಹಕ್ಕೀಳಿಕೆಯನ್ನು ರೋಮಿನ ಸಭೆಯು ಮಾಡಿತು ಮತ್ತು ಇದಕ್ಕೆ ಹೆಚ್ಚುಕಡಿಮೆ ಪ್ರೊತಸ್ತಾಂತರ ಅನುಮೋದನೆ ಇತ್ತು ಎಂಬುದು ಅಸತ್ಯವೆಂದು ನಾವು ಅನ್ಯಜನಗಳ ಕಾಲದ ಈ ಪ್ರವಾದನೆಯಲ್ಲಿ ಕಂಡುಕೊಳ್ಳುತ್ತೇವೆ. ಪೋಪನ ಆಡಳಿತದ ಮತ್ತು ಪ್ರೊತಾಸ್ತಾಂತರ ಈ ರಾಷ್ಟ್ರಗಳು ಕ್ರೈಸ್ತ ದೇಶಗಳೆಂದು ಹೆಸರುಪಡೆದಿವೆ ಮತ್ತು ಈ ಸಾಮ್ರಾಜ್ಯವನ್ನು "ಕ್ರೈಸ್ತ ಸಾಮ್ರಾಜ್ಯ" ಎಂದು ಕರೆಯುತ್ತಾರೆ ಎಂಬುದನ್ನು ನಾವು ನೋಡುತ್ತೇವೆ. ಕ್ರಿಸ್ತನ ರಾಜ್ಯವೆಂದರೆ ಆ ರೀತಿಯದ್ದಲ್ಲ. ಈ ಲೋಕದ ರಾಜ್ಯಗಳು ಮತ್ತು ಇದರ ಕಾಲವು ಮುಕ್ತಾಯವಾಗುವವರೆಗೂ ಕ್ರಿಸ್ತನ ರಾಜ್ಯವು ನಿಯಂತ್ರಣವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಈ ಅನ್ಯ ಜನಾಂಗಗಳ ಕಾಲವು ಮುಕ್ತಾಯವಾಗುವ ಸ್ವಲ್ಪ ಕಾಲದಲ್ಲಿ, ಕ್ರಿಸ್ತನ ರಾಜ್ಯವು ನಿಯಂತ್ರಣವನ್ನು ತೆಗೆದುಕೊಳ್ಳಲು ತಯಾರಾಗುತ್ತಾ, ಸಂಘಟಿಸಿಕೊಳ್ಳುತ್ತಿರುವದು – ಈ ಅನ್ಯಜನಾಂಗಗಳು ಈ ಸಮಯದಲ್ಲಿ ನಡುಗುತ್ತಾ, ವಿಘಟನೆಯಾಗುತ್ತಾ ಅರಾಜಕತೆಯ ಸ್ಥಿತಿಗೆ ಒಳಗಾಗುವುವು.

ಸುವಾರ್ತಾಯುಗದಲ್ಲಿ, ಕ್ರಿಸ್ತನ ರಾಜ್ಯವು ಕೇವಲ ತನ್ನ ಆರಂಭಾವಸ್ಥೆಯಲ್ಲಿದೆ. ಅಪಮಾನದೊಂದಿಗೆ, ಯಾವುದೇ ಆಳುವ ಅಧಿಕಾರ ಮತ್ತು ಭಾಗ್ಯವಿಲ್ಲದೆ, ಯಾವುದೇ ಕಿರೀಟವಾಗಲೀ ಇಲ್ಲದೇ ಕೇವಲ ವಾಗ್ದಾನವೆಂಬ ರಾಜದಂಡದೊಡನೆ ಈ ಲೋಕದವರಿಂದ ಗುರುತಿಸಲಾಗದೇ ಇದೆ. ಮತ್ತು ಈ ಲೋಕದ ಅನ್ಯಜನಗಳ ರಾಜ್ಯದ ಅಧಿಕಾರಕ್ಕೆ ವಶವಾಗಿದೆ. ಪರಲೋಕದ ರಾಜ್ಯದ ಬಾಧ್ಯಸ್ತರು ಕ್ರಿಸ್ತನೊಂದಿಗೆ ಆಳುವ ನಿಗದಿತ ಸಮಯವು ಬರುವವರೆಗೆ ಆ ರೀತಿಯಾಗಿ ಮುಂದುವರೆಯಬೇಕಾಗಿದೆ. ಸಂಕಟದ ಸಮಯದಲ್ಲಿ, ಈ ಯುಗವು ಅಂತ್ಯವಾಗುವಾಗ, ಅವರು ಅಧಿಕಾರಕ್ಕೆ ಉನ್ನತಕ್ಕೇರಿಸಲ್ಪಡುವರು, ಆದರೆ ನೀತಿವಂತಿಕೆಯುಳ್ಳ ಅವರ ಆಳ್ವಿಕೆಯು ಅನ್ಯಜನರ ಆಳ್ವಿಕೆಯಕಾಲವು ಮುಗಿಯುವ ಕ್ರಿ.ಶ. 1915ರ ಮುಂಚಿತವಾಗಿ ಸಂಭವಿಸುವುದಿಲ್ಲ. ಆದುದರಿಂದ, ಸಭೆಯು ತನ್ನ ವಿಜಯೋಲ್ಲಾಸ ಮತ್ತು ಭವ್ಯವಾದ ಆಡಳಿತಕ್ಕಾಗಿರುವ ಸೂಕ್ತಸಮಯವನ್ನು ತಾಳ್ಮೆಯಿಂದ ಕಾಯುವ ಕರ್ತವ್ಯವಿದೆ; ಈ ಲೋಕದ ರಾಜ್ಯಗಳೊಡನೆ ಯಾತ್ರಿಕರೋ, ವಿದೇಶಿಗಳೋ ಅಪರಿಚಿತರೋ ಎಂಬಂತೆ

ಪ್ರತ್ಯೇಕವಾಗಿರಬೇಕು ಮತ್ತು ಬರಲಿರುವ ರಾಜ್ಯದ ಬಾಧ್ಯಸ್ತರಾಗಿ ಅದರ ಮೇಲೆ ತಮ್ಮ ಹಂಬಲವನ್ನು ಕೇಂದ್ರೀಕರಿಸತಕ್ಕದ್ದು. ಕ್ರೈಸ್ತರು ಈ ರಾಜ್ಯಗಳ ಗುಣಲಕ್ಷಣಗಳನ್ನು ಗುರುತಿಸಬೇಕು ಮತ್ತು ಅವರಿಂದ ಪ್ರತ್ಯೇಕವಾಗಿರುವಾಗ ಅವರಿಗೆ ಸಲ್ಲಬೇಕಾದ ಗೌರವ ಮತ್ತು ವಿಧೇಯತೆಗಳನ್ನು ಸಲ್ಲಿಸಬೇಕಾಗುತ್ತದೆ, ಯಾಕೆಂದರೆ ದೇವರು ತಾನೇ ಅವರಿಗೆ ಆಳಲು ಅನುಮತಿಸಿರುತ್ತಾನೆ. ಪೌಲನು "ಪ್ರತಿಯೊಬ್ಬ ಮನುಷ್ಯನೂ ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ; ಯಾಕೆಂದರೆ, ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವುದಿಲ್ಲ" (ರೋಮಾ. 13;1) ಎಂದು ಬೋಧಿಸುತ್ತಾನೆ.

ತಯಾರಿ ಹಂತಗಳನ್ನು ಈ ಹಿಂದೆಯೇ ತೆಗೆದುಕೊಂಡಿದ್ದರೂ, ಆ ಸಮಯದವರೆಗೆ, ಶಾರೀರಿಕ ಇಸ್ರಾಯೇಲ್ಯರು ದೀರ್ಘಕಾಲದಿಂದ ವಾಗ್ದಾನ ಮಾಡಿದ್ದ ಬಾಧ್ಯತೆಗೆ ಬರಲಾರರು. ಯಾಕೆಂದರೆ, ಅನ್ಯಜನರಿಗೆ ನೀಡಿದ ಗುತ್ತಿಗೆಯ ಅವಧಿಯು ಮುಗಿಯುವವರೆಗೂ ದೇವರು ತನ್ನ ರಾಜ್ಯವನ್ನು ಈ ಲೋಕದ ಅಥವಾ ಆತ್ಮೀಕ ಹಂತವನ್ನು ಪೂರ್ಣವಾಗಿ ಸ್ಥಾಪಿಸುವುದಿಲ್ಲ.

ಆ ದಿನದವರೆಗೂ ಯೆಹೂದ್ಯರ ಅರಸನು ಮಾತ್ರವಲ್ಲ. ಸಮಸ್ತ ಲೋಕದ ರಾಜಾಧಿರಾಜನಾದ ಮೆಸ್ಸೀಯನ ಭವ್ಯವಾದ ಪ್ರಸನ್ನತೆಯಲ್ಲಿ ಅನ್ಯಜನರ ಸಮಯವು ಮುಗಿಯುವವರೆಗೂ ಕಿರೀಟ, ರಾಜ್ಯ ಇವುಗಳು ದೇವ ಜನರಿಂದ (ದೈಹಿಕ ಮತ್ತು ಆತ್ಮೀಕವಾದ ಎರಡೂ ಸಂತಾನಗಳಿಂದ) ತೆಗೆಯಲ್ಪಟ್ಟವು, ಇಸ್ರಾಯೇಲ್ಯರಿಂದ ತೆಗೆಯಲ್ಪಡುವ ಈ ಕಿರೀಟವು ವಾಗ್ದಾನದ ಉಲ್ಲಂಘನೆಯಾಗುತ್ತದೆ ಎಂದು ಕೆಲವರು ಆಲೋಚಿಸಬಹುದು, "ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದದ ಕೈಯಿಂದ ತಪ್ಪುವುದಿಲ್ಲ. ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಅವನಿಗೆ ಅನ್ಯಜನಗಳೂ ವಿಧೇಯರಾಗಿರುವರು" (ಆದಿ. 49:10). ಹೇಗಾದರೂ, ಕಿರೀಟ ಮತ್ತು ರಾಜದಂಡಕ್ಕೆ ಇರುವ ಭಿನ್ನತೆಯನ್ನು ಗಮನಿಸಿ. ಚಿದ್ಕೀಯನ ಕಾಲದಲ್ಲಿ ಕಿರೀಟವು ತೀರಿಹೋದರೂ, ರಾಜದಂಡವು ನಾವು ನೋಡುವಂತೆ ನಂತರದ ಆರುನೂರಾಮೂವತ್ತೊಂಬತ್ತು ವರ್ಷದವರೆಗೂ ಕದಲಲೇ ಇಲ್ಲ. ಯೂದ ಕುಲದವನೂ, ದಾವೀದ ವಂಶದವನೂ ಆದ ನಮ್ಮ ಕರ್ತನಾದ ಯೇಸುವು, ದೈಹಿಕವಾಗಿ ದೇವರಿಂದ ಒಪ್ಪಿಗೆ ಪಡೆದವನಾಗಿ ದೀರ್ಘಕಾಲದ ವಾಗ್ದಾನವಾಗಿದ್ದ ರಾಜದಂಡದ ಬಾಧ್ಯಸ್ಥನಾದನು.

ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿರುವನು. ಆತನ ಸಂತಾನದಲ್ಲಿ ಮಹಾವಿಮೋಚನಕನು ಹುಟ್ಟಿ ಬರುತ್ತಾನೆ. ಆತನು ತನ್ನ ಪೀಳಿಗೆಯವರನ್ನು ಮಾತ್ರ ಉನ್ನತ ಸ್ಥಿತಿಗೆ ತರುವದಲ್ಲದೇ ಆತನ ಮೂಲಕ ಈ ಲೋಕದ ಎಲ್ಲಾ ಸಂತತಿಗಳನ್ನೂ ಆಶೀರ್ವದಿಸುತ್ತಾನೆ ಎಂಬ ವಾಗ್ದಾನವನ್ನು ಇಸಾಕನೊಂದಿಗೆ, ನಂತರ ಯಾಕೋಬನೊಂದಿಗೆ ನವೀಕರಿಸಲಾಯಿತು. ಕೆಲವು ಸಮಯದಲ್ಲಿ ಇದು ಧರ್ಮಶಾಸ್ತ್ರವನ್ನು ಒದಗಿಸಿಕೊಟ್ಟವನು ಮತ್ತು ಮಹಾವಿಮೋಚಕನಾದ ಮೋಶೆಯೇ ಆ ವಾಗ್ದತ್ತ ಪುರುಷನು ಎಂದು ತೋರಬಹುದು; ಆದರೆ, ಆತನು ಪ್ರವಾದನೀಯವಾಗಿ ಜನರಿಗೆ ಪ್ರಕಟಿಸಿದ್ದೇನೆಂದರೆ "ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂತ ಪ್ರವಾದಿಯನ್ನು [ನಿಮಗೆ] ಏರ್ಪಡಿಸುವನು ಅವನಿಗೇ ಕಿವಿಗೊಡಬೇಕು" (ಧರ್ಮೋ. 18:25). ಈ ರೀತಿಯಲ್ಲಿ ತಾನು ಬರಲಿರುವ ಆತನ ಪ್ರತಿಸಂಕೇತ ಎಂಬುದಾಗಿ ಸೂಚಿಸಿದ್ದಾನೆ; ಮೋಶೆಯು ತೀರಿಹೋದನು. ಮುಂದೆ "ರಾಜದಂಡವು ಯೂದಾಯದ ಕೈತಪ್ಪುವುದಿಲ್ಲ" ಎಂಬ ವಾಗ್ದಾನವು ಆ ಜನರ ನಿರೀಕ್ಷೆಯನ್ನು ಪರಿಮಿತಿಗೊಳಿಸಿತು. ಇತರೆ ಎಲ್ಲಾ ಕುಲದವರೂ ಯೂದಾಯಕ್ಕೆ ದೇವರ ವಾಗ್ದಾನದ ಮೇಲಿನ ಅವರ ನಂಬಿಕೆಯ ಅನುಪಾತದಲ್ಲಿ ಅಂಟಿಕೊಂಡರು ಮತ್ತು ತಕ್ಕ ಸಮಯದಲ್ಲಿ ಯೂದಾಯದ ಸಂಯೋಗದಲ್ಲಿ ಒಂದು ದೊಡ್ಡ ಆಶೀರ್ವಾದವನ್ನು ನಿರೀಕ್ಷಿಸುವವರಾಗಿದ್ದರು.

ಅರಸನಾದ ದಾವೀದನು ವಾಗ್ದತ್ತ ಕುಲದಿಂದ ಎದ್ದು ಬಂದಾಗ, ಆತನ ವಿಜಯಗಳು ವಿಸ್ತರಣಾ ರಾಜ್ಯದ ನಿರೀಕ್ಷೆಗೆ ಮತ್ತು ಅದರ ಪ್ರಭಾವವು ಲೋಕದಲ್ಲೆಲ್ಲಾ ಹರಡಿ ಪ್ರಪಂಚವನ್ನೇ ಅಪ್ಪಿಕೊಳ್ಳುತ್ತದೆ ಮತ್ತು ಎಲ್ಲಾ ರಾಷ್ಟ್ರಗಳನ್ನೂ ಧರ್ಮಶಾಸ್ತ್ರಕ್ಕೆ ಅಧೀನಮಾಡುತ್ತದೆ ಎಂಬ ನಿರೀಕ್ಷೆಗಳಿಗೆ ನಡೆಸಿದವು. ಸೊಲೊಮೋನನ ಲೋಕಪ್ರಖ್ಯಾತವಾದ ಜ್ಞಾನವು ಮತ್ತು ಮಹತ್ವವು ಅತ್ಯುನ್ನತ ಮಟ್ಟದಲ್ಲಿರುವಾಗ, ವಿಶ್ವ ಸಾಮ್ರಾಜ್ಯದ ಕಿರೀಟವು ಬಹುಮಟ್ಟಿಗೆ ಅವರ ಬಿಗಿಮುಷ್ಟಿಯಲ್ಲಿದೆಯೇನೋ ಎಂದು ಖಚಿತವಾಗಿ ತೋರಿಬಂತು. ದೇವರು ದಾವೀದನಿಗೆ ಮಾಡಿದ "ನಿನ್ನ ಸಂತತಿಯವರೊಳಗೆ ಒಬ್ಬನನ್ನು ನಾನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು" (ಅ.ಕೃ. 2:30) ಎಂಬ ವಾಗ್ದಾನವು ಯೂದ ಕುಲದ ಒಂದು ಕುಟುಂಬಕ್ಕೆ ಮಾತ್ರವೇ ಪರಿಮಿತವಾಯಿತು ಮತ್ತು ಆ ಕುಟುಂಬವು ಈಗಾಗಲೇ ಸಿಂಹಾಸನದ ಮೇಲೆ ಅದೆ. ಸೊಲೊಮೋನನ ದೇವಾಲಯವು ಕಟ್ಟಲ್ಪಟ್ಟಾಗ ಮತ್ತು ಅದರ ನೂರಾರು ಗಾಯಕರುಗಳು ಮತ್ತು ಯಾಜಕರುಗಳನ್ನು ನೋಡುವಾಗ ಅದು ಭವ್ಯವಾದ ದೃಶ್ಯವಾಗಿತ್ತು. ಸೊಲೊಮೋನನ ಜ್ಞಾನದ ಮತ್ತು ಐಶ್ವರ್ಯವಂತಿಕೆಯ ಪ್ರಸಿದ್ಧಿಯು ಲೋಕವೆಲ್ಲಾ ಹರಡಿರುವಾಗ, ಅನೇಕ ಅರಸರುಗಳು ಆತನಿಗೆ ಕಾಣಿಕೆ ಸಲ್ಲಿಸಿ ಆತನ ಒಲುಮೆಯನ್ನು ಬಯಸುವಾಗ; ಶೇಬಾದ ರಾಣಿಯು ಈ ಪ್ರಖ್ಯಾತನಾದ ಈ

ಲೋಕವು ಇನ್ನೂ ತಿಳುಕೊಳ್ಳಬೇಕಾದ ಅರಸನನ್ನು ನೋಡಲು ದೂರದೇಶದಿಂದ ತನ್ನ ಕೊಡುಗೆಗಳೊಂದಿಗೆ ಬಂದಾಗ ಅಬ್ರಹಾಮನ ಸಂತತಿಯ ಅತ್ಯಂತ ಉತ್ಕರ್ಷ ಸ್ಥಿತಿಯನ್ನು ಕಣ್ಣಾರೆ ಕಾಣುವ ನಿರೀಕ್ಷೆಯಿಂದ ಇವರ ಮೂಲಕ ಲೋಕದ ಎಲ್ಲಾ ಜನಾಂಗಗಳ ಆಶೀರ್ವಾದವು ಹತ್ತಿರದಲ್ಲಿಯೇ ಇದೆ ಎಂಬ ಆಶಾಭಾವ ಉಂಟಾಗಿದೆ.

ಆದರೆ ಸೊಲೊಮೋನನು ತೀರಿಕೊಂಡಾಗ, ಆತನ ರಾಜ್ಯವು ಹರಿದು ಹಂಚಿಹೋದಾಗ, ಅಂತ್ಯದಲ್ಲಿ ಸಂಪೂರ್ಣವಾಗಿ ಕೆಡವಲ್ಪಟ್ಟಾಗ ಮತ್ತು ದೇವರ ಪವಿತ್ರ ದೇಶವಾಗಿ ಆ ದೇಶವನ್ನು ಆಳಿ, ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವರು ಎಂದು ನಿರೀಕ್ಷಿಸಿದ್ದ ಜನರನ್ನು ಸೆರೆಹಿಡಿದು ಬಾಬೇಲಿಗೆ ಸಾಗಿಸಲಾಯಿತು. ಆಗ ಅವರಿಗಾದ ಆಶಾಭಂಗವು ಭಯಂಕರವಾಗಿತ್ತು – "ನಾವು ಬಾಬೇಲ್ ದೇಶದ ನದಿಗಳ ಬಳಿಯಲ್ಲಿ ಕೂತುಕೊಂಡು ಚಿಯೋನನ್ನು ನೆನಸಿ ಅತ್ತೆವು" – ಕೀರ್ತನೆ 137:1.

ಆದರೆ, ಕಿರೀಟವು ತೆಗೆಯಲ್ಪಟ್ಟರೂ ಅಲ್ಲದೇ ಅಂದರೆ ತಮ್ಮನ್ನು ತಾವು ಆಳಿಕೊಳ್ಳುವುದನ್ನು ಸಹ ಅವರಿಂದ ತೆಗೆದುಬಿಟ್ಟ ಮೇಲೆಯೂ, ಮೂಲದಲ್ಲಿ ದೇವರ ವಾಗ್ದಾನದಲ್ಲಿ ಹೇಳಲ್ಪಟ್ಟ ಆಳುವ ಅಧಿಕಾರವು, ರಾಜದಂಡವು ಅವರಿಂದ ತೆಗೆಯಲ್ಪಡಲಿಲ್ಲ. ಮಹಾ ಪ್ರತಿಮೆ ಮತ್ತು ನಾಲ್ಕು ಮೃಗಗಳ ದೃಷ್ಟಾಂತದಲ್ಲಿ ಹೇಳಿದಂತೆ ನೆಬೂಕದ್ನೆಚ್ಚರ ಮತ್ತು ಆತನ ಉತ್ತರಾಧಿಕಾರಿಗಳಿಗೆ ವಿಶ್ವ ಸಾಮ್ರಾಜ್ಯವನ್ನು ನೀಡಿತ್ತಾದರೂ, ಅದು ಕೇವಲ ಮಿತಿಯುಳ್ಳ ಅವಧಿಯವರೆಗೆ ಮುಂದುವರೆಯು ವುದಾಗಿತ್ತು. ಇಸ್ರಾಯೇಲ್ಯರಿಗೆ ನೀಡಿದ ಮೂಲ ವಾಗ್ದಾನವು ನೆರವೇರಬೇಕಾಗಿದೆ – ಕಿರೀಟವು ತೆಗೆಯಲ್ಪಟ್ಟಿತು, ಶಿಲೋವನು ಬರುವವರೆಗೆ ರಾಜದಂಡವು ಉಳಿದುಕೊಂಡಿತು. ಇದನ್ನು ಚಿದ್ಕೀಯನ ವಿರುದ್ಧ ನೀಡಿದ ಕಟ್ಟಳೆಯಲ್ಲಿ ಸೂಚಿಸಲಾಗಿದೆ; "ಮುಂಡಾಸವನ್ನು ಕಿತ್ತು ಬಿಡು ! ಕಿರೀಟವನ್ನು ಎತ್ತಿಹಾಕು ! ಎಲ್ಲವೂ ವ್ಯತ್ಯಸ್ತವಾಗಲಿ; ಕೆಳಗಿದನ್ನು ಮೇಲೆ ಮಾಡು; ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು; ರಾಜ್ಯಕ್ಕೆ ಬಾಧ್ಯನು ಬರುವುದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು. ಅದರ ಅಧಿಕಾರವಿರುವವನು ಬರುವವರೆಗೆ ನಾನು ಅದನ್ನು ಬುಡಮೇಲು ಮಾಡುವೆನು ನಂತರ ಅವನಿಗೆ ಕೊಡುವೆನು" – ಯೆಹೆಜ್ಕೇಲ 21:26.

ಅಬ್ರಹಾಮನೊಡನೆ ಮಾಡಿಕೊಂಡ ಒಡಂಬಡಿಕೆಯು ಆತನ ಸಂತಾನದ ಮೂಲಕ ಆಳ್ವಿಕೆ ಮತ್ತು ಆಶೀರ್ವಾದಗಳ ವಾಗ್ದಾನ ಮಾಡುವುದಾದರೂ, ಅಬ್ರಹಾಮನ ಮಕ್ಕಳಾದ ಇಸ್ರಾಯೇಲ್ಯರೊಡನೆ ಮಾಡಿಕೊಂಡ ಧರ್ಮಶಾಸ್ತ್ರದ ಒಡಂಬಡಿಕೆಯು ಅಬ್ರಹಾಮನ ಒಡಂಬಡಿಕೆಯನ್ನು ಮಿತಿಯುಳ್ಳದ್ದೂ, ನಿರ್ಬಂಧವುಳ್ಳದ್ದೂ ಆಗಿ ಮಾಡಿದೆ. ಹೀಗಾಗಿ ಯಾರು ಪೂರ್ಣವಾಗಿ ಮತ್ತು ಸಮರ್ಪಕವಾಗಿ ಧರ್ಮಶಾಸ್ತ್ರಕ್ಕೆ ವಿಧೇಯರಾಗಿರುತ್ತಾರೋ ಅಂಥವರು ಮಾತ್ರವೇ ನಿರೀಕ್ಷೆಯ ಅಧಿಕಾರವನ್ನು ಹೊಂದಿದ್ದಾರೆ ಮತ್ತು ಅವರು ಅಬ್ರಹಾಮನ ಒಡಂಬಡಿಕೆಯ ಆಡಳಿತ ಮತ್ತು ಆಶೀರ್ವಾದಗಳನ್ನು ಹೊಂದಿದ್ದೇವೆಂದು ಹಕ್ಕಿನಿಂದ ಹೇಳಿಕೊಳ್ಳಬಹುದಾಗಿದೆ. ಈ ಸತ್ಯವನ್ನು ನೋಡಿ ಫರಿಸಾಯರಲ್ಲಿ ಪಕ್ಷದ ರಚನೆಗೆ ಕಾರಣವಾಯಿತು ಮತ್ತು ಅವರು ಯಾವ ದೋಷವೂ ಇಲ್ಲದಂತೆ ಧರ್ಮಶಾಸ್ತ್ರದ ಪ್ರತಿಯೊಂದು ವಿಶಿಷ್ಟತೆಯನ್ನೂ ನೆರವೇರಿಸುವುದಾಗಿ ಹೇಳಿಕೊಂಡರು ಮತ್ತು ತಾವು ನೀತಿವಂತರೆಂಬುದಾಗಿ ತಮ್ಮಲ್ಲಿಯೇ ನಂಬಿಕೆಯಿಟ್ಟವರಾಗಿ ಇತರರನ್ನು ಕಡೆಗೆಣಿಸಿದರು ಮತ್ತು ಅವರನ್ನು ಸುಂಕದವರೂ, ಪಾಪಿಗಳೂ ಎಂದು ಜರಿಯತೊಡಗಿದರು ಮತ್ತು ತಾವೇ ಅಬ್ರಹಾಮನ ಮಕ್ಕಳೂ, ಈ ಲೋಕವನ್ನೇ ಆಳಲಿರುವ ಚಕ್ರಾಧಿಪತ್ಯದ ಬಾಧ್ಯಸ್ತರೂ ಆಗಿ ಲೋಕದ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವರು ಎಂದು ಹೇಳಿಕೊಳ್ಳತೊಡಗಿದರು.

ನಮ್ಮ ಕರ್ತನಾದ ಯೇಸುವಿನ ಸ್ಪಷ್ಟವಾದ, ಪ್ರಭಾವಯುಕ್ತವಾದ ಬೋಧನೆಗಳು ಫರಿಸಾಯರ ತಪ್ಪುಗಳನ್ನು ಎತ್ತಿ ತೋರಿಸುವ ದಿಶೆಯಲ್ಲಿತ್ತು. ಅವರುಗಳು ಧರ್ಮಶಾಸ್ತ್ರದ ಕೆಲವೊಂದು ಬಾಹ್ಯಾಚರಣೆಗಳನ್ನು ಜಾಗರೂಕತೆಯಿಂದ ಪೂರ್ಣವಾಗಿ ಮಾಡುವುದರ ಮೂಲಕ ತಾವು ಅದನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದೇವೆ ಎಂಬ ತಪ್ಪು ಭಾವನೆಯುಳ್ಳವರಾಗಿದ್ದರು. ಈಗ ಎಲ್ಲಾ ಕ್ರೈಸ್ತರು ತಿಳಿದಿರುವಂತೆ ನಮ್ಮ ಕರ್ತನು ಬೋಧಿಸುವಂತೆ ಧರ್ಮಶಾಸ್ತ್ರವನ್ನು ಪೂರ್ಣವಾಗಿ ನೋಡುವಾಗ ಅದು ಬಹು ಭವ್ಯವಾದುದೂ, ಪರಿಪೂರ್ಣತೆಯುಳ್ಳದ್ದೂ ಆಗಿದೆ. ಆದರೆ, ಮಾನವರು ಪತನಗೊಂಡಿದ್ದಾರೆ ಮತ್ತು ಅಸಮರ್ಪಕರಾಗಿದ್ದಾರೆ ಮತ್ತು ತಮ್ಮೊಳಗಿನ ಬಲಹೀನತೆಗಳ ನಿಮಿತ್ತ ಪ್ರಲೋಭನೆಗಳನ್ನು ಸುತ್ತಿಕೊಂಡಿದ್ದಾರೆ. ಅವರಲ್ಲಿ ಯಾರೂ ಆ ಧರ್ಮಶಾಸ್ತ್ರವನ್ನು ಸಮರ್ಪಕವಾಗಿ ಪಾಲಿಸಲಾರರು ಮತ್ತು ಅಬ್ರಹಾಮನ ಆಶೀರ್ವಾದಗಳನ್ನು ಹಕ್ಕಿನಿಂದ ಪಡಕೊಳ್ಳಲಾರರು. ಆದುದರಿಂದ ನಮ್ಮ ಕರ್ತನು ಫರಿಸಾಯರ ಆಚಾರಗಳನ್ನು ಖಂಡಿಸುವುದನ್ನು ಅವರ ಧರ್ಮಶಾಸ್ತ್ರವನ್ನು ಪಾಲಿಸುವ ಪ್ರಯತ್ನವನ್ನು ವಿರೋಧಿಸುತ್ತಾನೆ ಎಂದು ಅರ್ಥಮಾಡಿಕೊಳ್ಳಬಾರದು; ಆತನು ಅವರನ್ನು ಧರ್ಮಶಾಸ್ತ್ರವನ್ನು ಪಾಲಿಸುವಲ್ಲಿ ವಿಫಲರಾಗಿರುವ ಬಗ್ಗೆ ದೂಷಿಸುತ್ತಿಲ್ಲ. ಅದನ್ನು ಯಾವ ಅಸಮರ್ಪಕ ವ್ಯಕ್ತಿಯೂ ಪಾಲನೆ ಮಾಡಲಾರನು. ಆದರೆ ಆತನು ಅವರನ್ನು ಮಿಥ್ಯಾಚರಣೆಗಾಗಿ, ತಮ್ಮನ್ನು ಮಾತ್ರವಲ್ಲದೇ ಇತರರನ್ನೂ ಒಂದು ರೀತಿಯ ಸಮರ್ಪಕತೆ ಮತ್ತು ಪವಿತ್ರತೆಯ ಹೆಸರಿನಲ್ಲಿ

ಮೋಸಗೊಳಿಸುತ್ತಿರುವುದಕ್ಕಾಗಿ ನಿಂದಿಸುತ್ತಾನೆ. ಅವರ ಕಾರ್ಯಗಳನ್ನು ಅವರೂ ಮತ್ತು ಇತರರು ಕೇವಲ ಹೊರಗಡೆಯ ಶುದ್ಧತೆಯಾಗಿದೆಯೆಂದೂ, ಅವರ ಹೃದಯಗಳು ಇನ್ನೂ ಅಶುದ್ಧವಾಗಿವೆ ಮತ್ತು ಪ್ರತಿಷ್ಠಿಸಲ್ಪಟ್ಟಿಲ್ಲ ಎಂದೂ ಅರಿತುಕೊಳ್ಳಬಹುದಾಗಿದೆ. ಆತನು ಅವರನ್ನು ಕೇವಲ ದೈವಿಕತೆಯ ನಮೂನೆಯನ್ನು ಮಾತ್ರವೇ ಹೊಂದಿದ್ದು ತುಟಿಯ ಮೂಲಕ ಮಾತ್ರವೇ ಸೇವೆ ಮಾಡುವವರಾಗಿದ್ದಾರೆಂದೂ, ಆದರೆ ಅವರ ಹೃದಯಗಳು ಇನ್ನೂ ದೇವರಿಂದ ಬಹಳ ದೂರವಾಗಿವೆ ಎಂಬುದಾಗಿಯೂ ದೂಷಿಸುತ್ತಾನೆ. ಆದುದರಿಂದ ನಮ್ಮ ಕರ್ತನು ಮತ್ತು ಪೌಲನು ಹೇಳುವಂತೆ ಅವರು ಸಮರ್ಪಕವಾದ ಆಚರಣೆಯ ಅಗತ್ಯತೆಗಳ ಹತ್ತಿರಕ್ಕೆ ಬಂದಿರಬಹುದಾದರೂ "ಅವರಲ್ಲಿ ಒಬ್ಬನೂ ಧರ್ಮಶಾಸ್ತ್ರದಂತೆ ನಡೆಯುತ್ತಿಲ್ಲ" – ಯೋಹಾನ 7:19 ಮತ್ತು ರೋಮಾ. 3:20.

ನಮ್ಮ ಕರ್ತನು ಧರ್ಮಶಾಸ್ತ್ರದ ಪೂರ್ಣ ಅರ್ಥಸೂಚನೆಯನ್ನು ಮಾಡುವಂತೆ "ನೀವು ನಿಮ್ಮ ದೇವರಾದ ಯೆಹೋವನನ್ನು ನಿಮ್ಮ ಪೂರ್ಣ ಹೃದಯದಿಂದಲೂ, ಪೂರ್ಣ ಬುದ್ದಿಯಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು" ಎಂಬ ಆಜ್ಞೆಗೆ ಸರಿಸಮಾನವಾಗಿ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" ಎಂಬ ಆಜ್ಞೆಯನ್ನು ಪ್ರಕಟಿಸಿದನಲ್ಲದೆ ಆತನು ತಾನು ದೇವರ ಯೋಜನೆಗಳಿಗೆ ಮತ್ತು ಆತನ ಚಿತ್ತಕ್ಕೆ ಸಂಪೂರ್ಣವಾಗಿ ಶರಣಾಗುವುದರ ಮೂಲಕ ಇವುಗಳನ್ನು ವಿಶದಗೊಳಿಸಿದನು ಮತ್ತು ಆತನ ಸ್ವಂತ ಆಕಾಂಕ್ಷೆಗಳನ್ನು, ಸ್ವಯಂ ಬಯಕೆಗಳನ್ನು ಕಡೆಗಣಿಸಿ ಹೃತ್ಪೂರ್ವಕವಾಗಿ ದೇವರ ಚಿತ್ತವನ್ನು ತನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಶಕ್ತಿಯಿಂದಲೂ ಹಾಗೂ ತನ್ನ ನೆರೆಯವನನ್ನು ತನ್ನಂತೆಯೇ ಪ್ರೀತಿಸಿ ತನ್ನ ಮರಣದ ಪರ್ಯಂತರ ಕರಾರುವಾಕ್ಕಾಗಿ ಪಾಲಿಸಿದನು.

ಈ ರೀತಿಯಾಗಿ ಆತನು ಯಾವುದೇ ಮಾನವ ಕುಟುಂಬಗಳು ಮಾಡಲಾರದ ಅದರ ಎಲ್ಲಾ ಶರತ್ತುಗಳನ್ನು ಕೈಕೊಂಡು, ಧರ್ಮಶಾಸ್ತ್ರಕ್ಕೆ ವಿಧೇಯನಾಗಿ ಸಿನಾಯ್ ಬೆಟ್ಟದಲ್ಲಿ ಇಸ್ರಾಯೇಲ್ಯರೊಡನೆ ದೇವರು ಮಾಡಿಕೊಂಡ ನ್ಯಾಯದ ಒಡಂಬಡಿಕೆಯ ಸಕಲ ಆಶೀರ್ವಾದಗಳ ಬಾಧ್ಯಸ್ತನಾದನು. ಈ ರೀತಿಯಲ್ಲಿಯೂ ಸಹ ಆತನು ತಾನು ಅಬ್ರಹಾಮನ ಸಂತತಿಯವನಾಗಿದ್ದು ಅದರ ಸಮಸ್ತ ಆಶೀರ್ವಾದಗಳು ತನಗೆ ಅನ್ವಯವಾಗುತ್ತವೆ ಎಂಬುದನ್ನು ಸಾಬೀತುಪಡಿಸಿದನು. ಹೀಗೆ ನಮ್ಮ ಕರ್ತನು ರಾಜದಂಡವನ್ನು (ಭೂಲೋಕ ರಾಜ್ಯದ ಹಕ್ಕು ಮತ್ತು ಅಧಿಕಾರ) ಭದ್ರಪಡಿಸಿದನು. ಈ ವಿಚಾರವಾಗಿ ಅನೇಕ ಶತಮಾನಗಳ ಹಿಂದೆಯೇ ಹೇಳಲ್ಪಟ್ಟಿದ್ದು ಅದು ಯೂದಕುಲದ ದಾವೀದನ ಸಂತಾನದ ಅರ್ಹ ವ್ಯಕ್ತಿಗೆ ನೀಡಲ್ಪಡುವುದು ಎಂಬ ವಾಗ್ದಾನ ಮಾಡಲ್ಪಟ್ಟಿತ್ತು. ಅನೇಕ ಶತಮಾನಗಳಿಂದ ಇಸ್ರಾಯೇಲ್ಯರು ನಿರೀಕ್ಷೆ ಇಟ್ಟುಕೊಂಡು, ಯಾವುದಕ್ಕಾಗಿ ತೀವ್ರ ಹಂಬಲದಿಂದ ಪ್ರಯಾಸ ಪಡುತ್ತಿದ್ದರೋ ಕೊನೆಗೂ ಅದು ಆ ಯೂದಕುಲದ ಸಿಂಹನೆನಿಸಿಕೊಂಡ ಬಲಶಾಲಿಯಿಂದ ಗೆದ್ದುಕೊಳ್ಳಲ್ಪಟ್ಟಿತು. ಮಹಾಶಾಂತಿದಾಯಕನಾದ ಶಿಲೋವನೆನಿಸಿಕೊಳ್ಳುವವನು ಬಂದಿದ್ದಾನೆ. ಆತನು ಮಾನವರನ್ನು ನ್ಯಾಯವಾಗಿ ಬರಬೇಕಿದ್ದ ಪಾಪದ ದಂಡನೆಯಿಂದ ವಿಮೋಚಿಸಲು ಶಿಲುಬೆಯಲ್ಲಿ ಸುರಿಸಿದ ತನ್ನ ಸ್ವರಕ್ತದಿಂದ ಮಾನವರನ್ನು ದೇವರೊಂದಿಗೆ ಸಮಾಧಾನಪಡಿಸಿದ್ದಾನೆ. ಮಾತ್ರವಲ್ಲದೇ ಆತನು ತನ್ನ ಮಹಾ ಅಧಿಕಾರದೊಡನೆ ಬರುವಾಗ, ರಾಜಾಧಿರಾಜನಾಗಿ, ಕರ್ತರ ಕರ್ತನಾಗಿ ಎಲ್ಲಾ ತಪ್ಪುಗಳನ್ನೂ, ಕೇಡುಗಳನ್ನೂ ಮತ್ತು ಪಾಪವನ್ನು ತೊಡೆದುಹಾಕುತ್ತಾನೆ ಮತ್ತು ಪವಿತ್ರತೆ ಎಂಬ ನಿಶ್ಚಿತವಾದ ನೆಲೆಯ ಮೇಲೆ ಸ್ಥಿರಪಡಿಸುತ್ತಾನೆ. ಆತನು ಸಮಾಧಾನದ ಪ್ರಭುವಾಗಿದ್ದಾನೆ.

ಯಾವಾಗ ಒಡಂಬಡಿಕೆಯ ಅಧೀನದಲ್ಲಿರುವ ಹಕ್ಕು ರಾಜದಂಡವು ನಮ್ಮ ಕರ್ತನಿಗೆ ದಾಟಿಸಲ್ಪಟ್ಟಿತೋ ಆಗ ಧರ್ಮಶಾಸ್ತ್ರದ ಒಡಂಬಡಿಕೆಯು ಮುಕ್ತಾಯಗೊಳ್ಳುತ್ತದೆ. ಶಿಲೋವನು ಈಗಾಗಲೇ ರಾಜದಂಡವನ್ನು ಗೆದ್ದುಕೊಂಡ ಮೇಲೆ, ದೇವರು ಯಾವುದೇ ಪರಿಸ್ಥಿತಿಯಲ್ಲಿ ಇತರರಿಗೆ ಬಹುಮಾನವನ್ನು ನೀಡುವುದಾಗಿ ಹೇಳಲು ಸಾಧ್ಯ ? ಆದುದರಿಂದ ಅಪೋಸ್ತಲನು "ಆತನು (ಕ್ರಿಸ್ತನು) ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ ಆಜ್ಞಾರೂಪವಾಗಿದ್ದ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು" (ಕೊಲೊಸ್ಸೆ 2:14) ಎಂದು ಪ್ರಕಟಿಸಿದ್ದಾನೆ.

ಈ ರೀತಿಯಾಗಿ ಸಮಾಧಾನದ ಪ್ರಭುವು ಆತನ ಪ್ರಜೆಗಳಿಗಾಗಿ ಪಾಪ ಕ್ಷಮಾಪಣೆ, ಪುನಃವಶ ಇವೆರಡನ್ನೂ ಭದ್ರಪಡಿಸಿದ್ದಾನೆ ಮತ್ತು ನೀತಿವಂತಕೆಯ ಆಧಾರದಲ್ಲಿ ಸದಾಕಾಲ ಇರುವ ರಾಜ್ಯವೊಂದನ್ನು ಸ್ಥಾಪಿಸಿದ್ದಾನೆ. ಇದನ್ನು ಬೇರೆ ಯಾವ ರೀತಿಯಿಂದಲೂ ತರಲು ಸಾಧ್ಯವಿದ್ದಿಲ್ಲ. ಈ ರೀತಿಯಲ್ಲಿ ಶಿಲೋವನು ಬರವವರೆಗೆ "ರಾಜದಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ, ಮುದ್ರೆಕೋಲು ಆತನ (ಅಥವಾ ಬಲಶಾಲಿಯ, ಉನ್ನತ ಮಟ್ಟದ ಆತ್ಮೀಕ ವ್ಯಕ್ತಿಯ, ಮಹಿಮೆಯುಳ್ಳ ಕರ್ತನಿಗೆ) ಪಾದಗಳ ಬಳಿಯಿಂದ ಕದಲುವುದಿಲ್ಲ" (ಆದಿ. 49:10) ಎಂಬ ಭವಿಷ್ಯವಾಣಿಯು ನೆರವೇರುತ್ತದೆ. ಅದು ಯೆಹೂದದಿಂದ ಕದಲುವದು. ಆತನು ರಾಜಾಧಿ ರಾಜನಾಗಿ, ಕರ್ತರ ಕರ್ತನಾಗಿ ಈ ಅಧಿಕಾರ ದಂಡವನ್ನು ಹಿಡುಕೊಳ್ಳುತ್ತಾನೆ.

ಬಾಬೇಲಿನಲ್ಲಿ ಎಪ್ಪತ್ತು ವರ್ಷಗಳ ದಾಸತ್ವವನ್ನು ಕಳೆದ ನಂತರ, ಕೆಲವರು ಹಿಂತಿರುಗಿ ಬಂದು ಆ ದೇವಾಲಯವನ್ನು, ಪೌಳಿಗೋಡೆಗಳನ್ನು ಪುನಃ ನಿರ್ಮಾಣ ಮಾಡಿದ ನಂತರವೂ ದೇವರ ವಾಗ್ದಾನದ ಬಗ್ಗೆ ಗೌರವವುಳ್ಳವರಾಗಿದ್ದು, ಯಾರು ಇಸ್ರಾಯೇಲ್ಯ ಜನರನ್ನು ಸಂತೈಸುವವನಿಗಾಗಿ ಕಾಯುತಿದ್ದರೋ ಅವರುಗಳು ದೇವರು ವಾಗ್ದಾನ ಮಾಡಿದ ಧರ್ಮಶಾಸ್ತ್ರವನ್ನು ನೀಡುವಾತನು, ಮಹಾ ಶಿಲೋವನು ಅಥವಾ ಶಾಂತಿದಾಯಕನು ಆ ಯೂದಕುಲದಿಂದಲೇ ಬರುತ್ತಾನೆ ಎಂಬುದನ್ನು ನೆನಪಿಟ್ಟುಕೊಂಡಿದ್ದರು, ಆದರೆ, ಅಯ್ಯೋ! ಶಾಂತಿಪೂರ್ಣನೂ, ತನ್ನ ಸ್ವರಕ್ತವನ್ನು ಶಿಲುಬೆಯಲ್ಲಿ ಸುರಿಸುವುದರ ಮೂಲಕ ಜನರ ಪಾಪಪರಿಹಾರ ಮಾಡಿದಾತನೂ, ಪುನಃ ಸಂಧಾನವನ್ನುಂಟು ಮಾಡಿದಾತನೂ ಆತನು ಬಂದಾಗ ಅವರು ಆತನನ್ನು ಉಪೇಕ್ಷಿಸಿದರು. ಅವರು ನಿರೀಕ್ಷಿಸುತ್ತಿದ್ದದ್ದು ಒಬ್ಬ ಉನ್ನತನಾದ ಮಹಯಾಜಕನನ್ನು ಅಲ್ಲ. ಬದಲಾಗಿ ಒಬ್ಬ ಮಹಾಸೇನಾಧಿಪತಿಯನ್ನು ಮಾತ್ರ.

ಶಿಲೋವನ ಮರಣದ ಪರ್ಯಂತ ತೋರಿಸಿದ ವಿಧೇಯತೆಯಿಂದಾಗಿ ರಾಜದಂಡವನ್ನೂ, ಎಲ್ಲಾ ಅಧಿಕಾರವನ್ನೂ ಆತನ ಪುನರುತ್ಥಾನದಲ್ಲಿ ಪಡಕೊಂಡವನಾಗಿ ನಿಜವಾಗಿ ಮೊದಲಿಗೆ ಇಸ್ರಾಯೇಲ್ಯರನ್ನು ಆಶೀರ್ವದಿಸುತ್ತಾನೆ. ಆದರೆ ಶಾರೀರಿಕ ಇಸ್ರಾಯೇಲ್ಯರನ್ನಲ್ಲ. ಯಾಕೆಂದರೆ, "ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರು ಇಸ್ರಾಯೇಲ್ಯರಲ್ಲ" (ರೋಮಾ. 9:6). ಬಾಧ್ಯಸ್ತನಾದ ಶಿಲೋವನು ಆತ್ಮಕ್ಕನುಸಾರವಾದ ಅಂದರೆ ಅಬ್ರಹಾಮನ ನಂಬಿಕೆ ಮತ್ತು ವಿಧೇಯತೆಯ ಮನೋವೃತ್ತಿಯನ್ನು ಹಂಚಿಕೊಂಡಿರುವ ಆತನ ಮಕ್ಕಳನ್ನು ಸ್ವಾಭಾವಿಕ ಸಂತಾನದಿಂದಲೂ, ಅನ್ಯಜನರಲ್ಲಿಯೂ ಹುಡುಕುತ್ತಾನೆ ಮತ್ತು ತನ್ನ ಹೆಸರಿಗೋಸ್ಕರ ಪ್ರಜೆಯಾಗಿ ಆರಿಸಿಕೊಳ್ಳುತ್ತಾನೆ (ಅ.ಕೃ. 15:14). ಇದಾದ ನಂತರ (ಆತನ ಆಯ್ಕೆಯ ಸಭೆಯು ಯಶಸ್ವಿಯಾದ ಮೇಲೆ – ಸುಗ್ಗಿಯಲ್ಲಿ ಅಥವಾ ಸುವಾರ್ತಾಯುಗದ ಅಂತ್ಯದಲ್ಲಿ, ಅನ್ಯಜನರ ಕಾಲದ ಅಂತ್ಯದಲ್ಲಿ) ಆತನು ತನ್ನ ದಯೆಯನ್ನು ಪುನಃ ತಿರುಗಿಸುತ್ತಾನೆ ಮತ್ತು ಹಾಳಾದ ಇಸ್ರಾಯೇಲನ್ನು ಮತ್ತೆ ತಿರುಗಿ ಕಟ್ಟುತ್ತಾನೆ, ಅಂತ್ಯದಲ್ಲಿ ಲೋಕದ ಎಲ್ಲಾ ಕುಟಂಬಗಳನ್ನು ಮಾನವನು ಊಹಿಸಿಕೊಳ್ಳುವುದಕ್ಕಿಂತ ಉತ್ತಮವಾಗಿ ನೆಲೆಗೊಳಿಸುತ್ತಾನೆ. ಈಗ ರಾಜದಂಡವನ್ನು ಹಿಡಿದಿರುವಾತನು, ಆಳುವ ಅಧಿಕಾರವುಳ್ಳಾತನು ಅನ್ಯಜನರ ಕಾಲದ ಮುಕ್ತಾಯದ ಸಮಯದಲ್ಲಿ ಕಿರೀಟವನ್ನು ಸಹ ಪಡಕೊಳ್ಳುತ್ತಾನೆ. "ರಾಜದಂಡವನ್ನು ಹಿಡಿಯತಕ್ಕವನು ಬರುವವರೆಗೆ ಆ ದಂಡವು ಯೆಹೂದದ ಕೈಯಿಂದ ತಪ್ಪುವುದಿಲ್ಲ, ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಅವನಿಗೆ ಅನ್ಯಜನಗಳೂ ವಿಧೇಯರಾಗುವರು" (ಆದಿ. 49:10). ರಾಜದಂಡ ಅಥವಾ ಶಿರೋನಾಮೆಯು ಭೂಲೋಕದಲ್ಲೂ, ಪರಲೋಕದಲ್ಲೂ ಎಲ್ಲಾ ಅಧಿಕಾರವನ್ನು ಆತನ ಪುನರುತ್ಥಾನದಲ್ಲಿ ನೀಡಲಾಯಿತು. ಆದರೆ ಆತನು ಹೆಚ್ಚಿನ ಅಧಿಕಾರವನ್ನು ಪಡಕೊಂಡು ತನ್ನ ಭವ್ಯವಾದ ಆಡಳಿತವನ್ನು ಪ್ರಾರಂಭಿಸುವ ಮೊದಲು ತಂದೆಯ ನಿಗಿದಿತ ಕಾಲಕ್ಕಾಗಿ, ಅನ್ಯ ಜನಗಳ ಕಾಲಮಿತಿಗಾಗಿ ಕಾಯುತ್ತಾನೆ (ಪ್ರಕಟನೆ 11: 17,18).

ಈ ಅನ್ಯಜನಗಳ ಕಾಲದ ದೀರ್ಘಾವಧಿ 2520 ವರ್ಷಗಳು ಮತ್ತು ಅದು ಕ್ರಿ.ಶ. 1914ರಲ್ಲಿ ಅಂತ್ಯವಾಗುತ್ತದೆ ಎಂಬ ಸಾಕ್ಷ್ಯವನ್ನು ಪರೀಕ್ಷಿಸಲು ನಾವು ಮುಂದಾಗುವಾಗ ಅದು ಪ್ರಾರಂಭವಾಗುವ ದಿನಾಂಕ ಕ್ರಿ.ಪೂ. 606 ಎಂದು ಈಗಾಗಲೇ ಕಂಡುಕೊಂಡಿದ್ದೇವೆ ಎಂದು ಮನಸ್ಸಿನಲ್ಲಿಟ್ಟುಕೊಳ್ಳೋಣ.

ನಾವು ಈ ಮಾಹಿತಿಯು ಅನೇಕ ಪದಗಳಿಂದ ತುಂಬಿರುತ್ತದೆ ಎಂದು ಕಂಡುಕೊಳ್ಳಲು ನಿರೀಕ್ಷಿಸಕೂಡದು. ಆ ರೀತಿ ಹೇಳಲ್ಪಟ್ಟಿದ್ದರೆ, ಅದು ತಕ್ಕ ಸಮಯದ ಮೊದಲೇ ತಿಳಿಯುತ್ತಿತ್ತು. ಅಂತ್ಯಕಾಲದವರೆಗೆ ಅದನ್ನು ಗುಟ್ಟಾಗಿಡುವ ರೀತಿಯಲ್ಲಿ ಅದು ನೀಡಲ್ಪಟ್ಟಿದೆ (ದಾನಿ. 12:4,9).

ಅನ್ಯಜನಗಳ ಕಾಲವು ನೆರವೇರುವವರೆಗೂ ಯೆರೂಸಲೇಮ್ ಅವರಿಂದ ತುಳಿಯಲ್ಪಡುತ್ತಲೇ ಇರುತ್ತದೆ ಎಂಬ ನಮ್ಮ ಕರ್ತನ ಮಾತುಗಳು ಅನ್ಯಜನರ ಪ್ರಾಬಲ್ಯದ ಒಂದು ಮಿತಿಯುಳ್ಳ ನಿಶ್ಚಿತ ಸಮಯವನ್ನು ಸೂಚಿಸುವುದಲ್ಲದೆ, ಅವುಗಳು ಆತ್ಮೀಕ ಮತ್ತು ಶಾರೀರಿಕ ಇಸ್ರಾಯೇಲ್ಯರು ಈ ಅನ್ಯಜನಗಳ ಅಧಿಕಾರಕ್ಕೆ ಒಳಗಾಗುವವರಾದರೂ, ಈ ಸಮಯವು ಹೇಗೋ ಈ ಲೋಕದ ಪಟ್ಟಣವು ಅಂದರೆ ಯೆರೂಸಲೇಮ್ ಇಸ್ರಾಯೇಲ್ಯರ ಐಹಿಕ ಮನೆಗೆ ಸಂಬಂಧಿಸಿದ ಮತ್ತು ಅಳತೆ ಮಾಡಲ್ಪಟ್ಟಿದೆ ಎಂಬ ಸಲಹೆ ನೀಡುವುದಾಗಿದೆ. ನಮ್ಮ ಕರ್ತನು ಉಲ್ಲೇಖಿಸುವಂತೆ ದೇವರು ಇಸ್ರಾಯೇಲಿನ ಚರಿತ್ರೆಗೆ ಸಂಬಂಧಿಸಿದಂತೆ ಈ ಸಮಯದ ನಿಖರವಾದ ಅಳತೆಯ ಬಗ್ಗೆ ಮುಂತಿಳಿಸಿದ್ದಾನೆಯೋ ಎಂಬ ಆಲೋಚನೆ ನಮಗುಂಟಾಗುತ್ತದಲ್ಲವೋ?. ಅದೂ ಹಾಗೆಯೇ ಆಗಿದೆ.

ಯಾಜಕಕಾಂಡದಲ್ಲಿ ನಾವು ಪ್ರಾಪಂಚಿಕ ನಡತೆಯುಳ್ಳವರಿಗಾಗಿ ದಾಖಲಾಗಿರುವ ಆಶೀರ್ವಾದ ಮತ್ತು ಶಾಪಗಳ ಬಗ್ಗೆ ಕಂಡುಕೊಳ್ಳುತ್ತೇವೆ. ಇಸ್ರಾಯೇಲ್ಯರು ನಿಷ್ಠಾವಂತಿಕೆಯಿಂದ ದೇವರಿಗೆ ವಿಧೇಯರಾಗುವಾಗ ಅವರು ಬೇರೆ ಜನಾಂಗಗಳಿಗಿಂತ ಹೆಚ್ಚಾದ ಆಶೀರ್ವಾದಗಳನ್ನು ಪಡಕೊಳ್ಳುತ್ತಾರೆ. ಇಲ್ಲವಾದಲ್ಲಿ ಕೆಲವೊಂದು ಕೇಡುಗಳಿಗೆ ಅವರು ತುತ್ತಾಗುತ್ತಾರೆ. ಈ ರೀತಿಯಾಗಿ ಅಂತಿಮ ನಿರ್ಣಯ ಹೇಳಲ್ಪಟ್ಟಿದೆ – "ನಾನು

ನಿಮ್ಮ ಮೇಲೆ ಉಗ್ರ ಕೋಪವನ್ನು ಮಾಡುವುದರಿಂದ ನೀವು ನಿಮ್ಮ ಶತ್ರುಗಳ ಎದುರಿನಿಂದ ಸೋತುಬೀಳುವಿರಿ; ನಿಮ್ಮ ವೈರಿಗಳು ನಿಮ್ಮನ್ನು ಆಳುವರು; ಯಾರೂ ಹಿಂದಟ್ಟದೆ ಇರುವಾಗಲೂ ನೀವು ಹೆದರಿ ಓಡುವಿರಿ. ಇಷ್ಟಾದರೂ ನೀವು ನನ್ನ ಮಾತಿಗೆ ಲಕ್ಷ್ಯ ಕೊಡದೆ ಹೋದರೆ ನಾನು ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ನಿಮ್ಮನ್ನು ಶಿಕ್ಷಿಸುವೆನು" (ಯಾಜಕ 26:17,18). "ನಾನು ನಿಮಗೆ ವಿರೋಧವಾಗಿ ನಡೆಯುವೆನು; ನಿಮ್ಮ ಪಾಪಗಳ ನಿಮಿತ್ತ ನಾನೇ ನಿಮ್ಮನ್ನು ಏಳರಷ್ಟಾಗಿ ಬಾಧಿಸುವೆನು" (ವಚನ 24). "ನಾನು ನಿಮಗೆ ವಿರೋಧವಾಗಿ ಕೋಪದಿಂದ ನಡೆಯುವವನಾಗಿ ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ಶಿಕ್ಷಿಸುವೆನು" (ವಚನ 28).

'ಏಳರಷ್ಟಾಗಿ' ಶಿಕ್ಷಿಸುವ ಈ ಬೆದರಿಕೆಯು ಇಲ್ಲಿ ಮೂರು ಸಾರಿ ಹೇಳಲ್ಪಟ್ಟಿದೆ. ಏಳರಷ್ಟು ಎಂಬುದರ ಮೊದಲು ಹೇಳಲ್ಪಟ್ಟಿರುವ ವಿವಿಧ ಶಿಕ್ಷೆಗಳು ಅಶ್ಶೂರ್ಯ, ಮೊವಾಬ್ಯ, ಮಿದ್ಯಾನ, ಫಿಲಿಷ್ಟಿಯರು ಮುಂತಾದವರಿಂದ ಉಂಟಾಗುವ ಸೆರೆತನಗಳನ್ನು ಉಲ್ಲೇಖಿಸುತ್ತವೆ. ಇವೆಲ್ಲವುಗಳಲ್ಲಿಯೂ ದೇವರ ಪಾಲನೆಯು ಅವರ ಮೇಲೆ ಮುಂದುವರೆದಿತ್ತು. ಅವರೊಂದಿಗಿನ ಆತನ ವರ್ತನೆಗಳೆಂದರೆ – ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ (ಯೇಶಾಯ 28:10). "ಇಸ್ರಾಯೇಲ್ಯರು ಯೆಹೋವನಿಗೆ ಮೊರೆಯಿಟ್ಟಾಗ ಆತನು ಅವರನ್ನು ಬಿಡಿಸುವುದಕ್ಕೋಸ್ಕರ ರಕ್ಷಕನನ್ನು ಎಬ್ಬಿಸಿದನು" (ನ್ಯಾಯ 3:9,15). ಅವರು ಯೆಹೋವನಿಗೆ ಮೊರೆಯಿಡಲು ಆತನು ಅವರನ್ನು ರಕ್ಷಿಸುವುದಕ್ಕೋಸ್ಕರ ಬೆನ್ಯಾಮೀನ್ ಕುಲದ ಗೇರನ ಮಗನಾದ ಯೆಹೂದನನ್ನು ಎಬ್ಬಿಸಿದನು (ನ್ಯಾಯ 3:9,15). ಆದರೆ ಈ ದಂಡನೆಗಳು ವಿಫಲವಾಗಿ, ಆತನು ಏಳರಷ್ಟು ಶಿಕ್ಷಿಸುವ ಬೆದರಿಕೆಯನ್ನು ಅನ್ವಯಿಸಿದನು. ಕಿರೀಟವು ಶಾಶ್ವತವಾಗಿ ತೆಗೆಯಲ್ಪಟ್ಟಿತು. ಇಸ್ರಾಯೇಲ್ಯರು ಮತ್ತು ಇಡೀ ಪ್ರಪಂಚವು ಏಳು ಸಾರಿ ಅನಾಗರೀಕ ಶಕ್ತಿಗಳಿಗೆ ವಶವಾಗಬೇಕಾಯಿತು. ಅದರಂತೆ ನೀವು ನನ್ನ ಮಾತಿಗೆ (ಹಿಂದಿನ ದಂಡನೆಗಳಿಗೆ) ಲಕ್ಷ್ಯ ಕೊಡದೆ ಹೋದರೆ ನಾನು ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ನಿಮ್ಮನ್ನು ಶಿಕ್ಷಿಸುವೆನು" ಎಂಬ ದೇವರ ಎಚ್ಚರಿಕೆಯ ಅನುಸಾರ ಅದು ಅವರನ್ನು ಪತನಗೊಳಿಸಿತು.

ಏಳು ಬಾರಿಯ (ಹೆಚ್ಚು ಅಥವಾ ಅಧಿಕವಾದ) ಏಳರಷ್ಟು ಎಂಬ ಬೆದರಿಕೆಯು ಈ ಎಲ್ಲಾ ದಂಡನೆಗಳು ಅವರನ್ನು ಶಾಶ್ವತವಾಗಿ ಸುಧಾರಿಸುವಲ್ಲಿ ಪುನಃ ಪುನಃ ವಿಫಲವಾದ ನಂತರ ಆ ಜನರ ಮೇಲೆ ಎರಗಿ ಬರಲಿರುವ ಅಂತಿಮವಾದ ಮತ್ತು ನಿರ್ಣಾಯಕ ಶಿಕ್ಷೆಯನ್ನೂ ಒಳಗೊಂಡಿದೆ ಎಂಬುದನ್ನು ಸೂಚಿಸುತ್ತದೆ. ಏಳರಷ್ಟು ಎಂಬ ಈ ಶಿಕ್ಷೆಯಲ್ಲಿ ಅವರನ್ನು ದೇವರ ಮುಂದೆ ದೀನರನ್ನಾಗಿ ಮಾಡುವ ವಿನ್ಯಾಸಗೊಂಡ ಪರಿಣಾಮಗಳಿದ್ದು ಅವರನ್ನು ಪುನಃ ದೇವರ ಆಶೀರ್ವಾದಗಳಿಗೆ ಸಿದ್ಧಮಾಡುವುದಾಗಿದೆ. ಆದುದರಿಂದ ಏಳರಷ್ಟು ಎಂಬುದು ಅನ್ಯಜನರು ಅವರನ್ನು ಆಳುವ ಕಾಲದ ವಿಸ್ತಾರತೆಯನ್ನು ಸೂಚಿಸುತ್ತದೆ. ಏಳರಷ್ಟು ಎಂಬ ಈ ಅವಧಿಯನ್ನು ನಮ್ಮ ಕರ್ತನ ಮಾತು ನಿಸ್ಸಂದೇಹವಾಗಿ "ಅನ್ಯಜನರ ಸಮಯ"ದ ಬಗ್ಗೆ ಅರ್ಥಸೂಚಿಸುತ್ತದೆ.

ಈ ಅಂತಿಮವಾದ ರಾಷ್ಟ್ರೀಯ ಏಳು ಪಟ್ಟು ಶಿಕ್ಷೆಗೆ ಎಡೆಮಾಡಿಕೊಡುವ ಕಡಿಮೆ ಪ್ರಮಾಣದ ದಾಸತ್ವ ಮತ್ತು ದಂಡನೆಗಳನ್ನು ಈಗಾಗಲೇ ಅವರ ಅಂತಿಮ ಅರಸನಾದ ಚಿದ್ಕೀಯನನ್ನು ತೆಗೆದಾಗ ನಾವು ಕಂಡಿದ್ದೇವೆ. ಅಲ್ಲಿಂದ ದಂಡನೆಯ ಅವಧಿಯು ಮುಂತಿಳಿಸಿದಂತೆ ಏಳರಷ್ಟು ಅಥವಾ 2520 ವರ್ಷಗಳವರೆಗೆ ಇತ್ತು.

ಸತ್ಯವೇದದಲ್ಲಿ ಕಾಲವೆಂಬುದು ವರ್ಷಗಳ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದ್ದು, ಈ ವರ್ಷವೆಂಬುದು ಅಕ್ಷರಶಃ ಅಥವಾ ಸಾಂಕೇತಿಕವಾಗಿರಬಹುದಾದರೂ ಯಾವುದೇ ಪ್ರವಾದನೆಯ ಸಮಯದಲ್ಲಿ ಅದು ಸೂಚಿಸಲ್ಪಟ್ಟಿದ್ದರೆ ಅದನ್ನು ಅಕ್ಷರಶಃ ಅಥವಾ ಸಾಂಕೇತಿಕವೆಂದು ತಿಳಿಯಲಾಗದು. ಪ್ರವಾದಿಗಳು ಯಾವ ಸಮಯ ಅಥವಾ ಸಮಯದ ರೀತಿ ಯಾವುದು (ಅಕ್ಷರಶಃವೋ ಅಥವಾ ಸಾಂಕೇತಿಕವೋ) ಎಂಬುದನ್ನು ಪರಿಶ್ರಮದಿಂದ ಹುಡುಕಿದರು, ಆದರೆ ಅದು ವ್ಯರ್ಥವಾಯಿತು. ಆತ್ಮನು ಇದನ್ನು ಸೂಚಿಸುತ್ತಾನೆ (1 ಪೇತ್ರ 1;11). ಪ್ರವಾದನೆಯಲ್ಲಿ ಉಪಯೋಗಿಸಿರುವ ಸಾಂಕೇತಿಕ ವರ್ಷವನ್ನು ಚಂದ್ರಮಾನ ವರ್ಷದ, (ಮೂವತ್ತು ದಿನಗಳ ಹನ್ನೆರಡು ತಿಂಗಳುಗಳ) ಆಧಾರದಲ್ಲಿ ಲೆಕ್ಕ ಮಾಡಲಾಗಿದೆ. ಪ್ರತಿ ದಿನವೂ ಒಂದು ವರ್ಷವನ್ನು ಪ್ರತಿನಿಧಿಸುತ್ತದೆ. ಇದರ ಫಲವಾಗಿ ಕಾಲ ಅಥವ ವರ್ಷ, ಅದು ಸಾಂಕೇತಿಕವಾದರೆ ಮುನ್ನೂರ ಅರವತ್ತು ಸಾಂಕೇತಿಕ ವರ್ಷವನ್ನು ಪ್ರತಿನಿಧಿಸುತ್ತದೆ ಮತ್ತು ಏಳರಷ್ಟು ಎಂಬುದು ಎರಡು ಸಾವಿರದ ಐನೂರ ಇಪ್ಪತ್ತು (7X360=2520) ಸಾಂಕೇತಿಕ ದಿನಗಳನ್ನು ಅಥವಾ ಅಕ್ಷರಶಃ 2520 ವರ್ಷಗಳನ್ನು ಪ್ರತಿನಿಧಿಸುತ್ತದೆ.

ಇಲ್ಲಿ ಸ್ವತಃ ಪ್ರಸ್ತುತಿಪಡಿಸುವ ಪ್ರಶ್ನೆ ಏನೆಂದರೆ, ಈ ಏಳರಷ್ಟು ಎಂಬುದು ಅಕ್ಷರಶಃವೋ? ಸಾಂಕೇತಿಕವೋ? ಇವುಗಳು ಏಳು ವರ್ಷಗಳನ್ನು ಅಥವಾ 2520 ವರ್ಷಗಳನ್ನು ಪ್ರತಿನಿಧಿಸುತ್ತದೆಯೋ? ಎಂಬುದು. ನಾವು ಅವುಗಳು ಸಾಂಕೇತಿಕ ಕಾಲಗಳು, 2520 ವರ್ಷಗಳು ಎಂದು ಉತ್ತರಿಸುತ್ತೇವೆ. ಅವುಗಳನ್ನು ಅಕ್ಷರಶಃ ಏಳು ವರ್ಷಗಳೆಂದು ಅರ್ಥೈಸಕೂಡದು. ಯಾಕೆಂದರೆ ಇಸ್ರಾಯೇಲ್ಯರು ಇನ್ನೂ ಹೆಚ್ಚಿನ ಅವಧಿಯ ಸೆರೆವಾಸಗಳನ್ನು ಅನುಭವಿಸಿದ್ದಾರೆ. ಉದಾಹರಣೆಗೆ, ಅವರು ಬಾಬೇಲಿನಲ್ಲಿ ಎಪ್ಪತ್ತು ವರ್ಷಗಳ ಸೆರೆವಾಸ

ಅನುಭವಿಸುವುದರೊಂದಿಗೆ ಮೆಸಪೊತಾನ್ಯದ ಅರಸನಿಗೆ ಎಂಟು ವರ್ಷಗಳವರೆಗೆ, (ನ್ಯಾಯ 3:8) ಮೊವಾಬ್ಯರ ಅರಸನಿಗೆ ಹದಿನೆಂಟು ವರ್ಷಗಳು (ನ್ಯಾಯ:3:14), ಅರಸನಾದ ಯಾಬೀನನಿಗೆ ಇಪ್ಪತ್ತು ವರ್ಷಗಳು (ನ್ಯಾಯ:4:2,3), ಫಿಲಿಪ್ಪಿಯರಿಗೆ ಒಂದು ಅವಧಿಯಲ್ಲಿ ಹದಿನೆಂಟು ವರ್ಷಗಳು ಮತ್ತೊಂದು ಅವಧಿಯಲ್ಲಿ ನಾಲ್ವತ್ತು ವರ್ಷಗಳು, (ನ್ಯಾಯ 10:7,8 ; 13:1) ದಾಸರಾಗಿದ್ದರು. ಈ ಎಲ್ಲಾ ಅವಧಿಗಳು ಏಳರಷ್ಟು ಕಾಲ ಅಥವ ವರ್ಷಗಳಿಗಿಂತ ಅಕ್ಷರಶಃವಾಗಿ ತುಂಬಾ ಹೆಚ್ಚಾಗಿವೆ. ಹೀಗಿದ್ದಾಗ್ಯೂ ಏಳು ವರ್ಷಗಳು ಎಂಬುದನ್ನು ಕಡೆಯ, ಹೆಚ್ಚುಕಾಲದ ಮತ್ತು ಅಂತಿಮ ಶಿಕ್ಷೆ ಎಂಬುದಾಗಿ ಹೇಳಲಾಗಿದ್ದು ಇಬ್ರಿಯ ಪದವನ್ನು ಯಾಜಕ 26:18, 21, 24, 28 ಇವುಗಳಲ್ಲಿ ಏಳರಷ್ಟು ಎಂಬುದಾಗಿ ಭಾಷಾಂತರಿಸಲ್ಪಟ್ಟಿದ್ದರೂ ಇದು ಸಾಂಕೇತಿಕ ಕಾಲ, ಅಕ್ಷರಶಃ ಕಾಲವಲ್ಲ ಎಂಬ ಅರ್ಥ ಕೊಡುತ್ತದೆ ಎಂಬುದನ್ನು ರುಜುವಾತುಪಡಿಸುತ್ತದೆ. ಇದು ದಾನಿಯೇಲ 4:16, 23, 25, 32ರಲ್ಲಿರುವುದೇ ಅನುವಾದವಾಗಿದೆ. ಇದರೊಂದಿಗೆ ಇದ್ದನ್ (iddan) ಎಂಬ ಪದವನ್ನು ಬಳಸಲಾಗಿದೆ. ಆದರೆ ಯಾಜಕಕಾಂಡದಲ್ಲಿ ಇದನ್ನು ಅರ್ಥಮಾಡಿಕೊಳ್ಳುವಂತೆ ಬಿಟ್ಟಿದೆ. ವಿಶಿಷ್ಟವಾಗಿಯೂ ಸಹ, ಪ್ರತಿಯೊಂದು ಪ್ರಕರಣದಲ್ಲಿಯೂ ಇದು ನಾಲ್ಕು ಬಾರಿ ಪುನರಾವರ್ತನೆಗೊಂಡಿದೆ. ನೆಬೂಕದ್ನೆಚ್ಚರನ ಪ್ರಕರಣದಲ್ಲಿ ಅವುಗಳು ಅಕ್ಷರಶಃ ವರ್ಷಗಳಾಗಿದ್ದವು. ನೆಬೂಕದ್ನೆಚ್ಚರ ಮತ್ತು ಆತನ ಏಳರಷ್ಟು ಎಂಬುದು ಒಂದು ಮಾದರಿಯಾಗಿದೆ ಎಂಬುದನ್ನು ನಾವು ಇನ್ನೂ ನೋಡುತ್ತೇವೆ.

ನೆಬೂಕದ್ನೆಚ್ಚರನ ಪದಚ್ಯುತಿಯ ಏಳರಷ್ಟರ (ದಾನಿ. 4:16, 23–26) ಅಕ್ಷರಶಃವಾದ ಏಳು ವರ್ಷಗಳು ಎಂದು ಸಾಬೀತಾಗಿದೆ. ಇದು ಆ ರೀತಿಯಾಗಿ ತುಂಬಿದಾಗ ಅದರಂತೆ ಅಧಿಕಾರದಲ್ಲಿರುವವರಿಂದ ಇಸ್ರಾಯೇಲ್ಯರ ಮತ್ತು ಪ್ರಪಂಚದ ಕಿರುಕುಳವು ಏಳರಷ್ಟು ಸಾಂಕೇತಿಕ ಕಾಲ – 2520 ಅಕ್ಷರಶಃ ಕಾಲವೆಂದು ರುಜುವಾತಾಗಿದೆ. ಈ ಅವಧಿಗೆ ಇನ್ನೂ ಇಪ್ಪತ್ತಾರು ವರುಷಗಳು ತುಂಬಬೇಕಾಗಿದೆ. ಪಾರುಪತ್ಯಗಳು ಎಲ್ಲಾ ಕಡೆಗಳಲ್ಲಿ ಕಾರ್ಯನಿರತವಾಗಿದ್ದು ಅನ್ಯಜನರ ಪ್ರಭುತ್ವವನ್ನು ಅಂತ್ಯಗೊಳಿಸಲು ಮತ್ತು ಇಸ್ರಾಯೇಲ್ಯರಿಗೆ ಮತ್ತು ನರಳುವ ಎಲ್ಲಾ ಸೃಷ್ಟಿಗೆ ನಿರಂತರ ನೀತಿಯನ್ನೂ ಮತ್ತು ನೂತನ ಒಡಂಬಡಿಕೆಯ ಎಲ್ಲಾ ಆಶೀರ್ವಾದಗಳನ್ನೂ ತರುವಂತೆ ಸೂಚಿಸುತ್ತಿವೆ.

## ಇಸ್ರಾಯೇಲ್ಯರ 'ಏಳರಷ್ಟು' ಎಂಬುದರ ಅಂತ್ಯ
## The End of Israel's Seven Times

ಈ ದೀರ್ಘವಾದ (ಏಳರಷ್ಟು, 2520 ವರ್ಷಗಳು) ಶಿಕ್ಷಾ ವರ್ಷಗಳು ಅನ್ಯಜನರ ಪ್ರಭುತ್ವದ ಅವಧಿಯಾಗಿದೆ. ನಾವೀಗಾಗಲೇ ಕಂಡುಕೊಂಡಂತೆ, ಅನ್ಯಜನರ ಕಾಲವು ಕ್ರಿ.ಪೂ. 606 ರಲ್ಲಿ ಪ್ರಾರಂಭವಾಯಿತು ಮತ್ತು ಇದು 2520 ವರ್ಷಗಳು ಮುಂದುವರೆಯಬೇಕಾಗಿದ್ದು ಕ್ರಿ.ಶ. 1914 ರಲ್ಲಿ ಮುಕ್ತಾಯಗೊಳ್ಳುತ್ತದೆ (2520–606 = 1914). ಅದೇ ಅಧ್ಯಾಯದಲ್ಲಿ ಆಶೀರ್ವಾದವು ಸಹಾ ದಾಖಲೆಗೊಂಡಿದೆ (ಯಾಜಕ 26:44,45) ಮತ್ತು ಇದು ನೇರವೇರುವುದು. ದೇವರು ಇಸ್ರಾಯೇಲ್ಯರ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ನೆರವೇರಿಸುವನು – (ರೋಮಾ. 11:25–27)

ಇದನ್ನು ಕೆಲವರಿಗೆ ಈ ರೀತಿಯಾಗಿ ಸ್ಪಷ್ಟವಾಗಿ ತೋರಿಸಬಹುದು :–

| | |
|---|---|
| ಇಸ್ರಾಯೇಲ್ಯರ ದಂಡನೆಯ 'ಏಳರಷ್ಟು ವರ್ಷಗಳು' | – 2520 ವರ್ಷಗಳು |
| ಆ ಅವಧಿಯ ಅಧಿಕಾರದ ಗುತ್ತಿಗೆಯನ್ನು ಅನ್ಯಜನರಿಗೆ ನೀಡಿದಾಗ ಪ್ರಾರಂಭವಾಯಿತು. ಇದನ್ನು ನಾವು ಕ್ರಿ.ಪೂ. 606 ಎಂದು ತೋರಿಸಿದ್ದೇವೆ | – 600 ವರ್ಷಗಳು |
| ಇದರ ಪರಿಣಾಮವಾಗಿ ಕ್ರಿ.ಶ.01ರಲ್ಲಿ, ಅದರ ಅವಧಿಯು ದಾಟಿತು ಮತ್ತು ಉಳಿದವು ಕ್ರಿ.ಶ. ದಿನಾಂಕ ಸೂಚಿಸುತ್ತದೆ | – 1914 ವರ್ಷಗಳು |

ಒಂದು ದಿನಕ್ಕೆ ಒಂದು ವರ್ಷ ಎಂಬ ಸತ್ಯವೇದದಲ್ಲಿ ಉಪಯೋಗಿಸಿರುವುದು ಸಾಂಕೇತಿಕವಾದ ಪ್ರವಾದನೆ ಯಾಗಿದೆ. ಆ ರೀತಿಯಾಗಿ ನೆರವೇರಿದ ಸಂಗತಿಗಳನ್ನು ನಾವು ಹೇಳುವವರಾಗಿದ್ದೇವೆ :– (a) ಸಾಂಕೇತಿಕ ಇಸ್ರಾಯೇಲ್ಯರು ಅರಣ್ಯದಲ್ಲಿ ನಾಲ್ವತ್ತು ವರ್ಷಗಳ ಕಾಲ ಅಲೆದಾಡಿದ ಮಾದರಿಯಾಗಿ ಗೂಢಾಚಾರರು ನಾಲ್ವತ್ತು ದಿನಗಳು ಕಾನಾನನ್ನು ಹುಡುಕಿಕೊಂಡು ಅಲೆದಾಡ ಬೇಕಾಯಿತು (ಅರಣ್ಯ 14:33,34), (b) ದೇವರು ಇಸ್ರಾಯೇಲ್ಯರಿಗೆ ದುರ್ಗತಿಯ ಕಾಲವನ್ನು ಯೆಹೆಜ್ಕೇಲನ ಮೂಲಕ ಪ್ರಕಟಿಸುವಾಗ ಆ ಪ್ರವಾದಿಯು ಅದನ್ನು ಸಾಂಕೇತಿಕವಾಗಿ "ನಾನು ನಿಮಗಾಗಿ ಪ್ರತಿಯೊಂದು ದಿನವನ್ನು ಒಂದು ವರ್ಷವನ್ನಾಗಿ ಮಾಡುವೆನು" ಎಂದು ಹೇಳುವಂತೆ ಮಾಡಿದನು (ಯೆಹೆಜ್ಕೇಲ 4:1–8),

(c) ಗಮನಾರ್ಹವಾದ ಮತ್ತು ಈಗಾಗಲೇ ನೆರವೇರಿರುವ ದಾನಿಯೇಲನ ಪ್ರವಾದನೆಯಲ್ಲಿ (ದಾನಿ 9:24–27) ಮತ್ತು ಅದರ ಮುಂಚಿನ ಅಧ್ಯಾಯದಲ್ಲಿ ನಮ್ಮ ಕರ್ತನ ಅಭಿಷೇಕದ ಸಮಯವು ಮತ್ತು ಇಸ್ರಾಯೇಲಿನ ಮೇಲಿನ ಏಳು ವರ್ಷಗಳ ಕೃಪಾಕಾಲವು ಸಹ ತಿಳಿಸಲ್ಪಟ್ಟಿದೆ. ಈ ಮಧ್ಯದಲ್ಲಿ ಮೆಸ್ಸೀಯನು ಛೇದಿಸಲ್ಪಡುವ ಸಾಂಕೇತಿಕ ಕಾಲವನ್ನು ಉಪಯೋಗಿಸಲಾಗಿದೆ; ಎಪ್ಪತ್ತು ಸಾಂಕೇತಿಕ ದಿನಗಳ ಪ್ರತಿದಿನವೂ ಒಂದು ವರ್ಷವನ್ನು ಪ್ರತಿನಿಧಿಸುತ್ತದೆ ಮತ್ತು ಹಾಗೆಯೇ ನೆರವೇರಿದೆ. (d) ಪುನಃ ದಾನಿ 7:25 ಮತ್ತು 12:7ರಲ್ಲಿ ಪೋಪರ ಆಡಳಿತ ಕಾಲದ ವೈಭವದ ಪ್ರವಾದನೆಯುನ್ನು ಮೂರುವರೆಯಷ್ಟು ಎಂದು ನೀಡಲಾಗಿದೆ ಮತ್ತು ಇದನ್ನು ನಾವು (ಈ ಸಂಪುಟದಲ್ಲಿ ತೋರಿಸಲಾಗಿದೆ) ಇದು 360 X 3½ =1260 ವರ್ಷಗಳಲ್ಲಿ ನೆರವೇರುವುದನ್ನು ಇದೇ ಕಾಲಾವಧಿಯನ್ನು ಪ್ರಕಟನೆ ಪುಸ್ತಕದಲ್ಲಿಯೂ ನೀಡಲಾಗಿದೆ. ಅಧ್ಯಾಯ 12:14ರಲ್ಲಿ ಅದನ್ನು ಮೂರುವರೆಯುಷ್ಟು (360 X 3½ = 1260) ಎಂದು ಕರೆಯಲಾಗಿದೆ. ಅಧ್ಯಾಯ 13:5 ರಲ್ಲಿ ಅದನ್ನು ನಾಲ್ವತ್ತೆರಡು ತಿಂಗಳುಗಳು ಎನ್ನಲಾಗಿದೆ (30X42 = 1260); ಮತ್ತು ಅಧ್ಯಾಯ 12:6 ರಲ್ಲಿ ಅದನ್ನು ಒಂದು ಸಾವಿರದ ಇನ್ನೂರ ಅರವತ್ತು ದಿನಗಳು ಎಂದು ಕರೆಯಲಾಗಿದೆ. ಈ ಪ್ರವಾದನೆಗಳ ನೆರವೇರಿಕೆಯನ್ನು ಇನ್ನು ಮುಂದೆ ಪರೀಕ್ಷಿಸಲಾಗುವುದು. ಈಗ ಕಾಲ (Time) ಎಂಬ ಪದದ ಉಪಯೋಗವನ್ನು ಗಮನಿಸಿರುವುದು ತೃಪ್ತಿಕರವಾಗಿದೆ. ಎಲ್ಲಿಯಾದರೂ ಅದು ಆ ಪದದ ಪ್ರಸ್ತುತ ಉಪಯೋಗವನ್ನು ಒಪ್ಪಿಕೊಳ್ಳುತ್ತದೆ, ಸಾಂಕೇತಿಕ ಪ್ರವಾದನೆಯಲ್ಲಿ ಸಮಯವು ಮುನ್ನೂರ ಅರವತ್ತು ವರ್ಷಗಳಾಗಿದೆ. ಮತ್ತು ಅಪೋಸ್ತಲ ಸಭೆಯ ಜಯಶೀಲತೆಯನ್ನು ಅಳತೆಮಾಡುವಂತೆ ಅನ್ವಯಿಸಲಾದ ಮೂರುವರೆಯಷ್ಟು ಎಂಬುದು 1260 ವರ್ಷಗಳಲ್ಲಿ ನೆರವೇರಿದೆ ಮತ್ತು ಇದನ್ನು ಅನ್ಯಜನಾಂಗದ ಪ್ರಭುತ್ವದ ಏಳರಷ್ಟು ಎಂದು ಎಣಿಕೆಮಾಡಲಾಗಿದೆ (360X7=2520) ಮತ್ತು ಅದರ ಅಂತ್ಯವು ಕ್ರಿ.ಶ. 1914 ಎಂದು ರುಜುವಾತಾಗಿದೆ. ಮೂರುವರೆಯಷ್ಟು ಎಂಬುದು 1260 ದಿನಗಳು (ವರ್ಷಗಳು) ಎಂದಾದರೆ ಏಳರಷ್ಟು ಎಂಬುದು ಕೇವಲ ಅದರ ಎರಡು ಪಟ್ಟು ಅಂದರೆ 2520 ವರ್ಷಗಳಾಗುತ್ತದೆ.

ಇಸ್ರಾಯೇಲ್‌ನ ಏಳರಷ್ಟು ಅಕ್ಷರಶಃವಾದ ಕಾಲವನ್ನು (ಏಳು ವರ್ಷಗಳು) ನೆರವೇರಿದ್ದರೆ ಅಂದರೆ ಅವರ ಪಿತೃಗಳೊಡನೆ ದೇವರು ಮಾಡಿಕೊಂಡ ಷರತ್ತಿಲ್ಲದ ಒಡಂಬಡಿಕೆಯನ್ನು ಅನುಸರಿಸುತ್ತಿದ್ದರೆ ಅವರ ಆಶೀರ್ವಾದವು ಖಚಿತವಾಗುತ್ತಿತ್ತು (ಯಾಜಕ 26:45; ರೋಮಾ. 11:28 ನೋಡಿರಿ). ಆದರೆ ಇಲ್ಲಿ ಹಾಗಾಗಲಿಲ್ಲ. ಅವರು ಇದುವರೆಗೂ ಆ ವಾಗ್ದತ್ತ ಆಶೀರ್ವಾದಗಳನ್ನು ಅನುಭವಿಸಲಿಲ್ಲ. ಆಯ್ಕೆಗೊಂಡ ಸುವಾರ್ತಾ ಸಭೆಯು ಅಂದರೆ ಕ್ರಿಸ್ತನ ದೇಹವು ಒಡಂಬಡಿಕೆಯನ್ನು ಕಾರ್ಯಗತಗೊಳಿಸುವ ಅವರ ವಿಮೋಚಕನಿಂದ ಸಮರ್ಪಕವಾಗುವವರೆಗೆ ಆ ಒಡಂಬಡಿಕೆಯು ನೆರವೇರುವುದಿಲ್ಲ ಎಂದು ಪೌಲನು ಹೇಳುತ್ತಾನೆ (ರೋಮಾ. 11:25,26) – "ಯೆಹೋವನು ಇಂತೆನ್ನುತ್ತಾನೆ. ಆ ದಿನಗಳು ಬಂದ ಮೇಲೆ ನಾನು ಇಸ್ರಾಯೇಲ್ ವಂಶದವರೊಡನೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು – ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು. ಅವರ ಹೃದಯದೊಳಗೆ ಅದನ್ನು ಬರೆಯುವೆನು. ನಾನು ಅವರಿಗೆ ದೇವರಾಗಿರುವೆನು; ಅವರು ನನಗೆ ಪ್ರಜೆಯಾಗಿರುವರು. ನೆರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು – ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವುದಿಲ್ಲ. ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧಗಳನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ. ಇದು ಯೆಹೋವನ ನುಡಿ" – ಯೆರೆಮೀಯ 31:33,34.

"ಇದು ಯೆಹೋವನ ನುಡಿ. ತಂದೆಗಳು ಹುಳಿದ್ರಾಕ್ಷೆಯನ್ನು ತಿಂದರು. ಮಕ್ಕಳ ಹಲ್ಲುಗಳು ಜಳಿತುಹೋಗಿವೆ ಎಂದು ಆ ಕಾಲದಲ್ಲಿ ಜನರು ಮತ್ತೆ ಅನ್ನರು. ಸಾಯತಕ್ಕವನು ತನ್ನ ತನ್ನ ದೋಷದಿಂದ ಸಾಯುವನು. ಹುಳಿದ್ರಾಕ್ಷೆಯನ್ನು ತಿನ್ನುವವನ ಹಲ್ಲುಗಳೇ ಜಳಿತುಹೋಗುವುವು" (ಯೆರೆ. 31:29,30). "ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು – ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡುವೆನು. ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ ಎಂಬುದಾಗಿ ಹೇಳಿದ ಮೇಲೆ ಇನ್ನು – ಅವರ ಪಾಪಗಳನ್ನೂ, ಅವರ ದುಷ್ಕೃತ್ಯಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ" – ಇಬ್ರಿಯ 10:16,17.

ಬಾಬೇಲಿನಲ್ಲಿ ಎಪ್ಪತ್ತು ವರ್ಷಗಳು ಕಳೆದ ನಂತರದ ಪುನಃಸ್ಥಾಪನೆಯು ಅನ್ಯಜನಗಳ ಆಡಳಿತದಿಂದ ಮಾಡಿದ ಬಿಡುಗಡೆ ಅಲ್ಲ; ಯಾಕೆಂದರೆ ಅದರ ನಂತರವೂ ಅವರು ಅಧೀನ ಜನರು. ಆ ಪುನಃಸ್ಥಾಪನೆಯು ಮೆಸ್ಸೀಯನನ್ನು ಪ್ರಸ್ತುತಿಪಡಿಸಲು ಜನರನ್ನು ಒಟ್ಟಾಗಿ ಸೇರಿಸಿ ಇಟ್ಟುಕೊಳ್ಳಲು ಉಪಯೋಗವಾಯಿತು. ಅನ್ಯಜನಗಳ ಆಡಳಿತವು ಅವರನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿರುವಾಗಲೇ, ಮತ್ತು ಆ ಸತ್ಯದ ದೃಷ್ಟಿಯಲ್ಲಿ ಅನ್ಯಜನರ ಕಾಲವು ಪರಿಪೂರ್ಣವಾಗುವವರೆಗೂ ಅಥವಾ ನೆರವೇರುವ

ವರೆಗೂ ಯೆರೂಸಲೇಮು ಅನ್ಯಜನಗಳಿಂದ ತುಳಿದಾಡಲ್ಪಡುವುದು ಎಂದು ಕರ್ತನು ಸ್ಪಷ್ಟವಾಗಿ ತಿಳಿಸಿದನು. ಅನ್ಯಜನಗಳ ಪ್ರಭುತ್ವದಲ್ಲಿ ಇಸ್ರಾಯೇಲ್ಯರ ದಂಡನೆಯು ಕ್ರಿ.ಪೂ. 606ರಿಂದ ಮುಂದುವರೆಯುತ್ತಿದೆ ಎಂಬ ಸತ್ಯಕ್ಕೆ ಇಡೀ ಲೋಕವೇ ಸಾಕ್ಷಿಯಾಗಿರುವುದು. ಅದು ಇನ್ನೂ ಮುಂದುವರೆಯುತ್ತಿದ್ದು ಅವರ ರಾಷ್ಟ್ರೀಯ ಪುನರ್‌ಸಂಘಟನೆಯು ಏಳರಷ್ಟು ಎಂಬುದರ ಮಿತಿಯಾದ, (2520 ವರ್ಷಗಳು) ಕ್ರಿ.ಶ. 1914 ರ ಮುಂಚೆಯೇ ಆಗುತ್ತದೆ ಎಂಬುದನ್ನು ನಿರೀಕ್ಷಿಸಲು ಕಾರಣವೇ ಇಲ್ಲ. ಆದರೆ ಅವರ ರಾಷ್ಟ್ರೀಯ ದಂಡನೆಯ ಈ ದೀರ್ಘಾವಧಿಯು ಅಂತ್ಯಕ್ಕೆ ಸಮೀಪಿಸುತ್ತಿದೆ. ನಾವು ಗುರುತಿಸಲ್ಪಡಬಹುದಾದ ಸೂಚನೆಗಳೇನೆಂದರೆ ಬರಡಾದ ಅಂಜೂರದಮರವು ಸಧ್ಯದಲ್ಲೇ ಚಿಗುರಲಿರುವುದು*, ಕೆಡುಕಿನ ನಿರ್ಜೀವ ಕಾಲದ (winter) ಅವಧಿಯು ಮುಕ್ತಾಯವಾಗಲಿದೆ ಹಾಗೂ ಮಿಲಿಯಾಂತರದ ಉನ್ನತ ದೆಸೆಯು (ವಸಂತ ಕಾಲವು) (summer) ಸಮೀಪಿಸುತ್ತಿದೆ. ಮತ್ತು ಅದು ಅವರಿಗೆ ಅವರ ಬಾಧ್ಯತೆಯನ್ನು ರಾಷ್ಟ್ರೀಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಒದಗಿಸಿಕೊಡಲಿದೆ ಎಂಬುದನ್ನು ತೋರಿಸಲಾಗುತ್ತಿದೆ. ಈಗ ಇಸ್ರಾಯೇಲ್ಯರ ಸ್ವದೇಶ ಹಿಂತಿರುಗುವಿಕೆಗೆ ಮಹಾ ಸಿದ್ಧತೆಗಳೂ ಮತ್ತು ನಿರೀಕ್ಷೆಗಳೂ ಈ ಸತ್ಯವೇದದ ಬೋಧನೆಗೆ ಸ್ವತಃ ಸವಿಸ್ತಾರವಾದ ಸಮರ್ಥನೀಯ ಸಾಕ್ಷಿಯಾಗಿದೆ. ಅಂಥಾಃ ಘಟನೆಯ ಮಹತ್ವಕ್ಕೆ ಒಂದನೇ ಸಂಪುಟದ ಪುಟ 286–298 ನೋಡಿರಿ.

## ಪುರಾವೆಯ ಮತ್ತೊಂದು ಸಾಲು
## Another Line of Testimony

ಅನ್ಯಜನಗಳ ಕಾಲದ ಮತ್ತೊಂದು ದೃಷ್ಟಿಕೋನವು ನಮಗೆ ದಾನಿಯೇಲ ಗ್ರಂಥದ ನಾಲ್ಕನೆಯ ಅಧ್ಯಾಯದಲ್ಲಿ ದೊರೆಯುತ್ತದೆ. ಇಲ್ಲಿ ಇಡೀ ಭೂಲೋಕದ ಮೇಲೆ ಮಾನವನ ಮೂಲ ಪ್ರಭುತ್ವ, ಅದರ ತೆಗೆದುಹಾಕುವಿಕೆ ಮತ್ತು ಅದರ ಪುನರ್‌ವಶದ ನಿಶ್ಚಯತ್ವ, ಅನ್ಯಜನಗಳ ಕಾಲದ ನಂತರ ಪ್ರಾರಂಭವಾಗುವಿಕೆ ಇವುಗಳು ನೆಬೂಕದ್ನೆಚ್ಚರನ ಕನಸಿನಲ್ಲಿ ಮತ್ತು ಅದರ ಬಗ್ಗೆ ದಾನಿಯೇಲನು ನೀಡಿದ ಅರ್ಥವಿವರಣೆಯಲ್ಲಿ ಪ್ರಬಲವಾಗಿ ವಿಶದಗೊಳಿಸಲಾಗಿದೆ.

ನೆಬೂಕದ್ನೆಚ್ಚರನು ಆ ಕನಸಿನ ಬಗ್ಗೆ ದಾನಿಯೇಲನಿಗೆ ಹೇಳಿದ್ದೇನೆಂದರೆ – "ಇಗೋ ಲೋಕದ ನಡುವೆ ಬಹು ಎತ್ತರವಾದ ಒಂದು ವೃಕ್ಷವನ್ನು ಕಂಡೆನು. ಆ ವೃಕ್ಷವು ಬಲಗೊಂಡಿತ್ತು. ಅದರ ತುದಿಯು ಆಕಾಶವನ್ನು ಮುಟ್ಟಿತ್ತು. ಅದು ಭೂಲೋಕದ ಕಟ್ಟಕಡೆಗೂ ಕಾಣಿಸುತ್ತಿತ್ತು. ಅದರ ಎಲೆಗಳು ಅಂದ, ಹಣ್ಣುಗಳು ಬಹಳ, ಅದರಿಂದ ಎಲ್ಲಕ್ಕೂ ಆಹಾರ, ನೆರಳೂ ಭೂಜಂತುಗಳಿಗೆ ಆಶ್ರಯ, ಕೊಂಬೆಗಳು ಆಕಾಶಪಕ್ಷಿಗಳಿಗೆ ನೆಲೆ, ಅದು ಸಕಲಜೀವಿಗಳಿಗೂ ಜೀವನ. ನಾನು ಹಾಸಿಗೆಯ ಮೇಲೆ ಮಲಗಿದ್ದಾಗ ನನ್ನ ಮನಸ್ಸಿಗೆ ಬಿದ್ದ ಕನಸಿನಲ್ಲಿ ಅನಿಮಿಷನಾದ (watcher) ದೇವದೂತನು ಆಕಾಶದಿಂದಿಳಿದು ಗಟ್ಟಿಯಾಗಿ ಕೂಗಿ – ವೃಕ್ಷವನ್ನು ಕಡಿಯಿರಿ, ಕೊಂಬೆಗಳನ್ನು ಕತ್ತರಿಸಿರಿ, ಎಲೆಗಳನ್ನು ಉದುರಿಸಿರಿ, ಹಣ್ಣುಗಳನ್ನು ಚೆಲ್ಲಿರಿ, ಮೃಗಗಳು ನೆರಳನ್ನು ಬಿಟ್ಟುಬಿಡಲಿ, ಪಕ್ಷಿಗಳು ರೆಂಬೆಯನ್ನು ತೊರೆದುಹೋಗಲಿ! ಆದರೆ ಬುಡದ ಮೋಟನ್ನು ನೆಲದಲ್ಲಿ ಉಳಿಸಿ ಕಬ್ಬಿಣ ತಾಮ್ರಗಳ ಪಟ್ಟಿಯನ್ನು ಅದಕ್ಕೆ ಬಿಗಿಯಿರಿ; ಅಡವಿಯ ಹುಲ್ಲು ಅದರ ಸುತ್ತ ಬೆಳೆದಿರಲಿ, ಆಕಾಶದ ಇಬ್ಬನಿಯು ಅದನ್ನು ತೋಯಿಸಲಿ. ಭೂಮಿಯ ಹುಲ್ಲು ಮೃಗಗಳಿಗೆ ಗತಿಯಾದಂತೆ ಅದಕ್ಕೆ ಗತಿಯಾಗಲಿ; ಅದಕ್ಕೆ ಮಾನುಷ ಹೃದಯವು ಹೋಗಿ ಮೃಗದ ಹೃದಯವು ಬರಲಿ; ಹೀಗೆ ಅದಕ್ಕೆ ಏಳು ವರ್ಷ ಕಳೆಯಲಿ. ಇದು ಅನಿಮಿಷರ ತೀರ್ಮಾನ, ದೇವರ ತೀರ್ಪು; ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದರ ಆಳಿಕೆಯನ್ನು ತನಗೆ ಬೇಕಾದವರಿಗೆ ಒಪ್ಪಿಸಿ ಕನಿಷ್ಠರನ್ನೂ ಅದರ ಮೇಲೆ ನೇಮಿಸುತ್ತಾನೆಂಬುದು ಜೀವಂತರಿಗೆ ತಿಳಿದು ಬರಬೇಕೆಂಬುದೇ ಈ ತೀರ್ಮಾನವಾಯಿತು ಎಂದು ಸಾರಿದನು, ರಾಜನಾದ ನೆಬೂಕದ್ನೆಚ್ಚರನೆಂಬ ನಾನು ಈ ಕನಸನ್ನು ಕಂಡೆನು" – ದಾನಿ. 4: 10–18.

ಈ ಅಪೂರ್ವವಾದ ವೃಕ್ಷವು ತನ್ನೆಲ್ಲಾ ಸೌಂದರ್ಯ ಮತ್ತು ವೈಭವದಲ್ಲಿರುವಾಗ ಈ ಲೋಕದ ಮೊಟ್ಟಮೊದಲ ಪ್ರಭುತ್ವವನ್ನು ಜನಾಂಗಗಳ ಒಡೆಯನೂ ಪ್ರತಿನಿಧಿಯೂ ಆದ ಆದಾಮನಿಗೆ ನೀಡುವುದನ್ನು ಪ್ರತಿನಿಧಿಸುವುದಾಗಿತ್ತು. ಆತನಿಗೆ ದೇವರು – "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು" (ಆದಿ. 1:28). ಮಾನವನ ಮೂಲ ವೈಭವ ಮತ್ತು ಆತನಿಗೆ ವಹಿಸಿಕೊಟ್ಟ ಅಧಿಕಾರ ಇವುಗಳು ನಿಜವಾಗಿಯೂ ಉದಾತ್ತವಾದುದು ಮತ್ತು ಇಡೀ ಲೋಕದಲ್ಲಿರುವುದರ ಮೇಲೆ ಇರುವಂತಾದ್ದು ಆಗಿದ್ದು ಅದರಲ್ಲಿ ಜೀವಿಸುವ ಎಲ್ಲಾ ಜೀವಿಗಳನ್ನೂ ಆಶೀರ್ವದಿಸುತ್ತಾ, ಅವುಗಳಿಗೆ ಉಣಬಡಿಸಿ ಅವುಗಳನ್ನು ಸಂರಕ್ಷಣೆ ಮಾಡುತ್ತಾ ಅವುಗಳಿಗೆ ಆಶ್ರಯವನ್ನು ಒದಗಿಸುವಂಥಾದ್ದು. ಆದರೆ ಪಾಪವು ಲೋಕದೊಳಕ್ಕೆ

* ಅಂಜೂರಮರ ಚಿಗುರುವುದು ಅಂದರೆ; ಇಸ್ರಾಯೇಲ್ ದೇಶವು ಈಗಾಗಲೇ ಚಿಗುರಿದ್ದಾಯಿತು, 1948ರಲ್ಲಿ ತಮ್ಮ ಸ್ವದೇಶಕ್ಕೆ ಹಿಂದಿರುಗಿ ಸ್ವತಂತ್ರ ದೇಶವಾಯಿತು (–ಅನುವಾದಕ).

ಪ್ರವೇಶಿಸಿದಾಗ ಆಜ್ಞೆಯು ಆ ವೃಕ್ಷವನ್ನು ಕಡಿದು ನೆಲಕ್ಕುರುಳಿಸುವಂತೆ ಮಾಡಿತು. ಮಾನವನ ಸೌಂದರ್ಯ, ವೈಭವ ಮತ್ತು ಅಧಿಕಾರವನ್ನು ಕಸಿದುಕೊಳ್ಳಲಾಯಿತು. ಕೆಳಮಟ್ಟದ ಸೃಷ್ಟಿಗಳಿಗೆ ಆತನ ಪ್ರಭಾವದ ಅಡಿಯಲ್ಲಿ ಆಶ್ರಯವೂ ಮತ್ತು ಆಶೀರ್ವಾದವೂ ಇಲ್ಲವಾಯಿತು. ಮರಣವು ವೃಕ್ಷವನ್ನು ಕೆಳಗುರುಳಿಸಿತು, ಅದರ ಹಣ್ಣುಗಳೂ, ಎಲೆಗಳ ಗೊಂಚಲೂ ಚೆಲ್ಲಾಪಿಲ್ಲಿಯಾಯಿತು ಮತ್ತು ಕೆಳಮಟ್ಟದ ಜೀವಿಗಳನ್ನು ಅದರ ಒಡೆಯನೂ ಪೋಷಕನೂ ಇಲ್ಲದಂತೆ ಬಿಟ್ಟುಬಿಡಲಾಯಿತು.

ಇದುವರೆಗೆ ಮಾನವನಿಗೆ ಇದ್ದ ಎಲ್ಲಾ ಅಧಿಕಾರವನ್ನು, ಪ್ರಭುತ್ವವನ್ನು ಮರಳಿಪಡೆದುಕೊಳ್ಳುವ ಕುರಿತಾದ ಆತನ ಚಿಂತೆಯು ನಿರಾಶಾದಾಯಕವಾಗಿ ಮುಗಿದುಹೋಗಿತ್ತು. ಆದರೆ ದೇವರ ದೃಷ್ಟಿಯಲ್ಲಿ ಅದು ಹಾಗಾಗಿರಲಿಲ್ಲ. ಆತನ ಯೋಜನೆಯಿಂದ ಹೊರಹೊಮ್ಮಿದ ಪ್ರಭುತ್ವವು ಅದು ಆತನ ಕೃಪಾಪೋಷಿತ ಕೊಡುಗೆ ಯಾಗಿತ್ತು. ಆತನು ಅದನ್ನು ಕೆಳಗುರುಳಿಸುವಂತೆ ಕತ್ತರಿಸಲು ಆಜ್ಞಾಪಿಸಿದನಾದರೂ, ಅದರ ಬೇರು (root), ಅದನ್ನು ಪುನಃವಶಪಡಿಸಬೇಕೆನ್ನುವ ದೇವರ ಉದ್ದೇಶ ಮತ್ತು ಯೋಜನೆಯು ಸೂಕ್ತ ಸಮಯ ಬರುವವರೆಗೆ ಮೊಳಕೆಯೊಡೆಯದಂತೆ ಬಲವಾದ ಶೃಂಖಲೆಗಳಿಂದ ಬಂಧಿತವಾಗಿದ್ದರೂ ಅದು ಮುಂದುವರೆದೇ ಇತ್ತು.

ಕನಸಿನಲ್ಲಿದ್ದಂತೆ ಚಿತ್ರಣವು ಮರದ ಕೊರಡಿನಿಂದ ಕೆಳದರ್ಜೆಗೆ ಇಳಿಸಿದ, ಮತ್ತು ಮೃಗಗಳಂತೆ ಮಾಡಲ್ಪಟ್ಟ ಮಾನವನಂತೆ ಬದಲಾದಾಗ ಆತನು ತ್ಯಜಿಸಲ್ಪಟ್ಟು ಆತನ ಎಲ್ಲಾ ವೈಭವಗಳೂ ಹೊರಟುಹೋಗಿದ್ದು ಮಾನವನು ಪತನಗೊಂಡ ಹೀನಾಯನಾದ ಈ ಲೋಕದ ಒಡೆಯನಾಗಿ ಕಂಡುಬರುತ್ತಾನೆ; ಆತನ ವೈಭವ ಮತ್ತು ಪ್ರಭುತ್ವಗಳು ಆತನನ್ನು ತ್ಯಜಿಸಿ ಹೋಗಿವೆ. ಆಜ್ಞೆಯು ಹೊರಟಂದಿನಿಂದ, ಆತನ ಜನಾಂಗವು ಮೃಗಗಳೊಡನೆ ಅದರ ಪಾಲನ್ನು ಪಡಕೊಳ್ಳಬೇಕಾಗಿದೆ. ಮಾನವನ ಹೃದಯವೂ ಕೂಡಾ ಮೃಗಮಯವಾಗಿ ಕೀಳಾದ ಸ್ಥಿತಿಯಲ್ಲಿದೆ. ಮನುಕುಲದ ಅಪಾರ ಜನ ಸಮೂಹದವರಾದ – ಈಗಿರುವ ಮತ್ತು ಹಿಂದಿನ ಅರೆನಾಗರೀಕ ಮತ್ತು ಮೃಗೀಯ ಪರಿಸ್ಥಿತಿಯನ್ನು ಪರಿಗಣಿಸುವಾಗ, ಒಂದು ಸಣ್ಣ ಅಲ್ಪಸಂಖ್ಯಾತರ ಗುಂಪು, ಈ ಕೆಳಮಟ್ಟದ ಪ್ರವೃತ್ತಿಯಿಂದ ಜಯಗಳಿಸಲು ಮಹಾಹೋರಾಟವನ್ನು ಮತ್ತು ನಿರಂತರ ಪ್ರಯತ್ನವನ್ನು ಮಾಡಿದರೂ, ಪರಿಮಿತಿ ಅಂಶಗಳಲ್ಲಿ ಗೆಲ್ಲಬಲ್ಲರು ಎಂಬದು ಎಂತಹ ಗಮನಾರ್ಹ ಚಿತ್ರಣವನ್ನು ಕೊಡುತ್ತದೆ ಎಂದು ಕಾಣಬಹುದು. ಜನಾಂಗವು ಮಹಾ ಮಹಿಮನು ಈ ಲೋಕವನ್ನು ಆಳುತ್ತಾನೆ ಮತ್ತು ಅದನ್ನು ತನ್ನ ಇಚ್ಛೆಯುಳ್ಳವರಿಗೆ ನೀಡುತ್ತಾನೆ ಎಂಬ ಪಾಠವನ್ನು ಕಲಿತುಕೊಳ್ಳುವವರೆಗೆ ಅದರ ಹೀನಸ್ಥಿತಿಯಲ್ಲಿಯೇ ಮುಂದುವರೆಯುವುದು. ಕೆಡುಕನ ಪ್ರಭುತ್ವದಲ್ಲಿ ಉಳಿದುಕೊಳ್ಳಬೇಕು. ಮಾನವರು ಈ ಹೀನ ಸ್ಥಿತಿಯಲ್ಲಿರುವಾಗ, ದೇವರು ಅವರ ಪ್ರಸ್ತುತ ಕಹಿ ಅನುಭವವು ಮುಂದಿನ ದಿನಗಳಲ್ಲಿ ಶಾಶ್ವತವಾದ ಲಾಭವನ್ನುಂಟು ಮಾಡುವಂತೆ ಅವರಲ್ಲಿನ ಕೆಲವೊಂದು ಕೀಳ್ಮಟ್ಟದ ನಡತೆಗಳು ಅವರ ಮೇಲೆ ಆಳ್ವಿಕೆಮಾಡುವಂತೆ ಅನುಮತಿಸುತ್ತಾನೆ.

ದಾನಿಯೇಲನ ಅರ್ಥವಿವರಣೆಗೆ ತಕ್ಕಂತೆ, "ಇವೆಲ್ಲವೂ ಅರಸನಾದ ನೆಬೂಕದ್ನೆಚ್ಚರನ ಮೇಲೆ ಬರುತ್ತದೆ" ಮತ್ತು ಆತನ ಬುದ್ಧಿ ವಿಕಲ್ಪದ, ಹೀನಾಯವಾದ ಮತ್ತು ಮೃಗದ ಪರಿಸ್ಥಿತಿಯಲ್ಲಿ ಆತನು ಮೃಗಗಳೊಂದಿಗೆ ಆತನ ಮೇಲೆ ಏಳರಷ್ಟು ಹಾದುಹೋಗುವವರೆಗೂ (ಆತನ ಪ್ರಕರಣದಲ್ಲಿ ಅದು ಏಳು ಅಕ್ಷರಶಃವಾದ ವರ್ಷಗಳಾಗಿದ್ದವು) ಅಲೆದಾಡಿದನು. ಆ ಕನಸಿನ ಬಗ್ಗೆ ದಾನಿಯೇಲನ ಅರ್ಥವಿವರಣೆಯು ಅದು ನೆಬೂಕದ್ನೆಚ್ಚರನಲ್ಲಿ ನೆರವೇರುವವರೆಗೆ ಮಾತ್ರ ಸಂಬಂಧಿಸಿತ್ತು. ಆದರೆ ವಾಸ್ತವವಾಗಿ ಕನಸು, ಅದರ ಅರ್ಥವಿವರಣೆ ಮತ್ತು ಅದರ ನೆರವೇರಿಕೆ ಇವುಗಳೆಲ್ಲವೂ ಇಲ್ಲಿ ಒಂದು ಉದ್ದೇಶದ ಸಾಕ್ಷ್ಯವನ್ನು ಅದರ ಹೇಳುವಿಕೆಗೆ ಜಾಗರೂಕತೆಯಲ್ಲಿ ಸಂಬಂಧಿಸಿರುವುದಾಗಿದೆ. ಇಡೀ ಸಂತತಿಯವರನ್ನು ಶಿಕ್ಷೆ ಮತ್ತು ಸರಿಪಡಿಸುವಿಕೆಗಾಗಿ ಕೆಡುಕನ ಪ್ರಭುತ್ವಕ್ಕೆ ವಹಿಸಿಕೊಡುವ ದೇವರ ಉದ್ದೇಶವನ್ನು ತಿಳಿಸುವ ಒಂದು ದೃಷ್ಟಾಂತವಾಗಿದ್ದು ಅದರ ಅಸಮಾನ್ಯ ಯುಕ್ತತೆಯು ಸೂಕ್ತ ಸಮಯದಲ್ಲಿ ದೇವರು ಅವರನ್ನು ನೀತಿವಂತಿಕೆಯಲ್ಲಿಯೂ ಮತ್ತು ನಿತ್ಯಜೀವದಲ್ಲಿಯೂ ಸ್ಥಾಪಿಸುವುದಾಗಿದೆ ಮತ್ತು ಇದನ್ನು ನಾವು ಉದ್ದೇಶಪೂರ್ವಕವಾದ ನಮೂನೆಯಾಗಿ ಸ್ವೀಕರಿಸುವಂತೆ ಪ್ರಮಾಣೀಕರಿಸುತ್ತದೆ.

ನೆಬೂಕದ್ನೆಚ್ಚರನು ಮಾನವ ಪ್ರಭುತ್ವದ ಪ್ರತಿನಿಧಿಯಾಗಿ ಮಾಡಲ್ಪಟ್ಟಿರುವುದನ್ನು ನಾವು ನೆನಪುಮಾಡಿಕೊಳ್ಳುವಾಗ (ದಾನಿ. 2:38) ಆತನ ಆ ಕನಸಿನ ನೆರವೇರಿಕೆಯನ್ನು ವಿಶೇಷವಾಗಿ ಗಮನಿಸಲು ಅರ್ಹವಾಗಿದೆ. ಮತ್ತು ಆತನು ಭೂಲೋಕದ ಒಡೆಯನಾಗಿದ್ದು ಸುಮಾರಾಗಿ ದೇವರು ಆದಾಮನನ್ನು ಸಂಬೋಧಿಸಿದ ರೀತಿಯಲ್ಲಿಯೇ ಆತನು ಪ್ರವಾದಿಯಿಂದ ಸಂಬೋಧಿಸಲ್ಪಡುತ್ತಾನೆ. – "ರಾಜಾಧಿರಾಜ, ಪರಲೋಕ ದೇವರು ನಿನಗೆ ರಾಜ್ಯಬಲ ಪರಾಕ್ರಮ ವೈಭವಗಳನ್ನು ದಯಪಾಲಿಸಿದ್ದಾನೆ; ನರಜಾತಿಯವರು ವಾಸಿಸುವ ಸಕಲ ಪ್ರಾಂತಗಳಲ್ಲಿ ಆಕಾಶಪಕ್ಷಿಗಳನ್ನೂ, ಭೂಜಂತುಗಳನ್ನೂ ನಿನ್ನ ಕೈಗೆ ಒಪ್ಪಿಸಿ ನೀನು ಅವುಗಳನ್ನೆಲ್ಲಾ ಆಳುವಂತೆ ಮಾಡಿದ್ದಾನೆ" (ದಾನಿ. 2:37,38). "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ

ಮೀನುಗಳ ಮೇಲೆಯೂ, ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಿರಿ" (ಆದಿ. 1:28 ಹೋಲಿಸಿ). ನಂತರದಲ್ಲಿ ಪಾಪದ ಕಾರಣ ನೆಬೂಕದ್ನೆಚ್ಚರನು ಏಳರಷ್ಟು ದಂಡನೆಯನ್ನು ಅನುಭವಿಸಿದನು, ನಂತರದಲ್ಲಿ ಆತನ ವಿವೇಕವು ಹಿಂತಿರುಗಲು ಪ್ರಾರಂಭಿಸಿತು ಮತ್ತು ಪ್ರಭುತ್ವಕ್ಕೆ ಆತನ ಪುನಃವಶವು ನೆರವೇರಿತು. ಆತನು ತನ್ನ ರಾಜ್ಯದಲ್ಲಿ ಪುನಃಸ್ಥಾಪಿಸಲ್ಪಟ್ಟನು ಮತ್ತು ಆತನು ಅವಶ್ಯಕವಾದ ಪಾಠಗಳನ್ನು ಕಲಿತುಕೊಂಡ ನಂತರ ಘನತೆಯು ಆತನಿಗೆ ಕೂಡಿಕೊಂಡಿತು. ಇದನ್ನು ಆತನು ಈ ಕೆಳಗಣ ಭಾಷೆಯಲ್ಲಿ ಉಲ್ಲೇಖಿಸುತ್ತಾನೆ :–

"ಆ ಕಾಲವು ಕಳೆದ ಮೇಲೆ ನೆಬೂಕದ್ನೆಚ್ಚರನಾದ ನಾನು ಆಕಾಶದ ಕಡೆಗೆ ಕಣ್ಣೆತ್ತಲು ನನ್ನ ಬುದ್ಧಿಯು ಪುನಃ ನನ್ನ ಸ್ವಾಧೀನವಾಯಿತು. ಆಗ ನಾನು ಪರಾತ್ಪರನನ್ನು ಕೊಂಡಾಡಿ ಸದಾ ಜೀವಿಸುವಾತನಿಗೆ ಸ್ತುತಿಸ್ತೋತ್ರಗಳನ್ನು ಸಲ್ಲಿಸಿದೆನು; ಆತನ ಆಳ್ವಿಕೆಯು ಶಾಶ್ವತ, ಆತನ ರಾಜ್ಯವು ತಲತಲಾಂತರಕ್ಕೂ ನಿಲ್ಲುವುದು; ಭೂನಿವಾಸಿಗಳೆಲ್ಲರೂ [ಆತನ ದೃಷ್ಟಿಯಲ್ಲಿ] ಏನೂ ಅಲ್ಲದಂತಿದ್ದಾರೆ, ಪರಲೋಕ ಸೈನ್ಯದವರಲ್ಲಿಯೂ, ಭೂಲೋಕದವರಲ್ಲಿಯೂ ತನ್ನ ಇಚ್ಛಾನುಸಾರವಾಗಿ ನಡೆಯುತ್ತಾನೆ; ಯಾರೂ ಆತನ ಕೈಯನ್ನು ಹಿಂದಕ್ಕೆ ತಳ್ಳಲಾರರು. ನೀನು ಏನು ಮಾಡುತ್ತೀ? ಎಂದು ಯಾರೂ ಕೇಳಲಾರರು. ಅದೇ ಸಮಯದಲ್ಲಿ ನನ್ನ ಬುದ್ಧಿಯು ಪುನಃ ನನ್ನ ಸ್ವಾಧೀನವಾಯಿತು; ನನ್ನ ಪ್ರಭಾವ ವೈಭವಗಳು ನನಗೆ ಮತ್ತೆ ಲಭಿಸಿ ನನ್ನ ರಾಜ್ಯದ ಕೀರ್ತಿಯು ಪ್ರಕಾಶಿಸಿತು; ನನ್ನ ಮಂತ್ರಿಗಳೂ ಅಧಿಪತಿಗಳೂ ನನ್ನನ್ನು ಓಲೈಸಿದರು; ನನ್ನ ರಾಜ್ಯದಲ್ಲಿ ರಾಜನಾಗಿ ನೆಲೆಗೊಂಡೆನು; ನನ್ನ ಮಹಿಮೆಯು ಅತ್ಯಧಿಕವಾಯಿತು. ಆಗ ನೆಬೂಕದ್ನೆಚ್ಚರನಾದ ನಾನು ಪರಲೋಕ ರಾಜನನ್ನು ಹೊಗಳಿ ಕೊಂಡಾಡಿ ಕೀರ್ತಿಸುತ್ತೇನೆ. ಆತನ ಕಾರ್ಯಗಳೆಲ್ಲಾ ಸತ್ಯ, ಆತನ ಮಾರ್ಗಗಳೆಲ್ಲಾ ನ್ಯಾಯ; ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು" – ದಾನಿ. 4:34–37.

ನೆಬೂಕದ್ನೆಚ್ಚರನ ಅವನತಿಯು ಏಳು ಸಾಂಕೇತಿಕ ಸಮಯ ಅಥವಾ ವರ್ಷಗಳಲ್ಲಿದ್ದ (ಆತನ ದಿನದ ನಂತರ ಒಂದು ವರ್ಷಕ್ಕೆ ಒಂದು ದಿನ, ಒಟ್ಟು 2520 ದಿನಗಳು) ಮೃಗೀಯ ಸರ್ಕಾರಗಳ ಅಧೀನದಲ್ಲಿನ ಒಂದು ಸಾಂಕೇತಿಕ ಮಾನವ ಅವನತಿಯಾಗಿದೆ, ಇದು ಸರಿಯಾಗಿ ಇಸ್ರಾಯೇಲ್ಯರ ಮೇಲೆ ಹೇಳಿದ ಏಳರಷ್ಟಕ್ಕೆ ಹೊಂದಿಕೆಯಾಗುತ್ತದೆ. ಇದು ನಾವೀಗ ನೋಡಿದಂತೆ ಕ್ರಿ.ಶ.1914ರಲ್ಲಿ ಮುಕ್ತಾಯಗೊಂಡಿದೆ. ಇದರಡಿಯಲ್ಲಿಯೇ ನೆಬೂಕದ್ನೆಚ್ಚರನು ಇಸ್ರಾಯೇಲ್ಯರನ್ನು ಬಾಬೇಲಿಗೆ ಸೆರೆಒಯ್ದನು. ದೇವರ ರಾಜ್ಯದ ಕಿರೀಟವು ತೆಗೆಯಲ್ಪಟ್ಟಿತು ಮತ್ತು ಏಳರಷ್ಟರ ಕಾಲವು ಪ್ರಾರಂಭವಾಯಿತು.

ಇದರೊಂದಿಗೆ ಸಾಮರಸ್ಯಗೊಂಡು ದೇವರು ಅನ್ಯಜನರ ಸರ್ಕಾರಗಳನ್ನು ಪ್ರತಿನಿಧಿಸುತ್ತಾನೆ, ದಾನಿಯೇಲನು ಅವುಗಳು ಕ್ರೂರ ಮೃಗಗಳೆಂಬುದಾಗಿ ವರ್ಣಿಸುತ್ತಾನೆ. ಅದೇ ಸಮಯದಲ್ಲಿ ಅದರ ಅಂತ್ಯದಲ್ಲಿ ದೇವರ ಆಳ್ವಿಕೆಯು ಮನುಷ್ಯಕುಮಾರನಂತಿರುವಾತನಿಗೆ ನೀಡಲ್ಪಟ್ಟಿತು.

ಅನ್ಯಜನರ ಕಾಲದಲ್ಲಾದ ಅವನತಿಯು ಪೂರ್ವಛಾಯೆಯನ್ನು ತಿಳಿಸುವ ಕೆಲಸವಿರದಿದ್ದರೆ, ಒಬ್ಬ ಅನ್ಯಜನಾಂಗದವನ ಚರಿತ್ರೆಯ ತುಣುಕನ್ನು ದಾಖಲಿಸುವ ಉದ್ದೇಶವಿರುತ್ತಿರಲಿಲ್ಲ. ಆತನ ಏಳು ವರ್ಷಗಳ ಅವನತಿಯಲ್ಲಿ ಮಾನವನ ತೇಜೋಭಂಗವನ್ನು ಯುಕ್ತವಾಗಿ ವಿವರಿಸಲಾಗಿದೆ ಎಂಬುದು ಸತ್ಯ. ಮಾನವ ಜಾತಿಯು ಕೆಲವೊಂದು ಮಹಾ ಪಾಠಗಳನ್ನು ಕಲಿತುಕೊಂಡ ಮೇಲೆ ದೇವರು ಈ ಲೋಕದ ಪ್ರಭುತ್ವದ ಪುನರ್‌ವಶವನ್ನು ವಾಗ್ದಾನ ಮಾಡಿದ್ದಾನೆ ಎಂಬುದೂ ಸತ್ಯ ಮತ್ತು ಏಳು ಸಾಂಕೇತಿಕ ಅನ್ಯಜನಗಳ ಕಾಲವು (2520 ವರ್ಷಗಳು) ಮುಗಿಯುವ ಕಾಲದಲ್ಲಿ, ಆ ನಿರ್ದಿಷ್ಟ ಕಾಲದಲ್ಲಿ ಮಾನವ ಕುಲವು ತನ್ನ ಸ್ವಂತ ಅವನತಿಯನ್ನು ಮತ್ತು ಪ್ರಸ್ತುತ ಈ ಲೋಕವನ್ನು ಉತ್ತಮಸ್ಥಿತಿಯಲ್ಲಿ ಆಳುವ ತನ್ನ ಅಸಮರ್ಥತೆಯನ್ನು ಕಲಿತುಕೊಂಡು ದೇವರ ರಾಜ್ಯಕ್ಕಾಗಿ ಮತ್ತು ಪ್ರಭುತ್ವಕ್ಕಾಗಿ ಸಿದ್ಧವಾಗುವದು ಎಂಬುದು ಮೂರನೆಯ ಸತ್ಯ. ಈ ದೃಷ್ಟಾಂತಗಳ ಯುಕ್ತತೆಯು ನೆಬೂಕದ್ನೆಚ್ಚರನ ಏಳು ವರ್ಷಗಳ ಅಪರಾಧ ನಿರ್ಣಯವನ್ನು ಬಲವಂತಗೊಳಿಸುತ್ತದೆ. ಅದೇ ಸಮಯದಲ್ಲಿ ಆತನ ಮೇಲೆ ವೈಯುಕ್ತಿಕವಾಗಿ ಅಕ್ಷರಶಃ ಅದು ನೆರವೇರುತ್ತದೆ ಎಂಬುದು ಆತನು ಪ್ರತಿನಿಧಿಸಿದ ಅನ್ಯಜನಗಳ ಪ್ರಭುತ್ವದ ಏಳು ಸಾಂಕೇತಿಕ ವರ್ಷಗಳೆಂಬುದು ಇನ್ನೂ ಹೆಚ್ಚಿನ ಮತ್ತು ವಿಶಾಲವಾದ ರೀತಿಯಲ್ಲಿ ಮಹತ್ವವಾಗಿದೆ.

ನೆಬೂಕದ್ನೆಚ್ಚರನ ಕರಾರುವಾಕ್ಕಾದ ಅವನತಿಯ ದಿನಾಂಕವು ಹೇಳಲ್ಪಟ್ಟಿಲ್ಲ ಮತ್ತು ಪ್ರಾಮುಖ್ಯತೆಯನ್ನು ಪಡೆದಿಲ್ಲ. ಯಾಕೆಂದರೆ, ಈ ಅವನತಿಯ ಕಾಲವು ಅನ್ಯಜನಗಳ ಅವನತಿಯ ಸಮಗ್ರ ಕಾಲವನ್ನು ಸೂಚಿಸುತ್ತದೆ. ಇದು ದೇವರ ಸಾಂಕೇತಿಕ ರಾಜ್ಯದ ಕಿರೀಟವನ್ನು ಅರಸನಾದ ಚಿದ್ಕೀಯನಿಂದ ತೆಗೆದಾಗ ಪ್ರಾರಂಭ'ವಾಯಿತು. ಅದು ಪ್ರಾರಂಭ'ದಿಂದ ಮೃಗೀಯುವಾಗಿತ್ತು ಮತ್ತು ಅದರ ಕಾಲವು ಎಣಿಕೆಯಾಗಿತ್ತು. ಅದರ ಮೇರೆಯನ್ನು ಯೆಹೋವನು ಗೊತ್ತುಪಡಿಸಿದ್ದನು ಮತ್ತು ಅದನ್ನು ದಾಟಿ ಮುಂದೆ ಹೋಗುವಂತಿಲ್ಲ.

ಈ ಏಳರಷ್ಟರ ನಂತರದ ಪ್ರತೀಕ್ಷೆಯು ಎಷ್ಟೋ ಚೈತನ್ಯದಾಯಕವಾಗಿ ಕಂಡುಬರುತ್ತದೆ ಅಲ್ಲವೇ!

ಇಸ್ರಾಯೇಲ್ಯರಾಗಲೀ, ಜನರಿಂದ ಪ್ರತಿನಿಧಿಸಲ್ಪಟ್ಟ ಪ್ರಪಂಚದ ಮಾನವ ಜಾತಿಯಾಗಲೀ ಇನ್ನು ಮುಂದೆ ಕೆಳಗೆ ತುಳಿಯಲ್ಪಡುವದಿಲ್ಲ. ಮೃಗಪ್ರಾಯರಾದ ಅನ್ಯ ಜನಗಳ ಪ್ರಭುತ್ವದಡಿಯಲ್ಲಿ ಹಿಂಸೆಗೊಳಗಾಗುವದಿಲ್ಲ ಮತ್ತು ದುರಾಡಳಿತಕ್ಕೆ ಒಳಗಾಗುವದಿಲ್ಲ. ದೇವರ ಮತ್ತು ಆತನ ಕ್ರಿಸ್ತನ ರಾಜ್ಯವು ನಂತರ ಭೂಲೋಕದಲ್ಲಿ ಸ್ಥಾಪಿಸಲ್ಪಡುವುದು. ಇಸ್ರಾಯೇಲ್ಯರೂ, ಲೋಕದವರೆಲ್ಲರೂ ಆತನ ನ್ಯಾಯಸಮ್ಮತವಾದ ಮತ್ತು ನೀತಿವಂತಿಕೆ ಅಧಿಕಾರದಲ್ಲಿ ಆಶೀರ್ವದಿಸಲ್ಪಡುವರು. ನಂತರ ಮೊದಲಲ್ಲಿ ಏದೇನ್ ತೋಟದಲ್ಲಿ ನೆಟ್ಟ ವಾಗ್ದಾನದ ಮತ್ತು ನಿರೀಕ್ಷೆಯ ಬೇರು (ಆದಿ. 3:15) ಪ್ರವಾಹವನ್ನು ಹಾದು ಆಶ್ರಯ ಪಡೆದು ಸಾಂಕೇತಿಕ ಜನರಾದ ಇಸ್ರಾಯೇಲ್ಯರೊಡನೆ ಕಸಿಮಾಡಿಕೊಂಡು (ಆದಿ. 12:1–3) ಪುನಃ ಚಿಗುರೊಡೆದು ಅರಳುತ್ತದೆ.

ಅದು ನಮ್ಮ ಕರ್ತನ ಮೊದಲನೆಯ ಆಗಮನದಲ್ಲಿ ಚಿಗುರಲು ಪ್ರಾರಂಭಿಸಿತು. ಆದರೆ ಅದು ಅರಳಲು ಮತ್ತು ಅದರ ಆಶೀರ್ವಾದಕರ ಫಲಗಳನ್ನು ಪುನಃವಶದಲ್ಲಿ ಮುಂತರಲು ಅದಕ್ಕೆ ನಿಗದಿಪಡಿಸಿದ ಕಾಲವು ಇನ್ನೂ ಬಂದಿರಲಿಲ್ಲ, ಆದರೆ ಅನ್ಯಜನಗಳ ಕಾಲದ ನಂತರದಲ್ಲಿ ವಸಂತ ಋತುವಿನ ನಿಶ್ಚಿತ ಸಂಕೇತಗಳ ಕೊರತೆ ಇರುವುದಿಲ್ಲ ಮತ್ತು ವಸಂತದ ಫಲಗಳು ಶ್ರೀಮಂತವಾಗಿರುತ್ತವೆ ಮತ್ತು ಶರತ್ಕಾಲದ ಸುಗ್ಗಿಯು ಭವ್ಯವಾಗಿದ್ದು ಅದನ್ನು ಬರಲಿರುವ ಭವ್ಯವಾದ ನಿತ್ಯಕಾಲದಲ್ಲಿ ಕೊಯಿಲುಮಾಡಿ ಸಂತೋಷಿಸಬಹುದು ಮತ್ತು ನಂತರ ಭೂಲೋಕದ ನಿಜವಾದ ಕರ್ತನು (ಕ್ರಿಸ್ತನು), ಉತ್ತಮ ಜ್ಞಾನವನ್ನು ಹಿಂದಿನ ಸ್ಥಿತಿಗೆ ತಂದು, ಮರುಸ್ಥಾಪಿಸಿ ಸಾಂಕೇತಿಕವಾದ ರೀತಿಯಲ್ಲಿಯೇ, ಉತ್ಕೃಷ್ಟತೆಯನ್ನೂ, ಮಹಿಮೆಯನ್ನೂ ಕೊಡಿಸುವನು. ಹಾಗಾಗಿ ಪರಲೋಕದ ಅರಸನನ್ನು ಸ್ತುತಿಸಿ, ಘನಪಡಿಸಿ ಶ್ಲಾಘನೆ ಮಾಡುತ್ತಾ ಗೌರವಿಸಬೇಕು.

ಈಗಾಗಲೇ ನಾವು ಮಾನವಜಾತಿಗೆ ವಿವೇಚನಾ ಸಾಮರ್ಥ್ಯವು ಹಿಂದಿರುಗುವ ಪ್ರಾರಂಭವನ್ನು ಕಂಡುಕೊಂಡಿದ್ದೇವೆ. ಮಾನವರು ತಮ್ಮ ಅವನತಿಯ ಕೆಲವು ಅರ್ಥಗಳ ಬಗ್ಗೆ ಎಚ್ಚರಗೊಳ್ಳುತ್ತಿದ್ದಾರೆ ಮತ್ತು ತಾವು ವಶವಾಗಿರುವ ಮೃಗೀಯ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಹೇಗೆಂದು ಹುಡುಕುತ್ತಿದ್ದಾರೆ, ಆಲೋಚಿಸುತ್ತಿದ್ದಾರೆ, ಯೋಜನೆ ಹಾಕುತ್ತಿದ್ದಾರೆ ಮತ್ತು ಅದರ ರೂಪರೇಷೆಗಳ ಬಗ್ಗೆ ಯೋಚಿಸುತ್ತಿದ್ದಾರೆ. ಆದರೆ ಅವರು ದೇವರು ಮತ್ತು ಆತನಿಗೆ ಎಲ್ಲರ ಮೇಲಿನ ಪ್ರಭುತ್ವವನ್ನು ಗುರುತಿಸುವ ಮೊದಲು ಅವರು ಮತ್ತೊಂದು ಭಯಂಕರ ಹುಚ್ಚುತನದ ಸ್ಥಿತಿಯನ್ನು ಅನುಭವ ಮಾಡುತ್ತಾರೆ, ಇದರಿಂದ ಪಾರಾಗಲು ಅವರು ಒಂದು ಹೋರಾಟವನ್ನು ಮಾಡಿ, ಅದರಿಂದ ಬಲಹೀನರಾಗಿ, ಅಸಹಾಯಕರಾಗಿ, ತ್ರಾಣವಿಲ್ಲದೆ, ಇದರಿಂದ ಎದ್ದು ಇದುವರೆಗೂ ಆದಂತವುಗಳ ಬಗ್ಗೆ ತಿಳುವಳಿಕೆಯನ್ನು ಪಡೆದು ಕ್ರಿಸ್ತನ ಅಧಿಕಾರವನ್ನು ಗುರುತಿಸುವರು, ಆತನಿಗೆ ತಲೆಬಾಗುವರು. ಬರುವಾತನು ಬಹಳ ಹಿಂದೆಯೇ ಕಳೆದುಹೋದ ಮೊದಲನೆಯ ಪ್ರಭುತ್ವವನ್ನು ಒಳ್ಳೆಯದರ ಮತ್ತು ಕೆಡುಕಿನ ಒಂದು ನಿರಂತರವಾದ ಜ್ಞಾನ ಮತ್ತು ಅನುಭವದ ಆಧಾರದ ಮೇಲೆ ಪುನಃ ಸ್ಥಾಪನೆ ಮಾಡುವನು ಎಂದು ಅರಿತುಕೊಳ್ಳುವರು.

ನಿಜ, ಈ ಘೋಷಣೆಯ ವಿಷಯವು ಉನ್ನತವಾಗಿದೆ ಎಂದು ನಿರೀಕ್ಷಿಸುತ್ತೇವೆ. ಮುಂದಿನ ಇಪ್ಪತ್ತಾರು ವರ್ಷಗಳಲ್ಲಿ ಪ್ರಸ್ತುತದಲ್ಲಿರುವ ಎಲ್ಲಾ ಸರ್ಕಾರಗಳು ಬೀಳಲು ಪ್ರಾರಂಭವಾಗುತ್ತದೆ; ಆದರೆ, ನಾವೊಂದು ವಿಶೇಷವಾದ ಮತ್ತು ವಿಚಿತ್ರವಾದ ಸಮಯದಲ್ಲಿ ಜೀವಿಸುತ್ತಿದ್ದೇವೆ, ಅದುವೇ ಯೆಹೋವನ ದಿನ, ಅದರಲ್ಲಿ ಸಂಗತಿಗಳು ಬಲು ಬೇಗನೇ ಉಚ್ಚಸ್ಥಾನಕ್ಕೆ ಬರುತ್ತವೆ. ಸಂಪುಟ 1, ಅಧ್ಯಾಯ xv ರಲ್ಲಿ ಬರೆದಿರುವಂತೆ "ಒಂದು ಸಣ್ಣ ಕಾರ್ಯವನ್ನು ಕರ್ತನು ಈ ಲೋಕದ ಮೇಲೆ ಮಾಡುತ್ತಾನೆ". ಕಳೆದ ಹನ್ನೊಂದು ವರ್ಷಗಳಲ್ಲಿ ಈ ಸಂಗತಿಗಳ ಬಗ್ಗೆ ಬೋಧಿಸಲಾಗಿದೆ ಮತ್ತು ಮೇಲೆ ಇರುವಂತೆ ಗಣನೀಯವಾಗಿ ಪ್ರಕಟಿಸಲಾಗಿದೆ; ಮತ್ತು ಆ ಸಂಕ್ಷಿಪ್ತ ಸಮಯದಲ್ಲಿ ಪ್ರಭಾವಗಳ ಅಭಿವೃದ್ಧಿಯು ಮತ್ತು ಒಳಸಂಚಿನಿಂದ ಕೆಡಿಸುವ ಪಾರುಪತ್ಯಗಳು ಹಾಗೂ ಭೂಲೋಕದ ಬಲಿಷ್ಠ ಚಕ್ರಾಧಿಪತ್ಯಗಳ ಉರುಳಿಸುವಿಕೆಯು ಅದ್ಭುತವಾಗಿತ್ತು. ಆ ಸಮಯದಲ್ಲಿ ಕಮುನಿಸಂ, ಸೋಷಿಯಲಿಸಂ ಮತ್ತು ನಿಹಿಲಿಸಂ ಇವುಗಳು ಸತ್ವವುಳ್ಳವುಗಳಾಗಿ ಬೆಳೆದವು. ಮತ್ತು ಆಗಲೇ ಆಡಳಿತಗಾರರುಗಳಿಗೆ, ಈ ಲೋಕದ ಉನ್ನತ ಸ್ಥಾನದಲ್ಲಿರುವವರಿಗೆ ಬಹಳಷ್ಟು ಚಡಪಡಿಸುವಿಕೆ ಯನ್ನುಂಟು ಮಾಡಿದವು ಮತ್ತು ಈ ಲೋಕದ ಮೇಲೆ ಬರಲಿರುವ ಸಂಗತಿಗಳನ್ನು ನೋಡಿ ಅವರ ಹೃದಯಗಳು ಭಯದಿಂದ ವಿಫಲವಾಗತೊಡಗಿದವು. ಪ್ರಸ್ತುತ ಶಕ್ತಿಗಳು ಅಲುಗಾಡತೊಡಗಿದವು ಮತ್ತು ಅಂತಿಮವಾಗಿ ಬಹಳ ಗಲಿಬಿಲಿಯಿಂದ ಮುಕ್ತಾಯಗೊಂಡವು.

ಅನ್ಯಜನಗಳ ಕಾಲದ ಬಗೆಗಿನ ಈ ಪ್ರಬಲವಾದ ಸತ್ಯವೇದದ ಸಾಕ್ಷ್ಯಗಳ ದೃಷ್ಟಿಯಲ್ಲಿ ನಾವು ಈ ಲೋಕದ ರಾಜ್ಯಗಳ ಉರುಳಿಸುವಿಕೆಯು ಕ್ರಿ.ಶ, 1914ರಲ್ಲಿ ಪ್ರಾರಂಭವಾಯಿತೆನ್ನುವುದು ಒಂದು ಸ್ಥಿರವಾದ ಸತ್ಯವೆಂದು ಪರಿಗಣಿಸುತ್ತೇವೆ. ಇದು ದೇವರ ರಾಜ್ಯದ ಸ್ಥಾಪನೆಗೆ ಸಿದ್ಧತೆಯಾಗಿದೆ. ಕ್ರಿ.ಶ. 1915ರ ಅಂತ್ಯದಲ್ಲಿ ನೆರವೇರುವದು. ಕರ್ತನ ನಿರ್ಗಮನದ ನಂತರದಲ್ಲಿನ ಕ್ರೈಸ್ತ ಸಭೆಯ "ನಿನ್ನ ರಾಜ್ಯವು ಬರಲಿ" ಎಂಬ ಪ್ರಾರ್ಥನೆಗೆ ಉತ್ತರ ಸಿಗಲಿದೆ. ಆ ಬುದ್ಧಿವಂತ ಮತ್ತು ನ್ಯಾಯಯುತ ಆಳ್ವಿಕೆಯ ಅಡಿಯಲ್ಲಿ ಸಮಗ್ರ ಭೂಲೋಕವು ಜ್ಞಾನ, ನೀತಿವಂತಿಕೆ ಮತ್ತು

ಶಾಂತಿಯಿಂದೊಡಗೂಡಿದ ದೇವರ ಮಹಿಮೆಯಿಂದ ತುಂಬಿಕೊಳ್ಳುತ್ತದೆ (ಕೀರ್ತನೆ 72:19; ಯೆಶಾಯ 6:3; ಹಬಕ್ಕೂಕ 2:14) ಮತ್ತು ದೇವರ ಚಿತ್ತವು ಪರಲೋಕದಲ್ಲಿರುವಂತೆಯೇ ಭೂಲೋಕ ದಲ್ಲಿಯೂ ನೆರವೇರುವುದು.

"ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು. ಅದು ಎಂದಿಗೂ ಅಳಿಯದು. ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿ ಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿ. 2:44) ಎಂಬ ದಾನಿಯೇಲನ ಹೇಳಿಕೆಯು ನಮ್ಮ ವಿಶೇಷ ಪರಿಗಣನೆಗೆ ಯೋಗ್ಯವಾಗಿದೆ. ಹೀಗೆಯೇ ಈ ಪ್ರತಿಯೊಂದು ಮೃಗೀಯ ಸರ್ಕಾರಗಳಿಗೂ ಆಗಲಿದೆ. ವಿಶ್ವ ಪ್ರಭುತ್ವವನ್ನು ಹೊಂದಿಕೊಳ್ಳುವ ಮೊದಲೇ ಅದು ಇತ್ತು. ಬಾಬೇಲ್ ಸಾಮ್ರಾಜ್ಯವು ಯೆರೂಸಲೇಮನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಪ್ರಭುತ್ವವನ್ನು ಪಡಕೊಳ್ಳುವ ಬಹಳ ಹಿಂದಿನಿಂದಲೂ ಇತ್ತು (ದಾನಿ. 2:37,38). ಮೆಡೋ ಪರ್ಷಿಯಾ (Medo Persia) ಎಂಬುದು ಅದು ಬಾಬೇಲನ್ನು ಜಯಿಸುವ ಮೊದಲೇ ಇತ್ತು. ಎಲ್ಲಾ ರಾಜ್ಯಗಳ ಬಗ್ಗೆಯೂ ಹಾಗೆಯೇ; ಅವುಗಳು ಮೊದಲು ಇದ್ದಿರಬೇಕು ಮತ್ತು ಇತರರನ್ನು ಗೆದ್ದುಕೊಳ್ಳುವ ಮೊದಲು ಅಮೋಘ ಶಕ್ತಿಯನ್ನು ಹೊಂದಿತು. ಅಂತೆಯೇ, ದೇವರ ರಾಜ್ಯವು ಸಹ; ಹದಿನೆಂಟು ಶತಮಾನಗಳವರೆಗೆ ಭ್ರೂಣದ ಆರಂಭದ ಅವಸ್ಥೆಯಲ್ಲಿ ಇರುತ್ತದೆ. ಆದರೆ ಅದು ವಿಶಾಲವಾದ ಪ್ರಪಂಚದಲ್ಲಿ ಅದರ ಏಳರಷ್ಟರ ಸಮಯವು ಮುಗಿಯುವವರೆಗೆ ದೇವರಿಂದ ಪ್ರತಿಷ್ಠೆ ಹೊಂದಿದ ಶಕ್ತಿಗಳಿಗೆ ಅಧೀನವಾಗಿರುತ್ತದೆ. ಏಳರಷ್ಟು ಸಮಯವು ಮುಗಿಯುವವರೆಗೆ ದೇವರ ರಾಜ್ಯವು ವಿಶ್ವಪ್ರಭುತ್ವಕ್ಕೆ ಬರುವುದಿಲ್ಲ. ಹೇಗೂ ಇತರರಂತೆ ಅದು ಈ ರಾಜ್ಯಗಳನ್ನು ಛಿದ್ರಛಿದ್ರವಾಗಿಸಿ ಉರುಳಿಸುವ ಮೊದಲು ಸಮರ್ಪಕವಾದ ಅಧಿಕಾರವನ್ನು ಹೊಂದಿಕೊಳ್ಳಬೇಕಾಗುತ್ತದೆ.

ಅದರಂತೆ, ಈ ಯೆಹೋವನ ದಿನದಲ್ಲಿ, ಸಂಕಟದ ದಿನದಲ್ಲಿ, ನಮ್ಮ ಕರ್ತನು ಇದುವರೆಗೆ ಸುಪ್ತಾವಸ್ಥೆಯಲ್ಲಿದ್ದ ತನ್ನ ಮಹಾ ಶಕ್ತಿಯನ್ನು ತೆಗೆದುಕೊಂಡು ಆಳುತ್ತಾನೆ. ಮತ್ತು ಈ ಲೋಕವು ಕೆಲವು ಸಮಯದವರೆಗೆ ಅದನ್ನು ಗುರುತಿಸದೇ ಹೋದರೂ ಇದು ತೊಂದರೆಯನ್ನುಂಟು ಮಾಡುವುದಾಗಿದೆ. ಭಕ್ತರುಗಳು ಪ್ರಸ್ತುತ ರಾಜ್ಯಗಳನ್ನು ತುಂಡುತುಂಡಾಗಿ ಮಾಡುವ ಕಾರ್ಯದಲ್ಲಿ ಪಾಲುತೆಗೆದುಕೊಳ್ಳುತ್ತಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಕೀರ್ತನೆ 149:8,9ರಲ್ಲಿ ಹೀಗೆ ಬರೆದದೆ – "ಅವರ ರಾಜರನ್ನು ಸಂಕೋಲೆಯಿಂದ ಬಂಧಿಸುವರು: ಪ್ರಭುಗಳಿಗೆ ಕಬ್ಬಿಣದ ಬೇಡಿಯನ್ನು ಹಾಕುವರು, ಲಿಖಿತದಂತೆ ಅವರಿಗೆ ಶಿಕ್ಷೆಯನ್ನು ವಿಧಿಸುವರು; ಇದು ಆತನ ಭಕ್ತರೆಲ್ಲರಿಗೆ ಗೌರವವಾಗಿರುವುದು". ಪ್ರಕಟನೆ 2:26ರಲ್ಲಿ – "ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಗೆಯಾದ ಕೃತ್ಯಗಳನ್ನು ಕಡೇವರೆಗೂ ನಡಿಸುತ್ತಾನೋ ಅವನಿಗೆ ನಾನು ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು. ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು, ಮಣ್ಣಿನ ಮಡಕೆಗಳನ್ನೋ ಎಂಬಂತೆ ಅವರನ್ನು (ರಾಜ್ಯಗಳನ್ನು) ಒಡೆದು ಹಾಕುವನು" (ಕೀರ್ತನೆ : 2:8,9).

ದೇವರ ರಾಜ್ಯ ಮತ್ತು ಭೂಲೋಕದ ಮೃಗೀಯ ರಾಜ್ಯಗಳ ಬಗ್ಗೆ ನಾವು ಹಿಂದಿನ ಸಂಪುಟದಲ್ಲಿ ನಡಿಸಿದ ಪರೀಕ್ಷೆಯು ಯುದ್ಧಸ್ಥಿತಿಯಲ್ಲಿನ ವ್ಯತ್ಯಾಸಗಳನ್ನು ಕಾಣುವಂತೆ ನಮ್ಮನ್ನು ಸಿದ್ಧಪಡಿಸುತ್ತದೆ. ವಿಜಯದ ಪದ್ಧತಿಗಳು ಮತ್ತು ಒಡೆಯುವಿಕೆ ಇವುಗಳು ಈ ಹಿಂದೆ ರಾಜ್ಯಗಳನ್ನು ಉರುಳಿಸಿದವುಗಳಿಗಿಂತಲೂ ಬಹಳಷ್ಟು ಭಿನ್ನವಾಗಿರುತ್ತವೆ. ಮಹಾ ಶಕ್ತಿಯಿಂದ ಆಳುವಾತನನ್ನು ಸಂಕೇತದ ಮೂಲಕ ತೋರಿಸಲಾಗಿದೆ. "ಜನಾಂಗಗಳನ್ನು ಹೊಡೆಯುವುದಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ ಬರುತ್ತದೆ. ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು" (ಪ್ರಕಟನೆ 19:15). ಅದರಿಂದ ಆತನು ರಾಜ್ಯಗಳನ್ನು ಹೊಡೆಯುವನು. ಆ ಕತ್ತಿಯೇ ದೇವರ ವಾಕ್ಯವಾಗಿದೆ (ಎಫೆಸ 6:17). ಜೀವಿಸುತ್ತಿರುವ ಭಕ್ತರುಗಳು ಮತ್ತು ಲೋಕದ ಅನೇಕರು ಈಗ ಅನೇಕ ತಪ್ಪುಗಳನ್ನೂ ಕೇಡುಗಳನ್ನು ತೆಗೆದುಹಾಕುವ ಸಿಪಾಯಿಗಳಂತೆ ಉಪಯೋಗಿಸಲ್ಪಡುತ್ತಿದ್ದಾರೆ. ಆದರೆ ದೇಶಗಳ ಶಾಂತಿಯುತ ಪರಿವರ್ತನೆಗಳು ಅನೇಕ ಪರಿಶುದ್ಧ ಬರಹಗಳಿಗೆ ಸಾಂಕೇತಿಕವಾಗಿದೆ ಎಂಬ ಅವಸರದ ನಿರ್ಣಯಕ್ಕೆ ಯಾರೊಬ್ಬರೂ ಬರಕೂಡದು. ಪ್ರಕಟನೆ 11:17; ದಾನಿ. 12:1; 2 ಥೆಸ. 2:8; ಕೀರ್ತನೆ 149 ಮತ್ತು 47 ಇವುಗಳು ಇದಕ್ಕೆ ವಿರೋಧವಾದವುಗಳನ್ನು ಬೋಧಿಸುತ್ತವೆ.

ಆಶ್ಚರ್ಯಪಡಬೇಡಿರಿ, ಮುಂದಣ ಅಧ್ಯಾಯಗಳಲ್ಲಿ ನಾವು ದೇವರ ರಾಜ್ಯದ ಸ್ಥಾಪನೆಯು ಈಗಾಗಲೇ ಪ್ರಾರಂಭವಾಗಿದೆ ಎಂಬುದಕ್ಕೆ ರುಜುವಾತುಗಳನ್ನು ಸಮರ್ಪಿಸುತ್ತೇವೆ. ಅದು ಪ್ರವಾದನೆಗಳಲ್ಲಿ ಕ್ರಿ.ಶ. 1878 ರಲ್ಲಿ ಶಕ್ತಿಯ ಕಾರ್ಯಾಚರಣೆಯು ಪ್ರಾರಂಭವಾಗುವುದು ಎಂಬುದನ್ನು ತೋರಿಸುತ್ತದೆ. "ಸರ್ವಶಕ್ತನಾದ ದೇವರ ಸಂಗ್ರಾಮದ ಆ ಮಹಾ ದಿನವು" (ಪ್ರಕಟನೆ 16:14) ಕ್ರಿ.ಶ. 1915ರಲ್ಲಿ ಪ್ರಾರಂಭವಾಗಿ ಇದು ಪ್ರಸ್ತುತದಲ್ಲಿರುವ ಎಲ್ಲಾ ಲೌಕಿಕ ರಾಜ್ಯಗಳನ್ನು ಕಿತ್ತುಹಾಕಿದ ನಂತರವೇ ಮುಕ್ತಾಯಗೊಳ್ಳುತ್ತದೆ. ದೇವರ ವಾಕ್ಯದ ದೃಷ್ಟಿಕೋನದಲ್ಲಿ ಸೈನ್ಯಗಳ ಒಟ್ಟುಗೂಡುವಿಕೆಯು ಕಂಡುಬರುತ್ತದೆ.

ನಮ್ಮ ದೃಷ್ಟಿಗೆ ದುರಭಿಪ್ರಾಯಗಳಿಂದ ಅಡ್ಡಿಯಾಗದೇ ಇದ್ದಲ್ಲಿ, ನಾವು ದೇವರ ವಾಕ್ಯದ ದೂರದರ್ಶಕದಲ್ಲಿ ಸರಿಯಾಗಿ ಹೊಂದಿಸಿಕೊಳ್ಳುವಾಗ "ಕರ್ತನ ದಿನ"ದಲ್ಲಿ ನಡೆಯುವ ಅನೇಕ ಘಟನೆಗಳ ಗುಣಲಕ್ಷಣಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ ಮತ್ತು ನಾವು ಆ ಘಟನೆಗಳ ಮಧ್ಯೆಯೇ ಇದ್ದೇವೆ ಮತ್ತು ಆತನ ರೌದ್ರದ ಮಹಾದಿನವು ಬಂದಿದೆ.

ಸತ್ಯದ ಕತ್ತಿಯು, ಆಗಲೇ ಹರಿತಗೊಂಡಿದೆ, ಅದು ನಾಗರೀಕ, ಸಾಮಾಜಿಕ ಮತ್ತು ಕ್ರೈಸ್ತಮತ ಸಂಬಂಧವಾದ ಪ್ರತಿಯೊಂದು ಕೆಟ್ಟ ಪದ್ಧತಿ ಮತ್ತು ಸಂಪ್ರದಾಯವನ್ನು ಕಡಿದು ಅಥವಾ ಹೊಡೆದುಹಾಕುವುದಾಗಿದೆ. ಅದಲ್ಲದೆ, ಇನ್ನೂ ಹೆಚ್ಚಾಗಿ ಹೊಡೆದುಹಾಕುವಿಕೆಯು ಪ್ರಾರಂಭವಾಗಿರುವುದನ್ನು ನಾವು ಕಾಣಬಹುದು. ಆಲೋಚನಾ ಸ್ವಾತಂತ್ರ್ಯ, ನಾಗರಿಕ ಮತ್ತು ಧಾರ್ಮಿಕವಾದ ಮಾನವ ಹಕ್ಕುಗಳು. ಅರಸರುಗಳ, ಚಕ್ರವರ್ತಿಗಳ ಮತ್ತು ಪೋಪರ ಅಧಿಪತ್ಯ, ಸಿನೋಡ್ ಮತ್ತು ಕೌನ್ಸಿಲ್, ಸಂಪ್ರದಾಯಗಳು, ಮತಾಭಿಪ್ರಾಯ ಇವುಗಳ ದೀರ್ಘಕಾಲದಿಂದ ಕಳೆದುಹೋಗಿರುವ ದೃಷ್ಟಿಕೋನವು ಮೆಚ್ಚುಗೆ ಪಡೆದುಕೊಳ್ಳುತ್ತವೆ ಮತ್ತು ಹಿಂದೆಲ್ಲೂ ಇಲ್ಲದಂತೆ ಪ್ರತಿಪಾದಿಸಲ್ಪಡುತ್ತದೆ. ಆಂತರಿಕ ಘರ್ಷಣೆಗಳು ಈಗಾಗಲೇ ಪ್ರಚೋದಿಸಲ್ಪಡುತ್ತಿವೆ. ಅವುಗಳು ನುಂಗುವ ಬೆಂಕಿಯಂತೆ ಚೂರುಚೂರಾಗಿ ಸೀಳಲ್ಪಡುತ್ತದೆ ಮತ್ತು ಶತಮಾನಗಳಿಂದ ಸತ್ಯವನ್ನು ತಡೆಹಿಡಿದಿದ್ದ ಮತ್ತು ನರಳುವ ಸೃಷ್ಟಿಯನ್ನು ಪೀಡಿಸುತ್ತಿದ್ದ ಮಾನವ ವ್ಯವಸ್ಥೆಗಳು ಮತ್ತು ತಪ್ಪುಗಳು ಅದರ ಮುಂದೆ ಕರಗಲೇ ಬೇಕಾಗುತ್ತದೆ. ಹೌದು, ಸತ್ಯವು – ಮತ್ತು ವಿಶಾಲವಾಗಿ ಹರಡುತ್ತಿರುವ ಮತ್ತು ಹೆಚ್ಚುತ್ತಿರುವ ಅದರ ಜ್ಞಾನವು ಖಡ್ಗವಾಗಿದ್ದು ಅನೇಕ ಶತಮಾನಗಳಿಂದ ಶಿರಸ್ಸಿಗೆ ಗಲಿಬಿಲಿಯುಂಟುಮಾಡಿ ಗಾಯಗೊಳಿಸುತ್ತಿದೆ – "ಆತನು ಜನಾಂಗಗಳಲ್ಲಿ ನ್ಯಾಯ ಸ್ಥಾಪಿಸುವಾಗ ವಿಸ್ತಾರವಾದ ರಣರಂಗದಲ್ಲಿ ಶತ್ರುಗಳ ಶಿರಸ್ಸನ್ನು ಛೇಧಿಸಿ ಹೆಣಗಳಿಂದ ಅದನ್ನು ತುಂಬಿಸುವನು, ಬಹುದೇಶಗಳ ಅಧಿಪತಿಗಳನ್ನು ಗಾಯ ಮಾಡುವನು" (ಕೀರ್ತನೆ 110; 6). ಈ ಸಂಕಷ್ಟದಲ್ಲಿಯೂ ಹೇಗೆ ಆಶೀರ್ವಾದವು ಮರೆಮಾಚಿಯದೆ: ಇದು ನೀತಿವಂತಿಕೆಯ ಆಳ್ವಿಕೆಯಲ್ಲಿ ನೀತಿವಂತಿಕೆ ಮತ್ತು ಸತ್ಯವನ್ನು ಪೂರ್ಣಮಟ್ಟದಲ್ಲಿ ಮೆಚ್ಚಿಕೊಳ್ಳುವಂತೆ ಮಾನವ ಜಾತಿಯನ್ನು ಸಿದ್ಧಪಡಿಸುತ್ತದೆ.

ಕಟ್ಟಕಡೆಗೆ ಮಾನವರು ದೇವರು "ನ್ಯಾಯವನ್ನು ನೂಲನ್ನಾಗಿಯೂ ಧರ್ಮವನ್ನು ಮಟ್ಟಗೋಲನ್ನಾಗಿಯೂ ಮಾಡುವನು" (ಯೆಶಾಯ 28:17) ಎಂಬುದನ್ನು ಮಾನವರು ಗ್ರಹಿಸಿಕೊಳ್ಳುವರು. ಅವರು ನ್ಯಾಯದ ಕಠಿಣ ನಿಯಮಗಳು ಮಾತ್ರವೇ ಎಲ್ಲರೂ ಬಯಸುವ ಆಶೀರ್ವಾದಗಳನ್ನು ಭದ್ರಪಡಿಸುವುದು ಎಂಬುದನ್ನು ಸಹ ಕಲಿತುಕೊಳ್ಳುತ್ತಾರೆ. ಮತ್ತು ಸಮಗ್ರವಾಗಿ ತಮ್ಮ ಸ್ವಂತ ಮಾರ್ಗ ಮತ್ತು ಸ್ವಾರ್ಥದಿಂದೊಡಗೂಡಿದ ತಿರಸ್ಕರಣೀಯವಾದ ಫಲಗಳ ಬಗ್ಗೆ ಹೃದಯಗುಂದುತ್ತಾರೆ. ಅವರು ನಿಯಂತ್ರಣವನ್ನು ಕೈಗೆತ್ತಿಕೊಳ್ಳುವ ನೀತಿವಂತ ಅಧಿಕಾರವನ್ನು ಸ್ವಾಗತಿಸುತ್ತಾರೆ ಮತ್ತು ಸಂತೋಷದಿಂದ ಅದಕ್ಕೆ ಅಧೀನರಾಗುತ್ತಾರೆ ಮತ್ತು ಬರೆದಿರುವಂತೆ "ಸಮಸ್ತ ಜನಾಂಗಗಳ ಇಷ್ಟಾರ್ಥವು ಒದಗಿಬರಲಿ" – ದೇವರ ರಾಜ್ಯವು, ಯೆಹೋವನಿಂದ ಅಭಿಷಕ್ತನಾದವನ ಪರಿಪೂರ್ಣ ಮತ್ತು ಅಪರಿಮಿತ ನಿಯಂತ್ರಣದ ಅಡಿಯಲ್ಲಿರಲಿ.

*ನಾವು ಜೀವಿಸುತ್ತಿದ್ದೇವೆ, ನಾವು ವಾಸಿಸುತ್ತಿದ್ದೇವೆ,*
*ದೊಡ್ಡಸ್ತಿಕೆಯ ಭೀಕರ ಸಮಯದಲ್ಲಿ,*
*ಯುಗಯುಗಗಳ ಬಗ್ಗೆ ತಿಳಿಸುವ ಯುಗದಲ್ಲಿ.*
*ಬೆರಗುಗೊಳಿಸುವಂತೆ ಜೀವಿಸುತ್ತಾ*
*ಕಿವಿಗೊಡಿ! ದೇಶಗಳು ಗುಡುಗುಟ್ಟು ಸದ್ದಿಗೆ,*
*ಕಬ್ಬಿಣವು ಮಣ್ಣಿನೊಂದಿಗೆ ಕಲಸಿರುವುದನ್ನು;*
*ಕೇಳಿರಿ ! ಏನದು ಶಬ್ದ ?*
*ಸೃಷ್ಟಿಯು ಉತ್ತಮ ದಿನಕ್ಕಾಗಿ ನರಳುವುದನ್ನು.*
*ಕುಚೋದ್ಯಗಾರರು ತೃಣೀಕರಿಸುತ್ತಾ ಇದ್ದಾರೆ*
*ಪರಲೋಕದ ಕಡೆ ದೃಷ್ಟಿಯಿರಿಸು.*
*ಹೋರಾಡಲು ನಿನಗೆ ಒಂದು ಗಂಟೆ ಮಾತ್ರವಿದೆ.*
*ಪ್ರವಾದನಾ ಸತ್ಯವು ಬಿಚ್ಚಿಕೊಳ್ಳು ತ್ತಿರುವದನ್ನು ನೋಡು !*
*ಜಾಗರೂಕತೆಯಿಂದಿರು ! ನಿನ್ನ ವಸ್ತ್ರವನ್ನು ಬೆಳ್ಳ ಗಿರಿಸಿಕೊ.*
*ಓ, ಸತ್ಯಕ್ಕಾಗಿ ನಿನ್ನ ಜೀವವು*
*ನಿನ್ನೊಡನೆ ಹೊರಗೆ ಹೋಗಲಿ !*
*ಎರಗು! ನರನಾಡಿಗಳು ಬಲವು*
*ಯುಗಗಳುದ್ದಕ್ಕೂ ನುಡಿಯಲಿ – ದೇವರಿಗಾಗಿ ನುಡಿ.*

"We are living, we are dwelling,
In a grand and awful time,
In an age on ages telling,
To be living in sublime.
Hark! the rumbling in the nations,
Iron crumbling with the clay:
Hark! What soundeth? 'Tis creation
Groaning for a better day.

"Scoffers scorning, Heaven beholding,
Thou hast but an hour to fight.
See prophetic truth unfolding!
Watch! And keep thy garments white.
Oh, let the soul within you
For the Truth's sake go abroad!
Strike! Let every nerve and sinew
Tell on ages – Tell for God!"

* * * * * * *

## ಅಧ್ಯಯನ – 5 Study V

# ನಮ್ಮ ಕರ್ತನ ಪುನರಾಗಮನ ಮತ್ತು ಕಾಣಿಸಿಕೊಳ್ಳುವ ರೀತಿ

## The Manner of our Lord's Return and Appearing

**ಇತರೆ ದೈವಿಕ ಯೋಜನೆಗಳ ಲಕ್ಷಣಗಳೊಂದಿಗೆ ನಮ್ಮ ಕರ್ತನ ದ್ವಿತೀಯಾಗಮನದ ವಿಧಾನದ ಸಾಮರಸ್ಯ – ಕ್ರೈಸ್ತ ಸಭೆಯು ಆತನನ್ನು ಹೇಗೆ ಮತ್ತು ಯಾವಾಗ ನೋಡಬಹುದು? ಹೇಗೆ ಮತ್ತು ಯಾವಾಗ ಕರ್ತನ ಮಹಿಮೆಯು ಎಲ್ಲಾ ಮಾಂಸಧಾರಿಗಳೂ ಒಟ್ಟಾಗಿ ನೋಡುವಂತೆ ಪ್ರಕಟಗೊಳ್ಳುತ್ತದೆ? ಸುವ್ಯಕ್ತವಾಗಿ ಸಂಘರ್ಷ ಇರುವ ಹೇಳಿಕೆಗಳು ಸಾಮರಸ್ಯವಾಗಿ ಕಂಡುಬರುತ್ತವೆ. ಆತನು ಕಳ್ಳನಂತೆ ಬರುತ್ತಾನೆ, ಬಾಹ್ಯತೋರಿಕೆಯಿಂದ ಅಲ್ಲ; ಆದಾಗ್ಯೂ ಆಜ್ಞಾಘೋಷದೊಡನೆ ಶಬ್ದದೊಂದಿಗೆ, ಮತ್ತು ಮಹಾ ತುತ್ತೂರಿಯ ಧ್ವನಿಯೊಂದಿಗೆ ಬರುತ್ತಾನೆ. ಆತನು ಪ್ರತಿಕಾರ ತೆಗೆದುಕೊಳ್ಳುವವನಾಗಿ ಉರಿಯುವ ಅಗ್ನಿಯಲ್ಲಿ ಪ್ರಕಟಗೊಳ್ಳುತ್ತಾನೆ. ಆದಾಗ್ಯೂ ಆತನು ಯಾವ ರೀತಿಯಲ್ಲಿ ಹೋಗಿರುವನೋ ಅದೇ ರೀತಿಯಲ್ಲಿಯೇ ಬರುತ್ತಾನೆ. ಈ ಸಂಬಂಧದಲ್ಲಿ ಪ್ರವಾದನೀಯ ಕಾಲದ ಮಹತ್ವವನ್ನು ತೋರಿಸಲಾಗಿದೆ. ಪ್ರಸ್ತುತ ಸೂಚನೆಗಳ ಸಾಮರಸ್ಯ.**

ಅನ್ಯದೇಶಗಳವರ ಸಮಯ ಅಂತ್ಯಗೊಳ್ಳುವ ಕಾಲದ ಸನ್ನಿಹಿತದ ಬಗ್ಗೆ ಈಗ ತಾನೇ ಕಂಡುಕೊಂಡ ದೃಷ್ಟಿಯು, ಮತ್ತು ಸಭೆಯ ಭರವಸೆಯ ನೆರವೇರಿಕೆಯು ಬಹುಶಃ ಈ ಅಂತ್ಯಕ್ಕೆ ಮುಂಚಿತವಾಗಿಯೇ ನೆರವೇರುವುದು, ಇದು ಈಗ ಇಸ್ರಾಯೇಲ್ಯರ ಸಮಾಧಾನಕ್ಕಾಗಿ ಕಾಯುತ್ತಿರುವಂಥವರ ಆಕಾಂಕ್ಷೆಯನ್ನು ತೀಕ್ಷ್ಣಗೊಳಿಸುತ್ತದೆ. ಇದುವೇ ನಮ್ಮ ಕರ್ತನು ಪ್ರವಾದಿಗಳ ಮೂಲಕ ತಿಳಿಸಿದ ಸುಗ್ಗಿಕಾಲ, ಅಂತ್ಯ, ಅಥವಾ ಈ ಯುಗದ ಮುಕ್ತಾಯದ ಅವಧಿಯ ಮಾಹಿತಿಗಾಗಿ ಅವರು ಹಸಿದಿರುತ್ತಾರೆ. ಹೆಸರಿಗೆ ಮಾತ್ರದ ಸಭೆಯ ಜೀವಂತ ಸದಸ್ಯರಲ್ಲಿ ಗೋಧಿ ಮತ್ತು ಹಣಜಿಯನ್ನು ಬೇರ್ಪಡಿಸುವ ಕಾಲವನ್ನು. ಗೆದ್ದು ಬರುವವರು ತಮ್ಮ ಕರ್ತನೊಡನೆ ಮತ್ತು ಆತನಂತೆ ಇರುವಂತೆ ಬದಲಾಗುವ ಸಮಯವನ್ನು ಮುಟ್ಟುವ ಮಾಹಿತಿಗಳ ಬಗ್ಗೆ ಇರುವ ಹಸಿವೆ ಇದಾಗಿದೆ.

ಈ ಆಳವಾದ ಕುತೂಹಲಕಾರಿ ಪ್ರಸ್ತಾಪಗಳ ಬಗ್ಗೆ ಇರುವ ಪ್ರವಾದನಾ ಬೋಧನೆಗಳ ಸಮಂಜಸತೆಯನ್ನು ಮೆಚ್ಚಿಕೊಳ್ಳುವಂತೆ, ನಮ್ಮ ಕರ್ತನ ಎರಡನೆಯ ಬರೋಣದ ಉದ್ದೇಶ ಮತ್ತು ಆತನು ಪ್ರಕಟವಾಗುವ ರೀತಿ ಇವುಗಳ ಬಗ್ಗೆ ನಮಗೆ ಸ್ಪಷ್ಟವಾದ ದೃಷ್ಟಿಕೋನ ಇರುವುದು ಅಗತ್ಯ. ಆತನ ಬರೋಣದ ಉದ್ದೇಶವು ಈ ಲೋಕದ ಇಚ್ಛೆಯುಳ್ಳವರಿಗೆ ತನ್ನ ಆಳ್ವಿಕೆ, ಬೋಧನೆ, ಶಿಸ್ತುಪಡಿಸುವಿಕೆ ಹಾಗೂ ನ್ಯಾಯ ತೀರ್ಪು ಮಾಡುವ ಮತ್ತು ಆಶೀರ್ವದಿಸುವ ಪ್ರಕ್ರಿಯೆಯ ಮೂಲಕ ದೇವರೊಡನೆ ಸಂಧಾನಪಡಿಸುವುದಾಗಿದೆ. ಸಂಪುಟ ಒಂದರ (1st Volume) ಪ್ರಸ್ತುತ ಓದುಗರು ನಮ್ಮ ಕರ್ತನ ಆಗಮನ ಮತ್ತು ಕಾಣಿಸಿಕೊಳ್ಳುವ ಬಗ್ಗೆ ಮನದಟ್ಟು ಮಾಡಿಕೊಂಡಿದ್ದಾರೆಂದು ನಾವು ನಂಬುತ್ತೇವೆ. ಆದ ಕಾರಣ ನಾವು ಸುಗ್ಗಿಯ ಸಮಯ ಮತ್ತಿತರ ಸಂಗತಿಗಳ ಬಗ್ಗೆ ನಮ್ಮ ಅಧ್ಯಯನವನ್ನು ಮುಂದುವರಿಸುವುದರ ಮೊದಲು ಇದು ಅತ್ಯಂತ ಮಹತ್ವವುಳ್ಳದ್ದಾಗಿದೆ. ವಿದ್ಯಾರ್ಥಿಗಳು ನಮ್ಮ ಕರ್ತನ ಪುನರಾಗಮನದ ವಿಧಾನವನ್ನು ತಿಳಿಯುವ ಮೊದಲು ಅವರ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಯಬೇಕು ಮತ್ತು ಈ ಎರಡರ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡ ಕಾಲದ ಬಗ್ಗೆ ಅಧ್ಯಯನ ಮಾಡಬೇಕು. ಇದು ನಮ್ಮ ಕರ್ತನ ಹಿಂದಿರುಗುವಿಕೆ ಮತ್ತು ಕಾಣಿಸಿಕೊಳ್ಳುವುದರ ಉದ್ದೇಶಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳ ಕಾರಣ ಅವರುಗಳ ಮನಸ್ಸಿನಲ್ಲಿ ಮನೆಮಾಡಿರುವ ತಪ್ಪು ದೃಷ್ಟಿಕೋನವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವುದು ಅವಶ್ಯವಾಗಿದೆ.

ಕ್ರಿಸ್ತನ ಮೂಲಕ ರೂಪಿತವಾದ ದೇವರ ಯೋಜನೆಯು ಸಮಗ್ರವಾಗಿ ಸಾಮರಸ್ಯವುಳ್ಳದ್ದು ಎಂಬುದಕ್ಕೆ ಈಗಾಗಲೇ ನಿರೂಪಿಸಿರುವ ಸತ್ಯಗಳನ್ನು ಗ್ರಹಿಸಿರಿ ಮತ್ತು ಸಾಧ್ಯವಾದಷ್ಟು ಅವುಗಳನ್ನು ಗಟ್ಟಿಯಾಗಿ ಹಿಡುಕೊಳ್ಳಿರಿ. ಎರಡನೆ ಆಗಮನದ ಕಾರ್ಯವು ಪ್ರಥಮ ಆಗಮನದ ಕಾರ್ಯಕ್ಕೆ ಸಂಬಂಧಿಸಿದೆ. ಅಂದರೆ, ದ್ವಿತೀಯ ಆಗಮನದಲ್ಲಾಗುವ ಪುನರ್‌ಸ್ಥಾಪನೆಯ ಮಹಾ ಕಾರ್ಯವು ಮೊದಲನೆಯ ಆಗಮನ ಕಾಲದಲ್ಲಿ ನೆರವೇರಿದ ವಿಮೋಚನಾ ಕಾರ್ಯವನ್ನು ದೇವರ ಯೋಜನೆಯ ತಾರ್ಕಿಕ ಕ್ರಮಾನುಗತಿಯನ್ನು (Sequence) ಅನುಸರಿಸುತ್ತದೆ. ಆದುದರಿಂದ ಕರ್ತನ ಹಿಂದಿರುಗೋಣವು (ಪುನರಾಗಮನ) "ಈ ಲೋಕಕ್ಕೆ ಉದಯವನ್ನು ಎದುರು ನೋಡುವ ನಿರೀಕ್ಷೆಯಾಗಿದೆ" (ಕೀರ್ತನೆ 108:2). ವಿಮೋಚನೆಯ ಮೂಲಕ ದಯಪಾಲಿಸಿರುವ ಅನುಗ್ರಹವನ್ನು ಕಾಪಾಡಿಕೊಳ್ಳುವದಾಗಿದೆ – ಸುವಾರ್ತಾ ಯುಗವು ಮಧ್ಯೆ ಸಂಭವಿಸುವ ನಡುವಣ ಅವಧಿಯಾಗಿದೆ, ಈ ಕಾಲದಲ್ಲಿ ಕರ್ತನು ಬಂದು ಪುನಃಸಂಧಾನದ ಮಹಾಕಾರ್ಯವನ್ನು ನೆರವೇರಿಸಲಿರುವಾಗ ಆತನ ಸಹಭಾಗಿನಿಯಾಗುವಂತೆ ಕ್ರಿಸ್ತನ ಮದಲಗಿತ್ತಿಯ ಆಯ್ಕೆಯಾಗುತ್ತದೆ.

ಸುವಾರ್ತಾ ಯುಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಕ್ರಿಸ್ತನ ಸಭೆಯು ಸಹಸ್ರಮಾನದ ಪುನಃಸಂಧಾನ ಮಹಾಕಾರ್ಯದಲ್ಲಿ ಕರ್ತನೊಡನೆ ಸಹಭಾಗಿನಿಯಾಗ ಬೇಕಾಗಿರುವುದರಿಂದ, ಕರ್ತನ ಎರಡನೆಯ ಆಗಮನಕಾಲದಲ್ಲಿ ಆತನ ಮೊದಲ ಕಾರ್ಯವು ಆತನ ಆಯ್ಕೆಗೊಂಡ ಸಭೆಯನ್ನು ಒಟ್ಟುಗೂಡಿಸುವುದಾಗಿದೆ, ಈ ಬಗ್ಗೆ ಪ್ರವಾದಿಗಳು ಉಲ್ಲೇಖಿಸಿದ್ದಾರೆ – "ನನ್ನೊಡನೆ ಯಜ್ಞದ ಮೂಲಕವಾಗಿ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರೆಂದು ಆಜ್ಞಾಪಿಸುತ್ತಾನೆ" (ಕೀರ್ತನೆ 50:5). ಈ ಒಟ್ಟುಗೂಡಿಸುವಿಕೆ ಅಥವಾ ಸುಗ್ಗೀಕಾಲವು ಎರಡು ಯುಗಗಳನ್ನು ವ್ಯಾಪಿಸುವುದಾಗಿದೆ. ತೋರಿಸಿರುವಂತೆ ಇದು ನಾಲ್ವತ್ತು ವರ್ಷಗಳದ್ದಾಗಿದೆ. ಇದರಲ್ಲಿ ಸುವಾರ್ತಾ ಕಾಲವು ಮುಕ್ತಾಯಗೊಳ್ಳಲಿದ್ದು ಸಹಸ್ರಮಾನ ಕಾಲವನ್ನು ಪರಿಚಯಿಸುವ ಎರಡೂ ಕಾರ್ಯವನ್ನು ಮಾಡುತ್ತದೆ. (ಸಂಪುಟ 1, 219–221; 234–237; and the Chart of Ages). ಈ ಸುಗ್ಗಿಯ ಕಾಲವು ನಾಮಾಂಕಿತ ಕ್ರೈಸ್ತಸಭೆಯಲ್ಲಿ ಗೋಧಿ ಮತ್ತು ಹಣಜಿಯನ್ನು ಬೇರ್ಪಡಿಸುವುದು ಮತ್ತು ಗೋಧಿಯ ವರ್ಗವನ್ನು ಮಹಿಮೆಪಡಿಸುವುದಲ್ಲದೆ, ಹಣಜಿಯನ್ನು ಸುಟ್ಟು ಹಾಕುವುದನ್ನೂ (ನಾಶಪಡಿಸುವುದನ್ನೂ) ಮಾಡುತ್ತದೆ. (ಹಣಜಿ ಅಥವಾ ನಕಲಿ ಗೋಧಿಯಾಗಿ – ವ್ಯಕ್ತಿಗತವಾಗಿ ಅಲ್ಲ; ಬೆಂಕಿಯು ಹಾಗೂ ಹಣಜಿಯು ಸಹಾ ಸಾಂಕೇತಿಕವಾದದ್ದು), ಮತ್ತು ಈ ಲೋಕದ ರಾಜ್ಯಗಳಲ್ಲಿ, ಮತ್ತು ಮಾನವರಲ್ಲಿನ ನಾಗರೀಕ ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ ಶತಮಾನಗಳಿಂದಲೂ ಮಾಗುತ್ತಾ, ಬೆಳೆಯುತ್ತಾ ಬಂದಿರುವ ಈ ಲೋಕದ ದ್ರಾಕ್ಷೆಯ (ಮಾನವ ಆಕಾಂಕ್ಷೆ, ಧನಲೋಭ ಮತ್ತು ಸ್ವಾರ್ಥತೆ ಮುಂತಾದವುಗಳು) ಕೆಟ್ಟ ಫಲಗಳನ್ನು ಕೂಡಿಸಿ ನಾಶಪಡಿಸುತ್ತದೆ.

ಆದಾಗ್ಯೂ, ನಮ್ಮ ಕರ್ತನ ಪುನರಾಗಮನದ ಬಗ್ಗೆ ವ್ಯವಹರಿಸುವಾಗ, ನಾವು ಅದೊಂದು ವ್ಯಕ್ತಿಗತ ಬರೋಣವಾಗಿದೆ ಎಂಬುದನ್ನು ತೋರಿಸಿದ್ದೇವೆ, ನಾವು ಮತ್ತೊಮ್ಮೆ ಸುವ್ಯಕ್ತವಾಗಿ ತಿಕ್ಕಾಟವಿದ್ದಂತೆ ಕಂಡುಬರುವ ನಮ್ಮ ಕರ್ತನ – 1) "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೆ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:20). ಮತ್ತು 2) "ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳಿವೆ ... ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:2–3) ಎಂಬ ಈ ಎರಡು ಹೇಳಿಕೆಗಳನ್ನು ಪರಿಗಣಿಸುವಲ್ಲಿ ವಿದ್ಯಾರ್ಥಿಯು ಗೊಂದಲಕ್ಕೆ ಒಳಗಾಗದಂತೆ ಕಾವಲಿರೋಣ. ಈ ಎರಡೂ ವಾಗ್ದಾನಗಳ ಸಾಮರಸ್ಯವನ್ನು ಮುಂದಣ ದೃಷ್ಟಾಂತವು ಉಂಟುಮಾಡುವುದು. ಒಬ್ಬ ಸ್ನೇಹಿತನು ಮತ್ತೊಬ್ಬನಿಂದ ಬೇರ್ಪಡುವಾಗ "ನೆನಪಿನಲ್ಲಿಟ್ಟುಕೋ, ನಾನು ನಿನ್ನ ಯಾತ್ರೆಯ ಸಮಯದಲ್ಲೆಲ್ಲಾ ನಿನ್ನ ಸಂಗಡಲೇ ಇರುತ್ತೇನೆ" ಎಂದು ಹೇಳುತ್ತಾನೆ". ಆದರೆ ಇದು ನಿಶ್ಚಯವಾಗಿಯೂ ವ್ಯಕ್ತಿಗತವಾದ ಇರುವಿಕೆ ಅಲ್ಲ. ಯಾಕೆಂದರೆ, ಹಾಗೆ ಹೇಳಿದ ಮೇಲೆ ಆ ಸ್ನೇಹಿತನು ವಿರುದ್ಧ ದಿಕ್ಕಿಗೆ ಪ್ರಯಾಣ ಬೆಳೆಸುತ್ತಾನೆ. ಇದರ ಆಲೋಚನೆ ಏನೆಂದರೆ ಪ್ರೀತಿಯಲ್ಲಿ ಮತ್ತು ಆಲೋಚನೆಯಲ್ಲಿ ಅವರು ಒಬ್ಬರ ಬಗ್ಗೆ ಒಬ್ಬರು ಕಾಳಜಿವಹಿಸುವವರಾಗಿದ್ದಾರೆ, ಹೀಗಾಗಿ ಅವರು ಬೇರ್ಪಡುವುದಿಲ್ಲ. ಅದೇ ರೀತಿಯಲ್ಲಿ ಮತ್ತು ಇನ್ನೂ ಪೂರ್ಣಾರ್ಥದಲ್ಲಿ ನಮ್ಮ ಕರ್ತನು ಸದಾ ಆತನ ಸಭೆಯ ಸಂಗಡವೇ ಇರುತ್ತಾನೆ, ಆತನ ದೈವಿಕ ಶಕ್ತಿಯು ಆತನನ್ನು ಮೊದಲಿಂದ ಕಡೆಯವರೆಗೂ ನೇರವಾಗಿ ಮೇಲ್ವಿಚಾರಣೆ ಮಾಡುವುದಕ್ಕೂ, ಸಹಾಯಮಾಡುವುದಕ್ಕೂ ಶಕ್ತಗೊಳಿಸುತ್ತದೆ. ನಾವೀಗ ನಮ್ಮ ಮಧ್ಯೆ ಕರ್ತನು ಆಕಾರದಲ್ಲಿ ಇರುವ ಆತನ ವ್ಯಕ್ತಿಗತ ಪ್ರಸನ್ನತೆಯನ್ನು ಪರಿಗಣಿಸುತ್ತಿಲ್ಲ, ಆದರೆ ಆ ದಿನದಲ್ಲಿ ಆತನು ತನ್ನ ಪರಿಶುದ್ಧರಲ್ಲಿ ಮಹಿಮೆ ಹೊಂದುವಂತೆಯೂ ನಂಬುವವರೆಲ್ಲರಲ್ಲಿ ಮೆಚ್ಚಿಕೆ ಹೊಂದುವಂತೆಯೂ ಬರುವನು (2 ಥೆಸಲೋನಿಕ 1:10). ಇದು ಆತನ ಎರಡನೆಯ ವ್ಯಕ್ತಿಗತ ಪ್ರಸನ್ನತೆಯನ್ನು ಮತ್ತು ಕಾಣಿಸಿಕೊಳ್ಳುವಿಕೆಯನ್ನು ಪರಿಗಣಿಸುತ್ತಿದ್ದೇವೆ.

ಕರ್ತನು ಆಳ್ವಿಕೆ ಮಾಡುವುದಕ್ಕಾಗಿ ಪುನಃ ಬರುತ್ತಾನೆಂದೂ, ಆತನು ತನ್ನ ಎಲ್ಲಾ ಶತ್ರುಗಳನ್ನೂ, ವಿರೋಧಿಗಳನ್ನೂ ತನ್ನ ಕಾಲ ಕೆಳಗೆ ಹಾಕಿಕೊಳ್ಳುವ ತನಕವೂ ಆಳಬೇಕಾಗಿದೆ ಎಂದೂ ಪವಿತ್ರ ಗ್ರಂಥಗಳು ಹೇಳುತ್ತವೆ – "ತಾನು ಎಲ್ಲಾ ವಿರೋಧಿಗಳನ್ನೂತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವುದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿಹೊಂದುವುದು" (1 ಕೊರಿಂಥ 15: 25,26). ಇವೆಲ್ಲವನ್ನೂ ಆತನು ತನ್ನ ಮಹಾ ಪುನರ್ವಶದ ಮಾರ್ಗದಲ್ಲಿ ನೆರವೇರಿಸುತ್ತಾನೆ. ಆತನು ಸಾವಿರ ವರ್ಷಗಳ ಕಾಲ ಆಳ್ವಿಕೆ ಮಾಡಲಿದ್ದಾನೆ. ಆದುದರಿಂದ, ಕ್ರಿಸ್ತನು ವಿಮೋಚಿಸಲು ಬಂದ 34 ವರ್ಷಗಳ ಮೊದಲನೆಯ ಬರುವಿಕೆಗಿಂತಲೂ, ಅಪೇಕ್ಷಿಸಬೇಕಾಗಿರುವಂತೆ, ಆತನ ಎರಡನೆಯ ಬರುವಿಕೆ ಮತ್ತು 1000 ವರ್ಷಗಳ ವಿಜಯೋತ್ಸವದ ರಾಜ್ಯಭಾರವು ಹಾಗೂ ಮರಣವು ಕಡೆಗೆ ಶತ್ರುವಾಗಿ ನಿವೃತ್ತಿ ಹೊಂದುವುದರ ವಿಷಯದ ಪ್ರವಾದನೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸ್ಥಳಾವಕಾಶವನ್ನು ತೆಗೆದುಕೊಂಡಿರುವುದನ್ನು ಕಾಣಬಹುದು. ಈ ಪ್ರವಾದನೆಗಳು ಮೂವತ್ತಮೂರೂವರೆ ವರ್ಷಗಳಲ್ಲಿ ನಡೆದ ಮುಖ್ಯ ಅಂಶಗಳನ್ನು ಮುಟ್ಟುತ್ತವೆ. ಬೆತ್ಲೆಹೇಮ್ ಮತ್ತು

ನಜರೇತಿಗೆ ಕಹಿ ಬೆರೆಸಿದ ಹುಳಿರಸದವರೆಗೆ, ಪಾಲಾದ ವಸ್ತ್ರದವರೆಗೆ, ಶಿಲುಬೆಯ ಮರಣದವರೆಗೆ, ಸಮಾಧಿ ನಂತರ ಪುನರುತ್ಥಾನದವರೆಗೆ ಎಂಬುದನ್ನು ನಾವು ಕಂಡುಕೊಳ್ಳುವಾಗ, ಅದರಂತೆ ಈ ಪ್ರವಾದನೆಗಳಲ್ಲಿ ಆತನ ಎರಡನೆಯ ಬರೋಣ ಮತ್ತು ಪ್ರಸನ್ನತೆಯ ಸಹಸ್ರವರ್ಷಗಳ ವಿವಿಧ ಅಂಶಗಳನ್ನೂ, ವಿಶಿಷ್ಟವಾಗಿ ಅದರ ಪ್ರಾರಂಭ ಮತ್ತು ಅಂತ್ಯದ ಬಗ್ಗೆಯೂ ಕಾಣಬಹುದಾಗಿದೆ.

ಕರ್ತನ ಎರಡನೆಯ ಬರೋಣವು ಮೊದಲನೆಯ ಬರೋಣಕ್ಕಿಂತ ಬಹಳಷ್ಟು ದೀರ್ಘ ಅವಧಿಯನ್ನು ವ್ಯಾಪಿಸುತ್ತದೆ. ಆತನ ಪ್ರಥಮ ಆಗಮನದ ನಿಯೋಗವು ಮೂವತ್ತು ಮೂರೂವರೆವರ್ಷಗಳಲ್ಲಿ ತೀರಿತು, ಆದರೆ ಎರಡನೆ ಆಗಮನದಲ್ಲಿ ನೇಮಕವಾದ ಕಾರ್ಯಗಳನ್ನು ನೆರವೇರಿಸಲು ಸಾವಿರ ವರ್ಷಗಳು ಬೇಕಾಗುತ್ತದೆ. ಹೀಗಾಗಿ ನಮ್ಮ ಕ್ಷಣಿಕ ನೋಟದಲ್ಲಿ, ಮೊದಲನೆಯ ಆಗಮನದಲ್ಲಿನ ಕಾರ್ಯಗಳು, ಎರಡನೆಯ ಆಗಮನದ ಕಾರ್ಯಕ್ಕಿಂತ ಕಡಿಮೆ ಮಹತ್ವವಾದವುಗಳೇನಲ್ಲ. ಹೌದು, ಎರಡನೆಯ ಆಗಮನದ ಕಾರ್ಯಗಳು ಬಹುಮುಖ್ಯ ವಾದವುಗಳಾದರೂ ಮೊದಲನೆಯದಲ್ಲದೆ ಅವುಗಳಿಲ್ಲದೆ ಸಾಧಿಸಲು ಎಂದಿಗೂ ಸಾಧ್ಯವಿಲ್ಲ, ಆದಾಗ್ಯೂ ಅವುಗಳು ಅಷ್ಟೊಂದು ವಿವಿಧತೆಯುಳ್ಳವುಗಳಲ್ಲ, ಆದುದರಿಂದ ಎರಡನೇ ಆಗಮನದ ಕಾರ್ಯಕ್ಕಿಂತ ಕಡಿಮೆ ವಿವರಣೆಗಳನ್ನು ಅಲ್ಲಿ ನೀಡಲಾಗಿದೆ.

ಎರಡನೆಯ ಆಗಮನವನ್ನು ಪರಿಗಣನೆ ಮಾಡುವಾಗ, ಹೇಗೆ ನಾವು ಮೊದಲನೆಯ ಆಗಮನದ ಬಗ್ಗೆ ಎಲ್ಲಾ ಪ್ರವಾದನೆಗಳು ಕರ್ತನ ಆಗಮನದ ಒಂದು ನಿರ್ದಿಷ್ಟವಾದ ಘಟನಾತ್ಮಕ ಗಳಿಗೆಯ ನೆರವೇರಿಕೆಯನ್ನು ತೋರುವದಿಲ್ಲವೋ, ಅದರಂತೆಯೇ, ನಾವು ಎಲ್ಲಾ ಮನುಷ್ಯರಿಗೆ ಆತನ ಎರಡನೆಯ ಪ್ರತ್ಯಕ್ಷತೆಯ ಬಗ್ಗೆ ತಿಳಿಸಲು ಗಮನ ಸೆಳೆಯಬೇಕಿಲ್ಲ. ಮೊದಲನೆಯ ಆಗಮನದ ಪ್ರಕರಣದಲ್ಲಿಯೂ ಹಾಗಾಗಿರಲಿಲ್ಲ. ಅಂಥವುಗಳು ದೇವರ ಸಾಮಾನ್ಯ ಪದ್ಧತಿಯಲ್ಲ. ಮೆಸ್ಸೀಯನ ಮೊದಲನೆಯ ಆಗಮನವು ವಾಡಿಕೆ ಕ್ರಮದಿಂದ ಹೊರತುಪಡಿಸಿದ ಯಾವುದೇ ಶೀಘ್ರವಾದ ಅಥವಾ ಆಶ್ಚರ್ಯಕರವಾದ ನಿರೂಪಣೆಯಿಂದ ಗುರುತುಪಡಿಸಿರಲಿಲ್ಲ. ಆದರೆ ಅದು ಕ್ರಮೇಣವಾದ ನೆರವೇರಿಕೆಗಳಿಂದ ಪ್ರಕಟವಾಯಿತು ಮತ್ತು ಸಾಬೀತಾಯಿತು. ಮತ್ತು ಈ ಮೂಲಕ ಚಿಂತನಾಶೀಲ ನಿರೀಕ್ಷಕರಿಗೆ ಅವರು ನಿರೀಕ್ಷಿಸಿದ್ದ ಎಲ್ಲಾ ಘಟನೆಗಳೂ ಸಮಯಕ್ಕೆ ಸರಿಯಾಗಿ ನೆರವೇರಿರುವುದನ್ನು ತೋರಿಸಿಕೊಟ್ಟಿತು. ಮತ್ತು ಅದೇ ರೀತಿಯಲ್ಲಿ ಆತನ ಎರಡನೆಯ ಬರೋಣದಲ್ಲಿಯೂ ಸಹ, ಆತನ ಆಗಮನದ ಕ್ಷಣವನ್ನು ನಾವು ಕಂಡುಕೊಳ್ಳುವುದು ಆತನ ಪ್ರಸನ್ನತೆಯನ್ನು ಗ್ರಹಿಸುವುದಕ್ಕಿಂತ ಕಡಿಮೆ ಮಹತ್ವವುಳ್ಳದ್ದಾಗಿದೆ. ಮೊದಲನೆಯ ಆಗಮನದಲ್ಲಿಯೂ ಆತನ ಪ್ರಸನ್ನತೆಯನ್ನು ಗ್ರಹಿಸಿಕೊಳ್ಳುವುದು ಅದು ಎಷ್ಟು ಬೇಗ ಆದರೆ ಅಷ್ಟು ಮುಖ್ಯವಾಗಿತ್ತು. ಆದರೆ ಆತನ ಜನನ ದಿವಸವನ್ನು ತಿಳುಕೊಳ್ಳುವುದು ಅಷ್ಟೊಂದು ಮುಖ್ಯವಾಗಿರಲಿಲ್ಲ. ಎರಡನೆಯ ಆಗಮನವನ್ನು ಪರಿಗಣಿಸುವಾಗ, ಆತನ ಬರೋಣದ ಕಾರ್ಯವು, ಮತ್ತು ಆಗಮನ ಕ್ಷಣವು ಬಹಳಸಾರಿ ಆಲೋಚಿಸಲಾಗಿದೆ. ಆದರೆ ಅದು ಮೊದಲನೆಯ ಆಗಮನದಲ್ಲಿದ್ದಂತೆ ಉಪಸ್ಥಿತಿಯ ಅವಧಿಯ (period of presence) ಆಲೋಚನೆ ಯಾಗಿರಬೇಕು. ಆಗ ಪ್ರಸನ್ನತೆಯು ಪ್ರಾರಂಭವಾಗುವ ನಿಖರವಾದ ಕ್ಷಣವು ಕಡಿಮೆ ಮಹತ್ವವುಳ್ಳದ್ದಾಗಿ ಕಂಡುಬರುತ್ತದೆ ಮತ್ತು ಆತನ ಬರೋಣದ ಕಾಲದಲ್ಲಿನ ಉದ್ದೇಶ ಮತ್ತು ಕಾರ್ಯಗಳು ಹೆಚ್ಚಿನ ಪರಿಗಣನೆಯನ್ನು ಪಡಕೊಳ್ಳುತ್ತವೆ.

ನಾವು ನಮ್ಮ ಮನಸ್ಸಿನಲ್ಲಿ ನಮ್ಮ ಕರ್ತನು ಇನ್ನು ಮುಂದೆ ಮಾನವನಲ್ಲ ಎಂಬ ಸತ್ಯವನ್ನು ನೆನಪಿನಲ್ಲಿಟ್ಟುಕೊಂಡಿರಬೇಕು; ಆತನು ಒಬ್ಬ ಮನುಷ್ಯನಾಗಿ ಜನರಿಗಾಗಿ ತನ್ನನ್ನೇ ಈಡುಬಲಿಯಾಗಿ ಸಮರ್ಪಿಸಿ ಕೊಂಡನು, ಅದೇ ಉದ್ದೇಶಕ್ಕಾಗಿ ಆತನು ಮನುಷ್ಯನಾದನು (1 ತಿಮೋ. 2:6, ಇಬ್ರಿಯ 10:4,5; 1 ಕೊರಿಂಥ 15:21,22). ಆತನೀಗ ಅತ್ಯುನ್ನತ ಸ್ಥಾನಕ್ಕೆ, ದೈವಿಕ ಸ್ವಭಾವಕ್ಕೆ ಏರಿಸಲ್ಪಟ್ಟಿದ್ದಾನೆ. ಆದುದರಿಂದ ಪೌಲನು – "ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರಸಂಬಂಧವಾಗಿ ಅರಿತುಕೊಳ್ಳುವುದಿಲ್ಲ; ಕ್ರಿಸ್ತನನ್ನು ಸಹ ನಾವು ಶರೀರ ಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವುದಿಲ್ಲ" (2 ಕೊರಿಂಥ 5:16) ಎಂತಲೂ. "ಕಡೇ ಆದಾಮನೋ ಬದುಕಿಸುವ ಆತ್ಮನು" (1 ಕೊರಿಂಥ 15:45) ಎಂತಲೂ ಬರೆದಿದ್ದಾನೆ. ಆತನು ಭೂಲೋಕದ, ಭೂಲೋಕಕ್ಕೆ ಸಂಬಂಧಿಸಿದ ಮನುಷ್ಯನಲ್ಲ. ಆತನು ಇನ್ನು ಮುಂದೆ ಯಾವುದೇ ಅರ್ಥದಲ್ಲಿ, ಮಟ್ಟದಲ್ಲಿ ಮನುಷ್ಯನು ಅಲ್ಲ. ನಾವು ಸಂಪುಟ 1, ಅಧ್ಯಾಯ 10ರಲ್ಲಿ ನೋಡಿದ ಆತನ ಸ್ವಭಾವಗಳು ಪ್ರತ್ಯೇಕವಾದವುಗಳು, ವೈಶಿಷ್ಟತೆಯುಳ್ಳವುಗಳು ಎಂದು ಕಲಿತಿದ್ದನ್ನು ಮರೆಯಬಾರದು. ಆತನು ಇನ್ನು ಮುಂದೆ ಯಾವುದೇ ಅರ್ಥದಲ್ಲಿಯಾಗಲೀ, ಮಟ್ಟದಲ್ಲಿಯಾಗಲೀ ಮನುಷ್ಯನಾಗದೇ ಇರುವುದರಿಂದ ಮೊದಲನೆಯ ಆಗಮನದಲ್ಲಿನಂತೆ ಆತನು ಪುನಃ ಮಾನವ ರೂಪದಲ್ಲಿ ಬರುತ್ತಾನೆಂದು ನಾವು ನಿರೀಕ್ಷಿಸಕೂಡದು. ಆತನ ಎರಡನೆಯ ಬರೋಣವು ಭಿನ್ನವಾಗಿರುತ್ತದೆ ಮತ್ತು ಅದು ಬೇರೆ ಉದ್ದೇಶಕ್ಕಾಗಿಯೇ ಇರುತ್ತದೆ.

ನಮ್ಮ ಕರ್ತನು ಆತನ ಪುನರುತ್ಥಾನದಲ್ಲಿ ಮಾನವ ಸ್ವಭಾವದಿಂದ ದೈವಿಕ ಸ್ವಭಾವಕ್ಕೆ ಬದಲಾದ ಸತ್ಯವನ್ನು

ಗಮನಿಸುವುದಾದರೆ ಇದು ಅಲ್ಲಿಂದ ಸುಮಾರು ಮೂವತ್ತಮೂರೂವರೆ ವರ್ಷಗಳ ಹಿಂದೆ ಆತನು ತನ್ನೆಲ್ಲಾ ಆತ್ಮೀಕ ಮಹಿಮೆಯನ್ನು ಬದಿಗಿರಿಸಿ "ಮಾಂಸಧಾರಿ ಯಾದನು" ಎಂಬ ಬದಲಾವಣೆಗಿಂತ ಹೆಚ್ಚಿನ ಬದಲಾವಣೆಯಾಗಿದೆ. ನಾವು ಆತನ ಪುನರುತ್ಥಾನದ ನಂತರ ಪರಲೋಕಕ್ಕೆ ತನ್ನ ತಂದೆಯ ಬಳಿಗೆ ಏರಿ ಹೋಗುವ ಮುನ್ನ ಆ ನಾಲ್ವತ್ತು ದಿನಗಳ ಆತನ ಪ್ರತಿಯೊಂದು ಕಾರ್ಯವನ್ನೂ ಸೂಕ್ಷ್ಮವಾಗಿ ಗಮನಿಸಬೇಕಾಗಿರುವುದು ಬಹಳ ಪ್ರಯೋಜನಕಾರಿ ಯಾಗಿದೆ; ಯಾಕೆಂದರೆ, ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ಅಂದರೆ ಪುನರುತ್ಥಾನ ಹೊಂದಿದ ಕ್ರಿಸ್ತನಾಗಿದ್ದನೇ ಹೊರತು ತನ್ನನ್ನೇ ಮರಣದ ಮೂಲಕ ಈಡುಬಲಿಯಾಗಿ ಅರ್ಪಿಸಿದ ಮಾನವನಾದ ಯೇಸುಕ್ರಿಸ್ತನಾಗಿರಲಿಲ್ಲ. ಮಾಂಸಧಾರಿಯಾಗಿದ್ದ ಆತನು ಮರಣಪಟ್ಟು ತನ್ನ ಪುನರುತ್ಥಾನದಲ್ಲಿ "ಆತ್ಮ ಸಂಬಂಧವಾಗಿ ತಿರುಗಿ ಬದುಕುವವನಾದನು" (1 ಪೇತ್ರ : 3:18)*

ಆತನ ಎರಡನೆಯ ಬರೋಣದಲ್ಲಿ ಆತನು ಈಗ ಲೋಕದಲ್ಲಿ ಇರುವ ಅಧಿಕಾರಕ್ಕೆ ಅಧೀನನಾಗಿರಲು, ಕೈಸರಿನಿಗೆ ತೆರಿಗೆ ಕೊಡಲು ಮತ್ತು ಕಿರುಕುಳಗಳನ್ನೂ, ಅನ್ಯಾಯವನ್ನೂ, ಹಿಂಸೆಯನ್ನೂ ದೈನತೆಯಿಂದ ಸ್ವೀಕರಿಸಿ ಬಾಧೆಪಡಲು ಬರುವವನಲ್ಲ. ಆದರೆ ಆಳ್ವಿಕೆಮಾಡಲು, ಭೂಪರಲೋಕಗಳಲ್ಲಿರುವ ತನ್ನೆಲ್ಲಾ ಅಧಿಕಾರಗಳನ್ನೂ ಚಾಲನೆಗೊಳಿಸಲು ಬರುವವನಾಗಿದ್ದಾನೆ. ಆತನು ದೀನತೆಯಿಂದೊಡಗೂಡಿದ ಶರೀರ, ಮಾನವ ಶರೀರಧಾರಿಯಾಗಿ ಬರುವುದಿಲ್ಲ. ಆತನು ಈ ಹಿಂದೆ ಆತನ ಮಹಿಮಾ ಶರೀರಕ್ಕಿಂತ ಕೀಳಾದ ಮಾನವ ಶರೀರವನ್ನು ಮರಣವನ್ನನುಭವಿಸುವ ಸಲುವಾಗಿಯೇ ಧರಿಸಿ ಕೊಂಡಿದ್ದನು (ಇಬ್ರಿಯ2:9). ಆದರೆ, ಈಗ ದೇವರ ತತ್ವದ ಮೂರ್ತಿಯೂ ಆದ (ಇಬ್ರಿಯ 1:3) ಆತನ ಮಹಿಮೆಯುಳ್ಳ ಆತ್ಮೀಕ ಶರೀರದಲ್ಲಿ ಬರುವನು. ಯಾಕೆಂದರೆ, ಆತನು ತನ್ನ ಮರಣದ ಪರ್ಯಂತ ತೋರಿಸಿದ ವಿಧೇಯತೆಗಾಗಿ ಆತನು ಈಗ ದೈವಸ್ವಭಾವವೆಂಬ ಅತ್ಯುನ್ನತ ಸ್ಥಿತಿಗೆ ಎತ್ತಲ್ಪಟ್ಟಿದ್ದಾನೆ. "ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂಥ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ" (ಫಿಲಿಪ್ಪಿ 2:9; 1 ಕೊರಿಂಥ 15:27). ಆತನು ಈಗ ಹೇಗಿದ್ದಾನೆ ಎಂಬುದು ನಮ್ಮ ಮಾನುಷ ತಿಳುವಳಿಕೆಗೆ ಇನ್ನೂ ಕಂಡು ಬಂದಿಲ್ಲ ಎಂಬುದಾಗಿ ಅಪೋಸ್ತಲನು ತೋರಿಸಿಕೊಟ್ಟಿದ್ದಾನೆ; ಆದುದರಿಂದ ನಾವು ಆತನಂತೆ ಮಾಡಲ್ಪಟ್ಟಾಗ ಹೇಗೆ ಇರುವೆವೊ ಎಂಬುದು ನಮಗೆ ತಿಳಿಯುತ್ತಿಲ್ಲ, ನಾವು ಒಂದಲ್ಲಾ ಒಂದು ದಿನ ಆತನ ಸಂಗಡ, ಆತನಂತೆ ಇರುತ್ತೇವೆ, ಮತ್ತು ಆತನಿರುವ ಪ್ರಕಾರವೇ ನೋಡುತ್ತೇವೆ (1 ಯೋಹಾನ 3:2) ಎಂಬ ಭರವಸೆಯಲ್ಲಿ ಉಲ್ಲಾಸಪಡಬಹುದು. ಪ್ರಥಮ ಆಗಮನದಲ್ಲಿದ್ದ ಆತನು ನಮ್ಮ ಸಲುವಾಗಿ ದೀನತೆಯಿಂದೊಡಗೂಡಿದ ಮಾನವ ಶರೀರಧಾರಿ ಯಾಗಿದ್ದನು, ತನ್ನೆಲ್ಲಾ ಹಿಂದಿನ ವೈಭವಗಳನ್ನು ಬದಿಗಿರಿಸಿ, ನಾವು ಆತನ ಬಡತನದ ಮೂಲಕ ಐಶ್ವರ್ಯವಂತ ರಾಗುವಂತೆ ಆತನು ಬಡವನಾದನು.

ನಮ್ಮ ಕರ್ತನು ಪುನರುತ್ಥಾನದ ನಂತರ, ಹಾಗೂ ಅದರ ಪೂರ್ವದಲ್ಲಿ ತನ್ನ ಪ್ರಸನ್ನತೆಯನ್ನು ಆತನ ಶಿಷ್ಯರಿಗೆ ಪ್ರಕಟವಾಗುವಂತೆ ಉಪಯೋಗಿಸಿದ ವಿವೇಕವು, ದೂರದೃಷ್ಟಿಯುಳ್ಳ ರೀತಿಯನ್ನು ನಾವು ಪರಿಗಣಿಸಿದರೆ, ಇದೇ ವಿವೇಕವು ಆತನ ಸಭೆಗೂ ಮತ್ತು ಲೋಕಕ್ಕೂ ಆತನ ಎರಡನೆಯ ಬರೋಣದ ಪ್ರಕಟನೆಯಲ್ಲಿಯೂ ವ್ಯಕ್ತವಾಗುತ್ತದೆ ಎಂದು ನೆನಪಿನಲ್ಲಿಟ್ಟುಕೊಳ್ಳಲು ನಮಗೆ ಸಹಾಯ ಮಾಡಬಹುದು, ರೀತಿಯು ಒಂದೇ ತೆರನಾಗಿರಬೇಕಾದ ಅಗತ್ಯತೆ ಇಲ್ಲ, ಆದರೆ ಪ್ರತಿಯೊಂದರಲ್ಲಿಯೂ ಅದು ಅದರ ಉದ್ದೇಶಕ್ಕೆ ಹೊಂದಿಕೆಯಾಗಿರುತ್ತದೆ, ಅದು ಎಂದಿಗೂ ಮಾನವರಿಗೆ ಭೀತಿಗೊಳಿಸಲು ಅಥವಾ ಭಾವೋದ್ವೇಗಪಡಲು ಅಲ್ಲ, ಆದರೆ ಅವರ ಮೇಲೆ ಪ್ರಭಾವ ಬೀರಲಿರುವ ಮಹಾಸತ್ಯತೆಗಳ ಬಗ್ಗೆ ನಿರುತ್ಸಾಹವನ್ನು ತಣಿಸಲು ಮತ್ತು ಶಾಂತಿಯುಳ್ಳ ತೀರ್ಮಾನಗಳನ್ನು ಮನದಟ್ಟುಪಡಿಸುವ ಉದ್ದೇಶವುಳ್ಳದ್ದಾಗಿದೆ. ನಮ್ಮ ಕರ್ತನ ಪ್ರಥಮ ಆಗಮನವು ಗಾಬರಿಪಡಿಸುವ, ಉದ್ವೇಗಪಡುವ ಅಥವಾ ದಿಗಿಲುಪಡುವ ಘಟನೆಯಾಗಿರಲಿಲ್ಲ. ಆತನು ಶಾಂತ ಸ್ವಭಾವದಲ್ಲಿ ಯಾರ ಗಮನಕ್ಕೂ ಬರಲಿಲ್ಲ! ಯಾರು ಹೆಚ್ಚಾದ ನಂಬಿಕೆ ಮತ್ತು ದೀನತೆಯುಳ್ಳವರೋ ಅವರು ಮಾತ್ರವೇ ಆ ದೀನಾವಸ್ಥೆಯಲ್ಲಿ ಜನಿಸಿದ ಶಿಶುವನ್ನು, ಜನನದಲ್ಲಿ ಆತನನ್ನು ದುಃಖಭರಿತ ವ್ಯಕ್ತಿಯಾಗಿ, ದೀನರ ಮತ್ತು ಬಡವರ ಸ್ನೇಹಿತನನ್ನಾಗಿ, ಅಂತಿಮವಾಗಿ ಶಿಲುಬೆ ಹಾಕಲ್ಪಡುವವನಾಗಿ, ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಮೆಸ್ಸೀಯನಾಗಿ ಕಂಡುಕೊಂಡರು.

---

* ಈ ಪರಿಚ್ಛೇಧದಲ್ಲಿ, 'in the' ಮತ್ತು 'by the' ಎಂಬ ಪದಗಳು ಇಚ್ಛಾನುಸಾರವಾಗಿ ಭಾಷಾಂತರಗೊಂಡಿದ್ದು ತಪ್ಪು ತಿಳುವಳಿಕೆಗೆ ನಡಿಸುತ್ತಿವೆ. ಗ್ರೀಕ್ ಭಾಷೆಯಲ್ಲಿ ಸರಳವಾಗಿ "ಆತನು ಶರೀರ ಸಂಬಂಧವಾಗಿ ಕೊಲ್ಲಲ್ಪಟ್ಟನು, ಆತ್ಮ ಸಂಬಂಧದಲ್ಲಿ ತಿರುಗಿ ಬದುಕುವವನಾದನು" ಎಂದು ಬರೆದದೆ. ಯೇಸು ಕ್ರಿಸ್ತನನ್ನು ಮಾಂಸಧಾರಿಯಾದ ಮನುಷ್ಯನನ್ನಾಗಿ ಕೊಲ್ಲಲಾಯಿತು. ಆದರೆ ಆತನು ಆತ್ಮಸ್ವರೂಪನಾಗಿ ಎಬ್ಬಿಸಲ್ಪಟ್ಟನು. ಅದೇ ರೀತಿಯಲ್ಲಿ ಸಭೆಯು ಆತನಂತಾಗಬೇಕಾದರೆ ಇದೇ ಕ್ರಮದಲ್ಲಿ ಬದಲಾವಣೆ ಹೊಂದಬೇಕು, ಸ್ಪಷ್ಟವಾಗಿ, ಶಿರಸ್ಸಿನಲ್ಲಿ ಕಂಡು ಬಂದು ಬದಲಾವಣೆಯು ಜಯ ಹೊಂದಿದವರಿಗೂ ಕಾದಿರಲಾದ ಬದಲಾವಣೆಯಂತಿದೆ ಎಂದು ವಿವರಿಸಲಾಗಿದೆ. ಅವರು ಮಾನವ ಸ್ವಭಾವದಿಂದ ದೈವಿಕ ಸ್ವಭಾವಕ್ಕೆ ಬದಲಾವಣೆ ಹೊಂದಿಕೊಂಡು ಆತನಂತೆ "ದೈವಿಕ ಸ್ವಭಾವದ ಪಾಲುದಾರರಾಗಬೇಕಾಗಿದೆ", ಭಕ್ತರ ಬದಲಾವಣೆಯ ಕೆಳಗಣ ವಿವರಣೆಯು ಅವರ ಕರ್ತನಿಗೂ ಅನ್ವಯವಾಗುತ್ತದೆ. "ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವುದು, ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದು ಬರುವದು" – 1 ಕೊರಿಂಥ 15:42,43.

ಆತನು ಪುನರುತ್ಥಾನಹೊಂದಿದ ಮೇಲೆ, ಆತನ ಪ್ರಸನ್ನತೆಯ ಪ್ರಕಟನೆಯು ವಿಶಿಷ್ಟವಾಗಿ ಆತನ ಬದಲಾದ ಸ್ವಭಾವವನ್ನು ಪರಿಗಣಿಸುವಾಗ ಆ ಪ್ರಕರಣದ ಸ್ವಭಾವವು ಹೆಚ್ಚು ಬೆರಗುಗೊಳಿಸುವ ಸತ್ಯವಾಗಿತ್ತು. ಆದಾಗ್ಯೂ, ಆತನ ಪುನರುತ್ಥಾನದ ಸತ್ಯವು, ಆತನ ಬದಲಾವಣೆ ಹೊಂದಿದ ಸ್ವಭಾವದೊಡನೆ ಈ ಲೋಕದವರಿಗೆಲ್ಲಾ ಅಲ್ಲ, ಆದರೆ ಆಯ್ಕೆಗೊಂಡ ಸಾಕ್ಷಿಗಳಿಗಾಗಿ ಪ್ರಕಟಗೊಳ್ಳಬೇಕಾಗಿತ್ತು. ಅವರು ಮುಂದೆ ಈ ಸತ್ಯದ ಬಗ್ಗೆ ವಿಶ್ವಾಸಾರ್ಹ ಸಾಕ್ಷಿಯುನ್ನು ಮುಂದಿನ ಜನಾಂಗದವರಿಗೆ ಕೊಡಬೇಕಾಗಿತ್ತು. ಆಗ ಈ ಲೋಕವು ಈ ಸತ್ಯದ ಬಗ್ಗೆ ಹೆಚ್ಚಿನ ಪರಿಚಯಗೊಂಡಿರುತ್ತಿದ್ದರೆ ನಮ್ಮ ದಿನದಲ್ಲಿ ಬರುವ ಸಾಕ್ಷಿಯು ಕಡಿಮೆ ವಿಶ್ವಾಸಾರ್ಹವಾಗಿದ್ದು ಬಣ್ಣ ತುಂಬಿದ, ಮಾನವರ ಕಲ್ಪನೆ ಮತ್ತು ಅವರ ಸಂಪ್ರದಾಯಗಳ ಮಿಶ್ರಣಗಳೊಂದಿಗೆ ಸತ್ಯವು ಬಹುಮಟ್ಟಿಗೆ ನಂಬಲರ್ಹವಾಗಿರುತ್ತಿರಲಿಲ್ಲ. ಆದರೆ, ದೇವರು ಈ ಕಾರ್ಯವನ್ನು ಕೇವಲ ಆಯ್ಕೆಗೊಂಡವರಿಗೆ, ವಿಶ್ವಾಸಿಗಳಿಗೆ ಮತ್ತು ಅರ್ಹ ಸಾಕ್ಷಿಗಳಿಗೆ ಮಾತ್ರವೇ ವಹಿಸಿಕೊಟ್ಟನು. ನಾವು ಈ ವರದಿಯನ್ನು ಗಮನಿಸುವಂತೆ, ಪ್ರತಿಯೊಬ್ಬರೂ ಹೇಗೆ ಉದ್ದೇಶವು ನೆರವೇರಿತೆಂದೂ, ಕ್ರಿಸ್ತನ ಪುನರುತ್ಥಾನ ಮತ್ತು ಅವುಗಳಿಗೆ ನೀಡಿದ ಬದಲಾವಣೆಗಳು ಎಷ್ಟೊಂದು ಸ್ಪಷ್ಟವೂ, ಸಕಾರಾತ್ಮಕವೂ, ಮನಗಾಣಿಸುವಂತವುಗಳೂ ಆಗಿದೆಯೆಂದು ಗುರುತಿಸಲಿ. ಆತನು ಈ ಮಹಾ ಸಂಗತಿಗಳನ್ನು ನೆರವೇರಿಸುವಲ್ಲಿ ಮತ್ತು ಪ್ರಾಧಾನ್ಯತೆ ನೀಡುವಲ್ಲಿ ಅನವಶ್ಯಕವಾಗಿ ಉಂಟಾಗಬಹುದಾದ ಭಯ ಹುಟ್ಟಿಸುವ ಅಥವಾ ಉದ್ರೇಕಿಸುವ ಸಂಗತಿಗಳಿಂದ ಕಾಪಾಡುವಂತೆ ತೆಗೆದುಕೊಂಡ ಜಾಗರೂಕತೆಯನ್ನು ಗುರುತಿಸಿರಿ. ಅದೇ ವಿವೇಕವು, ದೂರದೃಷ್ಟಿಯು ಮತ್ತು ಚಾಕಚಕ್ಯತೆಯು ಆತನ ಎರಡನೆಯ ಬರೋಣದ ಭವ್ಯ ಪ್ರಸನ್ನತೆಯ ಸತ್ಯವನ್ನು ತಿಳಿಯಪಡಿಸುವುದರಲ್ಲಿಯೂ ಕಂಡುಬರುತ್ತದೆ ಎಂಬ ದೃಢತೆ ಇರಲಿ. ಲೋಕವು ಸಾಕ್ಷ್ಯವನ್ನು ಸ್ವೀಕರಿಸುವ ಸರಿಯಾದ ಮನೋವೃತ್ತಿಯನ್ನು ಹೊಂದುವಂತೆ ಸಾಮಾನ್ಯವಾಗಿ ಕಟ್ಟುನಿಟ್ಟಾದ ಶಿಸ್ತಿಗೆ ಒಳಪಡಬೇಕಾಗಿದ್ದರೂ ಸಮಾಧಾನದ, ಶಾಂತವಾದ ತೀರ್ಪು ಪ್ರತಿಯೊಂದು ಪ್ರಕರಣದಲ್ಲಿಯೂ ಮನದಟ್ಟಾಗುತ್ತದೆ. ಅದೇ ಸಮಯದಲ್ಲಿ ಯಾರ ಹೃದಯವು ಸರಿಯಾಗಿದೆಯೋ ಅವರು ಬೇಗನೇ ಆಶೀರ್ವಾದಭರಿತ ಬುದ್ಧಿವಂತಿಕೆಯನ್ನು ಪಡಕೊಳ್ಳುತ್ತಾರೆ. ಆತನ ಪುನರುತ್ಥಾನದ ಮತ್ತು ಆತ್ಮೀಕ ಸ್ವಭಾವಕ್ಕೆ ಸಂಬಂಧಿಸಿದ ಎಲ್ಲಾ ಬದಲಾವಣೆಯ ಸತ್ಯಸಂಗತಿಗಳೂ ಆತನ ಶಿಷ್ಯರಿಗೆ ಒಮ್ಮೆಲೇ ನೀಡಲಾಗಲಿಲ್ಲ, ಆದರೆ ಅವುಗಳು ಅತ್ಯಂತ ಆಳವಾಗಿ ಪ್ರಭಾವ ಬೀರಿ ಅವರು ಅದನ್ನು ಸಹಿಸಿಕೊಳ್ಳಲು ಶಕ್ತರಾದಾಗಲಷ್ಟೇ ನೀಡಲಾಯಿತು.

ಕರ್ತನ ಮೂರೂವರೆ ವರ್ಷಗಳ ಸೇವಾವಧಿಯಲ್ಲಿ, ಆತನ ಶಿಷ್ಯರುಗಳು ಮೆಸ್ಸೀಯನ ಪ್ರತ್ಯಕ್ಷತೆಯ ಮುನ್ಸೂಚನೆಯನ್ನೂ ಮತ್ತು ರಾಜ್ಯದ ಸ್ಥಾಪನೆಯ ವಿಷಯವನ್ನು ಘೋಷಿಸುವ ಸಲುವಾಗಿ ತಮ್ಮ ಸಮಯ ಮತ್ತು ಚೈತನ್ಯವನ್ನು ಮುಡುಪಿಟ್ಟು ತಮ್ಮೆಲ್ಲಾ ಸ್ನೇಹಿತರನ್ನು, ಪ್ರತಿಷ್ಠೆಯನ್ನು, ವಹಿವಾಟು ಮುಂತಾದವುಗಳನ್ನು ತ್ಯಾಗಮಾಡಿದ್ದರು. ಆದರೆ ತಮ್ಮ ಪ್ರಭುವು ಅತ್ಯುನ್ನತಕ್ಕೇರುವ ಮತ್ತು ವಾಗ್ದಾನ ಮಾಡಿದಂತೆ ತಾವುಗಳು ತಮ್ಮ ಕರ್ತನೊಂದಿಗೆ ಉನ್ನತಕ್ಕೆ ಏರುವ ಕಾಲದ ವಿಷಯವಾಗಿ ಅವರಲ್ಲಿ ಅವಶ್ಯಕವಾಗಿ ಕೆಲವೊಂದು ಅಪಕ್ವವಾದ ಕಲ್ಪನೆಗಳಿದ್ದವು. ಆಗ ಈ ಬಗ್ಗೆ ಸಂಪೂರ್ಣವಾದ ತಿಳುವಳಿಕೆಯ ಅಗತ್ಯವಿದ್ದಿಲ್ಲ. ಅವರು ತಮ್ಮ ಪ್ರತಿಯೊಂದು ಹೆಜ್ಜೆಯನ್ನೂ ಸೂಕ್ತ ಸಮಯದಲ್ಲಿ ನಿಷ್ಠಾವಂತಿಕೆಯಿಂದ ತೆಗೆದುಕೊಂಡರೆ ಸಾಕಾಗಿತ್ತು; ಆದುದರಿಂದ ಅವರ ಪ್ರಭುವು ಅವರಲ್ಲಿರುವ ಸ್ವೀಕರಣಾ ಶಕ್ತಿಗನುಸಾರವಾಗಿ ಅವರಿಗೆ ಸ್ವಲ್ಪ ಸ್ವಲ್ಪವಾಗಿ ಕಲಿಸಿಕೊಟ್ಟನು. ಆತನ ಸೇವಾಕಾಲದ ಅಂತ್ಯ ಬರುವಾಗ ಆತನು – "ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ; ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು .... ನಿಮಗೆ ಎಲ್ಲವನ್ನೂ ಉಪದೇಶಿಸಿ ನಾನು ನಿಮಗೆ ಹೇಳಿದ್ದನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 16:12,13; 14:26) ಎಂದನು.

ಆತನನ್ನು ಥಕ್ಕನೇ ತೆಗೆದುಕೊಂಡು ಹೋದದ್ದನ್ನು, ಒಬ್ಬ ಮಹಾಪಾತಕಿಯೋ ಎಂಬಂತೆ ಆತನನ್ನು ಶಿಲುಬೆಗೆ ಹಾಕಿದ್ದನ್ನು ಅವರು ನೋಡಿದಾಗ ಅವರು ಸಾಧ್ಯವಾದಷ್ಟು ಸಜ್ಜಿತರಾಗಿದ್ದರೂ, ಅವರಿಗುಂಟಾದ ಮಹಾ ನಿರಾಶೆಯ ಬಗ್ಗೆ ಯಾರು ನಿಮಗೆ ತಿಳಿಸಿಯಾರು?, ಆತನು ಶಿಲುಬೆಗೆ ಹಾಕಲ್ಪಡುವ ಕೇವಲ ಐದು ದಿನಗಳ ಹಿಂದೆಯಷ್ಟೇ ಅವರು ಆತನ ರಾಜ್ಯವನ್ನು ಮತ್ತು ಮಹಿಮೆಯನ್ನು ನಿರೀಕ್ಷಿಸುತ್ತಿದ್ದರು ಮತ್ತು ಈ ಬಗ್ಗೆ ಘೋಷಿಸುವವರಾಗಿದ್ದರು ಮತ್ತು ಇದು ಈಡೇರುವ ಕಾಲವು ಕೂಡಿಬಂದಿದೆ ಎಂಬುದು ಅವರ ಅನಿಸಿಕೆಯಾಗಿತ್ತು (ಯೋಹಾನ 12:1, 12–19). ಆತನ ಮೇಲೆ ತಪ್ಪು ಅಪವಾದ ಹೊರಿಸಿ ಆತನನ್ನು ಅನ್ಯಾಯವಾಗಿ ಶಿಲುಬೆಗೆ ಹಾಕುತ್ತಾರೆಂದು ಅವರಿಗೆ ಗೊತ್ತಿದ್ದರೂ ಅದು ದೀರ್ಘಕಾಲದಿಂದ ಕಾಪಾಡಿಕೊಂಡು ಬಂದಿದ್ದ ಯೆಹೂದ್ಯ ರಾಜನ ಬಗ್ಗೆ ಆ ಅರಸನು ತಮ್ಮ ರಾಷ್ಟ್ರವನ್ನು ಪ್ರಭಾವ ಮತ್ತು ಅಧಿಕಾರದಿಂದ ಪುನಃವಶಪಡಿಸಿಕೊಳ್ಳುವನು ಎಂಬ ಅವರ ಜನಾಂಗದ ದೀರ್ಘ ಕಾಲದ ನಿರೀಕ್ಷೆಯು

ಅಲುಗಾಡಿಸಿರಲಿಲ್ಲ ಮತ್ತು ಅದರೊಂದಿಗೆ ಅವರ ಸ್ವಂತ ವ್ಯಕ್ತಿಗತ ನಿರೀಕ್ಷೆಗಳು, ಆಕಾಂಕ್ಷೆಗಳು. ಮತ್ತು ಆ ರಾಜ್ಯದಲ್ಲಿ ತಮಗೆ ದೊರೆಯುವ ಮುಖ್ಯವಾದ ಹುದ್ದೆಗಳ, ಗೌರವಗಳ ಬಗ್ಗೆ ಅವರಿಗಿದ್ದ ಗಾಳಿಗೋಪುರಗಳು ಅವರ ಆ ಅರಸನನ್ನು ಇದ್ದಕ್ಕಿದ್ದಂತೆ ಶಿಲುಬೆಗೆ ಹಾಕಿದಾಗ ಉಂಟಾದ ಪರಿಸ್ಥಿತಿಯ ಅಶುಭಕರವಾದ ತಿರುವಿನೊಂದಿಗೆ ಫಕ್ಕನೇ ಕೆಡವಲ್ಪಟ್ಟವು.

ಆತನ ಶಿಷ್ಯರು ಎಷ್ಟರ ಮಟ್ಟಿಗೆ ತಾವು ಏಕಾಂಗಿಗಳು, ಗುರಿಯಿಲ್ಲದವರೂ, ದಿಕ್ಕುಕಾಣದ ಪರಿಸ್ಥಿತಿಯನ್ನು ಅನುಭವಿಸುವರೆಂಬುದು ಅವರ ಪ್ರಭುವಿಗೆ ಮೊದಲೇ ತಿಳಿದಿತ್ತು. ಈ ಬಗ್ಗೆ ಪ್ರವಾದಿಯು ಮೊದಲೇ ಬರೆದಿದ್ದನು – "ಕುರುಬನನ್ನು ಹೊಡೆ, ಕುರಿಗಳು ಚದುರಿ ಹೋಗುವುವು" (ಜೆಕರ್ಯ 13:7; ಮಾರ್ಕ 14:27). ಆದುದರಿಂದ, ಆತನ ಪುನರುತ್ಥಾನ ಮತ್ತು ದಿವ್ಯಾರೋಹಣ ನಡುವಣ ನಾಲ್ವತ್ತು ದಿನಗಳಲ್ಲಿ, ಅವರನ್ನು ಪುನಃ ಒಟ್ಟುಗೂಡಿಸುವುದು ಮತ್ತು ಮೆಸ್ಸೀಯನಿಗಾಗಿ ದೀರ್ಘಕಾಲ ಕಾದುಕೊಂಡಿದ್ದ ಅವರ ವಿಶ್ವಾಸವನ್ನು ಪುನಃಸ್ಥಾಪಿಸುವುದು, ಅದನ್ನು ತನ್ನ ಪುನರುತ್ಥಾನದ ಸತ್ಯದಿಂದ ಸಾಬೀತುಪಡಿಸುವುದು ಆತನ ಮುಖ್ಯ ಕಾಳಜಿಯಾಗಿತ್ತು. ಅದೇ ವ್ಯಕ್ತಿತ್ವವನ್ನು ಆತನು ಕಾಪಾಡಿಕೊಂಡಿದ್ದರೂ, ಆತನು ಇನ್ನು ಮುಂದೆ ಮಾನವನಾಗಿರಲಿಲ್ಲ, ಆತನು ಉನ್ನತಕ್ಕೇರಿದ ಆತ್ಮನಾಗಿದ್ದನು ಮತ್ತು "ಪರಲೋಕ ಭೂಲೋಕಗಳಲ್ಲಿ ಎಲ್ಲಾ ಅಧಿಕಾರವು ಆತನಿಗೆ ಕೊಡಲ್ಪಟ್ಟಿತ್ತು" (ಮತ್ತಾಯ 28:18).

ಆತನು ತನ್ನ ಪುನರುತ್ಥಾನದ ಸುದ್ದಿಯನ್ನು ಕ್ರಮೇಣವಾಗಿ ಬಹಿರಂಗಪಡಿಸಿದನು. ಮೊದಲಿಗೆ ಸ್ತ್ರೀಯರ ಮೂಲಕ ಅಂದರೆ. ಮಗ್ದಲದ ಮರಿಯಳು ಮತ್ತು ಯೊಹಾನಳು, ಯಾಕೋಬನ ತಾಯಿಯಾದ ಮರಿಯಳು, ಸಲೋಮೆ ಮತ್ತು ಅವರ ಸಂಗಡ ಇದ್ದ ಬೇರೆ ಕೆಲವು ಸ್ತ್ರೀಯರು ಇವರುಗಳ ಮೂಲಕ – (ಮಾರ್ಕ: 16:1, ಲೂಕ 24:1,10). ಅವರುಗಳು ಮುಂಜಾವಿನಲ್ಲಿಯೇ ಸಮಾಧಿಯ ಬಳಿಗೆ ಆತನ ದೇಹಕ್ಕೆ ಸುಗಂಧ ದ್ರವ್ಯಗಳನ್ನು ಲೇಪಿಸಲು ಬಂದಿದ್ದರು. ಸಮಾಧಿಯ ಬಾಗಿಲಿನಲ್ಲಿರುವ ಕಲ್ಲನ್ನು ಉರುಳಿಸಲು ಯಾರನ್ನು ನೋಡಬೇಕು ಎಂದು ಆಶ್ಚರ್ಯಪಡುತ್ತಿರಲಾಗಿ, ಒಂದು ಭೂಕಂಪವಾಯಿತು. ಅಲ್ಲಿ ಅವರು ಬಂದಾಗ ಸಮಾಧಿಯ ಕಲ್ಲು ಉರುಳಿರುವುದನ್ನು ನೋಡಿ ಇದನ್ನು ಯಾರು ಉರುಳಿಸಿದ್ದಿರಬಹುದು ಎಂದು ಆಶ್ಚರ್ಯಪಡುತ್ತಿರಲು ದೇವದೂತನೊಬ್ಬನು ಅಲ್ಲಿ ಕುಳಿತಿರುವುದನ್ನು ಕಂಡರು. ಆ ದೇವದೂತನು ಅವರಿಗೆ – "ಬೆರಗಾಗಬೇಡಿರಿ, ಶಿಲುಬೆಗೆ ಹಾಕಲ್ಪಟ್ಟಿದ್ದ ನಜರೇತಿನ ಯೇಸುವನ್ನು ಹುಡುಕುತ್ತೀರಲ್ಲವೇ, ಆತನು ಜೀವಿತನಾಗಿ ಎದ್ದಿದ್ದಾನೆ, ಇಲ್ಲಿ ಇಲ್ಲ. ಆತನನ್ನು ಇಟ್ಟಿದ್ದ ಸ್ಥಳವು ಇದೇ ನೋಡಿರಿ. ಆದರೆ ನೀವು ಹೋಗಿ ಆತನ ಶಿಷ್ಯರಿಗೂ ಪೇತ್ರನಿಗೂ – ಸತ್ತವನು ಬದುಕಿದ್ದಾನೆ ಎಂದು ತಿಳಿಸಿರಿ – ಆತನು ನಿಮಗೆ ಹೇಳಿದಂತೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ. ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ ಎಂದು ಹೇಳಿದನು" (ಮಾರ್ಕ16 :6,7. ಮತ್ತಾಯ 28:5–7).

ಮಗ್ದಲದ ಮರಿಯಳು ಇತರೆ ಸ್ತ್ರೀಯರಿಂದ ಬೇರೆಯಾಗಿ ಯೇಸುವಿನ ಸುದ್ದಿಯನ್ನು ಪೇತ್ರ ಯೋಹಾನರಿಗೆ ತಿಳಿಸಲು ಓಡಿಹೋದಳೆಂದು ತೋರಿಬರುತ್ತದೆ (ಯೋಹಾನ 20:1,2). ಉಳಿದ ಸ್ತ್ರೀಯರು ಬೇರೆ ಶಿಷ್ಯರುಗಳಿಗೆ ತಿಳಿಸುವುದಕ್ಕೆ ಹೋಗುವಾಗ ಯೇಸು ಅವರ ಎದುರಿಗೆ ಬಂದು – "ನಿಮಗೆ ಶುಭವಾಗಲಿ" ಅಂದನು. ಅವರು ಹತ್ತಿರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ನಮಸ್ಕಾರ ಮಾಡಲು ಯೇಸು ಅವರಿಗೆ "ಹೆದರಬೇಡಿರಿ, ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ; ಅಲ್ಲಿ ನನ್ನನ್ನು ನೋಡುವರು:" ಎಂದು ಹೇಳಿದನು (ಮತ್ತಾಯ 28:8–10).

ಅವರುಗಳು ಭಯಗೊಂಡವರಾದರೂ ಸಂತೋಷದಿಂದ ಇತರೆ ಶಿಷ್ಯರಿಗೆ ಈ ಸುಸಮಾಚಾರವನ್ನು ಹೇಳಲು ಓಡಿ ಹೋದರು. ಆಶ್ಚರ್ಯ, ದಿಗ್ಭ್ರಮೆ, ಭಯ ಮತ್ತು ಸಂತೋಷದ ಮಿಶ್ರಿತ ಭಾವನೆಯನ್ನು ಅವರು ಹಿಡಿದವರಾಗಿ ತಮ್ಮ ಈ ಅಪರೂಪವಾದ ಅದ್ಭುತ ಅನುಭವವನ್ನು ಹೇಗೆ ಹಂಚಿಕೊಳ್ಳುವುದು ಎಂಬ ಬಗ್ಗೆ ಅವರಿಗೆ ತಿಳಿಯದಾಯಿತು. ಮರಿಯಳು ಪೇತ್ರ ಯೋಹಾನರನ್ನು ಭೇಟಿಯಾದಾಗ ಆಕೆಯು ದುಃಖದಿಂದ ಅವರಿಗೆ – "ಸ್ವಾಮಿಯನ್ನು ಸಮಾಧಿಯೊಳಗಿಂದ ತೆಗೆದುಕೊಂಡು ಹೋಗಿ ಆತನನ್ನು ಎಲ್ಲಿಟ್ಟಿದಾರೋ ನಮಗೆ ಗೊತ್ತಿಲ್ಲ" ಎಂದು ಹೇಳಿದಳು (ಯೋಹಾನ 20:2). ಉಳಿದ ಸ್ತ್ರೀಯರು ಸಮಾಧಿಯ ಬಳಿಯಲ್ಲಿ ತಮಗೆ ದೇವದೂತನೊಬ್ಬನ ದರ್ಶನವಾಯಿತೆಂದೂ, ಆತನು (ಯೇಸುವು) ಬದುಕುತ್ತಾನೆಂದು ಅವರು ಹೇಳಿದರೆಂತಲೂ (ಲೂಕ 24:23) ನಂತರದಲ್ಲಿ ಅವರು ಹೋಗುವಾಗ ಯೇಸು ಅವರ ಎದುರಿಗೆ ಬಂದು – ನಿಮಗೆ ಶುಭವಾಗಲಿ ಅಂದನು. ಅವರು ಹತ್ತಿರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ನಮಸ್ಕಾರ ಮಾಡಲು ಯೇಸು ಅವರಿಗೆ "ಹೆದರಬೇಡಿರಿ, ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ; ಅಲ್ಲಿ ನನ್ನನ್ನು ನೋಡುವರು" (ಮತ್ತಾಯ 28:8,10) ಎಂದು ತಿಳಿಸಿದರು.

ಹೆಚ್ಚಿನ ಶಿಷ್ಯರು ಅವರ ಹೇಳಿಕೆಗಳನ್ನು ಕೇವಲ ಮೂಢನಂಬಿಕೆಯ ಭಾವೋದ್ವೇಗದ ಹೇಳಿಕೆಯೆಂದು ಭಾವಿಸಿದರು, ಆದರೆ ಪೇತ್ರ ಯೋಹಾನರು – ನಾವು ಹೋಗಿ ಖುದ್ದಾಗಿ ನೋಡೋಣ ಎಂದು ಹೇಳಿ

ಸಮಾಧಿಯ ಕಡೆಗೆ ಹೋದಾಗ ಮರಿಯಳೂ ಅವರ ಸಂಗಡ ಹೋದಳು. ಪೇತ್ರ ಯೋಹಾನರು ಸಮಾಧಿಯಲ್ಲಿ ಯೇಸುವಿನ ದೇಹ ಇಲ್ಲದಿರುವುದನ್ನು, ನಾರುಮಡಿಯು ಸುತ್ತಿಟ್ಟಿರುವುದನ್ನು ಮಾತ್ರವೇ ಕಂಡರು. ಬಂಡೆಯು ಬಾಗಿಲಿನಿಂದ ಉರುಳಿಸಲ್ಪಟ್ಟಿತ್ತು. ಹೀಗಾಗಿ ಅವರು ದಿಗ್ಭ್ರಮೆಗೊಂಡು ಅಲ್ಲಿಂದ ಹಿಂತಿರುಗಿ ಹೋದರೂ ಮರಿಯಳು ಅಲ್ಲಿಯೇ ಅಳುತ್ತಾ ನಿಂತಿದ್ದಳು. ಆಕೆಯು ಅಳುತ್ತಲೇ ಸಮಾಧಿಯ ಕಡೆಗೆ ಬಾಗಿ ನೋಡಲು "ಯೇಸುವಿನ ದೇಹವನ್ನು ಇಟ್ಟಿದ್ದ ಸ್ಥಳದಲ್ಲಿ ಬೆಳ್ಳಗಿರುವ ವಸ್ತ್ರಗಳನ್ನು ಹೊದ್ದುಕೊಂಡ ಇಬ್ಬರು ದೇವದೂತರನ್ನು ಕಂಡಳು. ಅವರಲ್ಲಿ ಒಬ್ಬನು ತಲೆಯಿದ್ದ ಕಡೆಯಲ್ಲಿ, ಮತ್ತೊಬ್ಬನು ಕಾಲಿದ್ದ ಕಡೆಯಲ್ಲಿ ಕೂತುಕೊಂಡಿದ್ದರು. ಅವರು ಆಕೆಯನ್ನು 'ಅಮ್ಮಾ, ಯಾಕೆ ಅಳುತ್ತೀ' ಎಂದು ಕೇಳಲು ಆಕೆ – ನನ್ನ ಸ್ವಾಮಿಯನ್ನು ತೆಗೆದುಕೊಂಡು ಹೋಗಿದ್ದಾರೆ; ಆತನನ್ನು ಎಲ್ಲಿ ಇಟ್ಟಿದ್ದಾರೋ ನನಗೆ ಗೊತ್ತಿಲ್ಲ ಅಂದಳು. ಇದನ್ನು ಹೇಳಿ ತಿರುಗಿಕೊಂಡು ಯೇಸು ನಿಂತಿರುವುದನ್ನು ಕಂಡಳು. ಆದರೆ ಆತನು ಯೇಸು ಅಂತ ಆಕೆಗೆ ತಿಳಿಯಲಿಲ್ಲ. ಯೇಸು ಆಕೆಯನ್ನು – 'ಅಮ್ಮಾ, ಯಾಕೆ ಅಳುತ್ತೀ? ಯಾರನ್ನು ಹುಡುಕುತ್ತೀ?' ಎಂದು ಕೇಳಲು ಆಕೆ ಆತನನ್ನು ತೋಟಗಾರನೆಂದು ನೆನಸಿ ಆತನಿಗೆ – 'ಅಯ್ಯಾ, ನೀನು ಆತನನ್ನು ಎತ್ತಿಕೊಂಡು ಹೋಗಿದ್ದರೆ ಎಲ್ಲಿ ಇಟ್ಟಿದ್ದೀ ಎಂದು ನನಗೆ ಹೇಳು; ನಾನು ತೆಗೆದುಕೊಂಡು ಹೋಗುತ್ತೇನೆ' ಎಂದು ಹೇಳಿದಳು. ಯೇಸು ಆಕೆಗೆ– "ಮರಿಯಳೇ" ಎಂದು ಕರೆಯಲು ಆಕೆ ತನಗೆ ಚಿರಪರಿಚಿತವಾದ ಯೇಸುವಿನ ಧ್ವನಿಯನ್ನು ಗುರುತಿಸಿ 'ರಬ್ಬೂನಿ' ಅಂದಳು (ಅಂದರೆ ಗುರುವೇ ಎಂದರ್ಥ) (ಯೋಹಾನ 20:11–16).

'ಆತನು ಎದ್ದಿದ್ದಾನೆ' ಎಂಬ ದೇವದೂತನ ಹೇಳಿಕೆಯ ಮೇಲೆ ಆಕೆ ವಿಶ್ವಾಸವಿರಿಸಲು ಅಷ್ಟೇ ಸಾಕಾಗಿತ್ತು. ಅದುವರೆಗೆ ಆಕೆಗೆ ಅದೊಂದು ಕನಸೋ, ನಿರಾಧಾರವಾದ ಸಂಗತಿ ಆಗಿತ್ತು; ಆಕೆಯು ಸಂತೋಷದಿಂದಲೇ 'ಗುರುವೇ' ಎಂದು ತನ್ನ ಆಶ್ಚರ್ಯವನ್ನು ವ್ಯಕ್ತಪಡಿಸಿದಳು. ಆಕೆಯ ಮೊದಲ ಹುರುಪು ಆತನನ್ನು ಅಪ್ಪಿಕೊಳ್ಳುವುದು ಮತ್ತು ಆತನ ಪ್ರಸನ್ನತೆಯಲ್ಲಿ ಕಾದಿರುವುದು. ಆದರೆ ಯೇಸು ಆಕೆಗೆ ಮೃದುವಾಗಿ ಈಗ ಆಕೆ ಮಾಡುವಂತೆ ಒಂದು ಮುಖ್ಯವಾದ ಸೇವಾಕಾರ್ಯವಿದೆ, ಆತನ ಪುನರುತ್ಥಾನದ ಸತ್ಯ ಸಾಕ್ಷಿಯನ್ನು ಒಯ್ಯುವುದು. ಆಕೆ ಅದನ್ನು ಅವಸರದಲ್ಲಿ ರವಾನಿಸಿ ಉಳಿದ ಶಿಷ್ಯರುಗಳಲ್ಲಿ ಆ ಬಗ್ಗೆ ನಂಬಿಕೆಯನ್ನು ಮೂಡಿಸುವುದು. ಇನ್ನೂ ದಿಗ್ಭ್ರಮೆ ಮತ್ತು ಅನಿಶ್ಚಿತತೆಯಲ್ಲಿದ್ದ ಆಕೆಗೆ ಯೇಸು – 'ನನ್ನನ್ನು ಹಿಡಿಯಬೇಡ; ನಿನ್ನ ಪ್ರೀತಿಯನ್ನು ತೋರಲು ಇನ್ನೂ ಕಾಲ ಕಳೆಯಬೇಡ. ಯಾಕೆಂದರೆ ನಾನು ಇನ್ನೂ ತಂದೆಯ ಬಳಿಗೆ ಏರಿಹೋದವನಲ್ಲ. ನೀನು ನಿನ್ನ ಸಹೋದರರ ಬಳಿಗೆ ಹೋಗಿ – ನಾನೂ ನನ್ನ ತಂದೆಯೂ, ನಿಮ್ಮ ತಂದೆಯೂ, ನನ್ನ ದೇವರೂ, ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿಹೋಗುತ್ತೇನೆ. ಏಕೆಂದರೆ, ನಾನು ನಿಮ್ಮೊಡನೆ ಕೆಲವು ಕಾಲ ಮಾತ್ರ ಇರುತ್ತೇನೆ' ಎಂದು ಅವರಿಗೆ ಹೇಳು ಅಂದನು (ವ. 17): ಇತರೆ ಸ್ತ್ರೀಯರ ಮೂಲಕವೂ ಆತನು ತನ್ನ ಶಿಷ್ಯರನ್ನು ಗಲಿಲಾಯದಲ್ಲಿ ಸಂಧಿಸುತ್ತೇನೆಂದು ಈ ಮೊದಲೇ ಹೇಳಿ ಕಳುಹಿಸಿದ್ದನು.

ನಂತರ ಆತನು ದುಃಖ ಹಾಗೂ ಕಳವಳಗಳಿಂದ ತುಂಬಿದ್ದ ಇಬ್ಬರು ಶಿಷ್ಯರುಗಳನ್ನು ಅವರು ಎಮ್ಮಾಹು ಎಂಬ ಹಳ್ಳಿಗೆ ಹೋಗುವ ಮಾರ್ಗದಲ್ಲಿ ಸಂಧಿಸಿ ಅವರ ದುಃಖಕ್ಕೆ ಮತ್ತು ನಿರಾಶೆಗೆ ಕಾರಣವೇನೆಂದು ವಿಚಾರಿಸಿದನು (ಲೂಕ 24:13–35). ಅವರಲ್ಲಿ ಒಬ್ಬನು – ಯೆರೂಸಲೇಮಿಗೆ ಬಂದ ಪರಸ್ಥಳದವರೆಲ್ಲರೂ ಈ ದಿವಸಗಳಲ್ಲಿ ಅದರೊಳಗೆ ನಡೆದಿರುವ ಸಂಗತಿಗಳ ಬಗ್ಗೆ ಗೊತ್ತಿರಲಾಗಿ, ನಿನಗೆ ಮಾತ್ರ ಗೊತ್ತಿಲ್ಲವೋ ಎಂದು ಕೇಳಲು ಆತನು ಅವರನ್ನು – ಯಾವ ಸಂಗತಿಗಳು? ಎಂದು ಕೇಳಿದನು. ಅದಕ್ಕೆ ಅವರು – ನಜರೇತಿನವನಾದ ಯೇಸುವಿನ ಸಂಗತಿಗಳೇ; ಆತನು ದೇವರ ಮುಂದೆ ಮತ್ತು ಮನುಷ್ಯರ ಮುಂದೆ ಕೃತ್ಯದಲ್ಲಿಯೂ ಮಾತಿನಲ್ಲಿಯೂ ಸಮರ್ಥ ಪ್ರವಾದಿಯಾಗಿದ್ದನು. ಆತನನ್ನು ಮಹಾ ಯಾಜಕರೂ ನಮ್ಮ ಅಧಿಕಾರಿಗಳೂ ಮರಣದಂಡನೆಗೆ ಒಪ್ಪಿಸಿಕೊಟ್ಟು, ಶಿಲುಬೆಗೆ ಹಾಕಿಸಿದರು. ನಾವಾದರೋ, ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು. ಇದು ಮಾತ್ರವಲ್ಲದೆ ಆ ಕಾರ್ಯಗಳು ನಡೆದು ಇದು ಮೂರನೆಯ ದಿನ (ಇಲ್ಲಿ ಅವರು ಬಹುಶಃ ಯೋಹಾನ 2:19,21,22ರಲ್ಲಿ ಬರೆದಿರುವ ಮಾತುಗಳನ್ನು ತಮ್ಮ ಮನಸ್ಸಿಗೆ ತಂದುಕೊಂಡಿದ್ದಿರಬಹುದು). ಹೌದು ಕೆಲವು ಮಂದಿ ಸ್ತ್ರೀಯರು ಬೆಳಗಾಗುವಾಗ ಸಮಾಧಿಯ ಬಳಿಯಲ್ಲಿ ಇದ್ದು ಆತನ ದೇಹವನ್ನು ಕಾಣದೆ ಅಲ್ಲಿಂದ ಬಂದು ತಮಗೆ ದೇವದೂತರ ದರ್ಶನವಾಯಿತೆಂತಲೂ ಆತನು ಬದುಕುತ್ತಾನೆಂದು ಅವರಿಗೆ ಹೇಳಿದರೆಂತಲೂ ತಿಳಿಸಿ ನಮಗೆ ಅತ್ಯಾಶ್ಚರ್ಯವನ್ನುಂಟು ಮಾಡಿದರು, ನಮ್ಮ ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋಗಿ ಆ ಸ್ತ್ರೀಯರು ಹೇಳಿದ ಪ್ರಕಾರವೇ ಕಂಡರು, ಆತನನ್ನು ಮಾತ್ರ ಕಾಣಲಿಲ್ಲ ಎಂದು ಹೇಳಿದರು – (ಲೂಕ 24: 13–24). ಅವರು ದಿಗ್ಭ್ರಮೆಗೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಇವೆಲ್ಲವೂ ಎಷ್ಟು ವಿಚಿತ್ರವಾಗಿ ಕಂಡುಬರುತ್ತಿದೆ ಅಲ್ಲವೇ? ಕಳೆದ ಕೆಲವು ದಿನಗಳಲ್ಲಿ ನಡೆದ ಹಲವಾರು ಸಂಗತಿಗಳು ಎಷ್ಟೋ ವಿಚಿತ್ರವೂ, ರೋಮಾಂಚನಕರವೂ ಆಗಿದ್ದವು.!

ನಂತರದಲ್ಲಿ ಒಬ್ಬ ಅಪರಿಚಿತನಂತೆ ಅವರಿಗೆ ಪ್ರವಾದನೆಗಳಲ್ಲಿರುವ ಕೆಲವೊಂದು ವಚನಗಳನ್ನು ಉದಾಹರಿಸಿ ಹುರಿದುಂಬಿಸುವ ಪ್ರಸಂಗವನ್ನು ಮಾಡಿ

ಮನಗುಂದಿದ್ದ ಅವರಿಗೆ ಪ್ರವಾದಿಗಳು ಮುಂತಿಳಿಸಿದ ಸಂಗತಿಗಳೂ, ಈ ಎಲ್ಲಾ ಮಾತುಗಳೂ ಮೆಸ್ಸೀಯನ ಬಗ್ಗೆಯೇ ಆಗಿವೆ; ಆತನು ಆಳ್ವಿಕೆ ಮಾಡಿ, ಇಸ್ರಾಯೇಲ್ಯರನ್ನು ಆಶೀರ್ವದಿಸಿ ಮೇಲೆತ್ತುವ ಮೊದಲು, ಆತನು ತನ್ನ ಸ್ವಂತ ಜೀವತೆತ್ತು ಆದಾಮನಿಂದ ಅವರ ಮೇಲೆ ಬಂದಿದ್ದ ಮರಣದ ಶಾಪದಿಂದ ಅವರನ್ನು ವಿಮೋಚಿಸಬೇಕಾಗಿತ್ತು, ನಂತರದಲ್ಲಿ ಯೆಹೋವನು ಅವರನ್ನು ನಿತ್ಯಜೀವಕ್ಕೂ, ಮಹಿಮೆಗೂ ಏರಿಸುವನು. ಅವರ ಪ್ರಭುವು ಪ್ರವಾದಿಗಳು ಆತನ ಮಹಿಮೆ ಮತ್ತು ಘನಮಾನವನ್ನು ಕುರಿತಂತೆ ಬರೆದಿರುವುದು. ಇವುಗಳನ್ನೆಲ್ಲಾ ನೆರವೇರಿಸುವಂತೆ ಇರುವ ಪ್ರವಾದನೆಗಳನ್ನು ತನ್ನ ಕಷ್ಟ ಸಂಕಟಗಳು, ಮರಣ ಮತ್ತು ಪುನರುತ್ಥಾನದಿಂದ ಈಡೇರಿಸಿದ್ದಾನೆ ಎಂದು ತಿಳಿಸಿದನು. ಆತನೊಬ್ಬ ಅದ್ಭುತನಾದ ಪ್ರಸಂಗಿ ಮತ್ತು ಆತನ ಈ ಪ್ರಸಂಗವು ಅತ್ಯದ್ಭುತವಾಗಿತ್ತು! ಅದು ಅವರಲ್ಲಿ ನೂತನ ಕಲ್ಪನೆಗಳನ್ನೂ, ಹೊಸ ಬಯಕೆಗಳನ್ನೂ, ನಿರೀಕ್ಷೆಗಳನ್ನೂ ಉಂಟುಮಾಡುವುದಾಯಿತು. ಅವರು ಹೀಗೆ ಮಾತನಾಡುತ್ತಾ ತಮ್ಮ ಹಳ್ಳಿಯ ಹತ್ತಿರಕ್ಕೆ ಬರಲು ಸಂಜೆಯಾಗಿತ್ತು. ಆತನು ಅವರನ್ನು ಹಾದು ಹೋಗುವವನಂತೆ ಕಂಡು ಬಂದನು. ಆದರೆ ಆತನು ತಮ್ಮ ಬಳಿಯಲ್ಲಿಯೇ ಉಳುಕೊಳ್ಳುವಂತೆ ಅವರು ಆತನನ್ನು ಬಲವಂತಮಾಡಲು ಆತನು ಒಪ್ಪಿಕೊಂಡು ಅವರೊಟ್ಟಿಗೆ ಹೋದನು. ಆತನು ಅವರ ಸಂಗಡ ಊಟಕ್ಕೆ ಕೂತುಕೊಂಡಾಗ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಅವರಿಗೆ ಕೊಡುತ್ತಿರಲಾಗಿ ಅವರ ಕಣ್ಣುಗಳು ತೆರೆದವು. ಅವರು ಅವನ ಗುರುತನ್ನು ಹಿಡಿದರು; ಆತನು ಅವರ ಕಣ್ಣಿಗೆ ಮಾಯವಾದನು.

ಅವರು ಯೇಸುವಿನ ಸಂಗಡ ನಡೆದು ಬರುವಾಗಲೂ ಅವರೊಡನೆ ಗಹನವಾದ ವಿಚಾರಗಳನ್ನು ಚರ್ಚಿಸಿದಾಗಲೂ, ಕಡೆಗೆ ಅವರ ಸಂಗಡ ಊಟಕ್ಕೆ ಕುಳಿತಾಗಲೂ ಅವರು ಆತನು ಯೇಸು ಎಂದು ಗ್ರಹಿಸಿರಲಿಲ್ಲ. ಅವರಿಗೆ ಆತನ ಮುಖ ಪರಿಚಯವಾಗಲಿಲ್ಲ. ಆದರೆ ಆತನು ಮಾಡಿದ ಸಾಮಾನ್ಯ ಹಿಂದಿನ ರೂಢಿಯ ಕಾರ್ಯವಾದ ರೊಟ್ಟಿ ಮುರಿಯುವುದರಲ್ಲಿ ಅವರು ಆತನನ್ನು ಗುರುತಿಸಿದರು! ಯಾಕೆಂದರೆ, ಆ ದೃಶ್ಯವು ಅವರಿಗೆ ಹಳೆಯ ಚಿರಪರಿಚಯವುಳ್ಳದ್ದಾಗಿತ್ತು. ಹೀಗಾಗಿ ಅವರಿಗೀಗ ಆತನು ಜೀವಿತನಾಗಿ ಎದ್ದುಬಂದಿದ್ದಾನೆ ಮತ್ತು ತಮ್ಮನ್ನು ಪುನಃ ನೋಡುತ್ತಾನೆ ಎಂದು ತಾವು ಕೇಳಿದ ಸಂಗತಿಗಳ ಬಗ್ಗೆ ದೃಢವಿಶ್ವಾಸವುಂಟಾಯಿತು.

ಆಗ ಆಶ್ಚರ್ಯಚಕಿತರಾಗಿದ್ದ ಆ ಇಬ್ಬರು ಶಿಷ್ಯರು ಮಿತಿಮೀರಿದ ಸಂತೋಷದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು – ಅವನು ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮೊಳಗೆ ಕುದಿಯಿತಲ್ಲವೇ (ವ. 32) ಎಂದು ಹೇಳಿಕೊಂಡು ಅದೇ ಘಳಿಗೆಯಲ್ಲಿ ಯೆರೂಸಲೇಮಿಗೆ ಮರುಪ್ರಯಾಣ ಮಾಡಿದರು. ಯೆರೂಸಲೇಮಿಗೆ ಬಂದ ಮೇಲೆ ಅವರು ಉಳಿದವರು ಸಹ ಸಂತೋಷಪಡುತ್ತಿರುವುದನ್ನು ಕಂಡರು. 'ಯೇಸು ಕರ್ತನು ಎದ್ದದ್ದು ನಿಜ, ಆತನು ಸೀಮೋನನಿಗೆ ಕಾಣಿಸಿಕೊಂಡಿದ್ದಾನೆ' ಎಂದು ಮಾತನಾಡಿಕೊಳ್ಳುತ್ತಿದ್ದರು. ಆಗ ಈ ಇಬ್ಬರು ಶಿಷ್ಯರುಗಳು ಅವರಿಗೆ ಎಮ್ಮಾಹುವಿನ ದಾರಿಯಲ್ಲಿ ನಡೆದ ಎಲ್ಲಾ ಸಂಗತಿಗಳನ್ನೂ, ಕಡೆಗೆ ರೊಟ್ಟಿ ಮುರಿಯುವಾಗ ತಾವು ಆತನ ಗುರುತನ್ನು ಕಂಡುಕೊಂಡದ್ದನ್ನೂ ವಿವರಿಸಿಹೇಳಿದರು. ಬಹುಶಃ ಆ ಸಾಯಂಕಾಲದಲ್ಲಿ ಅವರೆಲ್ಲಾ ಅಲ್ಲಿಯೇ ಇದ್ದರು, ಅವರು ತಮ್ಮ ಮನೆ, ವ್ಯವಹಾರ ಮತ್ತು ಉಳಿದೆಲ್ಲಾ ಸಂಗತಿಗಳನ್ನೂ ಮರೆತುಬಿಟ್ಟಿದ್ದರು. ಮಗ್ದಲದ ಮರಿಯಳು ತನ್ನ ಆನಂದಭಾಷ್ಪದೊಡನೆ "ಆತನು ನನ್ನನ್ನು ಹೆಸರಿಡಿದು ಕರೆದಾಗಲೇ ಆತನನ್ನು ಗುರುತಿಸಿದೆ, ಅದುವರೆಗೆ ನಾನು ದೇವದೂತರ ಭರವಸೆಯ ಮಾತುಗಳನ್ನು ಲಕ್ಷಿಸಿದ್ದಿಲ್ಲ" ಎಂದಳು. ಇತರೆ ಸ್ತ್ರೀಯರೂ ಆ ದಿನ ಬೆಳಿಗ್ಗೆ ನಡೆದ ತಮ್ಮ ಅದ್ಭುತ ಅನುಭವಗಳನ್ನು ಹಂಚಿಕೊಂಡರು. ಅವರು ತಮ್ಮ ಮಾರ್ಗದಲ್ಲಿ ಆತನನ್ನು ಭೇಟಿಯಾದ ಸಂಗತಿಯನ್ನು ಅವರಿಗೆ ತಿಳಿಸಿದರು. ನಂತರ ಸಿಮೋನನು ತನ್ನ ಕಥೆಯನ್ನು ಹೇಳಿದನು; ಈಗ ಅವರ ಮಧ್ಯೆ ಎಮ್ಮಾಹುವಿನಿಂದ ಬಂದಿದ್ದ ಬೇರೆ ಇಬ್ಬರು ಸಾಕ್ಷಿಗಳೂ ಸೇರಿಕೊಂಡರು. ಅದೊಂದು ಎಂಥಾಃ ವಿಶೇಷ ಘಟನೆಗಳುಳ್ಳ ದಿನವಾಗಿತ್ತಲ್ಲವೇ! ಅಂದಿನಿಂದ ಕ್ರೈಸ್ತ ಸಭೆಯು ವಾರದ ಮೊದಲನೆಯ ದಿನ ಕೂಡಿಬರಲು, ಕರ್ತನ ಪುನರುತ್ಥಾನದ ಬಗ್ಗೆ ಒಟ್ಟಾಗಿ ಚರ್ಚಿಸಲು , ಆ ಮೂಲಕ ತಮ್ಮ ಹೃದಯಗಳು ಪದೇ ಪದೇ ಕುದಿಯುವಂತೆ ಮಾಡಲು ನಿರ್ಧರಿಸಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ.

ಉತ್ತೇಜಿತರಾಗಿದ್ದ ಮತ್ತು ಅತೀವ ಸಂತೋಷದಿಂದ ಕೂಡಿದವರ ಗುಂಪು ಈ ರೀತಿಯಲ್ಲಿ ಒಬ್ಬರನ್ನೊಬ್ಬರು ಸಂಧಿಸಿ ಅವರ ವಿವಿಧ ಅನುಭವಗಳನ್ನು ಹಂಚಿಕೊಳ್ಳುತ್ತಿರುವಾಗ ಫಕ್ಕನೇ ಯೇಸು ಕರ್ತನು ತಾನೇ ಅವರ ಮಧ್ಯದಲ್ಲಿ ಕಾಣಿಸಿಕೊಂಡನು (ಲೂಕ 24:36–49) ಮತ್ತು ಅವರಿಗೆ "ನಿಮಗೆ ಸಮಾಧಾನವಾಗಲಿ!" ಅಂದನು. ಆತನು ಎಲ್ಲಿಂದ ಬಂದನು? ಅವರ ಈ ಎಲ್ಲಾ ಒಟ್ಟುಗೂಡೋಣವು ಗುಪ್ತವಾಗಿಯೇ ನಡೆದಿತ್ತು, ಯೆಹೂದ್ಯರ ಭಯದಿಂದಾಗಿ ಬಾಗಿಲುಗಳು ಭದ್ರವಾಗಿ ಹಾಕಲ್ಪಟ್ಟಿತ್ತು (ಯೋಹಾನ 20:19,26). ಆದರೆ ಇದು ಯಾವುದೇ ಪ್ರತ್ಯಕ್ಷ ಪ್ರವೇಶವಿಲ್ಲದ ಒಂದು ಆಕಸ್ಮಿಕ ಕಾಣಿಸುವಿಕೆಯಾಗಿತ್ತು. ಇದರಿಂದ ಅವರುಗಳು ತಾವು ಭೂತವನ್ನು ನೋಡುತ್ತಿದ್ದೇವೆ ಎಂದು ಭಾವಿಸಿ ಬಹಳವಾಗಿ

ಹೆದರಿದರು. ಆಗ ಆತನು ಅವರಿಗೆ – ಯಾಕೆ ಕಳವಳಗೊಳ್ಳುತ್ತೀರಿ? ನಿಮ್ಮ ಹೃದಯುಗಳಲ್ಲಿ ಅನುಮಾನಗಳು ಹುಟ್ಟುವುದು ಯಾಕೆ? ನನ್ನ ಕೈಗಳನ್ನೂ, ನನ್ನ ಕಾಲುಗಳನ್ನೂ ನೋಡಿರಿ. "ನಾನೇ ಅಲ್ಲವೇ. ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ" (ಲೂಕ 24:38–39) ಎಂದು ಹೇಳಿ ಅವರನ್ನು ಸಮಾಧಾನ ಪಡಿಸಿದನು. ಅವರು ಸಂತೋಷದ ದೆಸೆಯಿಂದ ಇನ್ನೂ ನಂಬದೇ ಆಶ್ಚರ್ಯಪಡುತ್ತಿರಲಾಗಿ ಆತನು – ತಿನ್ನತಕ್ಕ ಪದಾರ್ಥವೇನಾದರೂ ಇಲ್ಲಿ ನಿಮಗುಂಟೋ? ಎಂದು ಅವರನ್ನು ಕೇಳಲು ಅವರು ಸುಟ್ಟ ಮೀನಿನ ತುಂಡನ್ನು ಆತನಿಗೆ ಕೊಟ್ಟರು. ಆತನು ತಕ್ಕೊಂಡು ಅವರ ಮುಂದೆ ತಿಂದನು (ಲೂಕ 24:40–42). ಆಗ ಆತನು ಅವರ ತಿಳುವಳಿಕೆಯ ಮಾನಸಿಕ ಕಣ್ಣುಗಳನ್ನು ತೆರೆದನು ಮತ್ತು ಪರಿಶುದ್ಧ ಗ್ರಂಥದ ಮಾತುಗಳನ್ನು ಅವರಿಗೆ ವಿವರಿಸಿ ಹೇಳಿದನು ಮತ್ತು ಧರ್ಮಶಾಸ್ತ್ರದಲ್ಲಿಯೂ, ಪ್ರವಾದನೆಗಳಲ್ಲಿಯೂ ಮುಂತಿಳಿಸಿರುವಂತೆ ಎಲ್ಲವೂ ನಡೆದಿದೆ ಎಂಬುದನ್ನು ಅವರಿಗೆ ವಿವರಿಸಿದನು. ಆದರೆ ಆ ಸಮಯದಲ್ಲಿ ತೋಮನು ಅಲ್ಲಿರಲಿಲ್ಲ (ಯೋಹಾನ 20:24). ಆತನು ಬಂದ ಮೇಲೆ ಉಳಿದ ಶಿಷ್ಯರು ಆತನಿಗೆ ನಡೆದ ಎಲ್ಲಾ ಸಂಗತಿಗಳನ್ನು ತಿಳಿಸಿದರೂ ಆತನು ನಂಬಲಿಲ್ಲ ಮತ್ತು ಆತನು – "ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಗಳನ್ನು ಹಾಕದ ಹೊರತು ನಿಮ್ಮ ಮಾತನ್ನು ನಂಬುವುದೇ ಇಲ್ಲ ಅಂದನು" (ಯೋಹಾನ 20:25).

ಮುಂದಿನ ಯಾವ ಅಭಿವ್ಯಕ್ತತೆಗಳೂ ಇಲ್ಲದಂತೆ ಎಂಟು ದಿನಗಳು ಕಳೆದುಹೋದವು. ಆ ಅದ್ಭುತವಾದ ದಿನದಲ್ಲಿ ಅವರಿಗಾದ ಅನುಭವಗಳ ಬಗ್ಗೆ ಸಾವಧಾನವಾಗಿ ಚಿಂತಿಸಲೂ, ಮಾತನಾಡಿಕೊಳ್ಳಲೂ ಸಾಕಷ್ಟು ಸಮಯ ದೊರೆಯಿತು. ಎಂಟನೇ ದಿನದಲ್ಲಿ ಎಲ್ಲಾ ಶಿಷ್ಯರೂ ಹಿಂದಿನಂತೆ ಕೂಡಿಬಂದಾಗ, ಯೇಸು ಮೊದಲನೆಯ ಸಂಜೆ ಕಾಣಿಸಿಕೊಂಡಂತೆ ಅವರ ಮಧ್ಯೆ ಇದಕ್ಕಿದ್ದಂತೆ ಪ್ರತ್ಯಕ್ಷನಾಗಿ "ನಿಮಗೆ ಸಮಾಧಾನವಾಗಲಿ!" ಅಂದನು. (ಯೋಹಾನ 20:26). ಈ ಸಮಯದಲ್ಲಿ ತೋಮನು ಅಲ್ಲಿದ್ದನು. ಯೇಸು ಅವನ ಬಳಿಗೆ ಹೋಗಿ ಅವನಿಗೆ – "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು" (ಯೋಹಾನ 20: 27) ಎಂದನು. ಈ ರೀತಿಯಲ್ಲಿ ತೋಮನು ಹೇಳಿದ್ದ ಮಾತುಗಳು ನನಗೆ ತಿಳಿದಿದೆ ಎಂಬುದನ್ನು ಪರೋಕ್ಷವಾಗಿ ವ್ಯಕ್ತಗೊಳಿಸಿ, ಈ ರೀತಿಯಾಗಿ ಯೇಸು ತೋಮನು ತನಗೆ ತೃಪ್ತಿಯನ್ನುಂಟು ಮಾಡುತ್ತದೆಂದು ಹೇಳಿದ್ದ ತನ್ನ ಪುನರುತ್ಥಾನದ ಬಗೆಗಿನ ಪುರಾವೆಗಳನ್ನು ಆತನಿಗೆ ಒದಗಿಸಿದನು. ತೋಮನು – "ನನ್ನ ಸ್ವಾಮೀ, ನನ್ನ ದೇವರು" (ವ. 28) ಎಂದು ಹೇಳುವುದರ ಮೂಲಕ ತನ್ನ ಬಹಳವಾದ ಸಂತೋಷವನ್ನು ವ್ಯಕ್ತಪಡಿಸಿದನು.

ಇದಾದ ನಂತರ ಕರ್ತನ ಪ್ರಸನ್ನತೆಯ ಪ್ರಕಟನೆಗೆ ಬಹಳಷ್ಟು ವಿರಾಮವಿದ್ದಿರಬೇಕು. ಗಲಿಲಾಯದವರಾದ ಶಿಷ್ಯರು ತಮ್ಮ ಮನೆ ಮತ್ತು ಮುಂದಿನ ತಮ್ಮ ಜೀವನದ ಬಗ್ಗೆ ಯೋಚಿಸತೊಡಗಿದರು; ಆ ಸ್ತ್ರೀಯ ಮೂಲಕವಾಗಿ ಯೇಸು ತಿಳಿಸಿದ್ದ ಸಂದೇಶವನ್ನು ಅಂದರೆ ಯೇಸು ಗಲಿಲಾಯದಲ್ಲಿ ಅವರ ಮುಂದೆ ಹಾದುಹೋಗುವನು ಎಂಬುದನ್ನು ಅವರು ತಮ್ಮ ನೆನಪಿನಲ್ಲಿಟ್ಟುಕೊಂಡಿದ್ದರು. ಅವರು ಆ ಸ್ಥಳಕ್ಕೆ ಹೋದರು. ಬಹುಶಃ ಅವರ ಮಾರ್ಗದಲ್ಲಿ ಕರ್ತನು ಅವರನ್ನು ಸಂಧಿಸಿದನು. ಮತ್ತಾಯನು ಇದನ್ನು ಬೆಟ್ಟದಲ್ಲಿ ಎಂದು ನಿರೂಪಿಸುತ್ತಾನೆ (ಮತ್ತಾಯ 28:16). ಅವರು ಭ್ರಮೆಹಿಡಿದವರಾಗಿದ್ದರು; ಈ ಮೊದಲು ಯೇಸುವಿನ ಬಗ್ಗೆ ಇದ್ದ ಸಲುಗೆಯನ್ನು ಅವರು ಈಗ ಅನುಭವಿಸುತ್ತಿದ್ದಿಲ್ಲ. ಆತನು ಶಿಲುಬೆಗೆ ಹಾಕಲ್ಪಟ್ಟಾಗಿನಿಂದ ಬಹಳಷ್ಟು ಬದಲಾವಣೆ ಹೊಂದಿದ್ದಾನೆಂಬುದು ಅವರಿಗೆ ತೋರಿ ಬಂತು – ವಿಶಿಷ್ಟವಾದ ಸಮಯ ಮತ್ತು ಸ್ಥಳಗಳಲ್ಲಿ ಆತನು ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗುತ್ತಿದ್ದನು ಮತ್ತು ಮಾಯವಾಗುತ್ತಿದ್ದನು. ಅವರಿಗೆ ಆತನು ಮಾನವನಾಗಿದ್ದ ಯೇಸುವಿನಂತೆ ಕಂಡುಬರಲಿಲ್ಲ. ಆದುದರಿಂದ ಮತ್ತಾಯನು – ಅವರು ಆತನಿಗೆ ಅಡ್ಡ ಬಿದ್ದರು, ಆದರೆ ಕೆಲವರು ಸಂದೇಹಪಟ್ಟರು ಎಂದು ಹೇಳುತ್ತಾನೆ. ಯೇಸು ಅವರೊಡನೆ ಕೆಲವು ಮಾತುಗಳನ್ನಾಡಿದ ಮೇಲೆ 'ಮಾಯವಾಗುತ್ತಿದ್ದನು' ಮತ್ತು ಮುಂದೇನಾಗುತ್ತದೋ ಎಂಬ ಆಶ್ಚರ್ಯ ಅವರಲ್ಲಿ ಉಳಿದುಕೊಳ್ಳುತ್ತಿತ್ತು. ಅವರು ಗಲಿಲಾಯುಕ್ಕೆ ಹಿಂತಿರುಗಿದ ನಂತರ ಕೆಲವು ಸಮಯದವರೆಗೆ ಯಾವುದೇ ಅಸಾಮಾನ್ಯ ಸಂಗತಿಗಳು ನಡೆಯಲಿಲ್ಲ. ಕರ್ತನ ಪ್ರಸನ್ನತೆಯ ಬಗ್ಗೆ ಯಾವುದೇ ಮುಂದಿನ ಸೂಚನೆಗಳಿರಲಿಲ್ಲ. ನಿಸ್ಸಂದೇಹವಾಗಿ ಅವರು ಕೂಡಿಕೊಂಡ ಆ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು ಮತ್ತು ಯಾಕೆ ಆತನು ಪದೇ ಪದೇ ನಮ್ಮನ್ನು ಭೇಟಿಮಾಡುತ್ತಿಲ್ಲ ಎಂಬುದರ ಬಗ್ಗೆ ಆಶ್ಚರ್ಯವನ್ನೂ ವ್ಯಕ್ತಪಡಿಸುತ್ತಿದ್ದರು.

ಅವರು ಹಾಗೇ ಕಾಯುತ್ತಿರುವಾಗ, ದಿನಗಳೂ ವಾರಗಳೂ ಬಹಳ ಉದ್ದವಾಗಿರುವಂತೆ ಅವರಿಗೆ ಕಂಡುಬಂತು. ಅವರು ಸ್ಥಳದಿಂದ ಸ್ಥಳಕ್ಕೆ ಗುರುವನ್ನು ಹಿಂಬಾಲಿಸುತ್ತಾ, ಆತನಿಂದ ಕಲಿತುಕೊಳ್ಳುತ್ತಾ, ಇತರರಿಗೆ "ಪರಲೋಕ ರಾಜ್ಯವು ಸಮೀಪವಾಯಿತು" (ಮತ್ತಾಯ 10:5–7) ಎಂದು ಬೋಧಿಸುತ್ತಾ ತಮ್ಮ ವೃತ್ತಿಜೀವಿತವನ್ನು ಬಹಳ ಹಿಂದೆಯೇ ಕೈಬಿಟ್ಟಿದ್ದರು. ತಮ್ಮ ಹಳೇ ಕಸುಬಿಗೆ ಹೋಗುವುದನ್ನು ಅವರು ಬಯಸಿರಲಿಲ್ಲ, ಆದರೂ ಅವರು

ಕರ್ತನ ಕಾರ್ಯವನ್ನು ಮುಂದುವರಿಸುವುದು ಹೇಗೆ? ತಮ್ಮ ಪ್ರಭುವೂ ಕರ್ತನು ಶಿಲುಬೆಗೆ ಹಾಕಲ್ಪಟ್ಟಿರುವುದರಿಂದ, ಮತ್ತು ತಾವಲ್ಲದೆ ಬೇರೆ ಯಾರಿಗೂ ಆತನ ಪುನರುತ್ಥಾನದ ಅರಿವು ಇಲ್ಲದಿರುವುದರಿಂದ ತಾವು ಇನ್ನು ಮುಂದೆ 'ಪರಲೋಕ ರಾಜ್ಯವು ಸಮೀಪವಾಯಿತು' ಎಂದು ಬೋಧಿಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿಯನ್ನು ಸಾಕಷ್ಟು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದರು. ಎಲ್ಲಾ ಹನ್ನೊಂದು ಮಂದಿ ಈ ರೀತಿಯಾಗಿ ಗಾಬರಿ ಮತ್ತು ಕಾತುರದಲ್ಲಿದ್ದು ಏನಾದರೂ ಆದೀತೆಂದು ನಿರೀಕ್ಷಿಸುತ್ತಿರುವಾಗ ಪೇತ್ರನು ಅವರಿಗೆ "ಇನ್ನು ಹೀಗೆಯೇ ಸೋಮಾರಿಯಾಗಿ ಕುಳಿತುಕೊಳ್ಳುವುದು ಸರಿಯಲ್ಲ, ನಾನು ನನ್ನ ಮೀನು ಹಿಡಿಯುವ ವೃತ್ತಿಗೆ ಹಿಂದಿರುಗುತ್ತೇನೆ" ಎಂದು ಹೇಳಲು, ಬೇರೆ ಆರು ಮಂದಿ ನಾವೂ ಅದನ್ನೇ ಮಾಡುತ್ತೇವೆ, ನಾವೂ ನಿನ್ನ ಸಂಗಡ ಬರುತ್ತೇವೆ (ಯೋಹಾನ 21:3) ಎಂದು ಹೇಳಿದರು. ಬಹುಶಃ ಉಳಿದವರೂ ಸಹ ತಮ್ಮ ಹಳೆ ವೃತ್ತಿಗೆ ಹಿಂತಿರುಗಿದ್ದಿರಬಹುದು.

ಅವರು ಒಟ್ಟುಗೂಡಿ ಮಾತನಾಡುವಾಗಲೆಲ್ಲಾ ಕರ್ತನು ಅದೃಶ್ಯರೂಪದಲ್ಲಿ ಅವರ ಮಧ್ಯೆ ಇರುತ್ತಾನೆ, ಕೆಲವನ್ನು ತಳ್ಳಿಹಾಕುತ್ತಾನೆ ಮತ್ತು ಪರಿಸ್ಥಿಯ ಕ್ರಮವನ್ನು ಅವರ ಅತ್ಯುತ್ತಮ ಒಳ್ಳೆಯದಕ್ಕಾಗಿ ನಿರ್ದೇಶಿಸುತ್ತಾ ಇರುತ್ತಾನೆ ಮುಂತಾದವುಗಳನ್ನು ಯಾರು ತಾನೇ ಸಂದೇಹಿಸುವರು? ಅವರು ತಮ್ಮ ಉದ್ಯೋಗದ ಆಸಕ್ತಿಯಲ್ಲಿ ಮುಳುಗಿಹೋದರೆ ಅವರು ಆತನ ಉನ್ನತವಾದ ಸೇವೆಗೆ ಅನರ್ಹರಾಗುತ್ತಾರೆ; ಅವರು ಜಯಶಾಲಿಗಳಾಗದೇ ಹೋದರೆ, ಅವರನ್ನು ಬಲವಂತ ಮಾಡಿದಂತೆ ತೋರಿಬರುತ್ತದೆ. ಆದುದರಿಂದ ಕರ್ತನು ಒಂದು ಉಪಾಯವನ್ನು ಮಾಡಿ ಆತನು ಯಾವಾಗಲೂ ತನ್ನ ಅನುಯಾಯಿಗಳಿಗೆ ಬೋಧಿಸುತ್ತಿದ್ದಂತೆ ಅವರ ಎಲ್ಲಾ ದಿಕ್ಕಿನ ಪ್ರಯತ್ನಗಳ ಯಶಸ್ಸಾಗಲೀ, ವಿಫಲತೆಯಾಗಲೀ ಎಲ್ಲವನ್ನು ತಾನು ಮನಸ್ಸುಮಾಡಿದರೆ ನಿಯಂತ್ರಿಸಬಹುದು ಎಂಬುದನ್ನು ಅವರಿಗೆ ತೋರಿಸಿಕೊಟ್ಟನು.

ಹಳೆಯ ಬೆಸ್ತರ ಉದ್ಯೋಗವನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಅವರು ತಮ್ಮ ದೋಣಿಗಳನ್ನೂ, ಬಲೆ ಮುಂತಾದವುಗಳನ್ನು ಒಟ್ಟಾಗಿ ತಂದರು. ಮತ್ತು ತಮ್ಮ ಮೊದಲ ಮೀನುಹಿಡಿಯುವಿಕೆಗೆ ಹೊರಟರು. ಆದರೆ, ಅವರು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಒಂದು ಮೀನನ್ನೂ ಹಿಡಿಯಲಾಗಲಿಲ್ಲ! ಅವರಿಗೆ ಬಹಳ ಎದೆಗುಂದುವಿಕೆಯುಂಟಾಯಿತು. ಮುಂಜಾನೆಯಲ್ಲಿ ತೀರದಲ್ಲಿ ನಿಂತಿದ್ದ ಒಬ್ಬ ಅಪರಿಚಿತನು ಅವರ ಯಶಸ್ಸಿನ ಬಗ್ಗೆ ಪ್ರಶ್ನಿಸುತ್ತಾನೆ. ಆದರೆ ಅದು ಕಳಪೆ ಯಶಸ್ಸು! "ನಮಗೇನೂ ಸಿಕ್ಕಲಿಲ್ಲ" ಎಂದು ಅವರು ಉತ್ತರಿಸಿದರು. ಅಪರಿಚಿತನು ಅವರಿಗೆ "ಪುನಃ ಪ್ರಯತ್ನಿಸಿರಿ, ನಿಮ್ಮ ಬಲೆಗಳನ್ನು ದೋಣಿಯ ಮತ್ತೊಂದು ಮಗ್ಗುಲಲ್ಲಿ ಹಾಕಿರಿ" ಎಂದು ಹೇಳಲು, ಅವರು "ಏನೂ ಪ್ರಯೋಜನವಿಲ್ಲ, ನಾವು ರಾತ್ರಿಯೆಲ್ಲಾ ಎರಡೂ ಮಗ್ಗುಲಲ್ಲಿ ಪ್ರಯತ್ನಿಸಿದ್ದೇವೆ, ಒಂದು ಬದಿಯಲ್ಲಿ ಮೀನುಗಳು ಇರುವುದಾದರೆ, ಅವು ಮತ್ತೊಂದು ಬದಿಯಲ್ಲೂ ಇರುತ್ತವಲ್ಲವೇ?. ಆದರೂ ನಿನ್ನ ಮಾತಿನಂತೆ ಮತ್ತೊಮ್ಮೆ ಪ್ರಯತ್ನಿಸುತ್ತೇವೆ, ನೋಡೋಣ" ಎಂದು ಹೇಳಿ ಮತ್ತೊಂದು ಕಡೆಗೆ ತಮ್ಮ ಬಲೆಗಳನ್ನು ಬೀಸಲು ರಾಶಿ ರಾಶಿಯಾಗಿ ಮೀನುಗಳು ಬಲೆಗೆ ಬಿದ್ದವು! "ಎಂತಹ ಆಶ್ಚರ್ಯ!" ಎಂದು ಕೆಲವರು ಬೆರಗಾದರು. ಆದರೆ, ಚುರುಕಾಗಿದ್ದ ಪ್ರಭಾವಶಾಲಿ ಯೋಹಾನನಿಗೆ ಸತ್ಯ ಸಂಗತಿ ಹೊಳೆಯಿತು! ಆತನು ಉಳಿದವರಿಗೆ "ಸಹೋದರರೇ, ಕರ್ತನು ಮಾತ್ರವೇ ಈ ರೀತಿ ಮಾಡಬಲ್ಲನು. ಆತನು ಸಹಸ್ರಾರು ಮಂದಿಗೆ ಉಣಬಡಿಸಿದ್ದು ನಿಮ್ಮ ನೆನಪಿಗೆ ಬರುವುದಿಲ್ಲವೋ? ದಡದಲ್ಲಿ ನಿಂತಿರುವಾತನು ಸ್ವಾಮಿಯವರೇ ಇರಬೇಕು. ಆತನು ತನ್ನನ್ನು ನಮಗೆ ಪ್ರಕಟಿಸಿಕೊಳ್ಳುವ ಮತ್ತೊಂದು ರೀತಿ ಇದಾಗಿದೆ. ಕರ್ತನು ನಮ್ಮನ್ನು ಮೊದಲ ಬಾರಿ ಕರೆದಾಗ ಹೀಗೆ ಆಯಿತೆಂದು ನಿಮಗೆ ನೆನಪಿಲ್ಲವೋ? ಅಂದು ಸಹ ನಾವು ರಾತ್ರಿಯೆಲ್ಲಾ ಮೀನು ಹಿಡಿಯುವುದಕ್ಕಾಗಿ ಪ್ರಯಾಸಪಟ್ಟೆವು. ಆತನು ಕರೆಯುವವರೆಗೆ ಒಂದು ಮೀನೂ ಸಿಕ್ಕಿರಲಿಲ್ಲ. ಆತನು ಸೀಮೋನನನ್ನು ಕರೆದು "ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನು ಬೇಟೆಗಾಗಿ ನಿಮ್ಮ ಬಲೆಯನ್ನು ಹಾಕಿರಿ" (ಲೂಕ 5:4–11) ಎಂದು ಹೇಳಿದ್ದನು. "ಪುನರುತ್ಥಾನದಿಂದ ನಾವು ಆತನ ಕಾಣಿಸಿಕೊಳ್ಳುವಿಕೆಯಲ್ಲಿ ಆತನನ್ನು ಸರಿಯಾಗಿ ಗ್ರಹಿಸದೇ ಹೋದರೂ ಖಂಡಿತವಾಗಿಯೂ ಅವರು ಸ್ವಾಮಿಯವರೇ. ಆತನು ಈಗ ಬೇರೆ ಬೇರೆ ರೀತಿಯಲ್ಲಿ ನಮಗೆ ಕಾಣಿಸಿಕೊಳ್ಳುತ್ತಿದ್ದಾನೆ. ಆದರೆ ಇಂಥಾಃ ವಿಚಿತ್ರ ಸನ್ನಿವೇಶಗಳು ಮಾತ್ರವೇ ಆತನೊಂದಿಗೆ ಪರಿಚಿತವಾಗಿದ್ದ ಹಲವು ಹಳೆಯ ಸಂಗತಿಗಳನ್ನು ನಮ್ಮ ನೆನಪಿಗೆ ತರುತ್ತವೆ" ಎಂದು ಸಂತೋಷದಿಂದ ಹೇಳಿದನು.

ಅವರು ದಡವನ್ನು ತಲುಪಿದಾಗ ಅಲ್ಲಿ ಯೇಸುವನ್ನು ಮೀನು ಮತ್ತು ರೊಟ್ಟಿಯ ಸಮೇತವಾಗಿ ಕಂಡರು. ಆಗ ಅವರು ಆತನ ನಿರ್ದೇಶನ ಮತ್ತು ಪಾಲನೆಯಲ್ಲಿ ನಡೆಯುವವರಿಗೆ ಎಂದಿಗೂ ಹಸಿವೆಯಾಗದು (ಲೂಕ 12:29.30) ಎಂಬ ಪಾಠವನ್ನು ಕಲಿತುಕೊಂಡರು. ಆತನು ಅವರ ಕರ್ತನೋ ಎಂದು ಅವರು ಆತನನ್ನು ಪ್ರಶ್ನಿಸಲಿಲ್ಲ. ಯಾಕೆಂದರೆ, ಈಗಿನ ಮತ್ತು ಬೇರೆ ಕೆಲವು ಸಂಧರ್ಭಗಳಲ್ಲಿ ಅವರ ತಿಳುವಳಿಕೆಯ ಕಣ್ಣುಗಳು ತೆರೆಯಲ್ಪಟ್ಟಿದ್ದು ಅವರು ಆತನನ್ನು ಭೌತಿಕ ಕಣ್ಣುಗಳಿಂದಲ್ಲ, ಆದರೆ ಅದ್ಭುತಗಳಿಂದ ತಿಳುಕೊಂಡಿದ್ದರು. ನಂತರದಲ್ಲಿ ಆ ಆನಂದಭರಿತ ಸಮಯದ ಆದೇಶಗಳು ಪ್ರಾರಂಭವಾದವು. ಪೇತ್ರನು ಕ್ರಿಸ್ತನನ್ನು ಅಲ್ಲಗಳೆದಿದ್ದರೂ ನಂತರದಲ್ಲಿ ಪಶ್ಚಾತ್ತಾಪಪಟ್ಟು ಕಣ್ಣೀರಿಟ್ಟಿದ್ದ ಕಾರಣ ಆತನನ್ನು ಸ್ವೀಕರಿಸಿ ನಂತರ

ಮುಂದುವರೆಯುವಂತೆ ಆಶ್ವಾಸನೆಯು ದೊರೆಯಿತು. ಆತನು ತನ್ನ ಒಡೆಯನ ಪ್ರೀತಿಯ ಬಗ್ಗೆ ಹೊಸದಾಗಿ ಕಲಿತುಕೊಂಡನು ಮತ್ತು ಆತನ ಕುರಿಗಳನ್ನು ಮತ್ತು ಕುರಿಮರಿಗಳನ್ನು ಮೇಯಿಸುವ ಭಾಗ್ಯದ ಮುಂದುವರಿಕೆಯನ್ನು ವಹಿಸಿಕೊಂಡನು. ಕರ್ತನು ಆತನಿಗೆ – "ನೀನು ಇನ್ನು ಮುಂದೆ ಮೀನು ಹಿಡಿಯುವುದಕ್ಕೆ ಹೋಗುವುದು ಬೇಡ, ನಾನು ನಿನ್ನನ್ನು ಮನುಷ್ಯರನ್ನು ಹಿಡಿಯುವ ಬೆಸ್ತನನ್ನಾಗಿ ಮಾಡುತ್ತೇನೆಂದು ಒಮ್ಮೆ ಹೇಳಿದ್ದೆ. ಈಗಲೂ ನಿನ್ನ ಹೃದಯವು ನಿಷ್ಠೆಯುಳ್ಳದ್ದೂ, ಶ್ರದ್ಧೆಯುಳ್ಳದ್ದೂ ಆಗಿರುವುದರಿಂದ ನಾನು ನಿನ್ನ ನಿಯೋಗವನ್ನು ಮನುಷ್ಯರನ್ನು ಹಿಡಿಯುವ ಬೆಸ್ತನನ್ನಾಗಿ ನವೀಕರಿಸುತ್ತೇನೆ" ಎಂದು ಹೇಳಿದನು.

ಅವರೊಡನೆ ಊಟ ಮಾಡುತ್ತಾ, ಆತನು ಅವರಿಗೆ "ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು. ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವುದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೇ ತಂದೆ ಮಾಡಿದಂಥ, ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕಾಗಿ ಕಾದುಕೊಂಡಿರ್ರಿ (ಅ.ಕೃ. 1:4–5) ಎಂದು ಆಜ್ಞಾಪಿಸುತ್ತಾನೆ. ಆತನ ಈ ಮಾತಿನ ಪ್ರಕಾರ ಅವರು ಯೆರೂಸಲೇಮಿಗೆ ಬಂದರು, ಇಲ್ಲಿ ಆತನ ಪುನರುತ್ಥಾನದ ನಾಲ್ವತ್ತು ದಿನಗಳ ನಂತರ ಆತನು ಅವರನ್ನು ಕಡೆಯ ಸಾರಿ ಬೇಟಿ ಮಾಡಿ ಅವರೊಂದಿಗೆ ಮಾತನಾಡುತ್ತಾನೆ. ಅವರು ಈ ಸಾರಿ ಅವನನ್ನು ಆತನು ವಾಗ್ದಾನ ಮಾಡಿದ ರಾಜ್ಯದ ಬಗ್ಗೆ ಪ್ರಶ್ನಿಸುವ ಧೈರ್ಯತೆಗೆದುಕೊಂಡು – "ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ಪುನಃ ಸ್ಥಾಪಿಸಿಕೊಡುವಿಯೋ?" (ಅ.ಕೃ. 1:6) ಎಂದು ಆತನನ್ನು ವಿಚಾರಿಸುತ್ತಾರೆ. ಇಸ್ರಾಯೇಲ್ ರಾಜ್ಯದ ಈ ಆಲೋಚನೆಯು ಪ್ರತಿಯೊಬ್ಬ ಯೆಹೂದ್ಯನ ಮನದಲ್ಲಿಯೂ ಎಲ್ಲಕ್ಕಿಂತ ಮೇಲಿನ ಸ್ಥಾನದಲ್ಲಿತ್ತು. ಮೆಸ್ಸೀಯನ ಕೈಕೆಳಗೆ ಇಸ್ರಾಯೇಲ್ ಎಲ್ಲಾ ದೇಶಗಳ ಮುಖ್ಯದೇಶವಾಗಿರುತ್ತದೆ ಎಂಬುದು ಅವರ ತಿಳುವಳಿಕೆಯಾಗಿತ್ತು. ಅವರಿಗೆ ಅನ್ಯಜನಗಳ ದೀರ್ಘಾವಧಿಯ ಬಗ್ಗೆ ತಿಳಿದಿರಲಿಲ್ಲ ಮತ್ತು ಮುಖ್ಯವಾದ ಆಶೀರ್ವಾದವು ಐಹಿಕ ಇಸ್ರಾಯೇಲ್ಯರಿಂದ ತೆಗೆಯಲ್ಪಟ್ಟಿದೆ (ಮತ್ತಾಯ 21:43, ರೋಮಾ. 11:7) ಮತ್ತು ಅವರು ತಾವೇ ಆತ್ಮೀಕ ಇಸ್ರಾಯೇಲ್ಯ ಸದಸ್ಯರೂ, ರಾಜವಂಶದ ಯಾಜಕರೂ, ಪವಿತ್ರ ಜನಾಂಗವೂ, ಕ್ರಿಸ್ತನ ದೇಹವಾದ ಅವರ ಮೂಲಕ ಭೂಲೋಕದ ಆಶೀರ್ವಾದವು ಬರಲಿದೆ ಎಂಬುದಾಗಿ ತಿಳಿದಿರಲಿಲ್ಲ. ಅವರು ಈ ಯಾವುದೇ ಒಂದು ವಿಷಯವನ್ನು ಇನ್ನೂ ತಿಳುಕೊಂಡಿರಲಿಲ್ಲ. ಅವರು ತಿಳುಕೊಳ್ಳುವುದಾದರೂ ಹೇಗೆ? ಅವರು ಪವಿತ್ರಾತ್ಮನನ್ನು ಹೊಂದಿದವರಾಗಿ ದೇವರ ಪುತ್ರರಾಗಿ ಇನ್ನೂ ಅಂಗೀಕರಿಸಲ್ಪಟ್ಟಿರಲಿಲ್ಲ. ಆದರೆ ಅವರು ಇನ್ನೂ ದಂಡನೆಯಲ್ಲಿದ್ದರು. ಯಾಕೆಂದರೆ, ವಿಮೋಚಕನಿಂದ ಈಡುಬಲಿ ಸಮರ್ಪಿಸಲ್ಪಟ್ಟಿದ್ದರೂ, ಅದು ನಮ್ಮ ಪರವಾಗಿ ಮಹಾ ಪವಿತ್ರನಿಗೆ ಪರಲೋಕದಲ್ಲಿಯೂ ವಿಧಿಯುಕ್ತವಾಗಿ ಅರ್ಪಿಸಲ್ಪಟ್ಟಿರಲಿಲ್ಲ (ಯೋಹಾನ 7:39). ಆದುದರಿಂದ ನಮ್ಮ ಕರ್ತನು ಅವರಿಗೆ ವಿವರವಾದ ಉತ್ತರವನ್ನು ನೀಡಲು ಪ್ರಯತ್ನಿಸಲಿಲ್ಲ. "ಆತನು ಅವರಿಗೆ– ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ, ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ. ಆದರೆ, ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ* ಯೆರೂಸಲೇಮಿನಲ್ಲಿಯೂ, ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು (ಅ.ಕೃ. 1:7,8).

ನಂತರದಲ್ಲಿ ಅವರೊಡನೆ ನಡೆದುಹೋಗುತ್ತಿದ್ದ ಕರ್ತನು, ಅವರು ಎಣ್ಣೆಮರದ ಗುಡ್ಡವನ್ನು ತಲುಪಿದಾಗ, ತನ್ನ ಕೈಗಳನ್ನೆತ್ತಿ ಅವರನ್ನಾಶೀರ್ವದಿಸಿದನು ಮತ್ತು ಅವರಿಂದ ಬೇರೆಯಾಗಿ "ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು" (ಲೂಕ 24:48–52, ಅ.ಕೃ. 1:6–15). ಅವರೀಗ ದೇವರ ಯೋಜನೆಯಲ್ಲಿನ ಕೆಲವು ಹೆಚ್ಚಿನ ಸಂಗತಿಗಳನ್ನು ಕಾಣತೊಡಗಿದರು. ಪರಲೋಕದಿಂದ ಇಳಿದು ಬಂದ ಕರ್ತನು ಈಗ ತನ್ನ ತಂದೆಯ ಬಳಿಗೆ ಹಿಂದಿರುಗಿ ಹೋಗಿದ್ದಾನೆ. ತಾನು ಸಾಯುವ ಮೊದಲು ಅವರಿಗೆ ಹೇಳಿದಂತೆ ಆತನು ಅವರಿಗಾಗಿ ಸ್ಥಳವನ್ನು ಸಿದ್ಧಮಾಡುವುದಕ್ಕಾಗಿ ಹೋಗಿದ್ದಾನೆ ಮತ್ತು ಪುನಃ ಅವರನ್ನು ಸ್ವೀಕರಿಸಲು ಅಲ್ಲಿಂದ ಬರುತ್ತಾನೆ (ಲೂಕ 19:12). ಏತನ್ಮಧ್ಯೆ ಆತನು ತನ್ನ ಭಕ್ತರಲ್ಲಿ ಮಹಿಮೆ ಹೊಂದಲು ಬರುವಾಗ, ರಾಜಾಧಿರಾಜನಾಗಿ, ಕರ್ತರ ಕರ್ತನಾಗಿ ಆಳ್ವಿಕೆ ಮಾಡಲಿರುವಾಗ ಆತನ ಜನರು ಆತನನ್ನು ಸ್ವೀಕರಿಸುವಂತೆ ಸಿದ್ಧಪಡಿಸಲು ಆತನ ಸಾಕ್ಷಿಗಳಾಗಿರಬೇಕು. ಎಲ್ಲಾ ಸೃಷ್ಟಿಗೂ ಪರಲೋಕದಿಂದ ಬರುವ ಅರಸನಿಗೆ "ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು" ಹೊಂದಿದವನನ್ನು ಕುರಿತು ಪ್ರಕಟ ಮಾಡುವ ನೂತನ ಧ್ಯೇಯವು ಅವರಿಗೆ ದೊರೆಯಿತು. ಹಿಂದಿನ ವರ್ಷಗಳಲ್ಲಿ

* ಕಾಲಗಳನ್ನು, ಸಮಯಗಳನ್ನು ತಿಳಿದು ಅವುಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಸರಿಯಾದ ಸಾಕ್ಷಿಗೆ ಸಂಬಂಧಿಸಿದ ಎಲ್ಲಾ ಸಂಗತಿಗಳ ಶಕ್ತಿಯು ಸಮಗ್ರ ಸಭೆಗೆ ಮೊದಲಿನಿಂದ ಕಡೆಯವರೆಗೂ ಅನ್ವಯವಾಗುತ್ತದೆ. ಪವಿತ್ರಾತ್ಮನ ಮಾರ್ಗದರ್ಶನ ಮತ್ತು ಶಕ್ತಿಯ ಅಡಿಯಲ್ಲಿ, ನಾವು ಈ ಯುಗಾಂತ್ಯದವರೆಗೆ ಆತನ ಸಾಕ್ಷಿಗಳಾಗಿರುವಂತೆ ಎಲ್ಲಾ ಲಕ್ಷಣಗಳಿಗೆ ಸಂಬಂಧಪಟ್ಟಂತೆ ಆಹಾರವು ಸೂಕ್ತಸಮಯದಲ್ಲಿ ದೊರೆಯುತ್ತದೆ. ಹೋಲಿಸಿ ಯೋಹಾನ 16:12,13.

ಮಾಡುತ್ತಿದ್ದಂತಹ ಕೆಲಸವಾಗಿದ್ದ "ಮನುಷ್ಯನಾದ ಯೇಸುಕ್ರಿಸ್ತನ" ಬಗ್ಗೆ ಘೋಷಿಸುವ ಕಾರ್ಯ ಮನುಷ್ಯರಿಂದ ಹೀನೈಸಲ್ಪಟ್ಟವನೂ, ತಿರಸ್ಕಾರಕ್ಕೆ ಒಳಗಾದವನೂ ಆಗಿದ್ದವನನ್ನು ಹಿಂಬಾಲಿಸುತ್ತಿದ್ದ ಕಾರ್ಯಕ್ಕಿಂತಲೂ ಇನ್ನೂ ಹೆಚ್ಚಿನದಾಗಿ ಕಂಡು ಬಂದಿತು. ಜೀವದಿಂದ ಎದ್ದು ಬಂದ ಅವರ ಕರ್ತನು ತನ್ನ ವ್ಯಕ್ತಿಗತ ಕಾಣಿಸಿಕೊಳ್ಳುವಿಕೆಯಲ್ಲಿ ಮಾತ್ರವಲ್ಲ, ಒಂದೇ ಸಮಯದಲ್ಲಿ ವಿವಿಧ ಸ್ಥಳಗಳಲ್ಲಿ ವಿವಿಧ ರೀತಿಯಲ್ಲಿ ಕಾಣಿಸಿಕೊಳ್ಳುವಂತೆ ನಿಜವಾಗಿಯೂ ಬದಲಾಗಿದ್ದಾನೆ. ತನ್ನೆಲ್ಲಾ ಅಧಿಕಾರವನ್ನೂ ಪ್ರಕಟಪಡಿಸಿದ್ದಾನೆ, ಆದರೆ ಆತನು ತನ್ನ ಸ್ವಭಾವದಲ್ಲಿಯೂ ಬದಲಾಗಿದ್ದಾನೆ. ಆತನು ಇನ್ನು ಮುಂದೆ ಯೆಹೂದ್ಯರಿಗೆ ಅರಿಕೆ ಮಾಡುವುದಿಲ್ಲ, ಅವರಿಗೆ ತನ್ನನ್ನು ತೋರಿಸಿಕೊಳ್ಳುವುದಿಲ್ಲ; ಆತನು ಪುನರುತ್ಥಾನಗೊಂಡ ಮೇಲೆ ಆತನ ಸ್ನೇಹಿತರೂ ಮತ್ತು ಅನುಯಾಯಿಗಳಲ್ಲದೇ ಬೇರೆ ಯಾರಿಗೂ ಆತನು ಕಾಣಿಸಿಕೊಳ್ಳಲಿಲ್ಲ. "ಇನ್ನು ಸ್ವಲ್ಪಕಾಲವಾದ ಮೇಲೆ ಲೋಕವು ನನ್ನನ್ನು ನೋಡುವುದಿಲ್ಲ, ಆದರೆ ನೀವು ನನ್ನನ್ನು ನೋಡುವಿರಿ" (ಯೋಹಾನ 14:19) ಎಂಬ ಆತನ ಮಾತುಗಳು ಈ ರೀತಿಯಲ್ಲಿ ಸತ್ಯವಾಯಿತು.

ಅಪೋಸ್ತಲರ ಮತ್ತು ಆತನ ಪುನರುತ್ಥಾನದಲ್ಲಿ ಸ್ಥಾಪಿತಗೊಂಡ ಆದಿ ಸಭೆಯವರ ನಂಬಿಕೆಯು ಈ ರೀತಿಯಲ್ಲಿತ್ತು. ಅವರ ಎಲ್ಲಾ ಅನುಮಾನಗಳೂ ಚದುರಿಹೋದವು, ಅವರ ಹೃದಯವು ಉಲ್ಲಾಸ ಗೊಂಡಿತ್ತು. ಅವರು ಯೆರೂಸಲೇಮಿಗೆ ಹಿಂತಿರುಗಿ ಪ್ರಾರ್ಥನೆಯಲ್ಲಿಯೂ, ದೇವರ ಪರಿಶುದ್ಧ ವಾಕ್ಯಗಳನ್ನೂ ಧ್ಯಾನಿಸುವುದರಲ್ಲಿಯೂ ಮುಂದುವರೆದರು. ತಂದೆಯಿಂದ ವಾಗ್ದಾನ ಮಾಡಲ್ಪಟ್ಟ ಆತನ ಮಕ್ಕಳ ಸ್ಥಾನಕ್ಕಾಗಿ, ಆತ್ಮೀಕ ತಿಳುವಳಿಕೆಯು ಅವರ ದತ್ತಿಗಾಗಿ, ನಿಜವಾದ ಇಸ್ರಾಯೇಲ್ಯರನ್ನು ಮನದಟ್ಟುಪಡಿಸುವ ಅದ್ಭುತ ಶಕ್ತಿಗಾಗಿ, ಸುವಾರ್ತಾ ಸಭೆಯನ್ನು ಸ್ಥಾಪಿಸುವುದಕ್ಕಾಗಿ ಅವರು ಪಂಚಾಶತ್ತಮ ಹಬ್ಬದಲ್ಲಿ ಕಾಯುತ್ತಿದ್ದರು (ಅ.ಕೃ. 1:14, 2:1).

ನಮ್ಮ ಕರ್ತನು ತನ್ನ ಪುನರುತ್ಥಾನದ ನಂತರ ನಾಲ್ವತ್ತು ದಿವಸಗಳಲ್ಲಿ ಪ್ರಕಟಗೊಂಡಂತೆ ಆತನ ದ್ವಿತೀಯಾಗಮನದಲ್ಲಿ ಪ್ರಕಟಗೊಳ್ಳದಿದ್ದರೂ, ಆತನು ತನ್ನ ಸಹೋದರರನ್ನು ಅಂಧಕಾರದಲ್ಲಿ ಬಿಟ್ಟುಬಿಡುವವನಲ್ಲ ಎಂಬ ಭರವಸೆ ನಮಗಿದೆ. ಅಲ್ಲದೇ, ಇನ್ನೂ ಹೆಚ್ಚಾಗಿ, ಆ ನಾಲ್ವತ್ತು ದಿವಸಗಳಲ್ಲಿ ಅವರ ಬಳಿ ಇಲ್ಲದೇ ಇದ್ದ ಸಹಾಯಕನು ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವನು (ಲೂಕ 24:49) ಮತ್ತು ಆತನು ನಮ್ಮನ್ನು ಎಲ್ಲಾ ಸತ್ಯಗಳನ್ನು ತಿಳುಕೊಳ್ಳುವಂತೆ ಬೇಕಾದ ಮಾರ್ಗದರ್ಶನ ನೀಡುತ್ತಾನೆ ಎಂಬ ಭರವಸೆ ಇದೆ. ಮಾತ್ರವಲ್ಲದೇ ವಾಗ್ದಾನ ಮಾಡಿದಂತೆ ನಮಗೆ ಮುಂಬರಲಿರುವ ಸಂಗತಿಗಳ ಬಗ್ಗೆಯೂ ತೋರಿಸುತ್ತಾನೆ. ಆದುದರಿಂದ ಸೂಕ್ತ ಸಮಯದಲ್ಲಿ ನಮಗೆ ಆತನ ಆಗಮನ ಕಾಲದ ರೀತಿ, ಸಮಯ ಮತ್ತು ನಾವು ಹಾಜರಿರಬೇಕಾದ ಸಂಧರ್ಭಗಳ ಬಗ್ಗೆ ಪೂರ್ಣವಾದ ತಿಳುವಳಿಕೆ ಉಂಟಾಗುತ್ತದೆ. ಅದನ್ನು ಜಾಗರೂಕತೆಯಿಂದ ಗಮನಿಸುವುದಾದರೆ ಮತ್ತು ಗುರುತಿಸುವುದಾದರೆ, ಅವುಗಳು ಬೇರೆ ರೀತಿಯವುಗಳಾಗಿದ್ದರೂ ಆದಿ ಸಭೆಗೆ ದೊರಕಿದ ನಮ್ಮ ಕರ್ತನ ಪುನರುತ್ಥಾನದ ಸಾಕ್ಷ್ಯಗಳಿಗಿಂತಲೂ ಕಡಿಮೆಯಾಗಿ ಮನದಟ್ಟುಪಡಿಸು ವಂಥವುಗಳಲ್ಲ.

ನಮ್ಮ ಕರ್ತನು ತನ್ನ ಎರಡನೆಯ ಬರೋಣದಲ್ಲಿ ಮಾನವ ರೂಪ ತಳೆಯಲು ಸಾಧ್ಯವಾಗಬಹುದು ಮತ್ತು ತನ್ನ ಪುನರುತ್ಥಾನದ ನಂತರ ತನ್ನ ಶಿಷ್ಯರಿಗೆ ಕಾಣಿಸಿಕೊಂಡಂತೆ ಆತನು ಮನುಷ್ಯರಿಗೆ ಆ ರೀತಿಯಾಗಿ ಕಾಣಿಸಿಕೊಳ್ಳಬಹುದು, ಇದರಲ್ಲಿ ಯಾವ ಸಂದೇಹವೂ ಇರುವುದಿಲ್ಲ; ಆತ್ಮೀಕ ಜೀವಿಗಳು ಹಿಂದಿನಕಾಲದಲ್ಲಿ ಆ ರೀತಿಯಾಗಿ ಮಾನವ ಶರೀರಧಾರಿಗಳಾಗಿ ಅಥವಾ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಳ್ಳುವ ಶಕ್ತಿಯನ್ನು ಪ್ರಕಟಿಸಿದ ಕಾರಣ ಆತನು ಸಹ ಆ ನಾಲ್ವತ್ತು ದಿವಸಗಳಲ್ಲಿ ಆ ರೀತಿಯಾಗಿ ಕಾಣಿಸಿಕೊಂಡನು. ಆದರೆ ಅಂಥಾ ಪ್ರಕಟನೆಯು ದೇವರ ಯೋಜನೆಯ ಸಾಮಾನ್ಯ ಸ್ವಭಾವದ ಸಾಮರಸ್ಯ ರೂಪಗಳಿಗೆ ಹೊರತಾದುದು, ಹಾಗೆಯೇ ನಾವು ನೋಡಲಿರುವ ಆತನ ಪ್ರಕಟನೆಗೆ ಸಂಬಂಧಿಸಿದಂತೆ ನೀಡಲ್ಪಟ್ಟ ಆತ್ಮೀಕ ಸೂಚನೆಗಳ ಸಾಮರಸ್ಯಕ್ಕೆ ಹೊರತಾದುದು. ಬದಲಾಗಿ ಇದು ಆತನ ಆತ್ಮೀಕ ರಾಜ್ಯವು ತನ್ನ ಪ್ರಸನ್ನತೆಯನ್ನು ಮತ್ತು ಶಕ್ತಿಯನ್ನು ಮಾನವನ ಮೂಲಕ, ಈ ಲೋಕದ ಪಾರುಪತ್ಯಗಳ ಮೂಲಕ ನಿವೇದಿಸಬೇಕು, ಕಾರ್ಯಗತಗೊಳಿಸಬೇಕು ಎಂಬುದು ದೇವರ ಯೋಜನೆಯಾಗಿದೆ. ಈ ಲೋಕದ ಅರಸನಾದ ಸೈತಾನನು ಮಾನವರ ಕಣ್ಣಿಗೆ ಗೋಚರಿಸದೇ ಹೋದರೂ ಆತನ ವಶದಲ್ಲಿರುವವರ, ನಿಯಂತ್ರದಲ್ಲಿರುವವರ ಮೂಲಕ ವ್ಯಾಪಕವಾದ ಪ್ರಭಾವವನ್ನು ಕಾರ್ಯಗತ ಗೊಳಿಸುವಂತೆಯೇ ನೂತನ ಸಮಾಧಾನ ಪ್ರಭುವು ತನ್ನ ಪ್ರಕಟನೆಯನ್ನೂ, ಶಕ್ತಿಯನ್ನೂ ಆತನ ವಶದಲ್ಲಿರುವ, ಆತನ ಆತ್ಮನಿಂದ ನಿಯಂತ್ರಿಸಲ್ಪಡುವ ಮಾನವರಿಂದ ಕಾರ್ಯಗತಗೊಳಿಸುತ್ತಾನೆ.

ಸ್ವಾಭಾವಿಕ ಕಣ್ಣುಗಳ ಮೂಲಕ ನೋಡುವುದಾಗಲೀ, ಸ್ವಾಭಾವಿಕ ಕಿವಿಗಳಿಂದ ಲಾಲಿಸುವುದಾಗಲೀ ಎಲ್ಲವನ್ನೂ ನೋಡಿದಂತೆ, ಕೇಳಿಸಿಕೊಂಡಂತೆ ಆಗುವುದಿಲ್ಲ. ಇದುವರೆಗೆ ಯಾವ ಸಮಯದಲ್ಲಿಯೂ ದೇವರನ್ನು ಯಾರೂ ಕಂಡಿಲ್ಲ ಅಥವಾ ಆತನ ಧ್ವನಿಯನ್ನು ಕೇಳಿಸಿಕೊಂಡಿಲ್ಲ. ಆದಾಗ್ಯೂ ಎಲ್ಲಾ ದೇವರ ಮಕ್ಕಳೂ ಆತನನ್ನು ನೋಡಿದ್ದಾರೆ, ತಿಳಿದಿದ್ದಾರೆ, ಆತನ ಅನ್ಯೋನ್ಯತೆಯಲ್ಲಿದ್ದಾರೆ (ಯೋಹಾನ

1:18; 5:37; 14:7). ನಾವು ದೇವರ ಕರೆಯನ್ನು, ನಮ್ಮ ಉನ್ನತ ಕರೆಯನ್ನು (High Calling) ಕೇಳಿಸಿ ಕೊಳ್ಳುತ್ತೇವೆ, ನಾವು ನಮ್ಮ ಕುರುಬನ ಸ್ವರವನ್ನು ಕೇಳಿಸಿಕೊಳ್ಳುತ್ತೇವೆ, ಮತ್ತು ನಿರಂತರವಾಗಿ ಯೇಸುವನ್ನು ನೋಡುತ್ತಾ ಇರುತ್ತೇವೆ, ಮತ್ತು ಆತನು ವಾಗ್ದಾನ ಮಾಡಿದ ಬಹುಮಾನವನ್ನು, ಜೀವದ ಕಿರೀಟವನ್ನು ಸ್ವಾಭಾವಿಕ ದೃಷ್ಟಿಯಿಂದಲ್ಲ, ಸ್ವಾಭಾವಿಕ ಕೇಳಿಸಿಕೊಳ್ಳುವಿಕೆಯಿಂದಲ್ಲ. ಆದರೆ ನಮ್ಮ ಆತ್ಮೀಕ ತಿಳುವಳಿಕೆಯ ಮೂಲಕ ನೋಡುತ್ತೇವೆ ಮತ್ತು ಕೇಳಿಸಿಕೊಳ್ಳುತ್ತೇವೆ. ಆತ್ಮೀಕನೂ, ಉನ್ನತೋನ್ನತನಾಗಿ ಏರಿಸಲ್ಪಟ್ಟ ಮಹಿಮೆಯ ಅರಸನೂ, ನಮ್ಮ ವಿಮೋಚಕನೂ ರಾಜನೂ ಆಗಿರುವ ನಮ್ಮ ಕರ್ತನನ್ನು ದೃಷ್ಟಿಸುವುದು ನಮ್ಮ ತಿಳುವಳಿಕೆಗಿಂತಲೂ, ನಂಬಿಕೆಗಿಂತಲೂ, ಪಂಚಾಶತ್ತಮಕ್ಕೆ ಹಿಂದೆ ನಮಗೆ ನೀಡಲ್ಪಟ್ಟ ಸ್ವಾಭಾವಿಕ ದೃಷ್ಟಿಗಿಂತಲೂ ಬಹಳಷ್ಟು ಅಮೂಲ್ಯವಾದುದು.

ನಮ್ಮ ಕರ್ತನು ತನ್ನ ಪುನರುತ್ಥಾನದ ನಂತರ ತನ್ನ ಶಿಷ್ಯರಿಗೆ ಕಾಣಿಸಿಕೊಂಡ ರೀತಿಯಲ್ಲಿ ಅವರಿಗೆ ಕಾಣಿಸಿಕೊಳ್ಳುವ ಅವಶ್ಯಕತೆ ಇತ್ತು. ಅದು ಆತನ ಎರಡನೆಯ ಬರೋಣದಲ್ಲಿ ಹೀಗೆ ಕಂಡುಬರುವ ಅವಶ್ಯಕತೆಯಿಲ್ಲ. ಆತನ ಉದ್ದೇಶಗಳನ್ನೂ, ಕಾರ್ಯಗಳನ್ನೂ ಇನ್ನೂ ಉತ್ತಮವಾದ ವಿಧಾನಗಳಿಂದ ನೆರವೇರಿಸುವನು. ವಾಸ್ತವವಾಗಿ, ಆತನ ಎರಡನೆಯ ಬರೋಣದಲ್ಲಿ ಆ ರೀತಿಯಾಗಿ ಕಾಣಿಸಿಕೊಳ್ಳುವುದು ಆತನು ನೆರವೇರಿಸಲಿರುವ ಉದ್ದೇಶಕ್ಕೆ ಬಾಧಕವಾಗುತ್ತದೆ. ಪುನರುತ್ಥಾನದ ನಂತರ ಆತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡದ್ದರ ಉದ್ದೇಶವು "ಸತ್ತವನಾಗಿದ್ದನು,. ಈಗ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದಾನೆ" ಎಂದು ಮನವರಿಕೆ ಮಾಡುವದಾಗಿತ್ತು. ಹಾಗಾಗಿ, ಅವರು ಈ ಪುನರುತ್ಥಾನದ ಸತ್ಯಕ್ಕೆ ಸಾಕ್ಷಿಗಳಾಗಿ ಮುಂದುವರೆಯಬಹುದಾಗಿತ್ತು (ಲೂಕ 24:48) ಮತ್ತು ಅವರ ಈ ಸಾಕ್ಷ್ಯವು ಬರಲಿರುವ ಜನಾಂಗದವರ ನಂಬಿಕೆಗೆ ನಿಜವಾದ ಬುನಾದಿಯಾಗಬೇಕು ಎಂಬುದಾಗಿತ್ತು. ಯಾವ ನಂಬಿಕೆಯ ಮನುಷ್ಯನಾದರೂ ಕ್ರಿಸ್ತನಲ್ಲಿ ವಿಶ್ವಾಸವಿಲ್ಲದೆ ಪವಿತ್ರಾತ್ಮನನ್ನು ಪಡಕೊಳ್ಳುವಂತೆ ದೇವರ ಬಳಿಗೆ ಬರಲು ಸ್ವೀಕಾರಾರ್ಹನಲ್ಲವಾದರೂ, ಆಗ ಶಿಷ್ಯರ ಸಲುವಾಗಿ ಮಾತ್ರವಲ್ಲ, ಆದರೆ ಅಂದಿನಿಂದ ಇಂದಿನವರೆಗೆ ಎಲ್ಲರಿಗೂ ಆತನ ಪುನರುತ್ಥಾನದ ಮತ್ತು ಬದಲಾವಣೆಗಳ ಪುರಾವೆಗಳು ಸಾಮಾನ್ಯ ಮನುಷ್ಯನು ಗ್ರಹಿಸಿಕೊಳ್ಳುವಂತೆ ಮತ್ತು ಮೆಚ್ಚಿಕೊಳ್ಳುವಂತೆ ಅಗತ್ಯವಾಗಿದೆ. ಅವರು ಪವಿತ್ರಾತ್ಮನಲ್ಲಿ ಪಾಲುದಾರನಾದ ನಂತರದಲ್ಲಿ, ಆತ್ಮೀಕ ಸಂಗತಿಗಳನ್ನು ಅರಿತುಕೊಂಡ ಮೇಲೆ (1 ಕೊರಿಂಥ 2:12–16) "ಯೇಸು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದಿದ್ದಾನೆ" ಎಂಬ ಸಮಾಧಿಯ ಬಳಿಯಲ್ಲಿದ್ದ ದೇವದೂತರುಗಳ ಮಾತನ್ನು, ಒಂದು ವೇಳೆ ಅವರು ಯೇಸುವಿನ ಮಾಂಸಧಾರಿ ಶರೀರವು ಸಮಾಧಿಯಲ್ಲಿ ಇನ್ನೂ ಮಲಗಿರುವುದನ್ನು ಕಂಡರೂ ನಂಬಬಹುದಿತ್ತು. ಆದರೆ ಅದಕ್ಕೆ ಮೊದಲು ಅಲ್ಲಿ – ದೇಹವು ಇಲ್ಲವಾಗಿ ಹೋದರೆ ಮಾತ್ರ ಪುನರುತ್ಥಾನದಲ್ಲಿ ಅವರು ನಂಬಿಕೆಯಿಡಲು ಸಾಧ್ಯವಿತ್ತು. ಪವಿತ್ರಾತ್ಮನು ಆತ್ಮೀಕ ಸಂಗತಿಗಳನ್ನು ಗ್ರಹಿಸಿಕೊಳ್ಳುವಂತೆ ಅವರನ್ನು ಶಕ್ತರನ್ನಾಗಿ ಮಾಡಿದ ನಂತರವೇ ಅವರು ಆತನು ಸಾಯುವದು ಅಗತ್ಯವಾಗಿತ್ತು ಮತ್ತು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬರುತ್ತಾನೆ, ನಂತರದಲ್ಲಿ ಒಬ್ಬ ಮಹಿಮಾ ಅರಸನಾಗಿ ಉನ್ನತಕ್ಕೆ ಏರಿಸಲ್ಪಡುತ್ತಾನೆ, ಆತನು ಮಾನವನಾಗಿ ಕಾಣಿಸಿಕೊಳ್ಳುವ ಅಗತ್ಯವಿಲ್ಲದಿದ್ದರೂ, ವಿವಿಧ ಮಾನವ ರೂಪಗಳನ್ನು ವಸ್ತ್ರದಂತೆ ಧರಿಸುತ್ತಾನೆ, ಆತನನ್ನು ಮುಟ್ಟಿ ನೋಡುತ್ತೇವೆ, ಆತನು ಪರಲೋಕಕ್ಕೆ ಏರಿಹೋಗುವುದನ್ನು ನೋಡುವುದನ್ನು ಪ್ರತಿಪಾದಿಸುವಂತೆ ಎಂಬಿತ್ಯಾದಿಯಾದ ಪ್ರವಾದನಾ ಮಾತುಗಳನ್ನು ಅವರು ನಂಬಿದ್ದಿರಬಹುದು. ಸ್ವಾಭಾವಿಕ ಮನುಷ್ಯರಾದ ಅವರಿಗೆ ಇದರ ಅಗತ್ಯವಿತ್ತು. ನಂಬುವುದರಿಂದ, ಕ್ರಿಸ್ತನ ಮೂಲಕ ದೇವರ ಬಳಿ ಬರುತ್ತೇವೆ. ಪಾಪಗಳಿಗೆ ಕ್ಷಮೆಯನ್ನು ಪಡೆಯುತ್ತೇವೆ ಹಾಗೂ ಮಕ್ಕಳ ಭಾವವನ್ನು ಹೊಂದಿದವರಾಗಿ ಆತ್ಮೀಕ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ.

ನಂಬಿಕೆಗೆ ಅಡ್ಡಿಯಾಗಿರುವ ಸ್ವಾಭಾವಿಕ ಸಂಗತಿಗಳನ್ನು ತೆಗೆಯುವಾಗಲೂ, ಮಾನವ ರೂಪವನ್ನು ತಾಳುವಾಗಲೂ ಇವೇ ಮುಂತಾದವುಗಳಲ್ಲಿಯೂ ನಮ್ಮ ಕರ್ತನು ತನ್ನ ಶಿಷ್ಯರನ್ನು ಮನದಟ್ಟುಪಡಿಸುತ್ತಾನೆ ಮತ್ತು ಅವರು ಇತರರಿಗೆ ಸಾಕ್ಷಿಗಳಾಗುವಂತೆ ಮಾಡುತ್ತಾನೆ. ಆದರೆ ಇದು ಅವರ ಸ್ವಾಭಾವಿಕ ದೃಷ್ಟಿ ಮತ್ತು ಸ್ಪರ್ಷದಿಂದಲ್ಲ. ಬದಲಾಗಿ ಸತ್ಯದ ಮೂಲಕ ವಿವೇಚಿಸುವುದರಿಂದಾಗಿದೆ – "ಆ ಮೇಲೆ ಅವರು ಶಾಸ್ತ್ರ ವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದು ಅವರಿಗೆ – ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವುದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿಗಳಾಗಿದ್ದೀರಿ. ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊಂದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು" (ಲೂಕ 24: 45–49). ಪೇತ್ರನು ಸಹ ಇದೇ ಉದ್ದೇಶವನ್ನು ಸ್ಪಷ್ಟಪಡಿಸುತ್ತಾ – "ಆತನನ್ನು ಮರದ ಕಂಬಕ್ಕೆ ತೂಗು ಹಾಕಿ ಕೊಂದರು. ದೇವರು ಆತನನ್ನು ಮೂರನೆಯ ದಿನದಲ್ಲಿ ಎಬ್ಬಿಸಿ

ಪ್ರತ್ಯಕ್ಷನಾಗುವಂತೆ ಮಾಡಿದನು; ಆತನು ಎಲ್ಲರಿಗೂ ಪ್ರತ್ಯಕ್ಷನಾಗದೆ ದೇವರು ಮುಂಚಿತವಾಗಿ ಆರಿಸಿಕೊಂಡಿದ್ದ ಸಾಕ್ಷಿಗಳಾದ ನಮಗೆ ಪ್ರತ್ಯಕ್ಷನಾದನು. ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ಮೇಲೆ ನಾವು ಆತನ ಸಂಗಡ ಅನ್ನಪಾನಗಳನ್ನು ತಕ್ಕೊಂಡೆವು. ಆತನೇ ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿ ದೇವರಿಂದ ನೇಮಿತನಾದವನು ಎಂಬುದನ್ನು ಜನರಿಗೆ ಸಾಕ್ಷಿ ಹೇಳಬೇಕೆಂದು ದೇವರು ನಮಗೆ ಅಪ್ಪಣೆಕೊಟ್ಟನು" (ಅ.ಕೃ. 10: 40–42) (Diaglott Translation).

ನಮ್ಮ ಕರ್ತನು ತನ್ನ ಪುನರುತ್ಥಾನದ ನಂತರದಲ್ಲಿ ಯಾವ ರೀತಿಯಲ್ಲಿ ತನ್ನ ಶಿಷ್ಯರಿಗೆ ಕಾಣಿಸಿಕೊಂಡು ಅವರಿಗೆ ತನ್ನ ಪುನರುತ್ಥಾನವನ್ನೂ, ಬದಲಾದ ಸ್ವಭಾವವನ್ನು ಪರಿಚಯಿಸುವ ತನ್ನ ಉದ್ದೇಶವನ್ನು ನೆರವೇರಿಸುವುದು ಒಂದು ಸಾಮಾನ್ಯವಾದ ಔಚಿತ್ಯವಾಗಿತ್ತು. ಆತನೇನಾದರೂ, ದೇವದೂತನು ಮೋಶೆಗೆ ಉರಿಯುವ ಪೊದೆಯಲ್ಲಿ ಬೆಂಕಿಯೋಪಾದಿಯಲ್ಲಿ ಕಾಣಿಸಿಕೊಂಡಂತೆ (ವಿಮೋ. 3:2) ಆತನು ಕಾಣಿಸಿಕೊಳ್ಳುತ್ತಿದ್ದರೆ, ಆತನು ನಿಜಕ್ಕೂ ಅವರೊಡನೆ ಸಂಭಾಷಣೆ ಮಾಡಬಹುದಿತ್ತು. ಆದರೆ ಆ ರೀತಿ ನೀಡಿದ ಪುರಾವೆಯು ಆತನು ತನ್ನ ಅಪೋಸ್ತಲರಿಗೂ, ಈ ಲೋಕಕ್ಕೂ ಈ ರೀತಿಯಲ್ಲಿ ಸಾಕ್ಷಿ ಹೇಳಿದ್ದರೆ ಆಯ್ದುಕೊಂಡ ರೀತಿಯು ಮನದಟ್ಟುಪಡಿಸಲು ಬಹಳಷ್ಟು ದೂರವಾಗಿರುತ್ತಿತ್ತು.

ದಾನಿಯೇಲನಿಗೆ ತೋರ್ಪಡಿಸಿಕೊಂಡಂತೆ ಆತನು ಮಹಿಮೆಯುಳ್ಳ ಆತ್ಮೀಕ ರೂಪದಲ್ಲಿ ದೇವದೂತನಂತೆ ಕಾಣಿಸಿಕೊಂಡಿದ್ದರೆ (ದಾನಿ. 10:5–8) ಸಾಕ್ಷಿಯು ನೀಡಿದ ಮಹಿಮೆಗಿಂತ ಅದು ಇನ್ನೂ ಹೆಚ್ಚಿನ ಮಹಿಮೆ ಯದಾಗುತ್ತಿತ್ತು. ಅವರು ಬಹುಶಃ ಆತನ ಆದೇಶಗಳನ್ನು ಸ್ವೀಕರಿಸಲಾರದಷ್ಟು ಭಯಭೀತರಾಗಿರುತ್ತಿದ್ದರು. ಪೌಲನ ಹೊರತಾಗಿ ನಮ್ಮ ಕರ್ತನು ಬೇರೆ ಯಾರಿಗೂ ಆ ರೀತಿಯಾಗಿ ಕಾಣಿಸಿಕೊಳ್ಳಲಿಲ್ಲ; ಮತ್ತು ಪೌಲನು ಆತನ ಮಹಿಮೆಯ ಕ್ಷಣದರ್ಶನದಿಂದಲೇ ಬೆಚ್ಚಿಬಿದ್ದು ನೆಲಕ್ಕೆ ಬಿದ್ದುಹೋದನು, ಆ ಮಧ್ಯಾಹ್ನದ ಸೂರ್ಯನ ಪ್ರಕಾಶಕ್ಕಿಂತ ಹೆಚ್ಚಾದ ಆ ಪ್ರಕಾಶತೆಯಿಂದ ಕಣ್ಣು ಕಾಣಿಸದವನಾದನು.

ಆ ನಾಲ್ವತ್ತು ದಿನಗಳಲ್ಲಿ ಕರ್ತನು ತನ್ನ ತೋರ್ಪಡಿಸುವಿಕೆಗಳಿಗೆ ಆಯ್ದುಕೊಂಡ ರೀತಿಯ ಬಗ್ಗೆ ನಮ್ಮ ಪರೀಕ್ಷೆಯಲ್ಲಿ ನಮಗೆ ಕಂಡುಬರುವುದೇನೆಂದರೆ, ಆತನು ತನ್ನ ಆಯ್ದ ಸಾಕ್ಷಿಗಳಿಗೆ ತನ್ನನ್ನು ಕೆಲವು ಬಾರಿ ಸಂಕ್ಷಿಪ್ತ ಸಮಯದವರೆಗೆ ಮಾತ್ರವೇ, ತಾನು ಕಾಣಿಸಿಕೊಳ್ಳುವುದನ್ನು ಅನುಮತಿಸಿಕೊಂಡನು. ಆತನು ಅವರಿಗೆ ಪ್ರಕಟಿಸಿಕೊಂಡ ಸಮಗ್ರ ಸಮಯವು ಆ ನಾಲ್ವತ್ತು ದಿವಸಗಳಲ್ಲಿ ಮಧ್ಯಂತರಗಳನ್ನು ಒಟ್ಟುಗೂಡಿಸಿದರೆ ಅದು ಒಂದು ದಿನದಷ್ಟು ಇರಬಹುದು, ಬಹುಶಃ ಅದು ಹನ್ನೆರಡು ಘಂಟೆಗೂ ಕಡಿಮೆಯಾಗಿದ್ದಿರಬಹುದು ಅಥವಾ ಸಮಗ್ರ ಸಮಯದ ಎಂಬತ್ತನೇ ಒಂದು ಭಾಗವಾಗಿದ್ದಿರಬಹುದು. ಇದು ನಿಜವಾಗಿದ್ದು, ಆತನು ಆ ನಾಲ್ವತ್ತು ದಿನಗಳಲ್ಲಿ ಎಂಬತ್ತರಲ್ಲಿ ಎಪ್ಪತ್ತೊಂಬತ್ತು ಭಾಗದಷ್ಟು ಪರೋಕ್ಷವಾಗಿ ಅವರೊಡನೆ ಇದ್ದನೆಂಬುದು ಸ್ಪಷ್ಟವಾಗಿದೆ. ಅವರಿಗೆ ಪ್ರಕಟನೆಗಳು ಉಂಟಾಗುವಾಗ ಅವುಗಳು ಈ ಹಿಂದೆ ಮೂರುವರೆ ವರ್ಷಗಳಲ್ಲಿ, ಸ್ವಲ್ಪ ದಿನಗಳ ಹಿಂದೆಯಷ್ಟೆ ಅವರಿಗೆ ಪರಿಚಯವಾಗಿದ್ದಂತ ರೀತಿಯಲ್ಲಿ ಇರಲಿಲ್ಲ. ಆತನು ಅವರನ್ನು ಆತನ ಮುಖಲಕ್ಷಣಗಳ ಮೂಲಕ ಕಂಡು ಹಿಡಿಯಲಾಗಲಿಲ್ಲ, ಅಥವಾ ಮೊದಲು ಪ್ರತ್ಯಕ್ಷವಾದ ರೀತಿಯಲ್ಲಿ ಕಾಣಿಸಿಕೊಂಡನು ಎಂಬುದಾಗಿ ಒಂದು ಸಾರಿಯೂ ಹೇಳಿರುವುದಿಲ್ಲ (ತೋಮನಿಗಾದ ಮರುದರ್ಶನದ ಹೊರತಾಗಿ).

ಆತನು ತೋಟದ ಬಳಿ ಕಾಣಿಸಿಕೊಂಡಾಗ ಮರಿಯಳು ಆತನನ್ನು ತೋಟಗಾರನೆಂದು ಭಾವಿಸಿದಳು. ಎಮ್ಮಾಹುವಿನ ದಾರಿಯಲ್ಲಿ ಆತನು ಕಾಣಿಸಿಕೊಂಡಾಗ ಆ ಇಬ್ಬರಿಗೆ ಆತನು ಅಪರಿಚಿತನಂತೆ ಕಂಡು ಬಂದನು. ಗಲಿಲಾಯ ಸಮುದ್ರದ ಬಳಿಯಲ್ಲಿ ತನ್ನ ಶಿಷ್ಯರು ಮೀನು ಹಿಡಿಯುತ್ತಿದ್ದಾಗ, ಮೇಲುಪ್ಪರಿಗೆಯಲ್ಲಿ ಹನ್ನೊಂದು ಮಂದಿಗೆ ಕಾಣಿಸಿಕೊಂಡಾಗಲೂ ಅಪರಿಚಿತನಂತೆ ಕಂಡುಬಂದನು. ಪ್ರತಿಯೊಂದು ಸಂದರ್ಭದಲ್ಲಿಯೂ ಅವರು ಆತನನ್ನು ಆತನ ಕಾರ್ಯಗಳಿಂದ, ಆತನ ಮಾತುಗಳಿಂದ, ಪರಿಚಿತವಾದ ಆತನ ಸ್ವರದ ಮೂಲಕವಾಗಿ ಮಾತ್ರವೇ ಗುರುತು ಹಿಡಿದರು.

ತೋಮನು ತನ್ನ ಸ್ವಾಭಾವಿಕ ಕಣ್ಣಿಗೆ ಕಾಣಿಸುವ ಪುರಾವೆಗಳನ್ನು ನೋಡಿದ ನಂತರವೇ ನಂಬುತ್ತೇನೆ ಎಂದು ಹೇಳಿದಾಗ, ಯೇಸು ಆತನ ಹೇಳಿಕೆಗೆ ಸ್ಪಂದಿಸಿದನಾದರೂ, ಆತನನ್ನು ಮೃದುವಾಗಿ ಆಕ್ಷೇಪಿಸುವವನಂತೆ "ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ, ನೋಡದೇ ನಂಬುವವರು ಧನ್ಯರು" ಎಂದು ಹೇಳಿದನು (ಯೋಹಾನ 20:27,29). ಬಲವಾದ ಸಾಕ್ಷಿಯು ಕಣ್ಣಿಗೆ ಗೋಚರಿಸದಿರಬಹುದು, ದೇವರು ಸಂತೋಷದಿಂದ ಮೆಚ್ಚಿ ತೋರಿಸುವ ಯಾವುದೇ ಪುರಾವೆಯ ಮೂಲಕ ಸತ್ಯವನ್ನು ಸ್ವೀಕರಿಸುವವರು ಧನ್ಯರು.

ಆತನ ಪುನರುತ್ಥಾನ ಹಾಗೂ ಕಾಣಿಸಿಕೊಳ್ಳುವಿಕೆಯ ಸತ್ಯವು ಅವರಿಗೆ ಈ ರೀತಿಯಲ್ಲಿ ಪ್ರಕಟವಾದರೂ ಆತನು ತಾನು ವಿವಿಧ ರೂಪದಲ್ಲಿ ಕಾಣಿಸಿಕೊಳ್ಳಬಲ್ಲೆನು ಎಂಬುದನ್ನು ಮಾತ್ರವಲ್ಲದೆ, ಆತನು ತೋರಿಸಿದ ಯಾವ ದೇಹವೂ ಆತನ ಆತ್ಮೀಕ ಹಾಗೂ ಮಹಿಮೆಯ ಶರೀರವಾಗಿರಲಿಲ್ಲ ಎಂಬುದನ್ನೂ ತೋರಿಸಿಕೊಟ್ಟನು. ವಿವಿಧ ರೂಪಗಳು ಮತ್ತು ದೀರ್ಘ ಬಿಡುವುಗಳ ಮಧ್ಯೆ

ಬಾಹ್ಯ ಗೋಚರಿಸುವಿಕೆ ಇಲ್ಲದ ಅದೃಶ್ಯ ಪ್ರಸನ್ನತೆಯು, ಅವರ ಕರ್ತನೂ ಬೋಧಕನೂ ಈಗ ಜೀವಂತವಾಗಿದ್ದರೂ, ಪರಲೋಕದ ತಂದೆಯ ಬಳಿಗೆ ಇನ್ನೂ ಏರಿ ಹೋಗಿಲ್ಲವೆಂದೂ, ಆತನೀಗ ಒಬ್ಬ ಆತ್ಮ ಸ್ವರೂಪಿ, ಮಾನವ ದೃಷ್ಟಿಗೆ ನಿಜವಾಗಿಯೂ ಅಗೋಚರನು, ಆದರೆ ಆತನು ತನ್ನ ಪ್ರಕಟನೆಯನ್ನೂ ಮತ್ತು ಶಕ್ತಿಯನ್ನೂ ಆತನ ಇಚ್ಛಾನುಸಾರವಾದ ವಿವಿಧ ರೀತಿಗಳಲ್ಲಿ ತೋರಿಸಲು ಸಮರ್ಥನಾಗಿದ್ದನು* ಎಂದು ಅವರಿಗೆ ವ್ಯಕ್ತವಾಯಿತು.

ಅವರು ಕೂಡಿಬಂದ ಕೋಣೆಯಲ್ಲಿ ಆತನ ಕಾಣಿಸಿಕೊಳ್ಳುವಿಕೆಯಲ್ಲಿ ಆತನು ತನಗೆ ನಿಜವಾಗಿಯೂ ಮಾಂಸ ಮೂಳೆಗಳು ಇವೆ ಎಂಬುದನ್ನು ದೃಢಪಡಿಸಿಕೊಂಡನಾದರೂ, ತೋಮನು ಅದನ್ನು ಮುಟ್ಟಿನೋಡಿರಬಹುದಾದರೂ ರಚಿಸಲ್ಪಟ್ಟಿದ್ದ ಆತನ ದೇಹ ಮತ್ತು ವಸ್ತ್ರವು ಕ್ರಿಸ್ತನು ಇನ್ನು ಮಾನವನಾಗಿರಲಿಲ್ಲ ಎಂಬುದನ್ನು ಪ್ರಶ್ನಾತೀತವಾಗಿ ಸಾಬೀತು ಪಡಿಸುತ್ತದೆ. ಅದೊಂದು ದರ್ಶನವಾಗಿರಲಿಲ್ಲ **. ಆತನು ಒಬ್ಬ ಮಾನವ ಜೀವಿಯಾಗಿ ಒಂದು ಮುಚ್ಚಿದ ಕೋಣೆಯೊಳಗೆ ಬಾಗಿಲು ತೆಗೆಯದೇ ಬರಲುಸಾಧ್ಯವಾಗುವುದಿಲ್ಲ, ಆದರೆ ಒಂದು ಆತ್ಮೀಕ ಜೀವಿಯಾಗಿ ಹಾಗೆ ಮಾಡಬಹುದಾಗಿದೆ, ಆಗ ಆತನು ಅಂಥಾಃ ದೇಹಗಳನ್ನು ಕ್ಷಣಮಾತ್ರದಲ್ಲಿ ರಚಿಸಿಕೊಂಡು ಮತ್ತು ಅಂಥಾಃ ಮಾಂಸಧಾರಿ ದೇಹಗಳನ್ನು ಹೊಂದಿಕೊಳ್ಳಬಹುದಾಗಿದೆ ಮತ್ತು ಆತನು ಒಪ್ಪುವ ಉಡುಪುಗಳನ್ನು ಧರಿಸಿಕೊಳ್ಳಬಹುದಾಗಿದೆ.

ಒಂದು ಕ್ಷಣ ಕೆಲವರು ನಮ್ಮ ಕರ್ತನು ಯಾರಿಗೂ ಕಾಣಿಸಿದಂತೆ ಬಾಗಿಲುಗಳನ್ನು ತೆರೆದಿದ್ದಿರಬಹುದು ಎಂದು ಕೊಡುವ ಸಲಹೆಯನ್ನು ನಾವು ಅಂಗೀಕರಿಸುವುದಿಲ್ಲ. ಯಾಕೆಂದರೆ, ದಾಖಲೆಗಳು "ವಾರದ ಮೊದಲನೆಯ ದಿವಸದ ಸಂಜೆಯಲ್ಲಿ ಶಿಷ್ಯರು ಯೆಹೂದ್ಯರ ಭಯದಿಂದ ಮನೆಯ ಬಾಗಿಲುಗಳನ್ನು ಮುಚ್ಚಿಕೊಂಡಿರಲು, ಯೇಸು ಅವರ ನಡುವೆ ಬಂದು ನಿಂತು" (ಯೊಹಾನ 20:19,26) ಸರಳವಾಗಿಯೂ ಸ್ಪಷ್ಟವಾಗಿಯೂ ಇರುವುದರಿಂದ ಆ ಬಾಗಿಲುಗಳನ್ನು ಅವರು ಬಲು ಭದ್ರವಾಗಿ ಮುಚ್ಚಿಕೊಂಡಿದ್ದರು, ಅದರ ಅಗಳಿಗಳನ್ನು "ಯೆಹೂದ್ಯರ ಭಯದಿಂದ" ಹಾಕಿಕೊಂಡಿರಲೇ ಬೇಕು.

ಆತನ ಬದಲಾವಣೆ ಹೊಂದಿದ ಸ್ವಭಾವವನ್ನು ಕುರಿತು ಪಾಠವು, ಆತನು ಅವರ ಕಣ್ಣಿಗೆ ಮಾಯವಾಗುವುದರ ಮೂಲಕ ಮತ್ತಷ್ಟು ಒತ್ತಾಸೆಯನ್ನುಂಟು ಮಾಡುವುದಾಗಿದೆ. ಬಾಗಿಲು ಮುಚ್ಚಿಕೊಂಡಿರುವಾಗ ಅವರಿಗೆ ಇದ್ದಕ್ಕಿಂದ್ದಂತೆ ಕಂಡು ಬಂದ ಆತನ ಮಾಂಸ ಹಾಗೂ ಮೂಳೆ ಮುಂತಾದವುಗಳುಳ್ಳ ಮಾನವ ಶರೀರವು ಬಾಗಿಲಿನ ಮೂಲಕ ಹೊರಕ್ಕೆ ಹೋಗಲಿಲ್ಲ, ಆದರೆ ಅದು ಸುಮ್ಮನೆ ಅದೃಶ್ಯವಾಯಿತು ಅಥವಾ ಆತನು ಪ್ರಕಟಗೊಂಡಾಗ ಧರಿಸಿದ್ದ ಆತನ ದೇಹ ಮತ್ತು ವಸ್ತ್ರಗಳು ಆತನು ಅವುಗಳನ್ನು ರಚಿಸಿದ್ದ ಮೂಲವಸ್ತುಗಳೊಡನೆ ಕರಗಿಹೋದದ್ದನ್ನು ಅವರು ಎಂದೂ ಕಾಣಲಿಲ್ಲ. ಅವರ ಕಣ್ಣಿಗೆ ಮಾಯವಾಯಿತು. ಆತನು ಅವರೊಂದಿಗೆ ಇನ್ನೂ ಇದ್ದನಾದರೂ – ಆತನು ಅದೃಶ್ಯರೂಪದಲ್ಲಿ ಅಲ್ಲಿ ಇದ್ದನು; ಮುಂದಿನ ನಾಲ್ವತ್ತು ದಿವಸಗಳವರೆಗೂ ಹಾಗೆಯೇ ಇದ್ದನು.

ಒಂದು ವಿಶೇಷ ಸಂದರ್ಭದಲ್ಲಿ, ಒಂದು ವಿಶೇಷ ಆದೇಶಕ್ಕಾಗಿ, ದೇವರು ಅಂಥಹುದೇ ಶಕ್ತಿಯನ್ನು ಇತರೆ ಆತ್ಮಗಳಿಗೂ, ದೇವದೂತರುಗಳಿಗೂ ದಯಪಾಲಿಸಿ ಅವರು ಮಾನವರಂತೆ, ಮಾಂಸ, ಮೂಳೆಗಳುಳ್ಳ ದೇಹಧಾರಿಗಳಾಗಿ, ಕಾಣುವಂತೆ ಮಾಡಿದ್ದನು. ಅವರುಗಳು ಆದೇಶ ಮಾಡಿದವರೊಂದಿಗೆ ನಮ್ಮ ಕರ್ತನು ಮಾಡಿದಂತೆ ತಿಂದರು ಮತ್ತು ಮಾತನಾಡಿದರು (ಆದಿ. 18, ನ್ಯಾಯ 6:11–22; 13:3–20 ಮತ್ತು Vol I : 178 to 180 ಇವುಗಳನ್ನು ನೋಡಿ).

ನಮ್ಮ ಕರ್ತನು ಮತ್ತು ದೇವದೂತರುಗಳಿಗೆ ಅವರು ಕಾಣಿಸಿದಾಗ ಧರಿಸಿದ ವಸ್ತ್ರಗಳನ್ನು ಕರಗಿಸುವ ಶಕ್ತಿಯು

* ಲೂಕ 4:30 ರಲ್ಲಿ ದಾಖಲಾದ ಪುರಾವೆಯನ್ನು ಪುನರುತ್ಥಾನದ ನಂತರದಲ್ಲಿನ ಆತನ ಕಾಣಿಸಿಕೊಳ್ಳುವಿಕೆ ಮತ್ತು ಮಾಯವಾಗುವಿಕೆಗೆ ಸಮಾನವೆಂದು ಪರಿಗಣಿಸಬಾರದು. ಅದು ಜನರಿಗೆ ಕಾಣಿಸಿಕೊಳ್ಳದಿರುವ ಅರ್ಥದಲ್ಲಿ ಅದೃಶ್ಯವಾದುದಲ್ಲ. ಅದೊಂದು ನೈಪುಣ್ಯತೆ, ಚುರುಕಾದ ಚಲನೆಯಾಗಿತ್ತು. ಈ ರೀತಿಯಲ್ಲಿ ಆತನ ಶತ್ರುಗಳು ಹೆಣೆದಿದ್ದ ಕೊಲೆ ಸಂಚಿನಿಂದ ಆತನು ತನ್ನ ಚಾತುರ್ಯದಿಂದ ತಪ್ಪಿಸಿಕೊಂಡನು. ಅವರು ಆತನ ಮರಣದ ಯೋಜನೆಗಳನ್ನು ಕಾರ್ಯಗೊಳಿಸುವ ಮೊದಲೇ ಆತನು ಅವರ ಮಧ್ಯದಿಂದ ತಪ್ಪಿಸಿಕೊಳ್ಳುವಂತೆ ಜಾರಿಕೊಂಡನು. ಯಾವ ಮನುಷ್ಯನಾದರೂ ಆತನಿಗೆ ಉಪದ್ರವ ಕೊಡಲು ಶಕ್ತನಾಗಿರಲಿಲ್ಲ.. ಯಾಕೆಂದರೆ ಆತನ ಸಮಯವು ಇನ್ನೂ ಬಂದಿರಲಿಲ್ಲ.

** ಯಾರೂ ಅವಸರದಲ್ಲಿ ನಾವಿಲ್ಲಿ ಸ್ಪಿರಿಟಿಸಂ (Spiritism), ಸ್ವಿಡನ್ಬರ್ಗ್ನಿಸಮ್ (Swedenborgianism) ಅಥವಾ ಇನ್ನಾವುದಾದರೂ ತತ್ವಸಿದ್ಧಾಂತಗಳನ್ನು (ism) ಅನುಸರಿಸುತ್ತಿದ್ದೇವೆಂದು ಭಾವಿಸಕೂಡದು. ನಾವು ಅಪೋಸ್ತಲರ ವಿವರಗಳನ್ನು ಅನುಸರಿಸುತ್ತಿದ್ದೇವೆ ಮತ್ತು ಅವನ್ನು ತಾರ್ಕಿಕವಾಗಿ ಜೋಡಿಸುತ್ತಿದ್ದೇವೆ. ಸತ್ಯವೇದದ ಬೋಧನೆಗಳ ಮತ್ತು ಅದನ್ನು ಸ್ಪಿರಿಟಿಸಂ (Spiritism) ಎಂದು ಸೈತಾನನಿಂದ ಪ್ರಚಾರಪಡಿಸಿಟ್ಟಿರುವ ನಕಲಿ ಬೋಧನೆಗಳ ವ್ಯಾಪಕವಾದ ವತ್ಯಾಸಗಳನ್ನು ನಾವು ಅರಿತುಕೊಂಡಿದ್ದೇವೆ ಮತ್ತು ಅವುಗಳನ್ನು ನಾವು ಮುಂದಿನ ಸಂಪುಟದಲ್ಲಿ ಪರೀಕ್ಷೆ ಮಾಡುವವರಾಗಿದ್ದೇವೆ. ಸ್ಪಿರಿಟಿಸಂ (Spiritism) ಎಂಬುದು ಸತ್ತವರ ಮತ್ತು ಬದುಕಿರುವವರ ಮಧ್ಯೆ ಸಂಪರ್ಕ ಎಂಬ ಪ್ರಭಾವ ಬೀರುತ್ತದೆ ಎಂದು ಈಗ ಗಮನಿಸಿದರಷ್ಟೇ ಸಾಕು, ಆದರೆ ಸತ್ಯವೇದವು ಇಂಥಾಃ ಬೋಧನೆಯನ್ನು ಖಂಡಿಸುತ್ತದೆ (ಯೆಶಾಯ 8:19), ಮತ್ತು ಅಂಥಾಃ ಸಂಪರ್ಕಗಳು ಆತ್ಮಗಳ ನಡುವೆ ಅಂದರೆ ದೇವದೂತರುಗಳಿಂದ ಮತ್ತು ನಮ್ಮ ಕರ್ತನಿಂದ ಸತ್ಯವೆಂಬಂತೆ ನಡೆಯಬಹುದಾಗಿದೆ. ಆದರೆ ಮಾನವನಾಗಿದ್ದ ಯೇಸುಕ್ರಿಸ್ತನಿಂದಲ್ಲ, ಆತನು ಸತ್ತಾಗಲೂ ಅಲ್ಲ, ಆದರೆ ಆತನ ಪುನರುತ್ಥಾನ ಹೊಂದಿ ಬದಲಾವಣೆಗಳು ಉಂಟಾದಾಗ, ಆತನು ಜೀವದಾಯಕನಾಗಿ ಅಥವಾ ಬದುಕಿಸುವ ಆತ್ಮನಾದಾಗ ಮಾತ್ರ ಸಾಧ್ಯ.

ಮನುಷ್ಯಾತೀತ ಅವರ ಮಾನವ ದೇಹಗಳನ್ನು ಧರಿಸುವ ಮತ್ತು ಅವುಗಳನ್ನು ಕರಗಿಸುವ ಶಕ್ತಿಯಂತೆಯೇ ಇತ್ತು; ಆ ದೇಹಗಳು ಅವರ ಮಹಿಮೆಯುಳ್ಳ ಆತ್ಮೀಕ ದೇಹಗಳಾಗಿರಲಿಲ್ಲ. ಅವರು ಧರಿಸಿದ ವಸ್ತ್ರಗಳಂತೆಯೇ ನಮ್ಮ ಕರ್ತನು ಆತನು ಶಿಲುಬೆಗೆ ಹಾಕಲ್ಪಡುವ ಮುಂಚೆ ಧರಿಸಿದ ಆತನ ಅಂಚಿಲ್ಲದ ಮೇಲಹೊದಿಕೆ (seamless robe) ಮತ್ತು ಆತನ ಉಡುಪುಗಳನ್ನು ಮತ್ತು ಇತರೆ ವಸ್ತ್ರಗಳನ್ನು ಸಿಪಾಯಿಗಳು ತಮ್ಮಲ್ಲಿ ಪಾಲು ಮಾಡಿಕೊಂಡರು ಎಂಬುದನ್ನೂ, ಆತನ ಮೃತ ದೇಹಕ್ಕೆ ಸುತ್ತಿದ್ದ ನಾರುಮಡಿಗಳು ಆತನ ಸಮಾಧಿಯಲ್ಲಿ ಸುತ್ತಿರುವುದನ್ನು ಕಂಡರು ಎಂಬುದನ್ನೂ ನೆನಪುಮಾಡಿಕೊಳ್ಳೋಣ (ಯೋಹಾನ 19:23,24;20:5–7). ಹಾಗಾಗಿ, ಆತನು ಪ್ರತ್ಯಕ್ಷನಾದ ಪ್ರತಿಯೊಂದು ಸಂದರ್ಭದಲ್ಲೂ ಆತನು ಧರಿಸಿದ ಈ ವಸ್ತ್ರಗಳು ವಿಶೇಷವಾಗಿ ತಯಾರಿಸಲ್ಪಟ್ಟಿರಬೇಕು ಮತ್ತು ಅವುಗಳು ಪ್ರತಿಯೊಂದು ಸಂದರ್ಭಕ್ಕೂ ಅನುಗುಣವಾಗಿದ್ದಿರಬೇಕು. ಉದಾಹರಣೆಗೆ ಆತನು ಮರಿಯಳಿಗೆ ತೋಟಗಾರನಂತೆ ಕಾಣಿಸಿಕೊಂಡಾಗ, ಆತನು ತೋಟಗಾರನ ವಸ್ತ್ರಗಳನ್ನೇ ಧರಿಸಿದ್ದಿರಬಹುದು.

ನಮ್ಮ ಕರ್ತನು ಕಂಡು ಬಂದ ದೇಹಗಳು ನಿಜವಾದ ಮಾನವ ದೇಹಗಳಾಗಿದ್ದವು ಮತ್ತು ಕೇವಲ ಹೆಚ್ಚು ಭ್ರಮೆಯವುಗಳಾಗಿರಲಿಲ್ಲ, ಆತನು ಅವರ ಮುಂದೆ ತಿಂದಾಗ ಅವರಿಗೆ ಸ್ಪಷ್ಟವಾಗಿ ತಿಳಿದುಕೊಳ್ಳುವಂತೆ ಮಾಡಿದನು ಮತ್ತು ಆತನ ದೇಹವು ಮಾಂಸ ಮತ್ತು ಮೂಳೆಗಳುಳ್ಳ ನಿಜವಾದ ದೇಹವಾಗಿದೆ ಎಂದು ನೋಡುವಂತೆ ಅವರನ್ನು ಆಹ್ವಾನಿಸಿದನು. ಆತನು ಅವರಿಗೆ "ಯಾಕೆ ಕಳವಳಗೊಳ್ಳುತ್ತೀರಿ? ನಿಮ್ಮ ಹೃದಯಗಳಲ್ಲಿ ಅನುಮಾನಗಳು ಹುಟ್ಟುವುದೇಕೆ? ನನ್ನ ಕೈಗಳನ್ನೂ, ನನ್ನ ಕಾಲುಗಳನ್ನೂ ನೋಡಿರಿ, ನಾನೇ ಅಲ್ಲವೇ. ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ" ಅಂದನು (ಲೂಕ 24:38).

ನಮ್ಮ ಕರ್ತನ ಈ ರೀತಿಯ ವಿವಿಧ ದೇಹವನ್ನು ಧರಿಸಿದ ಬಗ್ಗೆ ಆತನ ಹೇಳಿಕೆಯಿಂದ ಕೆಲವು ಕ್ರೈಸ್ತರು ಒಂದು ಅಸಂಬದ್ಧ ತೀರ್ಮಾನಕ್ಕೆ ಬರುತ್ತಾರೆ. ಅವರು ಆತನು ಧರಿಸಿದ್ದ ದೇಹವು ಆತನ ಆತ್ಮೀಕ ದೇಹವಾಗಿತ್ತೆಂದು ಊಹಿಸುತ್ತಾರೆ ಮತ್ತು ಆತ್ಮೀಕ ಶರೀರವು ಸ್ಪಷ್ಟಪಡಿಸಲಾಗದ ಯಾವುದೋ ಒಂದರ (ಅದನ್ನು ಅವರು ಆತ್ಮವೆಂದು ಕರೆಯುತ್ತಾರೆ) ಹೊರತುಪಡಿಸಿ ಮಾನವ ಶರೀರದಂತೆ ಮಾಂಸ ಹಾಗೂ ಮೂಳೆಗಳಿಂದ ಕೂಡಿರುತ್ತವೆ ಎಂದು ಧೃಢವಾಗಿ ಹೇಳತೊಡಗುತ್ತಾರೆ. ಮತ್ತು ರಕ್ತಕ್ಕೆ ಬದಲಾಗಿ ಆ ಆತ್ಮನು ಆ ಆತ್ಮೀಕ ದೇಹದಲ್ಲಿ ಹರಿಯುತ್ತದೆಂದು ಭಾವಿಸುತ್ತಾರೆ. ಇದು ಆತ್ಮೀಕ ದೇಹವಲ್ಲ, ಆತ್ಮೀಕ ದೇಹಕ್ಕೆ ಮಾಂಸ, ಮೂಳೆಗಳಿಲ್ಲ ಎಂಬ ಕರ್ತನ ಮಾತಿಗೆ ಅವರು ಮನ್ನಣೆ ನೀಡುತ್ತಿಲ್ಲವೆಂದು ತೋರಿಬರುತ್ತದೆ. ಅವರು – "ಈಗ ದೇವರ ಮಕ್ಕಳಾಗಿದ್ದೇವೆ, ಮುಂದೆ ನಾವು ಏನಾಗುವೆವೋ ಅದು ಇನ್ನೂ ಪ್ರತ್ಯಕ್ಷ್ಯವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ, ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾನ 3:2) ಎಂಬ ಯೋಹಾನನ ಹೇಳಿಕೆಯನ್ನು ಮರೆತಿದ್ದಾರೆಯೋ? ಅವರು ಅಪೋಸ್ತಲನಾದ ಪೌಲನ – "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು; ಲಯವಾಗುವ ವಸ್ತು ನಿರ್ಲಯ ಪದವಿಗೆ ಬಾಧ್ಯವಾಗುವುದಿಲ್ಲ" ಕ್ರಿಸ್ತನೊಡನೆ ಬಾಧ್ಯಸ್ಥರು ಮಾರ್ಪಡುವರು (1 ಕೊರಿಂಥ 15:50,51) ಎಂಬ ಮಾತುಗಳನ್ನೂ ಮರೆತುಹೋದರೋ?

ಅನೇಕ ಕ್ರೈಸ್ತರಿಗೆ ನಮ್ಮ ಕರ್ತನ ಮಹಿಮೆಯುಳ್ಳ ಆತ್ಮೀಕ ಶರೀರವು ಶಿಲುಬೆಗೆ ಹಾಕಲ್ಪಟ್ಟ ಮತ್ತು ಮರಣಾನಂತರ ಯೋಸೇಫನ ಸಮಾಧಿಯಲ್ಲಿ ಇಡಲ್ಪಟ್ಟ ಆತನ ಅದೇ ಶರೀರವೇ ಆಗಿರುವುದು ಎಂಬ ಕಲ್ಪನೆಯಿದೆ. ಅವರು ತಾವು ಮಹಿಮೆಯಲ್ಲಿ ಕರ್ತನನ್ನು ನೋಡುವಾಗ ಆತನು ಕಲ್ವೇರಿಯಲ್ಲಿ ತನ್ನ ಕೈಕಾಲುಗಳಲ್ಲಾದ ಗಾಯಗಳ ಮುಖಾಂತರ ಆತನನ್ನು ಗುರುತಿಸಬಹುದು ಎಂದು ನಿರೀಕ್ಷಿಸುತ್ತಾರೆ. ಇದು ಮಹಾ ದೊಡ್ಡ ತಪ್ಪು. ಸ್ವಲ್ಪ ಮಟ್ಟಿಗೆ ಪರಿಶೀಲಿಸಿದರೆ ಅದು ಏನನ್ನು ಪ್ರಕಟಿಸುತ್ತದೆ ಎಂದು ನೋಡಬಹುದು. ಮೊದಲನೆಯದಾಗಿ, ಅದು ಆತನು ಪುನರುತ್ಥಾನ ಹೊಂದಿದ ಶರೀರವು ಮಹಿಮಾ ಶರೀರವಲ್ಲ ಅಥವಾ ಪರಿಪೂರ್ಣವಾದುದಲ್ಲವೆಂದು, ಬದಲಿಗೆ ಗಾಯದ ಕಲೆಯಿಂದಲೂ, ವಿರೂಪಗೊಂಡಿದೆ ಎಂದು ಅದು ರುಜುವಾತು ಪಡಿಸುತ್ತದೆ. ಎರಡನೆಯದಾಗಿ, ಅದು ಅಪೋಸ್ತಲನ ಹೇಳಿಕೆಗೆ ವಿರುದ್ಧವಾಗಿ, ಆತ್ಮೀಕ ಶರೀರವೆಂದರೆ ಏನೆಂದು ನಮಗೆ ತಿಳಿದಿದೆ ಎಂದು ಸಾಬೀತುಪಡಿಸುತ್ತದೆ. ಮೂರನೆಯದಾಗಿ, ಅದು ನಮ್ಮ ವಿಮೋಚನೆಯ ಬೆಲೆಯನ್ನು ಹಿಂದಕ್ಕೆ ಪಡೆಯಲಾಗಿದೆ ಎಂಬುದನ್ನು ಸಾಬೀತುಪಡಿಸುತ್ತದೆ; ಯೇಸು, "ನನ್ನ ಮಾಂಸಧಾರಿ ದೇಹವನ್ನು ನಾನು ಈ ಲೋಕದ ಜೀವಕ್ಕಾಗಿ ನೀಡುತ್ತೇನೆ" ಎಂದಿದ್ದಾನೆ. ಅದು ಆತನ ದೇಹ, ಒಬ್ಬ ಮನುಷ್ಯನಾಗಿ ಅದು ಆತನ ಜೀವ, ಆತನ ಮಾನವೀಯತೆ. ಇವುಗಳು ನಮ್ಮ ವಿಮೋಚನೆಗಾಗಿ ಅರ್ಪಿಸಲ್ಪಟ್ಟವು. ಆತನು ತನ್ನ ತಂದೆಯ ಶಕ್ತಿಯಿಂದ ಪುನಃ ಜೀವಿತನಾಗಿ ಎದ್ದುಬಂದಾಗ, ಅದು ಮಾನವ ಅಸ್ತಿತ್ವಕ್ಕಾಗಿ ಆಗಿರಲಿಲ್ಲ; ಯಾಕೆಂದರೆ ಅದನ್ನು ಆಗಲೇ ನಮ್ಮನ್ನು ಕೊಂಡುಕೊಂಡ ಬೆಲೆಯಾಗಿ ಅರ್ಪಿಸಲಾಗಿತ್ತು. ಕ್ರಿಸ್ತನು ಆ ಬೆಲೆಯನ್ನು ವಾಪಸ್ಸು ಪಡೆಯುವುದಾದರೆ, ನಾವು ಇನ್ನೂ ಸಹ ಪಾಪದ

ದಂಡನೆಯಲ್ಲಿಯೇ, ಯಾವ ನಿರೀಕ್ಷೆಯೂ ಇಲ್ಲದಂತೆ ಇರುತ್ತೇವೆ.

ನಮ್ಮ ಕರ್ತನ ಆತ್ಮೀಕ ಶರೀರವು ಆತನ ಪುನರುತ್ಥಾನದ ನಂತರ ಮಾನವ ಶರೀರವಾಗಿದೆ ಎನ್ನುವುದಕ್ಕಿಂತಲೂ ಆತನ ಪ್ರಥಮ ಆಗಮನಕ್ಕಿಂತ ಹಿಂದೆ ಅದು ಮಾನವ ಶರೀರವಾಗಿತ್ತೆಂದು ಅಥವಾ ಇತರೆ ಆತ್ಮೀಕ ಜೀವಿಗಳು ಮಾನವ ಶರೀರಹೊಂದಿದ್ದಾರೆ ಎಂದು, ಭಾವಿಸಲು ನಮಗೆ ಯಾವ ಸಮರ್ಥನೆಯೂ ಇಲ್ಲ. ಯಾಕೆಂದರೆ ಆತ್ಮಕ್ಕೆ ಮಾಂಸವಾಗಲೀ, ಮೂಳೆಯಾಗಲೀ ಇರುವುದಿಲ್ಲ; ಅಪೊಸ್ತಲನಾದ ಪೇತ್ರನು "ನಮ್ಮ ಕರ್ತನು ಶರೀರ ಸಂಬಂಧವಾಗಿ ಕೊಲ್ಲಲ್ಪಟ್ಟನು, ಆತ್ಮ ಸಂಬಂಧದಲ್ಲಿ ತಿರುಗಿ ಬದುಕುವವನಾದನು" (1 ಪೇತ್ರ 3:18) ಎಂದಿದ್ದಾನೆ.

ಆದಾಗ್ಯೂ ನಮ್ಮ ಕರ್ತನ ಮಾನವ ಶರೀರವು ಅಲೌಕಿಕವಾಗಿ (super naturally) ಸಮಾಧಿಯಿಂದ ಹೊರತೆರೆಯಲ್ಪಟ್ಟಿತು; ಯಾಕೆಂದರೆ ಅದು ಅಲ್ಲಿಯೇ ಉಳುಕೊಳ್ಳುತ್ತಿದ್ದರೆ ಅದೊಂದು ಶಿಷ್ಯರ ವಿಶ್ವಾಸಕ್ಕೆ ದುಸ್ತರವಾದ ಅಡಚಣೆಯನ್ನುಂಟು ಮಾಡುತ್ತಿತ್ತು, ಯಾಕೆಂದರೆ ಆತ್ಮೀಕ ವಿಷಯವಾಗಿ ಸೂಚನೆಗಳನ್ನು ಇನ್ನೂ ಕೊಡಲ್ಪಟ್ಟಿರಲಿಲ್ಲ. "ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮ ವರವು ಇನ್ನೂ ಬಂದಿದ್ದಿಲ್ಲ" (ಯೋಹಾನ 7:39). ಕ್ರಿಸ್ತನ ಶರೀರವು ಏನಾಯಿತೆಂದು ನಮಗೆ ಏನೂ ಗೊತ್ತಿಲ್ಲ ಆದರೆ ಅದು ಕೊಳೆಯುವ ಅವಸ್ಥೆಗೆ ಬಿಡಲಿಲ್ಲ; "ಯಾಕೆಂದರೆ, ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವುದಿಲ್ಲ, ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವುದಿಲ್ಲ" (ಅ.ಕೃ. 2:27), "ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲ, ಆತನ ಶರೀರವು ಕೊಳೆಯುವ ಅವಸ್ಥೆಯನ್ನು ಅನುಭವಿಸುವುದಿಲ್ಲ" (ಅ.ಕೃ. 2:31) ಎಂದು ಬರೆದದೆ. ಅದು ಅನಿಲದ ರೂಪದಲ್ಲಿ ಕರಗಿ ಹೋಯಿತೋ, ಅಥವಾ ಅದು ಇನ್ನೂ ದೇವರ ಪ್ರೀತಿಯ, ಕ್ರಿಸ್ತನ ವಿಧೇಯತೆಯ, ಮತ್ತು ನಮ್ಮ ವಿಮೋಚನೆಯ ಸ್ಮಾರಕವಾಗಿ ಎಲ್ಲಿಯಾದರೂ ಕಾಪಾಡಲ್ಪಟ್ಟಿದೆಯೋ ಯಾರಿಗೂ ತಿಳಿಯದು; ಅಥವಾ ಅಂಥಾಃ ತಿಳುವಳಿಕೆಯು ಅಗತ್ಯವಿಲ್ಲ. ಮೋಶೆಯ ದೇಹವನ್ನು ದೇವರು ಅದ್ಭುತವಾದ ರೀತಿಯಲ್ಲಿ ಅಡಗಿಸಿದ್ದಾನೆ ಎಂದು ನಮಗೆ ಆಶ್ವಾಸನೆ ಕೊಟ್ಟಿದ್ದಾನೆ. "ಅವನ ಸಮಾಧಿಯು ಎಲ್ಲಿದೆಯೋ ಇದುವರೆಗೆ ಯಾರಿಗೂ ತಿಳಿಯದು" (ಧರ್ಮೋ. 34:6, ಯೂದ. 9); ಮತ್ತು ಒಂದು ಸ್ಮಾರಕವಾಗಿ ಮನ್ನವನ್ನು ದೇವರು ತನ್ನ ಮಂಜೂಷದಲ್ಲಿ ದೇವದರ್ಶನ ಗುಡಾರದ ಕೃಪಾಸನದ ಅಡಿಯಲ್ಲಿ ಚಿನ್ನದ ಬಟ್ಟಲಿನಲ್ಲಿಟ್ಟು ಕಾಪಾಡಿದ್ದಾನೆ. ಅದು ನಮ್ಮ ಕರ್ತನ ದೇಹದ ಸಂಕೇತವಾಗಿದೆ, ಪರಲೋಕದ ಮನ್ನವಾಗಿದೆ ಎಂಬುದನ್ನು ಸಹ ನಾವೆಲ್ಲರೂ ಬಲ್ಲೆವು (ವಿಮೋ. 16:20,33; ಇಬ್ರಿಯ: 9:4; ಯೋಹಾನ 6:51–58). ಆದುದರಿಂದ, ದೇವರ ರಾಜ್ಯದಲ್ಲಿ ಯೇಸುವಿನ ದೇಹವನ್ನು, ನಮ್ಮ ಸಲುವಾಗಿ ಈಡುಬಲಿಯಾಗಿ ಅರ್ಪಿಸಲ್ಪಟ್ಟ ಆತನ ದೇಹವನ್ನು ಕೊಳೆಯಲು ಅನುಮತಿಸದೆ, ಅಂತ್ಯವಿಲ್ಲದ ಪ್ರೀತಿಯ ಮತ್ತು ಅತ್ಯಂತ ಸಮರ್ಪಕವಾದ ವಿಧೇಯತೆಯ ನಿರಂತರಕ್ಕೂ ಸಾಕ್ಷಿಯಾಗಿ ಕಾಪಾಡಿರುವುದನ್ನು ನಮಗೆ ತೋರಿಸಿದರೆ ಅದು ನಮ್ಮನ್ನು ಚಕಿತಗೊಳಿಸಲಾರದು. ಯೋಹಾನ 19:37, ಜೆಕರ್ಯ 12:10 ರಲ್ಲಿ ಅಂಥಾಃ ಈಡೇರಿಕೆಯ ಸಾಧ್ಯತೆ ಕಂಡುಬರುತ್ತದೆ. "ಆತನನ್ನು ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು" ಎಂದು ಕೂಗಿದವರು ಕಣ್ಣಾರೆ ಕಂಡು ತಾವು ಈಟಿಯಿಂದ ಇರಿದ, ಮುಳ್ಳು ಮತ್ತು ಮೊಳೆಗಳಿಂದ ಹರಿದು ಹಾಕಿದ ಆತನ ಅದೇ ದೇಹವನ್ನು ದೃಷ್ಟಿಸಿ ನೋಡುವರು.

ನಮ್ಮ ಕರ್ತನ ಪುನರುತ್ಥಾನವಾದ ಮಹಿಮೆಯುಳ್ಳ ಶರೀರ ಮಾಂಸಿಕ ಶರೀರವಾಗಿ ಆತನ ವಿಶಿಷ್ಟ ಮತ್ತು ಹಠಾತ್ ಕಾಣಿಸಿಕೊಳ್ಳುವಿಕೆಯು ಆತನ ಆರೋಹಣದ 40 ದಿನಗಳ ಮುಂಚಿನ ಬಗ್ಗೆ ಲವಲೇಶವೂ ಇಲ್ಲ. ಆತನು ಹೇಗೆ ತಾನೇ ಹಠಾತ್ತಾಗಿ ಕಾಣಿಸಿಕೊಂಡು ಮತ್ತು ಅಷ್ಟೇ ವೇಗದಲ್ಲಿ ಮಾಯವಾಗಬಲ್ಲನು? ಆತನು ಹೇಗೆ ತಾನೇ 40 ದಿನಗಳ ಕಾಲ ನಿರಂತರವಾಗಿ ಅದೃಶ್ಯನಾಗಿದ್ದನು? ಮತ್ತು ಹೇಗೆ ಆತನ ಕಾಣಿಸುವಿಕೆಯು ಪ್ರತಿಯೊಂದು ಬಾರಿಯೂ ಬೇರೆ ಬೇರೆ ವಿಧದಲ್ಲಿತ್ತು. ಹಿಂದಿನ ಸಂದರ್ಭದಲ್ಲಿ ನೋಡಿದ್ದಕ್ಕಿಂತಲೂ ಗುರುತಿಸಲಾಗದಾಯಿತು ಅಥವಾ ಯಾರಿಗೂ ಗುರುತಿಸಲು ಆಗದಂತಾಯಿತು? ಆತನು ಇವರಿಗೂ ಎಲ್ಲರಿಗೂ ತಿಳಿದವನಾಗಿಯೂ, ಬಹಳವಾಗಿ ಪ್ರೀತಿ ಹೊಂದಿದವನಾದರೂ ಶಿಲುಬೆಯಲ್ಲಿ ಮರಣಹೊಂದಿ ಸ್ವಲ್ಪ ದಿನವೇ ಕಳೆದಿದ್ದರೂ – ಏಕೆ ಗುರುತಿಸಲು ಸಾಧ್ಯವಾಗಲಿಲ್ಲ ?

ಇವುಗಳು ಅದ್ಭುತಗಳು ಎಂದಷ್ಟೇ ಹೇಳಿದರೆ ಸಾಲದು, ಅದ್ಭುತವೇರ್ಪಡುವ ಉಪಯೋಗ ಅಥವಾ ಅವಶ್ಯಕತೆಯನ್ನು ಹೆಸರಿಸಬೇಕಾಗುತ್ತದೆ. ಆತನ ದೇಹವು ಪುನರುತ್ಥಾನದ ನಂತರ ಮಾಂಸ ಮೂಳೆಯದ್ದಾಗಿದ್ದರೆ ಶಿಲುಬೆಗೆ ಹಾಕಿದ ಅದೇ ದೇಹವು ಎಲ್ಲಾ ಗಾಯಗಳ ಗುರುತುಗಳೊಂದಿಗೆ ಅದೇ ಆಗಿದ್ದರೆ, ಆತನು ಅದ್ಭುತಗಳನ್ನು ಮಾಡಿದಾಗ ಯಾಕೆ ಆ ಸತ್ಯವನ್ನು ಸ್ಥಿರಪಡಿಸಲಿಲ್ಲ? ಮಾತ್ರವಲ್ಲ, ನಾವು ಕಾಣುವಂತೆ ಅದರ ವಿರುದ್ಧವಾದುದನ್ನು ನಮಗೆ ಕಲಿಸುವುದಕ್ಕೋ? – ಆತನು ತಾನೇ ಇನ್ನು ಮುಂದೆ ಮಾನವನಲ್ಲ, ಮಾಂಸ ಮೂಳೆ ಉಳ್ಳವನಲ್ಲ, ಆದರೆ ಆತ್ಮ ಜೀವಿಯಾಗಿದ್ದು ಗಾಳಿಯಂತೆ ಎಲ್ಲಿಗಾದರೂ ಹೋಗಬಲ್ಲನು, ಆತನು ಯಾವಾಗ ಬರುತ್ತಾನೆ, ಎಲ್ಲಿಗೆ ಹೋಗುತ್ತಾನೆ ಎಂಬುದನ್ನು ಯಾರೂ ಹೇಳಲಾರರು. ಆದರೆ ಆತನು ಅವರಿಗೆ ಆದೇಶ ನೀಡುವ

ಸಲುವಾಗಿ, ವಿವಿಧ ದೇಹಗಳಲ್ಲಿ ಮಾನವನಾಗಿ ಕಾಣಿಸಿಕೊಂಡನು, ಮೂಳೆ ಮಾಂಸಗಳನ್ನು ಹೊಂದಿದ್ದ ಮತ್ತು ಮನುಷ್ಯನಂತೆ ಅದನ್ನು ಸಂದರ್ಭಕ್ಕೆ ತಕ್ಕಂತೆ ಉಂಟುಮಾಡಿದವನೂ, ವಿಸರ್ಜಿಸಿದವನೂ ಆತನೇ.

ನಮ್ಮ ಕರ್ತನು ಶಿಲುಬೆಗೆ ಹಾಕುವಿಕೆಗೆ ಮುಂಚಿತವಾಗಿ, ಆತನು ತನ್ನ ಶಿಷ್ಯರೊಂದಿಗೆ ಪರಿಚಿತ ಸಲುಗೆಯಲ್ಲಿಯೇ ಇದ್ದನು. ಆದರೆ, ಪುನರುತ್ಥಾನದ ನಂತರದಲ್ಲಿ. ಆತನು ಅವರನ್ನು ಮೊದಲಿಗಿಂತ ಕಡಿಮೆಯಾಗಿ ಪ್ರೀತಿಸಲಿಲ್ಲವಾದರೂ, ಅವರ ಕಡೆಗೆ ಆತನ ವರ್ತನೆ ಒಂದು ರೀತಿಯಲ್ಲಿ ಸಂಯಮವಾಗಿತ್ತು. ಇದು ಸಂಶಯಾತೀತವಾಗಿ ಆತನ ಅತ್ಯುನ್ನತಿಯ ಘನತೆ ಮತ್ತು ಗೌರವಗಳನ್ನು ಅವರಲ್ಲಿ ಅಚ್ಚೊತ್ತುವುದಕ್ಕಾಗಿ ಪ್ರಭಾವಯುತವಾಗಿತ್ತು ಮತ್ತು ಅವರಲ್ಲಿ ಆತನ ವ್ಯಕ್ತಿತ್ವಕ್ಕೆ, ಅಧಿಕಾರಕ್ಕೆ ಸಿಗಬೇಕಾದ ಮರ್ಯಾದೆಯನ್ನು ಉತ್ತೇಜಿಸುವುದಕ್ಕಾಗಿತ್ತು. ಯೇಸು ಒಬ್ಬ ಮಾನವನಾಗಿ ದ್ದಾಗಲೂ ಆತನು ತನ್ನ ನಡವಳಿಕೆಗೆ ಘನತೆಯಲ್ಲಿ ಎಂದೂ ಕುಂದಿಲ್ಲದವನಾಗಿದ್ದು ಮರ್ಯಾದೆಗೆ ಸದಾ ಪಾತ್ರನಾಗಿದ್ದನು. ಆದಾಗ್ಯೂ ಇನ್ನೂ ಹೆಚ್ಚಿನ ಸಂಯಮವು ಅಗತ್ಯವಾಗಿತ್ತು ಮತ್ತು ಆತನು ದೈವಿಕ ಸ್ವಭಾವಕ್ಕೆ ಬದಲಾದ ನಂತರ ಅದು ಯಥೋಚಿತವಾಗಿತ್ತು. ಅಂಥಾಃ ಸಂಯಮವನ್ನು ಯೆಹೋವನು ತನ್ನ ಸೃಷ್ಟಿಯ ಬಗ್ಗೆ ಸದಾ ಕಾಪಾಡಿಕೊಂಡಿದ್ದನು ಮತ್ತು ಅದು ಸಂದರ್ಭಗಳಿಗೆ ತಕ್ಕಂತೆ ಇರುವುದಾಗಿತ್ತು. ಈ ಸಂಯಮವನ್ನು ನಮ್ಮ ಕರ್ತನು ಪುನರುತ್ಥಾನದ ನಂತರ ತನ್ನ ಶಿಷ್ಯರೊಡನೆ ನಡೆಸಿದ ಎಲ್ಲಾ ಸಂದರ್ಶನಗಳಲ್ಲಿಯೂ ಗುರುತಿಸಬಹುದಾಗಿದೆ. ಅವುಗಳು ಬಲು ಸಂಕ್ಷಿಪ್ತವಾಗಿದ್ದವು, "ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳನ್ನಾಡುವುದಿಲ್ಲ" (ಯೋಹಾನ 14:30) ಎಂತಲೂ ಆತನು ಹೇಳಿದ್ದನು.

ನಮ್ಮ ಪರಲೋಕದ ತಂದೆಯು ಒಬ್ಬ ಆತ್ಮಸ್ವರೂಪಿಯಾಗಿದ್ದಾನೆ, ಆತನು ಮನುಷ್ಯನಲ್ಲ ಎಂದು ನಂಬುವವರು ಈಗ ದೈವೀಕ ಸ್ವಭಾವಕ್ಕೆ ಏರಿಸಲ್ಪಟ್ಟ ನಮ್ಮ ಕರ್ತನಾದ ಯೇಸುವು, ದೇವರ ನೈತಿಕತೆಗೆ ತಕ್ಕಂತೆ ಇರುವಾತನು ಮಾತ್ರವಲ್ಲ ದೇವರ ತತ್ವದ ಮೂರ್ತಿಯೂ (ಇಬ್ರಿಯ 1:3) ಆದಾತನು ಇನ್ನು ಮುಂದೆ ಮನುಷ್ಯನಲ್ಲ, ಆದರೆ ಆತ್ಮ ಸ್ವರೂಪಿಯು. ಆತನನ್ನು ಯಾರೂ ಎಂದೂ ನೋಡಿಲ್ಲ, ಅದ್ಭುತವಿಲ್ಲದೆ ಯಾರೂ ನೋಡಲಾರರು. ಹೇಗೆ ಯೆಹೋವನನ್ನು ನೋಡಲು ಸಾಧ್ಯವಿಲ್ಲವೋ ಅಂತೆಯೇ, ಯೇಸುವಿನ ಅನಾವರಣಗೊಂಡ ಮಹಿಮೆಯನ್ನು ನೋಡಲು ಯಾರಿಂದಲೂ ಸಾಧ್ಯವಿಲ್ಲ. ಯೆಹೋವನ ಆತ್ಮೀಕ ಮಹಿಮೆಯ ಪ್ರತಿಬಿಂಬವೂ ಮೋಶೆಗೂ, ಇಸ್ರಾಯೇಲ್ಯರಿಗೂ ಸಿನಾಯಿ ಪರ್ವತದಲ್ಲಿ ಹೇಗೆ ಪರಿಣಾಮವನ್ನುಂಟುಮಾಡಿತು ಎಂಬುದನ್ನು ಕ್ಷಣಕಾಲ ಆಲೋಚಿಸಿರಿ (ಇಬ್ರಿಯ 12:21; ವಿಮೋಚನೆ 19, 20:19–21, 33:20–23, 34:29–35). ಆ ದೃಶ್ಯವು ಎಷ್ಟೋ ಭೀಕರವಾಗಿತ್ತು, ಮಿತಿಮೀರಿದ್ದಾಗಿತ್ತು, ಭಯವನ್ನುಂಟು ಮಾಡುವುದಾಗಿದ್ದು ಮೋಶೆಯು "ನಾನು ಭಯಪಡುವವನೂ ನಡುಗುವವನೂ ಆಗಿದ್ದೇನೆ" ಎಂದು ಹೇಳಿದನು. ಮೋಶೆಯು ದೇವರ ಮಹಿಮೆಯನ್ನು ನೋಡುವುದಕ್ಕೆ ಅಲೌಕಿಕವಾದ ದೈವಿಕ ಬಲವನ್ನು ಹೊಂದಿದ್ದ ಕಾರಣ ನಾಲ್ವತ್ತು ದಿನಗಳು ನಾಲ್ವತ್ತು ರಾತ್ರಿಗಳು, ಕರ್ತನೊಡನೆ ಒಬ್ಬನೇ ಇದ್ದು, ಆತನು ಕರ್ತನ ಮಹಿಮೆಯ ನೆರಳು ಕವಿದವನಾಗಿಯೂ, ಅನ್ನ ಪಾನಗಳಿಲ್ಲದೆಯೂ ಇದ್ದು ನಿಬಂಧನದ ವಾಕ್ಯಗಳನ್ನು ಪಡೆದುಕೊಂಡು ಅದನ್ನು ಬರೆದನು (ವಿಮೋ. 34: 28), ಆದರೂ ಆತನು ದೇವರನ್ನು ಕಣ್ಣಾರೆ ಕಾಣಬಯಸಿದಾಗ ದೇವರು ಆತನಿಗೆ – "ನೀನು ನನ್ನ ಮುಖವನ್ನು ನೋಡುವುದಕ್ಕಾಗದು; ಮನುಷ್ಯರಲ್ಲಿ ಯಾರೂ ನನ್ನನ್ನು ನೋಡಿ ಜೀವಿಸಲಾರನು" (ವಿಮೋ. 33: 20) ಎಂದು ಹೇಳಿದನು. ಆದುದರಿಂದ ಮೋಶೆ ನೋಡಿದ್ದು ದೇವರನ್ನು ಪ್ರತಿನಿಧಿಸುವ ಬಾಹ್ಯಚಹರೆ ಮಾತ್ರ. ಇದಕ್ಕಿಂತಲೂ ಹೆಚ್ಚಿನದು ಸಾಧ್ಯವಾಗಲಿಲ್ಲ. ಇದು "ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು" (1 ತಿಮೋ. 6; 16). ಆತನು ಅಮರತ್ವವುಳ್ಳ ಅರಸನು, ಅಗರೋಚರನು ಎಂಬ ಅಪೋಸ್ತಲನ ಹೇಳಿಕೆಗೆ ಅನುಗುಣವಾಗಿದೆ. ಆದರೆ ಆತ್ಮೀಕ ಜೀವಿಗಳು ದೇವರನ್ನು ನೋಡುತ್ತವೆ (ಮತ್ತಾಯ 18;10). ಆತನೂ ಸ್ವತಃ ಒಬ್ಬ ಆತ್ಮನಾಗಿದ್ದಾನೆ ಎಂದು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

ನಮ್ಮ ಕರ್ತನೇನಾದರೂ ಇನ್ನೂ ಮಾನವನಾದ ಯೇಸು ಕ್ರಿಸ್ತನೇ; ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟವನು (1 ತಿಮೊ. 2: 5,6,). ಆತನೇನಾದರೂ ಮಾಂಸದೇಹಧಾರಿಯಾಗಿ ಮರಣಹೊಂದಿ ಮಾನವ ಸ್ವರೂಪದಲ್ಲಿಯೇ ಜೀವಂತನಾಗಿ ಎದ್ದು ಬಂದಿದ್ದರೆ, ಅಪೋಸ್ತಲನು "ಜೀವಕೊಡುವ ಆತ್ಮನು" ಎಂಬುದಾಗಿ ಸ್ಪಷ್ಟವಾಗಿ ಹೇಳುವಂತೆ – ಆಗ ದೇವದೂತರಿಗಿಂತ ಉನ್ನತವಾದ ಸ್ಥಾನಕ್ಕೆ ಏರಿಸಲ್ಪಡುವ ಬದಲು, ಭೂಪರಲೋಕಗಳಲ್ಲಿ ಇರುವ ಎಲ್ಲಾ ನಾಮಗಳಿಗಿಂತ ಶ್ರೇಷ್ಟವಾದ ನಾಮವನ್ನು ಹೊಂದಿಕೊಳ್ಳುವ ಬದಲು, ಆತನು ಇನ್ನೂ ಮನುಷ್ಯನಾಗಿಯೇ ಇರುತ್ತಿದ್ದನು. ಆತನು ಎಲ್ಲಾ ಮನುಷ್ಯರಿಗೋಸ್ಕರ ಶ್ರಮೆ ಅನುಭವಿಸಲಿಕ್ಕಾಗಿ ಇನ್ನೂ ಸೇವಕನ ರೂಪವನ್ನು ಇಟ್ಟುಕೊಳ್ಳುತ್ತಿದ್ದರೆ, ಮತ್ತು ಇನ್ನೂ ದೇವದೂತರಿಗಿಂತ ಕೆಳಮಟ್ಟದಲ್ಲಿರುತ್ತಿದ್ದರೆ, ಆತನು ಎಂದೂ ದೇವರನ್ನು ನೋಡಲು ಸಾಧ್ಯವಿರುತ್ತಿದ್ದಿಲ್ಲ. ಅಪೋಸ್ತಲನ ಸಾಕ್ಷ್ಯದ ಬೆಳಕಿನಲ್ಲಿ ಪೂರ್ತಿ ಪರೀಕ್ಷಿಸುವುದಾದರೆ ಈ ದೃಷ್ಟಿಕೋನವು ಎಷ್ಟೋ ಅಸಮಂಜಸವಾಗಿದೆಯಲ್ಲವೇ ? ನಮ್ಮ ಕರ್ತನ

ಮಾಂಸಧಾರಿ ದೇಹವು ಮೊಳೆಗಳಿಂದಲೂ, ಈಟಿಯಿಂದಲೂ, ಮುಳ್ಳಿನ ಕಿರೀಟದಿಂದಲೂ ಚುಚ್ಚಲ್ಪಟ್ಟ ಗಾಯ ಹೊಂದಿದ್ದು, ಅದು ದುಃಖದಿಂದ ಗುರುತಿಸಲ್ಪಟ್ಟ ಆತನ ಮಹಿಮಾ ಶರೀರವಾಗಿರುತ್ತಿದ್ದರೆ, ಈ ಗಾಯಗಳೂ ಅವುಗಳ ಕಲೆಗಳಿಂದ ಕುರೂಪವಾದ ಮಾನವ ಲಕ್ಷಣಗಳು ಉನ್ನತ ಸ್ಥಿತಿಗೆ ಏರಿಸಲ್ಪಟ್ಟ ನಮ್ಮ ಕರ್ತನ ಅವಿಚ್ಛಿನ್ನ ಭಾಗವಾಗಿ ಉಳಿದುಹೋಗಿದ್ದರೆ, ಆತನು ನಮಗಾಗಿ ಸಹಿಸಿದ ಈ ಗಾಯಗಳನ್ನು ನಾವು ಪ್ರೀತಿಸುವುದಾದರೆ ಆತನು ಸೌಂದರ್ಯದಿಂದ ದೂರವಾಗಿರುತ್ತಿದ್ದನು ಈ ರೀತಿಯಾಗಿ ಆತನು ಅಸಂಪೂರ್ಣವಾದ, ಕುರೂಪವಾದ ದೇಹವನ್ನು ಹೊತ್ತಿದ್ದರೆ, ನಾವು ಆತನಂತಾಗಬೇಕಾದರೆ, ಅಪೋಸ್ತಲರುಗಳು ಮತ್ತು ಅನೇಕ ಭಕ್ತರುಗಳಲ್ಲಿ ಪ್ರತಿಯೊಬ್ಬರೂ ಶಿಲುಬೆಗೆ ಹಾಕಲ್ಪಟ್ಟ, ಶಿರಚ್ಛೇಧನ ಹೊಂದಿದ, ಕಲ್ಲಿನಿಂದ ಹೊಡೆಯಲ್ಪಟ್ಟು ಮೃತಿ ಹೊಂದಿದ, ಸುಡಲ್ಪಟ್ಟ, ದುಷ್ಟ ಮೃಗಗಳಿಂದ ತುಂಡು ತುಂಡಾಗಿ ಸೀಳಲ್ಪಟ್ಟ, ಮತ್ತು ಆಕಸ್ಮಿಕಗಳಿಗೊಳಗಾಗಿ ಕೊಲ್ಲಲ್ಪಟ್ಟ ಅವರು ಅದರ ನ್ಯೂನತೆಗಳನ್ನು ಮತ್ತು ಕಲೆಗಳನ್ನೂ ಇನ್ನೂ ಹಾಗೇ ಹೊತ್ತಿರಬೇಕಾಗಿರುತ್ತದಲ್ಲವೇ? ಆ ದೃಷ್ಟಿಯಲ್ಲಿ ಪರಲೋಕದಲ್ಲಿ ಒಂದು ಘೋರವಾದ ದೃಷ್ಯವಾಗಿ ನಿರಂತರವಾಗಿ ಇರುತ್ತದಲ್ಲವೇ? ಆದರೆ ಹಾಗಾಗಲಿಲ್ಲ ಮತ್ತು ಯಾರೊಬ್ಬರೂ ದೀರ್ಘವಾಗಿ ಅಂಥಾಃ ಅಸಮಂಜಸವಾದ ಮತ್ತು ಸತ್ಯವೇದದಲ್ಲಿ ಇಲ್ಲದ ದೃಶ್ಯವನ್ನು ದೀರ್ಘಕಾಲ ಭಾವಿಸಲಾಗದು. ಆತ್ಮ ಜೀವಿಗಳು ಎಲ್ಲಾದರಲ್ಲಿಯೂ ವಿಶಿಷ್ಟವಾಗಿ ಸರ್ವ ಸಂಪೂರ್ಣತೆಯುಳ್ಳವರಾಗಿರುತ್ತಾರೆ. ಅಪೋಸ್ತಲನು ಪರಲೋಕದ ಮಹಿಮೆ ಮತ್ತು ಗೌರವದ ಬಾಧ್ಯಸ್ತರಾಗಿರುವ ತನ್ನ ಸಭೆಯನ್ನು ಎಚ್ಚರಿಸುತ್ತಾ – ದೇಹವು ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ (ಗಾಯ ಮತ್ತು ಕಲೆಗಳು ಮುಂತಾದವುಗಳಿಂದ ಕೂಡಿದವರಾಗಿ) ಬಿತ್ತಲ್ಪಟ್ಟರೂ ಅದು (ಆ ಜೀವಿಯು) ಬಲಾವಸ್ಥೆಯಲ್ಲಿ ಎದ್ದು ಬರುವುದು, ಹೀನಾವಸ್ಥೆಯಲ್ಲಿ ದೇಹವಾಗಿ ಬಿತ್ತಲ್ಪಡುತ್ತದೆ (ದುಃಖದ, ವ್ಯಾಕುಲದ ಪಥದಲ್ಲಿ) ಬಿತ್ತಲ್ಪಟ್ಟರೂ ಮಹಿಮೆಯೊಂದಿಗೆ ಎಬ್ಬಿಸಲ್ಪಡುವುದು; ಪ್ರಾಕೃತ ಶರೀರದಲ್ಲಿ (ಅಕ್ಷರಶಃ ಇಂದ್ರಿಯವುಳ್ಳ ಪ್ರಾಣಿಯ ಶರೀರದಲ್ಲಿ) ಬಿತ್ತಲ್ಪಟ್ಟರೂ ಅದು ಆತ್ಮೀಕ ಶರೀರವಾಗಿ ಎಬ್ಬಿಸಲ್ಪಡುವುದು, ನಾವು ಈಗ ನಮ್ಮ ಇಹಲೋಕದ ತಂದೆಯ ಸ್ವರೂಪವನ್ನು ಹೊಂದಿದ್ದರೂ, ನಾವು ಪರಲೋಕದಿಂದ ಬಂದಾತನ ಸಾರೂಪ್ಯವನ್ನು ಧರಿಸಿಕೊಳ್ಳುವೆವು ಎಂದು ಅಪೋಸ್ತಲನು ತನ್ನ ಸಭೆಗೆ ನೆನಪಿಸುತ್ತಾನೆ (1 ಕೊರಿಂಥ 15:42–51). ನಮ್ಮ ಕರ್ತನಾದ ಯೇಸು ಕ್ರಿಸ್ತನು ನಮ್ಮ ವಿಮೋಚನಾರ್ಥವಾಗಿ ಕೆಲವು ಸಮಯದವರೆಗೆ ಮಾನವ ರೂಪವನ್ನು ಸಹ ಧರಿಸಿಕೊಂಡನು. ಆದರೆ ಆತನ ಪುನರುತ್ಥಾನದಲ್ಲಿ ಆತನು ಪರಲೋಕದ ಕರ್ತನಾದನು (ರೋಮಾ. 14: 9). ನಾವು ನಂಬಿಗಸ್ತರಾಗಿರುವವರಾದರೆ, ನಾವು ಸಹ ಪರಲೋಕದ ಸ್ವರೂಪವನ್ನು ಧರಿಸಿಕೊಳ್ಳುವೆವು (ಆತ್ಮನ ಶರೀರಗಳನ್ನು). ಆದರೆ, ನಾವು ಇನ್ನೂ ಇಹಲೋಕದ ತಂದೆಯಾದ ಆದಾಮನ ಸ್ವರೂಪವನ್ನು ಹೊಂದಿದ್ದೇವೆ (ಮಾನವ ಶರೀರ).

ಪೌಲನ ಪ್ರಕರಣವನ್ನು ನೆನಪಿಗೆ ತಂದುಕೊಳ್ಳಿರಿ. ಆತನು ಅಪೋಸ್ತಲರಲ್ಲಿ ಒಬ್ಬನಾಗಬೇಕಾಗಿದ್ದರೆ ಆತನು ಸಾಕ್ಷಿಯಾಗಬೇಕಾಗಿತ್ತು. ಕರ್ತನನ್ನು ಆತನ ಪುನರುತ್ಥಾನದ ನಂತರ ಕಾಣಬೇಕಿತ್ತು. ಆತನು ಪುನರುತ್ಥಾನದ ಪ್ರಕಟನೆಗಳನ್ನು ಕಂಡವರಲ್ಲಿ ಒಬ್ಬನಾಗಿರಲಿಲ್ಲ ಮತ್ತು ಆ ನಾಲ್ವತ್ತು ದಿವಸಗಳಲ್ಲಿ ಅಲ್ಲಿ ಹಾಜರಿರಲಿಲ್ಲ. ಆದುದರಿಂದ ಆತನಿಗೆ ಕರ್ತನ ವಿಶೇಷವಾದ ಕ್ಷಣಿಕ ದರ್ಶನವನ್ನು ನೀಡಲಾಯಿತು. ಆದರೆ ಆತನು ಅದನ್ನು ಕಂಡನು, ಬೇರೆ ಶಿಷ್ಯರಂತೆ ಅನಾವರಣಗೊಂಡ ಆತನ ವಿವಿಧ ದೇಹ ಮತ್ತು ಉಡುಪುಗಳೊಂದಿಗೆ ಅಲ್ಲ. ಅನಾವರಣಗೊಂಡ ನಮ್ಮ ಕರ್ತನ ಕ್ಷಣಿಕ ದರ್ಶನದಿಂದ ಆತನು ನೆಲದ ಮೇಲೆ ಬಿದ್ದನು, ಮಧ್ಯಾಹ್ನದ ಸೂರ್ಯನ ಪ್ರಕಾಶಕ್ಕೂ ಮೀರಿದ ಪ್ರಕಾಶದಿಂದ ಕಣ್ಣು ಕಾಣದವನಾದನು. ಆತನಿಗೆ ಪಾರ್ಶ್ವವಾಗಿ ದೃಷ್ಟಿಗೆ ಪುನಃ ತರಲು ಒಂದು ಅದ್ಭುತವೇ ನೆರವೇರಬೇಕಾಯಿತು (ಅ.ಕೃ 9: 17,18). ಪೌಲನು ಕರ್ತನನ್ನು ಆತನಿರುವಂತೆ, ಆತ್ಮಸ್ವರೂಪಿಯನ್ನಾಗಿ ನೋಡಲಿಲ್ಲವೇ. ಆ ನಾಲವತ್ತು ದಿವಸಗಳಲ್ಲಿ ನಮ್ಮ ಕರ್ತನು ಹಿಂದೆ ಇದ್ದಂತೆ, ಈಗಾಗಲೇ ಹೇಳಿರುವ ಒಂದು ವಿಶೇಷವಾದ ಉದ್ದೇಶಕ್ಕಾಗಿ ಈ ಹಿಂದೆ ಇದ್ದಂತೆ ಕಾಣಿಸಿಕೊಳ್ಳಲಿಲ್ಲವೇ? ಈ ವಿಷಯದಲ್ಲಿ ಅನುಮಾನ ಪಡುವ ಕಾರಣವೇ ಇಲ್ಲ. ಆದರೆ ನಮ್ಮ ಕರ್ತನು ಪೌಲನಿಗೆ ಹಾಗೆ ಕಾಣಿಸಿಕೊಳ್ಳುವುದರಲ್ಲಿ ಒಂದು ಉದ್ದೇಶವಿತ್ತು. ಆತನು ಇತರರಿಗೆ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಂಡ ಉದ್ದೇಶದಂತೆಯೇ ಇದಾಗಿತ್ತು. ಪೌಲನು ಈ ಉದ್ದೇಶವನ್ನು ತೋರಿಸುವವನಾಗಿ "ಕಟ್ಟಕಡೆಗೆ ದಿನ ತುಂಬದೆ ಹುಟ್ಟಿದವನಂತಿರುವ ನನಗೂ ಕಾಣಿಸಿ ಕೊಂಡನು" (1 ಕೊರಿಂಥ 15:8 – ಅಕ್ಷರಶಃ ಅನುವಾದ) ಎಂದು ಬರೆಯುತ್ತಾನೆ. ನಮ್ಮ ಕರ್ತನ ಪುನರುತ್ಥಾನವು ಮರಣದಿಂದ ಸರ್ವಸಂಪೂರ್ಣತೆಯು ಹೊಸ ಹುಟ್ಟುವಿಕೆಯಾಗಿರುವುದರಿಂದ (ಕೊಲೊಸ್ಸೆ 1:18, ರೋಮಾ. 8:29). ಅದರಂತೆಯೇ ಕ್ರಿಸ್ತನ ದೇಹವಾದ ಸಭೆಯ ಪುನರುತ್ಥಾನವು ಒಂದು ನೂತನ ಹುಟ್ಟು ಎಂದು ಇಲ್ಲಿ ಮತ್ತು ಎಲ್ಲಾ ಕಡೆಗಳಲ್ಲಿ ಉಲ್ಲೇಖಿಸಲಾಗಿದೆ. ಆತ್ಮ ಜೀವಿಗಳಾಗಿ ನಮ್ಮ ಜನನದಲ್ಲಿ ಅಥವಾ ಪುನರುತ್ಥಾನದಲ್ಲಿ ನಾವು ಕರ್ತನನ್ನು ಪೌಲನು ನೋಡಿದಂತೆ ಆತನು ಇರುವಂತೆಯೇ ನೋಡುವೆವು. ಆದರೆ ನಾವು ಅಗ ಬದಲಾದವರೂ ಅಥವಾ ನೂತನವಾಗಿ ಆತ್ಮ ಜೀವಿಗಳಾಗಿ

ಹುಟ್ಟಿದವರೂ ಆಗಿದ್ದು, ನೆಲಕ್ಕೆ ಬೀಳುವವರೂ ಅಥವಾ ನಮ್ಮ ಕರ್ತನ ಭವ್ಯವಾದ ಪ್ರಸನ್ನತೆಯಿಂದ ಕುರುಡರಾಗುವವರೂ ಅಲ್ಲ. ಪೌಲನ ಹೇಳಿಕೆ ಏನೆಂದರೆ ನಾವು ಮತ್ತು ಕ್ರಿಸ್ತನನ್ನು ಆತನಿರುವಂತೆಯೇ ಆತನನ್ನು ನೋಡುವೆವು. ಆದರೆ ಅದು ಉಚಿತ ಸಮಯಕ್ಕೆ ಮುಂಚಿತವಾಗಿತ್ತು, ಪೌಲನು ನೋಡಿರುವುದು ಪೌಲನು ಸತ್ತವರೊಳಗಿಂದ ಜೀವದೊಡನೆ ಬರುವ ಮೊದಲೇ ಆಗಿತ್ತು. ಆತನು ಅದನ್ನು ತಾಳಿಕೊಳ್ಳದಾದನು. ಆದಾಗ್ಯೂ ಆ ರೀತಿಯಾಗಿ ಹೊಸದಾಗಿ ಹುಟ್ಟಿದ ಪ್ರತಿಯೊಬ್ಬರೂ ಉಚಿತ ಸಮಯದಲ್ಲಿ ಆತನನ್ನು ಕಾಣುವರು.

ಮೋಶೆಯು ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಹೊತ್ತು ಅದನ್ನು ತನ್ನ ಜನರಿಗೆ ತಿಳಿಸಲು ಬೆಟ್ಟದಿಂದ ಇಳಿದುಬರುವುದು ಸಾಂಕೇತಿಕವಾಗಿ, ಆ ಮಹಾ ಧರ್ಮನಿಯಮಗಳನ್ನು ನೀಡುವಾತನ, ನೂತನ ಒಡಂಬಡಿಕೆಯ ಮಧ್ಯಸ್ಥನ ತನ್ನ ಎರಡನೆಯ ಬರೋಣದಲ್ಲಿ ಈ ಲೋಕವನ್ನು ಆಳಲು ಮತ್ತು ಆಶೀರ್ವದಿಸಲು ಬರಲಿರುವ ನಮೂನೆಯಾಗಿ ಕಂಡುಬಂದನು. ಆದುದರಿಂದ ಮೋಶೆಯು ಸಮಗ್ರ ಸಭೆಯ ನಮೂನೆಯಾದನು. ಸಮಗ್ರ ಸಭೆಯ ಶಿರಸ್ಸಾಗಿರುವ ನಮ್ಮ ಕರ್ತನ ಪ್ರತಿರೂಪನಾದನು. ಆತನ ಮುಖವು ಪ್ರಕಾಶದಿಂದ ಮಿಂಚುವುದಾಗಿತ್ತು, ಅದಕ್ಕಾಗಿಯೇ ಆತನು ಆ ನಂತರ ಒಂದು ಮುಸುಕನ್ನು ತೊಟ್ಟುಕೊಂಡಿರಬೇಕು. ನಮ್ಮ ಕರ್ತನಾದ ಕ್ರಿಸ್ತನ ಆತ್ಮೀಕ ಮಹಿಮೆಯು ಸಾಂಕೇತಿಕವಾಗಿ ಕಂಡುಬರುತ್ತದೆ. ಇದು ನಾವೀಗ ಪರೀಕ್ಷೆಮಾಡುತ್ತಿರುವ ಅಂಶಕ್ಕೆ ಉದಾಹರಣೆಯಾಗಿದೆ. ಕ್ರಿಸ್ತನಿಗೆ ತಂದೆಯ ವ್ಯಕ್ತಿಗತವಾದ ನಿಜವಾದ ಮಹಿಮೆ ಮತ್ತು ಪ್ರಕಾಶತೆ ಉಂಟು, ಆತನು ತಂದೆಯ ಪ್ರತಿರೂಪವಾಗಿದ್ದಾನೆ, ಮತ್ತು ನಾವೂ ಆತನಂತಿರುತ್ತೇವೆ. ಯಾವ ಮನುಷ್ಯನೂ ಆ ಮಹಿಮೆಯನ್ನು ನೋಡಲಾರನು; ಆದುದರಿಂದ ನ್ಯಾಯಶಾಸ್ತ್ರ ನೀಡುವವನ ಮಹಿಮೆಯು ಈ ಲೋಕಕ್ಕೆ ಯಾವುದೇ ಆಗಿರಲಿ ಆಗ ಕರ್ತನ ಮಹಿಮೆಯು ಬಹಿರಂಗವಾಗುವುದು, ಆತ್ಮೀಕ ಜೀವಿಗಳ ಮಹಿಮೆಯು ಕಾಣಲ್ಪಡುವುದಿಲ್ಲ. ಅವರು ಪರದೆಯ ಮೂಲಕ ಮುಸುಕುಹೊದ್ದುಕೊಂಡು ಮಾತನಾಡುತ್ತಾರೆ. ಇದು ಮತ್ತು ಇನ್ನೂ ಹೆಚ್ಚಾದ ಸಂಗತಿಗಳು ಮೋಶೆಯ ಪರದೆಯ ಅರ್ಥವನ್ನು ಸೂಚಿಸುತ್ತದೆ – ವಿಮೊ. 34:30–33.

ನಾವು ಈ ಪ್ರಸ್ತಾಪವನ್ನು ಜಾಗರೂಕತೆಯಿಂದ ಅಭ್ಯಾಸ ಮಾಡುವಾಗ, ನಮ್ಮ ಕರ್ತನ ಪುನರುತ್ಥಾನವನ್ನು ಆತನ ಶಿಷ್ಯರಿಗೆ ಪ್ರಕಟಿಸಲು ಆ ಮೂಲಕ ಅವರು ಸಂಪೂರ್ಣ ತೃಪ್ತರಾಗಿ ನಂಬಲರ್ಹವಾದ ಉತ್ತಮ ಸಾಕ್ಷಿಗಳಾಗುವಂತೆ, ಆ ಮೂಲಕ ಈ ಲೋಕದ ನಮ್ಮ ಸ್ವಭಾವದವರು ಅವರ ಸಾಕ್ಷ್ಯವನ್ನು ಸ್ವೀಕರಿಸಿ, ದೇವರು ಕರ್ತನನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದ್ದಾನೆ – ಸತ್ತವನಾಗಿದ್ದನು – ಈಗ ಆತನು ಎಂದೆಂದಿಗೂ ಜೀವಿಸುವವನಾಗಿದ್ದಾನೆ, ನಾವು ಆತನ ಮೂಲಕ ದೇವರ ಬಳಿಗೆ ಹೋಗಬಹುದೆಂದು ನಂಬಿಕೊಳ್ಳುವಂತೆ ಮಾಡಲು ದೇವರು ಪ್ರದರ್ಶಿಸಿದ ಜ್ಞಾನವನ್ನು ಹೆಚ್ಚು ಹೆಚ್ಚಾಗಿ ಗ್ರಹಿಸಲು ಶಕ್ತರಾಗುತ್ತೇವೆ. ನಾವು ಸತ್ಯದ ಆತ್ಮನ ನಡಿಸುವಿಕೆಯಲ್ಲಿ ಆತನನ್ನು ಪರಿಗಣಿಸುವಾಗ, ನಮ್ಮ ಮನಸ್ಸು ಅರಳುತ್ತದೆ, ನಾವು ಇನ್ನು ಮುಂದೆ ಆತನನ್ನು ಮಾನವನಾಗಿರುವ ಕ್ರಿಸ್ತನು ಎಂದು ಕಾಣದೆ, ಮಹಿಮೆ ಮತ್ತು ಶಕ್ತಿಯುಳ್ಳ ಕರ್ತನು, ದೈವಿಕ ಸ್ವಭಾವದ ಪಾಲುದಾರನು ಎಂಬುದಾಗಿ ಕಂಡುಕೊಳ್ಳುತ್ತೇವೆ. ಈ ರೀತಿಯಲ್ಲಿ ಕ್ರೈಸ್ತ ಸಭೆಯು ಯಾರಿಗಾಗಿ ದೀರ್ಘಕಾಲದಿಂದ ನಿಷ್ಠೆಯಿಂದ ಪ್ರಾರ್ಥಿಸುತ್ತಾ ಹಂಬಲಿಸುತ್ತಾ ಇತ್ತೋ ಆತನೇ ಅವನೆಂದು ತಿಳುಕೊಳ್ಳುತ್ತೇವೆ. ಆತನು ಉನ್ನತ ಸ್ಥಿತಿಗೆ ಏರಿರುವುದನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿಕೊಂಡ ಯಾರೊಬ್ಬರೂ ಯೇಸುಕ್ರಿಸ್ತನು ತನ್ನ ಎರಡನೆಯ ಬರೋಣದಲ್ಲಿ ಶಿಲುಬೆಯಲ್ಲಿ ಮರಣಹೊಂದಿ ಈಡುಬಲಿಯಾಗಿ ಸಮರ್ಪಿಸಿದ ಮಾಂಸ ಮೂಳೆಗಳುಳ್ಳ ಮಾನವ ರೂಪದಲ್ಲಿ ಬರುತ್ತಾನೆಂದು ನಿರೀಕ್ಷಿಸಲಾರರು. ಆತನ ಎರಡನೆಯ ಬರೋಣದಲ್ಲಿ ಆತನು ವಿವಿಧ ರೀತಿಯ ಮಾಂಸ ಮೂಳೆಗಳುಳ್ಳ ಶರೀರದೊಡನೆ ಬರುತ್ತಾನೆಂದೂ ಅಥವಾ ತನ್ನನ್ನು ತೋರ್ಪಡಿಸಿಕೊಳ್ಳುತ್ತಾನೆಂದೂ ನಾವು ನಿರೀಕ್ಷಿಸಲೂ ಕೂಡದು. ಅದು ಮೊದಲಿನ ಸಾಕ್ಷಿಗಳಿಗೆ ಅಗತ್ಯವಾಗಿತ್ತು. ಆದರೆ ಈಗ ಅದರ ಅಗತ್ಯವಿಲ್ಲ. ನಾವು ಕಾಣಲಿರುವಂತೆ ಆತನು ತನ್ನ ಎರಡನೆಯ ಪ್ರತ್ಯಕ್ಷತೆಯಲ್ಲಿ ಭಿನ್ನವಾದ ರೀತಿಯಲ್ಲಿ ಪ್ರಕಟಗೊಳ್ಳಲಿದ್ದಾನೆ.

ಆತ್ಮ ಜೀವಿಗಳೆಂದು ಈ ಹಿಂದೆ ಪ್ರಕಟಿಸಿ ಕೊಂಡಿರುವುದನ್ನು ನಾವು ನೋಡುವಾಗ, ಸ್ಪಷ್ಟವಾಗುವುದೇನೆಂದರೆ ನಮ್ಮ ಕರ್ತನು ತನ್ನ ಎರಡನೆಯ ಪ್ರಕಟನೆಯಲ್ಲಿ ತನ್ನನ್ನು ಪ್ರಕಟಿಸಿಕೊಳ್ಳುವಾಗ, ಆತನು ಪೌಲನಿಗೆ ಮತ್ತು ದಾನಿಯೇಲನಿಗೆ ಮಾಡಿದಂತೆ ಮಾನವರ ಕಣ್ಣುಗಳನ್ನು ಆತನ ಮಹಿಮೆಯನ್ನು ಕಾಣುವಂತೆ ತೆರೆಯುತ್ತಾನೆ ಅಥವಾ ಮಾನವ ಶರೀರವನ್ನು ಧರಿಸಿಕೊಳ್ಳುತ್ತಾನೆ ಎಂದಾದರೆ ಇವೆರಡು ರೀತಿಯು ಆತನ ಯೋಜನೆಯ ಬಗ್ಗೆ ಆತನ ವಾಕ್ಯದಲ್ಲಿ ಪ್ರಕಟಿಸಿರುವ ಯೋಜನೆಗೆ ಹಾನಿಯುಂಟು ಮಾಡುತ್ತದೆ. ಆತನು ತನ್ನ ಮಹಿಮೆಯಲ್ಲಿ ಲೋಕಕ್ಕೆ ಕಾಣಿಸಿಕೊಳ್ಳಬೇಕೆಂದರೆ ಇದರ ಪರಿಣಾಮವು ಏನಾಗುವುದೆಂದರೆ, ಅವರು ಕಣ್ಣುಗಳನ್ನು ಆತನನ್ನು ನೋಡಲು ಅದ್ಭುತವಾಗಿ ಶಕ್ತಿಗೊಳಿಸುವುದು. ಆದರೂ ಈ ಮಹೋನ್ನತವಾದ ದೃಶ್ಯವು ಅವರನ್ನು ನಿಷ್ಕ್ರಿಯವಾಗುವಂತೆ ಮಾಡುವದಾಗಿದೆ. ಅಲ್ಲದೆ ಅದೇ ಸಮಯದಲ್ಲಿ ತನ್ನನ್ನು ಮಾನವನಾಗಿ ಕಾಣಿಸಿಕೊಳ್ಳುವುದು ಆತನ ಘನತೆಯನ್ನು ಕುಗ್ಗಿಸುವಂತಾದ್ದೂ, ಆತನ ದೈವಿಕ

ಸ್ವಭಾವಕ್ಕೆ ಕಡಿಮೆಯಾದ ಮಟ್ಟವನ್ನು ಮತ್ತು ರೂಪವನ್ನೂ ನೀಡುವುದಾಗಿದೆ. ಇದರಲ್ಲಿ ಯಾವುದೂ ಅಗತ್ಯವೆಂದು ತೋರಿಬರುವುದಿಲ್ಲ ಅಥವಾ ಈಗ ಸಲಹೆ ನೀಡಲು ಯೋಗ್ಯವೂ ಅಲ್ಲ, ನಾವು ಇವುಗಳಲ್ಲಿ ಯಾವುದಾದರೂ ಒಂದು ಪದ್ದತಿ ಆಯ್ದುಕೊಳ್ಳಲಾಗುತ್ತದೆ ಎಂದು ನಾವು ಭಾವಿಸುವುದಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ, ಕ್ರಿಸ್ತನು ಈ ಲೋಕದಲ್ಲಿ ಜನಿಸಿ ಬಂದು ನಮ್ಮ ಮಧ್ಯೆ ವಾಸವಾಗಿದ್ದಾಗ ಧರಿಸಿದ್ದ ಮಾಂಸದಿಂದೊಡಗೂಡಿದ ದೇಹಧಾರಿಯಾಗಿ ಮಾನವನ ರೂಪದಲ್ಲಿ ಪ್ರಕಟಗೊಳ್ಳುತ್ತಾನೆ, ದೇವರು ಕ್ರಿಸ್ತನಲ್ಲಿ ಶರೀರಧಾರಿಯಾಗಿ ಪ್ರಕಟಗೊಂಡನು ಎಂದು ನಾವು ಊಹಿಸತಕ್ಕದ್ದು. ಮಾನವ ಸ್ವಭಾವವು ದೇವರೊಂದಿಗೆ ಸಾಮರಸ್ಯತೆಯಿಂದ ಪರಿಪೂರ್ಣತೆಯಿಂದಿರುವಾಗ, ಅದು ಮಾಂಸಶರೀರದಲ್ಲಿ ದೇವರ ಹೋಲಿಕೆಯಂತೆ ಇರುವುದು. ಆದುದರಿಂದ ಮೂಲತಃ ಪರಿಪೂರ್ಣನಾಗಿದ್ದ ಆದಾಮನು ದೇವರ ಹೋಲಿಕೆಯಾಗಿ ಇದ್ದನು, ಮಾನವನಾಗಿ ಜನಿಸಿದ ಯೇಸು ಸಹ ಹಾಗೆಯೇ ಇದ್ದನು. ಹೀಗಾಗಿ ಆತನು ಫಿಲಿಪ್ಪನಿಗೆ "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ, ನನಗೆ ತಂದೆಯನ್ನು ತೋರಿಸೆಂದು ನೀನು ಹೇಳುವುದು ಹೇಗೆ?" (ಯೋಹಾನ 14:9) ಎಂದು ಹೇಳುತ್ತಾನೆ. ಅಂಥವನು ತಂದೆಯ ಹೋಲಿಕೆಯನ್ನು ಮಾಂಸ ಶರೀರದಲ್ಲಿ ನೋಡಿದ್ದಾನೆ. ಅದರಂತೆ ಮೂಲದಲ್ಲಿ ಸರ್ವಸಂಪೂರ್ಣನಾಗಿದ್ದ ಆದಾಮನು, ಮತ್ತು ಮಾನವನಾಗಿ ಜನಿಸಿ ಬಂದ ಯೇಸುಕ್ರಿಸ್ತನು ಸಹಾ. ಆದುದರಿಂದ ತಂದೆಯನ್ನು ತೋರಿಸೆಂದು ಕೇಳಿದ ಫಿಲಿಪ್ಪನಿಗೆ "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" ಎನ್ನುತ್ತಾನೆ. ದೇವರು ಶರೀರಧಾರಿಯಾಗಿ ಪ್ರಕಟಗೊಂಡಿದ್ದಾನೆ, ಆತನು ಶರೀರಧಾರಿಯಾಗಿ ಪ್ರತ್ಯಕ್ಷನಾದನು (1 ತಿಮೋಥೆ 3:16).

ಹಾಗೆಯೇ ಮಾನವ ಜಾತಿಯು ಒಟ್ಟಾರೆಯಾಗಿ, ಅದರ ಸದಸ್ಯರುಗಳಾಗಿ ಬಹಳ ಹಿಂದೆ ಕಳೆದುಕೊಂಡಿದ್ದ ದೇವರ ಸ್ವಾರೂಪ್ಯವನ್ನು ಕ್ರಮೇಣವಾಗಿ ಹಿಂದಕ್ಕೆ ಪಡೆಯುತ್ತಿರುವಾಗ ಅವರು ತಂದೆಯ ಹಾಗೂ ಯೇಸುವಿನ ಹೋಲಿಕೆಯಾಗಿ ಮಾಂಸಧಾರಿ ಶರೀರದಂತೆ ಇರುತ್ತಾರೆ. ಸಹಸ್ರಮಾನದ ಆರಂಭದಲ್ಲಿಯೇ, ಸರ್ವಸಂಪೂರ್ಣವಾದ ಮಾನವತ್ವದ ಮಾದರಿಗಳು ಈ ಲೋಕದ ಮುಂದೆ ಇರುತ್ತವೆ (Vol. 1, ಪುಟ :287-293): ಅಬ್ರಹಾಮ, ಇಸಾಕ, ಯಾಕೋಬ ಮತ್ತು ಪವಿತ್ರ ಪ್ರವಾದಿಗಳು, ಈಗಾಗಲೇ ಪರಿಶೋಧಿಸಲ್ಪಟ್ಟು, ಅಂಗೀಕಾರ ಪಡೆದವರಾಗಿ ಒಪ್ಪಿಗೆ ಪಡೆದವರು ಮಾನವರಲ್ಲಿ ಅರಸರುಗಳಾಗುತ್ತಾರೆ, ಅದೃಶ್ಯವಾದ ಆತ್ಮೀಕ ರಾಜ್ಯದ ಪ್ರತಿಪಾದಕರೂ, ಪ್ರತಿನಿಧಿಗಳೂ ಆಗುತ್ತಾರೆ. ಇವರುಗಳಲ್ಲಿ, ತಂದೆಯು ಕ್ರಿಸ್ತನ ದೇಹದಲ್ಲಿ ಪ್ರಕಟಗೊಂಡಂತೆಯೇ ಅವರ ದೇಹದಲ್ಲಿಯೂ ಕ್ರಿಸ್ತನು ಪ್ರಕಟಗೊಳ್ಳುತ್ತಾನೆ, ಯಾರು ಯಾರಾರು ಸರ್ವಸಂಪೂರ್ಣತೆಯನ್ನು ಮುಟ್ಟುತ್ತಾರೋ, ಕ್ರಿಸ್ತನಲ್ಲಿ ಪರಿಪೂರ್ಣವಾದ ಸಾಮರಸ್ಯಕ್ಕೆ ತಲುಪುತ್ತಾರೋ ಅಂಥಾಃ ಪ್ರತಿಯೊಬ್ಬರೂ ದೇವರ ಮತ್ತು ಕ್ರಿಸ್ತನ ಸ್ವರೂಪದವರಾಗುತ್ತಾರೆ, ಈ ಪ್ರತಿಯೊಬ್ಬರಲ್ಲಿಯೂ ಕ್ರಿಸ್ತನು ಪ್ರಕಟಗೊಳ್ಳುತ್ತಾನೆ.

ಸಂಪೂರ್ಣನಾದ ಮನುಷ್ಯನು ದೇವರ ನೈತಿಕ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿರುವುದರಿಂದ, ಆತನು ಪೂರ್ಣ ಪ್ರತಿಷ್ಠೆ ಹೊಂದಿದವನು ಸಮರ್ಪಕವಾಗಿ ಪವಿತ್ರಾತ್ಮನನ್ನೂ, ದೇವರ ವಾಕ್ಯವನ್ನೂ ಮೆಚ್ಚಿಕೊಳ್ಳಲು ಶಕ್ತನೂ ಆಗುತ್ತಾನೆ; ಮಹಿಮೆ ಹೊಂದಿದ ಸಭೆಯು ಆತನನ್ನು ನಿರ್ದೇಶಿಸುತ್ತದೆ. ದರ್ಶನಗಳು ಮತ್ತು ನೇರವಾದ ಪ್ರಕಟನೆಗಳು ಇವೆರಡೂ ಸಹ ಮತ್ತು ಆತ್ಮೀಕ ರಾಜ್ಯ ಮತ್ತು ಅದರ ಈ ಲೋಕದ ಪ್ರತಿನಿಧಿಗಳ ನಡುವಿನ ಸಾಮಾನ್ಯ ಸಂಪರ್ಕವು ಈ ಹಿಂದೆ ಇದ್ದ ಅದೇ ರೀತಿಯ ಇತರೆ ಸಂಪರ್ಕಗಳಿಗಿಂತ ಇನ್ನೂ ಹೆಚ್ಚಾಗಿ ಮುಕ್ತ ಮತ್ತು ಸರ್ವಸಾಮಾನ್ಯವಾಗಿದ್ದು – ಪಾಪವು ಖಂಡನೆಯನ್ನುಂಟುಮಾಡಿ, ದೇವರ ಕೃಪೆ ಮತ್ತು ಸಂಪರ್ಕದಿಂದ ಬೇರ್ಪಡಿಸಿದಕ್ಕಿಂತ ಮೊದಲಲ್ಲಿದ್ದ ಏದೇನಿನ ಸಂಯೋಗದ ಕ್ರಮಕ್ಕಿಂತಲೂ ಬಹಳ ಹೆಚ್ಚಾಗಿರುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ವಿವೇಚನಾತ್ಮಕವಾಗಿ ಅಥವಾ ದೇವರ ಪರಿಶುದ್ಧ ಬರಹಗಳು ನಮ್ಮ ಕರ್ತನು ತನ್ನ ಎರಡನೆಯ ಆಗಮನದಲ್ಲಿ ಮಾಂಸ ಮತ್ತು ಮೂಳೆಗಳುಳ್ಳ ವಿವಿಧ ಮಾನವದೇಹಗಳನ್ನು ಹೊತ್ತು ಬರುತ್ತಾನೆಂದು ಸತ್ಯವೇದವು ಕೋರುವದಿಲ್ಲ. ಅಂಥಾಃ ವಿಧಾನವು ಅಗತ್ಯವಿಲ್ಲ ಎಂಬುದು ಮಾನವರಲ್ಲಿ ಕಾರ್ಯಸ್ಥನಾಗಿ ಕೆಲಸಮಾಡುವ ಸೈತಾನನ ರಾಜ್ಯದ ಜಯದಿಂದ ವಿಶದವಾಗಿದೆ. ದುಷ್ಟತ್ವ ಮತ್ತು ದೋಷಗಳ ಆತ್ಮನಲ್ಲಿ ಪಾಲು ತೆಗೆದುಕೊಳ್ಳುವವರು ಇಹಲೋಕಾಧಿಪತಿಯನ್ನು ಬಹಳ ಸಂಪೂರ್ಣವಾಗಿ ಪ್ರತಿನಿಧಿಸುತ್ತಾರೆ. ಆ ರೀತಿಯಲ್ಲಿ ಆತನು ಅವರ ದೇಹದಲ್ಲಿ ಆತನೇ ಆತ್ಮಸ್ವರೂಪನಾಗಿದ್ದರೂ, ಮಾನವರಿಗೆ ಕಾಣದಂತೆ ಪ್ರಕಟಗೊಳ್ಳುತ್ತಾನೆ.

ಕ್ರಿಸ್ತನಲ್ಲಿ ಬದಲಾದವರು, ದೈವಿಕ ಸ್ವಭಾವದ ಪಾಲುದಾರರಾಗಿ ಮಾಡಲ್ಪಟ್ಟು, ನಿಜವಾಗಿ ಸೈತಾನನು ಆತ್ಮಜೀವಿಯಾದಂತೆ ಆತ್ಮ ಜೀವಿಗಳಾಗಿರುತ್ತಾರೆ ಮತ್ತು ಅದೇ ರೀತಿ ಸರಿಸಮವಾಗಿ ಮಾನವರ ಕಣ್ಣಿಗೆ ಕಾಣಿಸುವುದಿಲ್ಲ, ಅದರ ಕಾರ್ಯಾಚರಣೆಯು ಒಂದೇ ರೀತಿಯದಾಗಿರುತ್ತದೆಯಾದರೂ ಅದರ ಗುಣಲಕ್ಷಣ ಮತ್ತು ಫಲಿತಾಂಶಗಳಲ್ಲಿ ವಿರುದ್ಧವಾಗಿದ್ದರೂ ಅದೇ ರೀತಿಯಲ್ಲಿ ಅದೇ ತೆರನಾಗಿರುತ್ತದೆ; ಅವರ ಗೌರವಾನ್ವಿತ ನಿಯೋಗಗಳು, ಅಜ್ಞಾನ ಮತ್ತು ಬಲಹೀನತೆಗಳಿಂದ ಸೈತಾನನ ಅನೇಕ ಸೇವಕರುಗಳಂತೆ ಅವಶ್ಯ ಸೇವಕರಾಗಿ

ಮಾಡಲ್ಪಟ್ಟಿಲ್ಲ, ಆದರೆ ಅವರು ನಿಜವಾಗಿಯೂ ಸಮರ್ಪಕರಾಗಿ ಮತ್ತು "ಬಿಡುಗಡೆಗಾಗಿ" ಮಾಡಲ್ಪಟ್ಟಿದ್ದಾರೆ ಮತ್ತು ಬುದ್ಧಿವಂತಿಕೆಯಿಂದ, ಸಾಮರಸ್ಯವಾಗಿ ಆಂತ್ಯೆಕ್ಯಯಿಂದಲೂ, ಪ್ರೀತಿಯಿಂದಲೂ ತಮ್ಮ ಕಾರ್ಯವೆಸಗುತ್ತಾರೆ ಮತ್ತು ಅವರ ಗೊತ್ತುಪಡಿಸುವಿಕೆಯು ನೀತಿವಂತಿಕೆಯ ಬಹುಮಾನವನ್ನು ಪಡಕೊಳ್ಳುವದಾಗಿದೆ.

ಕ್ರಿಸ್ತನ ಪ್ರಸನ್ನತೆಯು ಈ ಲೋಕದವರಿಗೆ "ಬಹು ಬಲದಿಂದಲೂ ಮಹಿಮೆಯಿಂದಲೂ" ಪ್ರದರ್ಶಿಸಲ್ಪಡುವುದು, ಅದು ಕೇವಲ ಸ್ವಾಭಾವಿಕ ದೃಷ್ಟಿಗೆ ಮಾತ್ರವಲ್ಲ, ಆದರೆ ಅವರ ತಿಳುವಳಿಕೆಯ ಕಣ್ಣುಗಳಿಗೆ, ಅವರು ಅದನ್ನು ನೂತನ ಆಡಳಿತಗಾರನು ಜಾರಿಗೆ ತರುವ ಬದಲಾವಣೆಗಳ ಮೆಚ್ಚುಗೆಯಿಂದ ಸ್ವೀಕರಿಸಲು ಸಿದ್ಧರಿರುತ್ತಾರೆ. ಆತನ ಪ್ರಸನ್ನತೆ ಮತ್ತು ನೀತಿವಂತಿಕೆಯ ಅಧಿಕಾರವು ಆತನ ಆಳ್ವಿಕೆಯಲ್ಲಿ ಮಾನವ ಜಾತಿಗೆ ಹರಿದು ಬರುವ ಶಿಕ್ಷೆ ಮತ್ತು ಆಶೀರ್ವಾದಗಳ ಮೂಲಕ ಗ್ರಹಿಸಲ್ಪಡುತ್ತವೆ.

ದೀರ್ಘಕಾಲದಿಂದಲೂ ಸಾಮಾನ್ಯವಾಗಿ ನಂಬಿಕೊಂಡು ಬಂದಿರುವಂತೆ ಯಾತನೆ ಮತ್ತು ತೊಂದರೆಯು ಶಿಕ್ಷೆಯಂತೆ ಕೆಡುಕರ ಮೇಲೆ ಬರುತ್ತವೆ. ಇದು ಸ್ವಾಭಾವಿಕವಾದ ಮತ್ತು ಯುಕ್ತವಾದ ನಿಯಮ ಎಂಬುದಾಗಿ ಕಂಡುಬರುತ್ತದೆ. ಅದು ಹಾಗೆ ಇಲ್ಲವಾದರೂ ಹಾಗೆಯೇ ಇರುವುದೆಂದು ಯೋಚಿಸಿ ಜನರು ಸಾಮಾನ್ಯವಾಗಿ ಅದನ್ನು ಅಂಗೀಕರಿಸಿದ್ದಾರೆ, ಆದಾಗ್ಯೂ ದೈವಭಕ್ತಿಯುಳ್ಳವರೇ ಮನೋವೇದನೆ ಮತ್ತು ಸಂಕಟಗಳನ್ನು ಅನುಭವಿಸುತ್ತಾರೆ ಎಂಬ ಅನುಭವಗಳ ಕಠಿಣ ಸತ್ಯವು ಸತ್ಯವೇದದೊಡನೆ ಒಪ್ಪಿಗೆಯಾಗುತ್ತದೆ (2 ತಿಮೋ. 3:12). ಆದರೆ "ಸಂಕಟದ ದಿನದಲ್ಲಿ" ಮೆಸ್ಸೀಯನ ಆಳ್ವಿಕೆಯ ವರ್ಷಗಳ ಅವಧಿಯನ್ನೂ ಕೂಡಿಸಿಕೊಂಡು, ಈ ಕ್ರಮವು ವಿರುದ್ಧ ದಿಕ್ಕಿಗೆ ಹರಿಯಲು ಪ್ರಾರಂಭವಾಗುತ್ತದೆ. ಆ ದಿನದಲ್ಲಿ, ಕೆಡುಕನ ಶಕ್ತಿಯು ಪರಾಭವಗೊಳ್ಳುತ್ತದೆ, ಮತ್ತು ನೀತಿವಂತಿಕೆಯು ಕ್ರಮವಾದ ವಿಧಾನದಲ್ಲಿ ಸ್ಥಾಪಿತಗೊಳ್ಳುತ್ತದೆ ಮತ್ತು ಕೆಡಕು ಮಾಡುವವರಿಗೆ ಸೂಕ್ತವಾದ ಪ್ರತಿಕಾರವನ್ನು ತೀರಿಸುವ, ಮತ್ತು ಒಳ್ಳೇದನ್ನು ಮಾಡುವವರಿಗೆ ಆಶೀರ್ವಾದ ವನ್ನುಂಟುಮಾಡುವ ರೀತಿಯಲ್ಲಿ ತ್ವರಿತವಾಗಿ ಕಾರ್ಯವೆಸಗುತ್ತದೆ – "ಕೆಟ್ಟದನ್ನು ನಡೆಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ, ಸಂಕಟವೂ ಬರುವವು – ಆದರೆ ಒಳ್ಳೆಯದನ್ನು ನಡೆಸುವ ಪ್ರತಿಯೊಬ್ಬನಿಗೆ ಪ್ರಭಾವವೂ, ಮಾನವೂ, ಮನಶ್ಶಾಂತಿಯೂ ಉಂಟಾಗುವವು – ಆ ದಿನದಲ್ಲಿ, ದೇವರ ಕೋಪವೂ ನ್ಯಾಯವಾದ ತೀರ್ಪು ಪ್ರಕಟವಾಗುವ ದಿವಸ – ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು" (ರೋಮಾ. 2:9,10,6,5). ಈಗ ಬಹಳಷ್ಟು ತಪ್ಪುಗಳು ಇರುವುದರಿಂದ ಮುಯ್ಯಿ ತೀರಿಸಿಕೊಳ್ಳುವಿಕೆಯು ಮೊದಲಿಗೆ ಬಹಳವಾಗಿರುತ್ತದೆ, "ಜನಾಂಗವು ಉಂಟಾದಂದಿನಿಂದ ಇಂದಿನವರೆಗೂ ಸಂಭವಿಸಿದಂತೆ ಸಂಕಟವು ಸಂಭವಿಸುವದು", ಈ ರೀತಿಯಲ್ಲಿ ಪ್ರತಿಕಾರ, ತೊಂದರೆ ಮತ್ತು ಜನಾಂಗದ ಮೇಲಿನ ಕ್ರೋಧ ಇವುಗಳಲ್ಲಿ ಕರ್ತನು ದೈವ ವ್ಯವಸ್ಥೆಯ ಬದಲಾವಣೆಯ ಮತ್ತು ಆಡಳಿತಗಾರರ ಬದಲಾವಣೆಗಳ ಸತ್ಯತೆಯನ್ನು ಪ್ರಕಟಿಸುತ್ತಾನೆ. "ಈ ರೀತಿಯಲ್ಲಿ ಕರ್ತನ ತೀರ್ಪುಗಳು ಈ ಲೋಕದಲ್ಲಿ ನಡೆಯುವಾಗ, ಲೋಕನಿವಾಸಿಗಳು ಧರ್ಮಜ್ಞಾನದ ನೀತಿಯನ್ನು ಕಲಿತುಕೊಳ್ಳುತ್ತಾರೆ" (ಯೆಶಾಯ 26:5–11). ಆ ನೂತನ ಕ್ರಮದ ಅಡಿಯಲ್ಲಿ ಸರಿಯಾದದ್ದನ್ನು ಮಾಡುವವರು ಉನ್ನತಕ್ಕೆ ಏರಿಸಲ್ಪಡುತ್ತಾರೆ ಮತ್ತು ಕೆಟ್ಟವುಗಳನ್ನು ಮಾಡುವವರು ನಿಗ್ರಹಿಸಲ್ಪಡುವರು, ಮತ್ತು ಶಿಕ್ಷಿಸಲ್ಪಡುವರು ಎಂದು ಕಲಿತುಕೊಳ್ಳುವರು. ಈ ರಾಜ್ಯಕ್ಕೆ ಸಂಬಂಧಿಸಿದ ಪ್ರವಾದನೀಯ ಸಾಕ್ಷಿಗಾಗಿ ಮತ್ತು ಅದರ ನಮ್ರರ, ಪ್ರಾಮಾಣಿಕರ, ಬಡವರ, ಅಗತ್ಯತೆಯುಳ್ಳವರ ಮತ್ತು ಶೋಷಣೆಗೊಳಗಾದವರ ಪರವಾಗಿ ಅದರ ಕಾರ್ಯಾಚರಣೆಗಾಗಿ, ಮತ್ತು ಎಲ್ಲಾ ಅನ್ಯಾಯ ಮತ್ತು ಶೋಷಣೆಗಳ ಏಕಾಧಿಕಾರಗಳನ್ನು (monopolies) ನಿರ್ಮೂಲ ಮಾಡುವುದಕ್ಕಾಗಿ ಮತ್ತು ಮಾನವ ಸಂಗತಿಗಳನ್ನು ಸಮಾನಾಂತರಪಡಿಸುವುದಕ್ಕಾಗಿ ಎಂಬುದರ ಬಗ್ಗೆ ವಿವರಣೆಯನ್ನು ಕೀರ್ತನೆ 72: 1–19; 37;1–14 ವಚನಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳಿರಿ.

ನಮ್ಮ ಅರಸನು ಕ್ರಮೇಣವಾಗಿ ತನ್ನನ್ನು ಪ್ರಕಟಿಸಿಕೊಳ್ಳಲಿರುವನು. ಕೆಲವರು ನೂತನ ಅರಸನನ್ನು ಬೇರೆ ಅರಸರಿಗಿಂತ ಆಡಳಿತದ ವ್ಯತ್ಯಾಸವನ್ನು ತಿಳುಕೊಳ್ಳುವರು, ಅಂತಿಮವಾಗಿ ಎಲ್ಲಾ ಕಣ್ಣುಗಳೂ ಆತನನ್ನು ನೋಡುವುವು (ಅರಿತುಕೊಳ್ಳುವುವು) (ಪ್ರಕಟನೆ 1–7). ಆದರೆ, ಆತನು ಮೇಘಾರೂಢನಾಗಿ ಬರುವನು; ಯಾವಾಗ ಕಷ್ಟದ ಕಾರ್ಮೋಡಗಳು ದಟ್ಟವಾಗಿ ಕವಿಯುತ್ತವೆಯೋ, ಯಾವಾಗ ಬೆಟ್ಟಗಳು (ಈ ಲೋಕದ ರಾಜ್ಯಗಳು) ಕಂಪಿಸುತ್ತವೆಯೋ, ಬಿದ್ದುಹೋಗಲು ಪ್ರಾರಂಭಿಸುತ್ತವೆಯೋ, ಮತ್ತು ಲೋಕವು (ಸಂಘಟನೆ) ಅಲ್ಲಾಡತೊಡಗುತ್ತವೆಯೋ ಶಿಥಿಲ ವಾಗುತ್ತವೆಯೋ, ಕರಗಿಹೋಗುತ್ತವೆಯೋ, ಆಗ ಕೆಲವರು ನಾವು ಈಗಾಗಲೇ ಘೋಷಿಸಿದ್ದನ್ನು ಅರಿತುಕೊಳ್ಳುತ್ತಾರೆ – ಯೆಹೋವನ ದಿನವು ಬಂದಿದೆ ಮುಂಚಿತವಾಗಿ ತಿಳಿಸಲ್ಪಟ್ಟ ಸಂಕಟದ ದಿನವು ಮತ್ತು ಜನಾಂಗಗಳ ಮೇಲಿನ ರೌದ್ರ ಪ್ರಾರಂಭವಾಗಿದೆ ಎಂಬುದನ್ನು ಗ್ರಹಿಸಿಕೊಳ್ಳುತ್ತಾರೆ; ಯೆಹೋವನಿಂದ ಅಬಿಷೇಕ ಹೊಂದಿದಾತನು ತನ್ನ ಮಹಾ ಶಕ್ತಿಯನ್ನು ಸ್ವತಃ ವಹಿಸಿಕೊಳ್ಳುತ್ತಾನೆ ಮತ್ತು ನ್ಯಾಯವನ್ನು ನೂಲನ್ನಾಗಿಯೂ ಮತ್ತು ಧರ್ಮವನ್ನು ಮಟ್ಟಗೋಲ

ನ್ಯಾಗಿಯೂ ಮಾಡುತ್ತಾನೆ (ಯೆಶಾಯ 28:17). ಆತನು ಈ ಲೋಕದ ಎಲ್ಲಾ ಅಧಿಕಾರವನ್ನೂ, ನ್ಯಾಯವಿಧಿಗಳನ್ನೂ ಕೆಳಗೆ ಹಾಕುವನು. ಅವುಗಳು ಪರಲೋಕದಲ್ಲಿ ನಿಯಂತ್ರಿಸುವ ಅಧಿಕಾರಕ್ಕೆ ವ್ಯತಿರಿಕ್ತವಾಗಿದೆ.

ತೊಂದರೆಗಳು ಹೆಚ್ಚುವಾಗ ಜನರು ಗವಿಗಳಲ್ಲಿಯೂ, ಗುಹೆಗಳಲ್ಲಿಯೂ, ದೊಡ್ಡ ದೊಡ್ಡ ಬಂಡೆಗಳ ಮರೆಯಲ್ಲಿಯೂ ಮತ್ತು ಸಮಾಜದ ಕೋಟೆಗಳಲ್ಲಿಯೂ (ಉಚಿತ ಕಲ್ಲು ಕಟ್ಟಡಗಳು, ವಿಲಕ್ಷಣ ಸಾಂಗತ್ಯ, ವಾಣಿಜ್ಯ ಒಕ್ಕೂಟಗಳು, ಸಮಾಜಗಳು, ಕಾರ್ಮಿಕ ಸಂಘಗಳು, ಸಮಿತಿಗಳು ಮತ್ತು ಜಾತ್ಯಾತೀತ ಮತ್ತು ಕ್ರೈಸ್ತ ಧರ್ಮೀಯ ಸಂಘಗಳು ಮುಂತಾದ) ಮತ್ತು ಬೆಟ್ಟಗಳಲ್ಲಿ (ಈ ಲೋಕದ ಸರ್ಕಾರಗಳೂ) ಇವುಗಳಲ್ಲಿ ಸುರಕ್ಷತೆಯನ್ನು ವ್ಯರ್ಥ್ಯವಾಗಿ ಬಯಸುತ್ತಾರೆ; 'ಮೇಲೆ ಬೀಳಿರಿ' (Fall over*, ನಮ್ಮನ್ನು ಆವರಿಸಿ, ಕಾಪಾಡಿ) ಮತ್ತು "ನಮ್ಮನ್ನು ಸಿಂಹಾಸನದಲ್ಲಿ ಕುಳಿತಿರುವಾತನ ಮುಖಕ್ಕೂ, ಯಜ್ಞದ ಕುರಿಯಾದಾತನ ಕೋಪಕ್ಕೂ ನಮ್ಮನ್ನು ಮರೆಮಾಡಿರಿ. ಆತನ ಕೋಪವು ಕಾಣಿಸುವ ಮಹಾದಿನ ಬಂದದೆ" ಎಂದು ಕೂಗುತ್ತಾರೆ – ಪ್ರಕಟನೆ 6:15–17.

ಹಣವೆಂಬ ವಿಗ್ರಹಾರಾಧನೆಗೆ ಇಡೀ ಪ್ರಪಂಚವೇ ಮರುಳಾಗಿದೆ, ಅದಕ್ಕೆ ಸಂಕಷ್ಟದ ಸಮಯದಲ್ಲಿ ಪ್ರಮುಖವಾದ ಸ್ಥಾನವಿದೆ, ಅದು ಧನವೃದ್ಧಿಗೆ ಮಾತ್ರವಲ್ಲ ಅದರ ಕಾಪಾಡಿಕೊಳ್ಳುವಿಕೆಗೂ ಹೆಚ್ಚಿನ ಕಾತುರತೆ ಯನ್ನುಂಟುಮಾಡುತ್ತದೆ. ಅದು ಸಂಪೂರ್ಣವಾಗಿ ಉರುಳಿಸಲ್ಪಡುತ್ತದೆ ಎಂಭುದನ್ನು ಯೆಶಾಯ 2:8–21, ಯೆಹೆಜ್ಕೆಲ 7:17–19 ಮಹಾಸಂಕಟದ ದಿನವನ್ನು ಗ್ರಹಿಸಲಾಗುತ್ತದೆ, ಅದರ ಚಂಡ ಮಾರುತದಿಂದ ಎಲ್ಲರೂ ರಕ್ಷಣೆಯನ್ನು ಬಯಸುತ್ತಾರೆ, ಆತನ ಪ್ರತ್ಯಕ್ಷತೆಯ ಪರಿಣಾಮವಾಗಿ ಲೋಕಕ್ಕೆ ಹೊರತಾಗಿರುವ ಕರ್ತನ ಅಧಿಕಾರ ಸ್ಥಾಪನೆ ಮತ್ತು ನ್ಯಾಯವಿಧಿಗಳನ್ನು ಜಾರಿಗೊಳಿಸುವುದನ್ನು ಕೆಲವರು ಮಾತ್ರವೇ ಗುರುತಿಸುತ್ತಾರೆ. ಆದರೆ ಅಂತ್ಯದಲ್ಲಿ ಎಲ್ಲರೂ ಮಹಿಮೆಯ ಅರಸನನ್ನು ಗ್ರಹಿಸಿಕೊಳ್ಳುವರು. ಆಗ ನೀತಿವಂತಿಕೆಯನ್ನು ಪ್ರೀತಿಸುವವರು ಆತನಿಗೆ ವಿಧೇಯರಾಗುವುದರಲ್ಲಿ ಉಲ್ಲಾಸಪಡುವರು ಮತ್ತು ಆತನ ನ್ಯಾಯವಾದ ಅಗತ್ಯತೆಗೆ ತಕ್ಕಂತೆ ತಮ್ಮನ್ನು ದೃಢಪಡಿಸಿಕೊಳ್ಳುವರು.

ಅದುವೇ ವಂಚನೆ ಅಥವಾ ಬಲವಂತವಾಗಿ, ಕೆಲವೊಮ್ಮೆ ನ್ಯಾಯದ ಹೆಸರಿನಲ್ಲಿ ಮತ್ತು ಅದರ ಅಧಿಕಾರ ಮುದ್ರೆಯ ಅಡಿಯಲ್ಲಿ ಅನ್ಯಾಯವಾಗಿ ಇತರರ ಹಕ್ಕುಗಳನ್ನೂ, ಆಸ್ತಿಯನ್ನೂ ವಶಪಡಿಸಿಕೊಂಡಿರುವ ಎಲ್ಲರ ಮೇಲೆಯೂ ಮುಯ್ಯಿ ತೀರಿಸುವ ಸಮಯವಾಗಿದೆ. ಈ ಮುಯ್ಯಿ ತೀರಿಸುವ ಕೆಲಸವು ನಾವು ಕಂಡುಕೊಂಡಂತೆ ನಮ್ಮ ಕರ್ತನ ಮುಖಾಂತರ ಬರುವದು. ಇದು ಜನಸಮೂಹಕ್ಕೆ ಜಾಗ್ರತೆಗೊಳಿಸುವುದರ ಮೂಲಕ ಕರ್ತನು ಪ್ರತಿಕಾರ ಸಲ್ಲಿಸುತ್ತಾನೆ. ಅವರ ದುರವಸ್ಥೆಯಲ್ಲಿಯೂ, ಒಂದು ಡಾಲರನ್ನು, ಒಂದು ಎಕರೆಯನ್ನೋ ಅಥವಾ ಬಹಳಕಾಲದಿಂದ ಅನುಭವಿಸುತ್ತಾ ಬಂದಿರುವ ಯಾವ ತಕರಾರೂ ಇಲ್ಲದ ಹಕ್ಕು ಅಥವಾ ಘನತೆಯಿಂದ ದೂರಾಗುವ ಇಚ್ಛೆಯಿಲ್ಲದಿರುತ್ತಾರೆ. ಆದಾಗ್ಯೂ ಮುಯ್ಯಿ ತೀರಿಸುವಿಕೆಯ ಸಮೀಪಿಸುವಿಕೆಯನ್ನು ನೋಡುವಾಗ ತಾವು ಒಬ್ಬರೇ ಬಿದ್ದುಹೋಗುತ್ತೇವೆಂದು ಭಾವಿಸಿ ಅನೇಕರು ತಮ್ಮ ಸ್ವಹಿತಕ್ಕೆ ಒತ್ತಾಸೆಕೊಡಲು ಮತ್ತು ಅದನ್ನು ಕಾಪಾಡಿಕೊಳ್ಳಲು ಅಲ್ಲಿಯವರೆಗೆ ಪ್ರಭಲವಾಗಿರುವ ನಾಗರೀಕ ಸಾಮಾಜಿಕ, ಅಥವಾ ಕ್ರೈಸ್ತ ಧರ್ಮೀಯ ಸಂಸ್ಥೆಯ ಆಶ್ರಯವನ್ನು ಬಯಸುತ್ತಾರೆ. ಆದರೆ ಇವುಗಳು ದೇವರ ರೌದ್ರದ ದಿನದಲ್ಲಿ ಅವರನ್ನು ಬಿಡುಗಡೆಗೊಳಿಸುವುದಿಲ್ಲ. ಸಮೀಪಿಸುತ್ತಿರುವ ತಿಕ್ಕಾಟಗಳು ಮತ್ತು ಮುಯ್ಯಿತೀರಿಸಿಕೊಳ್ಳುವಿಕೆಯು ಈ ಲೋಕದ ಎಲ್ಲಾ ಕುಟುಂಬಗಳನ್ನೂ ಗೋಳಾಟಕ್ಕೊಳಪಡಿಸಲಾಗುವುದು; ಯಾಕೆಂದರೆ ಅದು "ಜನಾಂಗವು ಉಂಟಾದಂದಿನಿಂದ ಸಂಭವಿಸದಂತ ಸಂಕಟಗಳು ಸಂಭವಿಸುವವು" – ಮುಂದೆ ಸಂಭವಿಸುವದೂ ಇಲ್ಲ. ಕರ್ತನು ಈ ಲೋಕವನ್ನೇ ನಡುಗಿಸಲು ಮತ್ತು ಭ್ರಷ್ಟರನ್ನು ನಾಶಪಡಿಸಲು ಎದ್ದು ಬರಲಿರುವ ಕಾರಣ ಅವರು ಗೋಳಾಡುವರು (ಯೆಶಾಯ 2:21); ಆತನ ನ್ಯಾಯತೀರ್ಪುಗಳ ಕಾರಣ ಸ್ವಾಭಾವಿಕವಾಗಿ ತೊಂದರೆಗಳು ಉಂಟಾಗಿವೆ. ಆತನ ನ್ಯಾಯತೀರ್ಪುಗಳೂ, ತೊಂದರೆಗಳೂ ಬಹು ದೂರದವರೆಗೂ ವ್ಯಾಪಿಸಿರುವದರಿಂದ, ಅವರಿಂದ ಯಾರೂ ತಪ್ಪಿಸಿ ಕೊಳ್ಳಲಾಗದು. ಅಂತಿಮವಾಗಿ, ಎಲ್ಲಾ ಕಣ್ಣುಗಳೂ ಬದಲಾವಣೆಯನ್ನು ಗ್ರಹಿಸುವುದು ಮತ್ತು ಕರ್ತನು ಆಳುತ್ತಾನೆಂಬುದನ್ನು ತಿಳುಕೊಳ್ಳುವರು. ಮನುಷ್ಯರು ಸರ್ವಸಮತೆಯ ಆಧಾರದಲ್ಲಿ ಕಾರ್ಯತತ್ಪರರಾದರೆ, ಹಿಂದಿನ ನ್ಯಾಯವೆಂದು ಪರಿಗಣಿಸಿರುವ ಎಲ್ಲಾ ಅನ್ಯಾಯದ ಸವಲತ್ತುಗಳನ್ನು ಗಣನೆಗೆ ತಾರದೇ ಹೋದರೆ ಮತ್ತು ಅವುಗಳನ್ನು ತ್ಯಜಿಸಿದರೆ ಕಾನೂನುಬದ್ಧವಾಗಿದ್ದರೂ ಸಹ ತೊಂದರೆಗಳು ಕಡಿಮೆಯಾಗಬಹುದು. ಇವರಲ್ಲಿರುವ

* ಗ್ರೀಕ್ ಪದವಾದ epi ಎಂಬುದನ್ನು ಇಲ್ಲಿ ಉಪಯೋಗಿಸಲಾಗಿದೆ, ಇದನ್ನು ಸಾಮಾನ್ಯವಾಗಿ On ಎಂಬುದಾಗಿ ತರ್ಜುಮೆಗೊಳಿಸುತ್ತಾರೆ. ಆದರೆ ಅದಕ್ಕೆ Over ಮತ್ತು about ಎಂಬ ಅರ್ಥಗಳೂ ಇವೆ ಮತ್ತು A.V. ಯಲ್ಲಿ (ಅಮೇರಿಕನ್ ಭಾಷಾಂತರ) ಹಾಗೆಯೇ ಭಾಷಾಂತರಿಸಲಾಗಿದೆ. ಆದರೆ ಆಲೋಚನೆ ಎಂದರೆ ಸಂರಕ್ಷಣೆ, ನಾಶನ ಅಲ್ಲ. ಈ ಪರಿಚ್ಛೇಧದ ಸಾಮಾನ್ಯ ದೃಷ್ಟಿಕೋನವಾದ "ದುಷ್ಟ ಜನರು ಅಕ್ಷರಶಃವಾದ ಬೆಟ್ಟಗುಡ್ಡಗಳಿಗೆ 'ನಮ್ಮ ಮೇಲೆ ಬೀಳಿರಿ' ಎಂದು ಪ್ರಾರ್ಥಿಸುವ ನಂಬಿಕೆಯನ್ನು ಮಾತ್ರವೇ ಹೊಂದಿರುತ್ತಾರೆ ಎಂಬುದು ಅಸಂಬದ್ಧ" ಎಂಬುದನ್ನು ಇದು ಬೋಧಿಸುತ್ತದೆ. ಇದರ ನೆರವೇರಿಕೆಯು ಈಗ ಆರಂಭವಾಗಿದೆ; ದೊಡ್ಡವರು, ಐಶ್ವರ್ಯವಂತರು ಮತ್ತು ಕಡಿಮೆ ಬಡವರಲ್ಲದವರು ತೊಂದರೆ ಎಂಬ ಪ್ರಚಂಡ ಮಾರುತ ಬರುವಾಗ ಬೆಟ್ಟ ಗುಡ್ಡಗಳನ್ನು, ಬಂಡೆ, ಗುಹೆಗಳನ್ನು ಬಯಸುತ್ತಾರೆ ಅವರೆಲ್ಲಾ ಒಗ್ಗೂಡುತ್ತಿವೆ. ಯೆಶಾಯ 2:9–21 ಮತ್ತು ಯೆಹೆಜ್ಕೇಲ 7:17–19 ರಲ್ಲಿ ಕಂಡು ಬರುವಂತೆ ಇದನ್ನು ಸಂಪೂರ್ಣವಾಗಿ ತೊಲಗಿಸಬೇಕು.

ಸ್ವಾರ್ಥತೆಯು ಆ ಮಹಾಸಂಕಟ ಕಾಲವು ಬಂದೊದಗಿ ಅವರ ಅಹಂಭಾವವನ್ನು ಮುರಿದು ಮತ್ತು ಕಿತ್ತೊಗೆಯುವ ಕೆಲಸವು ಶಕ್ತಿಶಾಲಿಗಳನ್ನು ನಮ್ರರಾಗಿಸುವ ಮತ್ತು ವಿನೀತರನ್ನು ಮೇಲಕ್ಕೆತ್ತುವದು ಮುಗಿಯುವವರೆಗೂ ಇವೆಲ್ಲವೂ ನಡೆಯುವದಿಲ್ಲ.

ಆದರೆ ಸಂಕಟದ ಮಹಾದಿನವು ಸದ್ಯವೇ ಮುಕ್ತಾಯವಾಗುತ್ತಿದೆ ಎನ್ನುವವರೆಗೆ ಅಲ್ಲ, ಅನ್ಯ ಜನರ ರಾಜ್ಯಗಳು ಪುಡಿಯಾಗಿ ನೆಲಕ್ಕೆ ಬಿದ್ದು ತೆಗೆಯಲ್ಪಡುವವರೆಗೆ ಅಲ್ಲ ಹಿಂದಿನ ಅಧ್ಯಾಯದಲ್ಲಿ ತೋರಿಸಿದಂತೆ ಕ್ರಿ.ಶ. 1915ರ ಮಹಾ ಬಾಬೇಲ್ ಸಂಪೂರ್ಣವಾಗಿ ಪರಾಭವಗೊಂಡು, ಲೋಕದ ಮೇಲಿನ ಅದರ ಪ್ರಭಾವವು ಮುರಿಯಲ್ಪಡುವವರೆಗೆ – ಮಾನವ ಜಾತಿಯ ದೊಡ್ಡ ಜನ ಸಮೂಹವು ಈ ಪ್ರಕರಣದ ಸತ್ಯ ಸ್ಥಿತಿಯನ್ನು ತಿಳುಕೊಳ್ಳುವರು. ಅವರು ಮಹಾಸಂಕಟ ಕಾಲವನ್ನು ಅನುಭವಿಸಿದ ಮೇಲೆ ಅವರಿಗೆ ಕಂಡುಬರುವದೇನೆಂದರೆ ಪ್ರಕಟನೆ 16:14ರ "ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧ" ಪ್ರವಾದನೆಯು ಸಾಂಕೇತಿಕವಾಗಿ ನೆರವೇರಿತೆಂದು ತಿಳಿದುಕೊಳ್ಳುವರು: ಅವರು ಎಷ್ಟರಮಟ್ಟಿಗೆ ದೋಷಗಳಿಗೆ ತಪ್ಪುಗಳಿಗೆ ಸಹಾಯ ಮಾಡಿದ್ದಾರೋ ಅಷ್ಟರಮಟ್ಟಿಗೆ ಲೋಕದ ನೂತನ ಚಕ್ರಾಧಿಪತಿಗೆ ವಿರುದ್ಧವಾಗಿ ಆತನ ಆಜ್ಞೆಗಳಿಗೂ ನಿಯಮಗಳಿಗೂ ಆತನ ನೂತನ ಸಾಮ್ರಾಜ್ಯಕ್ಕೂ ವಿರುದ್ಧವಾಗಿದ್ದರು. ಇನ್ನೊಂದು ಕಡೆ ಅವರ ಭಾಷೆಗಳು, ಲೇಖನಿಗಳು, ಕೈಗಳು, ಪ್ರಭಾವಗಳು ಮತ್ತು ಸಂಪಾದನೆ ಇವುಗಳು ಸರಿಯಾದದಕ್ಕೆ ಮತ್ತು ಯಾವುದಾದರೂ ವಿಷಯದಲ್ಲಿ ಸತ್ಯವಾದುದಕ್ಕೆ ಉಪಯೋಗಿಸಲಾಗುತ್ತದೆ, ಅವರು ಅಷ್ಟರಮಟ್ಟಿಗೆ ಕರ್ತನ ಕಡೆಯಲ್ಲಿ ಹೋರಾಡುತ್ತಾರೆ.

ಕೆಲವರು ಸಂಕಟದ ಮಹತ್ವವನ್ನು ಇತರರಿಗಿಂತ ಹೆಚ್ಚು ತ್ವರಿತವಾಗಿ ಕಲಿತುಕೊಳ್ಳುತ್ತಾರೆ, ಯಾಕೆಂದರೆ ಅವರು ಕಲಿಯುವ ಮನಸ್ಸುಳ್ಳವರು (teachable) ಮತ್ತು ಎಲ್ಲಾ ಸಂಕಟಗಳ ಸಮಯದಲ್ಲಿ ಅದರ ಸಮರ್ಥನೆಗೆ ಸಾಕ್ಷಿಗಳಾಗಿ ಈ ಲೋಕದಲ್ಲಿ ಇರುತ್ತಾರೆ, ಕ್ರಿಸ್ತನ ಪ್ರತ್ಯಕ್ಷತೆಯನ್ನು ಮತ್ತು ಆತನ ರಾಜ್ಯದ ಸ್ಥಾಪನೆಯನ್ನು ಘೋಷಿಸುತ್ತಾರೆ. ದೇವರ ರಾಜ್ಯಕ್ಕೆ ವಿರುದ್ಧವಾಗಿರುವ ಇದು ಅಂಧಕಾರದ ಶಕ್ತಿಗಳಾಗಿದ್ದು ಸಮಾಜವನ್ನು ತೊಂದರೆಪಡಿಸುವ ಮತ್ತು ಅಲುಗಾಡಿಸಿ ಕೆಳಗೆ ಬೀಳಿಸುವದಾಗಿದೆ. ಯಾರು ಸತ್ಯ ಮತ್ತು ನೀತಿವಂತಿಕೆಯನ್ನು ವಿರೋಧಿಸುತ್ತಾರೋ ಅವರು ನೂತನ ರಾಜ್ಯದ ಶತ್ರುಗಳು, ಥಕ್ಕನೆ ಶರಣಾಗದ ಹೊರತು ಅವರು ಅವಮಾನಕರ ಅಪಜಯವನ್ನು ಅನುಭವಿಸುತ್ತಾರೆ ಎಂಬುದನ್ನು ತೋರಿಸಿಕೊಡುತ್ತಾರೆ. ಆದಾಗ್ಯೂ ಸಮೂಹಗಳು ನೂತನ ರಾಜ್ಯದ ಕಬ್ಬಿಣದ ಆಡಳಿತಕ್ಕೆ ನಮ್ರರಾಗದೆ, ವಿವೇಕವುಳ್ಳ ಸಮಾಲೋಚನೆಗಳಿಗೆ ಮೊದಲಿನಂತೆಯೇ ಕಿವಿಗೊಡುವುದಿಲ್ಲ. ಕಟ್ಟಕಡೆಯಲ್ಲಿ ಮಾತ್ರವೇ ಅವರು ತಮ್ಮ ಕ್ರಮದ ಅವಿವೇಕದ ಪಥವನ್ನು ಗ್ರಹಿಸುತ್ತಾರೆ.

ಸತ್ಯಬೋಧಕನೂ, ಬೆಳಕನ್ನು ಕೊಡುವಾತನು (ಮತ್ತಾಯ5:14), ಕ್ರಿಸ್ತನ ದೇಹವಾದ ಸತ್ಯಸಭೆಯು, ಕರ್ತನ ಪ್ರತ್ಯಕ್ಷತೆಯನ್ನು, ಈ ಲೋಕವು ಅರಿತುಕೊಳ್ಳುವಂತೆ ಆತನ ಕ್ರೋಧ ಮತ್ತು ಶಕ್ತಿಯ ಪ್ರಕಟನೆಯ ಮೂಲಕವೇ ಗ್ರಹಿಸುವಂತೆ ಅವರನ್ನು ಅಂಧಕಾರದಲ್ಲಿ ಬಿಡಲ್ಪಡುವುದಿಲ್ಲ. ಯಾಕೆಂದರೆ ಆಕೆಯ (ಸಭೆ) ಜ್ಞಾನೋದಯಕ್ಕೆ ವಿಶೇಷವಾದ ಅವಕಾಶ ಒದಗಿಸಲಾಗಿದೆ. ಕತ್ತಲೆಯಲ್ಲಿ ಪ್ರಕಾಶಿಸುವ ಪ್ರವಾದನೆಯ ಖಚಿತವಾದ ಮಾತಿನಿಂದ ಆಕೆಗೆ (ಸಭೆಗೆ) ಸುನಿಶ್ಚಿತವಾಗಿ ಏನನ್ನು ನಿರೀಕ್ಷಿಸಬಹುದೆಂದು ತಿಳಿಸಲಾಗಿದೆ (2 ಪೇತ್ರ 1:19). ಪ್ರವಾದನೆಯ ಮಾತುಗಳು ಆಕೆಯು ನಿರುತ್ಸಾಹದಿಂದ ರಕ್ಷಿಸಲ್ಪಡುವುದು ಮಾತ್ರವಲ್ಲ, ಸಂಕಟದ ದಿನದಲ್ಲಿ ಪ್ರಬಲವಾಗಿರುವ ಆಕ್ರಮಣಗಳನ್ನು, ಬಲೆಗಳನ್ನು ಮತ್ತು ಅಡಚಣೆಗಳನ್ನು ಗೆದ್ದುಕೊಳ್ಳುವಂತೆ ಮತ್ತು ಆ ರೀತಿಯಲ್ಲಿ ಕರ್ತನಿಗೆ ಒಪ್ಪಿಗೆಯಾಗಿ ನಿಲ್ಲುವಂತೆ ಮಾಡುತ್ತದೆ. ಹಾಗೂ ಆಕೆಯು ದೀಪ ಹಿಡಿಯುವವಳೂ, ಲೋಕದ ಶಿಕ್ಷಕಿಯೂ ಆಗಿದ್ದಾಳೆ. ಹೀಗೆ ಸಭೆಯು ಈ ಲೋಕಕ್ಕೆ ಸಂಕಟದ ಕಾರಣಗಳ ಬಗ್ಗೆ ತಿಳಿಹೇಳಲು, ನೂತನ ಅರಸನ ಪ್ರತ್ಯಕ್ಷತೆಯನ್ನು ಸಾರಿ ತಿಳಿಸಲು, ನೂತನ ದೈವೇಚ್ಛೆಯ ಕಾರ್ಯನೀತಿ, ಯೋಜನೆ ಮತ್ತು ಉದ್ದೇಶಗಳ ಬಗ್ಗೆ ಪ್ರಕಟಿಸಲು ಮತ್ತು ಈ ಸಂಗತಿಗಳ ದೃಷ್ಟಿಯಲ್ಲಿ ಉತ್ತಮ ಕ್ರಮವನ್ನು ಅನುಸರಿಸುವಂತೆ ಬೋಧಿಸಲು ಶಕ್ತವಾಗಿದೆ. ಆದರೆ ಕಷ್ಟದ ಮೂಲಕವೇ ಅಧೀನತೆಯ ಪಾಠವನ್ನು ಬಲವಂತಗೊಳಿಸದ ಹೊರತು ಜನರು ಈ ಬೋಧನೆಗಳಿಗೆ ಕಿವಿಗೊಡುವುದಿಲ್ಲ, ಅದು ಆಗ ಅವರಿಗೆ ಪಾಠವೊಂದನ್ನು ಕಲಿಯಲು ಸಹಾಯಮಾಡುತ್ತದೆ. ಇದು ನಿಯೋಗದ 'ಪಾದ' ಅಥವಾ ಸಭೆಯ ಕಡೆಯ ಸದಸ್ಯರುಗಳು ಎನಿಸಿಕೊಂಡು ಪರ್ವತಗಳ (ರಾಜ್ಯಗಳ) ಮೇಲೆ 'ಕ್ರಿಸ್ತನ ರಾಜ್ಯವು ಪ್ರಾರಂಭವಾಗಿದೆ' ಎಂದು ಸಾರಿ ತಿಳಿಸುತ್ತಾರೆ – ಯೆಶಾಯ 52:7.

### ವಿರುದ್ಧವಾದ ಭಿನ್ನಾಭಿಪ್ರಾಯಗಳುಂಟೆಂದು ಕಂಡುಬರುವ ಪವಿತ್ರ ಬರಹಗಳು

### Seemingly Conflicting Scriptures

ಕರ್ತನ ಹಿಂದಿರುಗೋಣದ ರೀತಿಯ ಬಗ್ಗೆ ಸತ್ಯವೇದದಲ್ಲಿ ಕೆಲವೊಂದು ಹೇಳಿಕೆಗಳಿದ್ದು, ಅವುಗಳು ವಿಮರ್ಶಾತ್ಮಕವಾಗಿ ಪರೀಕ್ಷಿಸುವವರಿಗೆ ಒಂದಕ್ಕೊಂದು ವ್ಯತಿರಿಕ್ತವಾಗಿದೆ ಎಂಬುದಾಗಿ ಕಂಡುಬರುತ್ತವೆ.

ನಿಸ್ಸೇಂದೇಹವಾಗಿ ಅವುಗಳು ಶತಮಾನಗಳ ಕಾಲದಿಂದಲೂ ಅರ್ಥಮಾಡಿಕೊಳ್ಳುವ ಸೂಕ್ತಕಾಲ ಬರುವವರೆಗೆ ಅಲ್ಲದೇ ಯಾರಿಗಾಗಿ ಉದ್ದೇಶಿಸಿದೆಯೋ ಅಂಥಾಃ ಪ್ರತಿಷ್ಠಿತ ವಿಶೇಷ ವರ್ಗದವರನ್ನು ಹೊರತುಪಡಿಸಿ ಬೇರೆ ಎಲ್ಲರಿಂದಲೂ ಸತ್ಯವನ್ನು ಗೋಪ್ಯವಾಗಿಡುವ ಕೆಲಸವನ್ನು ಮಾಡುತ್ತಿವೆ.

ಉದಾಹರಣೆಗೆ, ನಮ್ಮ ಕರ್ತನು "ಇಗೋ, ಕಳ್ಳನು ಬರುವಂತೆ ಬರುತ್ತೇನೆ" (ಪ್ರಕಟನೆ 16:15) ಎಂತಲೂ "ನೋಹನ ದಿವಸಗಳಲ್ಲಿ ನಡೆದ ಹಾಗೆಯೇ ಮನುಷ್ಯಕುಮಾರನ ದಿವಸಗಳಲ್ಲಿಯೂ (ಆತನ ಪ್ರಸನ್ನತೆಯ ದಿನಗಳಲ್ಲಿಯೂ) ನಡೆಯುವುದು. ಅವರು ಊಟಮಾಡುತ್ತಿದ್ದರು, ಕುಡಿಯುತ್ತಿದ್ದರು, ಮದುವೆ ಮಾಡಿಕೊಳ್ಳುತ್ತಿದ್ದರು, ಮದುವೆ ಮಾಡಿಕೊಡುತ್ತಿದ್ದರು. ಆಗ ಜಲಪ್ರಳಯವು ಬಂದು ಎಲ್ಲರನ್ನೂ ನಾಶಮಾಡಿತು)... (ಲೂಕ 17:26,27,20), ಹಾಗೂ "ಹೇಗೆಂದರೆ, ಜಲಪ್ರಳಯದ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನೂ ಬಡಕೊಂಡು ಹೋಗುವ ತನಕ ಏನೂ ತಿಳಿಯದೇ ಇದ್ದರಲ್ಲಾ, ಹಾಗೆಯೇ ಮನುಷ್ಯಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿ ಇರುವುದು (ಮತ್ತಾಯ 24: 38,39) ಎಂದಿದ್ದಾನೆ. ಮತ್ತೆ ಕ್ರಿಸ್ತನನ್ನು ಫರಿಸಾಯರು ದೇವರ ರಾಜ್ಯವು ಯಾವಾಗ ಬರುವುದೆಂದು ಪ್ರಶ್ನಿಸಿದಾಗ ಆತನು ಅವರಿಗೆ ಉತ್ತರಿಸುವವನಾಗಿ "ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥಾದ್ದಲ್ಲ, ಇಗೋ ಇಲ್ಲಿ ಇದೆ, ಇಗೋ ಅಲ್ಲಿ ಅದೆ ಎಂದು ಹೇಳಲಿಕ್ಕಾಗದು" (ಬಾಹ್ಯ ತೋರಿಕೆಯಿಂದ ಅಲ್ಲ) ಎಂದು ಹೇಳುತ್ತಾನೆ (ಪ್ರಕಟನೆ 16:15; ಲೂಕ 17:26,27,20; ಮತ್ತಾಯ 24:38,39).

ಈ ವಾಕ್ಯಭಾಗಗಳು ಕ್ರಿಸ್ತನ ಬರುವಿಕೆಯ ರೀತಿಯ ಬಗ್ಗೆ ನಮಗೆ ವಿವರಿಸುತ್ತವೆ. ಆತನು ಅದೃಶ್ಯನಾಗಿ ಉಪಸ್ಥಿತನಾಗುತ್ತಾನೆ, ಈ ಲೋಕವು ಕೆಲವು ಸಮಯದವರೆಗೆ ಅರ್ಥ ಮಾಡಿಕೊಳ್ಳದಂತೆ ತನ್ನ ಕಾರ್ಯವನ್ನೆಸಗುತ್ತಾನೆ ಎಂದು ಅವುಗಳು ತೋರಿಸಿ ಕೊಡುತ್ತವೆ. ಆದುದರಿಂದ ಆತನ ಆಗಮನವು ಶಾಂತವಾದ ರೀತಿಯಲ್ಲಿ, ಯಾರಿಗೂ ಕಾಣದಂತೆ ಮತ್ತು ಸಂಪೂರ್ಣವಾಗಿ ಈ ಲೋಕಕ್ಕೆ ಅರಿವಿಲ್ಲದಂತೆ, ಕಳ್ಳನು ಬರುವಂತೆ ಗಮನವನ್ನು ಸೆಳೆಯುವ ಯಾವುದೇ ಸದ್ದಿಲ್ಲದೇ, ಯಾವುದೇ ಪ್ರದರ್ಶನಗಳಿಲ್ಲದೆ ನಡೆಯುವುದಾಗಿದೆ. ನೋಹನ ಕಾಲದಲ್ಲಿ ಈ ಲೋಕದವರು ತಮ್ಮ ಎಂದಿನ ಮಾಮೂಲಿ ಕಾರ್ಯಗಳಲ್ಲಿ ತೊಡಗಿದ್ದರು, ಗಲಿಬಿಲಿಗೊಂಡಿರಲೇ ಇಲ್ಲ. ಅವರಿಗೆ ಪ್ರಳಯ ಬರಲಿರುವ ಬಗ್ಗೆ ನೋಹನ ಬೋಧನೆಯಲ್ಲಿ ಕಿಂಚಿತ್ತೂ ನಂಬಿಕೆ ಇರಲಿಲ್ಲ. ಅದರಂತೆ, ಕರ್ತನ ಬರೋಣದ ಮೊದಲ ಭಾಗದಲ್ಲಿ, ಲೋಕದವರಿಗೆ ಆತನ ಪ್ರತ್ಯಕ್ಷತೆಯ ಬಗ್ಗೆ, ಸಂಕಟಗಳು ಸಮೀಪಿಸುತ್ತಿರುವ ಬಗ್ಗೆ ಮಾಡುವ ಪ್ರಕಟನೆಗಳ ಮೇಲೆ ಯಾವುದೇ ವಿಶ್ವಾಸವಿಲ್ಲದೆ, ಅಂಥಾಃ ಬೋಧನೆಗಳಿಗೆ ಕಿವಿಗೊಡದೆ ಅವರು ಎಂದಿನಂತೆ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ, ಮಹಾಸಂಕಟದ ಪ್ರವಾಹದಲ್ಲಿ ಈ ಲೋಕವು ಕುಗ್ಗಿಹೋಗುತ್ತದೆ, ಗತಿಸಿಹೋಗುತ್ತದೆ. ಆಕಾಶದ ಕೆಳಗೆ ದೇವರ ರಾಜ್ಯದ ಸಂಪೂರ್ಣ ಸ್ಥಾಪನೆಯ ಕ್ರಮಗಳ ಸಿದ್ಧತೆಗಳುಂಟಾಗುತ್ತವೆ. "ನೋಹನ ದಿವಸಗಳಲ್ಲಿ ನಡೆದ ಹಾಗೆಯೇ ಮನುಷ್ಯಕುಮಾರನ ದಿವಸಗಳಲ್ಲಿಯೂ (ಆತನ ಪ್ರತ್ಯಕ್ಷತೆಯ ದಿನಗಳಲ್ಲಿಯೂ) ನಡೆಯುವುದು''.

ಮತ್ತೊಂದೆಡೆಯಲ್ಲಿ, ಕೆಲವೊಂದು ಪವಿತ್ರ ಬರಹಗಳು ಇವುಗಳೊಂದಿಗೆ ಒಂದಕ್ಕೊಂದು ವಿರುದ್ಧವಾದ ಭಿನ್ನಾಭಿಪ್ರಾಯ ಹೊಂದಿರುವಂತೆ ನಮಗೆ ಮೊದಲ ದೃಷ್ಟಿಯಲ್ಲಿ ಕಂಡುಬರುತ್ತದೆ. ಉದಾಹರಣೆಗೆ: "ಕರ್ತನು ತಾನೇ ಆಜ್ಞಾಘೋಷದೊಡನೆಯೂ, ಪ್ರಧಾನದೂತನ ಶಬ್ದದೊಡನೆಯೂ, ದೇವರ ತುತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು (1 ಥೆಸ. 4:16). "ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರೊಂದಿಗೆ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯುದವರಿಗೂ, ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು" (2 ಥೆಸ. 1:7,8). ''ಆಗ ಮನುಷ್ಯಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವುದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆ ಬಡಕೊಳ್ಳುವರು ಮತ್ತು ಮನುಷ್ಯಕುಮಾರನು ಬಲದಿಂದಲೂ ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವುದನ್ನು ಕಾಣುವರು'' "ಇಗೋ, ಮೇಘಗಳೊಡನೆ ಬರುತ್ತಾನೆ, ಎಲ್ಲರ ಕಣ್ಣುಗಳು ಆತನನ್ನು ಕಾಣುವುವು; ಆತನನ್ನು ಇರಿದವರೂ ಸಹ ಕಾಣುವರು; ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆಬಡಕೊಳ್ಳುವರು. ಹೌದು ಹಾಗೆಯೇ ಆಗುವುದು, ಆಮೆನ್" (ಮತ್ತಾಯ 24:30, ಪ್ರಕಟನೆ 1:7).

ಸತ್ಯವನ್ನು ಹುಡುಕುವವರಾಗಿರುವ ನಮಗೆ, ಈ ಪರಿಚ್ಛೇಧಗಳ ದೃಷ್ಟಿಕೋನದಲ್ಲಿ, ಅದರ ಹೆಚ್ಚಿನ ಸಂಗತಿಗಳನ್ನು ನಾವು ಆಯ್ದುಕೊಳ್ಳಲು ಒಲವು ತೋರಿಸುವೆವೆಂದೂ ಮತ್ತು ಉಳಿದವುಗಳನ್ನು ಉದಾಸೀನ ಮಾಡುವೆವೆಂದೂ ಹೇಳುವಂತೆ ಮಾಡುವುದಿಲ್ಲ. ಸತ್ಯವೇದದ ಪ್ರತಿಯೊಂದು ಹೇಳಿಕೆಗಳೂ ಒಂದು ತಾರ್ಕಿಕ ಪ್ರತಿನಿಧಿತ್ವವನ್ನು ಹೊಂದಿರುವಾಗ ಆ ಸಂಗತಿಯ

ದೃಷ್ಟಿಕೋನ ದೊರೆಯುವವರೆಗೂ ನಮಗೆ ಆ ವಿಷಯದ ಸತ್ಯವು ತಿಳಿದಿದೆ ಎಂಬುದು ನಿಶ್ಚಯವಲ್ಲ. ದೇವರ ಒಂದು ಹೇಳಿಕೆ ಎಷ್ಟು ಸತ್ಯವಾಗಿದೆ ಹಾಗೂ ನಂಬಿಕೆಯ ಬುಡದಲ್ಲಿ ದೃಢವಾಗಿದೆಯೋ ಅಷ್ಟೇ ಪ್ರಮಾಣದಲ್ಲಿ ಆತನ ನೂರು ಹೇಳಿಕೆಗಳೂ ಇರುತ್ತವೆ. ಏಕಪಕ್ಷೀಯ ಅರ್ಥವಿವರಣೆಯ ತತ್ವದ ಮೇಲೆ ಆತುಕೊಂಡು ಯಾವುದೋ ತೀರ್ಮಾನಕ್ಕೆ ಬಂದು ಅದನ್ನು ಅಳವಡಿಸುವದಕ್ಕಿಂತ ಮತ್ತು ಆ ಮೂಲಕ ನಮ್ಮನ್ನೂ, ಇತರರನ್ನೂ ಮೋಸಪಡಿಸಿಕೊಳ್ಳುವುದಕ್ಕಿಂತ ಒಂದು ಸಾಮರಸ್ಯಕರ ತಿಳುವಳಿಕೆಯನ್ನು ಶೋಧಿಸುವುದು ಹೆಚ್ಚು ಬುದ್ದಿವಂತಿಕೆಯಾಗಿದೆ.

ಕ್ರೈಸ್ತರು ಸಾಮಾನ್ಯವಾಗಿ ಈ ಹೇಳಿಕೆಗಳನ್ನು ಸಾಮರಸ್ಯಗೊಳಿಸಲು ಯಾವುದೇ ಪ್ರಯತ್ನ ಮಾಡುವುದಿಲ್ಲ, ಆದುದರಿಂದ ಅವರ ಕಲ್ಪನೆಗಳು ಏಕಪಕ್ಷೀಯವಾದವುಗಳೂ ಮಾತ್ರವಲ್ಲ, ತಪ್ಪಾದವುಗಳೂ ಆಗಿವೆ. ಕಡೆಯ ಹೇಳಿಕೆಗಳ ಗುಂಪು ಮೊದಲನೆಯವು ಗಳಷ್ಟೇ ಸಕಾರಾತ್ಮಕವಾದವುಗಳಾಗಿವೆ ಮತ್ತು ಅವುಗಳು ಲಕ್ಷ್ಯವಿಟ್ಟು ನೋಡದ, ಕಳ್ಳನ ರೀತಿಯ ಕರ್ತನ ಬರೋಣ ಮತ್ತು ಉಪಸ್ಥಿತಿಯ ವ್ಯತಿರಿಕ್ತವಾದವುಗಳನ್ನು ಸುವ್ಯಕ್ತವಾಗಿ ಬೋಧಿಸುತ್ತವೆ. ಇದರೊಂದಿಗೆ ಆತನ ಬರೋಣದ ಬಗ್ಗೆ ನಾವು ಇತರೆ ಎರಡು ಉದಾಹರಣೆಗಳನ್ನು ಉಲ್ಲೇಖಿಸುತ್ತೇವೆ. "ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು'' (ಅ.ಕೃ. 1:11)'. "ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೆಯೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವುದು" (ಮತ್ತಾಯ 24:27). ನಿಜವಾದ ತೀರ್ಮಾನಕ್ಕೆ ಬರುವ ಮೊದಲು ಇದಕ್ಕೂ ಸೂಕ್ತ ಪ್ರಾಮುಖ್ಯತೆ ನೀಡುವ ಅಗತ್ಯವಿದೆ.

ಈ ಪ್ರಸ್ತಾಪದ ಬಗ್ಗೆ ನಮ್ಮ ಪರೀಕ್ಷೆಯಲ್ಲಿ ನಾವು ಗಮನಿಸಬೇಕಾದುದೇನೆಂದರೆ, ನಮ್ಮ ಕರ್ತನು ಸತ್ಯವಾಗಿ ತನ್ನ ರಾಜ್ಯವು ಯಾವುದೇ ಬಾಹ್ಯ ತೋರಿಕೆಗಳಿಲ್ಲದೇ ಸ್ಥಾಪಿತವಾಗುತ್ತದೆ ಎಂದು ಹೇಳುವಾಗಲೂ, ಆತನ ಬರುವಿಕೆ, ಆತನ ಪ್ರಸನ್ನತೆ ಕಳ್ಳನಂತೆ ಇರುವುದು ಎಂದು ಹೇಳುವಾಗಲೂ ಅವುಗಳನ್ನು ಗ್ರಹಿಸಿ ತಿಳಿದುಕೊಳ್ಳುವಂತೆ ನಾವು ನಿಕಟ ಜಾಗರೂಕತೆಯಿಂದ ನೋಡಬೇಕಾಗುತ್ತದೆ. ಮೇಲಿನ ಎಲ್ಲಾ ವಾಕ್ಯಭಾಗಗಳೂ ಬಾಹ್ಯವಾದ, ಕಣ್ಣಿಗೆ ಕಾಣಿಸುವ ಪುರಾವೆಗಳಾಗಿ ಹೇಳಲ್ಪಟ್ಟಿವೆ ಮತ್ತು ಆತನು ಹೋದ ರೀತಿಯಲ್ಲಿಯೇ ಬರುತ್ತಾನೆ ಎಂಬುದನ್ನು ಹೊರತುಪಡಿಸಿ ಬೇರೆ ಎಲ್ಲವೂ ರೂಪಕಾತ್ಮಕವಾದ ಭಾಷೆಯಲ್ಲಿವೆ. ಸಾಂಕೇತಿಕ ಗುಣಲಕ್ಷಣಗಳನ್ನು ಗುರುತಿಸುವಾಗ ಸಾಂಕೇತಿಕವಾದ ಹೇಳಿಕೆಯ ಅರ್ಥ ವಿವರಣೆಯು ಸಾಧಾರಣವಾಗಿ ಅಕ್ಷರಶಃ ಹೇಳಿಕೆಯಾದ ಭಾಗಬೇಕು. ಅಕ್ಷರಶಃವಾದ ಅರ್ಥ ವಿವರಣೆಗಳು ವಿವೇಚನೆಗೆ ಹಾನಿಯನ್ನುಂಟು ಮಾಡುವಾಗಲೆಲ್ಲಾ ಮತ್ತು ಪರಿಚ್ಛೇದವನ್ನು ಪರಿಶುದ್ಧ ಬರಹಗಳ ಸರಳ ಹೇಳಿಕೆಗಳಿಗೆ ವಿರೋಧವಾಗಿ ಇಡಲ್ಪಡುತ್ತದೆಯೋ ಅಂಥಾಃ ಪರಿಚ್ಛೇಧಗಳನ್ನು ರೂಪಕಾತ್ಮಕವಾದವುಗಳೆಂದು ಪರಿಗಣಿಸತಕ್ಕದ್ದು. ಮತ್ತು ಅದರ ಅರ್ಥವಿವರಣೆಯು ಒಂದು ಸಂಕೇತವಾಗಿ ಸರಳವಾದ ಮತ್ತು ಅಕ್ಷರಶಃವಾದ ಪರಿಚ್ಛೇಧಗಳಿಗೆ ಸಾಮರಸ್ಯವಿರುವಂತೆ ಮತ್ತು ಪ್ರಕಟವಾಗಿರುವ ಯೋಜನೆಗೆ ತಕ್ಕಂತೆ ಸಾಮಾನ್ಯ ಗುಣಲಕ್ಷಣ ಮತ್ತು ಉದ್ದೇಶವಿರುವಂತೆ ಹುಡುಕಬೇಕು. ಈ ಪ್ರಕರಣದಲ್ಲಿ ಈ ರೀತಿಯಾಗಿ ಸಂಕೇತಗಳನ್ನು ಗುರುತಿಸಿ ಮತ್ತು ಅವುಗಳ ಅರ್ಥ ವಿವರಣೆ ನೀಡುವುದರಿಂದ ಎಲ್ಲಾ ಹೇಳಿಕೆಗಳ ಬಗ್ಗೆ ಒಂದು ಸುಂದರವಾದ ಸಾಮರಸ್ಯವು ಪ್ರಕಟಗೊಳ್ಳುತ್ತದೆ. ಅವುಗಳು ಯಾವ ರೀತಿಯಲ್ಲಿ ಸಮರ್ಪಕವಾಗಿ ಸಾಂಕೇತಿಕವಲ್ಲದ ಹೇಳಿಕೆಗಳೊಂದಿಗೆ ಒಪ್ಪಿಗೆಯಾಗುತ್ತವೆ ಎಂಬುದನ್ನು ನಾವೀಗ ಪರೀಕ್ಷಿಸೋಣ.

(ಅ) "ಕರ್ತನು ತಾನೇ ಆಜ್ಞಾಘೋಷದೊಡನೆಯೂ, ಪ್ರಧಾನ ದೂತನ ಶಬ್ದದೊಡನೆಯೂ, ದೇವರ ತುತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು" (1 ಥೆಸ. 4:16). ಇಲ್ಲಿ ಹೇಳಲ್ಪಟ್ಟಿರುವ ಘೋಷ ಮತ್ತು ತುತ್ತೂರಿ ಪ್ರಕಟನೆ 11:15–19ರಲ್ಲಿರುವ ಚಿತ್ರಣದೊಂದಿಗೆ ಹೊಂದಾಣಿಕೆಯಾಗುತ್ತದೆ. "ಏಳನೆಯ ದೇವದೂತನು ತುತೂರಿಯನ್ನೂದಿದನು. ಆಗ ಪರಲೋಕದಲ್ಲಿ ಮಹಾಶಬ್ದಗಳುಂಟಾಗಿ – ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನು ಅಭಿಷೇಕಿಸಿದವನಿಗೂ ಉಂಟಾಯಿತು; ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನು ಆಳುವನು ..... ಜನಾಂಗಗಳು ಕೋಪಿಸಿಕೊಂಡವು, ನಿನ್ನ ಕೋಪವು ಪ್ರಕಟವಾಯಿತು, ಸತ್ತವರು ತೀರ್ಪುಹೊಂದುವ ಸಮಯವು ಬಂದದೆ" ಇತ್ಯಾದಿ. ದಾನಿಯೇಲನ ಪ್ರವಾದನೆಯಲ್ಲಿಯೂ ಇದೇ ಪ್ರಸ್ತಾಪವನ್ನು ಉಲ್ಲೇಖಿಸಲಾಗಿದೆ – "ನಿನ್ನ ಜನರ ಪಕ್ಷವನ್ನು ಹಿಡಿದಿರುವ ಮಹಾಪಾಲಕನಾದ ಮಿಕಾಯೇಲನು (ಕ್ರಿಸ್ತನು) ಆ ಕಾಲದಲ್ಲಿ ಏಳುವನು; ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಸಂಭವಿಸದಂಥ ಸಂಕಟವು ಸಂಭವಿಸುವುದು ... ದೂಳಿನ ನೆಲದೊಳಗೆ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನೆ ತಿರಸ್ಕಾರಗಳನ್ನು ಅನುಭವಿಸುವರು" (ದಾನಿಯೇಲ 12: 1–2). ಪೌಲನು ಮಹಾಘೋಷಗಳ, ತುತ್ತೂರಿ ಧ್ವನಿಯ ಬಗ್ಗೆ ತನ್ನ ಪ್ರಸ್ತಾಪವನ್ನು ಸೇರಿಸುವವನಾಗಿ "ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು" ಎಂದಿದ್ದಾನೆ. 2 ತಿಮೋ. 4:1 ರಲ್ಲಿ "ಕರ್ತನು ಜೀವಿಸುವವರಿಗೂ, ಸತ್ತವರಿಗೂ ನ್ಯಾಯ ತೀರಿಸುವುದಕ್ಕೆ ಬರುತ್ತಾನೆ" ಎಂದು

ಹೇಳುತ್ತಾನೆ. ಮೇಲೆ ಹೇಳಿರುವಂತೆ "ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಸಂಭವಿಸದಂಥ ಸಂಕಟವು ಸಂಭವಿಸುವುದು" (ದಾನಿಯೇಲ 12:1) ಎಂದು ದಾನಿಯೇಲನು ಪ್ರವಾದಿಸಿದ್ದಾನೆ.

ಪೌಲ, ಯೋಹಾನ ಮತ್ತು ದಾನಿಯೇಲ ಈ ಮೂವರೂ ವಿಶದವಾಗಿ ಅದೇ ಸಮಯವನ್ನು ಅಂದರೆ ಕರ್ತನ ಪ್ರಸನ್ನತೆಯ ಮತ್ತು ಮಹಾ ಸಂಕಟಗಳ ಮಧ್ಯದಲ್ಲಿ ಆತನ ರಾಜ್ಯದ ಸ್ಥಾಪನೆಯ ಸಮಯವನ್ನೇ ಮತ್ತು ಅದರ ಹಿಂದಿನ ಮತ್ತು ಮುಂದಿನ ಘಟನೆಗಳನ್ನು ಉಲ್ಲೇಖಿಸುವವರಾಗಿದ್ದಾರೆ. ಪ್ರತಿಯೊಬ್ಬ ಬರಹಗಾರ ನಿಂದಲೂ ಮಿಕಾಯೇಲನ ಏಳುವಿಕೆಯ, ಮಹಾಘೋಷ ಮತ್ತು ತುತ್ತೂರಿಯ ಧ್ವನಿ ಇವುಗಳ ಒಂದೇ ಫಲಿತಾಂಶವು ಅಂದರೆ ಜನಾಂಗಗಳ ಮೇಲೆ ರೌದ್ರ ಮತ್ತು ಸಂಕಟದ ಹಾಗೂ ಸತ್ತವರ ಪುನರುತ್ಥಾನ ಇವುಗಳು ಕಂಡುಬರುತ್ತವೆ. ನಂತರದಲ್ಲಿ ಉಪಯೋಗಿಸಿರುವ ಚಿತ್ರಣವನ್ನು ಗುರುತಿಸಿರಿ:

'ಕರ್ತನು ಆಜ್ಞಾಘೋಷದೊಡನೆ ಬರುತ್ತಾನೆ', ಇಲ್ಲಿ ಉಪಯೋಗಿಸಿರುವ "ಘೋಷಣೆ" ಎಂಬ ಪದವು 'ಅಲೆಸ್ಮಾ' (Keleusma) ಎಂಬ ಗ್ರೀಕ್ ಪದದಿಂದ ತರ್ಜುಮೆಗೊಂಡಿದೆ ಮತ್ತು "ಪ್ರೋತ್ಸಾಹಿಸುವ ಕೂಗು" ಎಂಬುದು ಇದರ ಅರ್ಥ. ಘೋಷಣೆ ಎಂಬುದು ಕಿವಿಗಾಗಿ ವಿನ್ಯಾಸಗೊಂಡ ಒಂದು ಸಂದೇಶವಾಗಿದೆ. ಅದು ಕೆಲವರಿಗಾಗಿ ಮಾತ್ರವಲ್ಲ ಒಂದು ಮಿಶ್ರಿತವಾದ ಮಹಾಸಮೂಹಕ್ಕಾಗಿ ವಿನ್ಯಾಸಗೊಂಡಿದೆ. ಇದು ಸಾಮಾನ್ಯವಾಗಿ ಎಚ್ಚರಿಕೆ ಧ್ವನಿ ಮತ್ತು ಹೆದರಿಸಲು ಇಲ್ಲವೇ ಸಹಾಯಿಸಲು ಅಥವಾ ಪ್ರೋತ್ಸಾಹಿಸಲು ವಿನ್ಯಾಸಗೊಂಡಿದೆ, ಅಥವಾ ಇದು ಸಂದರ್ಭ ಹಾಗೂ ವಿದ್ಯಮಾನಕ್ಕನು ಸಾರವಾಗಿ ಈ ಪರಿಣಾಮವನ್ನು ಒಂದು ವರ್ಗದ ಮೇಲೆ ಉಂಟುಮಾಡಬಹುದು, ಅದೇ ಸಮಯದಲ್ಲಿ ಮತ್ತೊಂದು ವರ್ಗದ ಮೇಲೆ ವ್ಯತಿರಿಕ್ತವಾದ ಪರಿಣಾಮ ವನ್ನುಂಟುಮಾಡಬಹುದು.

ಕಳೆದ ಹದಿನೈದು ವರ್ಷಗಳಲ್ಲಿ ನಡೆದ ಸಂಗತಿಗಳ ವಿಷಯಾಂಶಗಳು ಎದ್ದುಕಾಣುವಂತೆ ಈ ಸಂಕೇತಕ್ಕೆ ಅನುಗುಣವಾಗಿವೆ ಮತ್ತು ಈ ಘೋಷವು ಎಲ್ಲಾ ಜನರಿಗೂ ಲೋಕಾದ್ಯಂತವಾದ ಪ್ರೋತ್ಸಾಹದ ಉದ್ರೇಕದಲ್ಲಿ, ಮತ್ತು ಅವರ ಪರಸ್ಪರ ಸಂಬಂಧಗಳನ್ನು ಪರಿಗಣಿಸುವಲ್ಲಿ, ಅವರುಗಳು ನೆಲೆಗೊಂಡಿರುವ ತತ್ವವಿಧಿಗಳು ಹಾಗೂ ಅವರು ನೆರವೇರಿಸಬೇಕಾದ ಅಂತಿಮ ಗುರಿಯ ಬಗ್ಗೆ ಅವರ ಹಕ್ಕಿನ ಮತ್ತು ಸವಲತ್ತುಗಳ ಜ್ಞಾನಕ್ಕೆ ಎಚ್ಚೆತ್ತುಕೊಳ್ಳುವಂತೆ ಮಾಡುವುದಾಗಿದೆ. ಆದರೆ ಈ ಲೋಕದ ಎದುರು ನಾಗರೀಕ ಜನಾಂಗವು ಈ ಘೋಷವನ್ನು ಕೇಳಿಸಿಕೊಳ್ಳದೆಯೂ, ಅದರಿಂದ ಪ್ರಭಾವಿತವಾಗದೆಯೂ ಇದೆ! ಕಳೆದ ಕೆಲವು ವರ್ಷಗಳಲ್ಲಿ ನಾಗರೀಕ ಲೋಕವು ರಾಜಕೀಯ ಮಿತವ್ಯಯವನ್ನು, ನಾಗರೀಕ ಹಕ್ಕನ್ನು ಹಾಗೂ ಸಾಮಾಜಿಕ ಬಿಡುಗಡೆಯನ್ನು ಇತಿಹಾಸದಲ್ಲಿ ಹಿಂದೆಂದೂ ಇಲ್ಲದಂತೆ ಅಭ್ಯಸಿಸುತ್ತಿದೆ. ಮತ್ತು ಜನರು ಈ ವಿಷಯದ ಅಡಿಪಾಯದವರೆಗೆ ಒಳಹೊಕ್ಕು ಶೋಧಿಸುವಂತೆ ಎಂದೂ ಇಲ್ಲದಂತೆ ಪರಸ್ಪರರನ್ನು ಪ್ರೋತ್ಸಾಹಿಸುತ್ತಿದ್ದಾರೆ ಮತ್ತು ಪ್ರೋತ್ಸಾಹ ಹೊಂದಿಕೊಳ್ಳುತ್ತಿದ್ದಾರೆ. ಈ ಪ್ರೋತ್ಸಾಹದ ಕೂಗು ಮಾನವರಲ್ಲಿ ಹೆಚ್ಚಿನ ಜ್ಞಾನದಿಂದ ಪ್ರಾರಂಭಗೊಂಡಿದ್ದು ಈಗಾಗಲೇ ಪ್ರಪಂಚವನ್ನು ಸುತ್ತುವರಿದಿದೆ, ಮತ್ತು ಇದರ ಪ್ರಭಾವದ ಅಡಿಯಲ್ಲಿ ಜನರು ತಮ್ಮನ್ನು ಗುಂಪುಗೂಳಿಸಿಕೊಳ್ಳುತ್ತಿದ್ದಾರೆ, ಬುದ್ಧಿವಂತ ಹಾಗೂ ಪ್ರತಿಭಾಶಾಲಿ ಜನರಿಂದ ಪ್ರೋತ್ಸಾಹ ಮತ್ತು ಸಹಾಯಗಳನ್ನು ಹೊಂದಿಕೊಳ್ಳುತ್ತಿದ್ದಾರೆ, ನಿಜವಾದ ಮತ್ತು ಕಾಲ್ಪನಿಕ ಹಕ್ಕುಗಳಿಗಾಗಿ ಮತ್ತು ಬಿಡುಗಡೆಗಳಿಗಾಗಿ ಕಾದಾಡುತ್ತಾ ಹೆಣಗುತ್ತಿದ್ದಾರೆ. ಮುಂಚೆಯೇ ತಿಳಿಸಿರುವಂತೆ, ಫಲಿತಾಂಶಗಳನ್ನು ಅವರ ಸಂಘಟನೆಗಳು ಹೆಚ್ಚುತ್ತಾ, ವೃದ್ಧಿಗೊಳ್ಳುತ್ತಿದ್ದು, ಉಪದ್ರವಗಳ ಕಾಲದಲ್ಲಿ ಶಬ್ದವು ಕೋಪಿಸಿಕೊಂಡ ಜನಾಂಗಗಳ ದಂಗೆಯಲ್ಲಿ ಇನ್ನೂ ಹೆಚ್ಚಾಗುತ್ತಾ ಮತ್ತು ದೀರ್ಘವಾಗುತ್ತಾ ಹೋಗುತ್ತಿದೆ. ಈ ಫಲಿತಾಂಶವನ್ನು ಪ್ರವಾದಿಯು ನಕ್ಷೆಯ ರೂಪದಲ್ಲಿ ವಿವರಿಸುವವನಾಗಿ "ಆಹಾ, ಬಹು ಜನಸಮೂಹವಿದ್ದಂತೆ ಗದ್ದಲವು ಬೆಟ್ಟಗಳಲ್ಲಿ (ರಾಜ್ಯಗಳು) ಕೇಳಿಬರುತ್ತದೆ! ಇಗೋ, ಒಟ್ಟಿಗೆ ಕೂಡಿಕೊಂಡ ರಾಜ್ಯ ಜನಾಂಗಗಳ ಆರ್ಭಟ! ಸೇನಾಧೀಶ್ವರನಾದ ಯೆಹೋವನು ಸೈನ್ಯವನ್ನು ಯುದ್ಧಕ್ಕಾಗಿ ಅಣಿಮಾಡುತ್ತಿದ್ದಾನೆ" (ಯೆಶಾಯ 13:4) ಎಂದಿದ್ದಾನೆ.

"ಪ್ರಧಾನ ದೇವದೂತನ ಸ್ವರವು" ಇದೇ ರೀತಿಯ ಅರ್ಥಸೂಚಿಸುವ ಎದ್ದು ಕಾಣುವ ಸಂಕೇತವಾಗಿದೆ. "ಪ್ರಧಾನದೂತ" ಎಂಬುದರ ಅರ್ಥವು ಮುಖ್ಯ ಸಂದೇಶವಾಹಕ ಎಂಬುದನ್ನು ಸೂಚಿಸುತ್ತದೆ. ನಮ್ಮ ಕರ್ತನು ತಾನೇ ದೇವರ ಒಡಂಬಡಿಕೆಯ ಮುಖ್ಯಸಂದೇಶವಾಹಕನಾಗಿದ್ದಾನೆ (ಮಲಾಕೀಯ3:1). ದಾನಿಯೇಲನು ಅದೇ ವ್ಯಕ್ತಿಯನ್ನು ಮಿಕಾಯೇಲ ಎಂದಿದ್ದಾನೆ. ಆ ಹೆಸರು "ದೇವರ ಹಾಗೆ ಇರುವ" ಎಂಬುದನ್ನು ಸೂಚಿಸುತ್ತದೆ. ಈ ಹೆಸರು ದೇವರತತ್ವದ ಮೂರ್ತಿ (ಇಬ್ರಿಯ 1:3) ಯಂತಿದ್ದು ಆತನ ಪ್ರತಿರೂಪನಾದಾತನಿಗೆ, ಆತನ ಅಧಿಕಾರ ಮತ್ತು ಶಕ್ತಿಯ ಪ್ರತಿನಿಧಿಯಾಗಿರುವಾತನಿಗೆ ಸೂಕ್ತವಾಗಿದೆ. ಪ್ರಧಾನದೂತನ ಸ್ವರವು ಕ್ರಿಸ್ತನ ಅಧಿಕಾರವನ್ನು ಮತ್ತು ಆತನ ಪ್ರಭುತ್ವವನ್ನು ಪ್ರತಿನಿಧಿಸುವುದಾಗಿದೆ, ಹಾಗಾಗಿ ಈ ಸಂಕೇತವು ಕ್ರಿಸ್ತನು ನಿಯಂತ್ರಣವನ್ನು ತೆಗೆದುಕೊಳ್ಳುವವನಾಗಿ, ತನ್ನ ಆಳ್ವಿಕೆಯನ್ನು ಪ್ರಾರಂಭಿಸುವವನಾಗಿ ಮತ್ತು ಅಧಿಕೃತ ಆಜ್ಞೆಗಳನ್ನು ನೀಡುವವನಾಗಿ ಮತ್ತು ಆತನ ರಾಜ್ಯದ ನಿಯಮಗಳನ್ನೂ, ದೈವೇಚ್ಛೆಯ ಬದಲಾವಣೆಗಳನ್ನು

ಪ್ರಕಟಿಸುವ ಪ್ರತಿನಿಧಿಯಾಗಿ ಆತನನ್ನು ಮಾಡುತ್ತದೆ.

ಈ ಆಲೋಚನೆಯನ್ನು ದಾನಿಯೇಲನು ಬೇರೆ ವಿಧವಾಗಿ ಹೇಳುವವನಾಗಿ – "ಮಿಕಾಯೇಲನು ಆ ಕಾಲದಲ್ಲಿ ಏಳುವನು" ಎಂದಿದ್ದಾನೆ. "ಏಳುವುದು" ಎಂಬುದು ಅಧಿಕಾರವನ್ನು ವಹಿಸಿಕೊಳ್ಳುವುದು, ಆಜ್ಞೆಗಳನ್ನು ನೀಡುವುದು ಎಂಬುದನ್ನು ಸೂಚಿಸುತ್ತದೆ. "ಏಳುವಾಗ" ariseth (ಯೆಶಾಯ 2: 19,21 ನೋಡಿರಿ). ಈ ಸಂಕೇತದ ಮತ್ತೊಂದು ಉದಾಹರಣೆಯನ್ನು ನಾವು ದಾವೀದನ ಮಾತುಗಳಲ್ಲಿ ನೋಡಬಹುದು. ದಾವೀದನು ಕ್ರಿಸ್ತನ ಬಗ್ಗೆ ಪ್ರವಾದನೀಯವಾಗಿ "ಆತನು ಗರ್ಜಿಸಲು ಭೂಮಿಯು ಕರಗಿಹೋಯಿತು" (ಕೀರ್ತನೆ 46:6) ಎಂದಿದ್ದಾನೆ. ಆಡಳಿತದ ಬದಲಾವಣೆಯಾದಾಗ ನೂತನ ಅರಸನು ತನ್ನ ಆಜ್ಞಾಸ್ವರವನ್ನು ಉಚ್ಚರಿಸುವಾಗ ಸಂಕಟದ ಸಮಯವು ಬೇಗನೇ ಸಂಭವಿಸುವುದರಲ್ಲಿದೆ. ಮತ್ತು ಭೂಲೋಕದಲ್ಲಿ ಸಂಘಟ ಸಮಾಜ ವ್ಯವಸ್ಥೆ ಇವುಗಳೆಲ್ಲವೂ ಕಾಣದಂತಾಗುತ್ತದೆ ಇಲ್ಲವೇ ಪುಡಿಪುಡಿಯಾಗುತ್ತದೆ. ಆತನ ಆಜ್ಞೆಯಲ್ಲಿ ದೋಷ ತುಂಬಿದ ನಾಗರೀಕ, ಸಾಮಾಜಿಕ ಮತ್ತು ಧಾರ್ಮಿಕಪದ್ಧತಿಗಳು ಅವುಗಳು ಎಷ್ಟೇ ಹಳೆಯವು ಮತ್ತು ದೃಢವಾಗಿ ನಿಲ್ಲುವಂತವುಗಳೂ, ಬಲವುಳ್ಳವುಗಳೂ ಆಗಿದ್ದರೂ ಅವುಗಳನ್ನು ಕೆಳಗೆ ದೊಬ್ಬಲ್ಪಡಲೇಬೇಕು. ಆತನ ಬಾಯಿಂದ ಹೊರಬರುವ ಕತ್ತಿಯು ದೊಡ್ಡ ವಿಧ್ವಂಸವನ್ನೇ ಉಂಟುಮಾಡುತ್ತದೆ; ಸತ್ಯದ ಪ್ರತಿಯೊಂದು ವಿಷಯಗಳು ಮತ್ತು ಅವುಗಳ ವಿವಿಧ ಸಂಗತಿಗಳು ಜನರ ತೀರ್ಪನ್ನುಂಟು ಮಾಡುತ್ತದೆ ಮತ್ತು ಆತನ ಅಧಿಕಾರದ ಮತ್ತು ಪ್ರಭುತ್ವದ ಅಡಿಯಲ್ಲಿ ಸಾವಿರ ರೂಪದಲ್ಲಿರುವ ಕೇಡು ಮತ್ತು ತಪ್ಪುಗಳು ಕೆಳಗೆ ಕೆಡವಲ್ಪಡುತ್ತವೆ.

**ದೇವರ ತುತ್ತೂರಿಯು:** ಹಲವರು ಸರಿಯಾಗಿ ಆಲೋಚನೆ ಮಾಡದೇ ಈ ತುತ್ತೂರಿಯು ಗಾಳಿಯಲ್ಲಿ ಅಕ್ಷರಶಃವಾದ ಧ್ವನಿಯನ್ನುಂಟುಮಾಡಿ ಮನರಂಜನೆ ನೀಡುತ್ತದೆ ಎಂದು ಕಲ್ಪಿಸುತ್ತಾರೆ. ಆದರೆ ಇದು ಒಂದು ಅಸಮಂಜಸವಾದ ನಿರೀಕ್ಷೆಯಾಗಿದೆ. ಆದರೆ ಪೌಲನು ಏಳನೆಯ ತುತ್ತೂರಿಯ ಬಗ್ಗೆ ಹೇಳುವಾಗ ತುತ್ತೂರಿಗಳ ಸರಣಿಯಲ್ಲಿ (ಪ್ರಕಟನೆ 11:15) ಇದು ಕಡೇ ತುತ್ತೂರಿ (1 ಕೊರಿಂಥ 15:52) ಎಂದು ಹೇಳುತ್ತಾನೆ. ಈ ಉಲ್ಲೇಖಗಳು ಅದೇ ತುತ್ತೂರಿಯ ಬಗ್ಗೆ ಎಂಬುದಕ್ಕೆ ರುಜುವಾತು ಪ್ರತಿಯೊಂದು ಘಟನೆಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಕಂಡುಬರುತ್ತದೆ. ಪೌಲನು ಈ ದೇವರ ತುತ್ತೂರಿಗೆ ಸಂಬಂಧಿಸಿದ್ದನ್ನು ಪುನರುತ್ಥಾನ ಮತ್ತು ದೇವರ ರಾಜ್ಯದ ಸ್ಥಾಪನೆಯ ವಿಷಯದಲ್ಲಿ ಹೇಳುತ್ತಾನೆ ಮತ್ತು ಪ್ರಕಟನೆಯ ಗ್ರಂಥಕರ್ತನು ಇದನ್ನು ಇನ್ನೂ ಹೆಚ್ಚಿನ ಸೂಕ್ಷ್ಮ ಸಂಗತಿಗಳೊಡನೆ ಹೇಳುತ್ತಾನೆ. ಏಳನೆಯ ಅಥವಾ ಕಡೇ ತೂತ್ತೂರಿಯನ್ನು ಕರ್ತನ ತುತ್ತೂರಿಯೆಂದು ಕರೆಯುವ ಔಚಿತ್ಯವು ವಿಶದವಾಗಿದೆ. ನಾವು ಪ್ರಕಟನೆಯಲ್ಲಿನ ಹಿಂದಿನ ಆರು ತುತ್ತೂರಿಗಳ ಅಡಿಯಲ್ಲಿ ನಡೆದ ಘಟನೆಗಳನ್ನು ನೆನಪುಮಾಡುವಾಗ ಅವು ಮಾನವತ್ವದ ಕಾರ್ಯಗಳನ್ನೂ, ಏಳನೆಯದು ವಿಶೇಷವಾಗಿ ಕರ್ತನ ಕಾರ್ಯವನ್ನು ಉಲ್ಲೇಖಿಸುತ್ತದೆ ಮತ್ತು ಕರ್ತನ ದಿನವನ್ನು ವ್ಯಾಪಿಸುತ್ತದೆ. ಹಿಂದಿನ ಆರು ತುತೂರಿಗಳು ಸಂಕೇತವಾಗಿರುವಾಗ – ಮತ್ತು ಇದು ಸಾಮಾನ್ಯವಾಗಿ ಪ್ರಕಟನೆಯ ಸ್ಪಷ್ಟೀಕರಣಕಾರರೆಂದು ಹೇಳಿಕೊಳ್ಳುವ ವಿಮರ್ಶಕರೂ, ವಿದ್ಯಾರ್ಥಿಗಳೂ ಒಪ್ಪಿಕೊಂಡಿರುವಾಗ – ಈ ಸರಣಿಯಲ್ಲಿ ಏಳನೆಯದನ್ನು ಗಾಳಿಯ ಅಕ್ಷರಶಃವಾದ ಧ್ವನಿಯೆಂದು ನಿರೀಕ್ಷಿಸುವುದು ವೈಚಾರಿಕತೆ ಮತ್ತು ಸಾಮಾನ್ಯ ಜ್ಞಾನದ ಉಲ್ಲಂಘನೆಯೂ ಆಗುತ್ತದೆ. ಅದು ಮಾತ್ರವಲ್ಲದೆ, ಅದು ಕರ್ತನ ಸರ್ವೇ ಸಾಮಾನ್ಯ ಪದ್ಧತಿಯು ಮಾತ್ರವಲ್ಲದೆ, ಆತನ ಬರೋಣದ ಹೇಳಿಕೆಗಳಲ್ಲಿನ ಗುಪ್ತತೆಯನ್ನು ಸೂಚಿಸುವ ಪರಿಶುದ್ಧ ಬರಹಗಳೊಂದಿಗಿನ ಸಾಮರಸ್ಯರಹಿತವುಳ್ಳದ್ದಾಗಿರುತ್ತದೆ. ಯಾಕೆಂದರೆ ಕಳ್ಳನು ಬರುವಾಗ ತುತ್ತೂರಿಯನ್ನು ಮೊಳಗಿಸುವುದಿಲ್ಲ.

ಪ್ರಕಟನೆಯ ಏಳು ತುತ್ತೂರಿಗಳೆಲ್ಲವೂ ಸಾಂಕೇತಿಕವಾದವುಗಳು, ಅವುಗಳು ಏಳು ಕಾಲಾವಧಿ ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆ. ಇದರ ಪರಾಮರ್ಶೆಯನ್ನು ನಾವು ಮುಂಬರುವ ಸಂಪುಟಕ್ಕೆ ಬಿಡುತ್ತೇವೆ. ಇಲ್ಲಿ ಏಳನೆಯ ತುತ್ತೂರಿಯು ಗುರುತಿಸುವ ಅನೇಕ ಘಟನೆಗಳ ಮಧ್ಯದಲ್ಲಿ ನಾವು ನಮ್ಮನ್ನೇ ಕಂಡುಕೊಂಡಿದ್ದೇವೆ ಎಂದು ಹೇಳಿದರೆ ಸಾಕು. ಮಹಾ ಧ್ವನಿಗಳು, ಜ್ಞಾನದ ಹೆಚ್ಚಳ, ಕೋಪಿಸಿಕೊಂಡ ಜನಾಂಗಗಳು ಮೊದಲಾದವುಗಳನ್ನು ಸಮಯ ಪ್ರವಾದನೆಯ ಸಂಬಂಧದಲ್ಲಿ ತೆಗೆದುಕೊಳ್ಳಲಾಗಿದೆ. ಅವು ಇವುಗಳನ್ನು ಸತ್ಯವೆಂದು ಸ್ಥಿರಪಡಿಸುತ್ತದೆ. ಈ ಏಳನೆಯ ಅಥವಾ ಕಡೆಯ ತುತ್ತೂರಿಯ ಧ್ವನಿಯು ಮುಕ್ತಾಯವಾಗುವ ಮುಂಚೆ ಅನೇಕ ಘಟನೆಗಳು ಹೊರಬೀಳಬೇಕಾಗಿವೆ. ಉದಾಹರಣೆಗೆ ಭಕ್ತರುಗಳಿಗೆ, ಪ್ರವಾದಿಗಳಿಗೆ ಪ್ರತಿಫಲ, ಸತ್ತವರೆಲ್ಲರ ಪುನರುತ್ಥಾನ ಮುಂತಾದವುಗಳು. ಅದರ ಅಡಿಯಲ್ಲಿ ಪ್ರಕಟವಾಗುವ ಘಟನೆಗಳು ಸೂಚಿಸುವಂತೆ ನಿಶ್ಚಯವಾಗಿ ಇದು ಕರ್ತನ ಸಹಸ್ರವಾನದ ಪೂರ್ಣಾವಧಿಯನ್ನು ಆವರಿಸುತ್ತದೆ – ಪ್ರಕಟನೆ 10;7; 11: 15,18.

ಈ ರೀತಿಯಲ್ಲಿ ನಾವು 'ಘೋಷ', 'ಪ್ರಧಾನ ದೂತನ ಸ್ವರ', 'ದೇವರ ತುತ್ತೂರಿ' ಇವೆಲ್ಲವನ್ನೂ ಸಂಕೇತಗಳು ಎಂಬುದಾಗಿ ಹಾಗೂ ಅವುಗಳು ನೆರವೇರುವ ಹಂತದಲ್ಲಿವೆ ಎಂದು ಕಾಣುತ್ತೇವೆ. ಜಾಗರೂಕತೆಯಿಂದ ಇದನ್ನೂ ಗಮನಿಸಿ, ಈಗತಾನೇ ನಾವು ನೋಡಿದ ಮೂರು ಪ್ರವಾದನೆಗಳು (ದಾನಿಯೇಲ 12:1; ಪ್ರಕಟನೆ 11:15, 1 ಥೆಸ. 4:16) ಹೇಳಿದ ಘಟನೆಗಳು ಹೊರಬೀಳುವಾಗ

ಯೇಸುವಿನ ಪ್ರತ್ಯಕ್ಷತೆಯನ್ನು ಪ್ರಕಟಿಸುತ್ತವೆ. ಆತನ ಅದೃಶ್ಯವಾದ ಪ್ರತ್ಯಕ್ಷತೆಯು ಯಾವ ರೀತಿಯಲ್ಲಿ ಪ್ರವಾದನೆಗಳಲ್ಲಿ ನಂಬಿಕೆವುಳ್ಳವರಿಗೆ ಪ್ರಕಟವಾಗುತ್ತದೆ ಎಂಬ ಉದ್ದೇಶವನ್ನು ಸೂಚಿಸುವುದಕ್ಕಾಗಿಯೇ ಅವುಗಳು ಮುಂಚಿತವಾಗಿ ತಿಳಿಸಲ್ಪಟ್ಟಿವೆ. ಪೌಲನು, – "ಕರ್ತನು ತಾನೇ ಆಜ್ಞಾಘೋಷದೊಡನೆಯೂ, ಪ್ರಧಾನದೂತನ ಶಬ್ದದೊಡನೆಯೂ, ದೇವರ ತುತ್ತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು (1 ಥೆಸ. 4:16), ಎಂತಲೂ, ಯೋಹಾನನು "ಏಳನೆಯ ತುತ್ತೂರಿಯನ್ನೂದಿದನು. ಆಗ ಪರಲೋಕದಲ್ಲಿ ಮಹಾಶಬ್ದಗಳುಂಟಾಗಿ – ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ, ಆತನು ಅಭಿಷೇಕಿಸಿದವನಿಗೂ ಉಂಟಾಯಿತು'' (ಪ್ರಕಟನೆ 11:15) ಎಂತಲೂ, ದಾನಿಯೇಲನು – "ನಿನ್ನ ಜನರ ಪಕ್ಷವನ್ನು ಹಿಡಿದಿರುವ ಮಹಾಪಾಲಕನಾದ ಮಿಕಾಯೇಲನು ಆ ಕಾಲದಲ್ಲಿ ಏಳುವನು" (ದಾನಿಯೇಲ 12:1) ಎಂತಲೂ ಹೇಳಿದ್ದಾರೆ. ಹಾಗಾಗಿ ನಾವು ಮಹಾ ಘೋಷವನ್ನು, ತುತ್ತೂರಿಗಳ ಸ್ವರಗಳನ್ನು, ಧ್ವನಿಗಳನ್ನು ಗುರುತಿಸುವುದಾದರೆ, ನಾವು ಅವುಗಳನ್ನು ಸೂಚನೆಗಳು ಎಂಬುದಾಗಿ ಒಪ್ಪಿಕೊಳ್ಳಬೇಕೇ ಹೊರತು, ಕರ್ತನು ಬೇಗನೇ ಬರುವನು ಎಂದಲ್ಲ, ಬದಲಾಗಿ ಆತನು ಬಂದಿದ್ದಾನೆ ಮತ್ತು ಪ್ರಸನ್ನನಾಗಿದ್ದಾನೆ ಮತ್ತು ಸುಗ್ಗಿಯ ಕಾರ್ಯವಾದ ಗೋಧಿ ಕಾಳುಗಳನ್ನು ಕೂಡಿಸುವುದು, ಹಣಜಿಯನ್ನು ಪ್ರತ್ಯೇಕಿಸಿ ಸುಡುವುದು ಈಗಾಗಲೇ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕು. ನಾವು ಕಾಲಗಣನೆಯ ಪ್ರವಾದನೆಗಳಲ್ಲಿ ಇವು ಅಧಿಕವಾಗಿ ರುಜುವಾತಾಗಿರುವುದನ್ನು ಕಾಣುತ್ತೇವೆ. ಆದಾಗ್ಯೂ ಇದು ಸ್ವಾಭಾವಿಕ ದೃಷ್ಟಿಗೆ ಅಲ್ಲ, ಆದರೆ ನಂಬಿಕೆಯ ಕಣ್ಣುಗಳಿಗೆ ಪ್ರವಾದನೆಯ ಖಚಿತವಾದ ಮಾತುಗಳ ಮೂಲಕ ಮಾತ್ರ ಆತನ ಪ್ರತ್ಯಕ್ಷತೆ ಮತ್ತು ಕಾರ್ಯಗಳನ್ನು ಅರಿತುಕೊಳ್ಳಬಹುದಾಗಿದೆ.

ಇಲ್ಲಿ ಮತ್ತೊಂದು ಸತ್ಯವನ್ನು ನಾವು ಕಡೆಗಣಿಸಬಾರದು. ಅದೇನೆಂದರೆ, ಮೇಲೆ ವಿವರಿಸಿದಂತೆ, ಪ್ರಧಾನ ದೂತನ ಘೋಷ, ಸ್ವರ ಮತ್ತು ದೇವರ ತುತ್ತೂರಿಯ ಧ್ವನಿ ಇವುಗಳೆಲ್ಲವೂ ಸುವಾರ್ತಾಯುಗದ ಕಾರ್ಯಗಳ ನೆರವೇರಿಕೆಯ ಸಾಧನತೆಗಳು. ಆದುದರಿಂದ, ಬಹುಶಃ ನಾವು ಈ ಸಂಕೇತಗಳ ಅರ್ಥಗಳನ್ನು ಮಾತ್ರವಲ್ಲ, ಆದರೆ ಮುಂತಿಳಿಸಿದ ಫಲಿತಾಂಶಗಳ ನೆರವೇರಿಕೆಯನ್ನೂ ಕಂಡುಕೊಳ್ಳುತ್ತೇವೆ, ಇದಕ್ಕೆ ಜೋಡಣೆಯಾಗಿ, ನಾವು ಸರಿಯಾದ ರೀತಿಯಲ್ಲಿ ಸಂಕೇತಗಳ ಅರ್ಥ ವಿವರಣೆ ಮಾಡಿದ್ದೇವೆ ಹಾಗೂ ನಾವು ಈಗ 'ಸುಗ್ಗಿಯ ಕಾಲ'ವೆಂದು ಕರೆಯುವ ಕಾಲದಲ್ಲಿದ್ದೇವೆ ಮತ್ತು ಈ ಕಾಲದಲ್ಲಿ ಸುವಾರ್ತಾಯುಗವೂ, ಸಹಸ್ರಮಾನ ಯುಗವೂ ಒಂದರ ಮೇಲೊಂದು ವ್ಯಾಪಿಸುತ್ತವೆ, ಒಂದು ಮುಗಿಯುತ್ತದೆ ಮತ್ತೊಂದು ಪ್ರಾರಂಭವಾಗುತ್ತದೆ ಎಂಬುದಕ್ಕೆ ನಮಗೆ ಅಧಿಕವಾದ ರುಜುವಾತುಗಳಿವೆ. ನಿಜ ಪ್ರತಿಷ್ಠಿತರು ಮತ್ತು ಹೆಸರಿಗೆ ಮಾತ್ರದ ಕ್ರೈಸ್ತರ ಪ್ರತ್ಯೇಕಿಸುವ ಕಾರ್ಯವು ಜಾರಿಯಲ್ಲಿರುವುದನ್ನು ಕಂಡುಕೊಳ್ಳಲು ಅನೇಕರಿಗೆ ಯಾವ ಸಹಾಯವೂ ಬೇಕಿಲ್ಲ. ಸಾಂಕೇತಿಕ ಬೆಂಕಿಯು ಆಗಲೇ ಬರುತ್ತಲಿದೆ ಎಂಬುದನ್ನು ಕಾಣುತ್ತಾರೆ ಮತ್ತು ಜನಾಂಗಗಳ ಗದ್ದಲವನ್ನು, ನೂತನ ಅರಸನಾದ ಇಮ್ಮಾನುವೇಲನ ಅಧಿಕಾರವನ್ನು, ಏಳನೆಯ ತುತ್ತೂರಿಯೆಂದು ಕರೆಯಲ್ಪಡುವ ಘಟನೆಗಳನ್ನು, ಕರ್ತನೇರಿ ಬರುವ ಕಷ್ಟದ ಕಾರ್ಮೋಡಗಳನ್ನು, ಅದರಲ್ಲಿ ಆತನ ಶಕ್ತಿಯು ಪ್ರಕಟವಾಗುವುದನ್ನು, ಮತ್ತು ಎಲ್ಲಾ ಸಂಗತಿಗಳೂ ಆತನಿಗೆ ವಶವಾಗುವುದನ್ನೂ ಗ್ರಹಿಸಿಕೊಳ್ಳುತ್ತಾರೆ.

ನಾವು ಈಗಾಗಲೇ (ಸಂಪುಟ I, ಪುಟ 237ರಲ್ಲಿ) ಕರ್ತನು ತಾನೇ ಮುಖ್ಯವಾದ ಕೊಯ್ಲುಗಾರನು ಮತ್ತು ಕಾರ್ಯದ ನಿರ್ದೇಶಕನು ಮತ್ತು ಇದು ಆತನ ಪ್ರಥಮ ಕಾರ್ಯವೆಂದು ಪ್ರಕಟಿಸಿರುವುದರಿಂದ ಸುಗ್ಗಿಯ ಕಾರ್ಯಗಳ ನಿಜವಾದ ಪ್ರಕ್ರಿಯೆಯಲ್ಲಿ ಕರ್ತನ ಪ್ರಸನ್ನತೆಯ ಗುರುತಿಸೋಣದ ರುಜುವಾತಿನ ಬಗ್ಗೆ ನಿಮ್ಮ ಗಮನವನ್ನು ಸೆಳೆದಿದ್ದೇವೆ. "ನಾನು ನೋಡಲಾಗಿ ಇಗೋ, ಪ್ರಕಾಶಮಾನವಾದ ಒಂದು ಮೇಘವು ನನಗೆ ಕಾಣಿಸಿತು. ಆ ಮೇಘದ ಮೇಲೆ ಮನುಷ್ಯಕುಮಾರನಂತಿದ್ದವನೊಬ್ಬನು ಕೂತಿರುವುದನ್ನು ಕಂಡೆನು. ಆತನ ತಲೆಯ ಮೇಲೆ ಚಿನ್ನದ ಕಿರೀಟವೂ, ಆತನ ಕೈಗಳಲ್ಲಿ ಹದವಾದ ಕುಡುಗೋಲೂ ಇದ್ದವು .... ಮೇಘದ ಮೇಲೆ ಕುಳಿತಿದ್ದಾತನು ತನ್ನ ಕುಡುಗೋಲನ್ನು ಹಾಕಿ ಭೂಮಿಯ ಪೈರನ್ನು ಕೊಯ್ದಿದನು; ಭೂಮಿಯ ಪೈರು ಕೊಯ್ಯಲ್ಪಟ್ಟಿತು" (ಪ್ರಕಟನೆ 14:14,16). "ಸುಗ್ಗಿಯ ಕಾಲದಲ್ಲಿ ನಾನು ಕೊಯ್ಯುವವರಿಗೆ – ಮೊದಲು ಹಣಜಿಯನ್ನು ಆರಿಸಿ ತೆಗೆದು ಅದನ್ನು ಸುಡುವುದಕ್ಕೆ ಹೊರೆಕಟ್ಟಿ ಹಾಕಿ, ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು" (ಮತ್ತಾಯ 13:30). ಕೊಯ್ಲಿನ ಕಾರ್ಯವು ಸಂಪೂರ್ಣವಾಗಿ ನೆರವೇರುವುದಕ್ಕೆ ನಾಲ್ವತ್ತು ವರ್ಷಗಳು ಹಿಡಿಯುತ್ತವೆ ಮತ್ತು ಅದು 1914 ಕ್ರಿ.ಶ.ಕ್ಕೆ ಮುಕ್ತಾಯಗೊಂಡಿದೆ) ಅದರ ವಿವಿಧ ವೈಶಿಷ್ಟ್ಯಗಳು ಕ್ರಮೇಣವಾಗಿ ನೆರವೇರುತ್ತವೆ. ಆದರೆ ಅದರ ಎಲ್ಲಾ ದಿನಗಳೂ "ಮನುಷ್ಯಕುಮಾರನ ದಿನ"ಗಳಾಗಿರುತ್ತವೆ, ಅವುಗಳು ನಮ್ಮ ಕರ್ತನ ಪ್ರತ್ಯಕ್ಷತೆ ಮತ್ತು ಬಲಾಧಿಕಾರದ ದಿನಗಳಾಗಿದ್ದು ಅದನ್ನು ಅಂತ್ಯದಲ್ಲಿ ಎಲ್ಲರೂ ಗುರುತಿಸುವರು, ಆದರೆ ಮೊದಲಿಗೆ ಅಪೋಸ್ತಲನು ವರ್ಗ ಪ್ರಕಾರ ನಿರ್ದಿಷ್ಟಪಡಿಸಿರುವುದರಿಂದ, "ಸಹೋದರರೇ, ನೀವು ಕತ್ತಲೆಯಲ್ಲಿರುವವರಲ್ಲ'' ಎಂದಿದ್ದಾನೆ (1 ಥೆಸಲೋನಿಕ 5:4).

**ಉರಿಯುವ ಬೆಂಕಿಯಲ್ಲಿ:** ಸಂಕೇತಗಳು, ಬೆಂಕಿ ಮುಂತಾದವುಗಳ ಅರ್ಥ ಈಗಾಗಲೇ ಸಂಪುಟ I, ಪು 317ರಲ್ಲಿ ಈಗಾಗಲೇ ವಿವರಿಸಿರುವುದನ್ನು ನೆನಪಿನಲ್ಲಿಟ್ಟುಕೊಂಡರೆ ಮಾತ್ರವೇ ಮುಂದಿನವುಗಳ ಸಾಂಕೇತಿಕ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳಬಹುದು. ಅದನ್ನು ಈ ರೀತಿಯಾಗಿ ಓದಿಕೊಳ್ಳಬಹುದು – "ನಮ್ಮ ಕರ್ತನಾದ ಯೇಸುವು ಆತನ ಶಕ್ತಿಶಾಲಿ ದೇವದೂತರುಗಳೊಂದಿಗೆ ಪರಲೋಕದಿಂದ ಉರಿಯುವ ಬೆಂಕಿಯಲ್ಲಿ ಪ್ರಕಟಗೊಳ್ಳುತ್ತಾನೆ ಮತ್ತು ದೇವರನ್ನು ತಿಳಿಯದವರ ಮೇಲೆ ಮತ್ತು, ನಮ್ಮ ಕರ್ತನಾದ ಯೇಸುಕ್ರಿಸ್ತನ ಸುವಾರ್ತೆಗೆ ವಿಧೇಯರಾಗದವರ ಮೇಲೆ ತನ್ನ ಪ್ರತೀಕಾರವನ್ನು ತೀರಿಸಿಕೊಳ್ಳುತ್ತಾನೆ" – 2 ಥೆಸ. 1:8.

ಅಕ್ಷರಶಃವಾಗಿ ವ್ಯಕ್ತಗೊಳಿಸಿರುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿರುವುದು, ಸಹಸ್ರಮಾನ ದಿನದಲ್ಲಿ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಆತನ ಆತ್ಮೀಕ ನಿಯಂತ್ರಣದ ಸ್ಥಾನದಿಂದ, ಪರಲೋಕದಿಂದ, ರೌದ್ರ ಹಾಗೂ ದಂಡನೆಗಳೂ ಮತ್ತು ಶಿಕ್ಷೆಗಳು, ದುಷ್ಟತ್ವದ ಹಾಗೂ ದುಷ್ಟರ ಮೇಲೆ ಪ್ರಕಟವಾಗುವದು. ಅದು ದಹಿಸುವ ರೌದ್ರ. ಅದನ್ನು ಬೆಂಕಿ ಎಂಬ ಸಂಕೇತದಿಂದ ಸೂಚಿಸಲಾಗಿದೆ. ಇದು ಕೆಟ್ಟ ಪದ್ಧತಿಗಳ, ತಪ್ಪುಗಳ, ದಬ್ಬಾಳಿಕೆಯ ಅಥವಾ ಇಚ್ಛಾಪೂರ್ವಕರಾದ ಪಾಪಿಗಳ ಬೇರನ್ನಾಗಲೀ, ಕೊಂಬೆಯನ್ನಾಗಲೀ ಉಳಿಸುವುದಿಲ್ಲ; ಮತ್ತು ಎಲ್ಲಾ ಅಹಂಕಾರಿಗಳೂ, ಎಲ್ಲಾ ಕೇಡು ಮಾಡುವವರೂ ಒಣಗಿರುವ ಪೈರಿನ ಕೂಳೆಯೋಪಾದಿಯಲ್ಲಿ ಆ ಸಹಸ್ರಮಾನದ ದಿನದಂದು ಸುಡಲ್ಪಡುವರು. ಸುಗ್ಗಿಕಾಲದ ಆರಂಭದಲ್ಲಿ ಬೆಂಕಿಯು ಬಹಳ ಉಗ್ರವಾಗಿ ದಹಿಸುವುದು, ಈಗ ಪದವಿಯಲ್ಲಿ ಹೆಚ್ಚಾದ ಮಟ್ಟದಲ್ಲಿ ಏರುತ್ತಿರುವ ಹೆಚ್ಚುತ್ತಿರುವ ಅಹಂಕಾರಿಗಳನ್ನೂ ಮತ್ತು ಕೆಡುಕರನ್ನೂ ನಾಶಪಡಿಸುವುದು. ಯಾರು ತಮ್ಮ ಅಹಂಭಾವವನ್ನು, ಕೆಡುಕನ್ನು ನಾಶವಾಗುವಂತೆ ಒಪ್ಪಿಸಿ ಕೊಡುತ್ತಾರೋ ಅವರು ಸಂತೋಷವಾಗಿರುವರು ಮತ್ತು ಅವರುಗಳು ಎರಡನೆಯ ಮರಣದಲ್ಲಿ ನಾಶಗೊಳ್ಳುವುದಿಲ್ಲ. ಯಾಕೆಂದರೆ ಪ್ರತಿಭಟಿಸುವ ಕೆಲವರು ಸಹಸ್ರಮಾನ ಯುಗದಲ್ಲಿಯೂ ಸ್ಪಷ್ಟವಾಗಿ ಇರುವರು. ಈ ಸಮಯದ ಬಗ್ಗೆ – ಇಗೋ ಆ ದಿನವು ಬರುತ್ತಿದೆ, ಒಲೆಯಂತೆ ಉರಿಯುತ್ತಿದೆ; ಸಕಲ ಅಹಂಕಾರಿಗಳೂ, ದುಷ್ಕರ್ಮಿಗಳೂ ಹೊಟ್ಟಿನಂತಿರುವರು; ಬರುತ್ತಿರುವ ಆ ದಿನವು ಅವರಿಗೆ ಅಗ್ನಿಪ್ರಳಯವಾಗುವುದು, ಬುಡರೆಂಬೆಗಳಾವುದನ್ನೂ ಉಳಿಸದು" (ಮಲಾಕಿ 4:1) ಎಂದು ಬರದದೆ.

ಬಲಿಷ್ಠರಾದ ದೇವದೂತರುಗಳು, ಸಂದೇಶಕರುಗಳು ಅಥವಾ ಆತನ ಶಕ್ತಿಯ ನಿಯೋಗಿಗಳು ಅನೇಕ ವಿಧವಾಗಿರುವರು. ಅದು ಜೀವವಿರುವ ಅಥವಾ ನಿರ್ಜೀವವಾಗಿ ವಿವಿಧ ಸಂಸ್ಥೆಗಳನ್ನು ಒಳಗೊಂಡಿರುವದು ಎಂದು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು ಮತ್ತು ಇವುಗಳನ್ನು ನಮ್ಮ ಕರ್ತನು ಪ್ರಸ್ತುತದಲ್ಲಿರುವ ಕೆಟ್ಟ ಪದ್ಧತಿಗಳನ್ನು ಮತ್ತು ದುಷ್ಟರನ್ನು ದಂಡಿಸುವುದಕ್ಕೆ ಉಪಯೋಗಿಸುತ್ತಾನೆ.

ಕರ್ತನ ರೌದ್ರ ಮತ್ತು ಪ್ರತಿಕಾರವು ಹಾಳುಮಾಡುವ ಸಂಕಷ್ಟದಲ್ಲಿ ಉರಿಯುವ ಬೆಂಕಿಯಲ್ಲಿ ಹಿಂದೆಂದೂ ತಿಳಿಯದ ರೀತಿಯಲ್ಲಿ ವ್ಯಕ್ತವಾಗಿದೆ. ಅದು ಎಷ್ಟೋ ಸಾರ್ವತ್ರಿಕವಾಗಿ ವ್ಯಾಪಿಸಿ ದುಷ್ಟತ್ವವನ್ನು ನಾಶ ಮಾಡುವುದೂ ಆಗಿದ್ದು, ನೀತಿ ಮತ್ತು ನೀತಿವಂತರು ಅದರಲ್ಲಿ ಕೃಪಾಪಾತ್ರರಾಗುತ್ತಾರೆ. ಈ ಹಂಚಿಕೆಗಳು ಹೆಚ್ಚು ಹೆಚ್ಚು ಸುವ್ಯಕ್ತಗೊಳ್ಳಲು ಪ್ರಾರಂಭವಾಗುವಾಗ, ಮನುಷ್ಯರು ನೂತನ ಶಕ್ತಿಯು ಮಾನವನ ಕಾರ್ಯಗಳ ನಿಯಂತ್ರಣವನ್ನು ಪಡಕೊಂಡಿದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಆ ರೀತಿಯಲ್ಲಿ ರಾಜಾಧಿರಾಜನಾದ ನಮ್ಮ ಕರ್ತನ ಪ್ರತ್ಯಕ್ಷತೆಯು ಈ ಲೋಕಕ್ಕೆ ಬಹಿರಂಗಗೊಳ್ಳುತ್ತದೆ. "ನಮ್ಮ ಕರ್ತನಾದ ಯೇಸುವು ಆತನ ಶಕ್ತಿಶಾಲಿ ದೇವದೂತರುಗಳೊಂದಿಗೆ ಪರಲೋಕದಿಂದ ಉರಿಯುವ ಬೆಂಕಿಯಲ್ಲಿ ಪ್ರಕಟಗೊಳ್ಳುತ್ತಾನೆ ಮತ್ತು ದೇವರನ್ನು ತಿಳಿಯದವರ ಮೇಲೆ (ನಮ್ಮ ಕರ್ತನ ಪರಿಚಯವಿಲ್ಲದವರನ್ನು, ಆದಾಗ್ಯೂ ಎಲ್ಲರೂ ಸ್ವಲ್ಪಮಟ್ಟಿಗೆ ಹೊಂದಿರುವ ಆತ್ಮಸಾಕ್ಷಿಗೆ ವಿಧೇಯರಾಗಲು ವಿಫಲರಾದವರನ್ನು) ಮತ್ತು (ನಮ್ಮ ದೇವರನ್ನು ತಿಳಿದಿದ್ದರೂ) ನಮ್ಮ ಕರ್ತನಾದ ಯೇಸುಕ್ರಿಸ್ತನ ಸುವಾರ್ತೆಗೆ ವಿಧೇಯರಾಗದವರ ಮೇಲೆ ತನ್ನ ಪ್ರತೀಕಾರವನ್ನು ತೀರಿಸಿಕೊಳ್ಳುತ್ತಾನೆ.

ದಂಡನೆಗಳ ಅಡಿಯಲ್ಲಿ, ಹೆಚ್ಚುತ್ತಿರುವ ಬೆಳಕು ಮತ್ತು ಮಿಲಿಯಾಂತರ ದಿನದ ಅನುಕೂಲಕರ ಅವಕಾಶಗಳು ಇವೆಲ್ಲವೂ ಸ್ಪಷ್ಟವಾದ ಸತ್ಯದ ಜ್ಞಾನಕ್ಕೆ ಮತ್ತು ನೀತಿವಂತಿಕೆಯ ಮಾರ್ಗಕ್ಕೆ ತರುತ್ತದೆ. ಹಾಗಾಗಿ ಅಜ್ಞಾನದ ನೆಪ ಅಥವಾ ಸತ್ಯಕ್ಕೆ ವಿಧೇಯರಾಗದಿರುವಿಕೆ ಮತ್ತು ಯಾರು ದೇವರ ಮತ್ತು ನೀತಿವಂತಿಕೆಯ ಶತ್ರುಗಳಾಗಿಯೇ ಇರುವ ಹಠ ಸ್ವಭಾವ ಹೊಂದಿರುತ್ತಾರೋ ಅವರನ್ನು ಕರ್ತನ ಪ್ರಸನ್ನತೆಯ ಪ್ರಭಾವ ಮತ್ತು ಆತನ ಮಹಿಮಾಶಕ್ತಿಯಿಂದ ಶಾಶ್ವತವಾಗಿ ನಾಶಪಡಿಸಿ ಶಿಕ್ಷಿಸಲಾಗುವುದು (ಈ ನಾಶನದಿಂದ ಪುನರುಜ್ಜೀವನವಿಲ್ಲ).

**ಬಲ ಹಾಗೂ ಮಹಾಮಹಿಮೆಯಲ್ಲಿ:** ಮುಂದಿನ ಹೇಳಿಕೆಯು ಈ ಲೋಕವು ಮನುಷ್ಯಕುಮಾರನು ಬರುವುದನ್ನು ನೋಡುವುದು, ಅದರ ಮೊದಲು ಅತನ ರಾಜ್ಯವನ್ನು ಸಂಪೂರ್ಣವಾಗಿ ಸಜ್ಜುಗೊಳಿಸಲಾಗುವುದು ಅಥವಾ ಆತನ ಜೊತೆ ಬಾಧ್ಯಸ್ತರುಗಳು ಒಟ್ಟುಗೂಡಿ ಆತನೊಂದಿಗೆ ಉನ್ನತಕ್ಕೇರಲ್ಪಡುವರು. ಆತನ

ಬರೋಣವನ್ನು ನೋಡಿ, ಈ ಲೋಕದ ಎಲ್ಲಾ ಕುಲಗಳು ಶೋಕಿಸುವರು. "ಅವರು ಮನುಷ್ಯಕುಮಾರನು ಬಲದಿಂದಲೂ, ಮಹಿಮೆಯಿಂದಲೂ ಬರುವುದನ್ನು ಕಾಣುವರು".

ಈಗಾಗಲೇ ಈ ಲೋಕವು ಸಂಕಟಗಳ ಕಾರ್ಮೋಡವು ಕವಿದುಕೊಳ್ಳುತ್ತಿರುವುದನ್ನೂ, ಮೊಬ್ಬಾಗುತ್ತಿರುವುದನ್ನೂ, ಕತ್ತಲಾಗುವುದನ್ನೂ ನೋಡಿಯದೆ. ಅವರಿಗೆ ಮಾನವರ ಕಾರ್ಯದಲ್ಲಿ ಒಂದು ಶಕ್ತಿಯು ಕಾರ್ಯೋನ್ಮುಖವಾಗಿದೆ ಎಂಬುದನ್ನು ಅವರು ಗ್ರಹಿಸುತ್ತಾರೆ. ಅದರೊಂದಿಗೆ ಅವರು ನಿಭಾಯಿಸಲಾರರು; ಪ್ರಸ್ತುತ ಹೊರನೋಟದಿಂದ ಹತ್ತಿರದ ಭವಿಷ್ಯವು ಕತ್ತಲಾಗಿದೆ, ಭೀತಿ ಹುಟ್ಟಿಸುವುದಾಗಿದೆ. ಘಟನೆಗಳ ದಿಕ್ಕನ್ನು ಗುರುತಿಸಲು ಸಾಕಷ್ಟು ವಿವೇಕವಿರುವ ಎಲ್ಲರಿಗೂ ಅದು ಅನಿಷ್ಟಕಾರಕವಾಗಿದೆ. ಆಲೋಚಿಸುವ ಜನರು ತಮ್ಮ ಪರಿಗಣನೆಗಳ ಮೇಲೆ ಬಲವಂತವಾಗಿ ಹೇರಲ್ಪಟ್ಟ ಸರಿ – ತಪ್ಪು, ನ್ಯಾಯ–ಅನ್ಯಾಯ ಇವುಗಳ ಪ್ರಶ್ನೆಯಲ್ಲಿ ಕಂಡುಬರುವ ಛಲಗಾರಿಕೆಯನ್ನು ಮತ್ತು ಅವರ ವೈಯಕ್ತಿಕ ಸಿದ್ಧಾಂತಗಳ ಹೇಳಿಕೆಯನ್ನು ಹಕ್ಕಿನಿಂದ ಕೇಳುವದನ್ನು ಗಮನಿಸುತ್ತಾರೆ. ಅನೇಕರು ಭೂಲೋಕದ ಹೊಸ ಅರಸನ ಮಹಿಮೆ ಮತ್ತು ಶಕ್ತಿಯನ್ನು ಮಾನ್ಯಮಾಡುತ್ತಾರೆ. ಆದಾಗ್ಯೂ ಆತನ ಸುತ್ತಲೂ ಮೋಡವೂ, ಕತ್ತಲೆಯೂ ಇನ್ನೂ ಕವಿದಿರುವುದರಿಂದ ಅವರು ಅರಸನನ್ನು ಗುರುತಿಸುವುದಿಲ್ಲ. ಜನರು ಮೋಡವನ್ನು ನೋಡುತ್ತಾರೆ, ಆತನು ಮೋಡದಲ್ಲಿ ಅಧಿಕಾರ ಮತ್ತು ಮಹಾಮಹಿಮೆಯೊಡನೆ ಬರುವುದನ್ನು ನೋಡುತ್ತಾರೆ (ಶಕ್ತಿ ಮತ್ತು ನ್ಯಾಯದ ಮಹಿಮೆ). ಆದರೆ ಅವರು ಈ ಮೋಡಗಳು ಆಲಿಕಲ್ಲನ್ನೂ, ಉರಿಕೆಂಡಗಳನ್ನು ಸುರಿಸಿ ಮಾನವರ ಜಂಭವನ್ನೂ, ಸ್ವಾರ್ಥವನ್ನೂ ಮತ್ತು ಮತ್ಸರವನ್ನೂ ಹೊಡೆದು ಹಾಕಿ ಅದನ್ನು ದಹಿಸುವ ತನಕ ಆತನ ಗುರುತು ಹಿಡಿಯುವುದಿಲ್ಲ. (ಕೀರ್ತನೆ 18:12,13) ಹಾಗೂ ಈ ಮೋಡಗಳು ಅದೃಶ್ಯವಾಗಿ ಕ್ರಿಸ್ತನ ಪತ್ಯಕ್ಷತೆಯ ಗಾಂಭೀರ್ಯ ಮತ್ತು ಮಹಿಮೆಗಳನ್ನು ಪ್ರಕಾಶ ಪಡಿಸುವತನಕ ಮರೆಯಾಗುವುದಿಲ್ಲ. ಮನುಷ್ಯರು ಈಗ ನ್ಯಾಯದ ಕ್ರಮವನ್ನು ನಿರ್ದೇಶಿಸುತ್ತಿರುವ ಮತ್ತು ಪ್ರತೀಕಾರದ ಸಮೀಪಿಸುವಿಕೆಯ ಬಗ್ಗೆ ಎಚ್ಚರಿಸುತ್ತಿರುವ ಕರ್ತನ ಮಾತುಗಳನ್ನು ಕೇಳಿಸಿಕೊಂಡು ಅವುಗಳನ್ನು ಪರಿಗಣಿಸುವವರಾದರೆ ಹತ್ತಿರದಲ್ಲಿಯೇ ಇರುವ ವಿಪತ್ತುಗಳನ್ನು ನಿವಾರಿಸಬಹುದು; "ದೇವರು ಮಾತನಾಡುವ ರೀತಿ ಒಂದುಂಟು, ಹೌದು ಎರಡೂ ಉಂಟು. ಮನುಷ್ಯನಾದರೋ ಲಕ್ಷಿಸುವುದಿಲ್ಲ.... ಆಗ ಆತನು ಅವರ ಕಿವಿಗಳನ್ನು ತೆರೆದು) ಅವರಿಗೆ ಶಿಕ್ಷಾ ವಚನವನ್ನು (ಸಂಕಟ ದಿನದ ಬಿರುಗಾಳಿಯ ಧ್ವನಿಯಲ್ಲಿ) ಉಪದೇಶಿಸಿ ಅದಕ್ಕೆ ಮುದ್ರೆ ಹಾಕುವನು. ಹೀಗೆ ಮನುಷ್ಯನನ್ನು ಆವನ ದುಷ್ಕಾರ್ಯದಿಂದ ತಪ್ಪಿಸುವನು, ಮಾನವನಿಗೆ ಗರ್ವವನ್ನು ಮರೆಮಾಡುವನು – ಯೋಬ. 33:14,16,17.

"ಇಗೋ, ಮೇಘಗಳೊಡನೆ ಬರುತ್ತಾನೆ, ಎಲ್ಲರ ಕಣ್ಣುಗಳು ಆತನನ್ನು ಕಾಣುವುವು; ಆತನ ಪ್ರಸನ್ನತೆಯನ್ನು, ಶಕ್ತಿ ಮತ್ತು ಅಧಿಕಾರವನ್ನು ಗ್ರಹಿಸಿಕೊಳ್ಳುವರು; ಇಷ್ಟಪಟ್ಟರೂ, ಇಷ್ಟವಿಲ್ಲದಿದ್ದರೂ ಎಲ್ಲರೂ ಆತನಿಗೆ ಸಹಸ್ರಮಾನದ ಅಂತ್ಯದಲ್ಲಿ ಸೈತಾನನನ್ನು ಕೆಲವು ಸಮಯದವರೆಗೆ ಬಿಡುಗಡೆ ಮಾಡುವ ತನಕ ಅಧೀನರಾಗಬೇಕು. ಆಗ ಅವರ ಇಚ್ಛೆ ಅಥವಾ ಅನಿಚ್ಛೆಯು ಪೂರ್ಣ ಅನುಭವದ ನಂತರ ಅನಿಚ್ಛೆಯುಳ್ಳವರು ಎರಡನೆಯ ಮರಣದಲ್ಲಿ ನಾಶವಾಗುವರು – ಸಾಂಕೇತಿಕವಾಗಿ ಕರೆಯುವ ಬೆಂಕಿಯ ಕೆರೆ" – ಪ್ರಕ. 21:8.

ಈ ರೀತಿಯಲ್ಲಿ ಕರ್ತನ ಆಗಮನದ ರೀತಿಯ ಎಲ್ಲಾ ಸಾಂಕೇತಿಕ ವಿವರಣೆಗಳು ಸರಳ ವಿವರಣೆಗಳಿಗೆ ಒಪ್ಪಿಗೆಯಾಗುವುವು ಮತ್ತು ಅದು ಆತನ ಪ್ರಸನ್ನತೆಯು ಒಂದು ಸಮಯದವರೆಗೆ ಗುಪ್ತವಾಗಿದ್ದು ಅದನ್ನು ಎಚ್ಚರಿಕೆಯಿಂದ ಗಮನಿಸುವವರಿಗೆ ಮಾತ್ರವೇ ತಿಳಿದುಬರುವುದು ಎಂಬುದಾಗಿ ಪ್ರಕಟಿಸುತ್ತದೆ.

## ಅದೇ ರೀತಿಯಲ್ಲಿ – In Like Manner

ಯೇಸುವಿನ ನಿರ್ಗಮನ ಕಾಲದಲ್ಲಿ ದೇವದೂತನ ಹೇಳಿಕೆಯಲ್ಲಿ ಕಲಿತುಕೊಂಡದ್ದು "ನಿಮ್ಮ ಬಳಿಯಿಂದ ಆಕಾಶದೊಳಗೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಅಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" (ಅ.ಕೃ. 1:11) ಎಂಬುದೋ?

ಈ ಹೇಳಿಕೆಯ ಪರಿಶೀಲನೆಯು ಅದರ ಸಾಮರಸ್ಯವನ್ನು ಮುಂದಿನವುಗಳಲ್ಲಿ ಪ್ರಕಟಿಸುವುದು. ಅನೇಕರು ಈ ವಾಕ್ಯವೃಂದವು 'ಯೇಸು ಯಾವ ರೀತಿಯಲ್ಲಿ ಪರಲೋಕಕ್ಕೆ ಏರಿ ಹೋದನೋ ಅದೇ ರೀತಿಯಲ್ಲಿ ಆತನು ಪುನಃ ಹಿಂತಿರುಗಿ ಬರುತ್ತಾನೆ" ಎಂಬುದಾಗಿ ಹೇಳುವುದೆಂದು ಆಲೋಚಿಸುವರು ಎಂದು ಕಂಡುಬರುತ್ತದೆ. ಅಂಥವರು "ಆತನು ಹೋದದನ್ನು ಕಂಡವರು ಆತನು ಬರುವುದನ್ನು ನೋಡುವರು ಅಥವಾ ಬೇರೆ ಯಾರಾದರೂ ಅದನ್ನು ನೋಡುವರು" ಎಂಬುದಾಗಿ ಹೇಳುವುದಿಲ್ಲ ಎಂಬ ಸತ್ಯವನ್ನು ಗಮನಿಸುವವರೆಗೆ ಈ ವಾಕ್ಯವನ್ನು ಪದೇ ಪದೇ ಓದಿಕೊಳ್ಳಬೇಕು. ಅದು ಹೇಳುವುದೇನೆಂದರೆ, ಆತನು ಬರುವ ರೀತಿಯು ಆತನು ಹೋದ ರೀತಿಯಲ್ಲಿರುತ್ತದೆ ಎಂಬುದಾಗಿ. ಹಾಗಾದರೆ, ಆತನು ಹೋದ ರೀತಿ ಯಾವುದು? ಅದು ಮಹಾ

ವೈಭವದೊಡನೆಯೋ? ಮಹಾ ಪ್ರದರ್ಶನಗಳೊಡನೆಯೋ? ಅದು ತುತೂರಿ ಧ್ವನಿಗಳೊಂದಿಗೋ, ಗಾಳಿಯಲ್ಲಿ ತೂರಿಬರುವ ಸ್ವರ ಮತ್ತು ಘೋಷಣೆಗಳೊಡನೆಯೋ? ಮತ್ತು ಕರ್ತನು ವ್ಯಕ್ತಿಗತವಾಗಿ ದೈವೀಕ ಮಹಿಮೆಯೊಡನೆ ಪ್ರಕಾಶಿಸುವವನಾಗಿದ್ದನೋ? ಹಾಗಾದಲ್ಲಿ, ನಾವು ಅದೇ ರೀತಿಯಲ್ಲಿ ಬರುವನು ಎಂದು ನಿರೀಕ್ಷಿಸಬಹುದಾಗಿದೆ. ಮತ್ತೊಂದೆಡೆಯಲ್ಲಿ, ಸಾಧ್ಯವಾದಷ್ಟು ಸದ್ದಿಲ್ಲದೆ ಹಾಗೂ ಗುಪ್ತವಾಗಿದ್ದು ಸತ್ಯಸಂಗತಿಯು ತನ್ನ ಸಾಕ್ಷಿಗಳಿಗೆ ಮನವರಿಕೆಯಾಗುವ ಸಮಂಜಸವಾದ ಉದ್ದೇಶದಿಂದ ಇತ್ತಲ್ಲವೇ?. ಆತನ ನಿಷ್ಠಾವಂತ ಅನುಯಾಯಿಗಳ ಹೊರತಾಗಿ ಬೇರೆ ಯಾರೂ ಆತನ ಸಂಗಡ ಇರಲಿಲ್ಲ ಯಾರಿಗೂ ಈ ಸಂಗತಿಗಳ ಬಗ್ಗೆ ತಿಳಿದಿರಲಿಲ್ಲ. "ಇನ್ನೂ ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವುದಿಲ್ಲ (ಯೋಹಾನ 14: 19) ಎಂಬ ಆತನ ಹೇಳಿಕೆಯು ಎಂದೂ ಅಲ್ಲಗೆಳೆದಿಲ್ಲ, ಸಹೋದರರನ್ನು ಹೊರತಾಗಿ ಬೇರೆ ಯಾರೂ ಪುನರುತ್ಥಾನದ ನಂತರ ಆತನು ಕಾಣಿಸಿಕೊಂಡದ್ದನ್ನು ನೋಡಿಲ್ಲ, ಬೇರೆ ಯಾರೂ ಆತನ ದಿವಾರೋಹಣಕ್ಕೆ ಸಾಕ್ಷಿಗಳಾಗಿರುವುದಿಲ್ಲ. ಆತನು ಹೊರಟು ಹೋದ ರೀತಿಯಲ್ಲಿಯೇ (ಶಾಂತವಾಗಿ, ಗುಪ್ತವಾಗಿ, ಪ್ರಪಂಚದ ಕುರಿತಾಗಿ ಆತನ ಶಿಷ್ಯರ ಹೊರತಾಗಿ ಯಾರಿಗೂ ತಿಳಿಯದಂತೆ) ಆತನು ಪುನಃ ಈ ರೀತಿಯಾಗಿ ಹಿಂದಿರುಗಿ ಬರುತ್ತಾನೆ. ಏರಿಸಲ್ಪಡುವಾಗ ಆತನು ತನ್ನ ಕೈಗಳನ್ನೆತ್ತಿ ಅವರನ್ನು ಆಶೀರ್ವದಿಸಿದನು (ಲೂಕ 24,50,51), ಹಾಗಾಯೇ ಅವರ ಸಂತೋಷವು ಪೂರ್ಣವಾಗುವಂತೆ ಆತನು ಪುನಃ ಬರುವಾಗಲೂ, ಅವರ ಸಂತೋಷವು ತುಂಬಿಬರುವಂತೆ ಯೇಸು "ನಾನು ಹೋಗಿ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:3) ಎಂದೂ "ಹಾಗೆಯೇ ನಿಮಗೂ ಈಗ ದುಃಖವಿದ್ದರೂ, ನಾನು ನಿಮ್ಮನ್ನು ಪುನಃ ನೋಡುವೆನು, ಆಗ ನಿಮ್ಮ ಹೃದಯಕ್ಕೆ ಆನಂದವಾಗುವುದು" (ಯೋಹಾನ 16:22) ಎಂತಲೂ ಹೇಳಿದ್ದಾನೆ.

"ಪುನಃ ಬರುವಾತನು ಇದೇ ಯೇಸುವಾಗಿದ್ದಾನೆ" ಎಂಬ ಸತ್ಯಕ್ಕೆ ದೇವದೂತನು ವಿಶೇಷವಾದ ಒತ್ತನ್ನು ನೀಡುವಂತೆ ತೋರಿಬರುತ್ತದೆ. ಆತನೇ ಈ ಲೋಕಕ್ಕೆ ಬರುವ ಮುನ್ನ ಆತನಿಗಿದ್ದ ಮಹಿಮೆಯನ್ನು ಬಿಟ್ಟು ಆತನು ಮನುಷ್ಯನಾಗಿ ನಾವು ಐಶ್ವರ್ಯವಂತರಾಗುವಂತೆ ಬಡವನಾಗಿ ಬಂದನು, ಅದೇ ಯೇಸುವು ಕಲ್ವಾರಿಯಲ್ಲಿ ಮರಣಪಟ್ಟನು, ಅದೇ ಯೇಸು ತಾನು ಸತ್ತ ಮೂರನೆಯ ದಿನದಲ್ಲಿ ಜೀವ ಹೊಂದಿದ ಆತ್ಮಸಂಬಂಧನಾಗಿ ಬದುಕುವವನಾದನು, ತನ್ನ ಬದಲಾವಣೆಗಳನ್ನು ನಾಲ್ವತ್ತು ದಿವಸಗಳಲ್ಲಿ ಪ್ರಕಟಮಾಡಿದ ಅದೇ ಯೇಸುವು ಈಗ ಪರಲೋಕಕ್ಕೆ ಏರಿ ಹೋದನು. ಅದೇ ಯೇಸು ಎರಡು ರೀತಿಯ ಬದಲಾವಣೆಗಳನ್ನು ಹೊಂದಿದನು, ಆತ್ಮೀಕದಿಂದ ಮಾನವನಾಗಿ, ಮಾನವನಿಂದ ದೈವಿಕವಾಗಿ ಈ ಬದಲಾವಣೆಗಳು ಆತನ ವ್ಯಕ್ತಿತ್ವವನ್ನು ಹಾಳು ಮಾಡಲಿಲ್ಲ. ದೇವದೂತನು ನಮಗೆ ದೃಢಪಡಿಸುವಂತೆ ಸತ್ಯದ ತತ್ವಜ್ಞಾನವು ನಮಗೆ ಅರ್ಥವಾಗಲಿ ಅಥವಾ ಆಗದಿರಲಿ ಆತನ ಅನ್ಯೋನ್ಯತೆಯು ಕಾಪಾಡಲ್ಪಟ್ಟಿತು. ನಂತರದಲ್ಲಿ ಆತನನ್ನು ಮಾಂಸದೇಹಧಾರಿಯನ್ನಾಗಿ, ಮನುಷ್ಯನನ್ನಾಗಿ ನಾವು ನೋಡಲಿಲ್ಲವಾದರೂ, ನಾವು ಆತನು ಉನ್ನತೋನ್ನತ ಸ್ಥಿತಿಗೆ ಏರಿಸಲ್ಪಟ್ಟನು ಎಂಬುದನ್ನೂ ನೆನೆಪಿನಲ್ಲಿಟ್ಟು ಕೊಳ್ಳಬೇಕು. ಆತನು ಈಗ ದೈವ ಸ್ವಭಾವದಲ್ಲಿ ಆತ್ಮೀಕ ಸ್ವರೂಪನು ಮತ್ತು ಇದಕ್ಕೆ ಸಾಮರಸ್ಯವಾಗಿ ಆತನು ಈ ಬದಲಾವಣೆಗಳೊಡನೆ ಹಾಗೂ ಉನ್ನತೋನ್ನತನಾಗಿ ಬರುತ್ತಾನೆಂದು ನಿರೀಕ್ಷಿಸಬೇಕು. ಆದಾಗ್ಯೂ ಆತನು ಅದೇ ಪ್ರೀತಿಸುವ ಯೇಸುವಾಗಿದ್ದಾನೆ, ಈ ದೆಸೆಯಲ್ಲಿ ಬದಲಾವಣೆ ಇಲ್ಲ ಎಂಬುದನ್ನು ನೆನಪಿನಲ್ಲಿಟ್ಟು ಕೊಂಡಿರಬೇಕು. ಇದೇ ಯೇಸುವು ಪುನರುತ್ಥಾನ ಹೊಂದಿದ ನಂತರದಲ್ಲಿ ನಾಲ್ವತ್ತು ದಿನಗಳವರೆಗೆ ಆತನ ಶಿಷ್ಯರಿಗೆ ಮಾತ್ರವೇ ಕ್ಷಣಕಾಲದವರೆಗೆ ಮಾತ್ರ ಕಾಣಿಸಿಕೊಂಡನು. ಮಾತ್ರವಲ್ಲದೇ ಆತನು ತನ್ನ ಎರಡನೆಯ ಪ್ರಸನ್ನತೆಯಲ್ಲಿ ದಿವ್ಯಾರೋಹಣದ ಮುಂಚಿನ ನಾಲ್ವತ್ತು ದಿನಗಳಲ್ಲಿದ್ದಂತೆಯೇ ಈ ಲೋಕಕ್ಕೆ ಅದೃಶ್ಯನಾಗಿರುವನು. ಆತನು ಈಗ ತನ್ನನ್ನು ಬಲಿದಾನವಾಗಿ ಸಮರ್ಪಿಸಿಕೊಳ್ಳಲು ಬರುವವನಲ್ಲ, ಹೀಗಾಗಿ ಇನ್ನು ಮುಂದೆ ಆತನಿಗೆ ಸಮರ್ಪಿಸಲು ಸಿದ್ಧವಾಗುವಂತೆ ಮಾನವ ಶರೀರವು ಬೇಕಾಗುವುದಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು (ಇಬ್ರಿಯ 10:5). ಅದೆಲ್ಲವೂ ಈಗ ಮುಗಿದಿದೆ; ಆತನು ಇನ್ನು ಮುಂದೆ ಸಾಯುವವನಲ್ಲ, ಆದರೆ ಆಳಲು ಬರುತ್ತಾನೆ, ವಿಮೋಚನೆಗೊಂಡ ಕುಲದವರನ್ನು ಆಶೀರ್ವದಿಸಿ ಮೇಲಕ್ಕೆತ್ತುತ್ತಾನೆ.

ಆತನು ತನ್ನ ಪ್ರಸನ್ನತೆಯು ಯಾವ ರೀತಿಯಲ್ಲಿ ನಮಗೆ ಬಹಿರಂಗಗೊಳ್ಳುವುದು ಎಂಬುದಕ್ಕೆ ನಮ್ಮ ಕರ್ತನು ನಮಗೆ ಅತ್ಯಂತ ಸುಂದರವಾದ ದೃಷ್ಟಾಂತವನ್ನು ಒದಗಿಸುವವನಾಗಿದ್ದಾನೆ – "ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೆಯೋ ಹಾಗೆ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವುದು" (ಮತ್ತಾಯ24:27). ಈ ವಾಕ್ಯದ ಅನೇಕ ತರ್ಜುಮೆಗಳು "ಮಿಂಚು" ಎಂಬ ಪದವನ್ನು ಉಪಯೋಗಿಸುವುದರಲ್ಲಿ ತಪ್ಪು ಮಾಡಿದ್ದಾರೆ, ಅಲ್ಲಿ ಸೂರ್ಯಪ್ರಕಾಶವೆಂಬ ಅರ್ಥವಿರುವುದು ಸ್ಪಷ್ಟ;

ಯಾಕೆಂದರೆ, ಮಿಂಚಿನ ಹೊಳಪು ಪೂರ್ವದಿಂದ ಬಂದು ಪಶ್ಚಿಮದವರೆಗೆ ಹೊಳೆಯುವುದಿಲ್ಲ. ಅವು ಹಲವೊಮ್ಮೆ ಬೇರೆ ಬೇರೆ ಕಡೆಗಳಿಂದಲೂ ಬರುತ್ತದೆ, ಮತ್ತು ಅಪರೂಪವಾಗಿ ಆಕಾಶಕ್ಕೆ ಅಡ್ಡಲಾಗಿ ದಾಟಿ ಹೋಗುತ್ತದೆ. ಕರ್ತನ ದೃಷ್ಟಾಂತ, ಆತನ ಮಾತುಗಳೊಂದಿಗೆ ತಕ್ಕದಾಗಿರುವ ಒಂದೇ ಒಂದು ಸಂಗತಿಯೆಂದರೆ ಅದು ಸೂರ್ಯನ ಪ್ರಕಾಶ, ಅದು ಏಕಪ್ರಕಾರವಾಗಿ ಪೂರ್ವದಿಂದ ಹೊರಟು ಪಶ್ಚಿಮದವರೆಗೆ ಬೆಳಗುತ್ತದೆ. ಗ್ರೀಕ್ ಪದವಾದ 'astrape' (ಆಸ್ಟ್ರೇಪ್) ಎಂಬುದನ್ನು ಇಲ್ಲಿ ತಪ್ಪಾಗಿ ಭಾಷಾಂತರಿಸಲಾಗಿದೆ, ಲೂಕನ ಮಾತುಗಳಲ್ಲಿಯೂ ಹಾಗೆಯೇ ಮಾಡಲಾಗಿದೆ (ಲೂಕ 17:24). 'astrape' (ಆಸ್ಟ್ರೇಪ್) ಎಂಬ ಈ ಪದದ ಉಪಯೋಗವನ್ನು ನಾವು ಲೂಕ 11:36ರಲ್ಲಿ ಕಾಣುತ್ತೇವೆ, ಅದು ಅಲ್ಲಿ ದೀಪದ ಹೊಳಪಿಗೆ ಅನ್ವಯಿಸಲಾಗಿದೆ ಮತ್ತು ಹುದುವಾದ ಭಾಷಾಂತರದಲ್ಲಿ ಪ್ರಕಾಶಮಯವಾದ ಹೊಳಪು ಎಂದು ತರ್ಜುಮೆ ಮಾಡಲಾಗಿದೆ. ನಮ್ಮ ಕರ್ತನ ಆಗಮನ ಮತ್ತು ಆತನ ಪ್ರಕಟನೆಯ ಬಗ್ಗೆ ತಪ್ಪಾದ ಕಲ್ಪನೆಗಳು, ಭಾಷಾಂತರಕಾರರ ಮನದಲ್ಲಿ ದೃಢವಾಗಿ ನೆಲೆಯಾದಂತೆ ಕಂಡು ಬರುತ್ತದೆ ಮತ್ತು ಇದು 'astrape' (ಆಸ್ಟ್ರೇಪ್) ಎಂಬ ಪದವನ್ನು ಮಿಂಚು ಎಂಬುದಾಗಿ ಭಾಷಾಂತರಿಸುವಂತೆ ನಡೆಸಿದೆ. ಅವರು ಮಿಂಚು ಕಾಣಿಸಿಕೊಳ್ಳುವಂತೆ ಆತನು ಫಕ್ಕನೇ ಬಹಿರಂಗ ಗೊಳ್ಳುವನು, ಸೂರ್ಯನು ಉದಯಿಸುವಂತೆ ಕ್ರಮೇಣವಾಗಿ ಅಲ್ಲ ಎಂಬುದಾಗಿ ಭಾವಿಸಿದ್ದರು. ಆದರೆ ಸತ್ಯದ ಕ್ರಮೇಣವಾದ ಉದಯದಂತೆ ಆತನ ಪ್ರಸನ್ನತೆಯ ದಿನದ ಆಶೀರ್ವಾದವನ್ನು ಉದಾಹರಿಸುವ ಸೂರ್ಯೋದಯದ ದೃಶ್ಯವು ಎಷ್ಟೋ ಮನೋಹರ ವಾಗಿರುವುದಲ್ಲವೇ? ಈ ಚಿತ್ರಣದಲ್ಲಿ ಯೇಸು ಜಯಶಾಲಿಗಳನ್ನು ತನ್ನೊಂದಿಗೆ ಜೊತೆಗಾರರನ್ನಾಗಿ ಮಾಡಿಕೊಳ್ಳುವವನಾಗಿ "ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು" (ಮತ್ತಾಯ 13:43) ಎಂದಿದ್ದಾನೆ. ಪ್ರವಾದಿಯು ಇದೇ ಚಿತ್ರಣವನ್ನು ಉಪಯೋಗಿಸು ವವನಾಗಿ "ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ (ದೇವರ) ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣವುಳ್ಳವನಾಗಿ ಮೂಡುವನು" (ಮಲಾಕಿ 4:2). ಈ ಉದಯವು ಕ್ರಮೇಣವಾಗಿದೆ, ಅಂತ್ಯದಲ್ಲಿ ಪೂರ್ಣವಾದ ಪ್ರಕಾಶವು ಕೆಡುಕನ ಅಂಧಕಾರವನ್ನು, ಅಜ್ಞಾನವನ್ನು ಮತ್ತು ಪಾಪವನ್ನು ತೊಡೆದುಹಾಕುವುದು.

'parousia' (ಪರೋಷಿಯಾ) ಎಂಬ ಮತ್ತೊಂದು ಪದವನ್ನು ಸಹ ತಪ್ಪಾಗಿ ತರ್ಜುಮೆ ಮಾಡಿದ್ದು ವಚನವೃಂದದ ಅರ್ಥವನ್ನು ಮಂಕಾಗಿ ಮಾಡಿಯದೆ. Diaglott (ಡೈಯಗ್ಲೋಟ್) ಮತ್ತು ಪ್ರೊ॥ ಯಂಗ್ ಎಂಬುವವರ ಭಾಷಾಂತರದಲ್ಲಿ ಅದನ್ನು Presence (ಸಮಕ್ಷಮ) ಎಂಬುದಾಗಿ ಭಾಷಾಂತರಿಸಲಾಗಿದೆ, Rotherham's (ರೋಥರ್‌ಹಾಮ್ಸ್) ನಲ್ಲಿ ಅದನ್ನು arrival (ಆಗಮನ) ಎಂಬುದಾಗಿಯೂ, ಅದೇ ಸಮಯದಲ್ಲಿ A.V.ಯಲ್ಲಿ ಅದನ್ನು 'Coming' (ಬರೋಣ) ಎಂಬುದಾಗಿಯೂ ಭಾಷಾಂತರಿಸಲಾಗಿದೆ. Revised Version (ಪರಿಷ್ಕೃತ ಭಾಷಾಂತರದಲ್ಲಿ) ನಲ್ಲಿ ಈ ಕಡೆಯ ತಪ್ಪಾದ ಭಾಷಾಂತರವನ್ನು ಇಟ್ಟುಕೊಂಡಿರುವುದಾದರೂ, ಅಂಚಿನಲ್ಲಿ (marginal reading) ಇದು Presence (ಪ್ರತ್ಯಕ್ಷತೆ) ಎಂಬುದೇ ಗ್ರೀಕಿನ ಸರಿಯಾದ ವಿವರಣೆಯಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತದೆ. ಗ್ರೀಕ್ ಪದವಾದ 'parousia' (ಪರೋಷಿಯಾ) ಎಂಬುದು ಏಕಪ್ರಕಾರವಾಗಿ Presence (ಪ್ರತ್ಯಕ್ಷತೆ) ಎಂಬುದನ್ನು 'ಬಂದಿದೆ' ಅಥವಾ 'ಆಗಮಿಸಿದೆ' ಎಂಬುದಾಗಿ ಸೂಚಿಸುತ್ತದೆ; ಅದನ್ನು coming ಎಂಬ ಆಂಗ್ಲಪದವನ್ನು ಸಾಮಾನ್ಯವಾಗಿ ಉಪಯೋಗಿಸಿರುವಂತೆ 'ಬರಲಿದೆ' ಎಂಬುದನ್ನು ಸೂಚಿಸುತ್ತದೆ ಎಂಬುದಾಗಿ ಎಂದು ಎಂದಿಗೂ ಅರ್ಥಮಾಡಿಕೊಳ್ಳಬಾರದು. ನಾವೀಗ ಪರಿಗಣಿಸುತ್ತಿರುವ ವಾಕ್ಯ ಭಾಗವು ನಮಗೆ ಬೋಧಿಸುವುದೇನೆಂದರೆ "ಸೂರ್ಯನು ಕ್ರಮೇಣವಾಗಿ ಉದಯಿಸುವಂತೆ, ಮನುಷ್ಯಕುಮಾರನ ಪ್ರಸನ್ನತೆಯೂ ಕ್ರಮೇಣವಾಗಿ ಪ್ರಕಟಿಸಲ್ಪಡುತ್ತದೆ ಅಥವಾ ಬಹಿರಂಗಗೊಳ್ಳುತ್ತದೆ" ಎಂಬುದಾಗಿ.

ಈ ದುಷ್ಟಾಂತದೊಂದಿಗೆ, ಯೇಸು ನಮಗೆ ಆತನ ಎರಡನೆಯ ಆಗಮನದ ಕಾಲವನ್ನು ಮುಂದೂಡುವ, ಮತ್ತು ಸಭೆಯನ್ನು ಹಾದಿತಪ್ಪಿಸುವ ಲೆಕ್ಕಾಚಾರಗಳುಳ್ಳ ಕೆಲವೊಂದು ತಪ್ಪು ಪದಗಳನ್ನು ಉಪಯೋಗಿಸ ಬಾರದೆಂದು ಎಚ್ಚರಿಸಿದ್ದಾನೆ. 'ಇಗೋ, ಕ್ರಿಸ್ತನು ಇಲ್ಲಿದ್ದಾನೆ, ಅಲ್ಲಿದ್ದಾನೆ,..... ಅಡವಿಯಲ್ಲಿದ್ದಾನೆ ಹೇಳಿದರೆ ಹೊರಟು ಹೋಗಬೇಡಿರಿ; ಇಗೋ ಕೋಣೆಯಲ್ಲಿದ್ದಾರೆ ಎಂದರೆ ನಂಬಬೇಡಿರಿ. ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡವಣದವರೆಗೂ ಕಾಣಿಸುತ್ತದೆಯೋ ಹಾಗೆಯೇ ಮನುಷ್ಯಕುಮಾರನ ಪ್ರಸನ್ನತೆಯು ಇರುವುದು' (ಮತ್ತಾಯ 24:23,26,27) ಎಂದಿದ್ದಾನೆ. ಈ ರೀತಿಯಲ್ಲಿ ನಮ್ಮ ಕರ್ತನು ನಮ್ಮ ಕಾಲದಲ್ಲಿ ತ್ವರಿತವಾಗಿ ಹೆಚ್ಚುತ್ತಿರುವ ಎರಡು ತಪ್ಪುಗಳಿಂದ ನಮ್ಮನ್ನು ರಕ್ಷಿಸುವವನಾಗಿದ್ದಾನೆ. ಮೊದಲನೆಯದು, ನಮ್ಮ ಕರ್ತನು ಮಾಂಸಶರೀರಿಯಾಗಿ ಅರಣ್ಯದಿಂದ ಅಥವಾ ಪ್ಯಾಲೆಸ್ಟೈನಿನ ಅಡವಿಯಲ್ಲಿ ಹಿಂತಿರುಗಿ ಬರುತ್ತಾನೆ ಎಂಬುದು. ಹಾಗೆ ನಂಬುವವರಾಗಿ ಅನೇಕರು ಆ ಸ್ಥಳಕ್ಕೆ ಹೋಗಿ ಯೇಸುವನ್ನು ಮಾಂಸಶರೀರಿಯಾಗಿ, ಕ್ರೂಜೆಯಲ್ಲಿ ಘಾಯಗೊಂಡ

ಕಲೆಗಳೊಂದಿಗೆ, ಆತನು ಆಗ ಇದ್ದಹಾಗೆಯೇ ಇನ್ನೂ ಇರುತ್ತಾನೆಂದು ನಿರೀಕ್ಷಿಸುತ್ತಾ ಆತನನ್ನು ಕಾಣಲು ಕಾತುರದಿಂದ ಕಾಯುತ್ತಿದ್ದಾರೆ. ಆತನು ಹಿಂದೆ ಇರುವಂತೆ ಇರುತ್ತಾನೆಂದು ಮತ್ತು ಈಗ ಇರುವಂತೆ ಅಲ್ಲ ಎಂಬ ಆ ಕಠಿಣ ತಪ್ಪನ್ನು ಮಾಡುತ್ತಾ, ಆತನ ಪ್ರಥಮ ಆಗಮನದಲ್ಲಿ ಯೆಹೂದ್ಯರು ಮಾಡಿದಂತೆ ಸತ್ಯಕ್ಕೆ ತಮ್ಮನ್ನು ಕುರುಡಾಗಿಸಿಕೊಂಡಿದ್ದಾರೆ. ಇಂಥಾಃ ನಿರೀಕ್ಷೆಗಳು ಈ ವರ್ಗದವರನ್ನು "ಯೆರೂಸಲೇಮಿಗೆ ಮೂಡಲಲ್ಲಿ ಎದುರಾಗಿರುವ ಎಣ್ಣೆಯ ಮರಗಳ ಗುಡ್ಡದ ಮೇಲೆ ಆತನ ಪಾದಗಳು ನಿಂತಿರಲು ಆ ಗುಡ್ಡವು ಮೂಡಣದಿಂದ ಪಡುವಣದವರೆಗೆ ಉದ್ದಕ್ಕೂ ಸೀಳಿ ಹೋಗಿ ಮಧ್ಯದಲ್ಲಿ ದೊಡ್ಡ ಡೊಂಗರಾಗುವುದು. ಗುಡ್ಡದ ಅರ್ಧ ಭಾಗವು ತೆಂಕಲಿಗೆ ಸರಿದು, ನೀವು ನನ್ನ ಗುಡ್ಡಗಳ ನಡುವಣ ಆ ಡೊಂಗರದೊಳಕ್ಕೆ ಓಡಿಹೋಗುವಿರಿ" (ಜೆಕರ್ಯ 14:4) ಎಂಬ ಪ್ರವಾದಿಯು ಹೇಳಿದ ಮಾತುಗಳನ್ನು ಅಕ್ಷರಶಃವಾಗಿ ಅನುಸರಿಸುವಂತೆ ಮಾಡಿದೆ": (ನಾವು ಈ ಪ್ರವಾದನೆಯ ಮಾತುಗಳನ್ನು ಮತ್ತೊಮ್ಮೆ ಪರೀಕ್ಷಿಸುವಂತೆ ಬಿಡುತ್ತೇವೆ). ತಪ್ಪಾದ ನಿರೀಕ್ಷೆಗಳಿಂದ ಅಂಧರಾಗಿರುವ ಅವರು ಇಲ್ಲಿ ಹೇಳಿರುವ ಪಾದಗಳು ಎಂಬ ಪದವು ಕೀರ್ತನೆ 91:12; ಯೆಶಾಯ52:7; ಕೀರ್ತನೆ 8:6;110:1; ಎಫೆಸ 6:15; ಧರ್ಮೋಪದೇಶಕಾಂಡ 33:3 ಮತ್ತು ಇನ್ನೂ ಕೆಲವು ಕಡೆಗಳಲ್ಲಿರುವಂತೆ ರೂಪಕಾತ್ಮಕವಾಗಿದೆ ಎಂಬುದನ್ನು ಅರಿಯರು. ಅವರಿಗೆ ಯಾವುದನ್ನು ನಿರೀಕ್ಷಿಸಬೇಕೆಂಬುದು ತಿಳಿದಿದ್ದರೆ, ಅವರು ಮಾನವ ಶರೀರಧಾರಿಯಾದ ಯೇಸು ಕ್ರಿಸ್ತನನ್ನು ನೋಡಲು ಯೆರೂಸಲೇಮಿಗೆ ಹೋಗುತ್ತಿರಲಿಲ್ಲ. ಯಾಕೆಂದರೆ, ಉನ್ನತೋನ್ನತನಾದ ಅರಸನು ಸೂರ್ಯಪ್ರಕಾಶದಂತೆ ಇಳಿದುಬರುತ್ತಾನೆ, ಆತನ ಪ್ರಸನ್ನತೆ ಮತ್ತು ಪ್ರಭಾವವನ್ನು ಎಲ್ಲೆಡೆ ಅನುಭವವಾಗುವಂತೆ ಮಾಡುತ್ತಾನೆ. ಇದಕ್ಕೂ ಮುಂದೆ ಹೋಗದಿರಿ.

ಅವರು "ಇಗೋ (ರಹಸ್ಯ) ಕೋಣೆಯಲ್ಲಿದ್ದಾನೆ" ಎಂದು ಹೇಳಿದರೆ, ಅದನ್ನು ನಂಬಬೇಡಿರಿ. "ಆದರೆ ಅಂಥವರು ಸುಳ್ಳು ಅಪೋಸ್ತಲರೂ, ಮೋಸಗಾರರಾದ ಕೆಲಸದವರೂ ಕ್ರಿಸ್ತನ ಅಪೋಸ್ತಲರಾಗಿ ಕಾಣಿಸುವುದಕ್ಕೆ ವೇಷ ಹಾಕಿಕೊಳ್ಳುವವರೂ ಆಗಿದ್ದಾರೆ. ಇದೇನೂ ಆಶ್ಚರ್ಯವಲ್ಲ; ಸೈತಾನನು ತಾನೇ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ, ಅವನ ಸೇವಕರು ಸಹ ನೀತಿಗೆ ಸೇವಕರಾಗಿ ಕಾಣಿಸಿಕೊಳ್ಳುವುದಕ್ಕೆ ವೇಷ ಹಾಕಿಕೊಳ್ಳುವುದು ದೊಡ್ಡದಲ್ಲ" (2 ಕೊರಿಂಥ 11:13,14) ಎಂಬ ಮಾತಿನಂತೆ ಪ್ರೇತ ಸಂಪರ್ಕ ಸಿದ್ಧಾಂತಗಳು ಬೂಟಾಟಿಕೆಯಿಂದ ಮೋಸವಾಡಲು ಸಿದ್ಧರಾಗಿ ಮುಂದುವರೆದ ಸತ್ಯವನ್ನು ಪ್ರಕಾಶವಾದ ಉಡುಪಿನಂತೆ ಉಪಯೋಗಿಸಿಕೊಳ್ಳುತ್ತಾ ನಾವು ದೈವೇಚ್ಛೆಯು ಬದಲಾವಣೆಯು, ಮಹಿಮಾಕಾಲದ ಉದಯದ ಕಾಲದಲ್ಲಿದ್ದೇವೆಂದು ಹೇಳಿಕೊಳ್ಳಲು ಹಿಂಜರಿಯುವುದಿಲ್ಲ. ಅಂಥಾಃ ಇನ್ನೂ ಕೆಲವು ಸಂಗತಿಗಳಲ್ಲಿ ಅವರಲ್ಲಿ ಕೆಲವರು ಕ್ರಿಸ್ತನು ಪ್ರಸನ್ನನಾಗಿದ್ದಾನೆ ಎಂದು ಹೇಳುವಾಗ ನಾವು ಅನುಮಾನಿಸುವುದಿಲ್ಲ, ಇದಕ್ಕೂ ಬಹಳ ಮುಂಚೆ ಅವರುಗಳು ಆಧ್ಯಾತ್ಮಿಕ ಸಭೆಗಳಲ್ಲಿ ನಾವು ಆತನನ್ನು ರಹಸ್ಯ ಕೋಣೆಗಳಲ್ಲಿ ತೋರಿಸುತ್ತೇವೆಂದು ಹೇಳಿಕೊಳ್ಳುತ್ತಾರೆ. ತಪ್ಪು ಈ ರೀತಿಯಾಗಿಯೂ ಅಥವಾ ಬೇರೆ ಯಾವುದೇ ರೀತಿಯಾಗಿಯೂ ಇರುವುದರಿಂದ ನಾವು ನಮ್ಮ ಕರ್ತನ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡು ಅಂಥಾಃ ಹೇಳಿಕೆಗಳು ಅಸತ್ಯವಾದವುಗಳೆಂದು ತಿಳಿದು ಅವುಗಳನ್ನು ಒಪ್ಪಿಕೊಳ್ಳಕೂಡದು. ಆತನು ಆ ರೀತಿಯಾಗಿ ತನ್ನನ್ನು ಬಹಿರಂಗಗೊಳಿಸಿಕೊಳ್ಳುವ ಯಾವುದೇ ಇಷ್ಟವನ್ನು ವ್ಯಕ್ತಪಡಿಸಿರುವುದಿಲ್ಲ, ಆದರೆ ಸೂರ್ಯ ಪ್ರಕಾಶವು ಕ್ರಮೇಣವಾಗಿ ಹೊರಸೂಸುವಂತೆ. ನೀತಿ ಸೂರ್ಯನು ತನ್ನ ಗುಣಪಡಿಸುವ ಗುಣಗಳೊಂದಿಗೆ ಮೂಡಿಬರುವನು ಎಂಬುದನ್ನು ತಿಳಿದುಕೊಳ್ಳಬೇಕು.

## ಸುಗ್ಗಿಯ ಕಾಲದಲ್ಲಿ ನಮ್ಮ ಕರ್ತನ ದ್ವಿತಿಯಾಗಮನ – Our Lord's Parousia in the Harvest

ಗ್ರೀಕ್ ಭಾಷೆಯು ಯುಥೋಚಿತವಾದ ಭಾಷೆಯಾಗಿದೆ: ವಾಸ್ತವವಾಗಿ ಸತ್ಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದರಿಂದ ಅದರ ಮೌಲ್ಯವು ಹೆಚ್ಚಿಸಲ್ಪಡುತ್ತದೆ. ಈ ಪ್ರಕಾರ, ಉದಾಹರಣೆಗಾಗಿ, ನಮ್ಮ ಸಾಮಾನ್ಯವಾದ ಆಂಗ್ಲ ಸತ್ಯವೇದಗಳಲ್ಲಿ, Come ಎಂಬ ಪದವನ್ನು ಮೂವತ್ತೆರಡು ಗ್ರೀಕ್ ಪದಗಳನ್ನು ತರ್ಜುಮೆ ಮಾಡಲು ಉಪಯೋಗಿಸಲಾಗಿದೆ. ಇದರಲ್ಲಿ ಪ್ರತಿಯೊಂದಕ್ಕೂ ಅಪ್ಪಟವಾದ ವ್ಯತ್ಯಾಸದ ಛಾಯೆಯಿದೆ. ಉದಾಹರಣೆಗೆ: ephistemi (ಎಫಿಸ್ಟೆಮಿ) ಎಂಬುದು ಲೂಕ 21:34ರಲ್ಲಿ to overtake (ಟು ಓವರ್‌ಟೇಕ್) ಎಂಬುದಾಗಿ ಸೂಚಿಸಲ್ಪಟ್ಟಿದೆ – "ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೇ ಬಂದೀತು" [Come upon (overtake) you unawares; ಆ ದಿನವು ಉರ್ಲಿನಂತೆ ನಿಮ್ಮ ಮೇಲೆ ಫಕ್ಕನೇ ಬಂದೀತು] ; Sunerchomai (ಸುನರ್‌ಚೋಮಾಯ್) ಎಂಬುದು 1 ಕೊರಿ. 11:18 ರಲ್ಲಿ Come together ಎಂಬುದನ್ನು ಸೂಚಿಸುತ್ತದೆ – [Come together as Church – ನೀವು ಸಭೆಯಾಗಿ ಕೂಡಿ ಬರುವಾಗ] Proserchomai (ಪ್ರೊಸರ್ಚೋಮಾಯ್) ಎಂಬುದು ಇಬ್ರಿಯ 4:16 ರಲ್ಲಿ ಕಂಡುಬರುವಂತೆ approach or Come toward ಎಂಬುದನ್ನು ಸೂಚಿಸುತ್ತದೆ

[Let us therefore come boldly – ಧೈರ್ಯದಿಂದ ಕೃಪಾಸನದ ಮುಂದೆ ಬರೋಣ]. Heko (ಹೆಕೊ) ಎಂಬುದು ಯೋಹಾನ 2:4ರಲ್ಲಿ ಕಂಡುಬರುವಂತೆ arrive, or Come or came ಎಂಬುದನ್ನು ಸೂಚಿಸುತ್ತದೆ (ಬರುವ ಕಾರ್ಯವು ಮುಗಿದಿದೆ), ಯೋಹಾನ 2:4 – [Mine hour is not yet come – ನನ್ನ ಸಮಯವು ಇನ್ನೂ ಬಂದಿಲ್ಲ] Enistemi (ಎನಿಸ್ಟೆಮಿ) ಎಂಬುದು Present ಎಂಬುದನ್ನು ಸೂಚಿಸುತ್ತದೆ; ಹೀಗೆ ತರ್ಜುಮೆಗೊಳಿಸಬೇಕಾಗಿದ್ದ ಎರಡು ಸ್ಥಳಗಳನ್ನು ಹೊರತುಪಡಿಸಿ [2 ತಿಮೋ. 3:1 – Perilous time has come, be present (ಕಠಿಣ ಕಾಲಗಳು ಬರುವವು) 2 ಥೆಸ. 2:2 The day of Christ is at hand – ಕರ್ತನ ದಿನವು ಈಗಲೇ ಹತ್ತಿರವಾಯಿತು] To be present ಎಂಬುದನ್ನುಸೂಚಿಸುತ್ತದೆ. Parousia ಎಂಬುದು ಸಹಾ Presence ಎಂಬುದನ್ನು ಸೂಚಿಸುತ್ತದೆ. ಅದನ್ನು A.V. ಯಲ್ಲಿರುವಂತೆ Coming ಎಂಬುದಾಗಿ ಎಂದೂ ತರ್ಜುಮೆಗೊಳಿಸಲಾಗದು. ಅಲ್ಲಿ ಅದನ್ನು ಎರಡು ಸಲ ಸರಿಯಾಗಿ Presence ಎಂಬುದಾಗಿ ತರ್ಜುಮೆ ಗೊಳಿಸಲಾಗಿದೆ (2 ಕೊರಿಂಥ 10:10 ಮತ್ತು ಫಿಲಿಪ್ಪಿ 2:12). The Emphatic Diaglott ಎಂಬ ಹೊಸ ಒಡಂಬಡಿಕೆಯ ಬಹು ಮೌಲ್ಯವುಳ್ಳ ಭಾಷಾಂತರದಲ್ಲಿ Parousia* (ಆಗಮನ) ಎಂಬ ಪದವನ್ನು ಸರಿಯಾಗಿ Presence ಎಂಬುದಾಗಿ ಬಹಳಮಟ್ಟಿಗೆ ಅದು ಕಂಡುಬರುವ ಕಡೆಗಳಲ್ಲೆಲ್ಲಾ ತರ್ಜುಮೆಮಾಡಲಾಗಿದೆ.

Heko ಮತ್ತು Parousia ಎಂಬ ಎರಡು ಪದಗಳು, ಮತ್ತು ಹೊಸ ಒಡಂಬಡಿಕೆಯಲ್ಲಿ ಅವುಗಳ ಉಪಯೋಗವು. ವಿಶಿಷ್ಟವಾಗಿ ಇವುಗಳಲ್ಲಿ ಎರಡನೆಯದರ ಬಗ್ಗೆ ನಾವು ಪ್ರಸ್ತುತದಲ್ಲಿ ಗಮನಿಸಲು ಬಯಸಿದಂತೆ ಸಾಗುತ್ತಿದೆ. ಯಾಕೆಂದರೆ ಅವುಗಳ ಸೂಚನೆಯ ಸರಿಯಾದ ಮೆಚ್ಚುಗೆಯು ನಮ್ಮ ಕರ್ತನ ಹಿಂದಿರುಗುವಿಕೆಯ ಬಗ್ಗೆ ಅವುಗಳು ಕಂಡುಬರುವ ವಾಕ್ಯವೃಂದಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ, ಆದರೆ ಸಾಮಾನ್ಯವಾದ ಮತ್ತು ತಪ್ಪಾದ ತರ್ಜುಮೆಯು ಆ ಅಂಶವು illuminate ಎಂಬುದಾಗಿರ ಬೇಕೆಂಬುದನ್ನು ಅದು ಮೊಬ್ಬಾಗಿಸುತ್ತದೆ.*

Parousia (ಪರೋಷಿಯಾ) ಪದದ ಅರ್ಥದ ಬಗ್ಗೆ ಮನಸ್ಸಿನಲ್ಲಿ ಸರಿಯಾದ ಆಲೋಚನೆ ಮಾಡಿದರೆ, Coming (ಆಗಮಿಸು) ಅಲ್ಲ, ಮಾರ್ಗದಲ್ಲಿರುವುದು ಎಂಬುದಾಗಿಯೂ ಅಲ್ಲ, ಆದರೆ ಬಂದ ನಂತರದಲ್ಲಿನ Presence (ಪ್ರತ್ಯಕ್ಷತೆ) ಎಂಬುದರ ಬಗ್ಗೆ ನಾವು ಆ ಪದವು ಉಪಯೋಗವಾಗಿರುವ ಕೆಲವೊಂದು ವಾಕ್ಯಭಾಗಗಳನ್ನು ಪರೀಕ್ಷಿಸೋಣ. ಇವುಗಳಿಂದ ನಾವು Presence (ಪ್ರತ್ಯಕ್ಷತೆ) ಎಂಬುದು ಅಗತ್ಯವಾಗಿ Sight ಎಂಬ ಅಭಿಪ್ರಾಯ ಸೂಚಿಸುವುದಿಲ್ಲ. ಆದರೆ ಅದು ಸಂಗತಿಗಳು ಕಾಣಿಸದಿದ್ದರೂ ಹಾಜರಾಗಿದೆ/ಉಪಸ್ಥಿತಿಯಲ್ಲಿವೆ ಎಂಬದಾಗಿ ಅನ್ವಯಿಸುತ್ತದೆ ಎಂಬುದನ್ನು ಕಲಿತುಕೊಳ್ಳುತ್ತೇವೆ. ಉದಾಹರಣೆಗೆ, ದೇವದೂತರುಗಳು, ಆತ್ಮೀಕ ಜೀವಿಗಳು ನಮ್ಮೊಂದಿಗೆ ಇರಲು ಸಾಧ್ಯ, ಆದರೂ ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ಹೇಗೆಂದರೆ, ನಮ್ಮ ಕರ್ತನು ಪುನರುತ್ಥಾನದ ನಂತರದ ನಾಲ್ವತ್ತು ದಿನಗಳಲ್ಲಿ ಈ ಲೋಕದಲ್ಲಿದ್ದರೂ, ಈಗಾಗಲೇ ಉಲ್ಲೇಖಿಸಿರುವಂತೆ ಆತನ ಶಿಷ್ಯರಿಗೆ ಕೆಲವೊಮ್ಮೆ ಮಾತ್ರ ಹೊರತುಪಡಿಸಿ ಉಳಿದ ಕಾಲಗಳಲ್ಲಿ ಕಾಣಿಸದೇ ಇದ್ದಂತೆ ಅವುಗಳೂ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆ ದಿನಗಳಲ್ಲಿ, ಹಿಂದಿನ ಆತನ ಮೂವತ್ತಮೂರುವರೆ ವರ್ಷಗಳೂ ಆತನ Parousia (Presence) ದಿನಗಳು ಇದ್ದಂತೆಯೇ ಇತ್ತು.

ಮತ್ತಾಯ 24:3ರಲ್ಲಿನ ಶಿಷ್ಯರ ಪ್ರಶ್ನೆಯ ಮೊದಲು ನಡೆದ ಸಂಭಾಷಣೆಯಲ್ಲಿ ನಮ್ಮ ಕರ್ತನು ಯೆರೂಸಲೇಮ್ ದೇವಾಲಯದ ನಾಶನದ ಬಗ್ಗೆ ಅವರಿಗೆ ಮುಂತಿಳಿಸಿರುವನು ಹಾಗೂ ಶಾರೀರಿಕ ಇಸ್ರಾಯೇಲ್ಯರು ಆತನನ್ನು ಮೆಸ್ಸೀಯನೆಂದು ಸಂತೋಷದಿಂದ ಅಂಗೀಕರಿಸಿ ಆತನಿಗೆ ಸ್ತೋತ್ರಸಲ್ಲಿಸುವ ತನಕ ಅವರನ್ನು ನಿರಾಕರಿಸುವೆನೆಂದು ಹೇಳಿದನು. ಅದಲ್ಲದೆ ಆತನು ತಾನು ಹೊರಟುಹೋಗಿ, ತಿರುಗಿ ಬಂದ ನಂತರ ಅವರನ್ನೂ ತನ್ನೊಡನೆ ಕರಕೊಂಡು ಹೋಗುತ್ತೇನೆಂದು ಹೇಳಿದನು. ಆತನು ಅವರ ದಿನವನ್ನು 'ಸುಗ್ಗಿಯ ದಿನ', ಅಥವಾ ಆ ಯೆಹೂದ್ಯ ಯುಗದ ಸಮಾಪ್ತಿ ಎಂದು ಕರೆದನು ಮತ್ತು ಆತನು ಅವರಿಗೆ ಭವಿಷ್ಯದ ಸುಗ್ಗೀಕಾಲವು ಆತನ ಎರಡನೆಯ ಬರೋಣದ ಸಮಯವಾಗಿದೆ ಎಂದೂ ಹೇಳಿದನು (ಮತ್ತಾಯ 9:37,38; 13:39,40). ಆತನ ಪ್ರಥಮ ಆಗಮನದಲ್ಲಿ ಆತನೇ ಕ್ರಿಸ್ತನೆಂದು ಕೆಲವರು ಮಾತ್ರ ಗುರುತಿಸಿದರು ಎಂಬುದರಲ್ಲಿ ಸಂಶಯಪಡದೆ ನೆನಪಿನಲ್ಲಿ ಇಟ್ಟುಕೊಂಡಿದ್ದವರು ಆತನ ಎರಡನೆಯ ಬರೋಣದಲ್ಲಿ ಆತನನ್ನು ಹೇಗೆ ಗುರುತಿಸುವುದೆಂದು ಅವರಿಗೆ ತಿಳಿಯಬೇಕಾಗಿತ್ತು – ಅದು ಬಹುಶಃ ಅವರ ಕಾಲದಲ್ಲಿಯೇ ಆಗುವುದೆಂದು ಭಾವಿಸಿದರು. ಆದುದರಿಂದ ಅವರು ಆತನಿಗೆ – "ಅದು ಯಾವಾಗ ಆಗುವುದು? ನೀನು

* ಪದ "ಪ್ರತ್ಯಕ್ಷತೆ" ಗ್ರೀಕ್ ಒಡಂಬಡಿಕೆಯಲ್ಲಿ 24 ಬಾರಿ ಕಾಣಿಸಿದೆ. ಆದರೆ ಆಂಗ್ಲಭಾಷೆಯಲ್ಲಿ ಎರಡು ಬಾರಿ ಮಾತ್ರ ವ. (2 ಕೊರಿಂಥ 10:10; ಫಿಲಿಪ್ಪ 2:12) ಸರಿಯಾಗಿ ಪ್ರತ್ಯಕ್ಷವೆ ಎಂದು ಭಾಷಾಂತರಿಸಿದೆ. ಇತರೆ ಕಡೆಗಳಲ್ಲಲಿ ತಪ್ಪಾಗಿರುವ ಅನುವಾದಗಳು : ಮತ್ತಾಯ 24:3, 27, 37, 39; 1 ಕೊರಿಂಥ 15:23; 16; 17; 2 ಕೊರಿಂಥ 15:23, 16: 17; 2 ಕೊರಿಂಥ 7:6,7; ಫಿಲಿಪ್ಪ 1:26; 1 ಥೆಸಲೋನಿಕ 2:19; 3: 13; 4: 15; 23; 2 ಥೆಸ. 2: 1, 8, 9; ಯಾಕೋಬ 5:7,8; 2 ಪೇತ್ರ 1: 16; 3: 4, 12; 1 ಯೋಹಾನ 2:28.

ಪ್ರತ್ಯಕ್ಷನಾಗುವುದಕ್ಕೂ ಯುಗದ ಸಮಾಪ್ತಿಗೂ ಸೂಚನೆ ಏನು?" (ಮತ್ತಾಯ 24:3) ಎಂದು ವಿಚಾರಿಸಿದರು.

ಅವರು ಈಗಾಗಲೇ ಇರುವ ಯೆಹೂದ್ಯಯುಗದ ಅಥವಾ ಸುಗ್ಗಿಯ ಮುಕ್ತಾಯದ ಸಂಗತಿಗಳನ್ನು ಆಗಿನ ಭವಿಷ್ಯದ 'ಸುಗ್ಗಿ'ಯೊಂದಿಗೆ ಅಥವಾ ಸುವಾರ್ತಾ ಯುಗದ ಮುಕ್ತಾಯದೊಂದಿಗೆ ಬೆರೆಸುವ ಪ್ರವೃತ್ತಿ ಅವರಲ್ಲಿದ್ದರಿಂದ, ನಮ್ಮ ಕರ್ತನು ಅವರಿಗೆ ನಡುವೆ ತಲೆದೋರುವ ಘಟನೆಗಳ ವಿವರವಾದ ವರದಿಯನ್ನು ಅವರಿಗೆ ನೀಡಿದನಾದರೂ, ಮಧ್ಯಕಾಲದ ಗಣನೀಯ ಸಮಯವು ಕಳೆದು ಹೋಗುವುದರ ಬಗ್ಗೆ ಸ್ಪಷ್ಟಪಡಿಸಿದನಾದರೂ, ಅದರ ವಿಸ್ತಾರದ ಬಗ್ಗೆ ಯಾವುದೇ ಸ್ಪಷ್ಟವಾದ ಕಲ್ಪನೆಯನ್ನು ನೀಡಲಿಲ್ಲ. ಯಾಕೆಂದರೆ, ಆತನಿಗೆ ಸಹ ಆ ಸಮಯದ ವಿಸ್ತಾರತೆಯ ಬಗ್ಗೆ ತಿಳಿದಿರಲಿಲ್ಲ (ಮಾರ್ಕ 13:32).

ಮತ್ತಾಯ 24ರಲ್ಲಿನ 1 ರಿಂದ 14ರ ವರೆಗಿನ ವಚನಗಳು ಸಮಗ್ರ ಸುವಾರ್ತಾಯುಗವನ್ನು ವ್ಯಾಪಿಸುತ್ತದೆ. ಮುಂದಿನ 15 ರಿಂದ 22ರವರೆಗಿನ ವಚನಗಳು ಯೆಹೂದ್ಯ ಯುಗಕ್ಕೆ, ಮತ್ತು ಸಾಂಕೇತಿಕವಾಗಿ ಸುವಾರ್ತಾ ಯುಗದ ಅಂತ್ಯಕ್ಕೆ ಅಕ್ಷರಶಃವಾಗಿ ದ್ವಿಗುಣವಾದ ಅನ್ವಯವನ್ನು ಹೊಂದಿದೆ. ಇದರಲ್ಲಿ ಯೆಹೂದ್ಯ ಯುಗವು ನೆರಳಾಗಿದೆ. 23 ರಿಂದ 26ರ ವರೆಗಿನ ವಚನಗಳು ಸುಳ್ಳು ಕ್ರಿಸ್ತನ ಬಗೆಗಿನ ಎಚ್ಚರಿಕೆಯ ಮಾತುಗಳಾಗಿವೆ ಮತ್ತು 27ನೇ ವಚನದಲ್ಲಿ ಅವರು ಆತನ ದ್ವಿತೀಯಾಗಮನದ ಪ್ರತ್ಯಕ್ಷತೆ (Parousia) ಬಗ್ಗೆ ಎತ್ತಿದ ಪ್ರಶ್ನೆಯ ಬಗ್ಗೆ ತಲಪುತ್ತಾನೆ ಮತ್ತು "ಪ್ರಕಾಶಮಯವಾದ ಬೆಳಕು (ಸೂರ್ಯನ) ಮೂಡಣದಿಂದ ಹೊರಟು ಬಂದು ಪಡುವಣದವರೆಗೂ ಬೆಳಗುವಂತೆ ಮನುಷ್ಯಕುಮಾರನ ಪ್ರತ್ಯಕ್ಷತೆ ದ್ವಿತೀಯಾಗಮನವೂ ಇರುತ್ತದೆ" ಎಂದು ಘೋಷಿಸುತ್ತಾನೆ (ಇದು ಸರಿಯಾದ ಭಾಷಾಂತರ). ಸೂರ್ಯನ ಪ್ರಕಾಶವು ಯಾವ ಸದ್ದಿಲ್ಲದೇ ತತ್ಕ್ಷಣದಲ್ಲಿ ಪ್ರಸನ್ನಗೊಳ್ಳುವುದು ಮತ್ತು ಮೊದಲು ಎಚ್ಚರಗೊಳ್ಳುವವರು ಇದನ್ನು ಪ್ರಥಮವಾಗಿ ಗ್ರಹಿಸುವರು.

ಸರಿಯಾದ ಸ್ಥಳದ ಬಗ್ಗೆ ಅವರ ಪರಿಶೀಲನೆಯ ವಿಚಾರದ ನಮ್ಮ ಕರ್ತನ ಪ್ರವಚನದ ಇತರೆ ಮಧ್ಯಂತರ ಲಕ್ಷಣಗಳನ್ನು ಬಿಟ್ಟು ನಾವು ವಚನ 37 ಮತ್ತು 39ರಲ್ಲಿ "ನೋಹನ ಕಾಲದಲ್ಲಿ ಹೇಗಿದ್ದವೋ ಹಾಗೆಯೇ ಮನುಷ್ಯ ಕುಮಾರನ ಪ್ರಸನ್ನತೆಯೂ ಇರುವುದು" ಎಂದು ಗಮನಿಸುತ್ತೇವೆ. ಇಲ್ಲಿನ ಹೋಲಿಕೆಯು ನೋಹನ ಬರುವಿಕೆ ಮತ್ತು ಕರ್ತನ ಆಗಮನ ಇವುಗಳ ಮಧ್ಯೆ ಅಲ್ಲ ಅಥವಾ ಪ್ರಳಯದ ಬರುವಿಕೆ ಮತ್ತು ಯೇಸುವಿನ ಬರುವಿಕೆಯ ಬಗ್ಗೆಯೂ ಅಲ್ಲ. ನೋಹನ ಬರುವಿಕೆಯನ್ನಾಗಲೀ, ಕರ್ತನ ಬರುವಿಕೆಯನ್ನಾಗಲೀ ಎಲ್ಲೂ ಉಲ್ಲೇಖಿಸಿರುವುದಿಲ್ಲ. ಯಾಕೆಂದರೆ, ಈಗಾಗಲೇ ಹೇಳಿರುವಂತೆ Parousia (ಪರೋಷಿಯಾ) ಎನ್ನುವುದು ಬರುವಿಕೆ ಅಲ್ಲ ಪ್ರತ್ಯಕ್ಷತೆ (Presence). ಭಿನ್ನತೆ ಏನೆಂದರೆ ಪ್ರಳಯಕ್ಕೆ ಮೊದಲು ಆತನ ಜನರ ಮುಂದೆ ನೋಹನ ಪ್ರತ್ಯಕ್ಷತೆ ಮತ್ತು ಬೆಂಕಿಗೆ ಮೊದಲು ಲೋಕದಲ್ಲಿ ಕರ್ತನ ಪ್ರತ್ಯಕ್ಷತೆ – ಕರ್ತನ ಮಹಾಸಂಕಟಗಳ ದಿನದಲ್ಲಿ ಈ ಯುಗವು ಮುಕ್ತಾಯಗೊಳ್ಳುವದು.

ನೋಹನ ದಿನಗಳಲ್ಲಿ ಪ್ರವಾಹದ ಮೊದಲು ಜನರು ದುಷ್ಟರಾಗಿದ್ದರು. ಹಾಗೆಯೇ ಕರ್ತನ ಪ್ರತ್ಯಕ್ಷತೆಯ ಸಮಯದಲ್ಲಿ ಸುಡುವ ಬೆಂಕಿಯ ಸಂಕಷ್ಟವು ಅವರ ಮೇಲೆ ಬರುವ ಮುನ್ನ ಜನರು ದುಷ್ಟರಾಗಿರುತ್ತಾರೆ. ಆದರೂ, ನಮ್ಮ ಕರ್ತನು ಹೋಲಿಕೆ ಮಾಡುತ್ತಿರುವುದು ಇದನ್ನಲ್ಲ. ಯಾಕೆಂದರೆ, ದುಷ್ಟತನವು ಎಲ್ಲಾ ಕಾಲಗಳಲ್ಲಿಯೂ ತುಂಬಿರುತ್ತದೆ. ಹೋಲಿಕೆಯ ಅಂಶವನ್ನು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಮತ್ತು ನಾವು ವಿಮರ್ಶಾತ್ಮಕವಾಗಿ ಓದಿಕೊಳ್ಳುವಾಗ ಕೂಡಲೇ ಕಂಡುಬರುತ್ತದೆ. ನೋಹನ ಕುಟುಂಬದವರನ್ನು ಹೊರತುಪಡಿಸಿ ಉಳಿದ ಎಲ್ಲಾ ಜನರಿಗೆ ಪ್ರಳಯವುಂಟಾಗುವ ಬಗ್ಗೆ ಸರಿಯಾದ ತಿಳುವಳಿಕೆಯಿರಲಿಲ್ಲ, ನೋಹ ಮತ್ತು ಆತನ ಕುಟುಂಬದವರ ಸಾಕ್ಷಿಯನ್ನು ಅವರು ನಂಬಲಿಲ್ಲ, ಆದುದರಿಂದ ಅವರಿಗೆ ಅದು ತಿಳಿಯಲಿಲ್ಲ ಮತ್ತು ಇದುವೇ ಹೋಲಿಕೆಮಾಡುವ ಅಂಶ. ಮನುಷ್ಯ ಕುಮಾರನ ಪ್ರತ್ಯಕ್ಷತೆಯೂ ಹಾಗೆಯೂ ಇರುವುದು, ಕರ್ತನ ಕುಟುಂಬ ಸದಸ್ಯರ ಹೊರತಾಗಿ ಬೇರೆ ಯಾರೂ ಇದನ್ನು ನಂಬುವುದಿಲ್ಲ. ಈಗ ಸಂಘಟಿತವಾಗಿರುವ ಸಮಾಜವು ಈಗ ಸಮೀಪಿಸುತ್ತಿರುವ ಸಂಕಟದ ದಿನದಲ್ಲಿ ಕಡು ಬೆಂಕಿಗೆ ಕರಗಿಹೋಗುವವರೆಗೂ ಇದು ತಿಳಿಯುವುದಿಲ್ಲ. ಇವು "ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ, ಕುಡಿಯುತ್ತಾ, ಮದುವೆಯನ್ನು ಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ ಇದ್ದು (ಲೂಕನ ಸುವಾರ್ತೆ 17:28ರಲ್ಲಿ ಲೋಟನು ಸೋದೋಮನ್ನು ಬಿಟ್ಟು ಹೋದ ದಿವಸದಲ್ಲಿ ಅವರು ಕೊಳ್ಳುತ್ತಿದ್ದರು, ಮಾರುತ್ತಿದ್ದರು, ನೆಡುತ್ತಿದ್ದರು, ಕಟ್ಟುತ್ತಿದ್ದರು ಎಂದಿದೆ). ಪ್ರಳಯದ ನೀರು ಬಂದು ಎಲ್ಲರನ್ನೂ ಬಡಕೊಂಡು ಹೋಗುವ ತನಕ ಏನೂ ತಿಳಿಯದೇ ಇದ್ದರಲ್ಲ" (ಮತ್ತಾಯ 24:38–39) ಎಂಬ ಆತನ ಮಾತುಗಳಲ್ಲಿ ಉದಾಹರಿಸಲ್ಪಟ್ಟಿದೆ. ಅದರಂತೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯ ದಿನ (Parousia) ದಲ್ಲಿಯೂ ಅದೇ ರೀತಿಯಾಗಿ ಇರುವುದು. ಆದುದರಿಂದ ಕರ್ತನ ಪ್ರತ್ಯಕ್ಷತೆಯ ಸಮಯದಲ್ಲಿಯೂ ಈ ಲೋಕದ ಜನರು ತಿನ್ನುತ್ತಾ, ಕುಡಿಯುತ್ತಾ, ನೆಡುತ್ತಾ, ಕಟ್ಟುತ್ತಾ,

ಮದುವೆ ಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ ಇರುವರು ಎಂಬುದು ಅವು ಪಾಪಕರ ಸಂಗತಿಯೆಂದು ಹೇಳದೆ ಆತನ ಪ್ರಸನ್ನತೆಯ ಬಗ್ಗೆ, ಈ ಲೋಕಕ್ಕೆ ಬರುವ ತೊಂದರೆಯ ಬಗ್ಗೆ ಅವರ ಅಜ್ಞಾನವನ್ನು ಸೂಚಿಸುವುದಾಗಿದೆ ಎಂದು ಹೇಳುತ್ತದೆ. ಆದುದರಿಂದ ಇದು "ಅದು ಯಾವಾಗ ಆಗುವುದು? ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಅಥವಾ ಸುಗ್ಗಿಯ ಸಮಾಪ್ತಿಗೂ ಸೂಚನೆಯೇ?" (ವ. 24:3) ಎಂಬ ಕರ್ತನ ಶಿಷ್ಯರ ಪ್ರಶ್ನೆಗೆ ಆತನು ನೀಡಿದ ಉತ್ತರವಾಗಿದೆ. ತಾತ್ಪರ್ಯವಾಗಿ, ಆತನು ಹೇಳಿದ್ದೇನೆಂದರೆ ಈ ಲೋಕದ ಜನಸಮೂಹಕ್ಕೆ ಯಾವುದೇ ಸೂಚನೆಗಳಿರುವುದಿಲ್ಲ; ಅವರಿಗೆ ನನ್ನ ಪ್ರತ್ಯಕ್ಷತೆಯ ಬಗ್ಗೆ ಮತ್ತು ನೂತನ ದೈವೇಚ್ಛೆಯ ಬದಲಾವಣೆಗಳ ಬಗ್ಗೆ ತಿಳಿದುಬರುವುದಿಲ್ಲ. ಈ ಲೋಕವು ಗ್ರಹಿಸಬಹುದಾದ ಯಾವುದೇ ಸೂಚನೆಗಳು ಕಂಡುಬರುವ ಮೊದಲೇ ದೇವರಿಂದ ಕಲಿತು ಕೊಂಡವರಾದ ಕೆಲವರಿಗೆ ಮಾತ್ರವೇ ಅದು ತಿಳಿಯುತ್ತದೆ (ಇಲ್ಲಿ ವಿವರಿಸಿದ ರೀತಿಯಲ್ಲಿ ಅಲ್ಲ).

ಈ ಪ್ರವಚನದ ಬಗ್ಗೆ ಲೂಕನ ವರದಿಯು (ಲೂಕ 17:26–29) ಇದೇ ಮಾತುಗಳಲ್ಲಿ ಅಲ್ಲವಾದರೂ ಇದಕ್ಕೆ ಸೂಕ್ತವಾಗಿ ಅನುಗುಣವಾಗಿದೆ. ಲೂಕನು Parousia (ಪರೋಷಿಯಾ) ಎಂಬ ಪದವನ್ನು ಬಳಸುವುದಿಲ್ಲ. ಆದರೆ ಆತನು ಇದೇ ಆಲೋಚನೆಯನ್ನು "ನೋಹನ ದಿವಸಗಳಲ್ಲಿ ನಡೆದ ಹಾಗೆಯೇ ಮನುಷ್ಯಕುಮಾರನ ದಿವಸಗಳಲ್ಲಿಯೂ ನಡೆಯುವುದು" (ಲೂಕ 17:26) ಎಂಬ ಮಾತುಗಳಲ್ಲಿ ವ್ಯಕ್ತಪಡಿಸುತ್ತಾನೆ – ಆತನ ಪ್ರತ್ಯಕ್ಷತೆಯ ದಿನದಲ್ಲಿ, ದಿನದ ಮುಂಚೆಯೂ ಅಲ್ಲ, ಆತನ ದಿನದ ನಂತರವೂ ಅಲ್ಲ, ಆದರೆ ಆತನ ದಿನದಲ್ಲಿಯೇ ಈ ಲೋಕದವರು ತಿನ್ನುತ್ತಾ, ಕುಡಿಯುತ್ತಾ, ಮದುವೆ ಮಾಡಿಕೊಳ್ಳುತ್ತಾ, ಕೊಂಡುಕೊಳ್ಳುತ್ತಾ, ಮಾರುತ್ತಾ, ನೆಡುತ್ತಾ, ಕಟ್ಟುತ್ತಾ ಇರುತ್ತಾರೆ. ಹಾಗಾದರೆ, ಈ ಪರಿಶುದ್ಧ ವಚನಗಳು ಸ್ಪಷ್ಟವಾಗಿ ನಮಗೆ ನಮ್ಮ ಕರ್ತನು ಯುಗದ ಅಂತ್ಯದಲ್ಲಿ ಪ್ರಸನ್ನನಾಗುತ್ತಾನೆ ಎಂಬುದು ಈ ಲೋಕದವರಿಗೆ ತಿಳಿಯುವುದೂ ಇಲ್ಲ, ಅವರು ಅದನ್ನು ಕಾಣುವುದೂ ಇಲ್ಲ ಎಂದು ಬೋಧಿಸುತ್ತದೆ.

ಈ ಲೋಕವನ್ನು ಸಂಪೂರ್ಣವಾಗಿ ನಾಶಪಡಿಸುವ ಮತ್ತೊಂದು ಜಲಪ್ರಳಯವು ಸಂಭವಿಸುವುದಿಲ್ಲ ಎಂತಲೂ (ಆದಿ. 9:11), "ಲೋಕವೆಲ್ಲಾ ನನ್ನ ರೋಷಾಗ್ನಿಗೆ ತುತ್ತಾಗುವುದಷ್ಟೆ" (ಚೆಫನ್ಯ 3:8) ಎಂದೂ ಬರೆದದೆ. ಎರಡು ಸಂದರ್ಭಗಳಲ್ಲಿಯೂ ಅಕ್ಷರಶಃವಾದ ಭೌತಿಕ ಲೋಕವಲ್ಲ, ಆದರೆ ಎರಡರಲ್ಲಿರುವ ಚಾಲ್ತಿಯಲ್ಲಿರುವ ಕ್ರಮಗಳು; ಮೊದಲನೆಯ ಪ್ರಕರಣದಲ್ಲಿ ನೋಹನ ಕುಟುಂಬದವರನ್ನು ಹೊರತುಪಡಿಸಿ ಎಲ್ಲಾ ಮಾನವರೂ ಪ್ರಳಯದಲ್ಲಿ ಮುಳುಗಿ ಹೋದದ್ದು ನೆರವೇರಿತು, ಕಡೆಯದರಲ್ಲಿ, ಕರ್ತನ ಕುಟುಂಬದವರಲ್ಲಿ ಬಿಟ್ಟು ಎಲ್ಲರೂ ಕರ್ತನ ಮಹಾಸಂಕಟದ ಆ ದಿನದಲ್ಲಿ ಸಾಂಕೇತಿಕವಾದ ಬೆಂಕಿಗೆ ತುತ್ತಾಗುತ್ತಾರೆ, ಕರ್ತನ ನಿಷ್ಠಾವಂತ ಮಕ್ಕಳು ಈ ಲೋಕದ ಮೇಲೆ ಬರಲಿರುವ ಈ ಎಲ್ಲಾ ದುರಂತಗಳಿಂದ ಪಾರಾಗುವಂತೆ ಯೋಗ್ಯರೆಂದು ಎಣಿಸಲ್ಪಡುತ್ತಾರೆ (ಲೂಕ 21:36); ಈ ಲೋಕದಿಂದ ತೆಗೆದುಕೊಳ್ಳುವ ಅಗತ್ಯದಿಂದಲ್ಲ, ಆದರೆ ಬಹುಶಃ ಅಗ್ನಿನಿವಾರಕರಾಗಿ ಒಪ್ಪಿಸಿ ಕೊಡುವುದರಿಂದಾಗಿ, ಹೇಗೆಂದರೆ, ಏಳರಷ್ಟು ಹೆಚ್ಚಿಸಿದ ಅಗ್ನಿಕುಂಡದಲ್ಲಿ ಹಾದು ಹೋದ ಮೂರು ಇಬ್ರಿಯರ ಸಾಕ್ಷಣಿಕ ಉದಾಹರಣೆಯಂತೆ ಅವರ ಉಡುಪುಗಳಿಂದ ಕೂಡ ಯಾವುದೇ ಹೊಗೆಯ ವಾಸನೆ ಬರಲಿಲ್ಲ, ಯಾಕೆಂದರೆ ಮನುಷ್ಯಕುಮಾರನಂತಿರುವವನೊಬ್ಬನು ಅವರ ಸಂಗಡ ಕಾಣಿಸಿಕೊಂಡನು (ದಾನಿಯೇಲ: 3:19–25).

ಮುಂದೆ ನಾವು ಪರಿಶುದ್ಧ ಬರಹಗಳಲ್ಲಿ ಗಮನಿಸುತ್ತೇವಂತೆ ಸಭೆಯಲ್ಲಿ ಅನೇಕರು ಯೇಸುವಿನ ಪ್ರತ್ಯಕ್ಷತೆಯನ್ನು ಮತ್ತು ಸುಗ್ಗಿಯು ಪ್ರಗತಿಯಲ್ಲಿರುವುದನ್ನು ಮತ್ತು ಈ ಯುಗದ ಅಂತ್ಯದ ಬಗ್ಗೆ ಕೆಲವು ಕಾಲ ಅಜ್ಞಾನವುಳ್ಳವರಾಗಿದ್ದಾರೆ.

ಮತ್ತಾಯ 24:42ರಲ್ಲಿ ಕೊನೆಗೊಳ್ಳುವ ಅಂತಿಮ ವಚನಗಳು ಬಹಳ ಮಹತ್ವವುಳ್ಳವುಗಳಾಗಿವೆ. 37ನೇ ವಚನದಲ್ಲಿ ನಮ್ಮ ಕರ್ತನು ಈ ಲೋಕದವರಿಗೆ ಮನುಷ್ಯಕುಮಾರನು ಪ್ರತ್ಯಕ್ಷತೆಯ ಬಗ್ಗೆ ಗೊತ್ತಿರುವುದಿಲ್ಲ ಎಂದು ತಿಳಿಸಿರುವುದನ್ನು ನೋಡುತ್ತೇವೆ; ಈಗ ಆತನು ತನ್ನನ್ನು ಒಪ್ಪಿಕೊಂಡ ಶಿಷ್ಯರಿಗೆ ಅವರು ಎಚ್ಚತ್ತುಕೊಳ್ಳದೇ ಹೋದರೆ ಅವರೂ ಸಹ ಆತನ ಪ್ರಸನ್ನತೆಯ ಬಗ್ಗೆ ತಿಳಿಯದವರಾಗಿರುತ್ತಾರೆ ಎಂದಿದ್ದಾನೆ. ಆದುದರಿಂದ ಆತನು ಅವರಿಗೆ "ಹೀಗಿರಲಾಗಿ ಕರ್ತನು ಬರುವ ದಿನವು (Erchomai – arrive) ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ. ಕಳ್ಳನು ಬರುವ ಜಾವ ಮನೆಯ ಯಜಮಾನನಿಗೆ ತಿಳಿದಿದ್ದರೆ ಅವನುಎಚ್ಚರವಾಗಿದ್ದು ತನ್ನ ಮನೆಗೆ ಕನ್ನಾಹಾಕಗೊಡಿಸುತ್ತಿರಲಿಲ್ಲವೆಂದು ತಿಳುಕೊಳ್ಳಿರಿ; ಆದ ಕಾರಣ ನೀವು (ನನ್ನ ಬರೋಣದ ಮೊದಲನೆಯ ಸಾಕ್ಷ್ಯವನ್ನು ಕಾಣುವಂತೆ) ಸದಾಸಿದ್ಧರಾಗಿರ್ರಿ" (ವ. 42) ಎಂದು ಎಚ್ಚರಿಸುತ್ತಾನೆ. "ಈ ಸಂಗತಿಗಳು ಯಾವಾಗ ನೆರವೇರುವುದು?" ಎಂಬ ಅವರ ಪ್ರಶ್ನೆಗೆ ಆತನು "ನೀವು ಕೇವಲ ಕಾದುಕೊಂಡಿರ್ರಿ, ನಾನು ಬಂದಾಗ, ನಾನು ಪ್ರಸನ್ನಗೊಳ್ಳುವಾಗ ನಂಬಿಕೆಯಿಂದ ಎಚ್ಚರವಾಗಿದ್ದು ಕಾದು ಕೊಳ್ಳುವವರಿಗೆ ನಾನು ಈ ಸತ್ಯವನ್ನು ಬಹಿರಂಗಪಡಿಸುತ್ತೇನೆ" ಎಂದು ಉತ್ತರಿಸುತ್ತಾನೆ. ಅವರಿಗೆ ಮಾತ್ರವೇ ಇದನ್ನು ತಿಳುಕೊಳ್ಳುವ ಅಧಿಕಾರವಿದೆ. ಉಳಿದವರೆಲ್ಲರೂ ಹೊರಗಣ ಅಂಧಕಾರದಲ್ಲಿರಬೇಕು

ಮತ್ತು ಲೋಕದವರೊಂದಿಗೆ ಅವರಂತೆ – ಸಂಕಷ್ಟಗಳ ಮೂಲಕ ಕಲಿತುಕೊಳ್ಳಬೇಕು.

"ಹಾಗಾದರೆ, ಯಜಮಾನನು ತನ್ನ ಮನೆಯವರಿಗೆ ಹೊತ್ತು ಹೊತ್ತಿಗೆ (ಸುಗ್ಗಿಯಕಾಲದಲ್ಲಿ) ಆಹಾರ ಕೊಡಲಿಕ್ಕೆ ಅವರ ಮೇಲಿಟ್ಟ ನಂಬಿಗಸ್ತನೂ, ವಿವೇಕಿಯೂ ಆದಂಥ ಆಳು ಯಾರು? ಯಜಮಾನನು ಬಂದು (elthon -after coming) ಯಾವ ಆಳು ಹೀಗೆ ಮಾಡುವುದನ್ನು ಕಾಣುವನೋ ಆ ಆಳು ಧನ್ಯನು. ಅಂಥವನನ್ನು ಅವನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ನಿಜವಾಗಿ ಹೇಳುತ್ತೇನೆ" (ಮತ್ತಾಯ 24:45–47) ಎಂದು ಬರೆದದೆ. ಅಮೂಲ್ಯ ಸತ್ಯಗಳ ಅಗಾಧವಾದ ಭಂಡಾರವನ್ನು ಅಂತಹ ನಂಬಿಗಸ್ತ ಸೇವಕರಿಗೆ ತೆರೆಯುತ್ತಾನೆ. ಅವರನ್ನು ಶಸ್ತ್ರಗೊಳಿಸಿ, ಒದಗಿಸಿ ಮತ್ತು ತನ್ನ ಸಂಪೂರ್ಣ ನಂಬಿಗಸ್ತ ಮನೆವಾರ್ತೆಯವರಿಗೆ ಒದಗಿಸುತ್ತಾ ಪೋಷಿಸುತ್ತಾನೆ.

ಆದರೆ ಸೇವಕನ ಹೃದಯವು ಸರಿ ಇಲ್ಲದಿದ್ದರೆ, ಆತನು ನನ್ನ ಯಜಮಾನನು ತಡ ಮಾಡುತ್ತಾನೆ (ಇನ್ನೂ ಆಗಮಿಸಿಲ್ಲ) ಎಂದು ತನ್ನ ಮನಸ್ಸಿನಲ್ಲಿ ಅಂದುಕೊಂಡು ತನ್ನ ಜೊತೆ ಆಳುಗಳನ್ನು ಹೊಡೆಯುತ್ತಾನೆ. (ಆತನಿಗೆ ವಿರುದ್ಧವಾಗಿ ಹೇಳುವವರು ... ನಮ್ಮ ಕರ್ತನು ತಡ ಮಾಡುವುದಿಲ್ಲ ಪ್ರತ್ಯಕ್ಷನಾಗಿದ್ದಾನೆ ಎಂದು ಹೇಳುವವರು ತನ್ನ ವಿರೋಧಿಗಳು ಎಂದು ಪರಿಗಣಿಸುತ್ತಾನೆ. ಹಾಗಾಗಿ, ಅವನು ಕುಡುಕರ ಸಂಗಡ ತಿನ್ನುತ್ತಾ, ಕುಡಿಯುತ್ತಾ ಹತೋಟಿಯಿಲ್ಲದವರೊಡನೆ (ಈ ಲೋಕದ ಆತ್ಮದಿಂದ ಮತ್ತರಾಗಿ) ಇರುವುದಾದರೆ, ಅವನು ನೆನಸದ ದಿನದಲ್ಲಿಯೂ, ತಿಳಿಯದ ಘಳಿಗೆಯಲ್ಲಿಯೂ ಆ ಆಳಿನ ಯಜಮಾನನು ಬಂದು (ಮನೆವಾರ್ತೆಯವರಿಗೆ ಆಹಾರ ನೀಡುವ ಸವಲತ್ತು ಹೊಂದಿದ ನಿಷ್ಠಾವಂತನಲ್ಲದವನನ್ನು ತೆಗೆದು) ಆತನನ್ನು ಕಠಿಣವಾಗಿ ಹೊಡಿಸಿ ಕಪಟಿಗಳಿಗೆ ಆಗತಕ್ಕ ಗತಿಯನ್ನು ಅವನಿಗೆ ನೇಮಿಸುವನು. ಅಲ್ಲಿ ಗೋಳಾಟವೂ, ಹಲ್ಲು ಕಡಿಯೋಣವೂ ಇರುವವು (ಮತ್ತಾಯ 24:48–51).

ಮೇಲಿನವುಗಳನ್ನು ಜಾಗರೂಕತೆಯಿಂದ ಪರೀಕ್ಷಿಸುವಾಗ, ಈ ಯುಗದ ಅಂತ್ಯದಲ್ಲಿ ಕರ್ತನು ಪ್ರತ್ಯಕ್ಷನಾಗಿದ್ದಾನೆ ಎಂಬುದನ್ನು ಅಲ್ಲಗಳೆಯುವ ಒಂದು ವರ್ಗವಿರುತ್ತದೆ (ಆತನು ಯಾವುದೋ ಸಮಯದಲ್ಲಿ ಬರುವನೆಂದು ಅಲ್ಲಗಳೆಯುವುದಲ್ಲ, ಆದರೆ ಆತನು ಬಂದಿರುವನು ಎಂಬದನ್ನು ಅಲ್ಲಗೆಳೆಯುತ್ತಾರೆ) ಮತ್ತು ಅದರ ವಿರೋಧವಾಗಿ "ಕರ್ತನು ಬಂದಿದ್ದಾನೆ" ಎಂದು ಬೋಧಿಸುವ ನಿಷ್ಠಾವಂತ ಸೇವಕರುಗಳನ್ನು ಈ ವರ್ಗವು ತೀವ್ರವಾಗಿ ವಿರೋಧಿಸುವವರೂ, ಅಥವಾ ಹೊಡೆಯುವವರೂ ಆಗಿದ್ದಾರೆ. ನಮ್ಮ ಕರ್ತನು ಯಾರು ನಂಬಿಗಸ್ತ, ನಿಷ್ಠಾವಂತ ಸೇವಕನು, ಮತ್ತು ಯಾರು ತಪ್ಪು ಮಾಡುವವರು ಎಂಬದನ್ನು ಸ್ಪಷ್ಟವಾಗಿ ಹೇಳುವವನಾಗಿದ್ದಾನೆ, ಕಾಲ ಕಾಲಕ್ಕೆ ತಕ್ಕಂತೆ ಆಹಾರ ನೀಡುವ ನಂಬಿಗಸ್ತ ಸೇವಕನನ್ನು ಆತನು ಕಂಡುಕೊಂಡು ಅವನನ್ನು ಸತ್ಯವೆಂಬ ಭಂಢಾರವನ್ನು ನೋಡಿಕೊಳ್ಳುವಂತೆ ಅದನ್ನು ಮನೆಯವರಿಗೆ ತಮ್ಮ ಹೆಚ್ಚಿದ ಸಾಮರ್ಥ್ಯದಿಂದ ನೀಡುವ ಪೂರ್ಣ ಮನೆವಾರ್ತೆ ಯವನನ್ನಾಗಿ ಉನ್ನತ ಸ್ಥಾನಕ್ಕೆ ಏರಿಸುತ್ತಾನೆ. ಅದೇ ಸಮಯದಲ್ಲಿ ಅಪ್ರಮಾಣಿಕರನ್ನು ಕ್ರಮೇಣವಾಗಿ ತೆಗೆದುಹಾಕಿ, ಅಥವಾ ಪ್ರತ್ಯೇಕಿಸಿ ಅವರನ್ನು ಕೇವಲ ಬರೀ ಪ್ರಾಚಾರ್ಯರ ಅಥವಾ ಕಪಟಿಗಳ ಅನುಕಂಪಕ್ಕೆ ಸೆಳೆಯುತ್ತಾನೆ. ಅಪ್ರಮಾಣಿಕರು ಅವರಿಗೆ ಗೊತ್ತಾಗದ ಸುಗ್ಗಿಯ ಸಮಯದಲ್ಲಿ, ಅವರ ಕರ್ತನು ಪ್ರಸನ್ನನಾಗಿರುವ ಸಮಯವು ಅವರಿಗೆ ತಿಳಿಯದಿರುವಾಗ ಆ ರೀತಿಯಾಗಿ ತೆಗೆದುಹಾಕಲ್ಪಡುತ್ತಾರೆ ಅಥವಾ ಪ್ರತ್ಯೇಕಿಸಲ್ಪಡುತ್ತಾರೆ ಮತ್ತು ಕರ್ತನು ಆಭರಣ ಸಮಾನರನ್ನು ಒಂದುಗೂಡಿಸುತ್ತಾನೆ ಎಂಬುದನ್ನು ಗಮನಿಸಿರಿ (ಮತ್ತಾಯ 13:30, ಕೀರ್ತನೆ 50:5, ಮಲಾಕಿ 3:17, ಮತ್ತಾಯ 24:31).

ನಾವು ಇಲ್ಲಿ ನಿರ್ದಿಷ್ಟಪಡಿಸುವುದೇನೆಂದರೆ, ಕ್ರಿಸ್ತನ ಎರಡನೆಯ ಬರೋಣದ ಸೂಚನೆ ಮತ್ತು ಸಾಕ್ಷ್ಯಗಳ ಬಗ್ಗೆ ಆತನ ಶಿಷ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವಾಗ, ನಮ್ಮ ಕರ್ತನು ಅವರಿಗೆ ಈ ಲೋಕದವರಾಗಲೀ ಅಥವಾ ಅಪ್ರಮಾಣಿಕ ಸೇವಕರುಗಳಾಗಲೀ ಸಂಕಟಗಳ ಕನಿಷ್ಟ ಘೋರಾಗ್ನಿಯು ಪ್ರಾರಂಭವಾಗುವವರೆಗೂ ಆ ಬಗ್ಗೆ ಅರಿವಿಲ್ಲದವರಾಗಿರುತ್ತಾರೆ ಎಂದು ಬೋಧಿಸುತ್ತಾನೆ. ನಂಬಿಗಸ್ತರು ಆತನನ್ನು ಪ್ರತ್ಯಕ್ಷವಾಗಿ ಆತನ ಪ್ರಸನ್ನತೆಯನ್ನು ಸೂಕ್ತ ಸಮಯದಲ್ಲಿ ಗ್ರಹಿಸುವಂತೆ ಅವರ ಬೋಧನೆಗಾಗಿಯೇ ಬಹಳ ಹಿಂದೆಯೇ ಬರೆಯಲ್ಪಟ್ಟ ಪರಿಶುದ್ಧ ಗ್ರಂಥಗಳ ಸಹಾಯದಿಂದ ತಮ್ಮ ನಂಬಿಕೆಯ ಕಣ್ಣುಗಳ ಮೂಲಕ ನೋಡುತ್ತಾರೆ. ಪ್ರತಿಯೊಂದು ವಿಷಯದ ಬಗ್ಗೆ ಪ್ರಸ್ತುತ ಸತ್ಯಗಳು ನಮ್ಮ ಕರ್ತನು ನಮ್ಮ ಮೇಲೆ ಹೊರಿಸಿರುವ ಮತ್ತು ಈಗ ಉಚಿತವಾಗಿ ನೀಡುವ ಆತನ ಹಳೆಯ ಮತ್ತು ನೂತನ ನಿಧಿಯ ಸರಕುಗಳಾಗಿವೆ. (ಮತ್ತಾಯ 24: 45–47).

ಮುಂಚಿತವಾಗಿ ತಿಳಿಸಿರುವ ಸೂಚನೆಗಳ ಮೂಲಕ ಕರ್ತನು ತನ್ನ ಪ್ರಸನ್ನತೆಯನ್ನು ಸೂಕ್ತ ಸಮಯಕ್ಕೆ ಸರಿಯಾಗಿ ಸಭೆಯು ಗ್ರಹಿಸಿಕೊಳ್ಳುವಂತೆ ಸಾಕಷ್ಟು ತಯಾರಿಯನ್ನು ಮಾಡಿಕೊಂಡಿದ್ದರೂ, ಅದನ್ನು ಅವರು ಸ್ವಾಭಾವಿಕ ಕಣ್ಣುಗಳಿಂದ ನೋಡದಂತೆ ಮಾಡಿದ್ದಾನೆ, ಆತನು ನಮ್ಮನ್ನು ಆಯ್ಕೆಗೊಂಡವರಿಗೆ ಸಾಧ್ಯವಾದರೆ, ಸೂಚಕ ಕಾರ್ಯಗಳು, ಅದ್ಭುತ ಕಾರ್ಯಗಳ ಮೂಲಕ

ಮೋಸಗೊಳಿಸುವ ಕಪಟಿಗಳ ವಿರುದ್ಧವಾಗಿ ಎಚ್ಚರಿಸಿದ್ದಾನೆ. ಆದರೆ ಅದು ಸಾಧ್ಯವಾಗದು. ಯಾಕೆಂದರೆ ಆಯ್ಕೆಗೊಂಡವರೆಲ್ಲರೂ ಈ ಎಚ್ಚರಿಕೆಯ ಮಾತುಗಳನ್ನು ನಿಷ್ಠಾಪೂರ್ವಕವಾಗಿ ಲಕ್ಷ್ಯವಿಡುತ್ತಾರೆ ಮತ್ತು ತಮ್ಮನ್ನು ತತ್ಪರತೆಯಿಂದ ಆತನ ಪ್ರಸನ್ನತೆಯ ಬಗ್ಗೆ ಮುಂತಿಳಿಸಿರುವ ಸೂಚನೆಗಳಿಗೆ ಪರಿಚಿತರಾಗಿರುತ್ತಾರೆ ಮತ್ತು ಅವುಗಳ ನೆರವೇರಿಕೆಗಾಗಿ ಕಾದುಕೊಂಡಿರುತ್ತಾರೆ. ಬೇರೆ ರೀತಿಯ ಮನಸ್ಸಿನವರು ಆಯ್ದ ವರ್ಗಕ್ಕೆ ಸೇರಿದವರಲ್ಲ. ಗೆದ್ದು ಬಂದವರು ಮಾತ್ರವೇ ಆಳಬಲ್ಲರು. ನಂತರದ ಅಧ್ಯಾಯಗಳಲ್ಲಿ ತೋರಿಸಲ್ಪಡುವ ಅಂಥಾಃ ಕಪಟಗಳು ಈಗಾಗಲೇ ಚಾಲ್ತಿಯಲ್ಲಿವೆ ಮತ್ತು ಅನೇಕರನ್ನು ಮೋಸಗೊಳಿಸುತ್ತಾ ಇವೆ. ಆದರೆ, ದೇವರಿಗೆ ಸ್ತೋತ್ರವಾಗಲಿ! ಆಯ್ಕೆಗೊಂಡವರು ಮುಂಚಿತವಾಗಿ ಎಚ್ಚರಿಸಲ್ಪಟ್ಟಿದ್ದಾರೆ ಮತ್ತು ಸಜ್ಜಿತರಾಗಿದ್ದಾರೆ. ಅವರು ಮೋಸಗೊಳ್ಳುವುದಿಲ್ಲ, ಮನಗುಂದುವುದೂ ಇಲ್ಲ. ಆತನ ಸುತ್ತ ಮೋಡವೂ, ಅಂಧಕಾರವೂ ಸುತ್ತುವರಿದಿದ್ದರೂ, ಅವರು ಆತನ ಪ್ರಸನ್ನತೆಯನ್ನು ಗ್ರಹಿಸುವರು ಮತ್ತು ತಮ್ಮ ಬಿಡುಗಡೆಯು ಸಮೀಪವಾಗಿದೆ ಎಂದು ಸಂತೋಷಿಸುವರು. “ಆಗ ಯಾರಾದರೂ ನಿಮಗೆ – ಇಗೋ. ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬ ಬೇಡಿರಿ.... ಆದಕಾರಣ, ಯಾರಾದರೂ ಕ್ರಿಸ್ತನು ಅಡವಿಯಲ್ಲಿದ್ದಾನೆಂದು ಹೇಳಿದರೆ ಹೊರಟುಹೋಗಬೇಡಿರಿ, ಇಗೋ, ಕೋಣೆಯಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿರಿ. ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸಿಕೊಳ್ಳುತ್ತದೆಯೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವುದು” (ಮತ್ತಾಯ 24: 23,26,27). ಅದು ಮುಂಚಿತವಾಗಿ ತಿಳಿಸಿದಂತೆಯೇ ಪ್ರತಿಯೊಂದು ಸಂಗತಿಯ ಬಗ್ಗೆ ಸತ್ಯದ ಪ್ರಕಾಶವನ್ನು ಸೆಳಕೊಂಡು, ಈಗ ನಾವು ತ್ವರಿತವಾಗಿ ಮತ್ತು ಮಹಿಮೆಯಿಂದ ವಿಕಾಸಗೊಳ್ಳುತ್ತಿರುವುದನ್ನು ನೋಡುವಂತೆಯೇ ಪ್ರಕಟವಾಗುವುದು. ಮುಂದಿನ ಕೆಲವೇ ವರ್ಷಗಳಲ್ಲಿ ನಾವು ನೀತಿಸೂರ್ಯನು ತನ್ನ ರೆಕ್ಕೆಗಳಲ್ಲಿ ಸ್ವಸ್ಥತೆಯನ್ನುಂಟು ಮಾಡುವವನಾಗಿ, ಮರಣಾಧೀನವಾದ ಈ ಲೋಕವನ್ನು ಆಶೀರ್ವದಿಸಲು ಮತ್ತು ಮೇಲೆತ್ತಲು ಉದಯಿಸುವನು.

ಈ ಅಧ್ಯಾಯ ಮತ್ತು ಹಿಂದಿನ ಮತ್ತು ಮುಂದಿನ ಅಧ್ಯಾಯ ಗಳಲ್ಲಿರುವ ಸಾಕ್ಷಿಗಳ ದೃಷ್ಟಿಕೋನದಲ್ಲಿ, ಸುವಾರ್ತಾ ಯುಗದ ಸುಗ್ಗಿ ಕಾಲವು ನಮ್ಮ ಮೇಲೆ ಬಂದಿದೆ. ಒಡೆಯನು ಪುನಃ ಪ್ರಧಾನ ಕೊಯ್ಲುಗಾರನಾಗಿ – ಯೆಹೂದ್ಯ ಸುಗ್ಗಿಯಲ್ಲಿದ್ದಂತೆ ದೇಹಧಾರಿಯಾಗಿ ಅಲ್ಲ, ಆದರೆ ಅಧಿಕಾರ ಮತ್ತು ಮಹಾ ಮಹಿಮೆಯೊಡನೆ ಆಗಮಿಸುತ್ತಿದ್ದಾನೆ ಎಂಬ ಹೃದಯ ಪ್ರಶಂಸೆಯ ಬುದ್ಧಿವಂತಿಕೆಯನ್ನು ಪ್ರಕಟಿಸಲು ನಮಗೆ ಯಾವುದೇ ಹಿಂಜರಿಕೆ ಇರದು. ಉನ್ನತೋನ್ನತನಾಗಿ ಏರಿಸಲ್ಪಟ್ಟ ದೈವಿಕ ಕ್ರಿಸ್ತನ ಮಹಿಮಾ ಶರೀರವು ಆತನ ಮಹಿಮಾ ವ್ಯಕ್ತಿತ್ವವು ಮಾನವ ದೃಷ್ಟಿಗೆ ವಿನಯಶೀಲವಾಗಿ ಮರೆಮಾಡಲ್ಪಟ್ಟರೂ ಅದು ಈಗ ‘ದೇವರ ಪ್ರಭಾವದ ಪ್ರಕಾಶವೂ, ಆತನ ತತ್ವದ ಮೂರ್ತಿಯೂ’ ಆಗಿದೆ. ಆತನು ತನ್ನ ನೀತಿವಂತಿಕೆ ಆಳ್ವಿಕೆಯನ್ನು ಉದ್ಘಾಟಿಸುವವನಾಗಿದ್ದಾನೆ, ಆತನ ಸತ್ಯದ ಕುಡುಗೋಲು ಪ್ರತ್ಯೇಕಿಸುತ್ತಿದೆ ಆತನು ಮೊದಲಿಗೆ ಮಾಗಿದ ಆತ್ಮೀಕ ಇಸ್ರಾಯೇಲ್ಯರ ಹೃದಯ ಮತ್ತು ಮನಸ್ಸು ಒಂದಾಗುವಂತೆ ಒಟ್ಟುಗೂಡಿಸುತ್ತಾನೆ ಮತ್ತು ಕೂಡಲೇ ಆಯ್ದುಕೊಂಡ ಸಭೆಯೆಂಬ ದೇಹವು ಪೂರ್ಣಗೊಳ್ಳುತ್ತದೆ ಮತ್ತು ಅದು ಈ ಲೋಕವನ್ನು ಆಶೀರ್ವದಿಸುತ್ತಾ ಆಳ್ವಿಕೆ ಮಾಡುತ್ತದೆ.

ಕಾಲ ಪ್ರವಾದನೆಯು ನಿರ್ದಿಷ್ಟವಾಗಿ ಏನನ್ನು ಸೂಚಿಸುತ್ತದೆ, ಸುಗ್ಗಿ ಮತ್ತು ಅದಕ್ಕೆ ಸಂಬಂಧಿತವಾದ ಎಲ್ಲಾ ಘಟನೆಗಳು ಕಾಲಗಣನೆಯ ಪ್ರಕಾರ ಈಗ ಸೂಕ್ತ ಸಮಯವಾಗಿರಲಾಗಿ ಮುಂತಿಳಿಸಿರುವಂತೆ ಅವು ಹೇಗೆ ಸಾಗುತ್ತವೆ ಎಂಬುದರ ಬಗ್ಗೆ ಓದುಗರಿಗೆ ಸ್ಪಷ್ಟವಾದ ಕಲ್ಪನೆ ಉಂಟಾಗುವಂತೆ ಈ ಪ್ರಕಟನೆಯನ್ನು ಇಲ್ಲಿ ಮಾಡಲಾಗುತ್ತಿದೆ.

ನಾವು ಕಾಣುವಂತೆ, ಈ ಕಾಲ ಪ್ರವಾದನೆಗಳು ಮತ್ತು ಕರ್ತನ ಪ್ರಸನ್ನತೆಯ ಬಗ್ಗೆ ಅವುಗಳಿಗೆ ಇರುವ ಈ ಎಲ್ಲಾ ಸೂಚನೆಗಳ ವಿಶೇಷತೆಯು ಈ ಲೋಕದವರನ್ನು ಗಾಬರಿಪಡುವಂತೆ, ಅಥವಾ ಅಪ್ರಯೋಜಕ ಆಸಕ್ತಿಯನ್ನು ತಣಿಸುವಂತೆ, ಹೆಸರಿಗೆ ಮಾತ್ರದ ಸಭೆಯವರನ್ನು ನಿದ್ರೆಯಿಂದ ಎಬ್ಬಿಸುವಂತೆ ನೀಡಲ್ಪಟ್ಟಿಲ್ಲ, ಬದಲಿಗೆ ಆ ಪ್ರವಾದನೆಗಳು ನಿದ್ರಿಸದೇ ಎಚ್ಚತ್ತಿರುವವರು, ಈ ಲೋಕದವರಲ್ಲದವರು ಆದರೆ ಎಚ್ಚತ್ತೇ ಇರುವವರು, ಪ್ರತಿಷ್ಠೆ ಹೊಂದಿದವರು ಮತ್ತು ನಂಬಿಗಸ್ತರು, ತಮ್ಮ ತಂದೆಯ ಯೋಜನೆಗಳ ನಿಷ್ಠಾವಂತ ವಿದ್ಯಾರ್ಥಿಗಳು ಇವರುಗಳಿಗೆ ಹೊರಬೀಳುತ್ತಿರುವ ಘಟನೆಗಳ ಬಗ್ಗೆ ತಿಳಿಸಲು, ಸಂಭವಿಸಲಿರುವ ಘಟನೆಗಳ ಬಗ್ಗೆ ಅಂಧಕಾರದಲ್ಲಿರದಂತೆ ಮಾಡಲು, ಹೀಗೆ ಸುಗ್ಗಿ, ಮಹಾಕೊಯ್ಲುಗಾರನ ಪ್ರಸನ್ನತೆ, ಸತ್ಯವಾದ ಗೋಧಿಯ ತೆನೆ ಬಡಿಯುವ, ಸೋಸುವ, ಹಣಜಿಯನ್ನು ಹೊರೆಕಟ್ಟಿ ಸುಟ್ಟುಹಾಕುವ ಮುಂತಾದ ಘಟನೆಗಳು ತಿಳಿಸಿರುವಂತೆ ಬೇರೆ ಯಾವ ರೀತಿಯಿಂದಲಾದರೂ ನಿಶ್ಚಯ ರೂಪದಲ್ಲಿ ತಿಳಿಯದಿರಲು ನೀಡಲ್ಪಟ್ಟಿವೆ.

## ಕುಚೋದ್ಯವು ಮುಂತಿಳಿಸಲ್ಪಟ್ಟಿದೆ – Scoffing Foretold

ಅಪ್ರಮಾಣಿಕರೂ, ಕಪಟಿಗಳು ಕರ್ತನ ಪ್ರತ್ಯಕ್ಷತೆಯ ದಿನದಲ್ಲಿ ಯಾವ ರೀತಿಯಲ್ಲಿ ಕುಚೋದ್ಯ ಮಾಡುವರೆಂದು ಅಪೋಸ್ತಲನಾದ ಪೇತ್ರನು ವಿವರಿಸುತ್ತಾ (2 ಪೇತ್ರ 3:3,4,10,12) ನೋಹನ ಕಾಲದಲ್ಲಿ ಆದಂತೆ ಈಗಲೂ ಆಗುವುದೆಂದು ಬರೆಯುತ್ತಾನೆ. ಅಪೋಸ್ತಲನು ಸಭೆಗೆ ಬರೆಯುತ್ತಾ, ಕುಚೋದ್ಯಗಾರರು ನಾಮಾಂಕಿತ ಸಭೆಯಲ್ಲಿಯೇ ಇರುತ್ತಾರೆ ಮತ್ತು ಕರ್ತನ ಕಾರ್ಯದಲ್ಲಿ ಮತ್ತು ಯೋಜನೆಯಲ್ಲಿ ತೋರಿಕೆಗೆ (professedly) ಆಸಕ್ತಿಯನ್ನು ತೋರಿಸುತ್ತಾರೆ ಮತ್ತು ಕರ್ತನು ಯಾವಾಗಲಾದರೂ ಬರುತ್ತಾನೆಂಬ ವಿಶ್ವಾಸವುಳ್ಳವ ರಾಗಿರುತ್ತಾರೆ ಎಂಬ ಮಾತುಗಳನ್ನು ಗಮನಿಸಿರಿ. ಅಪಹಾಸ್ಯವು ಇಲ್ಲಿ ಗಮನಿಸುವ ವಿಷಯಕ್ಕೆ ಸಂಬಂಧಿಸಿದ್ದು, ಅವುಗಳನ್ನು ನಾವು ಕರ್ತನ ಪ್ರಸನ್ನತೆ, ಸುಗ್ಗಿ ಮುಂತಾದ ವಿಷಯಗಳ ಬಗ್ಗೆ ಆಲೋಚಿಸುವಾಗ ತಮ್ಮನ್ನು ಕ್ರೈಸ್ತರೆಂದು ಪ್ರಕಟಿಸಿಕೊಳ್ಳುವವರಿಂದ ಕೇಳಿಸಿಕೊಳ್ಳುತ್ತೇವೆ. ಕ್ರೈಸ್ತರು ಸಾಮಾನ್ಯವಾಗಿ ಅವರು ವಿಷಯವನ್ನು ಪರಿಶೋಧಿಸುವವರೆಗೆ ಅಕ್ಷರಶಃವಾದ ಬೆಂಕಿಯ ಪ್ರಕಟನೆ, ತುತೂರಿ ಮುಂತಾದವುಗಳ ಸ್ವರಗಳು, ಕರ್ತನು ಗಾಳಿಯ ಮೂಲಕ ಇಳಿದು ಬರುವುದು, ಪ್ರಕಾಶಮಯವಾದ ಆತನ ದೇಹ ಇತ್ಯಾದಿಗಳು ಅವರ ಕಲ್ಪನೆಯಲ್ಲಿರುತ್ತವೆ. ಅವರು ಆತನ ಅದೃಶ್ಯವಾದ ಪ್ರತ್ಯಕ್ಷತೆಯ ಬಗ್ಗೆ ಕೇಳಿಸಿಕೊಳ್ಳುವಾಗ, ಅವರು ಆ ವಿಷಯವನ್ನು ಖಚಿತವೆಂದು ಭಾವಿಸಿ, ಪರಿಶೋಧಿಸಲು ಸಮಯ ವ್ಯಯ ಮಾಡದೆ, ಈ ಲೋಕದ ಉತ್ಸಾಹದಲ್ಲಿ ಅಮಲೇರಿದವರಿಗಾಗಿ ಅವರು ಆ ಪರಿಶೋಧನೆಯು ಅನರ್ಹವಾದುದೆಂದು ತಿಳಿದು ಅದನ್ನು ತ್ಯಜಿಸಿಬಿಡುತ್ತಾರೆ.

ಕ್ರೈಸ್ತರೆಂದು ಪ್ರಕಟಿಸಿಕೊಳ್ಳುವ ಈ ವರ್ಗದವರಿಗೆ ಉಲ್ಲೇಖಿಸುವವನಾಗಿ ಅಪೋಸ್ತಲನು "ಕಡೇ ದಿವಸಗಳಲ್ಲಿ ತಮ್ಮ ದುರಾಶೆಗಳ ಪ್ರಕಾರ ನಡೆಯುವ ಕುಚೋದ್ಯಗಾರರು ಬಂದು ಕುಚೋದ್ಯ ಮಾಡುತ್ತಾ – ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು? ನಮ್ಮ ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡು ಸಮಸ್ತವು ಲೋಕಾದಿಯಿಂದ ಇದ್ದ ಹಾಗೆಯೇ ಇರುತ್ತದಲ್ಲಾ ಎಂದು ಹೇಳುವರೆಂಬುದಾಗಿ ನೀವು ಮೊದಲು ತಿಳಿದುಕೊಳ್ಳಬೇಕು (2 ಪೇತ್ರ 3:3) ಎಂದು ಬರೆಯುತ್ತಾನೆ. ನಮ್ಮ ಕರ್ತನ ಹೇಳಿಕೆಯನ್ನು ಉಲ್ಲೇಖಿಸುವಾಗ (ಮತ್ತಾಯ 24:37–39; ಲೂಕ 17:26), ಆತನ ದಿನಗಳಲ್ಲಿ, ಆತನ ಪ್ರತ್ಯಕ್ಷತೆಯ ದಿನಗಳಲ್ಲಿ, ಈ ಹಿಂದಿನ ಸಂಗತಿಗಳು ಮೊದಲಿದ್ದಂತೆಯೇ ಮುಂದುವರೆಯುವುದು, ನೋಹನ ದಿನದಲ್ಲಿ ಇದ್ದಂತೆಯೇ ಜನರು ಊಟ ಮಾಡುತ್ತಾ, ಕುಡಿಯುತ್ತಾ, ಮದುವೆ ಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ, ನೆಡುತ್ತಾ, ಕಟ್ಟುತ್ತಾ ಇರುತ್ತಾರೆ, ಆಗ ಈ ಲೋಕಕ್ಕೆ ಆತನ ಪ್ರತ್ಯಕ್ಷತೆಯ ಬಗ್ಗೆ ತಿಳಿದಿರುವುದಿಲ್ಲ ಮತ್ತು ಅವರು ತ್ವರಿತವಾದ ಮಹಾಬದಲಾವಣೆಗಳು ಹತ್ತಿರದಲ್ಲಿಯೇ ಅವೆ ಎಂಬುದರ ಬಗ್ಗೆ ಅವರು ಓದಿರುವುದಿಲ್ಲ. ಅವರಿಗೆ ಈ ಬಗ್ಗೆ ಇರುವ ಸಾಕ್ಷ್ಯಗಳನ್ನು ಜಾಗರೂಕತೆಯಿಂದ ಪರಿಗಣಿಸುವಷ್ಟೂ ಪುರುಸೊತ್ತು ಇರದು. ಕೇವಲ ತಮ್ಮ ಕುಚೋದ್ಯಗಳನ್ನು ಮುಂದುವರಿಸುವರು.

"ಆಹಾ! ಅವರು ನೋಹನ ದಿನಗಳಲ್ಲಿ ಉಂಟಾದ ಮಹಾಬದಲಾವಣೆಗಳನ್ನು ಮರೆತುಬಿಟ್ಟಿದ್ದಾರೆ, ಮತ್ತು ಬೆಂಕಿಯ ಚಿಹ್ನೆಯ ಅಡಿಯಲ್ಲಿ ಇಡೀ ಪ್ರಪಂಚವನ್ನು ಆವರಿಸುವ ಮಿತಿಮೀರಿದ ಮಹಾಸಂಕಟದ ಪ್ರಳಯವು ಎಲ್ಲಾ ನಾಗರೀಕ ಮತ್ತು ಕ್ರೈಸ್ತಸಭೆಗೆ ಸಂಬಂಧಪಟ್ಟ ಆಡಳಿತವನ್ನು (heavens) ಸಧ್ಯದಲ್ಲಿಯೇ ಪರಾಭವಗೊಳಿಸುವುದನ್ನು, ಮತ್ತು ಸಮಗ್ರ ಸಾಮಾಜಿಕ ರಚನೆಯನ್ನು (ಭೂಮಿಯನ್ನು) ಕರಗಿಸುವುದನ್ನು, ನೂತನ ದೇವರ ರಾಜ್ಯವು ಮತ್ತು ನೂತನ ಭೂಮಿಯು (ನೂತನ ಹಾಗೂ ಉತ್ತಮ ನೆಲೆಯ ಮೇಲೆ ಪ್ರೀತಿ, ಸಮಾನತೆ ಮತ್ತು ನೀತಿವಂತಿಕೆಯ ನೆಲೆಯ ಮೇಲೆ ಸಂಘಟನೆಗೊಂಡ ಸಮಾಜವು) ಸ್ಥಾಪಿತವಾಗುವವರೆಗೆ ಅರಾಜಕತೆ ಮತ್ತು ಸಾಮಾಜಿಕ ಗೊಂದಲಗಳನ್ನು ಉಂಟುಮಾಡುವುದು – ಎಂಬುದಾಗಿ ಪೇತ್ರನು ಹೇಳುತ್ತಾನೆ. ನಂತರದಲ್ಲಿ ಅಪೋಸ್ತಲನು ಸಭೆಯು ಬಹಳ ಕಾಲದಿಂದ ಹಂಬಲಿಸುತ್ತಿದ್ದ ಕರ್ತನ ಪ್ರಸನ್ನತೆಯ ದಿನದ ಬಗ್ಗೆ ಇದು ಸಹಸ್ರ ದಿನಗಳ ವರ್ಷವಾಗಿದೆ, ಕ್ರಿಸ್ತನ ಸಹಸ್ರಮಾನದ ಆಳ್ವಿಕೆಯ ದಿನಗಳಾಗಿವೆ ಎಂಬುದನ್ನು ನಮಗೆ ನೆನಪು ಮಾಡಿಕೊಡುತ್ತಾನೆ – ವಚನ 8.

ಹತ್ತನೆಯ ವಚನದಲ್ಲಿ "ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ*" (ಕೆಲವರು ಕುಚೋದ್ಯಮಾಡುತ್ತಾ, ಸತ್ಯವನ್ನು ಪ್ರಕಟಿಸುವ ತಮ್ಮ ಜೊತೆ ಸೇವಕರುಗಳನ್ನು ಅಪಹಾಸ್ಯ ಮಾಡುತ್ತಾ ಹೊಡೆಯುತ್ತಾ ಇರುವಾಗ ಯಾರೂ ಗಮನಿಸದಂತೆ, ನಿಶ್ಯಬ್ದವಾಗಿ **ಆ ದಿನದಲ್ಲಿ ಆಕಾಶ ಮಂಡಲವು ಮಹಾಘೋಷದಿಂದ ಇಲ್ಲದೇ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವುವು. (2 ಪೇತ್ರ 3:10)** ಎಂದಿದ್ದಾನೆ. ನಂತರದಲ್ಲಿ ಅಪೋಸ್ತಲನು ಭಕ್ತರುಗಳು ಲೋಕದ ರಾಜಕೀಯದಿಂದ, ಹಣ ಮಾಡಿಕೊಳ್ಳುವಿಕೆ ಮುಂತಾದವುಗಳಿಂದ ನುಂಗಲ್ಪಡದಂತೆ ಈ ಲೋಕದವರಿಂದ ಪ್ರತ್ಯೇಕ

---

* ಹಳೆಯ ಹಸ್ತಪ್ರತಿಗಳಲ್ಲಿ, ಕೈಬರಹದಲ್ಲಿ 'ರಾತ್ರಿಯಲ್ಲಿ' (In the night) ಎಂಬ ಪದವನ್ನು ಕೈಬಿಡಲಾಗಿದೆ.

ವಾಗಿರುವಂತೆ ಎಚ್ಚರಿಸುತ್ತಾನೆ, ಮೇಲಿನವುಗಳ ಮೇಲೆ ಮನಸ್ಸಿಡಿರಿ ಎಂದು ಪ್ರಬೋಧಿಸುತ್ತಾನೆ (ಕೊಲೊಸ್ಸೆ 3:2). ದೇವರ ಯೋಜನೆಯಲ್ಲಿ ಪ್ರಸ್ತುತವಾದ ಈ ಲೋಕದ ಸ್ಥಿತಿಗಳು ಅಲ್ಪಕಾಲದವುಗಳು, ಬೇಗನೇ ನೂತನ ಕ್ರಮಕ್ಕೆ ಎಡೆಮಾಡಿಕೊಡುವುದು, ನಾವು ನಮ್ಮ ನಡತೆ ಮತ್ತು ಭಯಭಕ್ತಿಯಲ್ಲಿ ಯಾವ ರೀತಿಯ ವ್ಯಕ್ತಿಗಳಾಗಬೇಕೋ ಹಾಗೆಯೇ ದೇವರ ಪ್ರತ್ಯಕ್ಷತೆಯ ದಿನವನ್ನು (Parousia) ಎದುರು ನೋಡುವವರಾಗಬೇಕು. ಅದು ಬಂದಿದೆ ಎಂಬುದಕ್ಕೆ ಸಾಕ್ಷ್ಯಗಳಿಗಾಗಿ ಕಾದುಕೊಂಡಿರಬೇಕು ಎನ್ನುತ್ತಾನೆ.

ದೇವರ ನಾಮಕ್ಕೆ ಸ್ತೋತ್ರವಾಗಲಿ!, ಆತನ ಒದಗಿಸುವಿಕೆಯು ಅಪಾರವಾಗಿದೆ. ಆ ದಿವಸವನ್ನು ಎದುರು ನೋಡುತ್ತಿರುವ ಧರ್ಮನಿಷ್ಠೆಯುಳ್ಳವರೆಲ್ಲರೂ ಅದನ್ನು ಕ್ರೋಧಾಗ್ನಿಯು ಸ್ಫೋಟಗೊಳ್ಳುವ ಮೊದಲೇ ಅದನ್ನು ತಿಳಿದುಕೊಳ್ಳುವರು. ಪೌಲನ ಮೂಲಕ ಆತನು ನಮಗೆ ಆಶ್ವಾಸಿಸುವುದೇನೆಂದರೆ "ಆ ದಿನವು ಕಳ್ಳನಂತೆ ನಿಮ್ಮ ಬೇರೆ ಬರತಕ್ಕದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ" (1 ಥೆಸ. 5:4). ಆದುದರಿಂದ ನಾವೀಗಾಗಲೇ ಕರ್ತನ ಪ್ರತ್ಯಕ್ಷತೆಯ ದಿನದಲ್ಲಿ, ಮಹಾಸಂಕಟ ಎಂಬ ಅಗ್ನಿಯ ಆರಂಭದ ದಿನಗಳಲ್ಲಿ ಇರುವವರಾದರೂ, ನಮಗೆ ಅವುಗಳು ಸಾಂಕೇತಿಕವಾಗಿ ತೋರಿಸಲ್ಪಟ್ಟಿವೆ. ಕರ್ತನ ನಿಷ್ಠಾವಂತ ಸೇವಕರ ಹಣೆಯ ಮೇಲೆ ಮುದ್ರೆ ಹಾಕಲ್ಪಡುವವರೆಗೂ ಚತುರ್ದಿಕ್ಕಿನ ಗಾಳಿಯನ್ನು ಹಿಡಿದಿಡಲಾಗುವುದು (ಪ್ರಕಟನೆ 7:1–2), ಅಂದರೆ ಅಂಥವರಿಗೆ ಸಮಯ, ಪ್ರಸನ್ನತೆ ಮುಂತಾದವುಗಳ ಬೌದ್ಧಿಕವಾದ ಮೆಚ್ಚುಗೆ ದೊರೆಯುವವರೆಗೂ. ಅದು ಕೇಡಿನಿಂದ ರಕ್ಷಣೆ ನೀಡುವುದು ಮಾತ್ರವಲ್ಲ, ಅವರಿಗೆ ಸಮಾಧಾನವನ್ನು ಉಂಟುಮಾಡುವುದು, ಅವರನ್ನು ಪುತ್ರತ್ವದ ಮುದ್ರೆಯಿಂದ ಮುದ್ರಿಸುವುದೂ ಆಗಿದೆ, ಇದು ನಮ್ಮ ಕರ್ತನು "ಪವಿತ್ರಾತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13).

ಕೆಲವರು ಪೇತ್ರನ "ಆ ದಿನದಲ್ಲಿ ಆಕಾಶಮಂಡಲವು ಬೆಂಕಿಹತ್ತಿ ಲಯವಾಗಿ ಹೋಗುವುದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವುವು" (2 ಪೇತ್ರ 2;12) ಎಂಬ ಈ ಹೇಳಿಕೆಯನ್ನು ಅಕ್ಷರಶಃವಾಗಿ ತೆಗೆದುಕೊಳ್ಳುತ್ತಾರೆ ಮತ್ತು ಇದರ ಬಗ್ಗೆ ಪ್ರಕಟನೆ ಗ್ರಂಥಕರ್ತನ "ಆಕಾಶವು ಸುರುಳಿಯ ಹಾಗೆ ಸುತ್ತಲ್ಪಟ್ಟು ಹೋಗಿಬಿಟ್ಟಿತು" (ಪ್ರಕಟನೆ 6:14) ಎಂಬ ಹೇಳಿಕೆಯನ್ನು ಅಕ್ಷರಶಃವಾಗಿ ತೆಗೆದುಕೊಳ್ಳುತ್ತಾರೆ. ಆದಾಗ್ಯೂ ಕೋಟ್ಯಾನು ಕೋಟಿ ವಜ್ರದ ಹರಳುಗಳ ಮೇಲ್ಭಾಗವನ್ನು ರಾತ್ರಿಯ ಬೆಳಕಿನಲ್ಲಿ ನೋಡುವಾಗ ಅದು ಮಿಲಿಯಾಂತರ ಮೈಲಿಗಳ ದೂರದವರೆಗೂ ಪ್ರಸರಿಸುತ್ತಿರುತ್ತದೆ ಮತ್ತು ಅದರ ಮಧ್ಯೆ ಸುರುಳಿಕೊಳ್ಳಲು, ಅಥವಾ ಬೆಂಕಿ ಪಡೆಯಲು ಏನೂ ಇರುವುದಿಲ್ಲ ಎಂಬ ಒಂದು ವಾದವು ಅವರುಗಳು ಮೇಲಿನ ಹೇಳಿಕೆಗಳನ್ನು ಅಕ್ಷರಶಃವಾದವುಗಳೆಂದು ತಪ್ಪಾಗಿ ಗ್ರಹಿಸಿಕೊಂಡಿದ್ದಾರೆಂದು, ಅವುಗಳು ಅಕ್ಷರಶಃವಾಗಿ ನೆರವೇರುವುವು ಎಂಬ ಅವರ ನಿರೀಕ್ಷಣೆಗಳು ಗರಿಷ್ಠ ಮಟ್ಟದಲ್ಲಿ ಅಸಂಬದ್ಧವಾಗಿವೆ ಎಂದು ಮನದಟ್ಟುಪಡಿಸಲು ಸಾಕಾಗುತ್ತದೆ.

ಈ ಕಾರಣದಿಂದ, ತರುವಾಯ, ದೇವರು ಮಾನವ ಜಾತಿಯನ್ನು ತುತೂರಿಗಳ, ಶಬ್ದಗಳ, ಬೆಂಕಿ ಮುಂತಾದ ಚಿತ್ರಣಗಳಡಿಯಲ್ಲಿ ಸುಗ್ಗಿಕಾಲ, ಕರ್ತನ ಪ್ರತ್ಯಕ್ಷತೆ, ಆತನ ಆತ್ಮೀಕ ರಾಜ್ಯ ಕುರಿತಾದ ಮಾಹಿತಿಗಳನ್ನು ಮಾನವರಿಂದ ಮರೆಮಾಡುತ್ತಾನೆ. (ಇದು ಲೋಕದವರು ತಿಳುಕೊಳ್ಳುವುದಕ್ಕಲ್ಲ, ಚಿಕ್ಕಹಿಂಡು, ಪ್ರತಿಷ್ಠೆಗೊಂಡ ಭಕ್ತರುಗಳು ಮಾತ್ರವೇ ತಿಳುಕೊಳ್ಳತಕ್ಕದ್ದು). ಆದರೂ ಆತನು ಸೂಕ್ತಸಮಯದಲ್ಲಿ ಅವರುಗಳು ಈ ಮಾಹಿತಿಯನ್ನು ಉದ್ದೇಶಿಸಿರುವ ವರ್ಗದವರಿಗೆ ಸ್ಪಷ್ಟವಾಗಿ, ಖಡಾಖಂಡಿತವಾಗಿ ಮಾತನಾಡುವಂತೆ ಆತನು ವ್ಯವಸ್ಥೆ ಮಾಡುತ್ತಾನೆ. ಪ್ರಥಮ ಆಗಮನದಲ್ಲಿದ್ದಂತೆ, ಅದೇ ರೀತಿಯ ಪ್ರತಿಷ್ಠೆಗೊಂಡ ವರ್ಗದವರಿಗೆ ಎರಡನೆ ಆಗಮನಕಾಲದಲ್ಲಿ "ದೇವರ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟಿದೆ, ಉಳಿದವರಿಗೆ ಕಣ್ಣಿದ್ದರೂ ನೋಡದಂತೆಯೂ, ಕಿವಿಯಿದ್ದರೂ ತಿಳುಕೊಳ್ಳದಂತೆಯೂ ಸಾಮ್ಯರೂಪವಾಗಿ ಹೇಳಲಾಗುತ್ತದೆ" (ಲೂಕ 8:10) ಎಂದು ಈಗ ಹೇಳಬಹುದು. ಅವುಗಳು ಸಾಂಕೇತಿಕವಾಗಿಯೂ, ಗೂಡಾರ್ಥವಾಗಿಯೂ ನೀಡಲ್ಪಟ್ಟಿದ್ದು ಅವರ ಮುಂದೆ ಸತ್ಯವೇದವಿದ್ದರೂ, ಪ್ರತಿಷ್ಠೆಗೊಂಡವರಲ್ಲದೆ ಬೇರೆ ಯಾರೂ ಅದನ್ನು ನೋಡಲಾರರು ಮತ್ತು ಅರ್ಥಮಾಡಿ ಕೊಳ್ಳಲಾರರು (ಮಾರ್ಕ 4:11,12).

ಈ ಲೋಕಕ್ಕೆ ಪ್ರಸ್ತುತ ಸಮಯದ ಅಭೂತಪೂರ್ವವಾದ ಘಟನೆಗಳ ಬಗ್ಗೆ, ಸಂದರ್ಭಗಳ ಬಗ್ಗೆ, ಮತ್ತು ಅವುಗಳು ಪ್ರತಿ ವರ್ಷ ಕಳೆದಂತೆ ಅವುಗಳ ಗಮನಾರ್ಹತೆಯ ಹೆಚ್ಚಳಗಳ ತಿಳುವಳಿಕೆಗಳು ಇಲ್ಲದೇ ಇಲ್ಲ, ಆದರೆ ಅದರ ಭವ್ಯವಾದ ಪರಿಣಾಮದ ಬಗ್ಗೆ ಗ್ರಹಿಸುವುದಿಲ್ಲ. ಇವುಗಳು ಅವರ ಮನಸ್ಸನ್ನು ಕತ್ತಲೆ ತುಂಬಿದ ಕೇಡಿನ ಮುನ್ಸೂಚನೆಗಳಿಂದ ತುಂಬಿಸಿಬಿಡುತ್ತವೆ. ಈ ಮೊದಲು ಹೇಳಿದಂತೆ, ಅವರು ಭಯದಲ್ಲಿದ್ದು ಈ

* ಈ ಕೊನೆಗೊಳ್ಳುವಿಕೆಗೆ ಇಷ್ಟು ದೀರ್ಘಕಾಲ ಬೇಕಾಗಬಹುದೆಂಬುದನ್ನು ನಮಗೆ ತಿಳಿಸಿಲ್ಲವಾದರೂ, ಅದು ಕೊಂಚಕಾಲ ಇರಬಹುದೆಂದು ನಾವು ನಂಬುತ್ತೇವೆ.

ಲೋಕದ ಮೇಲೆ ಬರುವ ಸಂಗತಿಗಳನ್ನು ಎದುರು ನೋಡುವವರಾಗಿದ್ದಾರೆ. ಯಾಕೆಂದರೆ ಈಗಾಗಲೇ ಪರಲೋಕದ ಶಕ್ತಿಗಳೂ (ಪ್ರಸ್ತುತ ಆಳ್ವಿಕೆಯ ಶಕ್ತಿಯು) ಅಲ್ಲಾಡತೊಡಗಿದೆ.

## ಪ್ರವಾದನೀಯ ಕೊಂಡಿಯನ್ನು ಸೇರಿಸುವುದು
## Connecting the Prophetic Chain

ಹಿಂದಿನ ಅಧ್ಯಾಯದಲ್ಲಿ 'ಅನ್ಯಜನಗಳ ಕಾಲಗಳು' ಅಥವಾ ಅವರ ಸಾಮ್ರಾಜ್ಯಗಳ ಆಳ್ವಿಕೆಯು 1914ನೇ ವರ್ಷದೊಂದಿಗೆ ಸಂಪೂರ್ಣವಾಗಿ ಕೊನೆಗೊಳ್ಳುವುದು ಮತ್ತು ಆ ಸಮಯದಲ್ಲಿ ಅವರುಗಳು ಕೊನೆಗೊಳ್ಳುವರು* ಮತ್ತು ಕ್ರಿಸ್ತನ ರಾಜ್ಯವು ಸ್ಥಾಪಿತಗೊಳ್ಳುವುದು ಎಂಬುದನ್ನು ಪ್ರಸ್ತುತಿಗೊಳಿಸಿದ್ದೇವೆ. ಕರ್ತನು ಪ್ರತ್ಯಕ್ಷನಾಗಬೇಕು ಮತ್ತು ಆತನು ತನ್ನ ರಾಜ್ಯವನ್ನು ಸಜ್ಜುಗೊಳಿಸಬೇಕು ಮತ್ತು ತನ್ನ ಮಹಾಶಕ್ತಿಯನ್ನು ಪ್ರದರ್ಶಿಸುವವನಾಗಿ ಕುಂಬಾರನ ಮಡಿಕೆಯನ್ನು ಚೂರು ಚೂರು ಮಾಡುವಂತೆ ರಾಷ್ಟ್ರಗಳನ್ನು ಒಡೆದುಹಾಕಬೇಕು ಎಂಬುದು ಆಗ ಸ್ಪಷ್ಟವಾಗಿ ಗೊತ್ತುಪಡಿಸಲಾಗುವುದು. ಯಾಕೆಂದರೆ – "ಈ ರಾಜರುಗಳ ಕಾಲದಲ್ಲಿ" ಅವರುಗಳನ್ನು ಪರಾಭವ ಗೊಳಿಸುವ ಮುನ್ನ ಅಂದರೆ 1914ರ ಮೊದಲು, ಪರಲೋಕದ ದೇವರು ತನ್ನ ರಾಜ್ಯವನ್ನು ಸ್ಥಾಪಿಸುವನು ಮತ್ತು ಅದು "ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿಯೇಲ 2:44). ಇದರೊಂದಿಗೆ ಸಾಮರಸ್ಯವಾಗಿ, ನಾವು ನಮ್ಮ ಬಗ್ಗೆ ಪ್ರಸ್ತುತ ಅಧಿಕಾರದ ಹೊಡೆಯುವಿಕೆ, ಕಂಪಿಸುವಿಕೆ ಮತ್ತು ಪ್ರಸ್ತುತ ಅಧಿಕಾರಗಳು ಅಂತ್ಯಗೊಳ್ಳುವ ಎಲ್ಲಾ ಸಾಕ್ಷ್ಯಗಳನ್ನು ದೇವರ ರಾಜ್ಯದ ಸ್ಥಾಪನೆಯ ಸಿದ್ಧತೆಯಲ್ಲಿ ನೋಡುವವರಾಗಿದ್ದೇವೆ, ಅದು ಸುಭದ್ರವಾದ ಸರ್ಕಾರವಾಗಿದ್ದು ಅದನ್ನು ಅಲ್ಲಾಡಿಸಲಾಗದು.

ಮುಂದಿನ ಅಧ್ಯಾಯವು 1874ನೇ ಇಸವಿಯು ಪುನಃವಶ ಕಾಲದ ಪ್ರಾರಂಭದ ಖಚಿತವಾದ ವರ್ಷವಾಗಿದೆ. ಆದುದರಿಂದ ಅದು ನಮ್ಮ ಕರ್ತನ ಹಿಂದಿರುಗುವಿಕೆ ಯಾಗಿದೆ ಎಂಬ ಸತ್ಯವೇದದ ಸಾಕ್ಷ್ಯವನ್ನು ಒದಗಿಸುತ್ತದೆ. ಆ ದಿನದಿಂದ ಆತನು ಕಾಯುವಿಕೆಯ ಸರಿಯಾದ ಮನಸ್ಥಿತಿಯಲ್ಲಿರುವವರಿಗೆ – "ಯಜಮಾನನು ಬಂದು ಯಾವ ಯಾವ ಆಳು ಎಚ್ಚರವಾಗಿರುವುದನ್ನು ಕಂಡುಕೊಳ್ಳುವನೋ ಆ ಆಳುಗಳೇ ಧನ್ಯರು. ಆತನು ನಡುಕಟ್ಟಿಕೊಂಡು ಅವರನ್ನು ಊಟಕ್ಕೆ ಕೂಡ್ರಿಸಿ ಅವರಿಗೆ ಸೇವೆ ಮಾಡುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಲೂಕ : 12:37) ಎಂಬ ವಾಗ್ದಾನವನ್ನು ಈಡೇರಿಸುವನು. ಆದಾಗ್ಯೂ ಆತನು ನಮಗೆ ಪರಿಶುದ್ಧ ಗ್ರಂಥವನ್ನು ಬಿಚ್ಚಿಟ್ಟಿದ್ದಾನೆ. ಆತನು ಸತ್ಯದ ಪ್ರಸ್ತುತ ಭವ್ಯವಾದ ಸ್ವರೂಪ, ಉದ್ದೇಶ, ಆತನ ಬರೋಣದ ರೀತಿ ಮತ್ತು ಸಮಯ, ಮತ್ತು ನಂಬಿಕೆಗಸ್ತ ಮನೆವಾರ್ತೆಯವರಿಗೆ ಮತ್ತು ಲೋಕದವರಿಗೆ ಆತನ ಪ್ರಕಟನೆಯ ಗುಣಲಕ್ಷಣಗಳು ಇವುಗಳನ್ನು ತೋರಿಸಿದ್ದಾನೆ. ಆತನು ನಮ್ಮನ್ನು ನಿಶ್ಚಿತ ರೂಪದಲ್ಲಿ ಕಾಲ ಪ್ರವಾಹದ ಮೇಲೆ ನಮ್ಮ ಸ್ಥಳ ನೇಮಿಸುವ ಪ್ರವಾದನೆಗಳ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾನೆ. ಮತ್ತು ಆತನು ನಮಗೆ ಸುಗ್ಗಿಯ ಕಾಲದಲ್ಲಿನ ಆತನ ಕಾರ್ಯಾಚರಣೆ ಕ್ರಮದ ಯೋಜನೆಯನ್ನೂ ತೋರಿಸಿದ್ದಾನೆ, ಎಲ್ಲಾದಕ್ಕಿಂತ ಮೊದಲು ಈ ಸುಗ್ಗಿಯು ಭಕ್ತರುಗಳ ಸುಗ್ಗಿಯಾಗಿದೆ. ಇದು ಅವರ ಸಂಪೂರ್ಣ ಮಾಗುವಿಕೆಯ ಮತ್ತು ಹಣಜಿಯಿಂದ ಬೇರ್ಪಡುವ ಸಮಯವಾಗಿದೆ.

ಎರಡನೆಯದಾಗಿ, ಅದು ಈ ಲೋಕದವರಿಗೆ ಸಂಕಟಗಾಲಿಯು ಸುಗ್ಗಿಯಲ್ಲಿ ಭೂಮಿಯು ದ್ರಾಕ್ಷೆಫಲಗಳನ್ನು ಕೊಯ್ಲುಮಾಡುವ – ತುಳಿಯವ ಹಾಗೂ ಸರ್ವಶಕ್ತನಾದ ದೇವರ ಕ್ರೋಧವೆಂಬ ದ್ರಾಕ್ಷಾರಸವನ್ನು ಯಂತ್ರದಲ್ಲಿ ಹಿಂಡುವ ಸಮಯವಾಗಿದೆ. ಈ ಎರಡೂ ಮಾಗುವಿಕೆಗಳೂ (ಪ್ರಕಟನೆ 14:1–4; 18–20) ನಾಲ್ವತ್ತು ವರ್ಷಗಳ ಅವಧಿಯಲ್ಲಿ ಅಂದರೆ ಕ್ರಿ.ಶ. 1915ರಲ್ಲಿ ಪೂರ್ಣಗೊಳ್ಳುವುದು ಎಂಬುದನ್ನು ಆತನು ತೋರಿಸಿದ್ದಾನೆ.

ಆದರೆ, ಓದುಗನಿಗೆ ಹಾಗೆ ಮುಂದಿನ ಅಧ್ಯಾಯಗಳಲ್ಲಿ ಏನನ್ನು ರುಜುವಾತುಪಡಿಸಲಾಗುವುದು ಎಂಬುದನ್ನು ತಿಳಿಸಲ್ಪಡುವಾಗ ಆತನು ಈ ಬಗ್ಗೆ ಇರುವ ಸತ್ಯವೇದದ ಪರಿಚ್ಛೇಧಗಳಲ್ಲಿ ಈ ಸಂಗತಿಗಳು ಮತ್ತು ದಿನಾಂಕಗಳು ಸ್ಪಷ್ಟ ರೀತಿಯಲ್ಲಿ ಸೂಚಿಸಲ್ಪಟ್ಟಿವೆ ಎಂದು ನಿರೀಕ್ಷಿಸಬಾರದು. ಇದಕ್ಕೆ ವ್ಯತಿರಿಕ್ತವಾಗಿ, ಈ ಎಲ್ಲಾ ಸಂಗತಿಗಳೂ ಅವುಗಳು ಸೂಕ್ತ ಸಮಯ ಬರುವವರೆಗೂ ಅರ್ಥವಾಗದಂತೆ ಅಥವಾ ಮೆಚ್ಚಿಕೊಳ್ಳದಂತೆ ಕರ್ತನಿಂದ ಮರೆಮಾಡಲ್ಪಟ್ಟಿವೆ ಎಂಬುದನ್ನು ತನ್ನ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಂತರದಲ್ಲಿ ಸತ್ಯವನ್ನು ಮಾಣಿಕ್ಯಗಳಿಗಿಂಥ ಶ್ರೇಷ್ಠವೆಂದು ಪರಿಗಣಿಸುವ ಆತನ ನಿಷ್ಠಾವಂತರಾದ ಪ್ರಾಮಾಣಿಕ ಮಕ್ಕಳಿಗೆ ಮಾತ್ರವೇ ಇದು ಅರ್ಥವಾಗಬಹುದು. ಯಾಕೆಂದರೆ, ಅವರುಗಳು ಇದನ್ನು ಬೆಳ್ಳಿಯನ್ನು ಹುಡುಕುವವರಂತೆ ಹುಡುಕಲು ಬಯಸುತ್ತಾರೆ. ಸತ್ಯವು ಬೆಳ್ಳಿಯಂತೆ, ಅದನ್ನು ಗಣಿಯಿಂದ ದೊರಕಿಸಿಕೊಂಡರಷ್ಟೇ ಸಾಲದು, ಅದರ ಮೌಲ್ಯವನ್ನು ಮೆಚ್ಚಿಕೊಳ್ಳುವ ಮೊದಲು ಅದನ್ನು ಕಲ್ಮಶಗಳಿಂದ ಶುದ್ಧೀಕರಿಸಬೇಕಾಗುತ್ತದೆ, ಇಲ್ಲಿ ಕೆಲವು ಮಾತುಗಳಲ್ಲಿ ಹೇಳಲ್ಪಟ್ಟವುಗಳನ್ನು ಅಂಶಾಂಶವಾಗಿ ಸಾಬೀತು ಪಡಿಸಲಾಗುವುದು; ಅನೇಕರು ಈ ಹೇಳಿಕೆಗಳನ್ನು ಸತ್ಯವೇದದೊಂದಿಗೆ ಪರಿಶೀಲಿಸುವ ಕಷ್ಟಪಡದೆಯೇ ತೆಗೆದುಕೊಳ್ಳುವುದನ್ನು ಆರಿಸಿಕೊಳ್ಳಬಹುದು. ಆದರೆ,

ನಿಜವಾಗಿ ಸತ್ಯವನ್ನು ಬಯಸುವವರು ಹಾಗೆ ಮಾಡುವುದಿಲ್ಲ. ಆತನು ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ಅಂಶಗಳನ್ನೂ, ವಾದಗಳನ್ನೂ, ಪುರಾವೆಗಳನ್ನು ಎಲ್ಲಾ ಸಂಬಂಧಗಳನ್ನು ಪರಿಶೀಲಿಸಿ ಅದು ದೇವರ ವಾಕ್ಯದಿಂದ ನೇರವಾಗಿ ತನ್ನ ಸ್ವಂತದನ್ನಾಗಿ ಮಾಡಿಕೊಳ್ಳುತ್ತಾನೆ. ಈ ರೀತಿಯಾಗಿ ಆತನು ವರದಿಯ ಸತ್ಯತೆಯನ್ನು ಮನದಟ್ಟುಪಡಿಸಿಕೊಳ್ಳುತ್ತಾನೆ.

ದೇವರು ಅದನ್ನು ಒದಗಿಸಿರಬಹುದಾದರೂ, ಸೇವಕರು ಸೂಕ್ತ ಕಾಲದಲ್ಲಿ ಮನೆವಾರ್ತೆಯವರಿಗೆ ಆಹಾರವನ್ನು ತರುವವರಾದರೂ ಅದರಿಂದ ಬಲಹೊಂದಲು ಬಯಸುವ ಪ್ರತಿಯೊಬ್ಬರೂ ಇನ್ನೂ ತಾವಾಗಿಯೇ ಅವನ್ನು ತಿನ್ನಬೇಕಾಗುತ್ತದೆ.

*ನನ್ನ ಕಣ್ಣುಗಳು ಕರ್ತನು ಮಹಿಮೆಯೊಡನೆ ಬರುವದನ್ನು*
*ಕಾಣುವದು;*
*ಸರ್ವಶಕ್ತನಾದ ದೇವರು ಉಗ್ರಕೋಪವೆಂಬ ದ್ರಾಕ್ಷಿಗಳನ್ನು*
*ಶೇಖರಿಸಿರುವ ದ್ರಾಕ್ಷಿಯ ತೊಟ್ಟಿಯಲ್ಲಿ ತುಳಿಯುತ್ತಾನೆ.*
*ಉರಿಯುವ ಬಿರುಗಾಳಿಯಂತಿರುವ ಆತನ*
*ಶೀಘ್ರವಾದ ಖಡ್ಗವನ್ನು ನೋಡಿದೆ,*
*ನಮ್ಮ ಅರಸನು ನಡೆದು ಬರುತ್ತಿದ್ದಾನೆ.*

*ಆತನ ನ್ಯಾಯತೀರ್ಪಿನ ದಿನವು ಬರುವದನ್ನು ನಾನು*
*ನೋಡಬಲ್ಲೆ,*
*ಅದು ಭೂಮಿಯನ್ನೆಲ್ಲಾ ಆವರಿಸುವದು.*
*ಎರಡನೆಯ ಹುಟ್ಟಿನ ಮುಂಚೆ ಮಾಡಿದ ವಾಗ್ದಾನದ*
*ನಿಟ್ಟುಸಿರು ಮತ್ತು ನರಳಾಟ.*
*ಆತನ ನೀತಿಯ ತೀರ್ಪಿನಲ್ಲಿ ಕುಸಿಯುತ್ತಿರುವ ಭೂಮಿಯ*
*ದೊರೆತನವನ್ನು ನಾನು ಓದಿದೆ.*
*ನಮ್ಮ ಅರಸನು ಬರುತ್ತಿದ್ದಾನೆ.*

*ಅನ್ಯಜನಾಂಗಗಳ ಕಾಲವು ಕೊನೆಗೊಳ್ಳು ತ್ತಿದೆ; ಅದರ*
*ಉತ್ತರಾಧಿಕಾರಿಗಳ ಕಾಲವು ಮುಗಿಯಿತು;*
*ಅವರೊಡನೆ ಪಾಪವೂ, ದುಃಖವೂ ಎಂದೆಂದಿಗೂ*
*ಕೊನೆಗೊಳ್ಳು ವುದು;*
*ಯೂದಾ ಕುಲದ ಸಿಂಹನು ಪ್ರಭುತ್ವಕ್ಕೆ ಬರುತ್ತಾನೆ,*
*ನಮ್ಮ ಅರಸನು ಬರುತ್ತಿದ್ದಾನೆ.*

*ಏಳನೆಯ ತುತೂರಿ ಧ್ವನಿಗೈಯುತ್ತಿದ್ದರೆ, ನಮ್ಮ ಅರಸನಿಗೆ*
*ಅಪಜಯವೇ ಇಲ್ಲ. ಆತನ ನ್ಯಾಯತೀರ್ಪಿನ*
*ಸಿಂಹಾಸನದಲ್ಲಿ ಮನುಷ್ಯರ ಹೃದಯಗಳನ್ನು*
*ಶೋಧಿಸುವನು.*
*ಆಹಾ, ತ್ವರೇ ಪಡು ನನ್ನಾತ್ಮವೇ, ಆತನನ್ನು ಸ್ವಾಗತಿಸಲು*
*ನನ್ನ ಪಾದಗಳು ಮುಂದೆ ಹೋಗಿ ಜಯಘೋಷ ಮಾಡಲಿ.*
*ನಮ್ಮ ಅರಸನು ಬರುತ್ತಿದ್ದಾನೆ.*

* * * * * * *

# ಅಧ್ಯಯನ – 6 Study VI

# ಭೂಮಿಯ ಮಹಾ ಜೂಬಿಲಿ ಸಂವತ್ಸರ

## Earth's Great Jubilee

**ಮೋಶೆ ಮುಂತಿಳಿಸಿದ ಪ್ರಕಾರ "ಸಮಸ್ತವನ್ನೂ ಸರಿಪಡಿಸುವ ಸಮಯ" ಅದರ ಪ್ರಾರಂಭದ ದಿನವು ಸೂಚಿತವಾಗಿದೆ. ಮಹಾ ಪುನರ್‌ವಶಕಾರನು ಬರುವವರೆಗೆ ಅವು ಪ್ರಾರಂಭವಾಗವು. ಧರ್ಮಶಾಸ್ತ್ರದ ಪುರಾವೆ. ಪ್ರವಾದಿಗಳಿಂದ ಸಮರ್ಥಿಸುವ ಸಾಕ್ಷ್ಯಗಳು. ಇವುಗಳಿಂದ ಸೆಳೆದ ತಾರ್ಕಿಕ ನಿರ್ಣಯಗಳನ್ನು ಪ್ರತ್ಯೇಕವಾಗಿ ಮತ್ತು ಒಟ್ಟಾಗಿ ಪರಿಗಣಿಸುವುದು. ಪ್ರಸ್ತುತ ಸೂಚನೆಗಳ ಸಾಮರಸ್ಯ.**

"ನಿಮಗೆ ಸತ್ಯವಾಗಿ ಹೇಳುತ್ತೇನೆ – ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ, ಒಂದು ಗುಡುಸಾದರೂ ಅಳಿದುಹೋಗಲಾರದು – ಮತ್ತಾಯ 5:18.

ಇಸ್ರಾಯೇಲ್ಯರೊಡನೆ ನಡೆಸಿದ ದೇವರ ನಿರ್ವಹಣೆಗಳ ಸಾಂಕೇತಿಕ ಗುಣಲಕ್ಷಣಗಳನ್ನು ಗ್ರಹಿಸಿದಾಗ ಮಾತ್ರ ನಾವು ಆ ಜನರ ಅದ್ಭುತವಾದ ಇತಿಹಾಸವನ್ನು ಸರಿಯಾದ ರೀತಿಯಲ್ಲಿ ಮೆಚ್ಚಿಕೊಳ್ಳಲು ಸಾಧ್ಯವಾಗುತ್ತದೆ ಅಥವಾ ಇತರೆ ದೇಶಗಳವರ ಇತಿಹಾಸಗಳಿಗಿಂತ ಅವರ ಇತಿಹಾಸವು ಯಾಕೆ ಅಷ್ಟೊಂದು ವಿವರವಾಗಿ ಪ್ರವಾದಿಗಳಿಂದ ಮತ್ತು ನೂತನ ಒಡಂಬಡಿಕೆಯ ಬರಹಗಾರರಿಂದ ದಾಖಲಿಸಲ್ಪಟ್ಟಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಅವುಗಳಲ್ಲಿ, ನೂತನ ಒಡಂಬಡಿಕೆಯ ಬರಹಗಾರರ ಪ್ರಕಾರ ದೇವರು ತನ್ನ ಯೋಜನೆಗಳಲ್ಲಿ ಎದ್ದು ಕಾಣುವ ನಿದರ್ಶನಗಳನ್ನು ಸಭೆಗೂ ಮತ್ತು ಈ ಲೋಕಕ್ಕೂ ತೋರಿಸಿಕೊಟ್ಟಿದ್ದಾನೆ. ದೇವದರ್ಶನ ಗುಡಾರದ ಅವರ ಸೇವೆಯು ಬಹುಸೂಕ್ಷ್ಮವಾಗಿ ಆಜ್ಞಾಪಿಸಿದ ದೈವೀಕ ನಿಯಮಗಳಲ್ಲಿ ರಕ್ತಸುರಿಸುವ ಪಶುಗಳು ಮತ್ತು ಅದರ ಪ್ರತ್ಯೇಕವಾದ ನೇಮಿಸುವಿಕೆಗಳೊಂದಿಗೆ ಅವರ ಹಬ್ಬಗಳು ಮತ್ತು ಪರಿಶುದ್ಧ ದಿನಗಳು, ಅವರ ಸಬ್ಬತ್ತುಗಳು ಅವರ ಎಲ್ಲಾ ಸಮಾರಂಭಗಳೂ, ಆಚಾರ ವಿಧಿಗಳೂ ಪ್ರತಿಸಂಕೇತದಲ್ಲಿ ಮುಂದೆ ಸಂಭವಿಸುವುದರ ನಮೂನೆಯಾಗಿ, ಆ ಛಾಯೆಗಳಿಂದಲೂ ವಿಶಾಲವಾಗಿ, ಉನ್ನತವಾಗಿ, ಹೆಚ್ಚು ಭವ್ಯವಾದವುಗಳೂ ಆಗಿವೆ. ಅಪೋಸ್ತಲನಾದ ಪೌಲನು ನಮಗೆ ಭರವಸೆ ನೀಡುವಂತೆ ಆ ಪ್ರತಿಸಂಕೇತಗಳು ಮಾನವ ಜಾತಿಗೆ ಆಶೀರ್ವಾದಕರವಾಗಿ ಜೊತೆ ತುಂಬಿದೆ. ಅವುಗಳು ಮುಂದೆ ಬರಬೇಕಾದ ಮೇಲುಗಳ ಛಾಯೆಯಾಗಿದೆ ಎಂದು ಹೇಳುತ್ತಾನೆ (ಇಬ್ರಿಯ 10:1, 8:5; ಕೊಲೊಸ್ಸೆ 2:17). ಅದೇ ಸಮಯದಲ್ಲಿ ನಮ್ಮ ಕರ್ತನ ಮೇಲಿನ ಹೇಳಿಕೆಯಲ್ಲಿ ಪೂರ್ವಛಾಯೆಯಾಗಿ ಕಂಡು ಬರುವ ಎಲ್ಲಾ ಸಂಗತಿಗಳೂ ಖಚಿತವಾಗಿ ನೆರವೇರುವವುಗಳಾಗಿವೆ ಎಂಬ ಭರವಸೆ ನೀಡುತ್ತಾನೆ.

ಆದರೆ ಸಾಂಕೇತಿಕ ಸಂಗತಿಗಳನ್ನು ಪರಿಗಣಿಸುವಾಗ ನಾವು ದೋಷಗಳನ್ನು ಅನೇಕ ಸದಭಿಪ್ರಾಯದ ಜನರನ್ನು ದೂರವಿರಿಸ ಬೇಕಾಗುತ್ತದೆ. ಅವರುಗಳು ಪರಿಶುದ್ಧ ಗ್ರಂಥದಲ್ಲಿ ಮಹತ್ವವಾದ ನಮೂನೆಗಳಿವೆ ಎಂದು ನೋಡುವಾಗ ಅತಿರೇಕಕ್ಕೆ ಹೋಗಿ ಸತ್ಯವೇದದ ಪ್ರತಿಯೊಂದು ಪಾತ್ರವೂ, ಘಟನೆಯೂ ಸಾಂಕೇತಿಕವಾಗಿವೆ ಎಂಬಂತೆ ವ್ಯವಹರಿಸುತ್ತಾರೆ. ಈ ರೀತಿಯಲ್ಲಿ ಅವರು ಕೇವಲ ತಮ್ಮ ಕುತೂಹಲ ಮತ್ತು ದಕ್ಷತೆಗಳ ಕಾರಣ ತಪ್ಪು ಹಾದಿ ತುಳಿಯುತ್ತಾರೆ. ನಾವು ಯೆಹೂದಿ ನಿಯಮದ ಸಂಭ್ರಮಾಚರಣೆಗಳನ್ನು ಪರೀಕ್ಷಿಸುವಾಗ ನಾವು ಅಂಥಾಃ ಅಸುರಕ್ಷಿತ ನೆಲೆಯಲ್ಲಿ ನಾವು ಕಟ್ಟುವುದಿಲ್ಲವೆಂದು ಅಪೋಸ್ತಲನು ಪ್ರಕಟಿಸಿದ್ದಾನೆ, ಅಥವಾ ನಾವು ಈ ಸಾಂಕೇತಿಕ ಸಂಗತಿಗಳು ಯಾವುದೇ ಪರಿಗಣನೆ ಮತ್ತು ಅವರು ಬೋಧಿಸುವ ಪಾಠಗಳ ಜಾಗರೂಕ ಅಧ್ಯಯನ ಇಲ್ಲದೆ ಹಾದುಹೋಗುವಂತೆ ಅವಕಾಶ ನೀಡಕೂಡದು. ಇನ್ನೂ ಹೆಚ್ಚಾಗಿ ನಾವು ಸಮಯವನ್ನು ಊಹಾಪೋಹಗಳೊಡನೆ ಮತ್ತು ಕೇವಲ ಕಲ್ಪನೆಗಳೊಂದಿಗೆ ಕಳೆಯಬಾರದು.

"ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವು ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು" (ಮತ್ತಾಯ 5:18) ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ. ಆತನು ಅದನ್ನು ಧರ್ಮಶಾಸ್ತ್ರದ ಒಡಂಬಡಿಕೆಗಳ ನಿರ್ಬಂಧಗಳ ಬಗ್ಗೆ ಮಾತ್ರವೇ ಹೇಳದೆ, ಅವರ ಮೇಲೆ ಅದರ ಹಿಡಿತವನ್ನು ಮುಗಿಸುವ ಬಗ್ಗೆ ಹೇಳದೆ ಅದರ ಹಕ್ಕೊಳಿಕೆಗಳನ್ನು ತಮ್ಮ ಸ್ವಂತ ಜೀವದಿಂದ ಪೂರೈಸುವ ಬಗ್ಗೆಯೂ ಹೇಳದೆ, ಆತನು ಅದಕ್ಕೂ ಹೆಚ್ಚಾದುದನ್ನು ಹೇಳಿದ್ದಾನೆ. ಆತನು ಮುಂದುವರೆದು ಅದರಲ್ಲಿ ಸಾಂಕೇತಿಕವಾಗಿ ವ್ಯಕ್ತವಾಗಿರುವ ಎಲ್ಲಾ ಆಶೀರ್ವಾದಗಳೂ ಪ್ರತಿಸಂಕೇತದ ಪ್ರಮಾಣದಲ್ಲಿ ನೆರವೇರುವುವು ಎಂದು ತಿಳಿಸಿದ್ದಾನೆ. ಯೆಹೂದ್ಯರ ಎಲ್ಲಾ ಸಂಭ್ರಮಾಚರಣೆಗಳಲ್ಲಿ, ದೇವರು ಅರ್ಥಹೀನವಾದ ಸಂಕೇತವನ್ನು ಮಾಡುವದಾಗಲೀ, ನೆರವೇರದೇ ಸಾಗಿಹೋಗುವ ಯಾವ ವಿಧವನ್ನೂ ಉದ್ದೇಶಿಸಿಲ್ಲ; ಎಲ್ಲಾ

ಸಂಕೇತಗಳೂ ಕನಿಷ್ಠಪಕ್ಷ ಅವುಗಳ ನೆರವೇರಿಕೆಯು ಪ್ರಾರಂಭವಾಗುವ ವರೆಗಾದರೂ ಇಡಲ್ಪಟ್ಟಿವೆ. ಅಂಥಾಃ ಸಂಕೇತಗಳು ಅವುಗಳ ಪ್ರತಿಸಂಕೇತವು ಕಾಣುವವರೆಗೂ ನಿರಂತರವಾಗಿ ಪುನರಾವರ್ತಿಸಲ್ಪಡುತ್ತವೆ. ಕೇವಲ ಸಾಂಕೇತಿಕ ಸಂಗತಿಗಳನ್ನು ಇಟ್ಟುಕೊಂಡ ಮಾತ್ರಕ್ಕೆ ಅದರ ನೆರವೇರಿಕೆ ಆಗುವುದಿಲ್ಲ. ಸಂಕೇತವು ಮುಗಿದು ನಂತರ ಸತ್ಯಸಂಗತಿಯಾದ ಪ್ರತಿಸಂಕೇತವು ಅದರ ಸ್ಥಾನವನ್ನು ತೆಗೆದುಕೊಳ್ಳುವಾಗ ನೆರವೇರಿಕೆ ತಲುಪುತ್ತದೆ.

ಈ ರೀತಿಯಲ್ಲಿ, ಉದಾಹರಣೆಗಾಗಿ, ಪಸ್ಕ ಕುರಿಮರಿಯನ್ನು ಕೊಯ್ಯುವುದು ದೇವರ ಕುರಿಮರಿಯಾದ ಕ್ರಿಸ್ತನ ಮರಣದಲ್ಲಿ ಪೂರ್ಣಗೊಂಡಿತು ಮತ್ತು ಅಲ್ಲಿ ಪ್ರತಿಸಂಕೇತಿಕ ಚೊಚ್ಚಲು ಮಕ್ಕಳಾದ ಮೊದಲು ಜನಿಸಿದ ಸುವಾರ್ತಾಯುಗದ ನಂಬಿಗಸ್ತರ ಮೇಲೆ ವಿಶೇಷ ಆಶೀರ್ವಾದವು ಪ್ರಾರಂಭವಾಯಿತು. ಈ ಆಶೀರ್ವಾದವು ನಮ್ಮ ಪಸ್ಕದ ಕುರಿಮರಿಯಾದ ಯೇಸುಕ್ರಿಸ್ತನೊಂದಿಗೆ ಪ್ರಾರಂಭವಾಯಿತಾದರೂ ಅದು ಆ ನಮೂನೆಯ ಪೂರ್ವಛಾಯೆಯಂತಿದ್ದು ಇನ್ನೂ ಪೂರ್ಣಗೊಂಡಿರುವುದಿಲ್ಲ. ಅದೇ ರೀತಿಯಲ್ಲಿ, ಧರ್ಮಶಾಸ್ತ್ರದಲ್ಲಿ ನೀಡಲ್ಪಟ್ಟಿರುವ ಪ್ರತಿಯೊಂದು ವ್ರತಾಚರಣೆಗಳೂ ಸಾಂಕೇತಿಕ ಮಹತ್ವಗಳಿಂದ ಕೂಡಿದ್ದಾಗಿವೆ ಎಂದು ಕಂಡುಬರುತ್ತದೆ. ಮತ್ತು ಪ್ರತಿಯೊಂದು ನಮೂನೆಯ ಪಾಲನೆಯು ನಿರ್ದಿಷ್ಟತೆಯಿಂದ ಯೆಹೂದ್ಯ ಯುಗದಲ್ಲೆಲ್ಲಾ ಜಾರಿಯಲ್ಲಿದ್ದು ಮೇಲೆ ಹೇಳಿದ "ಅದರೊಳಗಿಂದ ಒಂದು ಸೊನ್ನೆಯಾದರೂ, ಒಂದು ಗುಡುಸಾದರೂ ಅಳಿದುಹೋಗಲಾರದು" ಎಂಬ ಕರ್ತನ ಮಾತುಗಳಿಗೆ ಒತ್ತಾಸೆ ನೀಡುವುದಾಗಿದೆ. ಯಾಕೆಂದರೆ, ಅವುಗಳನ್ನು ಧರ್ಮಶಾಸ್ತ್ರದ ವ್ರತಾಚರಣೆಗಳಲ್ಲಿ ಜಾಗರೂಕತೆಯಿಂದ ಪಾಲಿಸಲಾಗುತ್ತಿತ್ತು.

ಈ ಅಧ್ಯಾಯದಲ್ಲಿ ಮೋಶೆಯ ಧರ್ಮಶಾಸ್ತ್ರ ಎಂದು ಕರೆಯಲ್ಪಡುವ ಜೂಬಿಲಿ ಸಂವತ್ಸರದ ಸಾಂಕೇತಿಕ ವೈಶಿಷ್ಟ್ಯಗಳನ್ನು ಅವುಗಳು ಮಹಾ ಪುನರ್‌ವಶದ, ಅಂದರೆ ಸಹಸ್ರಮಾನದ ಯುಗದಲ್ಲಿ ಮಾನವಜಾತಿಯು ಪತನದಿಂದ ಚೇತರಿಸಿಕೊಳ್ಳುವುದು ನೆರವೇರ ಬೇಕಾಗಿರುವುದರಿಂದ ಪೂರ್ವಛಾಯೆಯಿಂದ ಕೂಡಿದ ಉದ್ದೇಶ ಹೊಂದಿವೆ ಎಂಬುದನ್ನು ತೋರಿಸುವುದಕ್ಕಾಗಿ ಪರೀಕ್ಷಿಸುವವರಾಗಿದ್ದೇವೆ; ಅಂದರೆ ಅದರ ಗುಣಲಕ್ಷಣದಲ್ಲಿ ಅದು ಬರಲಿರುವ ಪುನರ್‌ವಶದ ದೃಷ್ಟಾಂತವಾಗಿದೆ. ಅದನ್ನು ಎಣಿಕೆಮಾಡುವ ರೀತಿಯಲ್ಲಿ ಅದು ಸಮಯ ಕಟ್ಟುಪಾಡುಗಳನ್ನು ಒದಗಿಸುವವುಗಳಾಗಿವೆ. ಅವುಗಳನ್ನು ಅರ್ಥ ಮಾಡಿಕೊಳ್ಳುವಾಗ ಮತ್ತು ಅನ್ವಯಿಸುವಾಗ ಅದು ಸ್ಪಷ್ಟವಾಗಿ ಪ್ರತಿಸಾಂಕೇತಿಕ ಸಂಗತಿಗಳ ಸಮಯ ಪ್ರಾರಂಭವಾಗಿದೆ – "ಸಮಸ್ತವನ್ನು ಸರಿಪಡಿಸುವ ಕಾಲ" ಎಂಬುದನ್ನು ಸೂಚಿಸುತ್ತದೆ – ಅ.ಕೃ. 3:19–21.

ಜೂಬಿಲಿ ಸಂವತ್ಸರವು ಧರ್ಮಶಾಸ್ತ್ರದ ಭಾಗವಾಗಿರುವುದರಿಂದಲೂ, ಆ ಮಹೋತ್ಸವ ಪುನರಾವರ್ತನೆಯು ಪೂರೈಸಲಾಗದ್ದರಿಂದ, ನಮ್ಮ ಕರ್ತನು ಸಂಕೇತವನ್ನು ನೆರವೇರದೆ ಹಾಗೆ ಮುಂದೆ ಸಾಗುವುದು ಸಾಧ್ಯವಿಲ್ಲವೆಂದು ಪ್ರಕಟಿಸಿರುವುದ ರಿಂದಲೂ ಮತ್ತು ಪುನರ್‌ವಶದ ಸಂಗತಿಗಳ ಬಗ್ಗೆ ಪ್ರವಾದಿಗಳು ಲೋಕದ ಆರಂಭದಿಂದ ಮುಂತಿಳಿಸುವ ಮತ್ತು ಈ ಸಂಕೇತದಲ್ಲಿ ಪೂರ್ವದಲ್ಲಿಯೇ ಚಿತ್ರಿತವಾಗಿರುವ ಎಲ್ಲಾ ಸಂಗತಿಗಳು ಇನ್ನೂ ಸಂಭವಿಸದಿರುವುದರಿಂದ, ಅವುಗಳು ಮುಂದೆ ನೆರವೇರಬೇಕಾಗಿವೆ ಎಂಬುದು ನಮಗೆ ತಿಳಿದದೆ.

## ಇಸ್ರಾಯೇಲ್ಯರ ಜೂಬಿಲಿ ಸಂವತ್ಸರದ ವರ್ಷ
## Israel's Jubilee Year

ಜೂಬಿಲಿ ಮಹೋತ್ಸವದ ವರ್ಷವು ಜನರಿಗೂ, ದೇವರು ಅವರಿಗೆ ದಯಪಾಲಿಸಿದ ದೇಶಕ್ಕೂ ವಿಶ್ರಾಂತಿಯ ಸಬ್ಬತ್ತಾಗಿತ್ತು ಮತ್ತು ಚೈತನ್ಯದಾಯಕವಾಗಿತ್ತು. ಅದು ಸಬ್ಬತ್ತುಗಳ (ಸಬ್ಬತ್ತು ಎಂಬ ಪದ ವಿಶ್ರಾಂತಿಯನ್ನು ಸೂಚಿಸುತ್ತದೆ) ಸರಮಾಲೆಯ ಪ್ರಧಾನವಾಗಿದೆ. ಅವರಿಗೆ ಪ್ರತಿ ಏಳನೆಯ ದಿನವು ಸಬ್ಬತ್ತಾಗಿತ್ತು ಮತ್ತು ವರ್ಷಕ್ಕೊಂದು ಸಾರಿ ಈ ಸಾಂಕೇತಿಕ ಸಬ್ಬತ್ತು ದಿನಗಳು ಪರಕಾಷ್ಠತೆಯನ್ನು ತಲುಪುತ್ತಿತ್ತು, ಏಳು ಸಬ್ಬತ್ತುಗಳ ಕಾಲಚಕ್ರವು ನಾಲ್ವತ್ತೊಂಬತ್ತು ದಿನಗಳ ಕಾಲಾವಧಿ ಆಗುತ್ತಿದ್ದು (7x7=49) ಐವತ್ತನೆಯ ದಿನದಲ್ಲಿ ಇದನ್ನು 'ಜೂಬಿಲಿ ಸಂವತ್ಸರ ದಿನ'ವಾಗಿ ಅನುಸರಿಸುತ್ತಿತ್ತು (ಯಾಜಕ 23:15,16), ಇದು ಯೆಹೂದ್ಯರ 'ಪಂಚಾಶತ್ತಮ' ದಿನವಾಗಿತ್ತು. ಅದು ಸಂತೋಷಪಡುವ ಮತ್ತು ಕೃತಜ್ಞತಾ ಸ್ತೋತ್ರವರ್ಪಿಸುವ ದಿನವಾಗಿತ್ತು.

ಸಬ್ಬತ್ತು ವರ್ಷವು ಏಳನೆಯ ವರ್ಷದಲ್ಲಿ ಕಂಡುಬರುತ್ತಿತ್ತು; ಅದರಲ್ಲಿ ಭೂಮಿಯನ್ನು ವಿಶ್ರಾಂತಿಗಾಗಿ ಬಿಡಲಾಗುತ್ತಿತ್ತು, ಆದುದರಿಂದ ಯಾವ ಬಿತ್ತನೆಯ ಕಾರ್ಯವೂ ಆ ಸಮಯದಲ್ಲಿ ನಡೆಯುತ್ತಿರಲಿಲ್ಲ. ಈ ಸಬ್ಬತ್ತು ವರ್ಷಗಳ ಪರಾಕಾಷ್ಠೆಯು ಪಂಚಾಶತ್ತಮ ಅಥವಾ ಐವತ್ತನೆಯ ದಿನವಾದ ಸಬ್ಬತ್ತಿನಂತೆ ತಲುಪುವುದಾಗಿತ್ತು ಮತ್ತು ಇದು ಏಳು ವರ್ಷಗಳ ಏಳರಷ್ಟರ ಅವಧಿಯಾದ ಮುಂದಿನ ಐವತ್ತನೆಯ ವರ್ಷವನ್ನು ಆವರಿಸಿ ಕೊಳ್ಳುವುದಾಗಿತ್ತು. (7 ವರ್ಷಗಳು x 7 ವರ್ಷಗಳು = 49, 50ನೇ ವರ್ಷವು ಜೂಬಿಲಿ ವರ್ಷ) ಇದುವೇ ಜೂಬಿಲಿ ಸಂವತ್ಸರದ ವರ್ಷವಾಗಿತ್ತು.

ನಾವೀಗ ಇದರ ವರದಿಯನ್ನು ಪರೀಕ್ಷಿಸೋಣ ಮತ್ತು ಅದರ ಯುಕ್ತತೆಯನ್ನು ಪುನರ್‌ವಶದ ಮಹಾ ಸಹಸ್ರಮಾನವೆಂದು ಗುರುತಿಸೋಣ. ಇಸ್ರಾಯೇಲ್ಯರು ಕಾನಾನಿಗೆ ಬಂದಾಗ, ಆ ದೇಶವನ್ನು ಅವರು ಅವರ ಕುಲ ಮತ್ತು ಕುಟುಂಬಗಳಿಗನುಸಾರವಾಗಿ ಚೀಟು ಹಾಕುವುದರ

ಮೂಲಕ ಪಾಲುಮಾಡಿಕೊಂಡರು. ಆದುದರಿಂದ ಒಬ್ಬರು ಹೊಂದಿದ ಸಾಫಲ್ಯದ ಸ್ವಾಧೀನಕ್ಕನುಸಾರವಾಗಿ ಹೆಚ್ಚಬಹುದು ಅಥವಾ ಪ್ರತಿಕೂಲವಾಗಿ ಕಡಿಮೆಯಾಗಬಹುದು, ಒಬ್ಬ ಮನುಷ್ಯನು ಸಾಲಕ್ಕೆ ಸಿಲುಕಿಕೊಂಡರೆ ಆತನಿಗೆ ತನ್ನ ಆಸ್ತಿಯ ಒಂದು ಪಾಲು ಅಥವಾ ಅದನ್ನು ಪೂರ್ಣವಾಗಿ ಮಾರುವ ಮತ್ತು ತನ್ನ ಕುಟುಂಬದೊಡನೆ ದಾಸತ್ವಕ್ಕೆ ಹೋಗುವ ಅವಕಾಶವಿತ್ತು. ಆದರೆ ಅಂಥಾಃ ಪ್ರತಿಕೂಲ ಸಂಧರ್ಭಗಳು ಸದಾಕಾಲ ಮುಂದುವರೆಯದಂತೆ, ಅವರ ಎಲ್ಲಾ ಜಮಾ ಖರ್ಚಿನ ಲೆಕ್ಕಾಚಾರಗಳು ಮಹೋತ್ಸವದ ವರ್ಷದವರೆಗೆ ಮಾತ್ರವೇ ಎಣಿಕೆ ಮಾಡಬೇಕು, ಆಗ ಎಲ್ಲರೂ ಋಣಭಾರ ಮುಂತಾದವುಗಳಿಂದ ಮುಕ್ತರಾಗುವವರಾಗಿ ಮುಂದಿನ ಐವತ್ತು ವರ್ಷಗಳ ಅವಧಿಯವರೆಗೆ* ಅವರು ಹೊಸ ಜೀವನ ನಡೆಸುವಂತೆ ದೇವರು ಈ ನತದೃಷ್ಟರಿಗೆ ಉದಾರವಾದ ಪೂರ್ವ ಸಿದ್ಧತೆಯನ್ನು ಮಾಡಿದ್ದನು.

ಆದುದರಿಂದ ಆ ದೇಶವನ್ನು ಪ್ರವೇಶಿಸಿದ ಕಾಲದಿಂಧ ಪ್ರತಿ ಐವತ್ತು ವರ್ಷಗಳ ಅವಧಿಯಲ್ಲಿ (ಯೋರ್ದಾನಿನ ಪೂರ್ವಭಾಗವೂ ಸೇರಿದಂತೆ) ಸಂವತ್ಸರ (ಜೂಬಿಲಿ) ವರ್ಷವಾಗಿದ್ದು ಅದು ಸಂತೋಷ ಸಂಭ್ರಮಗಳ ಹಾಗೂ (ಹಿಂದಕ್ಕೆ ಪಡಕೊಳ್ಳುವ) ಪುನರ್‌ವಶದ ಕಾಲವಾಗಿತ್ತು ಮತ್ತು ಇದರಲ್ಲಿ ಕುಟುಂಬಗಳು ಪುನಃ ಅನ್ಯೋನ್ಯತೆ ಹೊಂದಿಕೊಳ್ಳುತ್ತಿದ್ದರು ಮತ್ತು ಗೃಹಸಂಕೀರ್ಣಗಳು, ವಾಸ ಸ್ಥಳಗಳು ಪುನರ್‌ಸ್ಥಾಪನೆಗೊಳ್ಳುತ್ತಿದ್ದವು. ಹೀಗಾಗಿ ಇದನ್ನು "ಜೂಬಿಲಿ ಸಂವತ್ಸರ" ಎಂದು ಕರೆಯುವುದಲ್ಲಿ ಯಾವ ಆಶ್ಚರ್ಯವೂ ಇರದು. ಯಾವುದೇ ಆಸ್ತಿಯು ಸಾಲದ ಕಾರಣ ಮಾರಾಟಮಾಡಿದ್ದರೆ, ಅಂಥಾಃ ಆಸ್ತಿಯನ್ನು ಜೂಬಿಲಿ ವರ್ಷದವರೆಗೆ ದಯಪಾಲಿಸುವುದನ್ನು ಪರಿಗಣಿಸಬೇಕಾಗುತ್ತಿತ್ತು. ಮತ್ತು ಅದನ್ನು ಮಾರಿದಾಗ ಬರಬಹುದಾದ ಬೆಲೆಯು ಮುಂದಿನ ಜೂಬಿಲಿ ವರ್ಷವು ಹತ್ತಿರವೋ, ದೂರವೋ ಎಂಬುದರ ಮೇಲೆ ಅವಲಂಬಿತವಾಗುತ್ತಿತ್ತು.

ಇದರ ಆಚರಣೆಯ ವರದಿಯನ್ನು ಯಾಜಕ ಕಾಂಡ 25:10 ರಿಂದ 15 ರವರೆಗೆ ಈ ರೀತಿಯಾಗಿ ಓದಬಹುದಾಗಿದೆ – "ನೀವು ಐವತ್ತನೆಯ ವರ್ಷವನ್ನು ದೇವರಿಗೆ ಮೀಸಲಾದ ವರ್ಷವೆಂದು ಭಾವಿಸಿ ಅದರಲ್ಲಿ ದೇಶದ ನಿವಾಸಿಗಳಿಗೆಲ್ಲರಿಗೂ ಬಿಡುಗಡೆ ಆಯಿತೆಂಬುದಾಗಿ ಸಾರಬೇಕು. ಅದು ಜೂಬಿಲಿ ಸಂವತ್ಸರವಾದುದರಿಂದ ನೀವೆಲ್ಲರೂ ನಿಮ್ಮ ಸ್ವಂತ ಭೂಮಿಗಳಿಗೂ ಸ್ವಜನರ ಬಳಿಗೂ ಹೋಗಿ ಇರಬಹುದು. ಆ ಐವತ್ತನೆಯ ವರ್ಷದಲ್ಲಿ ಅಂದರೆ ಜೂಬಿಲಿ ಸಂವತ್ಸರದಲ್ಲಿ ನೀವು ಬೀಜವನ್ನು ಬಿತ್ತಬಾರದು; ತಾನಾಗಿ ಬೆಳೆದ ಪೈರನ್ನು ಕೂಡಿಸಿಟ್ಟುಕೊಳ್ಳಬಾರದು. ಅದು ಜೂಬಿಲಿ ವರ್ಷವಾದುದರಿಂದ ನೀವು ಅದನ್ನು ಮೀಸಲಾದದ್ದೆಂದು ಭಾವಿಸಬೇಕು, ಹೊಲದಲ್ಲಿ ತಾನಾಗಿ ಬೆಳೆದದ್ದನ್ನು ಊಟಮಾಡಬಹುದು"

"ಜೂಬಿಲಿ ವರ್ಷದಲ್ಲಿ ನಿಮ್ಮ ನಿಮ್ಮ ಸ್ವಂತ ಭೂಮಿಗಳು ತಿರುಗಿ ನಿಮ್ಮ ವಶಕ್ಕೆ ಬರುವುವು. ನೀವು [ಸ್ಥಿರ ಸ್ವತ್ತನ್ನು] ಸ್ವದೇಶದವರೊಡನೆ ಕ್ರಯ ವಿಕ್ರಯಮಾಡುವಾಗ ಇದರ ವಿಷಯದಲ್ಲಿ ಅನ್ಯಾಯ ಮಾಡಬಾರದು. ಕಳೆದ ಜೂಬಿಲಿ ಸಂವತ್ಸರದಿಂದ ಇಷ್ಟು ವರ್ಷವಾಯಿತೆಂದು ಲೆಕ್ಕಿಸಿ ಸ್ವದೇಶದವನಿಂದ ಕ್ರಯಕ್ಕೆ ತೆಗೆದುಕೊಳ್ಳಬೇಕು."

ಈ ವ್ಯವಸ್ಥೆಯು ಅವರ ನಾಯಕ ಮತ್ತು ಸಾಂಕೇತಿಕ ಮಧ್ಯಸ್ಥನಾದ ಮೋಶೆಯ ಮೂಲಕ ದೇವರಿಂದ ಒದಗಿಸಲ್ಪಟ್ಟಿದ್ದು ಅದು ತಾನೇ ಆಶೀರ್ವದಿತ ಪ್ರಸಾದವಾಗಿ ದೇವರ ದೃಷ್ಟಿಯಲ್ಲಿರುವ ಇನ್ನೂ ಹೆಚ್ಚಿನ ಆಶೀರ್ವಾದಗಳ ಪೂರ್ವಛಾಯೆಯಂತಿತ್ತು – ಎಲ್ಲಾ ಮಾನವ ಜಾತಿಯನ್ನು ಪಾಪವೆಂಬ ಸಾಲದಿಂದ ಮತ್ತು ಅದರ ಬಂಧನ ಹಾಗೂ ದಾಸತ್ವದಿಂದ ಮೋಶೆಯನ್ನು ಸಾಂಕೇತಿಸುವ ನಮ್ಮ ಕರ್ತನೂ, ಮಧ್ಯಸ್ತಗಾರನೂ, ವಿಮೋಚಕನೂ ಆದ ಯೇಸುಕ್ರಿಸ್ತನ ಮೂಲಕ ಮುಕ್ತರನ್ನಾಗಿ ಮಾಡುವುದಾಗಿತ್ತು (ಧರ್ಮೋ 18:15). ಈ ರೀತಿಯಲ್ಲಿ ಮೋಶೆಯು ಸಂಕೇತಗಳಲ್ಲಿ ಕ್ರಿಸ್ತನ ಮತ್ತು ಆತನ ಮೂಲಕ ಬರಲಿರುವ ಆಶೀರ್ವಾದಗಳ ಬಗ್ಗೆ (ಯೋಹಾನ 5:46; 1:45) ಮತ್ತು ಈಗ ಪಾಪದ ದಾಸತ್ವ ಮತ್ತು ಭ್ರಷ್ಟಾಚಾರಗಳ ಅಡಿಯಲ್ಲಿ ನರಳುತ್ತಿರುವ ಎಲ್ಲಾ ಕುಲಗಳಿಗೆ ಬರಲಿರುವ ಮಹಾ ಪುನಃವಶ ಮತ್ತು ಜೂಬಿಲಿಯ ಬಗ್ಗೆ ಬರೆದಿರುತ್ತಾನೆ.

ಈ ಛಾಯೆಯು ಮಾದರಿಯ ಜನರಿಗೆ ಸಂತೋಷವನ್ನುಂಟು ಮಾಡುವುದಾದರೆ, ಮಹತ್ವದ ಭಾಗವಾದ ನಿಜವಾದ ಪುನರ್‌ವಶವು ಮೇರೆ ಇಲ್ಲದ ಸಂತೋಷವನ್ನುಂಟುಮಾಡುತ್ತದೆ ಮತ್ತು ನಿಜವಾಗಿಯೂ ಅದು ಇಸ್ರಾಯೇಲ್ಯರೂ ಒಳಗೊಂಡಂತೆ ಲೋಕದ ಎಲ್ಲಾ ಜನರಿಗೆ ಭವ್ಯವಾದ ಜೂಬಿಲಿಯಾಗುತ್ತದೆ, ಆ ಇಸ್ರಾಯೇಲ್ ಜನರು ಮುಂಗುರುತಾಗಿದ್ದಾರೆ ಮತ್ತು ಅವರ ಯಾಜಕತ್ವವು ರಾಜವಂಶ ಯಾಜಕತ್ವವಾದ ಸಭೆಯನ್ನು ಪ್ರತಿನಿಧಿಸುತ್ತದೆ.

ಮೊಂಡ ಜನಾಂಗವಾದ ಇಸ್ರಾಯೇಲ್ಯರಿಗೆ ತಾತ್ಕಾಲಿಕ ನೆಮ್ಮದಿಯನ್ನು ಒದಗಿಸಿಕೊಟ್ಟ ಆ ಅನಂತ ಪ್ರೀತಿಯ ಊಹನೆಗಿಂತಲೂ ಹೆಚ್ಚಾಗಿ ಇಡೀ ಜಗತ್ತಿಗೆ ನೆಮ್ಮದಿಯನ್ನು

* "ದಿವಾಳಿತನದ ನಿಯಮ" (Bankrupt Law)ದಲ್ಲಿ ಸುಮಾರಾಗಿ ಇದೇ ರೀತಿಯ ವ್ಯವಸ್ಥೆಯು ಮತ್ತು ಆಗ ನಿರೂಪಿಸಿದ ಈ ರೀತಿಯ ತತ್ವವನ್ನು ನಮ್ಮ ದಿನಗಳಲ್ಲಿ ಮತ್ತು ದೇಶದಲ್ಲಿಯೂ ದೃಢಪಡಿಸುವುದು ಯಥೋಚಿತವಾಗಿದೆ. ಆದರೆ, ಪ್ರತಿ ಐವತ್ತು ವರ್ಷಗಳಿಗೆ ಸಾಲವನ್ನು ಮನ್ನಾ ಮಾಡುವುದನ್ನು ಮತ್ತು ಯೆಹೂದ್ಯ ಪದ್ಧತಿಯನ್ನು ಅನುಸರಿಸುತ್ತಿದ್ದರೆ ಅದು ಈಗಿನ ಪದ್ಧತಿಗಳಿಗಿಂತ ಉತ್ತಮವಾಗಿ ಕೆಲಸಮಾಡುತ್ತಿತ್ತು; ಅವರ ಪ್ರಕರಣದಲ್ಲಿ ಸಮಯ, ಸಂದರ್ಭ ಮುಂತಾದವುಗಳು ವಿಶೇಷವಾಗಿ ಅವರಿಗಾಗಿ, ಅವರ ಅನುಕೂಲತೆಗಳು ಮತ್ತು ಅವುಗಳ ಸಂಧರ್ಭಗಳು ಮಾತ್ರವೇ ಆಗಿರಲಿಲ್ಲ. ಬದಲಾಗಿ ದೇವರ ಯೋಜನೆಗಳಿಗೆ ಸಂಬಂಧಿಸಿದ ಪ್ರವಾದನೀಯ ಚಿತ್ರಣಗಳು ಮತ್ತು ಪಾಠಗಳು ಮುಂದಿನ ಯುಗದ ಅಭಿವೃದ್ಧಿಯಲ್ಲಿ ವಿಶೇಷವಾಗಿದ್ದವು.

ನೀಡುವುದು ಯಾವುದೆಂದು ವಿವೇಚನಶೀಲವಾಗಿ ನಮಗೂ ಸಹ ನಿಶ್ಚಿತ ರೂಪದಲ್ಲಿ ತಿಳಿಸದೇ ಹೋದರೂ ದೇವರು ನಾವು ಇನ್ನೂ ಪಾಪಿಗಳಾಗಿರುವಾಗಲೇ ನಮ್ಮನ್ನು ಬಿಡುಗಡೆಮಾಡಿದನಲ್ಲವೆ? ಇನ್ನು ಮುಂದೆ ಯಾವುದನ್ನು ಹೆಚ್ಚು ಪೂರ್ಣವಾಗಿ ತೋರಿಸಲಾಗುವುದೋ ಅದನ್ನು ಗಮನಿಸುವುದು ಒಳ್ಳೇದು. ಒಂದು ವಿಷಯಾಂಶದಲ್ಲಿ ಇಸ್ರಾಯೇಲ್ಯರು ಸುವಾರ್ತಾ ಯುಗದ ನಂಬಿಗಸ್ತರ ನಮೂನೆಗಳಾಗಿರುವಾಗ, ಮತ್ತೊಂದೆಡೆ ಅವರುಗಳು ಯಾವುದೇ ಯುಗದಲ್ಲಿಯೂ ದೇವರನ್ನು ನಂಬುವವರೂ ಮತ್ತು ಆತನ ನಡಿಸುವಿಕೆಯನ್ನು ಒಪ್ಪಿಕೊಳ್ಳುವವರೂ ಆಗಿದ್ದಾರೆ ಮತ್ತು ಈ ಪಾತ್ರದಲ್ಲಿಯೇ ನಾವು ಅವರನ್ನು ನೋಡುವವರಾಗಿದ್ದೇವೆ. ಹೋರಿ ಹೋತಗಳ ರಕ್ತದಿಂದ ಮುದ್ರಿತವಾಗಿದ್ದ ಅವರ ಒಡಂಬಡಿಕೆಯು ಕರ್ತನ ಅಮೂಲ್ಯ ರಕ್ತದಿಂದ ಮುದ್ರಿಸಲ್ಪಟ್ಟ ನೂತನ ಒಡಂಬಡಿಕೆಯ ಸಂಕೇತವಾಗಿದ್ದು ಅದರ ಅಡಿಯಲ್ಲಿ ಸಮಗ್ರ ಭೂಲೋಕದ ಸಂಧಾನವು ಮುಂದಿನ ಯುಗದಲ್ಲಿ ನೆರವೇರಲಿದೆ. ಪಾಪ ಪರಿಹಾರ ಯಜ್ಞದ ಮೂಲಕವಾದ ಪಾಪನಿವೃತಿಯ ದಿನವು ಆ ಜನರಿಗೆ ಸಂಕೇತದಲ್ಲಿದ್ದರೂ, ಮತ್ತು ಅವರ ಪಾಪಗಳಿಗಾಗಿ ಮಾತ್ರವೇ ಆಗಿದ್ದರೂ ಅದು ಇಡೀ ಲೋಕದವರ ಪಾಪನಿವೃತ್ತಿಯ ಉತ್ತಮವಾದ ಸಮರ್ಪಣೆಯಾಗಿ ಸಾಂಕೇತಿಕತೆಗೆ ಹೊಂದಿಕೊಳ್ಳುವುದು. ಆದರೆ ಈ ಜೂಬಿಲಿಯು ಸುವಾರ್ತಾ ಸಭೆಯ ಯಾಜಕತ್ವಕ್ಕೆ ಅನ್ವಯವಾಗುವುದಿಲ್ಲ, (ಸಾಂಕೇತಿಕವಾಗಿ ಸುವಾರ್ತಾ ಸಭೆಗೆ ಅಲ್ಲ) ಇತರರಿಗೆ ಮಾತ್ರವೇ ಅನ್ವಯವಾಗುವುದು ಎಂಬುದನ್ನು ಗಮನಿಸಬೇಕು; ಯಾಕೆಂದರೆ ಯಾಜಕತ್ವಕ್ಕೆ ಯಾವುದೇ ಸ್ವತ್ತುಗಳು ಇರುವುದಿಲ್ಲ. ಆದುದರಿಂದ ಅವರು ಯಾವುದನ್ನೂ ಕಳಕೊಳ್ಳುವುದೂ ಇಲ್ಲ ಅಥವ ಯಾವುದನ್ನೂ ಪುನಃವಶಪಡಿಸಿಕೊಳ್ಳುವುದಿಲ್ಲ. ಜೂಬಿಲಿಯು ಯಾಜಕ ಕುಲದವರನ್ನು ಹೊರತುಪಡಿಸಿ ಎಲ್ಲಾ ಜನರಿಗಾಗಿಯೂ ಅದೆ. ಹಾಗಾಗಿ, ಅದು ರಾಜವಂಶಸ್ಥ ಯಾಜಕತ್ವದ ಸಭೆಗೆ ಬರುವ ಆಶೀರ್ವಾದಗಳಂತಲ್ಲ ಎಂದು ಸಂಕೇತಿಸುತ್ತದೆ. ಬದಲಾಗಿ ಪುನಃವಶದ – ಲೌಕಿಕ ಆಶೀರ್ವಾದಗಳು ಸೂಕ್ತಸಮಯದಲ್ಲಿ ಇದು ದೇವರನ್ನು ನಂಬುವ ಮತ್ತು ಅನುಸರಿಸುವ ಎಲ್ಲರಿಗೂ ಬರಲಿದೆ.

ಯುಗಗಳ ದೈವಿಕ ಯೋಜನೆಗಳ ಬಗ್ಗೆ ನಾವು ಪರಿಶೀಲನೆ ಮಾಡಿದಾಗ ನಾವು ಕಲಿತವುಗಳು ಈ ನಮೂನೆಯ ಬೋಧನೆಗಳಿಗೆ ಅನುಗುಣವಾಗಿವೆ. ಅದು ಯಾವುದೇ ತಪ್ಪುಗಳಿಲ್ಲದೆ ಎಲ್ಲಾ ಸಂಗತಿಗಳು ಲೋಕಾದಿಯಿಂದ ಎಲ್ಲಾ ಪವಿತ್ರ ಪ್ರವಾದಿಗಳಿಂದ ನುಡಿದ ಪುನರ್‌ವಶವನ್ನು ಸೂಚಿಸುತ್ತದೆ. ಮೋಶೆಯು ಇವರುಗಳಲ್ಲಿ ಒಬ್ಬನಾಗಿದ್ದಾನೆ; ಮತ್ತು ಇಲ್ಲಿ ಆತನು ವಿಶಿಷ್ಟವಾಗಿ ಬಹಳ ಹಿಂದೆಯೇ ಕಳೆದುಹೋದ ಮತ್ತು ಪಾಪದ ಅಡಿಯಲ್ಲಿ ಮಾರಲ್ಪಟ್ಟ ಮಾನವನ ಮೊದಲ ಸ್ಥಿತಿ ಮತ್ತು ಬಿಡುಗಡೆಯ ಬಗ್ಗೆ ಮಾತನಾಡುತ್ತಾನೆ.

ನಮ್ಮ ಆದಿ ತಂದೆ ತಾಯಿಗಳ ವಿಫಲತೆಯ ಕಾರಣ ಎಲ್ಲವೂ ಕಳೆದುಹೋಯಿತು; ಎಲ್ಲಾ ಹಕ್ಕುಗಳೂ ಮುಟ್ಟುಗೋಲು ಹಾಕಲ್ಪಟ್ಟವು ಮತ್ತು ಎಲ್ಲರೂ ಪೀಡಕವಾದ ಪಾಪಕ್ಕೆ ದಾಸರಾದರು ಮತ್ತು ತಾವಾಗಿಯೇ ಅದರಿಂದ ಬಿಡಿಸಿಕೊಳ್ಳದಾದರು. ಸಂತಾನ ಚಕ್ರವು ಭ್ರಷ್ಟಾಚಾರದ, ಮರಣದ ಬಂಧನದಿಂದ ದುಃಖಕರವಾಗಿ ಮುರಿಯಲ್ಪಟ್ಟಿತು. ಬಿಡುಗಡೆಯ ಸಮಯದ ವಾಗ್ದಾನಕ್ಕಾಗಿ ದೇವರಿಗೆ ಸ್ತೋತ್ರ! ಜೂಬಿಲಿಯು ಸಮೀಪಿಸುತ್ತದೆ, ಬಲು ಬೇಗನೇ ಮರಣ ಮತ್ತು ದಾಸತ್ವದ ಬಂಧಿಗಳು ತಮ್ಮ ಮೊದಲ ಸ್ಥಿತಿಯನ್ನು ಸಮರ್ಪಕವಾದ ಮಾನವತ್ವವನ್ನು, ಮತ್ತು ಮೊದಲ ಬಾಧ್ಯತೆಯನ್ನು, ಮಧ್ಯಸ್ಥಗಾರನೂ ಮತ್ತು ನೂತನ ಒಡಂಬಡಿಕೆಯನ್ನು ಸ್ಥಿರಪಡಿಸುವಾತನೂ ಆದ ಯೇಸುಕ್ರಿಸ್ತನ ಮೂಲಕ ದೇವರ ಬಹುಮಾನವಾದ ಈ ಭೂಮಿಯನ್ನು ಹಿಂದಕ್ಕೆ ಪಡೆಯುವರು.

ಸಾಂಕೇತಿಕವಾದ ಜೂಬಿಲಿ ವರ್ಷದಲ್ಲಿ ಅನೇಕರು ಬಿಡುಗಡೆಯನ್ನೂ ಮತ್ತು ಆಶೀರ್ವಾದಗಳನ್ನೂ ಪುನಃವಶಪಡಿಸಿಕೊಂಡು ಒಮ್ಮೆ ಪ್ರವೇಶಿಸುವಾಗ, ಬಹುತೇಕ ವ್ಯವಹಾರಗಳನ್ನು ಸರಾಗ ಮಾಡಲು, ಮತ್ತು ಪ್ರತಿಯೊಬ್ಬರೂ ತಮ್ಮ ಹಿಂದಿನ ಸ್ವಾತಂತ್ರ್ಯದಲ್ಲಿ ನೆಲೆಗೊಳ್ಳಲು, ಹಕ್ಕು ಸಾಧಿಸಲು, ಒಡೆತನವನ್ನು ಪುನಃಪಡಕೊಳ್ಳಲು ವರ್ಷದ ಬಹಳ ಕಾಲವೇ ಹಿಡಿದಿತ್ತು. ಅಂತೆಯೇ, ಪ್ರತಿಸಾಂಕೇತಿಕವಾಗಿಯು ಮಿಲಿಯಾಂತರ ಯುಗದ ಪುನರ್‌ವಶವು ಅವುಗಳ ವ್ಯಾಪಕವಾದ ಸುಧಾರಣೆಗಳಿಂದ, ಹಕ್ಕುಗಳ ಗುರುತಿಸುವಿಕೆಯೊಂದಿಗೆ ದೀರ್ಘಕಾಲ ಕಾಣದಾದ ಸೊತ್ತುಗಳ ಮಾನ್ಯತೆಯೊಂದಿಗೆ ತೆರೆದುಕೊಳ್ಳುತ್ತವೆ. ಆದರೆ ಪುನಃ ವಶಪಡಿಸಿಕೊಳ್ಳುವ ಕಾರ್ಯವು ವಿಧೇಯರಾದವರಿಗೆ, "ಮೂಲದಲ್ಲಿ ಕಳೆದುಕೊಂಡವುಗಳೆಲ್ಲವನ್ನೂ ಹಿಂಪಡೆಯುಲಿಲ್ಲ. ಆ ಪುನರ್‌ವಶ ಕಾಲಾವಧಿಯನ್ನೆಲ್ಲಾ ಅಂದರೆ ಒಂದು ಸಹಸ್ರ ವರ್ಷವನ್ನು ತೆಗೆದುಕೊಳ್ಳುತ್ತದೆ".

ಜೂಬಿಲಿ ಸಂವತ್ಸರದ ಯಾವುದೇ ಪ್ರತಿಸಂಕೇತವೂ ಈ ನಮೂನೆಯ ಲಕ್ಷಣಗಳಿಗೆ ಉತ್ತರವಾಗಿ ಇನ್ನೂ ಕಂಡುಬಂದಿಲ್ಲ; ಕ್ರಿಸ್ತನ ಭರವಸೆಯ ಬಲದ ಮೇಲೆ ಈ ಛಾಯೆಯು ನೆರವೇರದೇ ಮುಂದೆ ಹೋಗುವುದಿಲ್ಲ ಎಂಬುದರಲ್ಲಿ ನಮಗೆ ಸಮಾನವಾದ ಖಚಿತತೆ ಉಂಟು. "ಧರ್ಮಶಾಸ್ತ್ರದೊಳಗಿಂದ ಒಂದು ಗುಡುಸಾದರೂ ಬಿದ್ದುಹೋಗುವುದಕ್ಕಿಂತಲೂ ಆಕಾಶವೂ, ಭೂಮಿಯೂ ಅಳಿದು ಹೋಗುವುದು ಸುಲಭ" (ಲೂಕ 16:17). ಸುವ್ಯಕ್ತವಾಗಿ, ಧರ್ಮ ನಿಯಮದ ಈ ಲಕ್ಷಣವು ವಿಫಲವಾಗಿದೆ. ನಿಜವಾಗಿಯೂ, ನಮೂನೆಯು

ಇಸ್ರಾಯೇಲ್ಯರು ತಮ್ಮ ಸ್ವದೇಶದಲ್ಲಿರುವವರೆಗೆ ನಿರಂತರವಾಗಿ ಪ್ರತಿ ಐವತ್ತು ವರ್ಷಗಳಿಗೊಮ್ಮೆ ಆಚರಿಸಲ್ಪಡುತ್ತಿದ್ದು ಅವರು ಬಾಬೇಲಿಗೆ ಸೆರೆಹೋದ ಮೇಲೆ ಅದನ್ನು ಆಚರಿಸಲಿಲ್ಲ. ಆದುದರಿಂದ, ಸುವ್ಯಕ್ತವಾಗಿ ನ್ಯಾಯವಿಧಿಯ ಈ ನಿಯಮದ ಲಕ್ಷಣವು ನೆರವೇರಿಕೆಯನ್ನು ಪ್ರಾರಂಭಿಸುವ ಮೊದಲೇ ಅಳಿದುಹೋಯಿತು. ಕ್ರಿಸ್ತನ ಮೇಲಿನ ಹೇಳಿಕೆಗೆ ವಿರೋಧವಾದ ಈ ಸುವ್ಯಕ್ತವಾದ ಅಸಂಗತತೆಯ ಬಗ್ಗೆ ನಾವು ಏನನ್ನು ಉತ್ತರಿಸಬಹುದು? ನಿಜವಾಗಿಯೂ ಹಾಗಾಗಿದೆಯೋ? ಅಥವಾ ಸಾಂಕೇತಿಕ ಜೂಬಿಲಿಯು ಕೊನೆಗೊಳ್ಳುವಾಗ ಪ್ರತಿಸಾಂಕೇತಿಕ ಜೂಬಿಲಿಯು ಪ್ರಾರಂಭವಾಯಿತೆಂದು ಕಂಡುಬರುತ್ತದೋ? ಹೌದೆಂದು ನಾವು ಉತ್ತರಿಸುತ್ತೇವೆ; ಸ್ಪಷ್ಟವಾಗಿ ನಿರೂಪಿಸಲ್ಪಟ್ಟ ಪ್ರತಿಸಂಕೇತವು ಒಂದು ನಿರ್ದಿಷ್ಟ ಅಂಶದೊಡನೆ ಮತ್ತು ವಿಶಾಲವಾದ, ಭವ್ಯವಾದ ಮಟ್ಟದಲ್ಲಿ ಪ್ರತಿಸಂಕೇತಗಳು ಯಾವಾಗಲೂ ಪ್ರಾರಂಭವಾಗುವಂತೆ ಪ್ರಾರಂಭಗೊಂಡಿದೆ. ವಾಸ್ತವವಾದ ನೆರವೇರಿಕೆಯಿಂದ, ಕಾಲಚಕ್ರ ಆವೃತ್ತಿಗಳು (cycles) ಮಾತ್ರವಲ್ಲದೆ ಉಚ್ಛ್ರಾಯಸ್ಥಿತಿಗೇರಿದ ಜೂಬಿಲಿ ವರ್ಷಗಳು ಸಂಕೇತದಲ್ಲಿ ಸೇರಿಸಲ್ಪಟ್ಟಿವೆ. ಸಾಂಕೇತಿಕ ಜೂಬಿಲಿಯ ಆಚರಣೆಯನ್ನು ಸೂಚಿಸಲು ಗುಣಿಸಿದಂತಹ (multiplies) ಕ್ರಮದಲ್ಲಿಯೇ ಭೂಮಿಯ ಮಹಾಜ್ಯೂಬಿಲಿ ಪ್ರತಿಸಾಂಕೇತಿಕ ಆಚರಣೆಯ ಸಮಯವನ್ನು ಗುಣಿಸಬೇಕು. ಕಡೆಯ ಸಾಂಕೇತಿಕ ಜ್ಯೂಬಿಲಿಯನ್ನು ಇಟ್ಟುಕೊಂಡಿದ್ದು ಅದು ಅಳಿದು ಹೋದಾಗ, ಮಹಾ ಆವೃತ್ತಿಯು ಎಣಿಕೆಮಾಡಲು ಪ್ರಾರಂಭಿಸಿತು, ಮತ್ತು ಅದರ ಅಂತ್ಯವು ಪ್ರತಿ ಸಂಕೇತದ ಜೂಬಿಲಿಯಲ್ಲಿ ಅಥವಾ ಪುನಃವಶದ ಕಾಲದಲ್ಲಿ ದಾರಿತೋರಿಸುವುದು.

ನಾವು ಆವೃತ್ತಿಗಳನ್ನು ಲೆಕ್ಕಮಾಡುವ ಪದ್ಧತಿಯ ಬಗ್ಗೆ ಈಗಾಗಲೇ ಉಲ್ಲೇಖಿಸಿದ್ದೇವೆ; ವಾರದ 7 ದಿನಗಳನ್ನು 7ರಿಂದ ಗುಣಿಸುವುದು (7x7=49). ಇದಕ್ಕೆ ಜ್ಯೂಬಿಲಿ ದಿನವನ್ನು ಸೇರಿಸಿದಾಗ ಪಂಚಾಶತ್ತಮವನ್ನು ಸೂಚಿಸುವ ದಿನವಾಗುತ್ತದೆ ಮತ್ತು ವರ್ಷದ ಏಳು ವಾರಗಳ ವರ್ಷವನ್ನು ಏಳರಿಂದ ಗುಣಿಸಿದಾಗ (7x7=49) ಅದನ್ನು ಅನುಸರಿಸುವ ಜ್ಯೂಬಿಲಿ ವರ್ಷವೂ ಸೇರಿ ಐವತ್ತನೇ ವರ್ಷವಾಗುತ್ತದೆ. ಇದೇ ಪದ್ಧತಿಯನ್ನು ಅನುಸರಿಸುವಾಗ ಮಹಾ ಪ್ರತಿಸಂಕೇತವನ್ನು ಸೂಚಿಸುವಾಗ ನಾವು ಅದೇ ರೀತಿಯಲ್ಲಿ ಐವತ್ತು ವರ್ಷಗಳನ್ನು ಐವತ್ತರಿಂದ ಗುಣಿಸುತ್ತಾ ಜ್ಯೂಬಿಲಿ ಅವಧಿಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಅದುವೇ ನಮಗೆ ಇಲ್ಲಿ ಕಲಿಸಿಕೊಟ್ಟ ಹೊಂದಿಸಿಕೊಳ್ಳುವ ಪದ್ಧತಿಯ ಪ್ರಕಾರ ಪ್ರತಿಸಂಕೇತದ ಆವೃತ್ತಿಯಾಗಿದೆ, ಇದನ್ನು ಸಾಂಕೇತಿಕ ಜೂಬಿಲಿ ಅವಧಿಯೆಂದೆಣಿಸಿ ಐವತ್ತರಿಂದ ಐವತ್ತನ್ನು ಗುಣಿಸುತ್ತಾ ಹೋಗಬೇಕು, ನಾವು ಅದನ್ನು ಮುಟ್ಟುವಾಗ ನಾವು ಏಳು ವರ್ಷದ ಏಳು ವಾರಗಳ ವರ್ಷಗಳನ್ನು ಏಳರಿಂದ ಗುಣಿಸಿದಂತಾಗುತ್ತದೆ – ಯಾಜಕ 25:2–13.

ದೈವಿಕವಾಗಿ ಸೂಚಿತವಾದ ಈ ಎಣಿಕೆಯನ್ನು ಅನುಸರಿಸುವಾಗ, ಅದ್ಭುತವಾದ ಪ್ರತಿಫಲಗಳು ನಮ್ಮ ಮುಂದೆ ತೆರೆದುಕೊಳ್ಳುತ್ತವೆ ಮತ್ತು ಇವುಗಳಲ್ಲಿ ನಮ್ಮ ಸರಿಯಾದ ಕೀಲಿಕೈ ಇದೆ ಮತ್ತು ಅದನ್ನು ಈ ನಿಧಿಯ ಖಜಾನೆಯನ್ನು ಉಂಟುಮಾಡಿದಾತನ ಆಶಯದಂತೆ ತೆರೆಯಲು ನಾವು ಉಪಯೋಗಿಸುತ್ತಿದ್ದೇವೆ ಎಂಬ ಭರವಸೆ ನಮಗುಂಟಾಗುತ್ತದೆ. ಐವತ್ತು ವರ್ಷಗಳ ಐವತ್ತರಷ್ಟು ಆ ಆವೃತ್ತಿಯ ಉದ್ದವನ್ನು ಇಪ್ಪತ್ತೈದು ನೂರು ವರುಷಗಳಾಗಿ ನಮಗೆ ನೀಡುತ್ತದೆ (50x50=2500) ಮತ್ತು ಇದು ಇಸ್ರಾಯೇಲ್ಯರ ಅಂತಿಮ ಸಾಂಕೇತಿಕ ಜೂಬಿಲಿಯೊಂದಿಗೆ ಪ್ರಾರಂಭವಾಗಿದೆ. ಇದು ಮಹಾ ಪ್ರತಿಸಂಕೇತವಾದ ಜೂಬಿಲಿಯಲ್ಲಿ ಉಚ್ಛಸ್ಥಾನಕ್ಕೆ ಬರಬೇಕಾಗುತ್ತದೆ. ಅಂಥಾಃ ಆವೃತ್ತಿಯ ನಮೂನೆಯು ಸ್ಥಗಿತಗೊಂಡಲ್ಲಿಯೇ ಪ್ರಾರಂಭವಾಯಿತೆಂಬುದನ್ನು ನಾವು ಬಲ್ಲೆವು. ಕನಿಷ್ಠ ಜೂಬಿಲಿ ನಮೂನೆಯು ನೆರವೇರದೆ ಧರ್ಮಶಾಸ್ತ್ರದ ಒಂದು ಗುಡುಸಾದರೂ ಅಳಿದುಹೋಗುವುದಿಲ್ಲ. ಯಾಕೆಂದರೆ ಅದು ಯಾವುದೇ ಸೊನ್ನೆಗಿಂತಲೂ, ಗುಡುಸಿಗಿಂತಲೂ ಎಷ್ಟೋ ಹೆಚ್ಚಿನದಾಗಿದೆ, ಮತ್ತು ಅದು ಧರ್ಮಶಾಸ್ತ್ರದ ಮುಖ್ಯವಾದ ಲಕ್ಷಣವಾಗಿದ್ದು ಪ್ರತಿಸಂಕೇತದ ಸರಿಯಾದ ಸಮಯವು ಪ್ರಾರಂಭವಾಗುವವರೆಗೆ ಹಾಗೆ ಅಳಿದುಹೋಗಲು ಅನುಮತಿ ನೀಡುವುದಿಲ್ಲ. ಜೂಬಿಲಿಯ ಪ್ರತಿಸಂಕೇತವು ಯಾವುದೇ ಅರ್ಥದಲ್ಲಿ ಇಸ್ರಾಯೇಲ್ಯರು ಅದನ್ನು ಪಾಲಿಸಲು ನಿಲ್ಲಿಸಿದಂದಿನಿಂದ ಸ್ಥಗಿತಗೊಂಡಿಲ್ಲ ಎಂಬುದು ಸ್ಪಷ್ಟವಾಗಿದೆ; ಆಗಿನಿಂದ ಒಂದು ಭವ್ಯವಾದ ಆವೃತ್ತಿಯ ಎಣಿಕೆ ಆರಂಭವಾಗಿದೆ ಎಂಬುದು ನಮಗೆ ಖಚಿತವಾಗಬಹುದಾಗಿದೆ. ಇಲ್ಲಿ ಒಂದು ಹೊಸ ನೀಳವಾದ ಕಾಲಚಕ್ರ ತೊಡಗುತ್ತದೆ. ಇದನ್ನು ಇಸ್ರಾಯೇಲ್ಯರಾಗಲಿ ಮತ್ತು ಇಡೀ ಲೋಕದವರಾಗಲಿ ಇದರ ಬಗ್ಗೆ ತಿಳಿಯದವರಾಗಿದ್ದಾರೆ. ಅವರಿಗೆ ಈ ಮಹಾ ಕಾಲಚಕ್ರವು ತೊಡಗಿದೆ ಮತ್ತು ಮುಂದುವರೆಯುತ್ತದೆ ಎಂಬ ವಿಷಯದ ಬಗ್ಗೆ ಅರಿವಿಲ್ಲ ಹಾಗೂ ಇದು ಮಹಾ ಪ್ರತಿಸಾಂಕೇತಿಕ ಜೂಬಿಲಿಯಲ್ಲಿ ಕೊನೆಗೊಳ್ಳುತ್ತದೆ ಎಂಬುದರ ಬಗ್ಗೆಯೂ ಅರಿವಿಲ್ಲ. ನಾವು ಮಹಾ ಜೂಬಿಲಿಯ ಜೂಬಿಲಿಗಳು ಶುರುವಾಗುವುದನ್ನು ಈಗ ನಿರೀಕ್ಷಿಸಬಾರದು. ಬದಲಾಗಿ, ಪ್ರತಿಸಾಂಕೇತಿಕ 50ನೇ ಅಥವಾ ಕೊನೆಯ ಈ ಕಾಲಚಕ್ರದ ಜೂಬಿಲಿಯು ನೆರವೇರುವುದನ್ನು ಎದುರು ನೋಡಬೇಕು. ಯಾಕೆಂದರೆ ಒಂದು ಪ್ರತಿಸಂಕೇತವು ಅದರ ಸಂಕೇತವನ್ನು ಎಂದಿಗೂ ಅನುಸರಿಸುವುದಿಲ್ಲ, ಆದರೆ ಅದೇ ದಿನಾಂಕದಂದು ಅದರ ಸ್ಥಾನವನ್ನು ತೆಗೆದುಕೊಳ್ಳುತ್ತದೆ. ಆದುದರಿಂದ, 2500ನೇ ವರ್ಷವು 50ನೇ ಜೂಬಿಲಿ

ವರ್ಷವಾಗಿದ್ದು ನಿಜವಾದ ಜೂಬಿಲಿಯಾದ ಅಥವಾ ಪುನರ್‌ವಶದ ಪ್ರತಿಸಂಕೇತದ ಭಾಗವಾಗಿದ್ದಿರಬೇಕು. ಆದರೆ, ಸಂಕೇತದಲ್ಲಿರುವಂತೆ ಒಂದು ವರ್ಷವಾಗುವ ಬದಲು ಅದು ಇನ್ನೂ ವ್ಯಾಪಕವಾಗಿರುತ್ತದೆ. ಅದು ಮಹಾ ಸಹಸ್ರವರ್ಷದ ಮಿಲಿನಿಯಂ ಜೂಬಿಲಿಯ ಪ್ರಾರಂಭವಾಗಿದೆ. ಹೀಗಾಗಿ ಅದು ಸಮಯವೇ ಲಕ್ಷಣವಾಗಿರುವ ಎಲ್ಲಾ ನಮೂನೆಯ ನೆರವೇರಿಕೆಯಲ್ಲಿದೆ. ಹೀಗಾಗಿ ಪಂಚಾಶತ್ತಮದ ಪವಿತ್ರಾತ್ಮನ ಸುರಿಯುವಿಕೆಯ ಪ್ರತಿಸಂಕೇತವಾದ ಪಂಚಾಶತ್ತಮ ಅಥವಾ ಐವತ್ತನೆಯ ದಿನದಂದು ನೆರವೇರಿದ್ದು, ಅಂದು ನಮ್ಮ ಪಸ್ಕದ ಸಮರ್ಪಣಾ ಕುರಿಯಾದ ಕ್ರಿಸ್ತನು ಶಿಲುಬೆಯಲ್ಲಿ ಮರಣಪಡುವಂತೆ ನೇಮಿಸಲ್ಪಟ್ಟನು. ಒಂದು ದಿನ ಮೊದಲಾಗಲೀ, ಒಂದು ದಿನ ನಂತರವಾಗಲೀ ಅದಕ್ಕೆ ಉತ್ತರವಲ್ಲ, ಹೀಗಾಗಿ ಇಲ್ಲಿ 2500 ನೇ ವರ್ಷಕ್ಕಿಂತ ಒಂದು ವರ್ಷದ ನಂತರವಾಗಲೀ ಅಥವಾ ಒಂದು ವರ್ಷದ ಮೊದಲಾಗಲೀ ಅಥವಾ ಪ್ರತಿ ಸಂಕೇತದ ಕಡೆಯ ವರ್ಷವಾಗಲೀ ಉತ್ತರ ನೀಡದು. ಆದರೆ ಆ ನಿರ್ದಿಷ್ಟವಾದ ವರ್ಷವೇ ಅಂದರೆ ಕ್ರಿ.ಶ. 1874ರ ಅಕ್ಟೋಬರ್ ತಿಂಗಳ ಪ್ರಾರಂಭವೇ ಪ್ರತಿಸಂಕೇತದ ಪುನಃವಶದ ಕಾಲವಾಗಿದ್ದಿರಬೇಕು.

ಮಾದರಿ ಆಚರಣೆಯ ಪಾಲಿಸುವಿಕೆಯು ಮಹಾ ಆವೃತ್ತಿಯ (50x50) ಎಣಿಕೆಯ ಕಾರ್ಯಾಚರಣೆಯನ್ನು ಪ್ರಾರಂಭಿಸುವ ತನಕ ಮುಗಿದು ಹೋಗುವುದಿಲ್ಲ. ಹಾಗಾದರೆ. ನಿಶ್ಚಿತಪಡಿಸಿಕೊಳ್ಳಬೇಕಾದ ಅಂಶವೇನೆಂದರೆ, ಕಡೆಯ ಸಾಂಕೇತಿಕ ಜೂಬಿಲಿಯು ಇಸ್ರಾಯೇಲಿನಲ್ಲಿ ಆಚರಿಸಿದ ನಿಖರವಾದ ದಿನಾಂಕ. ಆ ದಿನಾಂಕವು ಸ್ಥಾಪಿತಗೊಳ್ಳುವುದರೊಂದಿಗೆ ಐವತ್ತರಷ್ಟು ಐವತ್ತು (50x50) ಅಥವಾ ಇಪ್ಪತ್ತೈದು ನೂರು (2500) ವರ್ಷಗಳ ಮಹಾ ಆವೃತ್ತಿಯನ್ನು ಲೆಕ್ಕಮಾಡುವುದು ಸರಳವಾಗುತ್ತದೆ, ಮತ್ತು ಈ ರೀತಿಯಲ್ಲಿ ಭೂಲೋಕದ ಜೂಬಿಲಿಯ ದಿನಾಂಕವನ್ನು ಅಂದರೆ ಎಲ್ಲಾ ಸಂಗತಿಗಳ ಪುನಃವಶದ ಸಮಯಗಳನ್ನು ನಿಗದಿಪಡಿಸಬಹುದು.

ನಾವು ಎಲ್ಲಾ ಸಂಗತಿಗಳನ್ನೂ ಪುನರ್‌ವಶಪಡಿಸುವ ಈ ಮಹತ್ವಕರವಾದ ಕಾರ್ಯದ ಪ್ರಾರಂಭದ ಬಗ್ಗೆ ಮಾತ್ರವೇ ನೋಡಬೇಕು. ಸಾಂಕೇತಿಕ ಜೂಬಿಲಿ ವರ್ಷದ ಪ್ರಥಮ ದಿನಗಳು ತುಲನಾತ್ಮಕವಾಗಿ ಸ್ವಲ್ಪವೇ ನೆರವೇರಿರುವುದನ್ನು ಕಾಣಬಹುದು; ಆದುದರಿಂದ ಮಹಾ ಸಹಸ್ರಮಾನ ಯುಗದ ಉದಯದಲ್ಲಿನ ಸ್ವಲ್ಪ ಮಾತ್ರವೇ ನೆರವೇರುವುದನ್ನು ಎದುರು ನೋಡಬಹುದು. ಪ್ರಥಮ ವರ್ಷದಲ್ಲಿ ಸ್ವಭಾವಿಕವಾಗಿ ಹಿಂದಿನ ಹಕ್ಕುಗಳನ್ನು, ಸ್ವತ್ತುಗಳನ್ನು ಮತ್ತು ಪ್ರಸ್ತುತ ಕೊರತೆಗಳನ್ನು ನಾವು ಹುಡುಕಬಹುದು. ಇದರ ಸಮಾನಾಂತರವನ್ನು ಅರಸುವಾಗ, ನಾವು ಪ್ರತಿಸಂಕೇತದಲ್ಲಿ ನಮ್ಮ ಬಗ್ಗೆ ನಡೆಯುತ್ತಿರುವ ಎಲ್ಲವುಗಳನ್ನೂ ನಿರೀಕ್ಷಿಸಬಹುದು. ಯಾಕೆಂದರೆ, ಎಲ್ಲವುಗಳನ್ನೂ ತೋರಿಸಲಾಗುವುದು, ನಾವೀಗಾಗಲೇ ಮಹಾ ಪ್ರತಿ ಸಂಕೇತದ ಜೂಬಿಲಿ ಅವಧಿಯನ್ನು ಪ್ರವೇಶಿಸಿದ್ದೇವೆ ಮತ್ತು 1874ರ ಅಕ್ಟೋಬರ್ ತಿಂಗಳಿಂದ ಅದರಲ್ಲಿಯೇ ಇದ್ದೇವೆ. ನಾವು ನಮ್ಮ ಬಗ್ಗೆ ಏನನ್ನು ನೋಡುತ್ತಿದ್ದೇವೆ? ನಾವು ಜನರ ಮೂಲದ ದೈವದತ್ತವಾದ ಬಾಧ್ಯತೆಗಳ ಬಗ್ಗೆ, ಅದರ ಪ್ರಸ್ತುತ ಕೊರತೆಗಳು, ಹಕ್ಕುಗಳು ಮುಂತಾದವುಗಳ ಬಗೆಗಿನ ತನಿಖೆ ಮಾಡುವುದನ್ನು ನೋಡುತ್ತೇವೆ. ಅನೇಕರು ಅಜ್ಞಾನದಿಂದಲೂ, ಸ್ವಾರ್ಥದಿಂದಲೂ ಇತರರು ಹೊಂದಿರುವುದರ ಬಗ್ಗೆ ಹಕ್ಕು ಸಾಧಿಸುತ್ತಾರೆ ಮತ್ತು ಹೊಂದಿಕೊಂಡಿರುವವರ ಸ್ವತ್ತುಗಳನ್ನು ಆದಷ್ಟೂ ಪಡಕೊಳ್ಳಲು ಪ್ರಯತ್ನಿಸಿ ಹೆಚ್ಚುಕಡಿಮೆ ಎರಡೂ ಕಡೆಗಳಲ್ಲಿ ನ್ಯಾಯ ಮತ್ತು ಅನ್ಯಾಯದ ವಾಜ್ಯಗಳಿಗೆ, ವಾಗ್ವಾದಗಳಿಗೆ, ಬಹಿಷ್ಕಾರಗಳಿಗೆ ಕಾರಣರಾಗುತ್ತಾರೆ. ಇದನ್ನು ಅಂತಿಮವಾಗಿ ಕ್ರಿಸ್ತನ ನಿರ್ಣಯಕ್ಕೆ ಬಿಟ್ಟುಬಿಡಬೇಕು. ಹೇಗೆ ಧರ್ಮಶಾಸ್ತ್ರಕ್ಕೆ ಒಳಪಡುವ ವಾಜ್ಯಗಳನ್ನು ಮೋಶೆಯು ನಿರ್ಣಯಿಸುತ್ತಿದ್ದಂತೆ, ಆತನ ನಂತರ ಮೋಶೆಯ ಪೀಠದಲ್ಲಿ ಕುಳಿತವರು ನಿರ್ಣಯಿಸುತ್ತಿದ್ದಂತೆ ಮಾಡಬೇಕು (ಮತ್ತಾಯ 23:2). ಈ ರೀತಿಯಲ್ಲಿ ಗೊತ್ತುಪಡಿಸಿದ ನಿರ್ಧಾರಗಳು ಮತ್ತು ನಿರೀಕ್ಷೆಗಳೊಡನೆ ದೇವರು ಈ ನಮೂನೆಯಲ್ಲಿ ನಮ್ಮಿಂದ ವಿಶದವಾಗಿ ಮುಚ್ಚಿಟ್ಟ ದಿನಾಂಕವನ್ನು ನಾವು ಹುಡುಕಲು ಪ್ರಯತ್ನಿಸಿ ಆ ಮೂಲಕ ನಾವು "ದೇವರು ನಮಗೆ ದಯಪಾಲಿಸಿದ ಕೃಪಾವರಗಳನ್ನು ತಿಳುಕೊಳ್ಳುವುದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು" (1 ಕೊರಿಂಥ 2:12) ಮತ್ತು ಈಗ ಅರ್ಥಮಾಡಿಕೊಳ್ಳುವ ಸಮಯವಾಗಿರುವ ಸಂಗತಿಗಳನ್ನು ತಿಳಿದುಕೊಳ್ಳೋಣ.

ಇಸ್ರಾಯೇಲ್ಯರು ತಮ್ಮ ಸಾಂಕೇತಿಕ ಜೂಬಿಲಿಯನ್ನು ಆಚರಿಸಿದ ಬಗ್ಗೆ ಮತ್ತು ಅವುಗಳ ಮೂಲಕ ಅವರು ಆಚರಿಸಿದ ಕಟ್ಟಕಡೆಯ ಜೂಬಿಲಿಯ ದಿನಾಂಕವನ್ನು ತಿಳುಕೊಳ್ಳುವಂತೆ ನಮಗೆ ನೇರವಾದ ಸತ್ಯವೇದದ ದಾಖಲೆಗಳು ಇಲ್ಲ. ನಾವು ಬಾಬೇಲಿನ ದಾಸತ್ವದ, ಮತ್ತು ಎಪ್ಪತ್ತು ವರ್ಷಗಳ ಕಾಲ ಅವರ ದೇಶವು ಪಾಳುಬಿದ್ದುದರ ನಿಕಟಪೂರ್ವ ಹಿಂದಿನ ದಿನಾಂಕವನ್ನು ಎರಡು ಕಾರಣಗಳಿಗಾಗಿ ನಿಗದಿಪಡಿಸುತ್ತೇವೆ. ಮೊದಲನೆಯದು, ಅದು ಆ ಪಾಳುಬೀಳುವಿಕೆಯು ಈಚೆ ಕಡೆ ಸಂಭವಿಸಲಾರದು. ಯಾಕೆಂದರೆ ಅಲ್ಲಿ ನಿಶ್ಚಿತವಾಗಿ ಆ ನಮೂನೆಯು ಅಳಿದುಹೋಗಿತ್ತು. "ದಾಟಿ ಹೋಯಿತು". ಯಾಕೆಂದರೆ, ಅವರ ದೇಶವು ಎಪ್ಪತ್ತು ವರ್ಷಗಳವರೆಗೆ ಪಾಳುಬಿದ್ದಿತ್ತು, ಆ ಜನರು ವಿದೇಶದ ದಾಸತ್ವಕ್ಕೊಳಗಾಗಿದ್ದರು. ಜೂಬಿಲಿಯು ಆ ಎಪ್ಪತ್ತು ವರ್ಷಗಳ ಯಾವುದೇ ಒಂದು ಕಾಲದಲ್ಲಿ ನಡೆಯಬೇಕಾಗಿತ್ತು ಆದರೆ ಆಚರಣೆ ನಡೆಯದೇ

ಇದ್ದಿರಬೇಕು ಹಾಗೂ ಅವನ್ನು ಅನುಸರಿಸದೇ/ಆಚರಿಸದೇ ಹೋಗಿರುವುದು. ಜೂಬಿಲಿ ವರ್ಷದ ಆಜ್ಞೆಗಳು ಮತ್ತು ಹಂಚಿಕೆಗಳನ್ನು ಮಾನ್ಯಮಾಡಲಾಗದು. ಯಾಕೆಂದರೆ ಅವರು ಒಂದು ಜನಾಂಗವಾಗಿ ದಾಸ್ವತ್ವದಲ್ಲಿದ್ದರು ಮತ್ತು ಅವರ ದೇಶವು ನಿರ್ಜನವಾಗಿತ್ತು. ಹೀಗಾಗಿ ಈ ನಮೂನೆಯು ಆಗ ಅಥವಾ ಅಡಚಣೆಯಾಗುವ ಮುನ್ನವೇ ಅಳಿದುಹೋಗಿರಬಹುದೆಂದು ನಾವು ಹೇಳುತ್ತೇವೆ. ಹೀಗಾಗಿ ಅದು ಆ ಸಮಯದ ಈಚೆ ಬದಿಯಲ್ಲಿ ಸಂಭವಿಸಿರಲಿಕ್ಕಿಲ್ಲ. ಈ ನಮೂನೆಯ ಆಚರಣೆಯು ಮುಗಿದುಹೋದ ಮೇಲೆ ಪ್ರತಿ ಸಂಕೇತದ ಆವೃತ್ತಿಯ ಎಣಿಕೆ ಪ್ರಾರಂಭವಾಗಿರಬೇಕು. ಈ ನಮೂನೆಯನ್ನು ಆಚರಿಸುವ ಅಂಥಾಃ ಒಂದು ವಿಫಲತೆಯು ನಮೂನೆಯು ಅಳಿದುಹೋಯಿತೆಂಬುದನ್ನು ಸೂಚಿಸುತ್ತದೆ ಮತ್ತು ಪ್ರತಿ ಸಂಕೇತಕ್ಕೆ ನಡೆಸುವ ಆವೃತ್ತಿಯು ಪ್ರಾರಂಭವಾಯಿತೆಂಬುದನ್ನು ಸೂಚಿಸುತ್ತದೆ. ಅಲ್ಲದೇ, ಬಾಬೇಲಿಗೆ ಸೆರೆಹೋಗುವ ಕಾಲದಿಂದೀಚೆಗೆ ಇಸ್ರಾಯೇಲ್ಯರಿಗೆ ತಮ್ಮ ದೇಶದ ಮೇಲೆ ಪೂರ್ಣವಾದ ನಿಯಂತ್ರಣವಿರಲಿಲ್ಲ; ಅವರು ಮತ್ತು ಅವರ ದೇಶವು ಅಂದಿನಿಂದ ಅನ್ಯಜನರ ಆಡಳಿತಕ್ಕೆ ವಶವಾಯಿತು.

ಎರಡನೆಯದಾಗಿ, ಅದರ ಹಿಂದಿನ ಪ್ರತಿಯೊಂದು ಸೆರೆಹಿಡಿಯುವಿಕೆಯಲ್ಲಿಯೂ ದೇವರು ಸುವ್ಯಕ್ತವಾಗಿ ಅವರನ್ನು ತಮ್ಮ ದೇಶಕ್ಕೆ ಹಿಂತಿರುಗಿ ಜೂಬಿಲಿ ವರ್ಷವನ್ನು ಆಚರಿಸುವಂತೆ ಕಾಲಕ್ಕೆ ಸರಿಯಾಗಿ ಅವರನ್ನು ಶತ್ರುಗಳಿಂದ ಬಿಡುಗಡೆಗೊಳಿಸಿದ್ದಾನೆ ಮತ್ತು ಈ ರೀತಿಯಾಗಿ ಆ ಸಮಯವನ್ನು ಮಹಾ ಆವೃತಿಯ ಎಣಿಕೆ (50x50) ಪ್ರಾರಂಭವಾಗುವವರೆಗೆ ಅದನ್ನು ನಮೂನೆಯಾಗಿ ಚಿರಸ್ಮರಣೀಯಗೊಳಿಸುವಂತೆ ಮಾಡಿದ್ದಾನೆ.; ಅವರ ಹಿಂದಿನ ಸೆರೆಹಿಡಿಯುವಿಕೆಗಳು ಆಗಾಗ್ಗೆ ಸಂಭವಿಸುವವುಗಳಾಗಿದ್ದರೂ ಅವುಗಳು ಎಂದಿಗೂ ನಾಲ್ವತ್ತು ವರ್ಷಗಳನ್ನು ಮೀರಿದ್ದಿಲ್ಲ. ಈ ರೀತಿಯಲ್ಲಿ ಜೂಬಿಲಿಯ ವ್ಯವಸ್ಥೆಯ ಪ್ರಕಾರ ಅವರಲ್ಲಿ ಪ್ರತಿಯೊಬ್ಬರೂ ಪ್ರತಿ ಜೂಬಿಲಿ ವರ್ಷದಲ್ಲಿ ಮುಕ್ತವಾಗಿ ಹೋಗಿ ಅವರವರ ಬಾಧ್ಯತೆಯನ್ನು ಹಿಂಪಡೆಯುವ ಅವಕಾಶ ಮಾಡಿಕೊಟ್ಟಿದ್ದಾನೆ. ಇದರೊಂದಿಗೆ, ನಾವು ಸಂಕ್ಷಿಪ್ತವಾಗಿ ತೋರಿಸುವಾಗ, 70 ವರ್ಷಗಳು ಬಾಬೇಲಿನ ವಶದಲ್ಲಿದ್ದಾಗಿನ ಪಾಳುವಿಕೆಯಿಂದ ಪ್ರಾರಂಭಿಸಿ ಎಣಿಕೆಮಾಡುವಾಗ ಮಹಾ ಆವೃತ್ತಿಯು 1875ಕ್ಕೆ ಮುಕ್ತಾಯಗೊಳ್ಳುತ್ತದೆ. ಇದು ಮುಂಚಿನ ವರ್ಷದಲ್ಲಿ, ಬಾಬೇಲಿನ ಸೆರೆಹಿಡಿಯುವಿಕೆಯ ಮುಂಚೆ ಪ್ರಾರಂಭವಾಗಿರಲಿಕ್ಕಿಲ್ಲ ಎಂದು ಎಲ್ಲರಿಗೂ ಸ್ಪಷ್ಟಪಡಿಸುತ್ತದೆ. ಯಾಕೆಂದರೆ, ನಾವು ಇದನ್ನು ಒಂದು ಜೂಬಿಲಿ ವರ್ಷವೆಂದು ಇಟ್ಟರೂ, ಅದು ಕ್ರಿ.ಶ. 1875ರ ಹಿಂದಿನ ಐವತ್ತು ವರ್ಷಗಳ ಆವೃತ್ತಿಯ ಸಮಾಪ್ತಿಯನ್ನು ಗೊತ್ತುಪಡಿಸುತ್ತದೆ. ಅಂದರೆ 1825 ಕ್ರಿ.ಶ. ಖಂಡಿತವಾಗಿಯೂ ಪುನರ್‌ವಶದ ಜೂಬಿಲಿ ವರ್ಷವು ಆ ವರ್ಷದೊಂದಿಗೆ ಪ್ರಾರಂಭವಾಗಿರಲಿಕ್ಕಿಲ್ಲ.

ಮಹಾ ಆವೃತ್ತಿಯನ್ನು ಲೆಕ್ಕಮಾಡುವ ಕಡೆಯ ಸಾಂಕೇತಿಕ ಜೂಬಿಲಿಯು ಮುಂಚೆ ಸಂಭವಿಸಲಿಲ್ಲ (50x50) ಮತ್ತು ಬಾಬಿಲೋನ್‌ನ ಸೆರೆಹಿಡಿಯುವಿಕೆಯ ಕಾಲದಿಂದೀಚೆಗೆ ಅಲ್ಲವಾದುದರಿಂದ, ಸೆರೆಹಿಡುವಿಕೆಯ ನಿಕಟ ಪೂರ್ವವೇ ಕಡೆಯ ಜೂಬಿಲಿ ಎಂದು ತೃಪ್ತಿಪಡಬೇಕು ಮತ್ತು ಅದರ ಸಮಾಪ್ತಿಯಲ್ಲಿ ಮಹಾ ನಿಶಬ್ದವಾದ ಆವೃತ್ತಿಯ ಎಣಿಕೆಯು ಪ್ರಾರಂಭವಾಯಿತು ಎಂದು ತಿಳಿದು ನಾವು ಆ ಕಡೆಯ ಸಾಂಕೇತಿಕ ಜೂಬಿಲಿಯ ಸಮಯವನ್ನು ಈ ರೀತಿಯಾಗಿ ಗೊತ್ತುಪಡಿಸುತ್ತೇವೆ :

ಸಬ್ಬತ್ತುಗಳ ವರ್ಷದ ಪದ್ಧತಿಗಳು ಅವರ ದೇಶ ಮತ್ತು ಅದರಲ್ಲಿ ಅವರ ವಾಸದೊಂದಿಗೆ ಗುರುತಿಸಲಾಗುತ್ತಿದ್ದು ನಾಲ್ವತ್ತೊಂಬತ್ತು ವರ್ಷಗಳ ಮೊದಲನೆಯ ಆವೃತ್ತಿಯು ಮೊದಲನೆಯ ಜೂಬಿಲಿಗೆ ನಡೆಸುತ್ತದೆ ಮತ್ತು ಅದನ್ನು ಅವರು ಕಾನಾನ್ ಪ್ರವೇಶದಿಂದ ಎಣಿಕೆ ಮಾಡಲು ಪ್ರಾರಂಭಿಸಲಾಗುತ್ತದೆ. ಈ ವಿವೇಚನಾಪೂರ್ವಕವಾದ ತೀರ್ಮಾನವು ಕರ್ತನ ಈ ಮಾತಿನಿಂದ ಸಕಾರಾತ್ಮಕವಾಗಿ ಮಾಡಲ್ಪಟ್ಟಿದೆ – "ನಾನು ನಿಮಗೆ ಕೊಡುವ ದೇಶಕ್ಕೆ ನೀವು ಬಂದಾಗ ಆ ದೇಶವೂ ಯೆಹೋವನಿಗೆ ಸಬ್ಬತ್ ಕಾಲವನ್ನು ಆಚರಿಸಬೇಕು. ಆರು ವರ್ಷಗಳು ನೀವು ಹೊಲದಲ್ಲಿ ಬೀಜವನ್ನು ಬಿತ್ತಬಹುದು, ದ್ರಾಕ್ಷೆ ತೋಟದ ಕೆಲಸಗಳನ್ನು ನಡಿಸಬಹುದು; ಹೊಲ ತೋಟಗಳ ಬೆಳೆಗಳನ್ನು ಸಂಗ್ರಹಿಸಬಹುದು. ಆದರೆ ಏಳನೆಯ ವರುಷವು (ದೇಶವನ್ನು ಪ್ರವೇಶಿಸಿದ ದಿನದಿಂದ) ಯಾವ ಬೇಸಾಯವೂ ನಡೆಯಬಾರದ ವಿಶ್ರಾಂತಿ ಕಾಲವಾಗಿಯೂ ಯೆಹೋವನಿಗೆ ಆಚರಿಸಬೇಕಾದ ಸಬ್ಬತ್ತು ಕಾಲವಾಗಿಯೂ ಇರಬೇಕು" (ಯಾಜಕ 25:1–4). ಆಗ, ಏಳರಷ್ಟು ಏಳರ ಆವೃತ್ತಿಯು ಅಥವಾ ನಾಲವತ್ತೊಂಬತ್ತು ವರ್ಷಗಳು (7x7=49) ಒಮ್ಮೆಲೇ ಪ್ರಾರಂಭವಾಗುತ್ತದೆ. ದೇಶವನ್ನು ಪ್ರವೇಶಿಸಿದ ನಂತರ ಐವತ್ತನೆಯ ವರ್ಷವು ಮೊಟ್ಟ ಮೊದಲ ಸಾಂಕೇತಿಕ ಜೂಬಿಲಿಯಾಗುತ್ತದೆ*

* ದೇಶದ ವಿಭಜನೆಯು ಮುಗಿಯುವ ಮೊದಲ ಆರು ವರ್ಷಗಳು ಯುದ್ಧದಲ್ಲಿಯೇ ಮುಗಿದು ಹೋದುದರಿಂದ ಜೂಬಿಲಿಯ ಎಣಿಕೆಯು ಅಲ್ಲಿಯವರೆಗೆ ಪ್ರಾರಂಭವಾಗಿರಲಿಕ್ಕಿಲ್ಲ ಎಂಬ ಸಲಹೆಯನ್ನು ಕೆಲವರು ನೀಡುತ್ತಾರೆ. ಆದರೆ, ಹಾಗಲ್ಲ, ಯೋರ್ದಾನ್ ದಾಟಿ ನಂತರದಲ್ಲಿ ದೇಶವನ್ನು ಪ್ರವೇಶಿಸಲಾಯಿತು, ಮತ್ತು ಆಜ್ಞೆಯು "ನೀವು ದೇಶಕ್ಕೆ ಬಂದಾಗ' ಎಂಬುದಾಗಿ ಹೇಳುತ್ತದೇ ಹೊರತು "ನೀವು ದೇಶವನ್ನು ವಿಭಜಿಸಿದಾಗ" ಎಂದಲ್ಲ. ಅದು ಅಂಶ ಅಂಶವಾಗಿ ಆರು ವರ್ಷಗಳ ಕಾಲ ವಿಭಜಿಸಲ್ಪಟ್ಟಿತು. ಆದರೆ ಅವರು ಅ ವರ್ಷಗಳಲ್ಲಿ, ಅಥವಾ ನಂತರದ ಅನಿರ್ಧಿಷ್ಟ ಅವಧಿಯಲ್ಲಿ – ಶತ್ರುಗಳನ್ನು ಹೊಡೆದೋಡಿಸುವವರೆಗೂ ಅವುಗಳೆಲ್ಲವನ್ನೂ ವಶಪಡಿಸಿಕೊಳ್ಳಲಿಲ್ಲ. ಕೆಲವು ಪ್ರಕರಣಗಳಲ್ಲಿ ಇದನ್ನು ಎಂದೂ ಮಾಡಲಿಲ್ಲ (ಯೆಹೋಶುವ 18:2,3; 17:12,13; 23:4.7.13.15). ಆದುದರಿಂದ ಅವರು ಆವೃತ್ತಿಯನ್ನು ಎಣಿಕೆ ಮಾಡುವ ಮೊದಲು ಪೂರ್ಣವಾಗಿ ವಶಪಡಿಸಿಕೊಳ್ಳುವತನಕ ಕಾದಿದ್ದರೆ, ಅವರು ಎಣಿಕೆಯನ್ನು ಎಂದಿಗೂ ಪ್ರಾರಂಭಿಸುತ್ತಿರಲಿಲ್ಲ.

ಕಾಲಗಣನೆಯ ಪಟ್ಟಿಯಲ್ಲಿ ಅವರು ಕಾನಾನಿಗೆ ಪ್ರವೇಶಿಸಿದ ಮತ್ತು ಎಪ್ಪತ್ತು ವರ್ಷಗಳ ಕಾಲ ನಿರ್ಜನವಾಗಿದ್ದ ಮಧ್ಯಾವಧಿಯಲ್ಲಿ 969 ವರ್ಷಗಳು ಸಂದವು ಎಂಬುದನ್ನು ನೋಡುತ್ತೇವೆ :–

| | | |
|---|---|---|
| ದೇಶದ ವಿಭಜನೆಗಾಗಿ | .......... | 6 ವರ್ಷಗಳು |
| ನ್ಯಾಯಸ್ಥಾಪಕರುಗಳ ಕಾಲ | .......... | 450 ವರ್ಷಗಳು |
| ಅರಸರುಗಳ ಕಾಲ | .......... | 513 ವರ್ಷಗಳು |
| | ಒಟ್ಟು | 969 ವರ್ಷಗಳು |

ಈ 969 ವರ್ಷಗಳನ್ನು 50 ರಿಂದ ವಿಭಾಗಿಸುವ ಮೂಲಕ ಅವರುಗಳು ಎಷ್ಟು ಜೂಬಿಲಿ ವರ್ಷಗಳನ್ನು ಆಚರಿಸಿದ್ದಿರಬಹುದೆಂದು ತಿಳಿದುಕೊಳ್ಳಬಹುದು. 969ರಲ್ಲಿ 19 ಐವತ್ತುಗಳಿದ್ದು ಮೊದಲ 50 ಎಷ್ಟು ಜೂಬಿಲಿಗಳಿದ್ದವೆಂಬುದನ್ನು ತಿಳಿಸುತ್ತದೆ. ಉಳಿದ ಒಂದು 19ರಲ್ಲಿ ಹತ್ತೊಂಬತ್ತನೇದು ಅವರು ಎಪ್ಪತ್ತು ವರ್ಷಗಳ ಕಾಲ ಬಾಬೇಲಿಗೆ ಸೆರೆಹೋಗುವ ನಿರ್ಜನತೆಯ ಕಾಲದ ಮೊದಲ ಹತ್ತೊಂಬತ್ತು ವರ್ಷಗಳಾಗಿದ್ದು, ಅದು ಆ ದೇಶವನ್ನು ಪ್ರವೇಶಿಸಿದ 950 ವರ್ಷಗಳ ನಂತರ ಕಂಡು ಬಂದ ಸಾಂಕೇತಿಕ ಜೂಬಿಲಿಗಳಲ್ಲಿ ಕಡೆಯದಾಗಿದೆ,

ಹಾಗಾದರೆ, ಎಪ್ಪತ್ತು ವರ್ಷಗಳ ಅವರ ದೇಶದ ನಿರ್ಜನತೆಯ ಕಾಲದ ಹಿಂದಿನ ಕೇವಲ ಹತ್ತೊಂಬತ್ತು ವರ್ಷಗಳು, ಅವರ ಕೊನೆಯ ಜೂಬಿಲಿಯ ಅಂತ್ಯದಲ್ಲಿ, ಹತ್ತೊಂಬತ್ತನೇದರಲ್ಲಿ, 2500 (50x50 = 2500) ವರ್ಷಗಳ ಮಹಾ ಆವೃತ್ತಿಯು ಪ್ರಾರಂಭವಾಯಿತು; ಆ 2500 ವರ್ಷಗಳು ಮುಗಿಯುವುದನ್ನು ಎಣಿಕೆಹಾಕಲು ಸುಲಭದ ವಿಷಯವಾಯಿತು, ಇದರ ಪರಿಣಾಮವಾಗಿ ಇಪ್ಪತ್ತೈದು ನೂರನೇ ವರ್ಷವು ಪ್ರತಿಸಂಕೇತ ಜೂಬಿಲಿ ವರ್ಷದ ಪ್ರಾರಂಭವಾಗಿದೆ.

ಹೀಗಾಗಿ 2500 ವರ್ಷವು ಕ್ರಿ.ಶ. 1875ರ ಆರಂಭದಿಂದ ಪ್ರಾರಂಭವಾಯಿತು ಎಂದು ಕಾಣುತ್ತೇವೆ. ಯೆಹೂದಿ ಪ್ರಜೆಗಳ ಕಾಲದಲ್ಲಿ ನ್ಯಾಯಪ್ರಮಾಣದ ಪ್ರಕಾರ (ಯಾಜಕ ಕಾಂಡ 25:9) ಅಕ್ಟೋಬರ್ 1874 ರಲ್ಲಿ ಪ್ರಾರಂಭವಾಯಿತೆಂದು ತೀರ್ಮಾನಿಸಬಹುದು. ಅಂದರೆ, ಮಹಾ ಜೂಬಿಲಿಯು ಛಾಯೆಯಾಗಿ, ಒಂದು ವರ್ಷವೆಂದಾದರೆ, ಅದು ಅಕ್ಟೋಬರ್ 1874ರಲ್ಲಿ ಪ್ರಾರಂಭವಾಗಿದೆ. 2499 ವರ್ಷದ ಅಂತ್ಯದಲ್ಲಿ ಹಾಗೂ ಅಕ್ಟೋಬರ್ 1875ರಲ್ಲಿ ಕೊನೆಗೊಂಡಿತು. ಇದು ಸಾಂಕೇತಿಕವಲ್ಲ, (ನೆರವೇರಿದ) ನಿಜಾಂಶವಾಗಿದೆ. ಅದು ಜೂಬಿಲಿ ವರ್ಷವಲ್ಲ, ಬದಲಾಗಿ ಪ್ರತಿಸಾಂಕೇತಿಕ 1000 ವರ್ಷಗಳ ಸಮಸ್ತವನ್ನು ಸರಿಪಡಿಸುವ ಕಾಲ. ಅದು ಕ್ರಿ.ಶ. 1874ರಲ್ಲಿ ಪ್ರಾರಂಭವಾಯಿತು.

ಈ ರೀತಿಯಲ್ಲಿ ನಾವು ಇಸ್ರಾಯೇಲ್ಯರ ಜೂಬಿಲಿ ಮಾತ್ರವೇ ಸ್ಪಷ್ಟವಾಗಿಯೂ, ಒತ್ತಾಯಪೂರ್ವಕವಾಗಿಯೂ ದೇವರು ಪ್ರಪಂಚದ ಸೃಷ್ಟಿಕಾಲದಿಂದಲೂ ಅನೇಕ ಪ್ರವಾದಿಗಳ ಮೂಲಕ ಮಾತಾಡಿಸಿದ ಎಲ್ಲಾ ಸಂಗತಿಗಳು ಪುನಃವಶದ ಪೂರ್ವಚಿತ್ರಣವಾಗಿರುವುದನ್ನು ಕಾಣುತ್ತೇವೆ. ಮಾತ್ರವಲ್ಲದೆ ಮತ್ತು ಅದು ಅದರ ಎಣಿಕೆಯ ರೀತಿಯಾಗಿದ್ದು ಈ ಭೂಲೋಕದ ಜೂಬಿಲಿಯ ಪ್ರಾರಂಭದ ದಿನವನ್ನು ಸ್ಪಷ್ಟವಾಗಿ ಸೂಚಿಸುವುದಾಗಿದೆ. ಈ ಸಿದ್ಧಾಂತವನ್ನು ನಾವು ಒಪ್ಪಿಕೊಳ್ಳಲು ವಿಫಲರಾದಲ್ಲಿ ಈ ನಮೂನೆಯು ನೇರವೇರದೆ ಮುಕ್ತಾಯ ಗೊಂಡಿತೆಂಬುದಕ್ಕಿಂತ, ನಮ್ಮ ಕರ್ತನು "ನಿಮಗೆ ಸತ್ಯವಾಗಿ ಹೇಳುತ್ತೇನೆ – ಆಕಾಶವೂ ಭೂಮಿಯೂ ಅಳಿದುಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ, ಒಂದು ಗುಡುಸಾದರೂ ಅಳಿದುಹೋಗಲಾರದು" (ಮತ್ತಾಯ 5:18) ಎಂಬ ಸಕಾರಾತ್ಮಕ ಕಂಠೋಕ್ತ ನುಡಿಗಳನ್ನು ಎದುರಿಸಲು ಸಾಧ್ಯವಾಗದೇ ಹೋಯಿತೆಂಬುದಕ್ಕಿಂತ ನಮಗೆ ಬೇರೆ ಯಾವುದೇ ವೈಕಲ್ಪಿಕತೆಯೂ ದೊರೆಯುವುದಿಲ್ಲ. ಈ ರೀತಿಯಾಗಿ ಸೂಚಿಸಲ್ಪಟ್ಟ ಸತ್ಯಗಳು ಅವುಗಳಿಂದ ನಾವು ಸೆಳೆಯಬಹುದಾದ ಸಿದ್ಧಾಂತಗಳು ಎಷ್ಟೇ ದಿಗ್ಭ್ರಮೆಗೊಳಿಸುವವುಗಳಾಗಿದ್ದರೂ ಅವುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. (107ನೇ ಪುಟಕ್ಕೆ)

| | | |
|---|---|---|
| ಈ ರೀತಿಯಲ್ಲಿ ಹತ್ತೊಂಬತ್ತನೆಯ ಜೂಬಿಲಿ ವರ್ಷದಿಂದ ದೇಶದ ನಿರ್ಜನತೆಗೆ | .......... | 19 ವರ್ಷಗಳು |
| ನಿರ್ಜನತೆಯ ಅವಧಿ | .......... | 70 ವರ್ಷಗಳು |
| ಕೋರೆಷನು ಇಸ್ರಾಯೇಲನ್ನು ಪುನಃವಶಪಡಿಸಿ ಕೊಂಡಂದಿನಿಂದ ನಮ್ಮ ಕರ್ತನ ಯುಗವಾದಕ್ರಿ.ಶ. (A.D.=Anno Domini) ಎಂದು ಕರೆಯಲ್ಪಡುವ ವರ್ಷದವರೆಗೆ | .......... | 536 ವರ್ಷಗಳು |
| ಹೀಗೆ ಕೊನೆಯ ಜೂಬಿಲಿಯಿಂದ ಕ್ರಿಸ್ತಶಕ 1 ರ ಪ್ರಾರಂಭದವರೆಗೆ | .......... | 625 ವರ್ಷಗಳು |
| ಕ್ರಿ.ಶ. ಪ್ರಾರಂಭದಿಂದ 2500 ವರ್ಷಗಳು ಮುಗಿಯಲು ಬೇಕಾಗುವ ಕಾಲ | .......... | 1875 ವರ್ಷಗಳು |
| ಕೊನೆಯ ಜೂಬಿಲಿ ಆಚರಣೆಯಿಂದ ಒಟ್ಟು ವರ್ಷಗಳು | .......... | 2500 ವರ್ಷಗಳು |

# ಕಾಲಾನುಕ್ರಮವಾದ ಪಟ್ಟಿ

(104ನೇ ಪುಟ ನೋಡಿ)

ಜೂಬಿಲಿ ನಮೂನೆಯು ಕಾನಾನನ್ನು ಪ್ರವೇಶಿದಂದಿನಿಂದ ಪ್ರಾರಂಭ :–

| | |
|---|---|
| ದೇಶವು ವಿಭಜನೆಯಾಗುವವರೆಗೆ | ....... 6 ವರ್ಷಗಳು |
| ನ್ಯಾಯಸ್ಥಾಪಕರ ಕಾಲ | ....... 450 ವರ್ಷಗಳು |
| ಅರಸರುಗಳ ಕಾಲ | ....... 513 ವರ್ಷಗಳು |
| ನಿರ್ಜನತೆಯವರೆಗೆ | ....... 969 ವರ್ಷಗಳು |
| ಹತ್ತೊಂಬತ್ತು ಜೂಬಿಲಿಗಳು | ....... 950 ವರ್ಷಗಳು |
| ಉಳಿದ ಅವಧಿ | ....... 19 ವರ್ಷಗಳು |

| | |
|---|---|
| ಕಡೇ ಜೂಬಿಲಿಯಿಂದ<br>ನಿರ್ಜನತೆಯವರೆಗೆ | ....... 19 ವರ್ಷಗಳು |
| ನಿರ್ಜನತೆಯ ಅವಧಿ ಮತ್ತು<br>ಬಾಬೇಲಿನಲ್ಲಿ ಸೆರೆಯಾಗಿದ್ದ ಅವಧಿ | ....... 70 ವರ್ಷಗಳು |
| ಎಲ್ಲರ ಸೆರೆಹಿಡಿಯುವಿಕೆ<br>ಕೋರೇಷನು ಅವರ ದೇಶವನ್ನು<br>ಪುನಃವಶಪಡಿಸಿಕೊಳ್ಳಲು<br>ಕೋರೇಷನು ಆಜ್ಞೆ ಕೊಟ್ಟಂದಿನಿಂದ<br>ಕ್ರಿ.ಶ. 1 ರವರೆಗೆ | ....... 536 ವರ್ಷಗಳು |
| ಕ್ರಿ.ಶ. 1ನೇ ವರ್ಷದಿಂದ<br>ಕ್ರಿ.ಶ. 1875ರವರೆಗೆ<br>(ಯೆಹೂದ್ಯರ ಕಾಲವು<br>ಅಕ್ಟೋಬರ್ 1874ಕ್ಕೆ ಪ್ರಾರಂಭ) | ....... 1874 ವರ್ಷಗಳು |
| ಒಟ್ಟು | ....... 2499 ವರ್ಷಗಳು |

ಈ ರೀತಿಯಲ್ಲಿ 1874ರ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾದ ವರ್ಷವು 2500ನೇ ವರ್ಷವಾಗಿದೆ, ಆದರೆ ಪ್ರತಿ ಸಂಕೇತವು 1875ರ ಒಂದು ವರ್ಷಗಳಿಗಿಂತ ನಮೂನೆಯ 1000 ವರ್ಷಗಳಷ್ಟು ಹೆಚ್ಚಾಗಿರುವುದರಿಂದ, ಜೂಬಿಲಿ ವರ್ಷಕ್ಕೆ ಬದಲಾಗಿ 1000 ವರ್ಷಗಳ ಮೊದಲನೆಯ ಜೂಬಿಲಿ ವರ್ಷವಾಗಿದೆ.

## ಧರ್ಮಶಾಸ್ತ್ರದಲ್ಲಿ ಜೂಬಿಲಿಯು ಒಂದು ನಮೂನೆಯಾಗಿರುವುದು
## (JUBILEE AS A TYPE IN THE LAW)

**ಒಂದು ಮಹಾ ಆವೃತ್ತಿ**

ಮಹಾ ಪ್ರತಿಸಂಕೇತ – ಭೂಮಿಯ ಜೂಬಿಲಿಯಲ್ಲಿ ಪರಾಕಾಷ್ಠೆ ತಲುಪುವುದು

| 19x50 = 950 ವರ್ಷಗಳು | 50x50 =2500 ವರ್ಷಗಳು | ಜೂಬಿಲಿ |
|---|---|---|
| ಲಾಕ್ಷಣಿಕ ಆವೃತ್ತಿಗಳು ಮತ್ತು ಜೂಬಿಲಿಗಳು, ಹತ್ತೊಂಬತ್ತು, ಮಹಾ ಆವೃತ್ತಿಯ ಎಣಿಕೆಯು ಪ್ರಾರಂಭವಾಗುವವರೆಗೆ ಮುಂದುವರೆದಿದೆ | ಸಾಂಕೇತಿಕವು ಮುಕ್ತಾಯವಾಗುವಲ್ಲಿ, ಮಹಾ ಆವೃತ್ತಿಯು ಅದರ ಐವತ್ತು ವರ್ಷಗಳ ಐವತ್ತರಷ್ಟನ್ನು ಭೂಮಿಯ ಜೂಬಿಲಿಯಾದ ಮಹಾ ಪ್ರತಿಸಂಕೇತದವರೆಗೆ ಮೌನವಾಗಿ ಎಣಿಕೆ ಮಾಡಲು ಪ್ರಾರಂಬಿಸಿತು ಇದುವೇ ಸಮಸ್ತವನ್ನೂ ಸರಿಪಡಿಸುವ ಪುನರ್‌ವಶದ ಕಾಲವಾಗಿದೆ | |

ಈ ಸತ್ಯವೇದದ ಬೋಧನೆಗಳಿಂದ ಉಂಟಾಗುವ ವಿವೇಚನಾಪೂರ್ವಕ ಸಿದ್ಧಾಂತಗಳೇನು? ನಾವು ವಿವೇಚನೆಯುಳ್ಳ ದೃಷ್ಟಿಕೋನದಲ್ಲಿ ಯಾವುದನ್ನು ಅನುಸರಿಸಬೇಕೆಂಬುದನ್ನು ಪರಿಗಣಿಸೋಣ, ನಂತರದಲ್ಲಿ ಬೇರೆ ಯಾವುದೇ ಪರಿಶುದ್ಧ ವಾಕ್ಯಗಳು ಆ ಸಿದ್ಧಾಂತಗಳನ್ನು ದೃಢಪಡಿಸುತ್ತವೆಯೋ, ಅಥವಾ ವಿರೋಧಿಸುತ್ತವೆಯೋ ಎಂಬುದನ್ನು ನೋಡೋಣ. ಮೊದಲಿಗೆ ನಾವು ಪುನರ್‌ವಶದ ಪ್ರಾರಂಭದ ಉಚಿತ ಸಮಯಗಳು ಬರುವಾಗ, ಮಹಾ ಪುನಃವಶಕಾರನ ಸಮಯವೂ ಯುಕ್ತವಾಗಿದೆ ಎಂಬ ತೀರ್ಮಾನಕ್ಕೆ ಬರೋಣ. ಇದು ಬಹಳ ವಿವೇಚನಾಪೂರ್ವಕವಾದ ತೀರ್ಮಾನವಾಗಿದೆ, ಆದರೆ ತೀರ್ಮಾನಕ್ಕಿಂತ ಹೆಚ್ಚಾಗಿ ಇದನ್ನು ಅಪೋಸ್ತಲನ ಸಕಾರಾತ್ಮಕ ಹೇಳಿಕೆಯಾದ "ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ, (When the (appointed) times of refreshing shall come from The Presence of the Lord [Jehovah]) ದೇವರ* ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು. ಆದರೆ ಸಮಸ್ತವನ್ನು ಸರಿಮಾಡುವ ಸಮಯವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು". ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ – ಅ.ಕೃ. 3:19–21.

ಬಲಯುತವಾದ ಈ ಸ್ಫೂರ್ತಿದಾಯಕ ಹೇಳಿಕೆಯೊಂದರಿಂದಲೇ, ನಮಗೆ ಕರ್ತನ ಎರಡನೆಯ ಬರೋಣದ ಯುಕ್ತ ಸಮಯದ ಬಗ್ಗೆ ಸ್ಪಷ್ಟವಾಗಿ ರುಜುವಾತಿದೆ. ಅದು ಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ಪ್ರಾರಂಭವಾಗಲು ಯುಕ್ತ ಸಮಯವಾಗಿತ್ತು. ಉದಾ.: ಅಕ್ಟೋಬರ್ 1874 ಕ್ರಿ.ಶ. ಜೂಬಿಲಿ ಏರ್ಪಾಡಿನೊಡನೆ ಸೂಚಿತವಾಗಿದೆ. ನಿಜವಾಗಿಯೂ, ಸ್ಪಷ್ಟವಾಗಿ, ಜೂಬಿಲಿಯು, ಇತರ ಎಲ್ಲಾ ದೈವಸಂಕಲ್ಪದ ಕಾರ್ಯಗಳಂತೆ, "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದದೆ" (1 ಕೊರಿಂಥ 10:11) ಎಂಬುದು ವ್ಯಕ್ತವಾಗುತ್ತದೆ. ಒಂದಂತೂ ಸ್ಪಷ್ಟವಾಗಿದೆ – ಅದು ನಮಗೆ ಪ್ರಯೋಜನಕಾರಿಯಾಗದಿದ್ದರೆ, ಅದು ಇದುವರೆಗೂ ಯಾರಿಗೂ ಪ್ರಯೋಜನಕಾರಿಯಲ್ಲ; ಏಕೆಂದರೆ ವೇದವು ತಿಳಿಸುವಂತೆ ಮೊದಲ 19 ವರ್ಷಗಳ ಜೂಬಿಲಿಯಲ್ಲೂ ಸಹ ಯೆಹೂದ್ಯರು ಸಾಂಕೇತಿಕ ಜೂಬಿಲಿಯನ್ನು ಸರಿಯಾದ ರೀತಿಯಲ್ಲಿ ಆಚರಿಸಲಿಲ್ಲ (ಯಾಜಕಕಾಂಡ 26:35). ಸಂಪತ್ತಿನ ಮೇಲೆ ಮೋಹವನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂಬುದನ್ನು ಅವರು ಸಂಶಯವಿಲ್ಲದೇ ಕಂಡುಕೊಂಡರು. ಇದು, ಎಲ್ಲಾ ಪ್ರವಾದನೆಗಳು ಮತ್ತು ಛಾಯೆಗಳಂತೆ, ನೀತಿವಂತರು ಹಾದಿಯನ್ನು ಎಲ್ಲಿ ಮತ್ತು ಹೇಗೆ ನಡೆಯಬೇಕೆಂಬುದರ ಮೇಲೆ ಬೆಳಕು ಚೆಲ್ಲುವ ಏರ್ಪಾಡು ಎಂಬುದರಲ್ಲಿ ಅನುಮಾನವಿಲ್ಲ – ಕ್ರಿಸ್ತನ ಶರೀರದ (ಪಾದ) ಸದಸ್ಯರನ್ನು ಮಾರ್ಗದರ್ಶಿಸುವದಾಗಿದೆ.

ನಮ್ಮ ಕರ್ತನ ಪುನರಾಗಮನ ಮತ್ತು ಪ್ರತ್ಯಕ್ಷತೆಯ ವಿಚಾರದಲ್ಲಿ ಹಿಂದಿನ ಅಧ್ಯಾಯದಲ್ಲಿರುವುದನ್ನು ನಮ್ಮ ಮನಸ್ಸಿಗೆ ತಂದುಕೊಳ್ಳೋಣ. ಈ ಅಂಶದ ಬಗ್ಗೆ ಇರುವ ತಪ್ಪಾದ ಕಲ್ಪನೆಗಳಿಂದ ನಾವು ಮುಗ್ಗರಿಸದೇ ಇರೋಣ. "ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ (Parousia) ಇರುವುದು. ಹೇಗೆಂದರೆ ಜಲಪ್ರಳಯದ ಮುಂಚಿನ ದಿನಗಳಲ್ಲಿ .... ಏನೂ ತಿಳಿಯದೇ ಇದ್ದರಲ್ಲಾ ... ಅದರಂತೆ ಮನುಷ್ಯಕುಮಾರನ ಕಾಲದಲ್ಲಿಯೂ ಇರುವುದು" (ಮತ್ತಾಯ 24: 37–39) ಎಂಬ ಮಾತುಗಳನ್ನು ನೆನಪಿಸಿಕೊಳ್ಳೋಣ. ನಾವೀಗಾಗಲೇ ಸ್ಫೂರ್ತಿದಾಯಕ ಬೋಧನೆಗಳಿಂದ ಸಂಗ್ರಹಿಸಿದಂತೆ ಆತನು ಆ ಮಹಾಸಂಕಟದ ದಿನದಂದು ಲೋಕಕ್ಕೆ ಉರಿಯುವ ಬೆಂಕಿಯಲ್ಲಿಯೂ ಪ್ರತಿಕಾರ ಸಲ್ಲಿಸುವವನಾಗಿ ಪ್ರಕಟವಾಗುವವರೆಗೂ, ನಂಬಿಗಸ್ತರು ಮಾತ್ರವೇ ಪ್ರವಾದನಾ ವಾಕ್ಯಗಳು ಮತ್ತೂ ದೃಢವಾಗಿರುವುದನ್ನು ಎದುರು ನೋಡುತ್ತಾ ಆತನ ಪ್ರಸನ್ನತೆಯನ್ನು ಪ್ರೀತಿಸುವವರೂ ಎದುರು ನೋಡುವವರಾಗಿ ಅದನ್ನು

* ಇಲ್ಲಿ 'Presence' ಎಂಬ ಪದವು "Parousia" ಅಲ್ಲ, ಆದರೆ 'prosopon' ಎಂಬುದರಿಂದ, 'apo prosopon' ಎಂಬುದು presence ನಿಂದ ತರ್ಜುಮೆಗೊಂಡಿದೆ ಇದು 'As a result of Presence' ಎಂಬುದನ್ನು ಸೂಚಿಸುವುದಿಲ್ಲ. ಆದರೆ, ಸುಮಾರಾಗಿ ``Out from the face of" ಎಂಬುದನ್ನು ಸೂಚಿಸುತ್ತದೆ. ಈ ಆಲೋಚನೆಯು ನಮಗೆ ಸಾಮಾನ್ಯವಾಗಿದೆ. ಆದರೆ ಪೌರ್ವಾತ್ಯ ದೇಶಗಳಲ್ಲಿ ಬಹಳ ಕಾಲದಿಂದ ಇದು ಇನ್ನೂ ಹೆಚ್ಚು ಸಾಮಾನ್ಯವಾಗಿದೆ. ಮುಖವನ್ನು ತೋರಿಸುವುದು ಕೃಪೆಯ ಗುರುತಾಗಿದ್ದರೆ, ಬೆನ್ನು ತೋರಿಸುವುದು ಅವಕೃಪೆಯ ಗುರುತಾಗಿದೆ. ಈ ರೀತಿಯಲ್ಲಿ ಯೇಸುವಿನ ಮೊದಲ ಆಗಮನದಲ್ಲಿ ನಾವು ನಮ್ಮ ಮುಖಗಳನ್ನು ಆತನಿಂದ ಮರೆಮಾಡಿದೆವು ಎಂದು ಬರೆದದೆ. ಅಂದರೆ ಮುಖಭಂಗಿತರಾಗಿ ಆತನನ್ನು ಅಂಗೀಕರಿಸಿಕೊಳ್ಳಲಿಲ್ಲ. ಅದರಂತೆ, ಯೆಹೋವನು ಪಾಪವನ್ನು ನೋಡುವವನಲ್ಲ, ಪಾಪಿಗಳಿಂದ ತನ್ನ ಮುಖವನ್ನು ಮರೆಮಾಡಿಕೊಳ್ಳುತ್ತಾನೆ. ಈಡು ಬಲಿಯು ಅರ್ಪಿತವಾಗಿರುವುದರಿಂದ, ಯೆಹೋವನು ಸೂಕ್ತಸಮಯದವರೆಗೆ ಕೃಪಾಳುವಾಗಿ ಕಾಯುತ್ತಾನೆ. ನಂತರದಲ್ಲಿ ಆತನು ಇನ್ನು ಮುಂದೆ ಮಾನವರನ್ನು ಉಪೇಕ್ಷೆ ಮಾಡುವುದಿಲ್ಲ, ಪಾಪಿಗಳೆಂದು ನಡೆಸಿಕೊಳ್ಳುವುದಿಲ್ಲ, ಆತನು ಅವರಿಗೆ ಬೆನ್ನುಹಾಕುವುದಿಲ್ಲ. ಆದರೆ ಆತನ ಮುಖದ ಮೂಲಕ ಉಲ್ಲಾಸವನ್ನು, ಆತನ ಕೃಪೆಯನ್ನು ಕಳುಹಿಸುತ್ತಾನೆ, ಸಮಸ್ತ ವಿಷಯಗಳ ಪುನಃವಶದಲ್ಲಿ ಆತನ ಪಾರುಪತ್ಯನಾಗಿರುವ ಯೇಸುವನ್ನೇ ಅವರ ಬಳಿಗೆ ಕಳುಹಿಸಿಕೊಡುತ್ತಾನೆ. ಇದೇ ಆಲೋಚನೆಯು ನಮ್ಮ ಸಂಗೀತಗಳಲ್ಲಿ ಅದೆ – "Show thy Reconciled face, Show they face and all is bright".

ಗ್ರಹಿಸುವವರು ಎಂಬುದನ್ನು ನಮ್ಮ ನೆನಪಿಗೆ ತಂದುಕೊಳ್ಳೋಣ. ಆಗ ಸತ್ಯಸಂಗತಿಯೆಂದರೆ ಈ ಲೋಕದವರು, ಮತ್ತು ಕ್ರೈಸ್ತರಲ್ಲಿಯೂ ಸಹ ಹಲವರು ಆತನ ಪ್ರಸನ್ನತೆಯನ್ನು ಸಾಮಾನ್ಯವಾಗಿ ಗ್ರಹಿಸುವುದಿಲ್ಲವೆಂಬ ಸತ್ಯಕ್ಕೆ ಯಾವುದೇ ವಿವಾದಗಳಿಲ್ಲ. ಈ ಲೋಕದವರಿಗೆ ಪ್ರವಾದನೆಗಳಲ್ಲಿ ನಂಬಿಕೆ ಇಲ್ಲ ಮತ್ತು ನಿಜವಾಗಿಯೂ ಅವರು ಇದರ ಬೆಳಕಿನಲ್ಲಿ ಏನನ್ನೂ ಕಾಣಲಾರರು. ಉಗುರು ಬೆಚ್ಚಗಿನ ಕ್ರೈಸ್ತರು (ಅವರೇ ಬಹಳ ಮಂದಿ) ಮತ್ತೂ ದೃಢವಾಗಿರುವ ಪ್ರವಾದನಾ ವಾಕ್ಯಗಳಿಗೆ ಗಮನಕೊಡದವರಾಗಿದ್ದಾರೆ. ಇದನ್ನು ಗಮನಿಸುತ್ತೇವೆಂದು ಹೇಳಿಕೊಳ್ಳುವ ಅನೇಕರು ಈ ಪ್ರವಾದನೆಗಳನ್ನು ಹಳೆಯ ಮತ್ತು ದೋಷಗಳಿಂದ ತುಂಬಿದ, ಮತ್ತು ಬಣ್ಣದ ಕನ್ನಡಕಗಳಿಂದ ಓದುತ್ತಾರೆ. ಅವರ ಕಣ್ಣುಗಳು ಶೋಚನೀಯವಾಗಿ ದುರಾಗ್ರಹದಿಂದ ಅದಕ್ಕೆ ವಿರುದ್ಧವಾಗಿದೆ. ಇಂಥವರೆಲ್ಲರೂ ಮಹಾವೈದ್ಯನ ಬಳಿಗೆ ಅವರ ಕಣ್ಣು ಕಾಣುವಂತೆ ಅಂಜನವನ್ನು ಅಥವಾ ನಮ್ರತೆಯನ್ನು ಹಚ್ಚಿಸಿಕೊಳ್ಳಲು ಹೋಗಬೇಕು (ಪ್ರಕಟನೆ 3:18) ಮತ್ತು ಮಾನವ ಸಂಪ್ರದಾಯಗಳು, ಅವರ ಸ್ವಂತ ಮತ್ತು ಇತರರ ವಿಚಾರಸರಣಿಗಳೆಂಬ ಬಣ್ಣದ ಕನ್ನಡಕಗಳನ್ನು ಸದಾಕಾಲಕ್ಕೂ ವರ್ಜಿಸಬೇಕು. ಅವುಗಳು ಕರ್ತನ ಪ್ರತಿಯೊಂದು ಸಾಕ್ಷ್ಯಗಳೊಂದಿಗೆ ಸಾಮರಸ್ಯಕರ ವಾಗಿರುವುದಿಲ್ಲ.

ಲೋಕದ ಜನರ ಅಜ್ಞಾನ ಮತ್ತು ಅಪನಂಬಿಕೆಯಾಗಲೀ ಇಲ್ಲವೇ ಕ್ರೈಸ್ತರೆಂದು ಹೇಳಿಕೊಳ್ಳುವ ಬಹುಭಾಗದವರ ಉದಾಸೀನತೆ ಮತ್ತು ದುರಾಗ್ರಹವಾಗಲೀ ದೇವರು ಆಯ್ದುಕೊಂಡವರ (God's elect) – ನಿಷ್ಕಪಟ ಮತ್ತು ಹಸುಮಕ್ಕಳ ತರಹದ ವಿಶ್ವಾಸದಿಂದ ಆತನ ಆಶೀರ್ವಾದಕರ ಮಾತುಗಳ ಸಾಕ್ಷ್ಯವನ್ನು ಅಂಗೀಕರಿಸಿಕೊಂಡಿರುವವರ ಮೇಲೆ ಯಾವುದೇ ಅಡಚಣೆಗಳನ್ನು ಸಾಬೀತುಗೊಳಿಸಲಾರವು. ಅಂಥವರು ಮುಗ್ಗರಿಸುವುದಿಲ್ಲ; ಅಥವಾ ಅವರನ್ನು ಮೋಸಗೊಳಿಸಲು ಸಾಧ್ಯವಿಲ್ಲ. ಅಂಥವರು ನಂಬಿಕೆ ಹಾಗೂ ದೇವರ ನಡೆಸುವಿಕೆಯಿಂದ ಗೆದ್ದುಬರುತ್ತಾರೆ. "ದೇವರ ಸ್ವಯಂ ಆಯ್ಕೆಯ ಬಹುಮೂಲ್ಯರೇ, ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ದೇವರು ಸಂತೋಷವುಳ್ಳ ವನಾಗಿದ್ದಾನೆ, ನಿಮ್ಮ ತಲೆ ಎತ್ತಿರಿ, ನಿಮ್ಮ ಬಿಡುಗಡೆಯು, ಉನ್ನತಿಯು ಮತ್ತು ಮಹಿಮೆಯು ಸಮೀಪವಾಗಿದೆ (ಲೂಕ. 12:32; 21:28 ಇವುಗಳನ್ನು ನೋಡಿರಿ).

ಮತ್ತೊಂದು ವಿವೇಚನೆಯುಳ್ಳ ನಿರೀಕ್ಷೆಯೆಂದರೆ, ಪುನರ್‌ವಶದ ಸಮಯವು ಅಕ್ಟೋಬರ್ 1874ರಲ್ಲಿ ಪ್ರಾರಂಭವಾಗಿರುವುದಾದಲ್ಲಿ, ನಮ್ಮ ಕರ್ತನ ಎರಡನೆಯ ಬರೋಣಕ್ಕೆ ಆಗ ಉಚಿತ ಸಮಯವಾಗಿದ್ದರೆ, ಇದನ್ನು ಗಮನಿಸುವವರು ದೇವರ ವಾಕ್ಯವು ಆತನ ಪ್ರತ್ಯಕ್ಷತೆಯ ಮೊದಲ ಕಾರ್ಯವೆಂದು ವಿವರಿಸುವ ಕೆಲವೊಂದು ಮಹತ್ವದ ಸೂಚನೆಗಳನ್ನು ನೋಡುತ್ತಾರೆ. ಇದು ಸುವಾರ್ತಾ ಯುಗದ ಫಲಗಳ ಸುಗ್ಗಿಯಾಗಿದ್ದು ಆತನು ಆಯ್ದುಕೊಂಡವರನ್ನು ಮಾನಸಿಕ ಸಹವಾಸದಲ್ಲಿ ಮತ್ತು ಆತ್ಮೀಕ ಅನ್ಯೋನ್ಯತೆಯಲ್ಲಿ ಒಟ್ಟುಗೂಡಿಸುವುದಾಗಿದೆ ಮತ್ತು ಕ್ರಿಸ್ತನ ರಾಜ್ಯದ ಸ್ಥಾಪನೆಗೆ ಕನಿಷ್ಟಪಕ್ಷ ಕೆಲವು ಸಿದ್ಧತೆಯ ಹೆಜ್ಜೆಗಳಾಗಿವೆ. ಇಂಥಾಃ ಕೆಲವೊಂದು ಸಾಕ್ಷ್ಯಗಳ ಬಗ್ಗೆ ನಾವೀಗಾಗಲೇ ಸಂಕ್ಷಿಪ್ತವಾದ ಸುಳಿವನ್ನು ನೀಡಿದ್ದೇವೆ. ಆದರೆ ಈ ಅಂಶದ ಬಗ್ಗೆ ಗಮನಿಸಬೇಕಾದುದು ಬಹಳಷ್ಟು ಇದ್ದು ನಾವು ಇದನ್ನು ನಂತರದ ಅಧ್ಯಾಯದಲ್ಲಿ ಪರಿಗಣಿಸುವಂತೆ ಬಿಡಬೇಕಾಗುತ್ತದೆ. ಸಭೆಯ ಸುಗ್ಗಿ ಕೆಲಸ ನಿಜವಾಗಿಯೂ ನಮ್ಮ ಮೇಲೆ ಅದೆ; ಗೋದಿಯು ಹಣಜಿಯಿಂದ ಪ್ರತ್ಯೇಕಿಸಲ್ಪಡುತ್ತಿದೆ. ಲೋಕದ ಸಂಗತಿಗಳು ಶೀಘ್ರವಾಗಿ ತಾವಾಗಿಯೇ ರೂಪುಗೊಳ್ಳುತ್ತಿದ್ದು, ವಿಮೋಚಕನ ರಾಜ್ಯದ ಶಾಶ್ವತ ಸ್ಥಾಪನೆಯ ಸಿದ್ಧತೆಗೆ ಅಣಿಯಾಗುತ್ತಿವೆ. ಮುಂತಿಳಿಸಿದ ಸೂಚನೆಗಳು ಅದನ್ನು ಮುಂತಿಳಿಸಿದ ರೀತಿ ಮತ್ತು ಕ್ರಮದಲ್ಲಿ, ಅದನ್ನು ಗಮನಿಸುವವರಿಗೆ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತಿದೆ. ಆದರೆ, ಇದನ್ನು ನಾವು ಸಧ್ಯಕ್ಕೆ ಬಿಡುತ್ತೇವೆ, ಯಾಕೆಂದರೆ ನಾವು ಇತರೆ ಪ್ರವಾದನೀಯ ಸಾಕ್ಷ್ಯಗಳನ್ನು ತರಲು ಬಯಸುತ್ತೇವೆ. ಈ ಯುಗದ ಸುಗ್ಗಿಯಲ್ಲಿ ಕುಡುಗೋಲು, ಯೆಹೂದ್ಯ ಸುಗ್ಗಿಯಲ್ಲಿದ್ದಂತೆ ಅದು ಸತ್ಯ ಎಂದು ಇಲ್ಲಿ ಹೇಳಿದರೆ ಸಾಕು. ಈ ಕುಡುಗೋಲನ್ನು ಉಪಯೋಗಿಸುವ ಸಂದೇಶ ದೂತರು ಈಗ ಶಿಷ್ಯರೂ ಅಥವಾ ಕರ್ತನ ಅನುಯಾಯಿಗಳೂ ಆಗಿದ್ದು, ಆದರೆ ಅವರಲ್ಲಿ ಅನೇಕರು ಆಗಿನಂತೆಯೇ ಈಗಲೂ ತಾವು ನಿರತರಾಗಿರುವ ಕಾರ್ಯದ ಪ್ರಮಾಣವನ್ನು ಅಲ್ಪವಾಗಿ ಗ್ರಹಿಸಿಕೊಳ್ಳುತ್ತಾರೆ.

## ಪ್ರವಾದನೀಯ ಸಾಕ್ಷ್ಯಗಳು ಸಮರ್ಥನೆಯುಳ್ಳವುಗಳಾಗಿವೆ
## Prophetic Evidences Corroborative

ಮೇಲೆ ಹೇಳಿದ ಸಾಕ್ಷ್ಯಗಳು ಪ್ರಬಲವಾದವುಗಳೂ ಮತ್ತು ಅವುಗಳಿರುವಂತೆಯೇ ಸ್ಪಷ್ಟವಾದವುಗಳೂ ಆಗಿರುವಾಗ, ಮಹಾ ಆವೃತ್ತಿಯನ್ನು (50x50) ಸರಿಯಾದ ಅಂಶದೊಡನೆ ಲೆಕ್ಕಮಾಡಲು ಪ್ರಾರಂಭಿಸಿದ್ದೇವೆಂಬುದಕ್ಕೆ ನಾವೀಗ ಪ್ರವಾದನೀಯ ಸಾಕ್ಷ್ಯಗಳನ್ನು ಒದಗಿಸುವವ ರಾಗಿದ್ದೇವೆ. ನಮ್ಮ ನಂಬಿಕೆಯು ಭಯ ಮತ್ತು ನಡುಗುವಿಕೆಯೊಂದಿಗೆ ಈ ಮಹಾ ಮತ್ತು ಅಮೂಲ್ಯವಾದ ವಾಗ್ದಾನಗಳನ್ನು ಗ್ರಹಿಸುವುದನ್ನು ನಮ್ಮ ಪರಲೋಕದ ತಂದೆಯು ತಿಳಿದಿರುತ್ತಾನೆ; ಹೀಗಾಗಿ ಆತನು ಈಗಾಗಲೇ ಧರ್ಮಶಾಸ್ತ್ರದಲ್ಲಿ ಕಂಡುಬರುವ ಸಾಕ್ಷ್ಯದ ಬಲವಾದ ಹಗ್ಗವನ್ನು ಪ್ರವಾದಿಯು ಹೆಚ್ಚುವರಿ ಸಾಕ್ಷ್ಯಗಳನ್ನು ನೀಡುವುದರ ಮೂಲಕ ದ್ವಿಗುಣಗೊಳಿಸಿದ್ದಾನೆ. ಮತ್ತು ಈ ಹಗ್ಗವನ್ನು ಹಿಡಿದಿರುವ ನಮ್ಮ ಪ್ರಿಯ ವಿಮೋಚಕನು ಮತ್ತು

ಕರ್ತನು, ಮತ್ತು ಯಾರ ಪ್ರತ್ಯಕ್ಷತೆಯನ್ನು ಈ ಸಾಕ್ಷವು ನಮಗೆ ತೋರಿಸುವುದಾಗಿದೆಯೋ ಆತನು, ಮಿಲಿಯಾಂತರ ಯುಗದ ಮೊದಲ ಉದಯದಲ್ಲಿ ನಮ್ಮ ಬಳಿಗೆ ಬರುವವನಾಗಿರುವಾತನು ಪೇತ್ರನಿಗೆ ಒಮ್ಮೆ ಹೇಳಿದಂತೆ "ಅಲ್ಪವಿಶ್ವಾಸಿಯೇ, ಯಾಕೆ ಸಂದೇಹಪಟ್ಟೆ?" (ಮತ್ತಾಯ 14:25–32) ಎಂದು ಪ್ರಶ್ನಿಸುವಂತೆ ಕಂಡು ಬರುತ್ತದೆ. "ನಾನು ಆತ್ಮ ಸ್ವರೂಪಿ ಎಂಬುದನ್ನು ಕಲಿತುಕೋ, ನಾನು ಮಾನವರ ಕಣ್ಣಿಗೆ ಇನ್ನು ಕಾಣಿಸುವುದಿಲ್ಲ. ನಾನು ಈ ರೀತಿಯಲ್ಲಿ ಈ ವಾಕ್ಯವೆಂಬ ದೀಪದಲ್ಲಿ ನಿಮ್ಮ ತಿಳುವಳಿಕೆಯ ಕಣ್ಣುಗಳಿಗೆ ನನ್ನನ್ನು ಪ್ರಕಟಿಸಿಕೊಳ್ಳುತ್ತೇನೆ, ಮುಂದಿನ ದಿನಗಳಲ್ಲಿ ನಾನು ಲೋಕದ ಸರಿಸಾಟಿಯಿಲ್ಲದ ಸಂಕಟಗಳ ಉಗ್ರವಾದ ಸಮುದ್ರದ ಮೇಲೆ ನಡೆಯುತ್ತೇನೆ, ನೀನು ಹೆದರ ಬೇಡ, ಇದು ನಾನು ಎಂದು ನೆನಪುಮಾಡಿಕೊಂಡು ನೀನು ಒಳ್ಳೆಯ ಸಂತೋಷವುಳ್ಳವನಾಗಿರು, ಧೈರ್ಯವಾಗಿರ್ರಿ" ಎಂದು ಹೇಳುವಂತೆ ತೋರಿಬರುತ್ತದೆ.

ನಿಜವಾಗಿಯೂ ಅದ್ಭುತವಾದ ಪ್ರವಾದನೀಯ ಸಮರ್ಥನೆಯಾಗಿ ಅದರ ಸ್ವಯಂ ನಿರಾಡಂಬರತೆಯಲ್ಲಿ ಅಡಗಿಸಲ್ಪಟ್ಟ ಇದನ್ನು ಮೇಲಿನಂತೆ ಜೂಬಿಲಿ ಛಾಯೆಯ ಮೆಚ್ಚುಗೆ ಮತ್ತು ಅನ್ವಯವು ಅದರ ಮಹತ್ವವನ್ನು ನಮಗೆ ನೀಡುವವರೆಗೆ ನಾವು ಪರಿಗಣಿಸಲು ಮುಂದುವರೆಯುತ್ತಿದ್ದೇವೆ.

ಸಾಮಾನ್ಯವಾಗಿ ಬಾಬೇಲಿನಲ್ಲಿ ಎಪ್ಪತ್ತು ವರ್ಷಗಳ ಸೆರೆಹಿಡಿದಿರುವಿಕೆ ಎಂದು ಮಾತನಾಡುವ ಎಪ್ಪತ್ತು ವರ್ಷಗಳು ದೇಶದ ಎಪ್ಪತ್ತು ವರ್ಷಗಳ ಪಾಳುಬೀಳುವಿಕೆಯಾಗಿ ಆತ್ಮೀಕವಾಗಿ ರೂಪುಗೊಂಡಿದೆ. ಈ ಪಾಳುಬೀಳುವಿಕೆಯನ್ನು ದೇವರು ಪ್ರವಾದಿಯಾದ ಯೆರೆಮೀಯನ ಮೂಲಕ ಮುಂತಿಳಿಸಿದ್ದನು – "ಈ ದೇಶವೆಲ್ಲಾ ಹಾಳಾಗಿ ಬೆರಗಿಗೆ ಈಡಾಗುವುದು. ಈ ಜನಾಂಗಗಳು ಎಪ್ಪತ್ತು ವರುಷ ಬಾಬೇಲಿನ ಅರಸನ ಅಡಿಯಾಳಾಗಿ ಬಿದ್ದಿರುವುವು" (ಯೆರೆಮೀಯ 25:11); "ಯೆಹೋವನು ಇಂತೆನ್ನುತ್ತಾನೆ – ಬಾಬೇಲ್ ರಾಜ್ಯವು ಎಪ್ಪತ್ತು ವರುಷ ಪ್ರಬಲಿಸಿದ ಮೇಲೆ ನಾನು ನಿಮ್ಮನ್ನು ಕಟಾಕ್ಷಿಸಿ ಈ ಸ್ಥಳಕ್ಕೆ ತಿರುಗಿ ಬರಮಾಡುವೆನೆಂಬ ನನ್ನ ಶುಭ ವಾಕ್ಯವನ್ನು ನಿಮಗಾಗಿ ನೆರವೇರಿಸುವೆನು" (ಯೆರೆಮೀಯ 29:10). 2ನೇ ಪೂರ್ವ ಕಾಲ ವೃತ್ತಾಂತ 36:17–21ರಲ್ಲಿ ಈ ಪ್ರವಾದನೆಯ ನೆರವೇರಿಕೆಯು ದಾಖಲಾಗಿದೆ; ಯಾಕೆ ಇದು ಕೇವಲ ಎಪ್ಪತ್ತು ವರ್ಷಗಳಾಗಿತ್ತು. ಯಾಕೆ ಇದು ಸಂಪೂರ್ಣವಾಗಿ ಪಾಳು ಬಿತ್ತು ಎಂಬ ಕಾರಣವನ್ನು 2 ಪೂರ್ವ ಕಾಲ ವೃತ್ತಾಂತದಲ್ಲಿ ಹೀಗೆ ನೋಡುತ್ತೇವೆ – "ಆತನು ಕಸ್ದೀಯರ ಅರಸನನ್ನು ಅವರ ಮೇಲೆ ಬರಮಾಡಿ ಎಲ್ಲರನ್ನೂ ಅವರ ಕೈಗೆ ಒಪ್ಪಿಸಿದನು. (ನೆಬೂಕದ್ನೇಚ್ಚರನು – ಬಾಬೇಲಿನ ಅರಸನು). ಅವನು ಅವರ ಯುವ ಭಟರನ್ನು ಅವರ ಪವಿತ್ರಾಲಯದಲ್ಲಿಯೇ ಕತ್ತಿಯಿಂದ ಸಂಹರಿಸಿ, ಯುವಕರನ್ನೂ, ಕನ್ಯೆಯರನ್ನೂ, ಮುದುಕರನ್ನೂ, ಅತಿವೃದ್ಧರನ್ನೂ ಕನಿಕರಿಸದೆ ಎಲ್ಲರನ್ನೂ ಕೊಂದನು. ಕತ್ತಿಯಿಂದ ತಪ್ಪಿಸಿಕೊಂಡವರನ್ನು ಅರಸನು ಬಾಬೇಲಿಗೆ ಸೆರೆಯೊಯ್ದನು. ಪಾರಸಿಯ ಪ್ರಭುತ್ವವು ಅಲ್ಲಿ ಸ್ಥಾಪಿತವಾಗುವವರೆಗೆ ಅವರು ಅವನಿಗೂ, ಅವನ ಮಕ್ಕಳಿಗೂ ಸೇವಕರಾಗಿದ್ದರು. ಈ ಪ್ರಕಾರ ಯೆಹೋವನು ಯೆರೆಮೀಯನ ಮೂಲಕ ಹೇಳಿಸಿದ ಮಾತು ನೆರವೇರಿ ದೇಶವು ತನ್ನ ಸಬ್ಬತ್ತು ಕಾಲವನ್ನು ಅನುಭವಿಸುವುದಕ್ಕೆ ಮಾರ್ಗವಾಯಿತು. ದೇಶವು ಎಪ್ಪತ್ತು ವರುಷ ಹಾಳು ಬಿದ್ದು ಆ ಕಾಲದಲ್ಲೆಲ್ಲಾ ವಿಶ್ರಾಂತಿಯನ್ನು ಅನುಭವಿಸುತ್ತಿತ್ತು" – 2 ಪೂರ್ವ. 36:17, 20–21.

ಇದರಿಂದ ನಾವು ಇಸ್ರಾಯೇಲ್ಯರು ಸಬ್ಬತ್ತು ವರ್ಷಗಳನ್ನು ಸರಿಯಾದ ರೀತಿಯಲ್ಲಿ ಅಚರಿಸುವಲ್ಲಿ ವಿಫಲರಾದರೂ ಅದರಲ್ಲಿ ಜೂಬಿಲಿಗಳು ಮುಖ್ಯವಾದವುಗಳು ಎಂಬುದನ್ನು ನೋಡುತ್ತೇವೆ. ಇದು ನಿಜವಾಗಿಯೂ ಪರಲೋಕದ ಅರಸನಿಗೆ ವಿಧೇಯರಾಗುವುದರ ಒಂದು ಕಠಿಣ ಪರೀಕ್ಷೆಯಾಗಿತ್ತು. ಗಮನಾರ್ಹವಾಗಿ ಅತ್ಯಾಶೆಯುಳ್ಳ ಜನರು ಅವರ ಭೂಮಿಯು ವಿಶ್ರಾಂತಿ ಪಡೆಯುವಂತೆ ಆಜ್ಞಾಪಿಸಲಾಗಿತ್ತು. ಹೊಲದ ಮಾಲಿಕರಿಗೆ ಅವರ ಬಹುಕಾಲದವರೆಗೆ ವಶಪಡಿಸಿಕೊಂಡಿದ್ದ ಭೂಮಿಯನ್ನು ಪುನಃ ಅವರ ವಶಕ್ಕೆ ಕೊಡುವ, ಆಳುಗಳಿಗೆ ಬಿಡುಗಡೆಯನ್ನು ಮಾಡುವದಾಗಿತ್ತು. ವಿಶೇಷವಾಗಿ ವಿಧೇಯತೆಯನ್ನು ಮಾತ್ರವೇ ಆಜ್ಞಾಪಿಸಿದ್ದನೇ ಹೊರತೂ ಕ್ರಿಪ್ರವಾಗಿ ಒತ್ತಾಯ ಪೂರ್ವಕವಾಗಿ ಅವರ ಮೇಲೆ ಹೇರಿರಲಿಲ್ಲ. ದೇವರು ಅವರಿಗೆ ಅವರು ಒಂದು ಜನಾಂಗವಾಗಿ ಪ್ರತಿಜ್ಞೆಯ ಮೂಲಕ ಒಪ್ಪಿಕೊಂಡ ನ್ಯಾಯವಿಧಿಗಳಿಗೆ ಅವಿಧೇಯರಾದರೆ ತಾನು ಅವರನ್ನು ಶಿಕ್ಷಿಸುತ್ತೇನೆಂದು ಮೋಶೆಯ ಮೂಲಕ ಮುಂಚಿತವಾಗಿ ಎಚ್ಚರಿಸಿದ್ದನು. ಅದೇ ಅಧ್ಯಾಯದಲ್ಲಿ ಆತನು ಅವರು ಅನ್ಯಜನರ ಅಡಿಯಲ್ಲಿ ಏಳರಷ್ಟು ಕಾಲ ಅನುಭವಿಸುವ ಶಿಕ್ಷೆಯ ಬಗ್ಗೆ ಹೇಳುತ್ತಾನೆ. ಆತನು ಅವರಿಗೆ ಅವರು ಸಬ್ಬತ್ತುಗಳನ್ನು ಅಲಕ್ಷಿಸುವುದಾದರೆ ಅವರ ದೇಶವನ್ನು ನಿರ್ಜನಗೊಳಿಸುವುದರ ಮೂಲಕ ಶಿಕ್ಷಿಸುವುದಾಗಿಯೂ ಹೇಳುತ್ತಾನೆ. (ನಿಜವಾಗಿ ಹೇಳುವುದಾದರೆ ಎಪ್ಪತ್ತು ವರ್ಷಗಳ ಪಾಳುಬೀಳುವಿಕೆಯು ಈಗಾಗಲೇ ತೋರಿಸಿರುವಂತೆ ಅನ್ಯಜನಾಂಗಗಳ ಸಮಯ ಪ್ರಾರಂಭವಾಗಿತ್ತು). ಕರ್ತನ ಎಚ್ಚರಿಕೆಯು ಈ ರೀತಿಯಾಗಿದೆ – "ನೀವು ನಿಮ್ಮ ಶತ್ರುಗಳ ದೇಶದಲ್ಲಿ ಇರುವ ದಿನಗಳಲ್ಲೆಲ್ಲಾ ನಿಮ್ಮ ದೇಶವು ಹಾಳು ಬಿದ್ದು ತನಗೆ ಸಲ್ಲಬೇಕಾಗಿದ್ದ ಸಬ್ಬತ್ತು ಕಾಲವನ್ನು ಅನುಭವಿಸುವುದು. ಅದು ವಿಶ್ರಾಂತಿಯನ್ನು ಹೊಂದಿ ಸಬ್ಬತ್ತು ಕಾಲವನ್ನು

ಅನುಭವಿಸುವುದು. ನೀವು ಅದರಲ್ಲಿ ವಾಸವಾಗಿದ್ದಾಗ ಅದಕ್ಕೆ ತಕ್ಕ ಕಾಲದಲ್ಲಿ ದೊರೆಯದ ವಿಶ್ರಾಂತಿಯನ್ನು ಅದು ಹಾಳು ಬಿದ್ದಿರುವ ಎಲ್ಲಾ ಕಾಲಗಳಲ್ಲಿ ಅನುಭವಿಸುವುದು... ಅವರು ಬಿಟ್ಟುಹೋದ ಸ್ವದೇಶವು ನಿರ್ಜನವಾಗಿ ಬಿದ್ದಿರುವಾಗ ತನಗೆ ಬೇಕಾದ ಸಬ್ಬತ್ ವಿಶ್ರಾಂತಿಯನ್ನು ಹೊಂದುವುದು" – ಯಾಜಕ. 26: 34,35,43.

ದೇವರು ಅವರಿಗೆ ಕೆಲವು ಸಮಯದವರೆಗೆ ಅವರ ಅರೆಮನಸ್ಸಿನ ಅರ್ಧ ಅವಿಧೇಯತೆಯನ್ನು ಅನುಮತಿಸಿದ್ದನು, ಆದರೆ ಅಂತ್ಯದಲ್ಲಿ ಅವರನ್ನು ಅವರ ದೇಶದಿಂದ ಸಂಪೂರ್ಣವಾಗಿ ತೆಗೆದುಹಾಕಿದನು, ನಿರ್ಜನವನ್ನಾಗಿ ಯಾರೂ ವಾಸಮಾಡದಂತೆ ಆ ದೇಶವನ್ನು ಮಾಡಿಬಿಟ್ಟನು. ಮತ್ತು ಅದಕ್ಕೆ ಪೂರ್ಣ ಸಂಖ್ಯೆಯ ಜೂಬಿಲಿ ವರ್ಷಗಳನ್ನುಒದಗಿಸಿಕೊಟ್ಟನು – ಅವರು ಅಪರಿಪೂರ್ಣವಾಗಿ ಪಾಲನೆ ಮಾಡದೇ ಇದ್ದಂತಹ ಜೂಬಿಲಿ ವರ್ಷಗಳಿಗೆ ಮಾತ್ರವಲ್ಲದೇ, ಮುಂದೆ ನೆರವೇರತಕ್ಕ ಈ ಜೂಬಿಲಿ ವರ್ಷಗಳನ್ನೂ ತನ್ನ ಏರ್ಪಾಟಿಗೆ ಸೂಕ್ತವಾಗಿ, ನಿಜವಾದ ಜೂಬಿಲಿ, ಪುನರ್‌ವಶ ಅಥವಾ ಮಿಲಿಯಾಂತರ ವರ್ಷ ಕಾಲವು ಬರುವ ಮುಂಚಿತವಾಗಿಯೇ ಇದನ್ನು ದೇವರು ಪೂರ್ತಿಗೊಳಿಸಿದನು.

ಸಾಂಕೇತಿಕ ಜೂಬಿಲಿಗಳ ಸಮಗ್ರ ಸಂಖ್ಯೆಯು ಪ್ರತಿಸಂಕೇತಕ್ಕೆ ಮುಂಚಿತವಾಗಿ ಸಂಭವಿಸುವಂತೆ ವಿನ್ಯಾಸಗೊಂಡಿದೆ ಎಂಬುದು ಈ ರೀತಿಯಾಗಿ ಎಪ್ಪತ್ತು ಎಂಬುದಾಗಿ ರುಜುವಾತುಗೊಂಡಿತು. ಅದೇ ರೀತಿಯಾಗಿ ಪ್ರತಿಸಂಕೇತವು ಯುಕ್ತವಾಗಿ ಲೆಕ್ಕ ಮಾಡುವಂತೆ ಮತ್ತೊಂದು ವಿಧವು ನಮಗೆ ಒದಗಿಸಲ್ಪಟ್ಟಿತು. ಈ ಪ್ರವಾದನೀಯ ಹೇಳಿಕೆಯಲ್ಲಿನ ಸಮಸ್ತ ಜೂಬಿಲಿಗಳನ್ನು ಲೆಕ್ಕಹಾಕುವುದು ಸುಲಭ ಮತ್ತು ಸರಳ ಮತ್ತು ನಾವು ನಿರೀಕ್ಷಿಸುವಂತೆ, ಅದರ ಫಲಿತಾಂಶಗಳು ಈಗಾಗಲೇ ಧರ್ಮಶಾಸ್ತ್ರದಲ್ಲಿ ನೀಡಲ್ಪಟ್ಟಿರುವ ಲೆಕ್ಕಾಚಾರಕ್ಕೆ ಸರಿಯಾಗಿ ಒಪ್ಪಿಗೆಯಾಗುತ್ತದೆ.

ಜೂಬಿಲಿಗಳ ಸಮಗ್ರ ಸಂಖ್ಯೆಯು ಎಪ್ಪತ್ತು ಆಗಿರುವಾಗ, ಇವುಗಳಲ್ಲಿ ಹತ್ತೊಂಬತ್ತನ್ನು ಇಸ್ರಾಯೇಲು ಪಾಳುಬಿದ್ದು ನಿರ್ಜನಗೊಳ್ಳುವ ಮೊದಲು ಅರೆಮನಸ್ಸಿನಿಂದ ಆಚರಿಸಲ್ಪಟ್ಟಿದ್ದು (70–19=51), ಉಳಿದ ಐವತ್ತೊಂದು ಜೂಬಿಲಿಗಳನ್ನು ಇಸ್ರಾಯೇಲ್ಯರು ಅಸಮರ್ಪಕವಾಗಿ ಆಚರಿಸಿದ ಕೊನೆಯ ಜೂಬಿಲಿಯಿಂದ ಗುರುತಿಸಲ್ಪಟ್ಟಿದ್ದನ್ನು ಮಹಾಪ್ರತಿಸಂಕೇತದವರೆಗೆ ಅನುಸರಿಸುತ್ತದೆ. ಆದರೆ ಈ ಲೆಕ್ಕಾಚಾರದ ರೀತಿಯಲ್ಲಿರುವ ವ್ಯತ್ಯಾಸವನ್ನು ಗಮನಿಸಿರಿ. ನೆಚ್ಚಿಕೊಂಡಿರುವ ನ್ಯಾಯವಿಧಿಯ ಅಡಿಯಲ್ಲಿ, ನಾವು ಮುಂದಿನ, ಹಾಗೂ ಹಿಂದಿನ ನಾಲ್ವತ್ತೊಂಬತ್ತು ಆವೃತ್ತಿಗಳನ್ನೂ ಕೂಡಿಸಿದ ಐವತ್ತನೆಯ ಅಥವಾ ಜೂಬಿಲಿ

| | |
|---|---|
| ಈ ರೀತಿಯಲ್ಲಿ ಹತ್ತೊಂಬತ್ತನೆಯ ಜೂಬಿಲಿ ವರ್ಷದಿಂದ ದೇಶದ ನಿರ್ಜನತೆಗೆ | .......... 19 ವರ್ಷಗಳು |
| ಜೂಬಿಲಿಗಳೊಂದಿಗೆ ಐವತ್ತು ವರ್ಷಗಳ 19 ಆವೃತ್ತಿಗಳು | .......... 950 ವರ್ಷಗಳು |
| ಪ್ರತಿಯೊಂದರಲ್ಲಿ 49 ವರ್ಷಗಳಿರುವ ಜೂಬಿಲಿಗಳಿಲ್ಲದ 51 ಆವೃತ್ತಿಗಳು | .......... 2499 ವರ್ಷಗಳು |
| ಆದುದರಿಂದ ಒಟ್ಟು 70 ಆವೃತ್ತಿಗಳು ಆವರಿಸುವ ಒಟ್ಟು ಅವಧಿ | .......... 3449 ವರ್ಷಗಳು |
| ಈ 3449 ವರ್ಷಗಳು, ಕಾನಾನ್ ದೇಶವನ್ನು ಪ್ರವೇಶಿಸಿದಂದಿನಿಂದ ಮೊದಲಿನ ಅಕ್ಟೋಬರ್ 1874ರವರೆಗೆ ಎಣಿಕೆಯಾಗುತ್ತದೆ. ಈ ರೀತಿಯಲ್ಲಿ : | |
| ಕಾನಾನ್ ಪ್ರವೇಶವಾದಂದಿನಿಂದ ವಿಭಜನೆಯವರೆಗೆ | .......... 6 ವರ್ಷಗಳು |
| ನ್ಯಾಯಸ್ಥಾಪಕರ ಕಾಲದಿಂದ ಅರಸನಾದ ಸೌಲನವರೆಗೆ | .......... 450 ವರ್ಷಗಳು |
| ಅರಸರುಗಳ ಕಾಲ | .......... 513 ವರ್ಷಗಳು |
| ನಿರ್ಜನತೆಯ (ಪಾಳುಬೀಳುವಿಕೆಯ) ಕಾಲ | .......... 70 ವರ್ಷಗಳು |
| ಪುನಃಸ್ಥಾಪನೆಯಿಂದ ಕ್ರಿ.ಶ.ದವರೆಗೆ | .......... 536 ವರ್ಷಗಳು |
| ಕ್ರಿ.ಶ.ಕ್ಕಿಂತ ಮುಂಚಿನ ಒಟ್ಟು ವರ್ಷಗಳು | .......... 1575 ವರ್ಷಗಳು |
| ಕ್ರಿ.ಶ.ದಿಂದ ಮೇಲಿನ 3449 ವರ್ಷಗಳವರೆಗೆ (ಇದು ಯೆಹೂದಿ ಸಮಯ) 1874 ರ ಅಕ್ಟೋಬರ್‌ನಲ್ಲಿ ಮುಕ್ತಾಯಗೊಳ್ಳುತ್ತದೆ | .......... 1874 ವರ್ಷಗಳು |
| ಜೂಬಿಲಿ ಪದ್ಧತಿ ಪ್ರಾರಂಭಗೊಂಡು ದೇಶವನ್ನು ಪ್ರವೇಶಿಸಿದ ನಂತರದಲ್ಲಿನ ಮೇಲೆ ತೋರಿಸಿದ ಪ್ರತಿಸಂಕೇತದವರೆಗಿನ ಪುನರ್‌ವಶದ ಮಹಾ ಜೂಬಿಲಿಯ ಅಥವಾ ಪುನರ್‌ವಶಕಾಲದ ಎಪ್ಪತ್ತು ಆವೃತ್ತಿಗಳ ಅವಧಿಯು ಕ್ರಿ.ಶ.1874ರಲ್ಲಿ ಪ್ರಾರಂಭಗೊಳ್ಳುತ್ತದೆ | |
| ಒಟ್ಟು | .......... 3449 ವರ್ಷಗಳು |

ವರ್ಷದೊಂದಿಗೆ ಲೆಕ್ಕ ಹಾಕಿದೆವು. ಯಾಕೆಂದರೆ ಧರ್ಮಶಾಸ್ತ್ರದ ವಿಧಿಗಳನ್ನು ಅವರುಗಳು ಸರಿಯಾಗಿ ಆಚರಿಸಿರುತ್ತಿದ್ದರೆ ಇದ್ದಂತೆಯೇ ಆ ಸಂಗತಿಗಳನ್ನು ತೋರಿಸುತ್ತದೆ, ಆದರೆ ಪ್ರವಾದನೆಗಳು ಅವುಗಳು ಕಂಡುಬರುವ ರೀತಿಯಲ್ಲಿಯೇ ಆ ಸಂಗತಿಗಳನ್ನು ದಾಖಲಿಸುತ್ತದೆ. ನಾವು ಪ್ರವಾದನಾ ಹೇಳಿಕೆಗಳನ್ನು ಗಮನಿಸುತ್ತಿದ್ದೇವೆ ಎಂಬುದನ್ನು ನೆನಪಿನಲ್ಲಿಡಿರಿ, ಆದುದರಿಂದ, ಈ ಆವೃತ್ತಿಗಳನ್ನು ಅವುಗಳು ಕಂಡು ಬಂದ ರೀತಿಯಲ್ಲಿಯೇ ಎಣಿಕೆ ಹಾಕಬೇಕು, ಜೂಬಿಲಿಗಳಿಲ್ಲದ ನಾಲ್ವತ್ತೊಂಬತ್ತು ವರ್ಷಗಳ ಆವೃತ್ತಿಗಳು. ಯಾಕೆಂದರೆ, ಇಸ್ರಾಯೇಲ್ಯರು ಹತ್ತೊಂಬತ್ತನೆಯದರ (ಜೂಬಿಲಿ) ನಂತರ ಅವರ ಜೂಬಿಲಿಯನ್ನು ಆಚರಿಸಲಿಲ್ಲ. ಮೊದಲನೆಯ ಹತ್ತೊಂಬತ್ತು ಆವೃತ್ತಿಗಳಲ್ಲಿ ಜೂಬಿಲಿಗಳಿದ್ದವು. ಆದರೆ, ನಂತರ ಐವತ್ತೊಂದರಲ್ಲಿ ಯಾವುದೇ ಒಂದಾದರೂ ಇರಲಿಲ್ಲ. ಆದುದರಿಂದ ನಾವು ಪ್ರತೀ ನಾಲ್ವತ್ತೊಂಬತ್ತು ವರ್ಷಗಳ ಐವತ್ತೊಂದು ಆವೃತ್ತಿಗಳನ್ನು ಎಣಿಕೆ ಹಾಕಬೇಕು ಅಥವಾ ಇಸ್ರಾಯೇಲ್ಯರು ಪ್ರತಿಸಂಕೇತದವರೆಗೆ ಆಚರಿಸಿದ ಕಡೆಯ ಜೂಬಿಲಿಯಿಂದ 2499 (49x51=2499) ವರ್ಷಗಳು. ಈ ಲೆಕ್ಕಾಚಾರಗಳು ಬೇರೆಯವುಗಳಿಗಿಂತ ವಿಭಿನ್ನವಾಗಿದ್ದರೂ ಈ ಹಿಂದೆ ನಾವು ಪರೀಕ್ಷಿಸಿದ ನ್ಯಾಯಪ್ರಮಾಣದ ಎಣಿಕೆಗನುಸಾರವಾಗಿ ಅಕ್ಟೋಬರ್ 1874ಕ್ಕೆ ಮುಕ್ತಾಯಗೊಳ್ಳುತ್ತದೆ.

ನಾವೂ ಈ ಪುರಾವೆಯನ್ನು ಕೆಲವರ ಲಾಭಕ್ಕಾಗಿ ಮತ್ತೊಂದು ವಿಧಾನದಲ್ಲಿ ಹೇಳೋಣ. ದೇವರು ಪ್ರತಿಷ್ಠಿಸಿದ ಜೂಬಿಲಿ ಆವೃತ್ತಿಯ ಪೂರ್ಣ ಸಂಖ್ಯೆಯು ಎಪ್ಪತ್ತು, ಸರಳ ಹೇಳಿಕೆಗಳು ತೋರಿಸುವಂತೆ, ಎಪ್ಪತ್ತು ವರ್ಷಗಳ ಅವರ ಭೂಮಿಯು ಪಾಳುಬೀಳುವಿಕೆಯೇ ಇದಕ್ಕೆ ಕಾರಣ. ಇದರಲ್ಲಿ ಇಸ್ರಾಯೇಲ್ಯರು ಅತೃಪ್ತಿಕರ ರೀತಿಯಲ್ಲಿ ಆಚರಿಸಿದವುಗಳನ್ನೂ ಎಣಿಕೆಹಾಕಬೇಕು, ಅವುಗಳು ಹತ್ತೊಂಬತ್ತು ಎಂಬುದನ್ನು ನಾವು ನೋಡಿದ್ದೇವೆ ಮತ್ತು ಎಲ್ಲಾ ಆವೃತ್ತಿಗಳೂ ಇದನ್ನು ಪ್ರತಿಸಂಕೇತದವರೆಗೆ ಅನುಸರಿಸುತ್ತವೆ. ನಾವು ಇದನ್ನು ಅವರು ಕಾನಾನ್ ದೇಶವನ್ನು ಪ್ರವೇಶಿಸಿದಾಗಿನಿಂದ ಲೆಕ್ಕ ಹಾಕುತ್ತೇವೆ ಮತ್ತು ಅದು ಎಲ್ಲಿ ಮುಗಿಯುತೆಂಬುದನ್ನು ನೋಡುತ್ತೇವೆ.

ತಾರ್ಕಿಕ ಸಿದ್ಧಾಂತವೆಂದರೆ, ಈ ಸಂಗತಿಗಳನ್ನು ದೈವಿಕ ಕ್ರಮವೆಂದು ಒಪ್ಪಿಕೊಳ್ಳುವುದಾದರೆ ಇದನ್ನು ಸುಲಭವಾಗಿ ಒಲಿಸಿಕೊಳ್ಳಬಹುದು. ದೈವಿಕವಾಗಿ ವ್ಯವಸ್ಥೆ ಮಾಡದೇ ಹೋಗಿದ್ದರೆ, ಅವುಗಳು ಎಲ್ಲಿಂದ ಬಂದವು?. ನಾವು ಅದನ್ನು ಸ್ಫೂರ್ತಿದಾಯಕ ಮಾತಿನಲ್ಲಿ ಹೇಳುವುದಿಲ್ಲ; ನಾವು ಅವುಗಳನ್ನು ಕೇವಲ ಅಲ್ಲಿ ಅವುಗಳ ಸರಳತೆಯೊಂದಿಗೆ ಮತ್ತು ಸೌಂದರ್ಯದೊಂದಿಗೆ ಉಗ್ರಾಣದ ಇತರೆ ಅಮೂಲ್ಯ ಆಹಾರದಂತೆ ಕಂಡೆವು ಮತ್ತು ಅವುಗಳನ್ನು ನಮ್ಮ ಕರ್ತನು ಆತನ ವಾಗ್ದಾನಕ್ಕನುಸಾರವಾಗಿ ಈಗ ನಮಗೆ ಬಡಿಸುವವನಾಗಿದ್ದಾನೆ (ಲೂಕ 12:37). ಇದು ಪುಷ್ಟಿದಾಯಕವಾದ ಗಟ್ಟಿಯಾದ ಆಹಾರವಾಗಿದೆ, ಬಹುಮುಖ್ಯವಾಗಿ ಕ್ರಿಸ್ತನಲ್ಲಿ ಇನ್ನೂ ಶಿಶುಗಳಾಗಿರು ವವರಿಗಾಗಿ ಉದ್ದೇಶಿಸಿರುವುದಿಲ್ಲ, ಆದರೆ ಪ್ರಾಯಸ್ಥರಿಗೆ ಅಂದರೆ, ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಒಳ್ಳೇದರ ಕೆಟ್ಟದರ ಬೇಧವನ್ನು ತಿಳಿದವರು (ಇಬ್ರಿಯ 5:14) ಈ ಆಹಾರವನ್ನು ಈಗ ಸೂಕ್ತ ಸಮಯದಲ್ಲಿ ಗ್ರಹಿಸಿ ಮೆಚ್ಚಿಕೊಳ್ಳುವರು. ಇವರಿಗೆ ಮಾತ್ರ ದೈವಿಕ ವ್ಯವಸ್ಥೆ ಅಲ್ಲವಾದರೆ, ನಮ್ಮ ಬೋಧನೆಗೆ ಉದ್ದೇಶಿಸಿದ್ದಲ್ಲವಾದರೆ, ಈ ಎರಡು ಪುರಾವೆಗಳು ಒಂದಕ್ಕೊಂದು ಇಷ್ಟೊಂದು ಸಮರ್ಪಕವಾಗಿ ಹೊಂದಿಕೊಳ್ಳುವಂತೆ ಮತ್ತು ಸಮರ್ಥಿಸುವಂತೆ ಹೇಗೆ ಮತ್ತು ಏಕೆ ಬಂದವು? ನಿಮ್ಮಷ್ಟಕ್ಕೇ ನೀವು ಈ ದೈವಿಕ ಕ್ರಮವನ್ನು ಮನದಟ್ಟು ಮಾಡಿಕೊಳ್ಳಲು ಈ ಎಪ್ಪತ್ತು ವರ್ಷಗಳ ಸಬ್ಬತ್ತುಗಳು ಪಾಳುವಿಕೆಯ ಸಮಯದಲ್ಲಿ ಮಹಾ ಜೂಬಿಲಿಯೊಂದಿಗೆ (50x50 ವರ್ಷಗಳು) ಸಾಮರಸ್ಯಗೊಳಿಸುವಂತೆ ಬೇರೆ ಯಾವ ಸ್ಥಳದಲ್ಲಿಯೂ, ಮಾರ್ಗದಲ್ಲಿಯೂ ಇಲ್ಲವೆಂಬುದನ್ನು ಗಮನಿಸಿರಿ ಮತ್ತು ಪ್ರಯತ್ನಿಸಿರಿ, ರುಜುವಾತುಪಡಿಸಿರಿ. ಬಹುಶಃ ಎರಡರಲ್ಲಿ ಒಂದು ತಪ್ಪಾಗಿದ್ದರೆ ಅಥವಾ ಇಸ್ರಾಯೇಲ್ಯರು ಆಚರಿಸಿದ ಹತ್ತೊಂಬತ್ತು ಜೂಬಿಲಿಗಳ ಒಂದರಲ್ಲಿ ಬದಲಾವಣೆ ಇದ್ದರೆ, ಬಹುಶಃ ಹದಿನೆಂಟು (ಒಂದು ಕಡಿಮೆ) ಅಥವಾ ಇಪ್ಪತ್ತು (ಒಂದು ಜಾಸ್ತಿ) ಪಾಳುಬೀಳುವಿಕೆಯ ಎಪ್ಪತ್ತು ವರ್ಷಗಳು ಪ್ರಾರಂಭವಾಗುವ ಮೊದಲು ಗತಿಸಿಹೋಗಿದ್ದರೆ, ಇದನ್ನು ಲೆಕ್ಕ ಹಾಕಿ ನೋಡಿದಾಗ ಇದರಲ್ಲಿ ಎರಡು ಪ್ರಕಾರದ ಪುರಾವೆಗಳು ಕಂಡುಬರುತ್ತವೆ ಮತ್ತು ಈ ಎರಡೂ ಪುರಾವೆಗಳು ಒಂದಕ್ಕೊಂದು ಅನ್ಯೋನ್ಯವಾಗಿ ಸಾಕ್ಷ್ಯವನ್ನೊದಗಿಸುತ್ತವೆ. ಮೊದಲನೆಯದು 1875 (ಅಕ್ಟೋಬರ್ 1874 ರ ನಂತರ ತೊಡಗಿ) ಅಲ್ಲಿಂದಲೇ ಸಮಸ್ತವನ್ನು ಸರಿಪಡಿಸುವ ಕಾಲವು ಪ್ರಾರಂಭವಾಯಿತು. ಹಾಗೂ ಇದೇ ದಿನಾಂಕದಿಂದ ನಮಗೆ ತಿಳಿದುಬರುವುದೇನೆಂದರೆ ಮಹಾ ಪುನರ್ವಶಕಾರನಾದ ನಮ್ಮ ಕರ್ತನನ್ನು ಪರಲೋಕದಲ್ಲಿ ಉಳಿಸಲಾಗದು. ಇದರಿಂದ ಕಾಲಗಣನೆ ಮತ್ತು ಮುಂದೆ ಪರೀಕ್ಷಿಸಬೇಕಾದ ಪ್ರವಾದನೆಗಳಿಗೆ ಭಂಗಪಡಿಸದೆ ನಿರ್ಣಯಕ್ಕೆ ಬರಲು ಇದು ಆಧಾರವಾಗಿದೆ.

ಈ ಕಾಲ-ಪ್ರವಾದನೆಗಳು ನಮಗೆ ಏನನ್ನಾದರೂ ಬೋಧಿಸುವುದಾದರೆ, ಅದು ಆ ಮಹಾ ಜೂಬಿಲಿ, ಸಮಸ್ತವನ್ನು ಸರಿಪಡಿಸುವ ಕಾಲಗಳು, ಪ್ರಾರಂಭವಾಗಿದೆ. ನಾವೀಗಾಗಲೇ ಮಿಲಿಯಾಂತರದ ಉದಯ ಕಾಲದಲ್ಲಿದ್ದೇವೆ. ಹಾಗೆಯೇ ಸುವಾರ್ತಾಯುಗದ ಸುಗ್ಗಿಯಲ್ಲಿ, ಅಂದರೆ ದೇವರರೌದ್ರದ ದಿನದಲ್ಲಿ ಒಂದರ ಮೇಲೊಂದು ಆವರಿಸಿಕೊಳ್ಳುವ ಇತರ ನಾಲ್ವತ್ತು

## ಕಾಲಾನುಸಾರವಾದ ಪಟ್ಟಿ

(110ನೇ ಪುಟ ನೋಡಿ)

## Chronological Table

ಜೂಬಿಲಿ ನಮೂನೆಯು ಕಾನಾನನ್ನು ಪ್ರವೇಶಿಸಿದಂದಿನಿಂದ ಪ್ರಾರಂಭ :–

| | |
|---|---|
| ದೇಶವು ವಿಭಜನೆಯಾಗುವವರೆಗೆ | ....... 6 ವರ್ಷಗಳು |
| ಕಾನಾನ್ ಪ್ರವೇಶದಿಂದ ದೇಶವು ವಿಭಜನೆಯಾಗುವವರೆಗೆ | ....... 6 ವರ್ಷಗಳು |
| ನ್ಯಾಯಸ್ಥಾಪಕರ ಕಾಲ | ....... 450 ವರ್ಷಗಳು |
| ಅರಸರುಗಳ ಕಾಲ | ....... 513 ವರ್ಷಗಳು |
| ಪಾಳು ಬೀಳುವಿಕೆಯವರೆಗೆ | ....... 969 ವರ್ಷಗಳು |
| 19 ಜೂಬಿಲಿಗಳು | ....... 950 ವರ್ಷಗಳು |
| ಉಳಿದವು | ....... 19 ವರ್ಷಗಳು |

ಹೀಗಾಗಿ ಅವರ ಕಡೇ ಜೂಬಿಲಿಯು ದೇಶ ಪಾಳುಬೀಳುವಿಕೆಯ ಹತ್ತೊಂಬತ್ತು ವರ್ಷಗಳ ಹಿಂದೆ ಆಚರಿಸಲಾಗಿತ್ತು.

---


| | |
|---|---|
| ಕಡೆಯ ಜೂಬಿಲಿಯ ನಂತರದ ಅವಧಿ, ಮೇಲಿನಂತೆ, ಪಾಳುಬೀಳುವಿಕೆಯ ಮೊದಲು | ....... 19 ವರ್ಷಗಳು |
| ಪಾಳುಬೀಳುವಿಕೆಯ ವರ್ಷಗಳು | ....... 70 ವರ್ಷಗಳು |
| ಕೋರೇಷನಿಂದ ಪುನರ್‌ಸ್ಥಾಪನೆಗೆ ಆದೇಶ ಬಂದಂದಿನಿಂದ ಕ್ರಿ.ಶ. 1ರ ವರೆಗೆ | ....... 536 ವರ್ಷಗಳು |
| ಕ್ರಿ.ಶ 1 ರಿಂದ 10ನೇ ಅಕ್ಟೋಬರ್ 1874ರ ವರೆಗೆ (ಯೆಹೂದ್ಯ ಅವಧಿ ಕೊನೆಗೊಂಡ ವರ್ಷ) | ....... 1874 ವರ್ಷಗಳು |
| ಒಟ್ಟು | ....... 2499 ವರ್ಷಗಳು |

---

| | |
|---|---|
| ವಾಸ್ತವವಾಗಿ ಸಂಭವಿಸಿದ ಮತ್ತು ಪ್ರವಾದನೆಗಳಲ್ಲಿ ಮುಂತಿಳಿಸಿದ ಪ್ರತಿಯೊಂದೂ 49 ವರ್ಷಗಳಂತೆ 51 ಆವೃತ್ತಿಗಳು | ....... 2499 ವರ್ಷಗಳು |
| – ಅಥವಾ ಕಾನಾನ್ ದೇಶವನ್ನು ಪ್ರವೇಶಿಸಿದ ನಂತರ ಒಟ್ಟು ವರ್ಷಗಳು 1894 | ....... 3449 ವರ್ಷಗಳು |
| 19 ಆವೃತ್ತಿಗಳ ಮತ್ತು ಜೂಬಿಲಿಗಳ (950 ವರ್ಷಗಳು) ಮತ್ತು 51 ಆವೃತ್ತಿಗಳು ಮಾತ್ರ (2499 ವರ್ಷಗಳು) | ....... 3449 ವರ್ಷಗಳು |

## ಪ್ರವಾದನೀಯವಾಗಿ ಅವಲೋಕಿಸಲ್ಪಟ್ಟ ಜೂಬಿಲಿ ಯೆರೆಮೀಯ 25:9–12 ಮತ್ತು 2 ಪೂರ್ವಕಾಲ ವೃತ್ತಾಂತ 36:21

## JUBILEE AS A TYPE IN THE LAW Jer. 25:9-12 and 2 Chron. 36:21




950 ವರ್ಷಗಳ ಜ್ಯೂಬಿಲಿ ಆಚರಣೆಗೆ 2499 ವರ್ಷಗಳನ್ನು ಕೂಡಿಸಿದ ನಿಮಿತ್ತ = 3499 ವರ್ಷಗಳು; ಈ ಸಾಂಕೇತಿಕ ಜೂಬಿಲಿ ವ್ಯವಸ್ಥೆಯಿಂದ ಪ್ರಾರಂಭಗೊಂಡ ಪೂರ್ಣಅವಧಿಯಿಂದ ಪ್ರತಿಸಾಂಕೇತದವರೆಗೆ ಭೂಮಿಯ ಮಹಾ ಜೂಬಲಿ ಸಮಸ್ತವನ್ನೂ ಸರಿಪಡಿಸುವ ಕಾಲ – ಕ್ರಿ.ಶ. ಅಕ್ಟೋಬರ್ 1874

ಕ್ರಿ.ಶ. ಅಕ್ಟೋಬರ್ 1874, ಭೂಮಿಯ ಮಹಾ ಜೂಬಿಲಿಯ ಪ್ರಾರಂಭದ ದಿನಾಂಕವಾಗಿದೆ.

(ಎಂಬತ್ತು) ವರ್ಷಗಳು. ನಾವೀಗಾಗಲೇ ಈ ರೌದ್ರದ ದಿನದಲ್ಲಿ 14 ವರ್ಷ ಕಳೆದಿದ್ದೇನೆ ಹಾಗೂ ಅಭ್ಯುದಯಕ್ಕಾಗಿ ತ್ವರಿತ ಸಿದ್ಧತೆ ನಡೆಸಲು ಹೆಣಗಾಡುತ್ತಿದ್ದೇವೆ ಹಾಗೂ ಸುವಾರ್ತಾಯುಗದ ಸುಗ್ಗಿ ಘಟನೆಗಳೆಲ್ಲವೂ ಈ ನಲವತ್ತು ವರ್ಷಗಳ ಕಾಲದಲ್ಲಿ ನೆರವೇರುವುದು. ಬರಲಿರುವ ಇಪ್ಪತ್ತಾರು ವರ್ಷಗಳು ಪ್ರಸ್ತುತ ಕಾಲದಿಂದ ಬರೆದಿರುವುದನ್ನೆಲ್ಲಾ ನೆರವೇರಿಸಲು ಸಾಕಷ್ಟಾಗಿರುತ್ತದೆ.

ಓದುಗರಲ್ಲಿ ಯಾರೂ ನಮ್ಮ ಪುನರ್ವಶದ ಬಗ್ಗೆ ಯಾವುದೇ ಪುರಾವೆಗಳಿಲ್ಲ ಎಂದು ಅಥವಾ ನೀತಿಯ ಸೂರ್ಯನು ಇನ್ನೂ ಚಿಯೋನಿನ ಕಾವಲಿನ ಬುರುಜು ಸರಿದುಹೋಗುತ್ತಿಲ್ಲ, ಲೋಕವನ್ನು ಜ್ಞಾನೋದಯ ಗೊಳಿಸುತ್ತಿಲ್ಲ ಎಂಬ ಯಾವುದೇ ತೀರ್ಮಾನಕ್ಕೆ ಅವಸರವಾಗಿ ಬಾರದಿರಲಿ. ಅದಕ್ಕೆ ವ್ಯತಿರಿಕ್ತವಾಗಿ ಆತನು ನಾವೀಗಾಗಲೇ ಮರೆಯಾಗಿದ್ದ ಸಂಗತಿಗಳು ಪ್ರಕಟವಾಗುವ ಆ ದಿನದಲ್ಲಿ ಇದ್ದೇವೆ ಎಂಬುದನ್ನು ಮನನ ಮಾಡಲಿ. ಪುನರ್ವಶದ ಮೊದಲನೆಯ ಕಾರ್ಯವು ಹಳೆಯ ಮತ್ತು ಶಿಥಿಲವಾಗುತ್ತಿರುವ ರಚನೆಯನ್ನು ತಕ್ಕ ರೀತಿಯಲ್ಲಿ ಮುರಿದು ಬೀಳಿಸುವುದೇ ಆಗಿದೆ ಹಾಗೂ ನೂತನ ಸಂಗತಿಗಳು ಆ ಸ್ಥಳವನ್ನು ಆಕ್ರಮಿಸುವುದು ಎಂಬುದನ್ನು ನೆನಪಿನಲ್ಲಿಡಲಿ. ಅತ್ಯಂತ ಸೌಮ್ಯನಾದ ವೈದ್ಯನ ಮೊಟ್ಟಮೊದಲನೆಯ ಕಾರ್ಯ ಗಾಯಗಳನ್ನು ಬಿಚ್ಚುವುದು ಮತ್ತು ಅದನ್ನು ಶುದ್ಧಿಗೊಳಿಸಿ ಅದು ಸಂಪೂರ್ಣವಾಗಿ ಗುಣವಾಗಲಿಕ್ಕಾಗಿ ರೋಗಿಗೆ ಅಗತ್ಯವಿದ್ದಂತೆ ಅದನ್ನು ಕತ್ತರಿಸಿ ತೆಗೆಯುವುದು. ಅಂಥಾಃ ಸೇವೆಯು ನೋವನ್ನುಂಟುಮಾಡುತ್ತದೆ ಮತ್ತು ಅದನ್ನು ರೋಗಿಯು ಆ ಸಮಯದಲ್ಲಿ ಸ್ವಲ್ಪವಾದರೂ ಮೆಚ್ಚಿಕೊಳ್ಳುವುದಿಲ್ಲ ಎಂಬುದನ್ನು ಹೇಳಬೇಕಾದ್ದಿಲ್ಲ. ಹೀಗೆ ಇದು ಮಹಾ ವೈದ್ಯನ, ಪುನರ್ವಶಕಾರನ, ಜೀವದಾಯಕನ ಕಾರ್ಯವಾಗಿದೆ. ಆತನು ಗುಣಪಡಿಸುವ ಸಲುವಾಗಿಯೇ ಗಾಯಗೊಳಿಸುತ್ತಾನೆ, ಸಭೆಯಲ್ಲಿ ಮತ್ತು ಲೋಕದಲ್ಲಿರುವ ಸಂಕಟಗಳು ಮತ್ತು ಸೋಸುವಿಕೆಯು ಶುದ್ಧೀಕರಿಸುವ ಮತ್ತು ಛೇದಿಸಿ ತೆಗೆಯುವ ಅಗತ್ಯವು ಪುನರ್ವಶದ ಕಾರ್ಯದಲ್ಲಿ ಬಹಳ ಮುಖ್ಯವಾಗಿದೆ.

ಸಂಕೇತದಲ್ಲಿ, ಜೂಬಿಲಿಯು ವರ್ಷವು ಪ್ರಾರಂಭವಾಗುವಾಗ ತುತೂರಿಯನ್ನು ಮೊಳಗಿಸಿ ದೇಶದ ನಿವಾಸಿಗಳಿಗೆಲ್ಲಾ ಬಿಡುಗಡೆಯನ್ನು ಸಾರಿ ತಿಳಿಸಬೇಕು (ಯಾಜಕ 25:10). ಸಾಂಕೇತಿಕವಾದ ಏಳನೆಯ ತೂತೂರಿ ಮೊಳಗುವಾಗ ಪ್ರತಿಸಂಕೇತದವರು ಒಳಪ್ರವೇಶಿಸುತ್ತಾರೆ. ಅದು ಕಡೆಯ ತೂತೂರಿ, ದೇವರ ತುತೂರಿ. ಅದು ನಿಜವಾಗಿಯೂ ಮಹಾ ತುತೂರಿಯಾಗಿದೆ; ಅದು ಎಲ್ಲಾ ಸೆರೆಯಾಳುಗಳಿಗೆ ಬಿಡುಗಡೆಯನ್ನು ಸಾರುತ್ತದೆ; ಮತ್ತು ಮೊದಲಿಗೆ ಇದರ ಅರ್ಥವೇನೆಂದರೆ, ಅವಧಿ ಮೀರಿದ ಅನೇಕ ಬಾಧ್ಯತೆಗಳುಮತ್ತು ಸವಲತ್ತುಗಳನ್ನು ವಶಕ್ಕೊಪ್ಪಿಸಿ, ರೂಢಿ, ಪದ್ಧತಿ, ಗಲಿಬಿಲಿಯ ಅಡಚಣೆಗಳು ಬಗೆಹರಿಯದ ಸಾಮಾನ್ಯ ಸಮಯ ಇತ್ಯಾದಿಗಳು "ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭ ಸಮಾಚಾರ" (ಲೂಕ 2:10) ಎನ್ನುವುದು ಕಂಡುಬರುತ್ತದೆ.

ಪ್ರಾರಂಭದ ಕ್ಷೋಭೆಯಲ್ಲಿ ನೂತನ ಯುಗದ ಜೂಬಿಲಿ ತುತೂರಿಯನ್ನು ಕೇಳಿಸಿಕೊಳ್ಳುವ ಪ್ರತಿಯೊಬ್ಬರೂ ಅದರ ಅನೇಕ ವೈಶಿಷ್ಟ್ಯಗಳಲ್ಲಿ ಯಾವುದರಿಂದಲಾದರೂ ಅವಕ್ಕಾಗುತ್ತಾರೆ ಮತ್ತು ಬೇರೆ ಏನನ್ನೂ ಗಮನಿಸುವುದಿಲ್ಲ. ಕೆಲವರು ಅದರ ಯುಕ್ತತೆಯನ್ನು, ಗಮನಿಸಿದವರಾಗಿ, ಸರ್ಕಾರಿ ಸುಧಾರಣೆಗಳನ್ನು, ಕಾಯಂ ಆದ ಸೈನ್ಯದ ಮತ್ತು ಹೊರೆಯಾದ ಅದರ ಸುಂಕದ ರದ್ದುಪಡಿಸುವಿಕೆಗೆ ಒತ್ತಾಯಪಡಿಸುತ್ತಾರೆ. ಮತ್ತೊಬ್ಬರು ಶ್ರೀಮಂತಕುಲದ ಅಧಿಕಾರವನ್ನು ರದ್ದುಪಡಿಸುವಂತೆ ಮತ್ತು ಪ್ರತಿ ಮನುಷ್ಯನಿಗೂ ಆತನ ಪುರುಷಯೋಗ್ಯ ಗುಣಗಳನ್ನು ಗುರುತಿಸುವಂತೆ ಒತ್ತಾಯಿಸಲಾಗುತ್ತದೆ. ಇತರರು ಭೂಮಾಲೀಕತ್ವವನ್ನು ರದ್ದುಪಡಿಸುವಂತೆಯೂ ಅಗತ್ಯತೆಗೆ, ಸಾಮರ್ಥ್ಯಕ್ಕೆ, ಮತ್ತು ಉಪಯೋಗಿಸುವ ಇಚ್ಛೆಗೆ ತಕ್ಕಂತೆ ಹಿಡುವಳಿಕೆದಾರಿಕೆಗೆ ಮೊದಲ ಆದ್ಯತೆಯಾಗಬೇಕೆಂದು ಹಕ್ಕಿನಿಂದ ಕೇಳಿಕೊಳ್ಳುತ್ತಾರೆ. ಮತ್ತೆ ಕೆಲವರು ನಿಷೇದಾಜ್ಞೆ ಮುಂತಾದವುಗಳ ಮೂಲಕ ಕಾನೂನುಗಳು, ಕಾನೂನುಗಳಿಂದ ಮಿತಾಚಾರ ಸುಧಾರಣೆಗೆ ಒತ್ತಾಯಿಸುತ್ತಾರೆ. ಸಮಾಜಗಳ ಕ್ರಮಗಳು ಈ ಕೆಡುಕನ್ನು ಸರಪಣಿಯಿಂದ ಬಿಗಿಯುತ್ತವೆ ಮತ್ತು ಹಣದಾಸೆಗಾಗಿ ಜೊತೆ ಮಾನವರಿಗೆ ಬಲೆಬೀಸಿ, ಅವರನ್ನು ಗುಲಾಮರನ್ನಾಗಿ ಮಾಡಿ ನಾಶಪಡಿಸುವ ಮತ್ತು ಅವರ ಬಳಲಿಕೆಯನ್ನು ಅವರ ಬಲಹೀನತೆಯಾಗುವಂತೆ ಮತ್ತಷ್ಟು ಬಿಗಿಮಾಡುವವರನ್ನು, ಅವರ ರಕ್ತದಿಂದ, ಕೊಬ್ಬಿನಿಂದ, ವೈಭವಿಸುವವರನ್ನು ಬಂಧಿಸುವಂತೆ ಒತ್ತಾಯಿಸುತ್ತಾರೆ. ಇತರರು ಬಲಹೀನರನ್ನು, ಇತರರ ಮೇಲೆ ಆತುಕೊಂಡಿರುವವರನ್ನು ಹಿಂಸೆಪಡಿಸುವ ಸಾಮರ್ಥ್ಯವುಳ್ಳವರನ್ನು ನಿಷೇಧಿಸುವಂತೆ ಕ್ರೂರ ವಿರೋಧಿ ದಯಾಳು ಸಮಾಜಗಳನ್ನು ಸ್ಥಾಪಿಸಿಕೊಳ್ಳುತ್ತಾರೆ. ಇತರರು ದುರಾಚಾರವನ್ನೂ ಮತ್ತು ದುರ್ನಡತೆಗಿಳಿಸುವ ಸಾಹಿತ್ಯವನ್ನು ನಿಗ್ರಹಿಸುವ ಸಂಘಗಳನ್ನು ಸ್ಥಾಪಿಸುತ್ತಾರೆ. ಇತರರು ಆಹಾರ ಮುಂತಾದವುಗಳ ಕಲಬೆರಿಕೆಯನ್ನು ಪರೀಕ್ಷಿಸುವಂತೆ ಮತ್ತು ಹೆಚ್ಚು ಲಾಭದ ದುರಾಸೆಯಿಂದ ಆಹಾರ ಇತ್ಯಾದಿಗಳ ಕಲಬೆರಿಕೆ ಮಾಡಿ ಆಹಾರವನ್ನು ಹೆಚ್ಚು ಅಪಾಯಕಾರಿಯನ್ನಾಗಿ ಮಾಡುವವರನ್ನು ಬಹಿರಂಗಪಡಿಸಿ ಅವರಿಗೆ ಶಿಕ್ಷೆಯಾಗುವಂತೆ ಅವರ ಮೇಲೆ ಮೊಕದ್ದಮೆ ದಾಖಲಿಸುವ ಕಲಬೆರಿಕೆ ವಿರೋಧಿ ಸಂಘಗಳನ್ನು ಸ್ಥಾಪಿಸುತ್ತಾರೆ. ಜನರ ಜೀವ ಮತ್ತು ಆರೋಗ್ಯ ರಕ್ಷೆಗಾಗಿ ಅನೇಕ ಕಾನೂನುಗಳನ್ನು ಮಾಡಿದ್ದಾರೆ. ಗಣಿಕಾರರಿಗೆ ಎಷ್ಟು ಬೆಲೆಯಾದರೂ ಶುದ್ಧ ಗಾಳಿಯ

ಅವಶ್ಯಕತೆ ಇದೆ. ಬೆಂಕಿ ಅನಾಹುತವಾದಲ್ಲಿ ಅದರಿಂದ ತಪ್ಪಿಸಿಕೊಳ್ಳಲು ಅವರಿಗೆ ಎರಡು ಕಡೆಗಳಲ್ಲಿ ಮಾರ್ಗಗಳಿರಬೇಕಾಗುತ್ತದೆ. ಕೆಲಸಗಾರರು ತಮಗೆ ತಾವೇ ಸಹಾಯಮಾಡಿಕೊಳ್ಳಲಾರರು ಹಾಗೂ ತಮ್ಮ ಕೆಲಸದ ಸ್ಥಳವನ್ನು ಆಯ್ಕೆಮಾಡಿಕೊಳ್ಳಲಾರರು. ಅವರುಗಳು ಸಾರ್ವಜನಿಕ ಕಾನೂನುಗಳಿಂದ ರಕ್ಷಿಸಲ್ಪಡಬೇಕಾಗಿದೆ. ಮಾಲಿಕರು ಮನಸ್ಸುಮಾಡಿದಾಗ ಮತ್ತು ಸಂಗ್ರಹ ಕ್ರಮದಲ್ಲಿ ಅವರಿಗೆ ಸಂಬಳ ನೀಡಲಾಗದು, ಆದರೆ ಈಗ ಕಾನೂನಿನ ಪ್ರಕಾರ ಸಂಬಳದ ದಿನವು ಕನಿಷ್ಟ ಎರಡು ವಾರಗಳಿಗೊಮ್ಮೆ ಇರಬೇಕು ಮತ್ತು ಅದನ್ನು ಹಣದ ರೂಪದಲ್ಲಿಯೇ ನೀಡಬೇಕು. ಅವರನ್ನು ಯಾವುದೇ ಒಂದು ಕಟ್ಟಡದಲ್ಲಿ ಗುಂಪು ಕೂಡಿಸಿ ಇರಿಸಬಾರದು. ಅಲ್ಲಿ ಬೆಂಕಿ ಹತ್ತಿಕೊಂಡರೆ ಅವರು ಸುಟ್ಟು ಸತ್ತು ಹೋಗಬಹುದು ಅಥವಾ ಜೀವರಕ್ಷೆಗಾಗಿ ಹೊರಕ್ಕೆ ದುಮಿಕಿ ಅಂಗಹೀನತೆಯನ್ನುಂಟು ಮಾಡಿಕೊಳ್ಳಬಹುದು. ಹೀಗಾಗಿ ಅಗ್ನಿ ಸುರಕ್ಷತೆಯು ಕಡ್ಡಾಯವಾಗಿದೆ. ಯಾವುದೇ ಮರಣವಾಗಲೀ ಅಥವಾ ಯಜಮಾನರ ಅಜಾಗರೂಕತೆಯ ಕಾರಣ ಯಾವುದೇ ಹಾನಿಯಾಗಲೀ ಉಂಟಾದರೆ ಅದಕ್ಕೆ ಆತನೇ ಜವಾಬ್ದಾರನಾಗುತ್ತಾನೆ. ಆತನಿಗೆ ದಂಡವಿಧಿಸಬಹುದು, ನಷ್ಟ ಪರಿಹಾರ ನೀಡುವಂತೆ ಮಾಡಬಹುದು ಅಥವಾ ಜೈಲು ಶಿಕ್ಷೆಯನ್ನೂ ವಿಧಿಸಬಹುದು. ರೈಲು, ರಸ್ತೆ, ಉಗಿ ಶಕ್ತಿಯಿಂದ ಚಲಿಸುವ ಹಡಗುಗಳು ಮುಂತಾದವುಗಳ ಸಂಘ ಸಂಸ್ಥೆಗಳು ಬಡ ಮತ್ತು ಶ್ರೀಮಂತ ಜನರ ಜೀವ ಮತ್ತು ಹಿತವನ್ನು ಕಾಪಾಡುವಂತೆ ಒತ್ತಾಯಪಡಿಸಲಾಗಿದೆ. ಈ ಸುಧಾರಣೆಗಳು ತಿಳುವಳಿಕೆ ಮತ್ತು ಬಿಡುಗಡೆಯ ಜೂಬಿಲಿ ತುತ್ತೂರಿಯಿಂದ ಜನರನ್ನು ಎಚ್ಚರಿಸುವ ಫಲಿತಾಂಶವನ್ನುಂಟು ಮಾಡಿದೆ ಮತ್ತು ಇವುಗಳು ಹೆಚ್ಚು ದಯೆ ಹೊಂದಿದ ವರ್ಗದವರ ಶುದ್ಧ ಔದಾರ್ಯದ ಕುರುಹು ಅಲ್ಲ. ಎಲ್ಲಾ ದಯೆ ಹೊಂದಿದ ಮತ್ತು ಐಶ್ವರ್ಯವಂತ ವರ್ಗದವರು ಔದಾರ್ಯವುಳ್ಳವರಾದರೂ, ನೀತಿವಂತಿಕೆಯನ್ನು ಪ್ರೀತಿಸುವವರಾದರೂ ಈ ಸುಧಾರಣೆಯ ಪ್ರಾರಂಭದಲ್ಲಿ ಸಂತೋಷಿಸಬಹುದು, ಇತರರು ಮತ್ತು ಬಹುಸಂಖ್ಯಾತರು ಅಗತ್ಯತೆಯಿಂದ ವಿಷಾದನೀಯವಾಗಿ ಶರಣಾಗುತ್ತಾರೆ. ನಿಜ, ಅಂಥಃ ಕಾನೂನುಗಳು ಮತ್ತು ವ್ಯವಸ್ಥೆಗಳು ಇನ್ನೂ ಸಮರ್ಪಕವಾಗಿರುವುದಿಲ್ಲ ಇಲ್ಲವೇ ಅವು ಸಾರ್ವತ್ರಿಕವಾಗಿರುವುದಿಲ್ಲ. ಆದರೆ ಆರಂಭಗಳನ್ನು ಗಮನಿಸುವಾಗ, ನಮ್ಮ ಮನಸ್ಸನ್ನು ಸಂತೋಷಪಡಿಸುತ್ತದೆ ಮತ್ತು ಜೂಬಿಲಿ ಕಾನೂನುಗಳು ಪೂರ್ಣ ಜಾರಿಯಲ್ಲಿರುವಾಗ ಅದು ತೆಗ್ಗಿನೆಡೆಯುವ ಮತ್ತು ದೀನತೆಯುಳ್ಳವರನ್ನು ಯಾವ ರೀತಿಯಲ್ಲಿ ಮೇಲಕ್ಕೆತ್ತಬಹುದೆಂಬುದಕ್ಕೆ, ಮತ್ತು ಅಹಂಕಾರಿಗಳನ್ನು ತಗ್ಗಿಸುವುದಕ್ಕೆ ಸಾಕ್ಷ್ಯಗಳನ್ನು ನೀಡಿದೆ. ಈ ಎಲ್ಲಾ ಸಂಗತಿಗಳು ಮಹಾ ಜೂಬಿಲಿ ಕಾಲದಲ್ಲಿ ಪ್ರವೇಶಿಸುವ ಸುಧಾರಣೆಯ ಕ್ಷೋಭೆಯ ಭಾಗವಾಗಿದೆ, ಬಹಳಷ್ಟು ಹಕ್ಕೇಳಿಕೆಗಳು ಇರುವುದಾದರೂ ಮತ್ತು ಬಹಳಷ್ಟನ್ನು ಅನುಕ್ರಮವಾಗಿ ಒಪ್ಪಿಕೊಂಡಿದ್ದಾಗ್ಯೂ, ಇನ್ನೂ ರಾಜರುಗಳು, ಚಕ್ರವರ್ತಿಗಳು ಮತ್ತು ಮಹಾರಾಣಿಯರು ರಾಜಕೀಯ ಮತ್ತು ಸಾಮಾಜಿಕ, ಕ್ರೈಸ್ತ ಸಭೆಯ ಮತ್ತು ಆರ್ಥಿಕ ನಾಯಕರುಗಳು ಈ ಜೂಬಿಲಿ ಅಥವಾ ಪುನರ್‌ವಶ ಯುಗದ ಮಹಾ ಪ್ರಕ್ರಿಯೆಗೆ ತೀವ್ರ ಹೋರಾಟವಿಲ್ಲದೆ ಸಮಾಂತರಗೊಂಡು ಒಳಪಡುತ್ತಿಲ್ಲ, ಪರಿಶುದ್ಧ ಬರಹಗಳ ಸೂಚನೆಯು ನಮ್ಮ ಮುಂದಿರುವಾಗ, ಅವುಗಳು ಕಠಿಣವಾದರೂ, ಅವನ್ನು ಪ್ರತಿಬಂಧಿಸಲಾಗದು ಮತ್ತು ಅಂತಿಮ ಒಳಿತಿಗಾಗಿ ಅವುಗಳು ಕಾರ್ಯವೆಸಗುತ್ತವೆ.

"ದೇಶದಲ್ಲೆಲ್ಲಾ ಬಿಡುಗಡೆ" ಎಂಬ ಉತ್ಸಾಹವು ನಿಶ್ಚಯವಾಗಿಯೂ ಕೆಲವೊಮ್ಮೆ ಅಜ್ಞಾನಿಗಳಿಂದಲೂ ಮತ್ತು ಕೋಪಿಷ್ಟರಿಂದಲೂ ಅಸಮಂಜಸವಾದ ವಿಸ್ತಾರಕ್ಕೆ ಕೊಂಡೊಯ್ಯುವದಾಗಿದೆ; ಆದಾಗ್ಯೂ ಇವೆಲ್ಲವು ಜೂಬಿಲಿಯ ಅನಿವಾರ್ಯ ಮಹಾ ಉತ್ಸಾಹದ ಭಾಗವಾಗಿದ್ದು ಹಿಂದಿನ ಅಜ್ಞಾನ ಮತ್ತು ದಬ್ಬಾಳಿಕೆಗಳ ಕಾರಣ ಸಂಭವಿಸುವವುಗಳಾಗಿವೆ. ಕರ್ತನ 'ಚಿಕ್ಕಹಿಂಡಿನ' ಹೊರತಾಗಿ ಬೇರೆ ಯಾರಿಗೂ ಪೂರ್ಣವಾಗಿ ಮತ್ತು ಕರಾರುವಾಕ್ಕಾಗಿ ಪುನಃವಶದ ಭವ್ಯವಾದ ಉದ್ದೇಶದ ಬಗ್ಗೆ ತಿಳಿಸಲ್ಪಟ್ಟಿರುವುದಿಲ್ಲ. ಇವರುಗಳು ಸಣ್ಣಪುಟ್ಟ ಬದಲಾವಣೆಗಳನ್ನು, ಮಾನವರ ಕಡಿಮೆ ಪ್ರಮಾಣದ ಸಂಗತಿಗಳ ಸರಿಪಡಿಸುವಿಕೆಗಳನ್ನು ನೋಡುತ್ತಾರೆ. ಅವರು ದೇವರ ವಾಕ್ಯದ ದೃಷ್ಟಿಯಲ್ಲಿ ಬೇರೆ ಯಾವ ದೃಷ್ಟಿಕೋನವೂ ನೋಡಲಾಗದವುಗಳನ್ನು ನೋಡುತ್ತಾರೆ. ಅದು ಪಾಪದ ದೊಡ್ಡ ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವವನನ್ನು ಆತನ ಶಕ್ತಿಯಿಂದ ತುಂಡರಿಸಲಾಗುವುದು, ಮರಣದ ಮಹಾ ಸೆರೆಮನೆಯು ತೆರೆಯಲಾಗುವುದು ಮತ್ತು ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿಯೂ, ಮಹಾ ವಿಮೋಚಕನೂ, ಪುನರ್‌ವಶಕಾರನೂ ಆದ ಕ್ರಿಸ್ತನ ಅಮೂಲ್ಯ ರಕ್ತದಿಂದ ಗುರುತಿಸಲ್ಪಟ್ಟ ಪ್ರತಿ ಸೆರೆಯವನಿಗೂ ಬಿಡುಗಡೆ ನೀಡಲಾಗುವುದು. ಮಹಾ ಸಂತೋಷದ ಅಲೆಯು ನಿಜವಾಗಿಯೂ, ಜೀವಿಸುವವರಿಗೆ ಮಾತ್ರವಲ್ಲ, ಸಮಾಧಿಯಲ್ಲಿರುವ ಎಲ್ಲಾ ಜನರಿಗೂ ಬೀಸುವುದು. ಈ ಮಹಾ ಜೂಬಿಲಿಯು ಅಂತ್ಯವಾಗುವ ಮೊದಲು ಎಲ್ಲಾ ಮಾನವ ಜೀವಿಗಳೂ ಸ್ವತಂತ್ರಗೊಳ್ಳಬಹುದು – ಮಾನವನ ಪ್ರಥಮ ಸ್ಥಾನ ಅದು "ಬಹು ಒಳ್ಳೇದಾಗಿತ್ತು" ಎಂಬ ಸ್ಥಿತಿಗೆ ಹಿಂದಿರುಗಬಹುದು, ಆದಾಮನ ಮೂಲಕ ಕಳಕೊಂಡ ಎಲ್ಲವುಗಳೂ ಕ್ರಿಸ್ತನ ಮೂಲಕ ಹಿಂತಿರುಗಿಸಲ್ಪಡುವುದು 'ಬಹಳ ಒಳ್ಳೇದು"

* * * * * * * *

"Blow ye the trumpet blow
The gladly solemn sound;
Let all the nations know,
To the earth's remotest bound,
The jubilee of earth is come,
Returning ransomed "sinners home"

"Jesus our great High Priest,
Hath full atonement made.
Ye weary spirits, rest:
Ye mournful souls, be glad
Returning ransomed sinners home"

"Ye who were sold for naught,
Whose heritage was lost,
May have all back, unbought,
A gift at Jesus' cost.
The Jubilee of earth is come,
Returning ransomed sinners home

"The seventh Trumpet hear,
The news of heavenly grace;
Salvation now is near;
Seek ye the Savior's face,
The Jubilee of earth is come,
Returning ransomed sinners home"

ಏಳನೆಯ ತುತ್ತೂರಿ
ಊದಿರಿ, ನೀವು ತುತ್ತೂರಿಯನ್ನು ಊದಿರಿ,
ನಿಷ್ಟಾಪೂರ್ವಕ ಸಂತೋಷದ ಶಬ್ದ,
ಎಲ್ಲಾ ದೇಶಗಳಿಗೆ ತಿಳಿದುಬರಲಿ,
ಭೂಮಿಯ ಬಹುದೂರದ ಎಲ್ಲೆಗಳಿಗೂ,
ಭೂಮಿಯ ಜೂಬಿಲಿಯು ಬಂದಿದೆ,
ವಿಮೋಚನೆಗೊಂಡ ಪಾಪಿಗಳು ಮನೆಗೆ ಹಿಂದಿರುಗುವರು.

ಯೇಸುವು ನಮ್ಮ ಮಹಾಯಾಜಕನು,
ಪೂರ್ತಿಯಾಗಿ ಪಾಪ ನಿವೃತ್ತಿ ಮಾಡಿರುವನು,
ಬಳಲಿದ ಆತ್ಮಗಳೇ, ನೀವು ಸಂತೋಷಿಸಿರಿ,
ದುಃಖ ಭರಿತ ಜೀವಾತ್ಮಗಳೇ ಸಂತುಷ್ಟರಾಗಿರಿ.
ಭೂಮಿಗೆ ಜೂಬಿಲಿಯು ಬಂದಿದೆ.
ವಿಮೋಚನೆಗೊಂಡ ಪಾಪಿಗಳು ಮನೆಗೆ ಹಿಂತಿರುಗುವರು

ನೀವು ನಿಷ್ಪ್ರಯೋಜನಕ್ಕೆ ಮಾರಲ್ಪಟ್ಟವರು,
ತಮ್ಮ ಪರಂಪರೆಯನ್ನು ಕಳೆದುಕೊಂಡವರೇ,
ಕೊಳ್ಳ  ಲಾಗದನ್ನು ಮತ್ತೆ ಪಡೆಯಿರಿ,
ಯೇಸುವಿನ ಬೆಲೆಯಿಂದ ಹೊಂದಿದ ಕೊಡುಗೆ,
ಭೂಮಿಗೆ ಜೂಬಿಲಿಯು ಬಂದಿದೆ,
ವಿಮೋಚನೆಗೊಂಡ ಪಾಪಿಗಳು ಮನೆಗೆ ಹಿಂತಿರುಗುವರು

ಏಳನೆಯ ತುತ್ತೂರಿಯನ್ನು ಕೇಳಿರಿ,
ಪರಲೋಕದ ಅನುಗ್ರಹದ ಸಮಾಚಾರ,
ರಕ್ಷಣೆಯ ಹತ್ತಿರವದೆ
ವಿಮೋಚಕನ ಮುಖವನ್ನು ಅರಸಿರಿ,
ಭೂಮಿಗೆ ಜೂಬಿಲಿಯು ಬಂದಿದೆ,
ವಿಮೋಚನೆಗೊಂಡ ಪಾಪಿಗಳು ಮನೆಗೆ ಹಿಂತಿರುಗುವರು

# ಅಧ್ಯಯನ – 7 Study VII

# ಸಮಾನಾಂತರವಾದ ದೈವಸಂಕಲ್ಪದ ಹಂಚಿಕೆಗಳು

## The Parallel Dispensations

**ಯೆಹೂದ್ಯ ಯುಗವು ಸುವಾರ್ತಾ ಯುಗದ ಛಾಯೆಯಾಗಿದೆ, ಎರಡು ದೈವೇಚ್ಛೆ ಹಂಚಿಕೆಗಳ ನಡುವಣ ಗಮನಾರ್ಹವಾದ ಅನುರೂಪತೆಯುಳ್ಳ ಸಮಾನತೆಗಳಿದ್ದರೂ ಅವುಗಳು ಭಿನ್ನವಾಗಿವೆ. ಕ್ರೈಸ್ತ ಯುಗಾರಂಭದ ಶ್ರೇಷ್ಠತೆ, ಪ್ರತಿಸಂಕೇತ. ಶಾರೀರಿಕ ಮತ್ತು ಆತ್ಮೀಕ ಇಸ್ರಾಯೇಲ್ಯರು ತದ್ವಿರುದ್ಧಗೊಂಡಿದ್ದಾರೆ. ಪ್ರಮುಖವಾದ ಸಮಾನಾಂತರಗಳನ್ನು ಪರೀಕ್ಷಿಸಲಾಗಿದೆ. ಸಮಯದ ಸಮಾನಾಂತರವನ್ನು ವಿಶೇಷವಾಗಿ ಗಮನಿಸಲಾಗಿದೆ. ಶಾರೀರಿಕ ಇಸ್ರಾಯೇಲ್ಯರ ಕೃಪೆಯ ಕಾಲಾವಧಿ. ಕೃಪೆಯಿಂದ ತೆಗೆಯಲ್ಪಡುವ ಅವರ ಸಮಯ. ಅವಕೃಪೆಯ ಕಾಲಾವಧಿ ಕೃಪೆಯ ಕಾಲಾವಧಿಗೆ ಸಮವೆಂದು ಪ್ರವಾದನೆಯಿಂದ ತೋರಿಸಲಾಗಿದೆ. ಅವರ ಅವಕೃಪೆಯ ಕಾಲಾವಧಿ ಆತ್ಮೀಕ ಇಸ್ರಾಯೇಲ್ಯರ ಉನ್ನತ ಕರೆಯ ಕಾಲಾವಾಧಿಯಾಗಿದೆ ಎಂಬುದಕ್ಕೆ ಅಪೋಸ್ತಲರ ಸಾಕ್ಷ್ಯ. ಸುವಾರ್ತಾ ಯುಗದ ವಿಸ್ತಾರವು ಈ ರೀತಿಯಾಗಿ ಪರೋಕ್ಷವಾಗಿ ಆದರೂ ಸ್ಪಷ್ಟವಾಗಿ ತೋರಿಸಲಾಗಿದೆ. ಸತ್ಯವೇದದ ಕಾಲಗಣನೆಗಳ, ಜೂಬಿಲಿ ಸಾಕ್ಷ್ಯ, ಅನ್ಯಜನರ ಸಮಯಗಳು ಮತ್ತು ಈ ಸಮಾನಾಂತರವಾದ, ಉತ್ತರಿಸಲಾಗದ, ನಿರ್ಧಾರಾತ್ಮಕವಾದ ಮತ್ತು ತೃಪ್ತಿಕರವಾದ ಸಂಗತಿಗಳುಳ್ಳ ಇತರೆ ಪ್ರವಾದನೆಗಳೊಂದಿಗೆ ಇರುವ ಸಾಮರಸ್ಯ.**

ಹಿಂದಿನ ಅಧ್ಯಾಯದಲ್ಲಿ ಇಸ್ರಾಯೇಲ್ ರಾಷ್ಟ್ರದೊಡನೆ ದೇವರ ವ್ಯವಹಾರವು ಒಂದು ಸಾಂಕೇತಿಕವಾದ ಲಕ್ಷಣವನ್ನು ಹೊಂದಿದೆ ಎಂಬ ಈ ಸತ್ಯವನ್ನು ಉಲ್ಲೇಖಿಸಲಾಗಿದೆ; ಆದಾಗ್ಯೂ ಈ ಪ್ರಕರಣವು ಎಷ್ಟು ಪೂರ್ಣವಾಗಿದೆ ಎಂಬದರ ಬಗ್ಗೆ ಕೆಲವರಿಗೆ ಸಾಕಷ್ಟು ಕಲ್ಪನೆ ಇದೆ. ಸಂಶಯಾತೀತವಾಗಿ ಹಲವರು ಗುರುತಿಸಿದಂತೆ, ಅಪೋಸ್ತಲರು ವಿಶಿಷ್ಟವಾಗಿ, ಪೌಲನು, ಇದನ್ನು ಕ್ರೈಸ್ತ ಸಭೆಗೆ ಬೋಧಿಸುವಾಗ, ಮೇಲಿಂದ ಮೇಲೆ ಯೆಹೂದ್ಯ ಮತ್ತು ಕ್ರೈಸ್ತ ಯುಗಗಳಲ್ಲಿ ಎದ್ದು ಕಾಣುವ ನಮೂನೆ ಮತ್ತು ಪ್ರತಿಸಂಕೇತದ ಕೆಲವು ಲಕ್ಷಣಗಳನ್ನು ಉಲ್ಲೇಖಿಸಿದ್ದಾನೆ. ಆದರೆ ಅಪೋಸ್ತಲರ ಬೋಧನೆಗಳ ಬಗ್ಗೆ ನಿಕಟವಾದ ಲಕ್ಷ್ಯವಿಡುವಾಗ, ಆತನು ಯೆಹೂದ್ಯರ ಆರ್ಥಿಕ ಸ್ಥಿತಿಯ ಕೆಲವೊಂದು ದೃಷ್ಟಾಂತಗಳನ್ನು ಸೆಳೆದಿರುವುದು ಮಾತ್ರವಲ್ಲದೆ ತನ್ನ ನಿಕಟವಾದ ವಿವೇಚನೆಗಳಲ್ಲಿ ಆತನು ಸಮಗ್ರ ಯೆಹೂದ್ಯ ಪದ್ಧತಿಯನ್ನು ದೈವಿಕವಾಗಿ ನೇಮಿಸಲ್ಪಟ್ಟದ್ದು (ಆ ಪದ್ಧತಿಯ ಭಾಗವಲ್ಲದ 'ಹಿರಿಯರ ಸಂಪ್ರದಾಯ'ವನ್ನು ಪೂರ್ಣವಾಗಿ ಅಲಕ್ಷ್ಯಿಸಿ), ಆ ಎಲ್ಲಾ ಲಕ್ಷಣಗಳಲ್ಲಿ ಅದು ಆಗ ಉದಯಿಸುತ್ತಿದ್ದ ಕ್ರೈಸ್ತಯುಗ ದೈವೇಚ್ಛೆಗಳ ನಮೂನೆಯಾಗಿದ್ದು, ಸ್ಪಷ್ಟವಾಗಿ ಸುವಾರ್ತಯುಗದಲ್ಲಿ ಕ್ರೈಸ್ತ ಸಭೆಯನ್ನು ಸ್ಪಷ್ಟವಾಗಿ ನಕ್ಷೆಗೊಳಿಸಿ ಅದರ ಭವ್ಯವಾದ ಕಾರ್ಯವನ್ನು ಸಹಸ್ರಮಾನ ಯುಗದಲ್ಲಿ ಸೂಚಿಸುವುದಾಗಿದೆ.

ಹಲವರು ಯೆಹೂದ್ಯ ಮತ್ತು ಕ್ರೈಸ್ತ ಯುಗವು ಒಂದೇ ಮತ್ತು ದೇವರು ಕ್ರೈಸ್ತ ಸಭೆಯನ್ನು ಮಾನವ ಅಸ್ತಿತ್ವದ ಮೊದಲಿನಿಂದಲೂ ಆಯ್ಕೆಮಾಡುತ್ತಿದ್ದನು ಎಂದು ಭಾವಿಸುತ್ತಾರೆ. ಇದು ಘೋರವಾದ ತಪ್ಪಾಗಿದ್ದು ಅನೇಕ ಸತ್ಯಗಳಿಗೆ, ತಿಳುವಳಿಕೆಗಳಿಗೆ ಮೋಡ ಕವಿಸಿ ಮರೆಮಾಡುವುದಾಗಿದೆ. ಯೇಸುಕ್ರಿಸ್ತನು ತನ್ನ ದೇಹವಾಗಿರುವ ಕ್ರೈಸ್ತ ಸಭೆಯ ಶಿರಸ್ಸೂ ಮತ್ತು ಮಾರ್ಗದರ್ಶಿಯೂ ಆಗಿದ್ದಾನೆ (ಎಫೆಸ 5:23; ಕೊಲೊಸ್ಸೆ 1:24). ಆದುದರಿಂದ ಆತನಿಗಿಂತ ಮೊದಲು ಯಾರೂ ಕ್ರೈಸ್ತ ಸಭೆಯ ಸದಸ್ಯರಾಗಿರಲಿಲ್ಲ. ಯಾರಾದರೂ ಆತನಿಗಿಂತ ಮುಂದೆ ಹೋಗಿದ್ದರೆ, ಆತನನ್ನು ಸರಿಯಾದ ಅರ್ಥದಲ್ಲಿ ಮುನ್‌ಸೂಚಕ ಎಂದು ವಿನ್ಯಾಸ ಗೊಳಿಸುವಂತಿಲ್ಲ. ಆತನೊಂದಿಗೆ ಜೊತೆ ಸಮರ್ಪಕರೂ ಬಾಧ್ಯಸ್ತರೂ ಆಗುವ ಮಹಾ ಕರೆಯು ಇತರೆ ಯುಗಗಳಲ್ಲಿ ತಿಳಿಸಲ್ಪಟ್ಟಿರಲಿಲ್ಲ (ಎಫೆಸ 3:2,5,6), ನಮಗಾಗಿ ಆತನ ಈಡು ಬಲಿಯಲ್ಲಿ ಚೆಲ್ಲಿದ ಅಮೂಲ್ಯ ರಕ್ತಕ್ಕಿಂತ ಮೊದಲು ಬದುಕಿ ತೀರಿಹೋದ ಒಳ್ಳೆಯ ಜನರಿಗೆ ಈ 'ಮಹಾಕರೆ'ಯ ಬಗ್ಗೆ ಏನೂ ತಿಳಿದಿರಲಿಲ್ಲ. ದೇವರ ಬಹುಮಾನಗಳೂ ಮತ್ತು ಕರೆಗಳು ಅರ್ಹವಲ್ಲದ ಕೃಪೆಗಳಾಗಿರುವುದರಿಂದ, ಇತರೆ ಯುಗಗಳವರಿಗೆ ಆ ಕೃಪೆಗಳನ್ನು ಅವರಿಗೆ ನೀಡದಿರುವುದು ಅನ್ಯಾಯುವೇನಲ್ಲ. ಹಿಂದಿನ ಯುಗಗಳವರಿಗೆ ಕೊಟ್ಟಿರುವ ಕರೆ ಮತ್ತು ಕೃಪೆಯು ಅವರಿಗೆ ಮುಂದಿನ ಯುಗಗಳಲ್ಲಿ ಅವು ಭೂಲೋಕದ ಗೌರವ ಮತ್ತು ಭೂಲೋಕದ ಮಹಿಮೆ ಮತ್ತು ಭೂಲೋಕದ ಜೀವಿಗಳಿಗಾಗಿ ನಿತ್ಯಜೀವಗಳಾಗಿರುವದು. ಆದರೆ ಸುವಾರ್ತಾ ಯುಗದಲ್ಲಿರುವವರಿಗೆ ಕೊಟ್ಟಿರುವ ಕರೆ ಮತ್ತು ಅನುಗ್ರಹವು ಪರಲೋಕದ ಗೌರವ ಮತ್ತು ಮಹಿಮೆಗಳಾಗಿವೆ. ಮಾನವ ಸ್ವಭಾವದಿಂದ ದೈವಿಕ ಸ್ವಭಾವಕ್ಕೆ ಬದಲಾವಣೆ, ಕ್ರಿಸ್ತನ ಜೊತೆ ಬಾಧ್ಯಸ್ತರು, ಸಹ– ಸೇವಕರೂ ಆಗಿ ಅಧಿಕಾರ, ಗೌರವ ಮತ್ತು ಪರಲೋಕ ಭೂಲೋಕಗಳಲ್ಲಿ ಪ್ರಭುತ್ವಪಡೆದು ಕೊಳ್ಳುವುದೂ ಆಗಿದೆ. ಹೀಗಾಗಿ ಕ್ರೈಸ್ತ ಸಭೆಯು ಹೊರಗೆ ಕರೆಯಲ್ಪಟ್ಟು, ಈ ಲೋಕದಿಂದ ಪ್ರತ್ಯೇಕಿಸಲ್ಪಟ್ಟಿದ್ದು ಈ ಯುಗದಲ್ಲಿ ಅಭಿವೃದ್ಧಿ ಹೊಂದಿಕೊಂಡಿದೆ ಮತ್ತು ಮುಂಬರುವ ಯುಗಗಳಲ್ಲಿ ಯೆಹೋವನ ಕಾರ್ಯಭಾರಿಗಳಾಗಿ ಆತನ ಯುಗಗಳ ಮಹಾ

ಯೋಜನೆಗಳನ್ನು ಸಂಪೂರ್ಣವಾಗಿ ನೆರವೇರಿಸುವುದಾಗಿದೆ – ಈ ಯೋಜನೆಯು ಮಾನವರ ಹಿತವನ್ನು ಮಾತ್ರವಲ್ಲದೆ, ಭೂಪರಲೋಕಗಳಲ್ಲಿನ ಎಲ್ಲಾ ಜೀವಿಗಳ ಹಿತರಕ್ಷಣೆ ಮಾಡುವುದಾಗಿದೆ – ಹಿಂದಿನ ಯುಗಗಳಲ್ಲಿ ಅವರ ತರಬೇತಿ ಮತ್ತು ಶಿಕ್ಷಣಗಳಿಗೆ ಸಿದ್ಧತೆಗಳನ್ನು ಮಾಡಿಕೊಂಡಿರುವುದು ಅದ್ಭುತವಾಗಿದೆ. ದೈವಿಕ ಮಹಿಮೆಗೆ ಭಾಗಿದಾರರು, ಈ ಯುಗದಲ್ಲಿ ಶಿಕ್ಷಣ ಹೊಂದಿ, ಶಿಸ್ತು ಪಡೆದು, ಮಾರ್ಗದರ್ಶನ ಹೊಂದಿ, ದೀರ್ಘವಾದ, ಕಷ್ಟಗಳ, ಇಕ್ಕಟ್ಟಾದ ಮಾರ್ಗದಲ್ಲಿ, ನಮ್ಮ ಕರ್ತನೂ ಮಾರ್ಗದರ್ಶಕನೂ ಮುಂದಾಳುವು ತೆರೆದ ಮಾರ್ಗದಲ್ಲಿ, ಸಂರಕ್ಷಿಸಲ್ಪಟ್ಟವರಾಗಿ, ಆತನು ತೋರಿದ ಮಾದರಿಯಲ್ಲಿ ಆತನ ಹೆಜ್ಜೆ ಜಾಡಿನಲ್ಲಿ ನಡೆದದ್ದು ಕಡಿಮೆ ಅದ್ಭುತವೇನಲ್ಲ (1 ಪೇತ್ರ 2:21).

ಯೇಸು ತನ್ನ ಮೂರುವರೆ ವರ್ಷದ ಸೇವಾವಧಿಯನ್ನು ಕೆಲವು ಶಿಷ್ಯರುಗಳು ಇಸ್ರಾಯೇಲ್ಯರಿಂದ, ಕ್ರೈಸ್ತಸಭೆಯ ಕೇಂದ್ರಭಾಗವಂತೆ ಒಟ್ಟುಗೂಡಿಸುವುದರಲ್ಲಿ ಅವರನ್ನು ತರಬೇತುಗೊಳಿಸಿ, ಬೋಧಿಸುವುದರಲ್ಲಿ ಕಳೆದನು. ಅವರನ್ನು ಒಬ್ಬಂಟಿಗರನ್ನಾಗಿ ಈ ಲೋಕದಲ್ಲಿ ಬಿಡಬೇಕಾಗಿ ಬಂದಾಗ ಆ ಸಮಗ್ರ ಯುಗದಲ್ಲಿ ಸಭೆಯನ್ನು ಎಲ್ಲಾ ಸತ್ಯದಲ್ಲಿ ಮಾರ್ಗದರ್ಶನ ಮಾಡಲು, ಮತ್ತು ಬರಲಿರುವ ಸಂಗತಿಗಳನ್ನು ತೋರಿಸುವಂತೆ, ಮತ್ತು ಆತನು ಕಲಿಸಿ ಕೊಟ್ಟಿರುವುದರ ಮತ್ತು ಪಂಚಾಶತ್ತಮ ದಿನದಂದು ಯಾವ ವಾಗ್ದಾನವು ಪರಿಶೀಲಿಸುವಂತೆ ವಾಗ್ದಾನ ಮಾಡಲಾಯಿತೋ ಅವುಗಳ ತಾಜಾ ನೆನಪುಗಳು ಬರುವಂತೆ ಅವರಿಗೆ ಪವಿತ್ರಾತ್ಮನನ್ನು ಸಹಾಯಕನನ್ನಾಗಿ ಕಳುಹಿಸುವ ವಾಗ್ದಾನ ಮಾಡಿದನು. “ಇವರೆಲ್ಲರೂ ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳಿಸಲ್ಪಡುವ ಊಳಿಗದ ಆತ್ಮಗಳಲ್ಲವೋ?” (ಇಬ್ರಿಯ 1:14) ಎಂದು ಸಹ ಬರೆದದೆ. ನಮ್ಮ ಕರ್ತನ ವಿಶೇಷವಾದ ಕಾಳಜಿ ಯುಗಾಂತ್ಯದವರೆಗೂ ಅವರ ಮೇಲಿರುವುದಾಗಿತ್ತು (ಮತ್ತಾಯ 28:20). ಅನೇಕರು ಆಲೋಚಿಸುವಂತೆ ಕಂಡುಬರುವ ಅಪೋಸ್ತಲರ ಎಲ್ಲಾ ಬರಹಗಳೂ ಸಭೆಯವರಿಗೆ ಸಂಭೋಧಿ ಸಲ್ಪಟ್ಟಿದೆಯೇ ಹೊರತು ಈ ಲೋಕದವರಿಗೆ ಅಲ್ಲ: ಅವುಗಳಲ್ಲಿ ಈ ಯುಗದಲ್ಲಿ ಇಕ್ಕಟ್ಟಿನ ಹಾದಿಯಲ್ಲಿ ನಡೆಯುತ್ತಿರುವವರಿಗಾಗಿ ವಿಶೇಷ ಬೋಧನೆಗಳು, ಪ್ರೋತ್ಸಾಹಗಳು ಮತ್ತು ಎಚ್ಚರಿಸುವ ಪ್ರಬೋಧನೆಗಳು ತುಂಬಿವೆ. ದೇವರು ನಮ್ಮ ಕರ್ತನಿಗೆ ಕೊಟ್ಟ ಪ್ರಕಟನೆಗಳನ್ನು, ಆತನು ಮಹಿಮಾ ಪದವಿಗೇರಿದ ಮೇಲೆ ತನ್ನ ಸಭೆಗೆ ತಿಳಿಸುವಂತೆ ಆತನ ಸೇವಕನಾದ ಯೋಹಾನನಿಗೆ ನೀಡಿದ, ಅನೇಕ ಸಂಕೇತಗಳ ಮೂಲಕ ಸೂಚಿಸಿದ ಪ್ರಕಟನೆಗಳೂ ಅದರಲ್ಲಿವೆ (ಪ್ರಕಟನೆ 1:1). ಪವಿತ್ರ ಜನರ ಮೂಲಕ ಪೂರ್ವ ಕಾಲದಲ್ಲಿ ಮುಂತಿಳಿಸಿದ ಪ್ರವಾದನೆಗಳೂ ಅವರಿಗಾಗಿ ಅಲ್ಲ, ಅವರ ಕಾಲದ ಇತರರಿಗಾಗಿಯೂ ಅಲ್ಲ, ಆದರೆ ಪ್ರತ್ಯೇಕವಾಗಿ ಕ್ರೈಸ್ತ ಸಭೆಯ ಬೋಧನೆಗಾಗಿ ಇವೆ – 1 ಪೇತ್ರ 1:12.

ಈ ಅಧ್ಯಾಯದಲ್ಲಿ ನಾವು ಸಮಸ್ತ ಯೆಹೂದಿ ದೇಶವು ಆ ಯುಗದಲ್ಲಿ ದೇವರ ನಿರ್ದೇಶಾನುಸಾರ ಅರಿವಿಲ್ಲದೆಯೇ ತನ್ನನ್ನು ತೊಡಗಿಸಿಕೊಂಡಿತ್ತೆಂಬುದನ್ನು ತೋರಿಸುವುದು ನಮ್ಮ ಉದ್ದೇಶವಾಗಿದ್ದು, ನಮ್ಮ ಈ ಉಪದೇಶವನ್ನು ಒದಗಿಸುವಲ್ಲಿ ರಕ್ಷಣಾ ಯೋಜನೆಯ ಸಾಂಕೇತಿಕ ದೃಷ್ಟಿಕೋನವು ಅದರ ಎಲ್ಲಾ ಕಾರ್ಯಗಳಲ್ಲಿ, ನಾವು ಈಗ ತಾನೇ ಜೂಬಿಲಿಗಳಲ್ಲಿ ನೋಡಿದಂತೆ ಭೂಲೋಕದ ಎಲ್ಲಾ ಕುಟುಂಬಗಳೂ ಈ ಯೋಜನೆಯ ಆಶೀರ್ವಾದ ಹೊಂದಿಕೊಳ್ಳುವ ಅಂತಿಮ ನೆರವೇರಿಕೆಯನ್ನು ಸೂಚಿಸುವುದಾಗಿದೆ. ಹೆಚ್ಚಾದ ರೀತಿಯಲ್ಲಿ ವಿಶೇಷವಾಗಿ ಸಭೆಗೆ ಒದಗಿಸಿರುವಂತೆ ಸತ್ಯದ ಈ ಉಗ್ರಾಣವನ್ನು ಮೇಲೆ ಸೆಳೆಯುವಾಗ ದೇವರ ಆತ್ಮವು ನಮಗೆ ಉಣಬಡಿಸುತ್ತದೆ ಮತ್ತು ಕ್ರಮೇಣವಾಗಿ ನಮ್ಮನ್ನು ಆತನ ಯೋಜನೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಂತೆ ಜ್ಞಾನವು ನಮಗೆ ತ್ವರಿತವಾಗಿ ಅಗತ್ಯವಾಗುವಂತೆ ನಡೆಸುತ್ತದೆ. ಮತ್ತು ಈ ಮಹಾ ಉಗ್ರಾಣದಿಂದ ದೇವರು ಈಗ ನಮಗೆ ಈ ಸುಗ್ಗಿಯ ಕಾಲದಲ್ಲಿ ನೇರವೇರುವುದರ ಬಗ್ಗೆ ಅಗತ್ಯವಾದ ವಿಶೇಷವಾದ ಬೆಳಕನ್ನು ಮತ್ತು ಅಗತ್ಯವಾದ ಆಹಾರವನ್ನು ಒದಗಿಸುತ್ತಾನೆ, ಅಂಥವುಗಳು ಹಿಂದಿನ ಮತ್ತು ಮುಂದಿನ ಯುಗಗಳ ಎಲ್ಲಾ ಇತರೆ ಜನಗಳನ್ನು ದಾಟಿ ಕ್ರೈಸ್ತ ಸಭೆಗೆ ದೇವರ ಧಾರಾಳವಾದ ಒದಗಿಸುವಿಕೆಯಾಗಿರುವುದರಿಂದ, ನಾವು ಜ್ಞಾನದಲ್ಲಿರುವುದು ಆತನ ಅಂದಾಜಿನಲ್ಲಿ ಎಷ್ಟು ಮುಖ್ಯವಾಗಿರಬಹುದು, ಹಾಗಾಗಿ, ನಾವು ಅವನ್ನು ನಮ್ಮದನ್ನಾಗಿ ಪಡಕೊಳ್ಳಲು ಎಷ್ಟೋ ಕಾತರರಾಗಿರಬೇಕು.

ನಾವು ಈ ಅಧ್ಯಾಯದಲ್ಲಿಯಾಗಲೀ, ಸಂಪುಟದಲ್ಲಿಯಾಗಲೀ ದೇವರು ಇಸ್ರಾಯೇಲ್ಯರೊಡನೆ ದೇವದರ್ಶನ ಗುಡಾರ ಮತ್ತು ದೇವಾಲಯಗಳ, ಮತ್ತು ಅವುಗಳ ಧಾರ್ಮಿಕ ವಿಧಿಗಳು ಮತ್ತು ಯಜ್ಞ ಯಾಗಾದಿಗಳು ಮುಂತಾದವುಗಳ ಬಗ್ಗೆ ಅಳವಡಿಸಿದ ವ್ಯವಹಾರಗಳ ಸಾಂಕೇತಿಕ ಲಕ್ಷಣಗಳ ಸುದೀರ್ಘವಾದ ಪರೀಕ್ಷೆಯನ್ನು ಪ್ರವೇಶಿಸುತ್ತಿಲ್ಲವಾದುದರಿಂದ ನಾವೀಗ ಯೆಹೂದ್ಯರ ಮತ್ತು ಕ್ರೈಸ್ತರ ನಡುವಣ ದೈವಸಂಕಲ್ಪ ಹಂಚಿಕೆಗಳ ಸಂಕೇತ ಮತ್ತು ಪ್ರತಿಸಂಕೇತಗಳ ಬಗ್ಗೆ ಇರುವ ಕೆಲವೊಂದು ಅನುರೂಪತೆಗಳಿಗೆ ನಿಕಟವಾದ ಗಮನವನ್ನು ಆಹ್ವಾನಿಸುವವರಾಗಿದ್ದೇವೆ. ಯಾಕೆಂದರೆ, ಯೆಹೂದ್ಯ ಸಭೆಯು ಪೂರ್ವಭಾವಿಯಾಗಿ ಊಹಿಸಿದಂತೆ ಈಗ ಕ್ರೈಸ್ತ ಸಭೆಯು ಇವನ್ನು ನಿಜವಾಗಿಯೂ ಅನುಭವಿಸುತ್ತಿದೆ ಮತ್ತು ನೆರವೇರಿಸುತ್ತಿದೆ. ಈ ಅನುರೂಪತೆಗಳ ಅನೇಕ ಲಕ್ಷಣಗಳು ತಮ್ಮ ಗುಣಲಕ್ಷಣಗಳಲ್ಲಿ ಮಾತ್ರವಲ್ಲ, ಅದರ ಕಾಣಿಸಿ ಕೊಳ್ಳುವಿಕೆಯ ಸಂಬಂಧಿತ ಸಮಯಗಳಲ್ಲಿಯೂ ಸಮಾನಾಂತರವುಳ್ಳವುಗಳಾಗಿವೆ. ಅವರ ರಾಷ್ಟ್ರೀಯ

ಇತಿಹಾಸದಲ್ಲಿಯೂ ಸಹಾ, ಮತ್ತು ಆ ರಾಷ್ಟ್ರದ ಯಾವುದೇ ವಿಶಿಷ್ಟ ವ್ಯಕ್ತಿಗಳ ಚರಿತ್ರೆಯಲ್ಲಿಯೂ ಅನುರೂಪತೆಗಳು ಗುರುತಿಸಿರುವುದನ್ನು ನಾವು ಪರಿಶುದ್ಧ ಬರಹಗಳಲ್ಲಿ ಕಾಣುತ್ತೇವೆ. ಇವುಗಳಲ್ಲಿ ಕೆಲವನ್ನು ಕ್ರೈಸ್ತ ಚಿಂತಕರು ಬಹಳ ಹಿಂದೆಯೇ ಗಮನಿಸಿದ್ದರು ಮತ್ತು ಉಳಿದವುಗಳು ಸಮಗ್ರವಾಗಿ ಅಲಕ್ಷ್ಯಿಸಲ್ಪಟ್ಟಿದ್ದವು. ಇಲ್ಲಿ ನಮಗೆ ಸುಂದರವಾದ ಮತ್ತು ಫಲಭರಿತವಾದ ಆಲೋಚನಾ ಮತ್ತು ಅಧ್ಯಯನಾ ಕ್ಷೇತ್ರವು ನಮಗೆ ತೆರೆದುಕೊಳ್ಳುತ್ತದೆ.

ಪೌಲನು ಇಸ್ರಾಯೇಲ್ ಸಭೆಯನ್ನು ದೈಹಿಕ ಸಭೆಯನ್ನಾಗಿಯೂ, ಕ್ರೈಸ್ತ ಸಭೆಯನ್ನು ದೇವರ ಇಸ್ರಾಯೇಲ್ಯರೆಂತಲೂ ವಿಶೇಷಿಸುತ್ತಾನೆ (1 ಕೊರಿಂಥ 10:18; ಗಲಾತ್ಯ 6:16). ಈ ಕಾರಣದಿಂದ ನಾವುಗಳು ಅವರನ್ನು ದೈಹಿಕ ಮತ್ತು ಆತ್ಮೀಕ ಇಸ್ರಾಯೇಲ್ಯರೆಂದು ಸರಿಯಾದ ರೀತಿಯಲ್ಲಿ ವಿಶ್ಲೇಷಿಸಬಹುದಾಗಿದೆ. ಆತ್ಮೀಕ ಮನೆಯ ಉನ್ನತ ಸಮಕ್ಷೇತ್ರವು ಸಹಾ ಅಪೋಸ್ತಲನು ಶಾರೀರಿಕ ಇಸ್ರಾಯೇಲ್ಯರನ್ನು ಸೇವಕರ ಮನೆಯೆಂದು (ಕುಟುಂಬವೆಂದು), ಆತ್ಮೀಕ ಇಸ್ರಾಯೇಲ್ಯರನ್ನು ಮಕ್ಕಳ ಮನೆಯೆಂದು ವಿವರಿಸುವಾಗ ಸೂಚಿತವಾಗಿದೆ (ಇಬ್ರಿಯ 3:5,6; ರೋಮಾ. 8:14). ದೈಹಿಕ ಮನೆಯು ಅನೇಕ ಮಾರ್ಗಗಳಲ್ಲಿ ಗೌರವಾನ್ವಿತ ಸೇವಕರ ಆತ್ಮೀಕ ಮನೆಯಾಗಿತ್ತು, ಆದರೆ ಮುಖ್ಯವಾಗಿ, ಅದರಲ್ಲಿ ಅವರು ಪ್ರಜ್ಞೆಯಿಲ್ಲದೆ, ದೇವರ ಅಪ್ಪಣೆಯ ಮೇರೆಗೆ, ಅವರು ಅಲ್ಲಿ ಆತ್ಮೀಕ ಸಂಗತಿಗಳ ಮೂಕಾಭಿನಯದ ದೃಷ್ಟಾಂತಗಳಿಂದ ಒದಗಿಸಿರಲಾಗಿ, ಅದನ್ನು ಅಧ್ಯಯನ ಮಾಡಿದ್ದರೆ, ಗಮನ ಕೊಟ್ಟರೆ ಮಕ್ಕಳ ಮನೆಯನ್ನು ಆಶೀರ್ವದಿಸಿ ಮತ್ತು ಜ್ಞಾನೋದಯವನ್ನುಂಟು ಮಾಡುತ್ತದೆ.

ಎರಡೂ ಪ್ರಕರಣಗಳಲ್ಲಿಯೂ ಹೆಸರಿಗೆ ಮಾತ್ರದವರು ಮತ್ತು ನಿಜವಾದ ಇಸ್ರಾಯೇಲ್ಯರು ದೇವರ ಅಂದಾಜಿನ ಪ್ರಕಾರ ಇರುವವರಾಗಿದ್ದಾರೆ. ಮನುಷ್ಯರ ಕಣ್ಣಿಗೆ ಅವರು ಒಂದೇ ಎಂದು ಕಂಡುಬಂದರೂ; ಹೆಸರು ಮಾತ್ರದವರ ಮತ್ತು ನಿಜವಾದವರ ಸರಿಯಾದ ವ್ಯತ್ಯಾಸವನ್ನು ಅಂತ್ಯದವರೆಗೆ ಅಥವಾ ಅವರ ಆಯಾ ಕಾಲದ ಸುಗ್ಗಿಯ ಕಾಲದವರೆಗೆ ಮಾಡಲಾಗದು. ಆಗ ಯುಕ್ತವಾದ ಸತ್ಯವು ಬೆಳಕಿಗೆ ಬಂದು ಬೇರ್ಪಡಿಸುವಿಕೆಯನ್ನು ನೆರವೇರಿಸುತ್ತದೆ ಮತ್ತು ಯಾರು ಸತ್ಯವಾದವರೋ ಅವರನ್ನೂ, ಮತ್ತು ಕೇವಲ ಹೆಸರು ಮಾತ್ರದವರನ್ನೂ ಪ್ರಕಟಿಸುತ್ತದೆ. ಶಾರೀರಿಕ ಮನೆಯ ಬಗ್ಗೆ ಪೌಲನು "ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ" (ರೋಮಾ. 9:6) ಎಂದಿದ್ದಾನೆ. ನಮ್ಮ ಕರ್ತನು ಸಹ ಇದೇ ಸತ್ಯವನ್ನು ಮಾನ್ಯ ಮಾಡುವಂತೆ ನತಾನಿಯೇಲನ ಬಗ್ಗೆ "ಇಗೋ ಇವನು ನಿಜವಾದ ಇಸ್ರಾಯೇಲ್ಯನು; ಇವನಲ್ಲಿ ಕಪಟವಿಲ್ಲ" (ಯೋಹಾನ 1:47) ಎಂದಿದ್ದಾನೆ. ಮಾತ್ರವಲ್ಲದೆ ಸುಗ್ಗಿಯ ಕಾಲದಲ್ಲಿ ಆತನು ನಿಜವಾದವರನ್ನು ಹೆಸರು ಮಾತ್ರದವರಿಂದ ಪ್ರತ್ಯೇಕಿಸಿ ತುಲನಾತ್ಮಕವಾಗಿ ಗೋಧಿಯು ಒಂದು ಮುಷ್ಟಿ ತುಂಬ ಮಾತ್ರ, ಆದರೆ ಹೊಟ್ಟು ಹೆಚ್ಚು ಕಡಿಮೆ ದೇಶವನ್ನೆಲ್ಲಾ ಆಕ್ರಮಿಸುವುದಾಗಿದ್ದರೂ ನಿಜವಾದವರನ್ನು ಬೆಲೆಯುಳ್ಳ ಗೋಧಿಯೆಂದೂ, ಉಳಿದವರು ಕೇವಲ ಹೊಟ್ಟಿಗೆ ಸಮಾನರೆಂದೂ ಹೇಳಿದ್ದಾನೆ. ಇದೇ ರೀತಿಯ ಅನುಪಾತದಲ್ಲಿ ಮತ್ತು ಅದೇ ರೀತಿಯ ಚಿತ್ರಣದ ಅಡಿಯಲ್ಲಿ, ಹೆಸರು ಮಾತ್ರದವರು ಮತ್ತು ಸುವಾರ್ತಾ ಯುಗದ ನಿಜವಾದ ಇಸ್ರಾಯೇಲ್ಯ ಸದಸ್ಯರುಗಳು ಇವರುಗಳನ್ನು ಸೂಚಿಸಲಾಗಿದೆ; ಮತ್ತು ಅವರ ಬೇರ್ಪಡಿಸುವಿಕೆಯು ಸಹಾ ಸುಗ್ಗಿಯ ಕಾಲದಲ್ಲಿ, ಈ ಯುಗದ ಅಂತ್ಯದಲ್ಲಿ ಆಗುವುದಾಗಿದೆ. ಆಗ ಮಾತ್ರವೇ ಗೋಧಿಯು ಗಣನೀಯ ಪ್ರಮಾಣದಲ್ಲಿ ಇರುವುದಾಗಿದ್ದರೂ, ಚಿಕ್ಕ ಹಿಂಡಾಗಿದ್ದರೂ, ಹೆಸರಿಗೆ ಮಾತ್ರ ಆತ್ಮೀಕರೆನಿಸಿಕೊಳ್ಳುವವರ ಗುಂಪುಗಳಿಂದ ಬೇರ್ಪಡಿಸ ಲಾಗುತ್ತದೆ, ಹೆಚ್ಚಿನ ಸಂಖ್ಯೆಯವರು ಹಣಜಿಗಳಂತಿದ್ದು, ನಿಜವಾದ ಗೋಧಿಯ ಕಾಳು ಆಗದೇ ಇರುವುದರಿಂದ ಅವರು ಕರೆಯಲ್ಪಟ್ಟ ಮುಖ್ಯ ಕೃಪೆಗೆ ಅನರ್ಹರೆಂದು ತಿರಸ್ಕರಿಸಲ್ಪಡುತ್ತಾರೆ ಮತ್ತು ಕರ್ತನ ರತ್ನಾಭರಣ ಎಣಿಸಲ್ಪಡುವುದಿಲ್ಲ – ರೋಮಾ. 9:27; 11:5; ಲೂಕ 12:32; ಮತ್ತಾಯ 3:12;13:24–40).

ಇಸ್ರಾಯೇಲ್ಯರ ಶಾರೀರಿಕ ಮನೆತನದ ಶಿರಸ್ಸು ಇಸ್ರಾಯೇಲ್ಯನೆಂದು ಕರೆಯಲ್ಪಟ್ಟ ಯಾಕೋಬನು. ಇಸ್ರಾಯೇಲ್ಯ ಅಂದರೆ ದೇವರ ರಾಜಕುಮಾರನು ಎಂದರ್ಥ. ಆತನ ಹನ್ನೆರಡು ಮಂದಿ ಮಕ್ಕಳ ಮೂಲಕ ಆತನು ತನ್ನ ಹೆಸರಿರುವ ಅಂದರೆ 'ಯಾಕೋಬನ ಮನೆ' ಅಥವಾ 'ಇಸ್ರಾಯೇಲನ ಮನೆ' ಎಂಬ ಮನೆತನವನ್ನು ಸ್ಥಾಪಿಸಿದನು. ಅದರಂತೆ ಆತ್ಮೀಕ ಮನೆತನದ ಯಜಮಾನನು ಕ್ರಿಸ್ತನು, ಆತನು ಅದನ್ನು ತನ್ನ ಹನ್ನೆರಡು ಮಂದಿ ಅಪೋಸ್ತಲರ ಮೂಲಕ ಸ್ಥಾಪಿಸಿದನು. ಈ ಮನೆತನವು ತನ್ನ ಸಂಸ್ಥಾಪಕನ ಹೆಸರನ್ನೂ ಅಂದರೆ 'ಕ್ರಿಸ್ತನ ಸಭೆ' ಎಂಬ ಹೆಸರನ್ನು ಇಟ್ಟುಕೊಂಡಿದೆ. ಒಂದು ಕಾಲದಲ್ಲಿ, ದೇವರು ದೈಹಿಕ ಇಸ್ರಾಯೇಲ್ಯರನ್ನು ಮೊದಲಿಗೆ ಕರೆದನು; ಆದರೆ ಕೃಪೆಯ ಅಂಶದಲ್ಲಿ, ಮತ್ತು ಗ್ರಹಿಸಿಕೊಳ್ಳುವ ಕಾಲದಲ್ಲಿ ಆತ್ಮೀಕ ಇಸ್ರಾಯೇಲ್ಯರೇ ಮೊದಲಿಗೆ ಬರುತ್ತಾರೆ. ಈ ರೀತಿಯಲ್ಲಿ ಮೊದಲಿನವರು ಕಡೆಯವರಾಗುತ್ತಾರೆ, ಮತ್ತು ಕಡೆಯವರು ಮೊದಲಿಗರಾಗುವರು (ಲೂಕ 13:30). ಪರಿಶುದ್ಧ ಬರಹಗಳು ಈ ಎರಡು ಮನೆತನಗಳಲ್ಲಿ ಇಸ್ರಾಯೇಲ್ಯರನ್ನು ಅಬ್ರಹಾಮನ ದೈಹಿಕ ಸಂತಾನ ಎಂಬುದಾಗಿಯೂ ಮತ್ತು ಪರಲೋಕದ ತಂದೆಯಾದ ಯೆಹೋವನ ಆತ್ಮೀಕ ಸಂತಾನವೆಂಬುದಾಗಿಯೂ – ಪರಲೋಕದ ತಂದೆಯುನ್ನು ಅಬ್ರಹಾಮನು ಸಂಕೇತಿಸುವುದರಲ್ಲಿ ಸ್ಪಷ್ಟವಾಗಿ ಗುರುತಿಸುತ್ತದೆ.

ಕೆಲವರು ಊಹೆಯಿಂದ ಇಸ್ರಾಯೇಲ್ಯರ ಎರಡೂ ಮನೆತನವೂ ಎಂದು ವ್ಯಕ್ತಗೊಳಿಸುವುದರ ಗಣ್ಯವಾದ ಸತ್ಯಗಳಿಂದ ಕುರುಡರಾಗಿದ್ದಾರೆ, ಸೋಲೋಮೋನನ ಮಗನಾದ ರೆಹಬ್ಬಾಮನ ಕಾಲದಲ್ಲಿ ವಿಭಾಗಗೊಂಡ ಶಾರೀರಿಕ ಇಸ್ರಾಯೇಲ್ಯರ ಎರಡು ಭಾಗಗಳನ್ನು ಉಲ್ಲೇಖಿಸುತ್ತದೆ ಎಂದು ಭಾವಿಸುತ್ತಾರೆ. ಅಂತಹವರಿಗೆ ನೆನಪು ಮಾಡಬೇಕಾಗಿರುವುದೇನೆಂದರೆ, ಇಸ್ರಾಯೇಲ್ಯರು ಬಾಬೇಲಿಗೆ ಸೆರೆಹೋದ ನಂತರ, ಪಾಲೈಸ್ತೈನಿಗೆ ಅವರು ಪುನಃ ಸ್ಥಾಪಿಸಲು, ಇಸ್ರಾಯೇಲ್ಯರ ಎಲ್ಲಾ ಕುಲಗಳೂ ಆಗ ಸಾರ್ವತಿಕವಾಗಿ ಮೆಡೋ–ಪರ್ಷಿಯಾ ಪ್ರಭುತ್ವದಲ್ಲಿ ಸೆರೆಯಾಗಿರುವಾಗ ಅಸ್ಸೀರಿಯಾ ಅಥವಾ ಬ್ಯಾಬಿಲೋನಿಯಾ ದೇಶವೂ ಸೇರಿದಂಥೆ ಇಸ್ರಾಯೇಲ್ಯರು ಹಿಂತಿರುಗಲು ನಿರ್ಧರಿಸಿಕೊಂಡರೆ ಅವರ ಸ್ವಂತ ದೇಶಕ್ಕೆ ಹಿಂತಿರುಗುವ ಸ್ವಾತಂತ್ರ್ಯವನ್ನು ನೀಡಲಾಯಿತು (ಎಜ್ರ 1–4). ದೇವರ ವಾಗ್ದಾನಕ್ಕೆ ಗೌರವದಿಂದ ಎಲ್ಲಾ ಕುಲಗಳ ನಂಬಿಗಸ್ತ ಇಸ್ರಾಯೇಲ್ಯರು ಅದಕ್ಕೆ ಸಂಬಂಧಿಸಿದ ಪವಿತ್ರ ದೇಶ ಮತ್ತು ಪವಿತ್ರ ನಗರಿಗೆ ಜೊತೆಗೂಡಿಕೊಂಡು ಪಾಲೈಸ್ತೈನಿನ ವಿವಿಧ ನಗರಗಳಿಗೆ ಹಿಂತಿರುಗಿದರು. ಆರಸನ ಕಾರ್ಯಾಲಯವಿದ್ದ ಮುಖ್ಯ ಕುಲವಾದ, ಮತ್ತು ಯಾರ ಗಡಿಯು ಯೆರೂಸಲೇಮಿಗೆ ಸೇರಿತ್ತೋ ಆ ಯೂದ ಕುಲದವರು ಸ್ವಾಭಾವಿಕವಾಗಿ ಅದರ ಪುನರ್ ನಿರ್ಮಾಣದ ಬಗ್ಗೆ ಪ್ರಮುಖ ಪಾತ್ರವನ್ನು ತೆಗೆದುಕೊಂಡರು; ಆದರೆ ಬಾಬೇಲಿನಿಂದ ಆ ಹಿಂತಿರುಗುವಿಕೆಯ ನಂತರ ಇಸ್ರಾಯೇಲ್ ವಿಭಜಿತ ರಾಷ್ಟ್ರವಾಗಿರಲಿಲ್ಲ, ಆದರೆ ಅವರೆಲ್ಲರೂ ಒಂದಾಗಿ, ಒಂದೇ ಜನಾಂಗವಾಗಿ ಜೀವಿಸತೊಡಗಿದರು ಮತ್ತು ಅವರಿಗೆ 'ಇಸ್ರಾಯೇಲ್ಯರು' ಎಂಬ ಅವರ ಮೂಲ ಹೆಸರು ಪುನಃ ದೊರಕಿತು – ನೆಹೆಮೀಯ 11:1, 20: ಎಜ್ರ 2:70.

ಇದನ್ನು ಹೊಸಒಡಂಬಡಿಕೆಯಲ್ಲಿ ಮತ್ತಷ್ಟು ಒತ್ತು ಕೊಟ್ಟು ಹೇಳಲಾಗಿದೆ. ಕರ್ತನು ಮತ್ತು ಅಪೋಸ್ತಲರು ಶಾರೀರಿಕ ಇಸ್ರಾಯೇಲರು ಒಂದೇ ಎಂಬುದಾಗಿ ಹೇಳುತ್ತಾರೆ. ಪೌಲನು 'ಇಸ್ರಾಯೇಲ್ಯರು ಪ್ರಯತ್ನಿಸಿದರು, ಆದರೆ ಕೇವಲ "ಉಳಿಕೆಯವರು" ಮಾತ್ರ ಅರ್ಹರಾಗಿ ಕಂಡುಬಂದರು' ಎಂದಿದ್ದಾನೆ (ರೋಮಾ. 10:1–3; 9:27; 11:5–12, 20–25; ಅ.ಕೃ. 26:7). ನಮ್ಮ ಕರ್ತನು "ತಪ್ಪಿಸಿಕೊಂಡ ಕುರಿಗಳಂತಿರುವ (ಎಲ್ಲಾ) ಇಸ್ರಾಯೇಲನ (ಒಂದು) ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" (ಮತ್ತಾಯ 15:24) ಎಂದು ಹೇಳಿದ್ದಾನೆ. ಆದರೂ, ಆತನು ತನ್ನ ಶಿಷ್ಯರನ್ನು ಸುವಾರ್ತೆಯನ್ನು ಸಾರುವುದಕ್ಕೆ ಕಳುಹಿಸಿಕೊಡುವಾಗ ಆತನು ಅವರಿಗೆ "ಅನ್ಯಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ ಮನೆತನದವರ ಬಳಿಗೆ ಹೋಗಿರಿ" (ಮತ್ತಾಯ 10:5–6) ಎಂದು ಹೇಳಿ ಅವರನ್ನು ಪಾಲೈಸ್ತೈನಿನಿಂದ ಹೊರಗೆ ಹೋಗಲು ಅನುಮತಿಸಲಿಲ್ಲ. ಪಾಲೆಸ್ತೈನಿನಲ್ಲಿ ವಾಸಿಸುವರೆಲ್ಲರೂ ಇಸ್ರಾಯೇಲ್ಯರಾಗಿದ್ದರು ಎಂಬುದು ಸ್ಪಷ್ಟವಾಗಿದೆ. ಪೇತ್ರನು ಸಹ ದೈಹಿಕ ಇಸ್ರಾಯೇಲ್ಯರ ಬಗ್ಗೆ ಅವರು ಒಂದೇ ಮನೆತನದವರು ಎಂದು ಮಾತನಾಡುತ್ತಾನೆ. ಪೇತ್ರನು ಸಹ ಯೆರೂಸಲೇಮಿನ ಜನರನ್ನು ಉದ್ದೇಶಿಸಿ ಮಾತನಾಡುವಾಗ ಆತನು "ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" (ಅ.ಕೃ. 2:36) ಎಂದಿದ್ದಾನೆ. ಯಾಕೋಬನು 12 ಕುಲಗಳು ಒಂದು ಜನಾಂಗ ಎಂದಿದ್ದಾನೆ (ಯಾಕೋಬ 1:1). ಅನೇಕ ಕುಲಗಳವರು ಪಾಲಿಸ್ತೈನಿನಲ್ಲಿ ವಾಸಿಸುತ್ತಿದ್ದರು, ಮತ್ತು ಇನ್ನೂ ಅನೇಕ ಕುಲಗಳವರು ಅದರ ಸುತ್ತಲಿನ ದೇಶಗಳಲ್ಲಿ ವಾಸಿಸುತ್ತಿದ್ದರು. ಹೀಗಾಗಿ ಪೌಲನು ಏಷ್ಯಾ ಮೈನರ್ ಮತ್ತು ಇಟಲಿಗೆ ಹೋದಾಗ ಹತ್ತಿರದ ಎಲ್ಲಾ ಇಸ್ರಾಯೇಲ್ ನಗರಗಳಿಗೆ ಭೇಟಿಕೊಟ್ಟು ಅವರೊಡನೆ ಮಾತನಾಡಿದನು. ಆದರೆ ಅವರನ್ನು ಯಾವಾಗಲೂ ಒಂದೇ ಜನಾಂಗವೆಂದು ಗುರುತಿಸ ಲಾಗುತ್ತಿತ್ತು, ಆತ್ಮೀಕ ಇಸ್ರಾಯೇಲ್ಯರು ಮಾತ್ರವೇ ಬೇರೆ ಇಸ್ರಾಯೇಲ್ಯರಾಗಿದ್ದಾರೆ.

ದೇವರು ಈ ಎರಡೂ ಇಸ್ರಾಯೇಲ್ ಮನೆತನದವರೊಂದಿಗೆ ವಿಶೇಷವಾದ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ ಅಥವಾ ಅವರಿಗೆ ವಾಗ್ದಾನಗಳನ್ನು ನೀಡಿದ್ದಾನೆ. ಈ ಶಾರೀರಿಕ ಮನೆತನದವರಿಗೆ ಮಾಡಿರುವ ವಾಗ್ದಾನಗಳೆಲ್ಲವೂ ಲೋಕಸಂಬಂಧವಾದವುಗಳಾಗಿವೆ, ಆದರೆ ಆತ್ಮೀಕ ಮನೆತದವರಿಗೆ ಮಾಡಿದ ವಾಗ್ದಾನಗಳೆಲ್ಲವೂ ಪರಲೋಕಕ್ಕೆ ಸಂಬಂಧಿಸಿದವು ಗಳಾಗಿವೆ. ಶಾರೀರಿಕ ಮನೆತನದವರಿಗೆ ಮಾಡಿದ ವಾಗ್ದಾನಗಳು ಭವ್ಯ ಮತ್ತು ಅಮೂಲ್ಯವೂ ಆಗಿರುವಾಗ, ಆತ್ಮೀಕ ಮನೆತನದವರಿಗೆ ಮಾಡಿದ ವಾಗ್ದಾನಗಳು ಇನ್ನೂ ಉತ್ತಮವಾದವುಗಳೂ, ಶ್ರೇಷ್ಟವಾದವುಗಳೂ, ಮಹಾ ಮತ್ತು ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು ಆಗಿದೆ ಎಂದು ನಿರೂಪಿಸಲಾಗಿದೆ (ಇಬ್ರಿಯ 8:6; 2 ಪೇತ್ರ 1:4). ಶಾರೀರಿಕ ಮನೆತನದವರಿಗೆ "ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಗಳನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ. ನೀವು ನನಗೆ ಯಾಜಕ ರಾಜ್ಯವೂ, ಪರಿಶುದ್ಧ ಜನವೂ ಆಗಿರುವಿರಿ.... ಆ ಮಾತುಗಳನ್ನೆಲ್ಲಾ ಅವರಿಗೆ ತಿಳಿಸಿದ ಮೇಲೆ ಜನರೆಲ್ಲರೂ – ಯೆಹೋವನು ಹೇಳಿದಂತೆಯೇ ಮಾಡುವೆವು ಎಂದು ಒಗ್ಗಟ್ಟಾಗಿ ಪ್ರತ್ಯುತ್ತರ ಕೊಟ್ಟರು" (ವಿಮೋ. 19:5–8). ಆದರೆ ನಂತರದಲ್ಲಿ ಅವರು ಆ ಒಡಂಬಡಿಕೆಯನ್ನು ಕಾಪಾಡಿಕೊಳ್ಳಲು

ವಿಫಲರಾದರು. ಆದರೆ, ಅವರೊಳಗೆ ಕೆಲವು ನಂಬಿಗಸ್ತರು ತಮ್ಮ ಬಲಹೀನತೆಗಳ ಹೊರತಾಗಿಯೂ ಅವನ್ನು ಕಾಪಾಡಿಕೊಳ್ಳಲು ಶ್ರಮಿಸಿದರು, ಅಂತಹ ಕೆಲವರು ಸಹಸ್ರಮಾನದ ಯುಗದಲ್ಲಿ ದೇವರ ರಾಜ್ಯದ ಭೂಲೋಕ ಹಂತದಲ್ಲಿ ಅದರ ಸದಸ್ಯರು ಪ್ರಭುಗಳಂತಿರುವರು' (ಸಂಪುಟ I ಅಧ್ಯಾಯ XIV ನೋಡಿರಿ).

ಆದರೆ, ಆತ್ಮೀಕ ಮನೆತನದವರಿಗೆ "ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸುಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ* ಯಜ್ಞಗಳನ್ನು ಸಮರ್ಪಿಸುವುದಕ್ಕೆ ಪವಿತ್ರ ಯಾಜಕ ವರ್ಗದವರಾಗಿದ್ದೀರಿ.... ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ, ರಾಜವಂಶಸ್ಥರಾದ ಯಾಜಕರೂ, ಮೀಸಲಾದ ಜನವೂ, ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ., ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ" – 1 ಪೇತ್ರ 2: 5,9–10.

ಶಾರೀರಿಕ ಇಸ್ರಾಯೇಲ್ಯರಿಗೆ ದೇವರ ನೇಮಕದ ಪ್ರಕಾರ ಕೈಯಿಂದ ಮಾಡಲ್ಪಟ್ಟ ದೇವ ದರ್ಶನ ಗುಡಾರವಿತ್ತು. ಅದು ತನ್ನಷ್ಟಕ್ಕೆ ಮತ್ತು ತನ್ನ ಎಲ್ಲಾ ಸೇವೆಗಳಿಗೆ ಸಾಂಕೇತಿಕವಾಗಿತ್ತು (ಇಬ್ರಿಯ 9:1,2,9,10). ಆದರೆ ಆತ್ಮೀಕ ಇಸ್ರಾಯೇಲ್ಯರ ಬಳಿ ನಿಜವಾದ (ಪ್ರತಿಸಂಕೇತದ) ದೇವದರ್ಶನ ಗುಡಾರವಿತ್ತು, ಅದನ್ನು ಮನುಷ್ಯನು ಹಾಕದೆ, ದೇವರೇ ಹಾಕಿದ್ದನು (ಇಬ್ರಿಯ 8:2) ಈ ಸಾಂಕೇತಿಕ ದೇವದರ್ಶನ ಗುಡಾರದ ಸೇವೆಗಾಗಿ ಒಂದು ಸಾಂಕೇತಿಕ ಯಾಜಕವರ್ಗಕ್ಕೆ ದೀಕ್ಷೆ ನೀಡಲಾಯಿತು ಮತ್ತು ಅದಕ್ಕೆ ಆರೋನನು ಮುಖ್ಯಸ್ಥನಾಗಿದ್ದನು ಮತ್ತು ಆತನು ಸಾಂಕೇತಿಕ ಜನರಿಗಾಗಿ ಸಾಂಕೇತಿಕ ಯಜ್ಞಗಳನ್ನು ಏರ್ಪಡಿಸಿದ್ದನು ಮತ್ತು ಪ್ರತಿವರ್ಷ ಅವರ ಸಾಂಕೇತಿಕ ಶುದ್ಧೀಕರಣ ಅಥವಾ ನೀತಿನಿರ್ಣಯಗಳು ನೆರವೇರುತ್ತಿದ್ದವು. ಪ್ರತಿಸಂಕೇತದ ದೇವದರ್ಶನ ಗುಡಾರಕ್ಕೆ ವಿಶೇಷವಾದ ಯಾಜಕವರ್ಗದವರು ಇದ್ದು ಅವರು ಉತ್ತಮವಾದ ಯಜ್ಞಗಳನ್ನು ಸಮರ್ಪಿಸುತ್ತಿದ್ದರು (ಇಬ್ರಿಯ 9:23) ಮತ್ತು ಇದು ನಿಜವಾಗಿಯೂ ಸದಾಕಾಲಕ್ಕೂ ಸಮಸ್ತ ಲೋಕದ ಪಾಪವನ್ನು ಅಳಿಸಿಬಿಡುವುದಾಗಿತ್ತು. ಈ ಯಾಜಕವರ್ಗದವರಲ್ಲಿ ನಮ್ಮ ಕರ್ತನಾದ ಯೇಸುಕ್ರಿಸ್ತನು ಮುಖ್ಯಸ್ಥ ಯಾಜಕನು – ನಾವು ಪ್ರತಿಜ್ಞೆ ಮಾಡಿ ಒಪ್ಪಿಕೊಂಡಿರುವ ಕ್ರಿಸ್ತನ ದೇಹವಾಗಿರುವ ಉಪಯಾಜಕರ ಸಭೆಯ ಪ್ರಧಾನ ಯಾಜಕನಾಗಿದ್ದಾನೆ. ಹೆಸರು ಮಾತ್ರದ ಸಭೆಯು ಈ ಯಾಜಕವರ್ಗವಾಗಿರುವುದಿಲ್ಲ. ಆದರೆ ಸತ್ಯಸಭೆ ಮತ್ತು ಕ್ರಿಸ್ತನಿಗೆ ನಿಷ್ಠಾಪೂರ್ವಕವಾಗಿರುವ ಸಭೆಯಲ್ಲಿನ ಈ ಮಹಾಯಾಜಕನ ಹೆಜ್ಜೆಜಾಡಿನಲ್ಲಿ ನಡೆದು ತಮ್ಮನ್ನು ಸಮರ್ಪಿಸಿಕೊಳ್ಳುವವರು ಮಾತ್ರವೇ ಈ ಯಾಜಕವರ್ಗವಾಗಿದೆ.

ಪರಿಶುದ್ಧ ಬರಹಗಳಲ್ಲಿ ಬರೆಯಲ್ಪಟ್ಟಿರುವ ಈ ಸಾಂಕೇತಿಕ ಮತ್ತು ಪ್ರತಿ ಸಂಕೇತದ ಅನುರೂಪತೆಯ ಮತ್ತೊಂದು ಗಮನಾರ್ಹ ಲಕ್ಷಣವು ಏನೆಂದರೆ ಇಸ್ರಾಯೇಲಿನ ಎರಡೂ ಮನೆತನದವರೂ (ಶಾರೀರಿಕ ಮತ್ತು ಆತ್ಮೀಕ) ಬಾಬೇಲಿಗೆ ಸೆರೆಯಾಗಿ ಒಯ್ಯಲ್ಪಟ್ಟರು. ಇದನ್ನು ನಾವು ಮುಂದಿನ ಅಧ್ಯಾಯದಲ್ಲಿ ನಾವು ಜಾರತ್ವದ ಮಾತೆಯಾದ ಮಹಾಬಾಬೇಲನ್ನು (ಪ್ರಕಟನೆ 17:5,6) ವೀಕ್ಷಿಸುವಾಗ ಇನ್ನೂ ಸ್ಪಷ್ಟವಾಗಿ ನೋಡಬಹುದಾಗಿದೆ. ಕೇವಲ ಅದರ ಅನುರೂಪತೆಯನ್ನು ಮಾತ್ರವೇ ನಾವಿಲ್ಲಿ ನೋಡುತ್ತೇವೆ. ಶಾರೀರಿಕ ಇಸ್ರಾಯೇಲ್ಯರು ಅಕ್ಷರಶಃವಾದ ಬಾಬೇಲಿಗೆ ಸೆರೆಯಾಗಿ ಒಯ್ಯಲ್ಪಟ್ಟರು. ಅದು ಅಕ್ಷರಶಃವಾದ ಯೂಫ್ರಟಿಸ್ ನದಿಯ ಮೇಲೆ ಕಟ್ಟಲ್ಪಟ್ಟಿತ್ತು. ಅದೇ ರೀತಿಯಾಗಿ ಸುವಾರ್ತಾಯುಗದಲ್ಲಿ ಆತ್ಮೀಕ ಇಸ್ರಾಯೇಲ್ಯರನ್ನು ಕೊಂಡೊಯ್ದ ರಹಸ್ಯಾರ್ಥವುಳ್ಳ ಬಾಬೇಲನ್ನು ಯೂಫ್ರಟಿಸಿನ ಮೇಲೆ ಕುಳಿತಂತೆ ಚಿತ್ರಿಸಲಾಗಿದೆ. ಸಂಕೇತದಲ್ಲಿ, ದೇವಾಲಯದ ಬಂಗಾರದ ಪಾತ್ರೆಗಳನ್ನು ಕೊಂಡೊಯ್ದು ಅವುಗಳನ್ನು ಅಕ್ಷರಶಃ ಬಾಬೇಲಿನಲ್ಲಿ ಅಪವಿತ್ರ ಮಾಡಲಾಯಿತು; ಪ್ರತಿ ಸಂಕೇತದಲ್ಲಿ ನಿಜವಾದ ದೇವಾಲಯವಾದ ಕ್ರೈಸ್ತಸಭೆಯ (1 ಕೊರಿಂಥ 3:16,17; ಪ್ರಕಟನೆ 3:12) ಸೇವೆಗೆ ಸಂಬಂಧಿಸಿದ ದೈವಿಕ (ಬಂಗಾರದ) ಸತ್ಯಗಳು ಅವುಗಳ ಯುಕ್ತವಾದ ಸ್ಥಳದಿಂದ ದೂರಸ್ಥಳಕ್ಕೆ ತೆಗೆಯಲಾಯಿತು, ವಿರೂಪಗೊಳಿಸಲಾಯಿತು ಮತ್ತು ರಹಸ್ಯ ಬಾಬೇಲಿನಿಂದ ತಪ್ಪಾಗಿ ಅನ್ವಯಿಸಲಾಯಿತು. ಅಕ್ಷರಶಃವಾದ ಬಾಬೇಲ್ ಯೂಫ್ರಟಿಸ್ ನದಿಯ ಮೇಲೆ ಕಟ್ಟಲ್ಪಟ್ಟಿತ್ತು. ಅದು ಪ್ರಾಪಂಚಿಕವಾದ ತನ್ನ ಐಶ್ವರ್ಯಕ್ಕೆ ಮತ್ತು ಸಂಪನ್ಮೂಲಗಳಿಗೆ ನೆರವಾಗುತ್ತಿತ್ತು, ಅದರ ಪರಾಭವವನ್ನು ನೀರುಗಳನ್ನು ಬೇರೆಡೆ ತಿರುಗಿಸುವುದರ ಮೂಲಕ ನೆರವೇರಿಸಲಾಯಿತು. ಹೀಗಾಗಿ ರೂಪಾರ್ಥಕ ಬಾಬೇಲ್ ಬಹಳ ನೀರುಗಳ (ಜನರು ಮತ್ತು ಜನಾಂಗಗಳ) ಬೆಂಬಲದಿಂದ ಮೇಲೆ ಕುಳಿತಿದ್ದು ಅದರ ಸಹಾಯಕರನ್ನು, ಬೆಂಬಲಿಗ ಜನರನ್ನು ಪಕ್ಕಕ್ಕೆ ಸರಿಸುವುದರ ಮೂಲಕ ಅದರ ಪತನವು ಮುಂತಿಳಿಸಲ್ಪಟ್ಟಿತ್ತು – ಪ್ರಕಟನೆ 16:12.

* 5ನೇ ವಚನದಲ್ಲಿ ಕಂಡು ಬರುವ 'ಆತ್ಮೀಯ' ಎಂಬ ಪದವನ್ನು ಅತ್ಯಂತ ಹಳೆಯದಾದ ಗ್ರೀಕ Greek MS, the Siniaticನಲ್ಲಿ ಕೈಬಿಡಲಾಗಿದೆ. ಈ ಬಿಡುವಿಕೆಯ ಸರಿಪಡಿಸುವಿಕೆಯ ನಾವು ಅದು ಆತ್ಮೀಕ ಯಜ್ಞಗಳನ್ನು ಸಮರ್ಪಿಸಲಿಲ್ಲ ಎಂದು ಪ್ರತಿಫಲಿಸುವಾಗ ವಿಶದವಾಗುತ್ತದೆ, ಆದರೆ ಈ ಲೋಕ ಸಂಬಂಧಿತವಾದ ಮತ್ತು ಮಾನವ ಸವಲತ್ತುಗಳು, ಹಕ್ಕುಗಳು ಮುಂತಾದವುಗಳನ್ನು ಅರ್ಪಿಸಲಾಯಿತು.

### ಕಾಲದ ಸಮಾನಾಂತರಗಳು/ಅಳತೆಮಾಡುವಿಕೆ – The Parallel / Measuring

### ನೆರಳು ಮತ್ತು ತಾತ್ಪರ್ಯ (ಸತ್ಯಸಾರ) – ಸಂಕೇತ ಮತ್ತು ಪ್ರತಿ ಸಂಕೇತ Shadow and Substance - Type and Antitype

ನಾವೀಗ ಈ ಸಾಂಕೇತಿಕ ಅನುರೂಪತೆಯ ಬಹು ಅದ್ಭುತವಾದ ಲಕ್ಷಣದ, ಸಮಯದ ಮೂಲ ವಸ್ತುವಿನ ಪರಿಗಣನೆಗೆ ಬಂದಿದ್ದೇವೆ. ಇದು ಎಲ್ಲಾ ಸಂದರ್ಭ ಗಳಲ್ಲಿಯೂ ಜೂಬಿಲಿಗಳಲ್ಲಿಯೂ ಕಾಲಗಣನೆ ಗಳಲ್ಲಿಯೂ ಮತ್ತು ಅನ್ಯಜನಗಳ ಕಾಲದ ಅಂತ್ಯದ ಬಗ್ಗೆ ಮುಂತಿಳಿಸಿರುವ ದಿನಾಂಕಗಳನ್ನು ಎತ್ತಿಹಿಡಿಯಲ್ಪಡುತ್ತದೆ ಮತ್ತು ದೃಢಪಡುತ್ತದೆ. ಈ ಉದ್ದೇಶಕ್ಕಾಗಿಯೇ ವಿಶಿಷ್ಟವಾಗಿ ಈ ವಿಷಯಾಂಶವನ್ನು ಪರಿಚಯಿಸಲಾಗುತ್ತಿದೆ – ಈ ಅದ್ಭುತವಾದ ಸಮಾನಾಂತರಿಸುವಿಕೆಯ ಪ್ರಾಬಲ್ಯವು ಹೆಚ್ಚಬಹುದು ಮತ್ತು ದೇವರ ಮಕ್ಕಳ ನಂಬಿಕೆಯನ್ನು ವಿಶದವಾಗಿ ಉದ್ದೇಶಿಸಿರುವಂತೆ ಈ ಸಮಯ ಮೂಲವಸ್ತುವಿನಲ್ಲಿ ದೃಢೀಕರಿಸಬಹುದು – ಇಬ್ರಿಯ 9:9, 23; 10:1.

ಪ್ರವಾದನೆಗಳು ಮತ್ತು ಸಮಯ – ಪುರಾವೆ ಇವುಗಳಲ್ಲಿ ಇದಕ್ಕಿಂತಲೂ ಹೆಚ್ಚು ಎದ್ದು ಕಾಣುವ ಮತ್ತು ಮನದಟ್ಟುಪಡಿಸುವವುಗಳಿಲ್ಲ. ಇದು ಕಲಿಸುವ ಪಾಠವೆಂದರೆ ಈ ನಿರಾಡಂಬರತೆಯ ಕಾರಣ ಬೆಚ್ಚಿ ಬೀಳಿಸುವುದು ಮತ್ತು ನಮ್ರ ಹೃದಯಗಳಿಗೆ ನಿಶ್ಚಿತಾಭಿಪ್ರಾಯವನ್ನು ಸಾಗಿಸುವುದು. ಶಾರೀರಿಕ ಇಸ್ರಾಯೇಲ್ಯರೂ ಮತ್ತು ಅವರ ಸಂಭ್ರಮಾಚರಣೆಗಳು ಸಾಂಕೇತವಾಗಿರುವುದು ಮಾತ್ರವಲ್ಲ, ಆದರೆ ಯೆಹೂದ್ಯ ಯುಗವು ಸುವಾರ್ತಾಯುಗದ ಸಾಂಕೇತಿಕವಾಗಿದೆ. ಅವುಗಳು ನಿಕೃಷ್ಟವಾಗಿ ಅಷ್ಟೇ ಅವಧಿವುಳ್ಳದ್ದಾಗಿದೆ ಮತ್ತು ಪರಸ್ಪರ ಅನುರೂಪತೆಯುಳ್ಳವುಗಳಾಗಿವೆ. ಆದುದರಿಂದ, ಯೆಹೂದಿ ಯುಗವನ್ನು, ಅದರ ಅವಧಿಯನ್ನು, ಮತ್ತು ಅವುಗಳ ಸುಗ್ಗಿ ಮತ್ತು ಅದರ ಮುಕ್ತಾಯದ ವೈಶಿಷ್ಟ್ಯತೆಗಳನ್ನು ನೋಡುವುದು ಮತ್ತು ಮೆಚ್ಚಿಕೊಳ್ಳುವುದು ಇವುಗಳಿಂದ ನಾವು ಸುವಾರ್ತಾಯುಗದ, ಅದರ ಪ್ರತಿಸಂಕೇತದ ಸರಿಯಾದ ಅವಧಿಯನ್ನು ತಿಳುಕೊಳ್ಳಬಹುದಾಗಿದೆ ಮತ್ತು ಸುವಾರ್ತಾಯುಗದ ಸುಗ್ಗಿಕಾಲದಲ್ಲಿ ಏನನ್ನು ಮತ್ತು ಯಾವಾಗ ನೋಡಬೇಕೆಂಬುದನ್ನು ಅರ್ಥಮಾಡಿ ಕೊಳ್ಳಬಹುದಾಗಿದೆ. ನಾವೀಗ ಇದನ್ನು ತೋರಿಸುವಂತೆ ಮುಂದುವರೆಯೋಣ; ನಾವು ಸಾಮಾನ್ಯ ತತ್ವವಿಧಿಗಳನ್ನು ಇದ್ದಂತೆ ತೆಗೆದುಕೊಂಡು ಅವುಗಳನ್ನು ಸುವಾರ್ತಾಯುಗಗಳ ಅನುರೂಪತೆಯುಳ್ಳ ಯೆಹೂದಿ ಪದ್ಧತಿಗಳ ವಿವಿಧ ಲಕ್ಷಣಗಳೆಂದು ಹೇಳಬಹುದಾದರೂ ದೇವರು ನಮ್ಮನ್ನು ಈ ರೀತಿಯ ತೀರ್ಮಾನಕ್ಕೆ ಬರಲು ಬಿಡುವವನಲ್ಲ. ಆದರೆ ಪರೋಕ್ಷವಾಗಿಯಾದರೂ ಸ್ಪಷ್ಟವಾಗಿ ಈ ರೀತಿಯಾಗಿ ಹೇಳಿದ್ದಾನೆ.

ಆತ್ಮೀಕ ಮನೆತನದವರನ್ನು ಆಯ್ಕೆ ಮಾಡುವ ಸಮಯದಲ್ಲಿ ದೇವರು ಶಾರೀರಿಕ ಮನೆತನದವರಿಂದ ಆತನ ಕೃಪೆಯನ್ನು ತೊಡೆದುಹಾಕಿದ್ದಾನೆ ಎಂದು ಪೌಲನು ಹೇಳುತ್ತಾನೆ; ಮತ್ತು ಆತ್ಮೀಕ ಮನೆತನವು ಆಯ್ಕೆಗೊಂಡ ಮೇಲೆ, ದೇವರ ಕೃಪೆಯು ಶಾರೀರಿಕ ಮನೆತನದವರಿಗೆ ಹಿಂತಿರುಗುವುದು. ಆತನು ಹೇಳುವುದೇನೆಂದರೆ – "ಸಹೋದರರೇ, (ಸಭೆಯ ಸಹೋದರರು ಅಥವಾ ಆತ್ಮೀಕ ಇಸ್ರಾಯೇಲ್ಯರು) ನಿಮ್ಮನ್ನು ನೀವೇ ಬುದ್ಧಿವಂತರೆಂಬುದಾಗಿ ಎಣಿಸಿಕೊಳ್ಳದಂತೆ ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ; ಅದೇನೆಂದರೆ, ಇಸ್ರಾಯೇಲ್ಯರಲ್ಲಿ ದೈಹಿಕ ಅಥವಾ ಶಾರೀರಿಕ ಒಂದು ಪಾಲು ಜನರಿಗೆ ಉಂಟಾದ ಮೊಂಡತನವು ಯಾವಾಗಲೂ ಇರದೆ ಅನ್ಯಜನಗಳ* ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವುದು; ಆಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವುದು. ಇದಕ್ಕೆ ಆಧಾರವಾಗಿ ಶಾಸ್ತ್ರದಲ್ಲಿ –

"ಬಿಡಿಸುವವನು (ನಮ್ಮ ಕರ್ತನಾದ ಯೇಸು ಮತ್ತು ಉಳಿದವರು ಅಥವಾ ಆತನ ದೇಹವಾಗಿ ರಚಿಸಲ್ಪಡುವ ಇಸ್ರಾಯೇಲಿನ ಎರಡು ನಾಮಾಂಕಿತ ಮನೆತನದವರಲ್ಲಿ ಕೆಲವು ನಂಬಿಗಸ್ತರು) ಚಿಯೋನಿನಿಂದ ಹೊರಟು ಬಂದು ಯಾಕೋಬಿನಲ್ಲಿರುವ ಭಕ್ತಿಹೀನತೆಯನ್ನು ನಿವಾರಣೆ ಮಾಡುವನು; ನಾನು ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯು ನಾನು ಅವರ ಪಾಪಗಳನ್ನು ಪರಿಹರಿಸುವಾಗ ನೆರವೇರುವುದು" ಎಂದು ಬರೆದದೆ – ರೋಮಾಪುರ 11:25–27.

ಹೀಗೆ ನಾನು ಅವರ ಪಾಪಗಳನ್ನೆಲ್ಲಾ ತೆಗೆದುಹಾಕುವಾಗ ಎಲ್ಲಾ ಇಸ್ರಾಯೇಲ್ಯರೂ ರಕ್ಷಣೆಹೊಂದುವರು (ಇದುವೇ ಅವರೊಂದಿಗಿನ ನನ್ನ ಒಡಂಬಡಿಕೆ). ಸುವಾರ್ತೆಗೆ ಸಂಬಂಧಿಸಿದಂತೆ (ಈ

* ಯಾರೂ ಈ ಅನ್ಯಜನರ ಪೂರ್ಣತೆಯನ್ನು ಇಲ್ಲಿಂದ ಮುಂದೆ ಹೇಳುವ ಅನ್ಯಜನಗಳ ಕಾಲವೆಂದು ತಿಳಿದು ದಿಗ್ಭ್ರಮೆಗೊಳ್ಳಬಾರದು. ಈ ಮೊದಲು ಪ್ರಸ್ತಾಪಿಸಿರುವಂತೆ, ಅನ್ಯಜನಗಳ ಕಾಲವು ದೇವರು ಅನ್ಯಜನಗಳಿಗೆ ಸಾರ್ವತ್ರಿಕವಾಗಿ ಆಳುವ ಅಧಿಕಾರವನ್ನು ಗುತ್ತಿಗೆಯಾಗಿ ನೀಡುವ ಕಾಲವಾಗಿದೆ; ಅದೇ ಸಮಯದಲ್ಲಿ ಅನ್ಯಜನಗಳ ಪೂರ್ಣತೆಯು ಸುವಾರ್ತಾ ಸಭೆಯನ್ನು ಪೂರೈಸುವಂತೆ ಅನ್ಯಜನಗಳಿಂದ ಆಯ್ಕೆಗೊಂಡ ಪೂರ್ಣಸಂಖ್ಯೆಯನ್ನು ಸೂಚಿಸುತ್ತದೆ. ಅವರು ಉಳಿಕೆಯ ಶೇಷಜನರೊಂದಿಗೆ ಇಸ್ರಾಯೇಲ್ಯರಿಂದ ಆಯ್ಕೆಗೊಂಡಿರುತ್ತಾರೆ (ಇದರಲ್ಲಿ ಅಪೋಸ್ತಲರೂ ಸೇರಿದ್ದಾರೆ) ಮತ್ತು ಇವರಿಂದ ಕ್ರಿಸ್ತನ ಸಭೆಯು, ಪವಿತ್ರ ದೇಶವು, ರಾಜವಂಶ ಯಾಜಕತ್ವವು, ದೇವರ ರಾಜ್ಯವು ಸ್ಥಾಪಿತಗೊಳ್ಳುತ್ತದೆ ಮತ್ತು ಇದಕ್ಕೆ ಈ ಲೋಕದ ಎಲ್ಲಾ ಆಧಿಪತ್ಯಗಳೂ ಅಧೀನವಾಗಿರುತ್ತವೆ.

ಯುಗದ ಮಹಾಕರೆಗೆ) ಅವರು ನಿಮ್ಮ ಸಲುವಾಗಿ ಶತ್ರುಗಳೆಂದೆಣಿಸಲ್ಪಟ್ಟರು (ನಿಮಗೆ ಮೊದಲ ಹಕ್ಕು ಸಿಕ್ಕಲೆಂದು ಮತ್ತು ನೀವು ಆಯ್ಕೆಗೆ, ವಾಗ್ದಾನ ಆತ್ಮೀಕ ಭಾಗಗಳಿಗೆ ಬಾಧ್ಯರಾಗುವಂತೆ ಅವರು ತೊಡೆದು ಹಾಕಲ್ಪಟ್ಟವರು). ಆದರೆ ಆಯ್ಕೆಯನ್ನು ಮುಟ್ಟುವಂತೆ (ಇದರಿಂದ ತಂದೆಯಾದ ಅಬ್ರಹಾಮನಿಗೆ ದೇವರು ವಾಗ್ದಾನ ಮಾಡಿದ ಭೂಲೋಕದ ಅನುಗ್ರಹಗಳನ್ನು ಆತನ ಸ್ವಾಭಾವಿಕ ಸಂತಾನದವರಾದ ಅವರು ಹೊಂದಿಕೊಳ್ಳುವರು). ಅವರು ತಂದೆಯ ಸಲುವಾಗಿ ಪ್ರೀತಿಪಾತ್ರರು. ದೇವರ ಬಹುಮಾನಗಳು ಮತ್ತು ಕರೆಯು ಪಶ್ಚಾತ್ತಾಪಪಡುವ ಸಂಗತಿಗಳಲ್ಲ. "ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲಿ ದೃಢವಾಗುತ್ತವೆ" (2 ಕೊರಿಂಥ 1:20). ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ ಯೆಹೋವನು ಮುರಿಯಲು ಬಯಸುವ ಯಾವುದೇ ಒಡಂಬಡಿಕೆಯನ್ನೂ ಆತನು ಮಾಡಲಿಲ್ಲ.

ಈ ಪ್ರವಾದನೆಯಲ್ಲಿ ಪೌಲನು ಸುವಾರ್ತಾ ಯುಗದ ವಿಸ್ತಾರತೆಯ ಬಗ್ಗೆ ನಮಗೆ ತಿಳಿಯಪಡಿಸಿದ್ದಾನೆ. ಅದು ಶಾರೀರಿಕ ಇಸ್ರಾಯೇಲ್ಯರನ್ನು ತೊಡೆದು ಹಾಕುವುದರೊಂದಿಗೆ ಪ್ರಾರಂಭವಾಯಿತೆಂದೂ, ಮತ್ತು ಅದು ಕೃಪೆಯೊಂದಿಗೆ ಅವರು ಪುನಃವಶಗೊಳ್ಳುವಾಗ ಮುಗಿಯುತ್ತದೆಂದೂ ತೋರಿಸಿದ್ದಾನೆ. ಪೌಲ ಮತ್ತು ಪೇತ್ರನ ಮಾತುಗಳನ್ನು (ರೋಮಾ. 11:27 ಮತ್ತು ಅ.ಕೃ. 3: 19,20,21) ಒಟ್ಟಾಗಿ ಸೇರಿಸಿದಾಗ ನಾವು ಇಸ್ರಾಯೇಲ್ಯರಿಗೆ ಪುನಃವಶ ಕಾಲದ ಆರಂಭದಲ್ಲಿ, ನಮ್ಮ ಕರ್ತನ ದ್ವಿತೀಯಾಗಮನದಲ್ಲಿ ದೇವರ ಕೃಪೆಯು ಹಿಂತಿರುಗುವಿಕೆಯ ಕಾಲವನ್ನು ತಿಳಿದುಕೊಳ್ಳುತ್ತೇವೆ. ಪೌಲನು ಹೇಳುವಂತೆ ಆ ಜನರಿಗೆ ಕೃಪೆಯು ಹಿಂತಿರುಗುವ ಕಾಲವು ದೇವರು ಅವರ ಪಾಪಗಳನ್ನೆಲ್ಲಾ ತೆಗೆದುಹಾಕುವಾಗ ಪೇತ್ರನು ಹೇಳುವಂತೆ ಆತನು ಇದನ್ನು ನಮ್ಮ ಕರ್ತನು ಎರಡನೆಯ ಹಿಂತಿರುಗುವ ಕಾಲದಲ್ಲಿನ ಚೈತನ್ಯದಾಯಕವಾದ ಪುನರ್‌ವಶದ ಕಾಲದಲ್ಲಿ ಮಾಡುವಾಗ ಪರಲೋಕವು ಆತನನ್ನು ಇನ್ನೆಂದಿಗೂ ಹಿಡಿದಿಟ್ಟುಕೊಳ್ಳುವುದಿಲ್ಲ.

ನಮ್ಮ ಕರ್ತನ ದ್ವಿತೀಯಾಗಮನದ ಮತ್ತು ಪುನರ್‌ವಶದ ಉದಯದ ದಿನಾಂಕವನ್ನು ನಾವೀಗಾಗಲೇ ಕ್ರಿ.ಶ. 1874 ಎಂದು ತೋರಿಸಿದ್ದೇವೆ. ಆದುದರಿಂದ ನಾವು ಶಾರೀರಿಕ ಇಸ್ರಾಯೇಲ್ಯರಿಗೆ ದೇವರ ಕೃಪೆಯ ಹಿಂತಿರುಗುವಿಕೆಯು 1874ರ ನಂತರ ಎಂಬುದಕ್ಕೆ ಕೆಲವೊಂದು ಗುರುತುಗಳನ್ನು ಪುನಃವಶ ಕಾರ್ಯದ ಮೊದಲ ಲಕ್ಷಣವಾಗಿ ಕಾಣಬೇಕಿದೆ. ನಿಶ್ಚಯವಾಗಿಯೂ ಸಾಕಾಗುವಷ್ಟು ಕೃಪೆಯು ಅವರಿಗೆ ಹಿಂತಿರುಗಲು ಪ್ರಾರಂಭಿಸಿದೆ ಎಂದು ನೋಡುತ್ತಿದ್ದೇವೆ. ಇಸ್ರಾಯೇಲ್ಯರ ಕುರುಡುತನವನ್ನು ತೆಗೆದುಹಾಕುವ ಪ್ರತಿಯೊಂದು ನೂತನ ಸಾಕ್ಷ್ಯ ಮತ್ತು ಅವರ ಕಡೆಗಿರುವ ದೇವರ ಕೃಪೆ ಇವುಗಳನ್ನು ಪೌಲನ ಮಾತುಗಳಿಂದ ಅಳೆಯುವಾಗ ಸುವಾರ್ತಾ ಯುಗವು ಮುಗಿಯುತ್ತದೆ ಎಂಬ ರುಜುವಾತು ಮತ್ತು ಚಿಕ್ಕ ಹಿಂಡು ಇನ್ನೇನು ಮುಗಿಯುವುದಾಗಿದೆ. ಆದರೆ ನಮ್ಮ ಬಳಿ ಕೃಪೆಯು ಇಸ್ರಾಯೇಲ್ಯರಿಗೆ ಯಾವಾಗ ಪ್ರಾರಂಭವಾಗುವುದೆಂಬ ಯಥಾವತ್ತಾದ ದಿನಾಂಕವನ್ನು ಒದಗಿಸುವ ಸಾಕ್ಷ್ಯವಿದೆ. ಇದುವರೆಗೆ ನಾವು ಕೇವಲ ಶಾರೀರಿಕ ಇಸ್ರಾಯೇಲ್ಯರನ್ನು ಕರೆಯಿಂದ ತೊರೆದುಬಿಡುವಿಕೆಯ ಕಾಲದ ಬಗ್ಗೆ ತಿಳಿಸಿರುವ ಅಳತೆಯು ಇತರರಿಗೆ ಇರುವ ವಿಶೇಷ ಕೃಪಾಸಮಯದ, ಇತರರಿಗೆ ಕರೆ ನೀಡುವ, ಅನ್ಯಜನರು ಕ್ರಿಸ್ತನೊಂದಿಗೆ ಬಾಧ್ಯಸ್ತರಾಗುವ ಅಳತೆಯೇ ಆಗಿದೆ ಎಂದು ನೋಡಿದ್ದೇವೆ. ಈ ಕರೆಯು ಪುನರ್‌ವಶಕಾಲದ ಪ್ರಾರಂಭದಲ್ಲಿ ಅಂತ್ಯಗೊಳ್ಳಲಿದೆ; ಆದರೆ ಬೇರೆ ಪ್ರವಾದನೆಗಳ ಮುಖಾಂತರ ತಿಳಿದು ಬರುವುದೇನೆಂದರೆ ಸಮಸ್ತವನ್ನು ಸರಿಪಡಿಸುವ ಕಾಲದ ಪ್ರಾರಂಭದ ಶುರುವಾತಿನಲ್ಲಿ ಆಗುವುದಿಲ್ಲ.

ಆದರೆ, ಒಂದು ಕ್ಷಣ ವಿರಾಮವಿರಲಿ – ಈ ಅಂಶದ ಬಗ್ಗೆ ಯಾವುದೇ ತಪ್ಪು ತಿಳುವಳಿಕೆಗೆ ಅವಕಾಶ ಇರಬಾರದು. ಕ್ರಿಸ್ತನ ಜೊತೆ ಬಾಧ್ಯಸ್ತರ ಮದಲಗಿತ್ತಿಯಾದ ಸಭೆಯ ಸದಸ್ಯರಾಗುವ ಮಹಾಭಾಗ್ಯದ ಕರೆಯು ಸ್ಥಗಿತಗೊಂಡಾಗ ಈಗಾಗಲೇ ಕರೆಯಲ್ಪಟ್ಟವರೆಲ್ಲರೂ ಅರ್ಹರೆಂದು ಲೆಕ್ಕತೆಗೆದುಕೊಂಡು ಅವರು ಆಯ್ಕೆಗೊಳ್ಳುತ್ತಾರೆ ಎಂಬುದು ಇದರ ಅರ್ಥವಲ್ಲ. ಯಾಕೆಂದರೆ, ಅನೇಕರು ಕರೆಯಲ್ಪಡುವರು, ಕೆಲವರು ಮಾತ್ರವೇ ಆಯ್ಕೆಗೊಳ್ಳುವರು. ಏಕೆಂದರೆ, ಕರೆಯಲ್ಪಟ್ಟವರಲ್ಲಿ ಕೆಲವರು ಮಾತ್ರವೇ ಕರೆಯ ಶರತ್ತುಗಳಿಗೆ ಒಪ್ಪಿಗೆಯಾಗಿರುತ್ತಾರೆ. ಅನಂತರದಲ್ಲಿ ಆ ಮಹಾ ಕರೆಯಲ್ಲಿ ಕರೆಯಲ್ಪಡದೇ ಇರುವವರಿಗೆ ಬೇರೆ ಯಾವ ಅನುಗ್ರಹವೂ ನೀಡಲಾಗದು ಎಂಬ ಅರ್ಥವೂ ಅಲ್ಲ. ಸತ್ಯವೇನೆಂದರೆ, ಈ ಮಹಾ ಕರೆಯು ಸ್ಥಗಿತಗೊಳ್ಳುವಾಗ, ಯುಗಗಳ ಯೋಜನೆಯ ವಿನ್ಯಾಸಕಾರನು ಸುವಾರ್ತಾಯುಗದಲ್ಲಿ ಪೂರ್ಣ ಗೊಳಿಸಬಹುದಾದ ಆ ಭಾಗದ ತನ್ನ ಯೋಜನೆಯನ್ನು ಅಂದರೆ ಕ್ರಿಸ್ತನ ಮದಲಗಿತ್ತಿಯಾದ ಸುವಾರ್ತಾ ಸಭೆಯ ಆಯ್ಕೆಯನ್ನು ಬಹಳ ಮಟ್ಟಿಗೆ ಮುಗಿಸಿದ್ದಾನೆ ಎಂಬುದೆ. ಎಲ್ಲಾ ಜನರು ಅಂಥಾಃ ಮೇಲ್ಮಟ್ಟದ ಕರೆಯನ್ನು ಹೊಂದಿಲ್ಲ. ದೇವರ ವಿನ್ಯಾಸವು ಈ ಉದ್ದೇಶಕ್ಕೆ ಕೆಲವರನ್ನು ಮಾತ್ರವೇ, ಅಂದರೆ ಮಾನವ ಸಮೂಹವನ್ನು ತುಲನೆಮಾಡುವಾಗ ಅದರಲ್ಲಿ ಒಂದು ಚಿಕ್ಕ ಹಿಂಡನ್ನು ಮಾತ್ರವೇ ಆಯ್ಕೆಮಾಡುವುದಾಗಿದೆ ಎಂಬುದನ್ನು ನಮಗೆ ಈಗಾಗಲೇ ವಿಶೇಷವಾಗಿ ತಿಳಿಸಲಾಗಿದೆ. ಸಾಕಷ್ಟು ಜನರನ್ನು ಕರೆದ ನಂತರ, ಸಮಯವು ಮುಕ್ತಾಯಗೊಂಡಿರುವಾಗ, ಇತರರಿಗೆ ಇನ್ನು ಮುಂದೆ ಕರೆಯನ್ನು ವಿಸ್ತರಿಸುವುದು

ಉಚಿತವಲ್ಲ. ಇನ್ನೂ ಸಂಭವನೀಯವಾಗಿರುವದೇನೆಂದರೆ, ಈಗಾಗಲೇ ಕರೆಯಲ್ಪಟ್ಟವರು, ಮತ್ತು ಆ ಕರೆಯನ್ನು ಅಂಗೀಕರಿಸಿರುವವರು, ಮರಣದ ಪರ್ಯಂತರ ದೇವರಿಗೆ ಪ್ರತಿಷ್ಠೆಪಡಿಸಿಕೊಳ್ಳುವ ಒಡಂಬಡಿಕೆಗೆ ನಿಷ್ಠೆಯುಳ್ಳವರಾಗಿ ತಮ್ಮ ಕರೆಯನ್ನು ಮತ್ತು ಆಯ್ಕೆಯನ್ನು ಖಚಿತಪಡಿಸಿಕೊಂಡಿದ್ದರೂ ಸಹ, ಹೀಗೆ ಮಾಡುವಲ್ಲಿ ವಿಫಲರಾಗುವ ಸಾಧ್ಯತೆಗಳು ಇನ್ನೂ ಇದೆ. ಸಾಕಷ್ಟು ಜನರು ಆಹ್ವಾನಿಸಲ್ಪಟ್ಟಿದ್ದು ಅವರಲ್ಲಿ ಅನೇಕರು ಆಹ್ವಾನಿಸಲ್ಪಟ್ಟ ಚಿಕ್ಕ ಹಿಂಡು ಕ್ರಿಸ್ತನ ದೇಹವು ಈ ಅನುಗ್ರಹವನ್ನು ಪಡಕೊಳ್ಳುವಾಗ ಈ ಕರೆಯ ಮುಕ್ತಾಯಗೊಳ್ಳಲೇ ಬೇಕು. ಇದಲ್ಲದೇ, ದೇವರ ಪ್ರೀತಿ, ಅನುಗ್ರಹ ಮತ್ತು ಕರೆಗೆ, ಯಾವುದೇ ಆದಂತೆ ಮಿತಿ ಇದೆ ಎಂದು ಭಾವಿಸಬಾರದು. ಅದರ ಸಮಾಪ್ತಿಯು ಪರಲೋಕದ ಅಥವಾ ಮಹಾ ಕರೆಯ ಮುಕ್ತಾಯ ಮಾತ್ರವೇ. ಏಕೆಂದರೆ, ಅವಕಾಶದ ಮತ್ತು ಭಾಗ್ಯದ ಈ ಬಾಗಿಲು ಮುಚ್ಚಲ್ಪಡುವಾಗ, ಮತ್ತೊಂದು ಬಾಗಿಲು ತೆರೆದುಕೊಳ್ಳಲು ಓಲಾಡುತ್ತದೆ – ಅವಕಾಶದ ಬಾಗಿಲು ಪರಿಶುದ್ಧ ರಾಜಮಾರ್ಗವನ್ನು ಪ್ರವೇಶಿಸುವ, ಮತ್ತು ಅಲ್ಲಿಂದ ಮುಂದಕ್ಕೆ ಹೋಗುವ ಬಾಗಿಲು – ಕರೆಯಲ್ಪಟ್ಟ ಸುವಾರ್ತಾ ಸಭೆಯ ದೈವಿಕ ಸ್ವಭಾವವನ್ನು ಹೊಂದಿದ ರೀತಿಯಲ್ಲಿ ಹೊಂದಲು ಅಲ್ಲ, ಆದರೆ ನಿತ್ಯಜೀವಕ್ಕೆ ಮತ್ತು ಮಾನವ ಜಾತಿಯ ಸಂಪೂರ್ಣತೆಗೆ ಮಾತ್ರ ಮುಂದುವರೆಯುವ ಅವಕಾಶವುಂಟಾಗುತ್ತದೆ. (ಸಂಪುಟ I : ಅಧ್ಯಾಯಗಳು X ಮತ್ತು XI).

ಈಗ, ಪರಲೋಕದ ಕರೆಯನ್ನು ಮುಕ್ತಾಯ ಗೊಳಿಸುವುದನ್ನು ಗುರುತಿಸುವಂತೆ ಇಸ್ರಾಯೇಲ್ಯರಿಗೆ ಸೌಭಾಗ್ಯವು ಹಿಂತಿರುಗಲಿರುವ ಕರಾರುವಾಕ್ಕಾದ ದಿನವನ್ನು ಗುರುತಿಸುತ್ತದೆ ಮತ್ತು ಆ ದಿನದಿಂದ ಇಸ್ರಾಯೇಲ್ಯರು ದೈವಿಕ ಭಾಗ್ಯಗಳು ಹೆಚ್ಚುವ ಸಾಕ್ಷ್ಯಗಳನ್ನು ಮತ್ತೂ ಆ ದಿನದಿಂದಲೇ ಪರಲೋಕದ ಗೌರವಗಳು ಕೂಡಾ ಸ್ಥಗಿತಗೊಳ್ಳುತ್ತವೆ. ಆ ನಿಖರವಾದ ದಿನಾಂಕದಂದು ಈಗಾಗಲೇ ಕರೆಯಲ್ಪಟ್ಟಿರುವವರಿಗೆ, ಜೀವಾಂತ್ಯದವರೆಗೂ ನಿಷ್ಠೆಯುಳ್ಳವರಾಗಿದ್ದವರಿಗೆ ಆ ಬಹುಮಾನವನ್ನು ಗೆದ್ದುಕೊಳ್ಳುವ ಅವಕಾಶ ದೊರೆಯಲಿದೆ.

ಶಾರೀರಿಕ ಇಸ್ರಾಯೇಲ್ಯರು, ಆತ್ಮೀಕ ಇಸ್ರಾಯೇಲ್ಯರಂತೆ ದೇವರ ವಿಶಿಷ್ಟ ಜನರಾಗುವಂತೆ, ಇತರ ಎಲ್ಲಾ ಜನರ ಮೇಲೆ ಆತನಿಗೆ ವಿಶಿಷ್ಟವಾದ ನಿಧಿಯಾಗಿರುವಂತೆ ಆತನಿಂದ ಕರೆಯಲ್ಪಟ್ಟಿದ್ದಾರೆ. (ಒಂದು ಭೂಲೋಕದ ನಿಧಿಯೂ, ಮತ್ತು ಇತರರ ನಮೂನೆಯ ಪರಲೋಕದ ನಿಧಿಯೂ ಆಗಿದೆ). ಪ್ರಪಂಚದವರಿಂದ ಪ್ರತ್ಯೇಕಿಸಲ್ಪಟ್ಟ ಅವರುಗಳು ಸಾವಿರದ ಎಂಟು ನೂರ ನಾಲವತ್ತೈದು ವರ್ಷ (1845) ಗಳವರೆಗೆ ದೇವರ ವಿಶೇಷವಾದ ಅನುಗ್ರಹವನ್ನು ಹೊಂದಿಕೊಂಡವ ರಾಗಿದ್ದಾರೆ. ಈ ಅವಧಿಯು ಆರಂಭಗೊಂಡದ್ದು ಅವರ ರಾಷ್ಟ್ರೀಯ ಜೀವನವು, ಪಿತೃಗಳಲ್ಲಿ ಕಡೆಯವನಾದ ಯಾಕೋಬನ ಮರಣದಲ್ಲಿ ಅವರು ಮೊದಲಿಗೆ ಇಸ್ರಾಯೇಲ್ಯರ ಹನ್ನೆರಡು ಕುಲಗಳು ಎಂಬ ರಾಷ್ಟ್ರೀಯ ಹೆಸರಿನಿಂದ ಕರೆಯಲ್ಪಟ್ಟಾಗ ಪ್ರಾರಂಭಗೊಂಡಿದೆ (ಆದಿ. 49:28; 46:3, ಧರ್ಮೋ. 26:5 ಇವುಗಳನ್ನು ನೋಡಿರಿ). ರಾಷ್ಟ್ರೀಯವಾಗಿ ಜೀವನ ಮತ್ತು ಕೃಪೆಯ ಈ ಸಾವಿರದ ಎಂಟು ನೂರಾ ನಾಲ್ವತ್ತೈದು ವರ್ಷಗಳು ಅವರು ಮೆಸ್ಸೀಯನನ್ನು ತಿರಸ್ಕರಿಸಿದಾಗ, ಕ್ರಿ. ಶ 33ರಲ್ಲಿ ಮುಕ್ತಾಯಗೊಂಡಿತು. ಆಗ ಆತನನ್ನು ಶಿಲುಬೆಗೆ ಹಾಕುವುದರ ಐದು ದಿನಗಳ ಮುಂಚೆ ಆತನು ಅವರಿಗೆ ತನ್ನನ್ನು ಒಬ್ಬ ಅರಸನನ್ನಾಗಿ ಅರ್ಪಿಸಿಕೊಂಡಾಗ ಅವರು ಅದನ್ನು ಸ್ವೀಕರಿಸದಿರಲು ಆತನು ಅವರಿಗೆ "ನೋಡಿರಿ, ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" (ಮತ್ತಾಯ 23:38) ಎನ್ನುತ್ತಾನೆ. ಇದು ಅವರ ಭಾಗ್ಯದ ಅಂತ್ಯವಾಗಿದ್ದು ಅವರ ಪತನದ ಅಂಶವಾಗಿದ್ದು ಅದು ಕ್ರಿ.ಶ. 70ರ ತನಕ ಮೂವತ್ತೇಳು ವರ್ಷಗಳ ಕಾಲ ಮುಂದುವರೆದು ಕ್ರಿ.ಶ. 70ರಲ್ಲಿ ಕೊನೆಗೊಂಡಿತು. ಅವರ ರಾಷ್ಟ್ರ ರಾಜ್ಯಾಡಳಿತ, ಪಟ್ಟಣ, ದೇವಾಲಯ ಮುಂತಾದವುಗಳು ಕೊನೆಯಾಯಿತು. ಆದಾಗ್ಯೂ, ದೇವರು ತನ್ನ ಕೃಪೆಯನ್ನು ಆ ರಾಷ್ಟ್ರದ ವ್ಯಕ್ತಿಗಳಿಗೆ ಮುಂದುವರಿಸಿದ್ದನ್ನು ನಾವು ಗಮನಿಸಬೇಕಾಗುತ್ತದೆ. ರಾಷ್ಟ್ರವಾದ ನಂತರ, ಒಂದು ರಾಷ್ಟ್ರವಾಗಿ ಅದು ತೆಗೆಯಲ್ಪಟ್ಟಿತು. ಯಾಕೆಂದರೆ, ಯೇಸುವಿನ ಮರಣಾನಂತರ ಪಂಚಾಶತ್ತಮ ದಿನದಿಂದ ಮೂರುವರೆ ವರ್ಷಗಳವರೆಗೆ ಸುವಾರ್ತಾ ಕರೆಯು ಆ ರಾಷ್ಟದ ವ್ಯಕ್ತಿಗಳಿಗೆ ಮಾತ್ರವೇ ಸೀಮಿತಗೊಂಡಿತ್ತು. ಆ ರೀತಿಯು ಮೊದಲು ಕೃಪೆಹೊಂದಿದ ಅನ್ಯನಾದ ಕೊರ್ನೇಲ್ಯನಿಗೆ ಅದುವರೆಗೆ ಮುಟ್ಟಲಿಲ್ಲ (ಅ.ಕೃ. 10). ಇದು ದಾನಿಯೇಲನ ಮೂಲಕ ವಾಗ್ದಾನ ಮಾಡಿದ ಮತ್ತು ನಮ್ಮ ಕರ್ತನ ದೀಕ್ಷಾಸ್ನಾನದಲ್ಲಿ ಪ್ರಾರಂಭಗೊಂಡ ಎಪ್ಪತ್ತು ವಾರಗಳ ಅಂತ್ಯವಾಗಿತ್ತು ಮತ್ತು ಬರೆದಿರುವಂತೆ, ಆತನು "ಆ ಪ್ರಭುವು ಒಂದು ವಾರದ ಮಟ್ಟಿಗೆ ಬಹು ಜನರೊಂದಿಗೆ ದೃಢವಾದ ಒಡಂಬಡಿಕೆಯನ್ನು ಮಾಡಿಕೊಳ್ಳುವನು" (ದಾನಿಯೇಲ 9:27). ನಮ್ಮ ಕರ್ತನ ದೀಕ್ಷಾಸ್ನಾನದಂದು 70ನೇ ವಾರದ ವರುಷಗಳು ಪ್ರಾರಂಭವಾಯಿತು; ಶಿಲುಬೆಯು ಮುಂತಿಳಿಸಿದಂತೆ ಅದರ ಮಧ್ಯಕಾಲವನ್ನು ಗುರುತಿಸುತ್ತದೆ; ಮತ್ತು ಕೃಪೆಯು ಶಾರೀರಿಕ ಇಸ್ರಾಯೇಲ್ಯರಿಗೆ ಅದರ ಅಂತ್ಯದವರೆಗೆ ಸೀಮಿತಗೊಳ್ಳುತ್ತದೆ.

ರಾಷ್ಟ್ರೀಯ ಕೃಪೆಯ 1845 ವರ್ಷಗಳ ದೀರ್ಘಾವಧಿಯಲ್ಲಿ ಇತರೆ ದೇಶಗಳು ನಿರ್ಲಕ್ಷಿಸಲ್ಪಟ್ಟಾಗ, ಇಸ್ರಾಯೇಲ್ಯರಿಗೆ ದಂಡನೆ ಮತ್ತು ಆಶೀರ್ವಾದಗಳೆರಡೂ

ಒಟ್ಟಾಗಿ ಉಂಟಾದವು. ಆದರೆ ಪಾಪಗಳಿಗಾಗಿ ಅವರಿಗಾದ ಶಿಕ್ಷೆಗಳು ದೇವರ ಕೃಪೆಯ ಮತ್ತು ಅವರ ಮೇಲಿನ ತಂದೆಯ ಪಾಲನೆಯಂತಹ ಸಾಕ್ಷ್ಯಗಳೂ ಮತ್ತು ಅಂಶಗಳೂ ಆಗಿದ್ದವು. ಆತನು ಅವರ ಮೇಲೆ ಉಪದ್ರವಗಳನ್ನು ಬರಮಾಡಿದನು ಮತ್ತು ಆಗಾಗ್ಯೆ ಅವರು ದೇವರನ್ನು ಮರೆತು ಇಲ್ಲವೇ ಆತನಿಗೆ ಅವಿಧೇಯತೆಯನ್ನು ತೋರಿದಾಗ, ಅವರನ್ನು ಸೆರೆಹಿಡಿದು ಕೊಂಡೊಯ್ಯುವಂತೆ ಅನುಮತಿಸಿದನು. ಆದಾಗ್ಯೂ ಅವರು ಪಶ್ಚಾತ್ತಾಪಟ್ಟು ಗೋಳಿಟ್ಟು ದೇವರಿಗೆ ಮೊರೆಹೋದಾಗ ಆತನು ಅವರ ಮೊರೆಯನ್ನು ಕೇಳಿ ಅವರನ್ನು ಬಿಡುಗಡೆಗೊಳಿಸಿದನು. ಈ ಜನರ ಇತಿಹಾಸವು ವಿಮೋಚನಾಕಾಂಡ, ಯೆಹೋಶುವ, ನ್ಯಾಯಸ್ಥಾಪಕರು, ಪೂರ್ವಕಾಲ ವೃತ್ತಾಂತಗಳು, ಸಮುವೇಲ ಮುಂತಾದ ಪುಸ್ತಕಗಳಲ್ಲಿ ದಾಖಲೆಯಾಗಿದ್ದು ದೇವರು ಎಂದೂ ಅವರಿಂದ ಹೆಚ್ಚುಕಾಲ ಮುಖ ಮರೆಮಾಡಿಕೊಳ್ಳಲಿಲ್ಲ, ಅವರ ಪಶ್ಚಾತ್ತಾಪದ ಮೊರೆಗೆ ಅವರು ತಮ್ಮ ಮನೆಯಿಂದ ನಿರ್ಜನರಾದಂದಿನಿಂದಲೂ ಆತನ ಕಿವಿಗಳು ಸದಾ ತೆರೆದಿರುತ್ತಿದ್ದವು ಎಂಬುದನ್ನು ಪ್ರಮಾಣೀಕರಿಸುತ್ತವೆ. ಆ ದಿನದಲ್ಲಿಯೂ ಸಹಾ ದೇವರು ಅವರನ್ನು ಎಂದಿಗಿಂತಲೂ ಹೆಚ್ಚಾಗಿ ಕ್ಷಮಿಸುತ್ತಿದ್ದು, ಬಹಳ ಕಾಲದಿಂದ ವಾಗ್ದಾನ ಮಾಡಿದ್ದ ಮೆಸ್ಸೀಯನನ್ನು, ವಿಮೋಚಕನನ್ನು ನಮ್ಮ ಕರ್ತನ ರೂಪದಲ್ಲಿ ಆತನ ಮಗನನ್ನು ಅವರ ಬಳಿಗೆ ಕಳುಹಿಸಿಕೊಟ್ಟನು. ಆ ಜನಾಂಗವು ಅನರ್ಹರಾದರು ಅಥವಾ ಯಾವುದೇ ಅಂಶದಲ್ಲಿ ದೇವರ ರಾಜ್ಯವನ್ನು ಈ ಲೋಕದಲ್ಲಿ ಪ್ರತಿನಿಧಿಸದೆ ಹೋದರು, ಇದು, ಅವರು ಪವಿತ್ರನಾದ, ನಿಷ್ಕಳಂಕನಾದ, ನಿರ್ದೋಷಿಯಾದವನನ್ನು ತಿರಸ್ಕರಿಸಿ ಆತನ ಸ್ಥಾನದಲ್ಲಿ ಒಬ್ಬ ಕೊಲೆಗಾರನನ್ನು ಬಿಟ್ಟುಕೊಡಲು ಇದ್ದ ಅವರ ಆಕಾಂಕ್ಷೆಯಲ್ಲಿ ವ್ಯಕ್ತವಾಗುತ್ತದೆ.

ಈ ರೀತಿಯಾಗಿ ಅವರ ಅನರ್ಹತೆಯ ಕಾರಣ ಅವರ ಅತ್ಯಂತ ಮಹಾ ಭಾಗ್ಯದ ದಿನವು ಆ ಅನುಗ್ರಹದಿಂದ ತಿರಸ್ಕರಿಸಲ್ಪಡುವ ದಿನವಾಯಿತು. ಮತ್ತು ನಿಷ್ಠಾವಂತ ಉಳಿಕೆಯವರನ್ನು "remnant" ಹೊರತುಪಡಿಸಿ (ಯೆಶಾಯ 1:9, 10:22,23; ರೋಮಾ. 9:28,29; 11:5) ಮೆಸ್ಸೀಯನೊಡನೆ ಜೊತೆ ಬಾಧ್ಯಸ್ಥರಾಗುವ ಮಹಾ ಕೃಪೆಯು ಅವರ ಕುರುಡುತನದಿಂದ ಮತ್ತು ಅವರ ಹೃದಯದಲ್ಲಿನ ದ್ವೇಷ ಮನೋಭಾವದಿಂದ ತಪ್ಪಿ ಹೋಗಿ ಅದು ಅನ್ಯಜನಗಳಲ್ಲಿನ ನಂಬಿಗಸ್ತರ ಪಾಲಾಯಿತು; ಅನ್ಯ ದೇಶಗಳಿಗಲ್ಲ – ಈ ಭಾಗ್ಯವು ಮೊದಲಿನ ಮೂರುವರೆ ವರ್ಷಗಳ ಕಾಲ ಇಸ್ರಾಯೇಲ್ ದೇಶದ ವಿಶ್ವಾಸಿಗಳಿಗೆ ಮಾತ್ರವೇ ಮೀಸಲಾಗಿದ್ದರೂ ಈಗ ಅದು ಎಲ್ಲಾ ದೇಶಗಳ ನೀತಿನಿರ್ಣಯ ಹೊಂದಿದ ನಂಬಿಗಸ್ತರಿಗೆ ನೀಡಲಾಯಿತು. ರಾಷ್ಟ್ರೀಯ ದುರಾಗ್ರಹದ ಕಾರಣ ಕುರುಡರಾದ ಜನರಾಗಿ, ಅವರಿಗೆ ಈ ಮೊದಲು ಕೊಡಮಾಡಿದ್ದ ಮಹಾ ಬಹುಮಾನಕ್ಕೆ ಅವರು ಈಗ ಅನರ್ಹರಾಗಿದ್ದು ಅವರ ರಾಷ್ಟ್ರದ ಪವಿತ್ರ ಜನಾಂಗದ, ಅರ್ಹ ಶೇಷಜನರ ನ್ನೊಳಗೊಂಡ ವಿಶಿಷ್ಟ ಜನರಾದವರಿಗೆ ಮತ್ತು ಒಂದು ಕಾಲದಲ್ಲಿ ಅವರ (ಇಸ್ರಾಯೇಲ್ಯರ) ಅಹಂಭಾವದ ಕಾರಣ ನಾಯಿಗಳೆಂದು ದೂಷಿಸಲ್ಪಟ್ಟಿದ್ದ ಅನ್ಯ ದೇಶಗಳಿಂದ ಕರೆಯಲ್ಪಟ್ಟವರಿಗೆ ಆ ಪ್ರತಿಫಲ ಹೋಗುತ್ತದೆ. ದೇವರು ವಾಗ್ದಾನ ಮಾಡಿದ್ದ ಭಾಗ್ಯವು ಒಂದು ಜನವಾಗಿ ಅವರ ಕುರುಡುತನವನ್ನು ತೆಗೆಯುವಂತೆ ಮತ್ತು ದೇಶಗಳ ಪ್ರಥಮ ಫಲಗಳಾಗಿ ಅವರನ್ನು ಲೌಕಿಕ ಆಶೀರ್ವಾದಗಳಿಗೆ ನಡೆಸುವಂತೆ, ಅನ್ಯಜನರಿಂದ ಪೂರ್ಣ ಪ್ರಮಾಣದ "ಮೀಸಲಾದ ಜನರನ್ನು" ಕರೆಯಲ್ಪಡುವವರೆಗೆ – ಅನ್ಯಜನಾಂಗಗಳ ಕಾಲವು ಪೂರ್ಣವಾಗುವವರೆಗೆ ಈ ಮಹಾ ಸೌಭಾಗ್ಯವು ಅವರಿಗೆ ಹಿಂತಿರುಗುವುದಿಲ್ಲ.

ಈ ರೀತಿಯಲ್ಲಿ ಪೌಲನು ರೋಮಾ. 11:7ರಲ್ಲಿ ಘೋಷಿಸಿದಂತೆ ಶಾರೀರಿಕ ಇಸ್ರಾಯೇಲ್ಯರು ಅವರು ಬಯಸಿದ್ದ ಮುಖ್ಯ ಸೌಭಾಗ್ಯವನ್ನು ಹೊಂದಿಕೊಳ್ಳಲಿಲ್ಲ. ಒಂದು ವೇಳೆ ಆ ಮುಖ್ಯ ಸೌಭಾಗ್ಯವು ಲೌಕಿಕವಾದವುಗಳಾಗಿದ್ದರೆ, ಅವರ ಹೆಮ್ಮೆಯ ಹೃದಯದಲ್ಲಿ ಅವರು ಆ ಮುಖ್ಯ ಸೌಭಾಗ್ಯವನ್ನು ತಮ್ಮ ಜನ್ಮ ಸಿದ್ಧ ಹಕ್ಕು ಎಂದು ಹೇಳಿಕೊಂಡಿದ್ದರೆ, ಮತ್ತು ಅವರ ಕಾರ್ಯಗಳಿಂದ ಅದಕ್ಕೆ ಮುಂದೆ ಪಾತ್ರರಾಗುತ್ತಿದ್ದರೆ, ಅವರು ತಮ್ಮ ಕುರುಡುತನದಿಂದ ಮುಗ್ಗರಿಸಿದವರಾಗಿ, ಕ್ರಿಸ್ತನ ಮೂಲಕವಾದ ಆ ಭಾಗ್ಯವನ್ನು ತಿರಸ್ಕರಿಸುವವರಾಗುತ್ತಾರೆ. ದಾವೀದನು ಮುಂತಿಳಿಸಿದಂತೆ, ಅವರ ಮೇಜುಗಳು ಕ್ರಿಸ್ತನ ಮೂಲಕ ನೀಡಲ್ಪಟ್ಟಿರುವ ಶ್ರೀಮಂತ ವಾಗ್ದಾನಗಳಿಂದ ಹರಡಲ್ಪಟ್ಟಿದ್ದರೂ ಅವರ ಕಠೋರ ಹೃದಯದ ಕಾರಣ ಅವರಿಗೆ ಉರುಲು, ಬೋನು ಮತ್ತು ಮುಗ್ಗರಿಸುವ ತಕ್ಕ ಪ್ರತಿಫಲಗಳಾಗಿವೆ (ರೋಮಾ. 11:9,20; ಕೀರ್ತನೆ 69:22–28). ವಿಮೋಚಿಸಲೆಂದೇ ಬಂದ ಕ್ರಿಸ್ತನು ಅವರನ್ನು ಅವರ ಇಚ್ಛಾಶಕ್ತಿ ಮತ್ತು ಊಹೆಗೂ ಮಿಗಿಲಾದ ಉನ್ನತ ಸ್ಥಾನಕ್ಕೆ ಏರಿಸಬಲ್ಲಾತನು, ಅವರ ಅಹಂಕಾರಕ್ಕೆ ಮುಗ್ಗರಿಸುವ ಕಲ್ಲೂ ಮತ್ತು ಅಪರಾಧದ ಬಂಡೆಯೂ ಆಗುತ್ತಾನೆ (ರೋಮಾ. 9:32,33 ಮತ್ತು ಯೆಶಾಯ 8:14).

ಆದಾಗ್ಯೂ, ಇಸ್ರಾಯೇಲ್ಯರ ಕುರುಡುತನವು ಭಾಗಶಃವಾದ ಕುರುಡುತನವಾಗಿದ್ದು ಕಣ್ಣಿನ ಪೂರ್ಣದೃಷ್ಟಿಯ ನಷ್ಟವಾಗಿರುವುದಿಲ್ಲ. ಯಾಕೆಂದರೆ ಧರ್ಮಶಾಸ್ತ್ರದ ಮತ್ತು ಅಪೋಸ್ತಲರ ಪುರಾವೆಯು ಯೆಹೂದ್ಯರಿಗಾಗಲೀ, ಅನ್ಯಜನರಿಗಾಗಲೀ ಎಲ್ಲರಿಗೂ ಮುಕ್ತವಾಗಿದೆ ಮತ್ತು ಸುವಾರ್ತಾಯುಗದಲ್ಲಿ ಯಾವುದೇ ಯೆಹೂದ್ಯನು ತನ್ನ ಹಗೆತನ ಮತ್ತು ಅಹಂಕಾರದ ಸಣ್ಣ ಎಳೆಯನ್ನೂ ಸಂಕಲ್ಪಪೂರ್ವಕವಾಗಿ ತೊಡೆದುಹಾಕುವಾಗ, ನಮ್ರತೆಯಿಂದಲೂ ಮತ್ತು ಕೃತಜ್ಞತಾಪೂರ್ವಕವಾಗಿಯೂ ದೇವರ ಕೃಪೆಯನ್ನು ತನ್ನ ಅನ್ಯಸಹೋದರನೊಡನೆ

ಸ್ವೀಕರಿಸಬಹುದು. ಆದರೆ ಕೆಲವರು ಮಾತ್ರವೇ ಹಾಗೆ ಮಾಡಲು ಸಾಧ್ಯವಾಗಿದೆ; ಮತ್ತು ಅವರಿಗೆ ಯಾವುದೇ ಕೃಪೆಯು ದಯಪಾಲಿಸಲ್ಪಡುವುದಿಲ್ಲ ಮತ್ತು ಅವರನ್ನು ಸತ್ಯದ ಜನಾಂಗದವರೆಂದು ಮನದಟ್ಟು ಮಾಡಲು ವಿಶೇಷ ಪ್ರಯತ್ನವನ್ನು ಮಾಡುವುದಿಲ್ಲ ಅಥವಾ ಅವರ ಹಗೆತನವನ್ನು ಗೆಲ್ಲುವವರೆಂದು ಶ್ರಮಿಸುವುದಿಲ್ಲ ಅನ್ಯಜನಗಳ ಪೂರ್ಣಪ್ರಮಾಣವು ಒಳಬರುವವರೆಗೂ, ಅಂದರೆ ಬೇರೆ ವಾಕ್ಯವಲ್ಲ. ಹೇಳಬೇಕೆಂದರೆ ಆತ್ಮೀಕ ಇಸ್ರಾಯೇಲ್ಯರು ಪೂರ್ಣವಾಗುವವರೆಗೂ ಇದೆಲ್ಲವೂ ಸಾಗದು.

ಮೆಸ್ಸೀಯನನ್ನು ತಿರಸ್ಕರಿಸಿದಂದಿನಿಂದ – ಅವರ ಮನೆಯು ನಿರ್ಜನವಾದಾಗಿನಿಂದ – ಇಸ್ರಾಯೇಲ್ಯರಿಗೆ ದೇವರ ಕೃಪೆಯ ಯಾವ ಗುರುತೂ ಇರಲಿಲ್ಲ. ಯೆಹೂದ್ಯರು ತಾವೇ ಒಪ್ಪಿಕೊಳ್ಳುವಂತೆ ಹಾಗೂ ಅವರ ಪ್ರವಾದಿಗಳು ಮುಂತಿಳಿಸಿದಂತೆ ಅವರ ಕಣ್ಣೀರು, ನರಳುವಿಕೆಗಳು ಮತ್ತು ಪ್ರಾರ್ಥನೆಗಳು ಉತ್ತರವಿಲ್ಲವಾದವು. ಎಲ್ಲಾ ದೇಶಗಳವರ "ಗಾದೆಗೆ ಮತ್ತು ಬಿರುನುಡಿಗೆ" ಗುರಿಯಾಗಬೇಕಾಯಿತು. ಮೊದಲಲ್ಲಿ ದೇವರು ಅವರ ಪ್ರಾರ್ಥನೆಗಳನ್ನು ಕೇಳುತ್ತಿದ್ದನಾದರೂ, ಅವರ ಕಣ್ಣೀರುಗಳನ್ನು ಗುರುತಿಸಿದ್ದನಾದರೂ, ಮತ್ತು ಅವರನ್ನು ಅವರ ಸ್ಥದೇಶಕ್ಕೆ ಹಿಂತಿರುಗಿಸುತ್ತಿದ್ದನಾದರೂ ಮತ್ತು ನಿರಂತರವಾಗಿ ಅವರಿಗೆ ಕೃಪೆಯುಳ್ಳವನಾಗಿದ್ದರೂ ಈಗ ಆತನು ಅವರ ಮಾತುಗಳನ್ನು ಕೇಳಿಸಿಕೊಳ್ಳುವುದಿಲ್ಲ ಮತ್ತು ಅವರಿಗೆ ಯಾವ ಕೃಪೆಯನ್ನೂ ತೋರಿಸುವುದಿಲ್ಲ. ಏಕೆಂದರೆ "ಆತನ ರಕ್ತವು ನಮ್ಮ ಮೇಲೆಯೂ, ನಮ್ಮ ಮಕ್ಕಳ ಮೇಲೆಯೂ ಇರಲಿ" ಎಂದು ಅವರೇ ಹೇಳಿರುವುದರಿಂದ ಅವರಿಗೆ ಇದು ಎಡಬಿಡದ ದಂಡನೆ ಆಗಿದೆ; ಮುಂತಿಳಿಸಿದಂತೆ ಅವರು ಎಲ್ಲಾ ದೇಶಗಳಿಗೂ ಹರಡಿ ಮತ್ತು ಅಲ್ಲಿ ಹಿಂಸೆಪಡುವವರಾಗಿದ್ದಾರೆ. ಈ ಸತ್ಯವನ್ನು ಎಲ್ಲರೂ ಇತಿಹಾಸದ ಪುಟಗಳಿಂದ ಓದಿಕೊಳ್ಳಬಹುದಾಗಿದೆ. ನಾವೀಗ ಪ್ರವಾದಿಗಳ ಕಡೆಗೆ ತಿರುಗೋಣ ಮತ್ತು ಎಷ್ಟು ನಿರ್ದಿಷ್ಟವಾಗಿ ಈ ಸತ್ಯಗಳು ಮುಂತಿಳಿಸಲ್ಪಟ್ಟಿವೆ ಮತ್ತು ಅದೇ ಪ್ರವಾದಿಗಳು ಅವರ ಭವಿಷ್ಯದ ಬಗ್ಗೆ ಏನು ಹೇಳಲಿದ್ದಾರೆ ಎಂಬುದನ್ನು ನೋಡೋಣ:

ಪ್ರವಾದಿಯಾದ ಯೆರೆಮೀಯನ ಮೂಲಕ (ಅಧ್ಯಾಯ 16) ಇಸ್ರಾಯೇಲ್ಯರಿಗೆ ಅವರು ಯಾವ ರೀತಿಯಲ್ಲಿ ತನ್ನನ್ನು ತೊರೆದಿದ್ದಾರೆಂದು ತಿಳಿಸಿದ ನಂತರ, ಕರ್ತನು "ನೀವಾಗಲೀ, ನಿಮ್ಮ ಪಿತೃಗಳಾಗಲೀ ನೋಡದ ದೇಶಕ್ಕೆ ನಿಮ್ಮನ್ನು ಎಸೆದುಬಿಡುವೆನು; ಅಲ್ಲಿ ಹಗಲಿರಳೂ ಅನ್ಯದೇವತೆಗಳನ್ನು ಸೇವಿಸುವಿರಿ. ನಾನು ನಿಮಗೆ ದಯೆತೋರಿಸೆನು" (ವ. 9–13) ಎನ್ನುತ್ತಾನೆ. ಇಂಥಾಃ ದಿನಗಳು ಅವರು ಮೆಸ್ಸೀಯನನ್ನು ತಿರಸ್ಕರಿಸಿದಾಗ ಬಂದವು. ಈ ಬೆದರಿಕೆಯು ಯಾವ ರೀತಿಯಾಗಿ ಅಕ್ಷರಶಃ ಪೂರ್ತಿಗೊಂಡಿತೆಂಬುದನ್ನು ಎಲ್ಲರೂ ತೀರ್ಮಾನಿಸ ಬಹುದು, ಮತ್ತು ಅವರು ತಾವಾಗಿಯೇ ಒಪ್ಪಿಕೊಳ್ಳಬೇಕು. ಈ ಪ್ರವಾದನೆಯು ಅಸ್ಸೀರಿಯಾ, ಬಾಬೇಲ್ ಮುಂತಾದ ಬೇರೆ ದೇಶಗಳಿಗೆ ಸೆರೆಹೋದ ಅವರ ಹಿಂದಿನ ಗುಲಾಮತನಕ್ಕೆ ಸಂಬಂಧಿಸಿದ್ದಲ್ಲ. ಅಂಥಾಃ ಒಂದು ತೀರ್ಮಾನವನ್ನು "ನೀವಾಗಲೀ, ನಿಮ್ಮ ಪಿತೃಗಳಾಗಲೀ ನೋಡದ ದೇಶಕ್ಕೆ ನಿಮ್ಮನ್ನು ಎಸೆದುಬಿಡುವೆನು" ಎಂಬ ಹೇಳಿಕೆಗೆ ವಿರುದ್ಧವಾಗಿ ರಕ್ಷಿಸುತ್ತದೆ. ಅಬ್ರಹಾಮನು ಬ್ಯಾಬಿಲೋನಿಯಾದ ಕಲ್ದಿಯರ ಊರಿನಿಂದ ಬಂದವನು. ಮತ್ತು ಯಾಕೋಬನು ಆರಾಮ್ಯದಿಂದ. ಆರಾಮ್ಯನಾದ ನಮ್ಮ ಮೂಲಪಿತೃವು ಗತಿಯಿಲ್ಲದವನಾಗಿ ಸ್ವಲ್ಪ ಮಂದಿಯೊಡನೆ ಐಗುಪ್ತಕ್ಕೆ ಹೋಗಿ ಅಲ್ಲಿ ಉಳುಕೊಂಡನು (ಧರ್ಮೋ. 26:5). 1845 ಕೃಪಾ ವರ್ಷಗಳು ಮುಗಿದ ನಂತರದಲ್ಲಿ ಎಲ್ಲಾ ದೇಶಗಳಿಗೆ ಇಸ್ರಾಯೇಲ್ಯರ ಚದುರುವಿಕೆಯು, ಅನ್ಯಥಾ ಸೆರೆಹಿಡುವಿಕೆಗಳು ಅಲ್ಲ. "ನೀವಾಗಲೀ, ನಿಮ್ಮ ಪಿತೃಗಳಾಗಲೀ ನೋಡದ ದೇಶಕ್ಕೆ" ಎಂಬ ಯೆರೆಮೀಯ 16:9–13ರ ಈ ಹೇಳಿಕೆಯಲ್ಲಿನ ಅಂಶಕ್ಕೆ ಹೊಂದಿಕೆಯಾಗುತ್ತದೆ. ಆದುದರಿಂದ ಇದು ಮತ್ತು ಇದರೊಂದಿಗೆ "ದಯೆತೋರಿಸೆನು" ಎಂಬ ಮಾತು ಇಸ್ರಾಯೇಲ್ಯರ ಪ್ರಸ್ತುತ ಕಾಲದಲ್ಲಿ ಎಲ್ಲಾ ದೇಶಗಳಿಗೆ ಚದುರಿಹೋಗುವ ಈ ಪ್ರವಾದನೆಯನ್ನು ಸಕಾರಾತ್ಮಕವಾಗಿ ಗುರುತಿಸುತ್ತದೆ.

ಆದರೆ, ಆತನು ಅವರನ್ನು ದಯೆಯಿಂದ ಕೆಲವು ಕಾಲದ ಮಟ್ಟಿಗೆ ಹೊರಹಾಕಿದನಾದರೂ, ಅವರನ್ನು ಆತನು ಎಂದೆಂದಿಗೂ ಹಾಗೆಯೇ ಬಿಡುವಾತನಲ್ಲ ಎಂದು ಯೆರೇಮಿಯನು ಹೇಳುತ್ತಾನೆ. "ಯೆಹೋವನು ಹೀಗೆನ್ನುತ್ತಾನೆ– ಇಗೋ ಮುಂದಿನ ಕಾಲದಲ್ಲಿ ಜನರು – ಇಸ್ರಾಯೇಲ್ಯರನ್ನು ಐಗುಪ್ತ ದೇಶದೊಳಗಿಂದ ಉದ್ಧರಿಸಿದ ಯೆಹೋವನ ಜೀವದಾಣೆ ಎಂಬುದಾಗಿ ಪ್ರಮಾಣ ಮಾಡುವುದನ್ನು ಬಿಟ್ಟು – ಇಸ್ರಾಯೇಲ್ಯರನ್ನು (ಹೆಚ್ಚು ಕಡಿಮೆ ಅರ್ಧದಷ್ಟು ಇಬ್ರಿಯ ಸಂತತಿಯು ರಷ್ಯಾದಲ್ಲೇ ನೆಲೆಸಿತ್ತು) ಬಡಗಣ ದೇಶದಿಂದಲೂ ತಾನು ತಳ್ಳಿ ಬಿಟ್ಟಿದ್ದ ಸಕಲ ಸೀಮೆಗಳಿಂದಲೂ ಉದ್ಧರಿಸಿದ ಯೆಹೋವನ ಜೀವದಾಣೆ ಎಂದು ಪ್ರಮಾಣಮಾಡುವರು; ನಾನು ಅವರ ಪಿತೃಗಳಿಗೆ ದಯಪಾಲಿಸಿದ ದೇಶಕ್ಕೆ ಅವರನ್ನು ಹಿಂತಿರುಗಿಸುವಿನಷ್ಟೆ (ಯೆರೆಮೀಯ 16: 13–15).

ಯಾಕೋಬ ಅಥವಾ ಶಾರೀರಿಕ ಇಸ್ರಾಯೇಲ್ಯರಿಗೂ ಅನ್ಯಜನರಿಂದ "ಕ್ರಿಸ್ತನ ದೇಹದ" ಸಂಪೂರ್ಣ ಸದಸ್ಯರ ಆಯ್ಕೆಯ ನಂತರ ಉಂಟಾಗುವ ದೇವರ ಕೃಪೆಯ ಹಿಂತಿರುಗುವ ಬಗ್ಗೆ ಪ್ರವಾದಿಗಳ ಮತ್ತು ಅಪೋಸ್ತಲರ ಅನೇಕ ಉಲ್ಲೇಖಗಳನ್ನು ನಾವು ಉದಾಹರಿಸುತ್ತಾ ಹೋಗಬಹುದು. ಆದರೆ ವಿದ್ಯಾರ್ಥಿಗಳು ಇವುಗಳನ್ನು

Concordance ಅಥವಾ Reference Bible ಇವುಗಳಲ್ಲಿ ಹುಡುಕಿ ಕಂಡುಕೊಳ್ಳಬಹುದು. ಇಸ್ರಾಯೇಲ್ಯರಿಗೆ ಪುನಃವಶಗೊಳ್ಳುವ ಕೃಪೆಯ ಬಗ್ಗೆ ನೂತನ ಒಡಂಬಡಿಕೆಯಲ್ಲಿರುವ ಕೆಲವೊಂದು ಗಮನಾರ್ಹ ಉಲ್ಲೇಖಗಳೆಂದರೆ ಯಾಕೋಬನ ಪತ್ರಿಕೆ, ಅ.ಕೃ. 15: 14–16 ಮತ್ತು ರೋಮಾ 11:26 ರಲ್ಲಿನ ಪೌಲನ ಹೇಳಿಕೆ ಇವುಗಳು. ಆದರೆ, ಅದಕ್ಕೂ ಮೊದಲು ಅವರುಗಳು ಅವರ ಶಿಕ್ಷೆಯ ಕಟ್ಟ ಕಡೆಯ ಗಷ್ಟದ ಉಳಿಕೆಯನ್ನೂ ಕುಡಿದು ಮುಗಿಸಬೇಕು. ಹೀಗೆಂದು ಗಮನಾರ್ಹವಾದ ಪ್ರವಾದನೆಯಲ್ಲಿ "ಅವರ ಅಧರ್ಮಕ್ಕೂ ಪಾಪಕ್ಕೂ ಎರಡರಷ್ಟು ಶಿಕ್ಷೆಯನ್ನು ಮೊದಲು ಕೊಡುವೆನು" (ಯೆರೆಮೀಯ 16:18) ಎಂದು ಹೇಳಿದೆಯಷ್ಟೆ (ಕೃಪೆಯು ಹಿಂದಿರುಗುವ ಮುನ್ನ). ಎರಡರಷ್ಟು ಎಂಬುದಕ್ಕೆ ಇಬ್ರಿಯ ಪದವು 'mishneh' (ಮಿಶ್‌ನ್ಹ) ಎಂದಾಗಿದ್ದು ಅದು ಎರಡನೆಯ ಪಾಲನ್ನು, ಪುನರಾವರ್ತನೆಯನ್ನು ಸೂಚಿಸುತ್ತದೆ. ಈ ರೀತಿಯಲ್ಲಿ ಪ್ರವಾದಿಯ ಹೇಳಿಕೆಯನ್ನು ಅವರು ಎಲ್ಲಾ ಕೃಪೆಯಿಂದ ಹೊರಹಾಕಲ್ಪಟ್ಟ ಸಮಯದಿಂದ ಅವರು ಕೃಪೆಗೆ ಹಿಂತಿರುಗುವ ಕಾಲದವರೆಗೆ ಅದು ಪುನರಾವರ್ತನೆಗೊಳ್ಳುತ್ತದೆ ಅಥವಾ ಅವರ ಹಿಂದಿನ ಚರಿತ್ರೆಯಲ್ಲಿ ಅವರು ದೇವರ ಕೃಪೆಯನ್ನು ಅನುಭವಿಸಿದ ಸಮಯದ ಇಮ್ಮಡಿಯಾಗುತ್ತದೆ ಎಂದು ಅರ್ಥ ಮಾಡಿಕೊಳ್ಳಬಹುದು.

ಮುಂದೆ ನೀಡಲಿರುವ ರೇಖಾಚಿತ್ರದಲ್ಲಿ ತೋರಿಸಿರುವಂತೆ ಅವರ ಕೃಪಾಕಾಲವು ಯಾಕೋಬನ ಮರಣದಲ್ಲಿ ಪ್ರಾರಂಭಗೊಂಡ ಅವರ ರಾಷ್ಟ್ರೀಯ ಅಸ್ಥಿತ್ವದಿಂದ ಕ್ರಿಸ್ತನ ಮರಣದಲ್ಲಿ ತೋರಿಬಂದ ಕೃಪೆಯವರೆಗೂ ಅಂದರೆ ಕ್ರಿ.ಶ. 33ರ ವರಗೆ ಒಟ್ಟು 1845 ವರ್ಷಗಳವರೆಗೆ ಇರುವುದಾಗಿದೆ ಮತ್ತು ಅಲ್ಲಿ ಕ್ರಿ.ಶ. 33ರಿಂದ ಅದರ ಪುನರಾವರ್ತನೆ ಅಥವಾ ಅದೇ ವಿಸ್ತಾರವುಳ್ಳ 1845 ವರ್ಷಗಳ ಸಮಯದ ದ್ವಿಗುಣಗೊಳ್ಳುವಿಕೆಯು ಕ್ರಿ.ಶ. 33 + 1845 = ಕ್ರಿ.ಶ. 1878 ಆಗಿದ್ದು ಅದುವೇ ಅವರ ಅವಕೃಪೆಯ ಅಂತ್ಯದ ಕಾಲವಾಗಿದೆ ಎಂದು ತೋರಿಬರುತ್ತದೆ.

ಈ ಎಲ್ಲಾ ಪ್ರವಾದನೀಯ ಅಂಶಗಳು ಹಿಂದೆ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದು ಅವುಗಳಿಂದ ಶಾರೀರಿಕ ಇಸ್ರಾಯೇಲ್ಯರಿಗೆ, ಯಾಕೋಬರಿಗೆ ದೇವರ ಕೃಪಾಕಾಲವು ಕ್ರಿ.ಶ. 1878 ರಲ್ಲಿ ಹಿಂದಿರುಗುವಿಕೆಯ ಬಗೆಗಿನ ಕೆಲವೊಂದು ಸಾಕ್ಷ್ಯಗಳನ್ನು ನಾವು ನಿರೀಕ್ಷಿಸಬಹುದಾಗಿದೆ. ಶತಮಾನಗಳ ಕಾಲದಿಂದ ಪಾಲೆಸ್ಟೈನ್‌ನಲ್ಲಿ ನಿರಾಕರಿಸಲ್ಪಟ್ಟಿದ್ದ ಸವಲತ್ತುಗಳನ್ನು ಈಗ ಯೆಹೂದ್ಯರಿಗೆ ಅನುಮತಿಸಲ್ಪಟ್ಟಿರುವುದರಲ್ಲಿ ನಾವು ಇದರ ಸತ್ಯತೆಯನ್ನು ಕಾಣಬಹುದು. ಅದೇ 1878ನೇ ವರ್ಷವು ಅವರ ಎರಡರಷ್ಟು ಅವಧಿ ಪೂರ್ಣಗೊಂಡಾಗ ಮತ್ತು ದೇವರ ಕೃಪಾಕಾಲದ ಹಿಂದಿರುಗುವಿಕೆ ಕಾಲವು ಆ ಜನರಿಗೆ ಬಂದಾಗ – (Berlin Congress of Nations) ಬರ್ಲಿನ್‌ನಲ್ಲಿ ದೇಶಪ್ರತಿನಿಧಿಗಳ ಸಮ್ಮೇಳನ ಜರುಗಿತು ಮತ್ತು ಅದರಲ್ಲಿ ಇಂಗ್ಲೇಂಡಿನ ಆಗಿನ ಪ್ರಧಾನಿಯಾಗಿದ್ದ ಯೆಹೂದಿಯಾದ ಲಾರ್ಡ್ ಬಿಕಾನ್ಸ್‌ಫೀಲ್ಡ್ (Beaconsfield) ಎಂಬುವವರು ಕೇಂದ್ರೀಯ ವ್ಯಕ್ತಿಯಾಗಿದ್ದು ಅದರ ನಡೆಸುವಿಕೆಯ ಮುಖ್ಯ ಪಾತ್ರ ನೆರವೇರಿಸಿದರು ಅದರಲ್ಲಿ ಇಂಗ್ಲೇಂಡ್ ದೇಶವು ಟರ್ಕಿ, ಪಾಲೆಸ್ಟೈನ್ ಮುಂತಾದ ಏಷ್ಯಾ ಪ್ರಾಂತ್ಯಗಳ ಸಾಮಾನ್ಯ ರಕ್ಷಣಾ ಪಾತ್ರವನ್ನು ವಹಿಸಿಕೊಂಡಿತು ಮತ್ತು ಟರ್ಕಿ ಸರ್ಕಾರವು ವಿದೇಶಿಯವರ ಬಗ್ಗೆ ಇದ್ದ ತನ್ನ ಕಾನೂನುಗಳ ತಿದ್ದುಪಡಿ ಮಾಡಿಕೊಂಡಿದ್ದು ಇದು ಪಾಲೆಸ್ಟೈನ್‌ನಲ್ಲಿ ವಾಸಿಸುತ್ತಿದ್ದ ಇಸ್ರಾಯೇಲ್ಯರ ಪರಿಸ್ಥಿತಿಯನ್ನು ಸುಧಾರಿಸಿತಲ್ಲದೆ ಇತರರಿಗೂ ಸ್ಥಿರಾಸ್ತಿಯನ್ನು ಹೊಂದಿಕೊಳ್ಳುವಂತೆ ತನ್ನ ಬಾಗಿಲನ್ನು ಭಾಗಶಃವಾಗಿ ತೆರೆಯಿತು. ಪೂರ್ವದಲ್ಲಿ ಯೆಹೂದಿಯರ ಪರಿಸ್ಥಿತಿ ನಾಯಿಪಾಡಾಗಿತ್ತು. ಈ ಹಿಂದೆ ಅಲ್ಲಿನ ಮಹಮದೀಯರ ಆಡಳಿತದಲ್ಲಿ ಅವರನ್ನು ಗುದ್ದಿ, ಕಾಲಿನಿಂದ ಒದ್ದು, ಬೈಯ್ಯುತ್ತಿದ್ದರು ಮತ್ತು ಅವರ ಪುಣ್ಯಭೂಮಿಯಲ್ಲಿ, ಭವಿಷ್ಯದಲ್ಲಿ ತಲುಪುವ ವಾಗ್ದಾನಗಳ ನೆನಪಿಸುತ್ತಿರುವಾಗಲೇ ಅವರಿಗೆ ಚಾಲ್ತಿಯಲ್ಲಿರುವ ಸಾಧಾರಣ ಸವಲತ್ತುಗಳನ್ನೂ ನಿರಾಕರಿಸಲಾಗುತ್ತಿತ್ತು.

ಪಾಲೆಸ್ಟೈನಿನ ಬಾಗಿಲು ಅವರಿಗೆ ತೆರೆದ ಅದೇ ಸಮಯದಲ್ಲಿ ರೊಮೇನಿಯಾ ಮತ್ತು ಜರ್ಮನಿ ಪ್ರಾಂತ್ಯಗಳಲ್ಲಿ ಮುಖ್ಯವಾಗಿ ರಷ್ಯಾದಲ್ಲಿ ಭಯಂಕರವಾದ ಹಿಂಸೆಗಳು ಎದ್ದವು. ರಷ್ಯಾದಲ್ಲಿ ಅದು ಇನ್ನೂ ಮುಂದುವರೆಯುತ್ತಾ – ಹೆಚ್ಚುತ್ತಾ ಇದೆ. ಒಂದರ ನಂತರ ಮತ್ತೊಂದು ಕಾಯಿದೆಗಳಿಂದ ಅವರ ಎಲ್ಲಾ ಹಕ್ಕುಗಳನ್ನೂ ಮತ್ತು ಸವಲತ್ತುಗಳನ್ನೂ ಆ ಸರ್ಕಾರಗಳು ನಾಶಗೊಳಿಸಿದವು ಮತ್ತು ಅವರು ಅಲ್ಲಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೊರಹೋಗಲು ಒತ್ತಾಯಪಡುವ ತನಕ ನೆರೆಯವರು ಅವರ ಮೇಲೆ ಮುತ್ತಿಗೆಹಾಕಿದರು. ಆದರೆ ಇವೆಲ್ಲಾ ಹಿಂಸೆಗಳು ನಿಸ್ಸಂದೇಹವಾಗಿ ಅವರ ಅನುಕೂಲಕ್ಕೇ ಆದವು. ಯಾಕೆಂದರೆ ಅವುಗಳಿಂದ ಅವರುಗಳು ಕಾಪಾಡಲ್ಪಟ್ಟರು ಮತ್ತು ಅವರು ಯೆರೂಸಲೇಮಿನತ್ತ ಮತ್ತು ತಮ್ಮ ಒಡಂಬಡಿಕೆಯ ಕಡೆಗೆ ನೋಡುವವರಾದರು ಮತ್ತು ಕೆಲವೊಂದು ಭೂಲೋಕದ ವಾಗ್ದಾನಗಳಿಗೆ ಬಾಧ್ಯಸ್ಥರಾಗಿದ್ದಾರೆಂಬ ನೆನಪನ್ನು ಅವರಲ್ಲಿ ಹುಟ್ಟಿಸಿತು.

ಆದರೆ 1878ನೇ ವರ್ಷವು ಶಾರೀರಿಕ ಇಸ್ರಾಯೇಲ್ಯರಿಗೆ ದಯೆಯು ಹಿಂತಿರುಗುವ ಪರಿವರ್ತನಾ ಕಾಲವಾಗಿತ್ತು ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವೀಗಾಗಲೇ "ಅನ್ಯಜನಗಳ ಕಾಲವು" ಪೂರೈಸುವ

ತನಕ ಯೆರೂಸಲೇಮ್ ಮತ್ತು ಅದರ ಜನರು ಅನ್ಯಜನರಿಂದ ತುಳಿಯಲ್ಪಟ್ಟವರಾಗಿ, ಅವರ ಸಮಯವು ಮುಗಿಯುವವರೆಗೆ ನಿಯಂತ್ರಿಸಲ್ಪಡುತ್ತಾರೆ, ಪೀಡಿಸಲ್ಪಡುತ್ತಾರೆ ಎಂಬುದರ ಬಗ್ಗೆ ನಮ್ಮ ಅಧ್ಯಯನದ ಮೂಲಕ ಕಲಿತಿದ್ದೇವೆ. ಮತ್ತು ಈ ಕಾರಣದಿಂದ, ದಯೆಯು 1878 ರಲ್ಲಿ ಪ್ರಾರಂಭವಾಗಬೇಕಾಗಿದ್ದಾಗ್ಯೂ 1915ರವರೆಗೆ ಯೆಹೂದ್ಯರನ್ನು ಪೂರ್ಣದಯೆಗೆ ಇನ್ನೂ ಸೇರಿಸಿಕೊಳ್ಳಲಾಗಲಿಲ್ಲ. ದಯೆಗೆ ಅವರ ಮೇಲೆ ಏರುವಿಕೆಯು, ಅವರು ದಯೆಯಿಂದ ಬಿದ್ದ ಪ್ರಕಾರವಾಗಿಯೇ ಕ್ರಮೇಣವಾಗಿತ್ತು. ಅವರ ಪತನ ಮತ್ತು ಉನ್ನತಿಯ ಈ ಎರಡೂ ಕಾಲಗಳೂ ಒಂದೇ ವಿಸ್ತಾರವುಳ್ಳದ್ದಾಗಿದ್ದವು ಎಂಬುದು ಗಣನೀಯವಾದುದು. ಬೀಳುವಿಕೆಯು ಕ್ರಮೇಣವಾಗಿದ್ದು ಮೂವತ್ತಮೂರರಿಂದ ಮೂವತ್ತೇಳು ವರ್ಷಗಳ ಕಾಲ ಹೆಚ್ಚುವ ತೀವ್ರತೆಯುಳ್ಳದ್ದಾಗಿತ್ತು. ಆಗ ಅವರ ರಾಷ್ಟ್ರೀಯ ಕೃಪಾಕಾಲವು ತೀರಿತು, 70ಕ್ಕೆ, ಅವರ ರಾಷ್ಟ್ರೀಯ ಕಾಲವು ಮುಗಿಯಲು ಪ್ರಾರಂಭಿಸಿತು, ಅವರ ಭೂಮಿಯು ನಿರ್ಜನವಾಗಲಿತ್ತು ಮತ್ತು ಯೆರೂಸಲೇಮ್ ಸಂಪೂರ್ಣವಾಗಿ ನಾಶನಗೊಳ್ಳುವುದಾಯಿತು. ಈ ರೀತಿಯಲ್ಲಿ ಇತಿಹಾಸವು ಅವರ ಪ್ರಾರಂಭ ಮತ್ತು ಅವನತಿಯನ್ನು ಗುರುತಿಸಿದೆ. ಅದೇ ಸಮಯದಲ್ಲಿ ಪ್ರವಾದನೆಯು ಅವರ ಉನ್ನತಿಯ ಎರಡೂ ತುದಿಗಳನ್ನೂ, ಅಂದರೆ 1878 ಮತ್ತು 1915ನ್ನು ಗುರುತಿಸಿದೆ ಮತ್ತು ಮೂವತ್ತೇಳು ವರ್ಷ ಕಾಲದ ಸಮಾನಂತರವನ್ನು ಗುರುತಿಸಿದೆ. ಇದು ಅವರ mishneh (ಮಿಶ್ನ್ಹ) ಪ್ರವಾದಿಯು ಹೇಳಿರುವ ದ್ವಿಗುಣದ (ಎರಡರಷ್ಟರ) ಮುಂದಿನ ಭಾಗವಾಗಿದೆ.

ಯೆಹೂದ್ಯ ಮತ್ತು ಸುವಾರ್ತಾಯುಗಗಳ ಬದಲಾವಣಾ ಸಮಯಗಳನ್ನು ಸ್ಪಷ್ಟವಾಗಿ ಕ್ರಿ.ಶ. 33 ಮತ್ತು ಕ್ರಿ.ಶ. 1878 ಎಂದು ಅನುಕ್ರಮವಾಗಿ ಸೂಚಿಸಿದ್ದರೂ ಇಸ್ರಾಯೇಲ್ಯರ ನಿರಾಕರಣೆ ಮತ್ತು ಅನುಗ್ರಹದ ಹಿಂದಿರುಗುವಿಕೆಯಿಂದ ಗುರುತಿಸಿದರೂ ಸಹ ಪ್ರತಿ ಯುಗದ ಕಾರ್ಯವು ಒಂದರ ಹಿಂದೆ ಒಂದು ಅನುಕರಣಾ ಕ್ರಮದಲ್ಲಿ ವ್ಯಾಪಿಸುತ್ತದೆ. ಯೆಹೂದ್ಯ ಯುಗದ ಪರಿವರ್ತನಾ ಕಾಲವು (turning point) ತಲುಪಿದ ನಂತರ, ಅಲ್ಲಿಂದ ಅವರ ಯುಗವು ಮಿಲಿಯಾಂತರ ಯುಗದ ಪ್ರಾರಂಭದ ಮೇಲೆ ವ್ಯಾಪಿಸಿತು (lapped). ಕೃಪಾಕಾಲದಂತೆಯೇ ಅದರ ಹಿಂದಿರುಗುವಿಕೆಯೂ ಇರುತ್ತದೆ. ಇದು ಮಿಲಿಯಾಂತರ ಯುಗದಲ್ಲೂ ಶುರುವಾಗುವ ಒಂದು ವೈಶಿಷ್ಟ್ಯವಾಗಿದೆ. ಒಂದರ ಹಿಂದೆ ಒಂದು ಸುವಾರ್ತಾಯುಗದ ಸುಗ್ಗಿಯ ಅಂತ್ಯದಲ್ಲಿ ಸಂಭವಿಸುವದಾಗಿದೆ. 37 ವರ್ಷಗಳ ಕಾಲ (33 ಕ್ರಿ.ಶ. ದಿಂದ ರಾಷ್ಟ್ರೀಯ ಅನುಗ್ರಹದ ಅಂತ್ಯವಾದ 70 ಕ್ರಿ.ಶ. ಇಸ್ರಾಯೇಲ್ಯರನ್ನು ಸಂಪೂರ್ಣವಾಗಿ ತಳ್ಳಿಬಿಟ್ಟ ನಂತರ), ಇಸ್ರಾಯೇಲ್ಯರಲ್ಲಿ ಕೆಲವು ನಂಬಿಗಸ್ತ ಉಳಿದವರನ್ನು (remnants) ಹೊರತುಪಡಿಸಿ, ಬೀಳುತ್ತಾ ಬಂದರು, ನಂಬುವಂತೆ ಅನ್ಯಜನಾಂಗದವರು ಉಗಮವಾಗ ತೊಡಗಿದರು – ಯೆಹೂದ್ಯ ಯುಗವು ಅಂತ್ಯವಾಗುತ್ತಿತ್ತು ಮತ್ತು ಸುವಾರ್ತಾಯುಗವು ಆರಂಭಗೊಳ್ಳುತ್ತಿತ್ತು; ಮತ್ತು 37 ವರ್ಷಗಳಿಗೆ (ಕ್ರಿ.ಶ. 1878 ರಿಂದ ಕ್ರಿ.ಶ. 1915 ರವರೆಗೆ) ಸುವಾರ್ತಾಯುಗವು ಕೊನೆಗೊಳ್ಳುತ್ತದೆ, ಅಲ್ಲದೇ ಕ್ರೈಸ್ತ ಜನಾಂಗವೆನಿಸಿಕೊಂಡವರ ಮೇಲೆ ಸಂಕಟಗಳು ತಯಾರಾಗಿ ಬರುತ್ತಲಿದೆ. ನಂಬಿಗಸ್ತ ಉಳಿಕೆಯವರನ್ನು (remnants) ಹೊರತುಪಡಿಸಿದೆ. ಅಲ್ಲದೇ ಪುನರ್‌ವಶದ ಕಾರ್ಯವು ಇಸ್ರಾಯೇಲ್ಯರಿಗೆ ಮತ್ತು ಎಲ್ಲಾ ಜನಾಂಗಗಳಿಗೆ ತಯಾರಾಗುತ್ತಿದೆ. ಹೇಳಬೇಕೆಂದರೆ ಕ್ರಿ.ಶ. 33 ಮತ್ತು ಕ್ರಿ.ಶ. 1878ರ ಕಾಲವು ಅನುಕ್ರಮವಾಗಿ ಹೊಸ ಯುಗಗಳು ಪ್ರಾರಂಭವಾಗುವುದನ್ನು ಸೂಚಿಸುತ್ತದೆ. ಸುಗ್ಗಿಯ ಕಾರ್ಯವು ಮುಂದಾಗಿ ಸಂಭವಿಸಿದರೂ, ಅನುಪಯುಕ್ತ ವಾದದ್ದನ್ನು ನಾಶಪಡಿಸಿದರು. 37 ವರ್ಷಗಳು ಮುಂದುವರೆದು ಹೊಸದಕ್ಕೆ ಬೀಳುವುದಕ್ಕೆ ಎಡೆಕೊಟ್ಟಿತು. ಇದು ಎರಡು ವಿಷಯಗಳಿಗೆ ಅನ್ವಯಿಸುತ್ತದೆ. ಹೀಗೆ, ದೈವಸಂಕಲ್ಪದ ವ್ಯಾಪಿಸುವಿಕೆ, ಮತ್ತು ಅದರ ಅಂತ್ಯಗಳನ್ನು ಸ್ಪಷ್ಟವಾಗಿ ವಿವರಿಸಿದೆ.

ಎರಡರಷ್ಟು ಕಾರ್ಯವು ಈ ಪ್ರತಿಯೊಂದು ವ್ಯಾಪಿಸುವಿಕೆಯ lapping ಅವಧಿಗೆ ಸೇರಿದೆ; ಹಳೆಯದನ್ನು ಕೆಳಗೆ ಎಳೆದುಹಾಕುವುದು ಮತ್ತು ನೂತನ ವ್ಯವಸ್ಥೆಯನ್ನು ಅಥವಾ ದೈವೇಚ್ಛೆಯನ್ನು ಸ್ಥಾಪಿಸುವುದು. ಯೆಹೂದ್ಯ ಕಾಲ ಮತ್ತು ಜನರು ಸಾಂಕೇತಿಕರೂ ಅಥವಾ ಛಾಯೆಯಾದವರೂ ಆದ ಕಾರಣ ನಾವಿಲ್ಲಿ ಫಲಿತಾಂಶವನ್ನು ಅಲ್ಲಿರುವುದಕ್ಕಿಂತ ಇನ್ನೂ ವ್ಯಾಪಕವಾಗಿ ಕಾಣಬಹುದು, ಹೀಗಾಗಿ ನಾವು ಅದನ್ನು ಕಂಡುಕೊಳ್ಳಬೇಕು. ಈ ದ್ವಿಗುಣ ಕಾರ್ಯವನ್ನು "ಏಕೆಂದರೆ, (1) ಮುಯ್ಯಿ ತೀರಿಸುವ ದಿನವು ನನ್ನ ಹೃದಯದಲ್ಲಿ ಸಿದ್ಧವಾಗಿತ್ತು, (2) ನನ್ನ ಜನರನ್ನು ವಿಮೋಚಿಸುವ ವರುಷವು ಒದಗಿತ್ತು" (ಯೆಶಾಯ 63:4) ಎಂಬ ಹೇಳಿಕೆಯಲ್ಲಿ ಕಾಣಬಹುದು.

ಇದೊಂದು ಸತ್ಯ ಸಂಗತಿಗಳನ್ನು ಹೊಂದಿಸಿ ಕೊಳ್ಳುವುದಕ್ಕಾಗಿ ಮೋಸಕರವಾಗಿ ಮಾಡಿದ ಉಪಾಯದ ಹೊಂದಾಣಿಕೆಯಲ್ಲ; ಯಾಕೆಂದರೆ ಈ ಎಲ್ಲಾ ಹೆಚ್ಚಿನ ಸಮಾನಾಂತರಗಳೂ ಮತ್ತು ಇತರೇ ಸತ್ಯಗಳು ಪ್ರವಾದನೆಗಳ ಮೂಲಕ ನೋಡಿದ್ದಾಗಿದೆ ಮತ್ತು ಇಲ್ಲಿ ಪ್ರಸ್ತುತಪಡಿಸಿದಂತೆಯೇ 1878ರ ಅನೇಕ ವರ್ಷಗಳ ಹಿಂದಿನಿಂದಲೂ ಇಸ್ರಾಯೇಲ್ಯರಿಗೆ ದಯೆಯು ಹಿಂತಿರುಗುವ ಕಾಲವೆಂದು ಬೋಧಿಸಲಾಗಿದೆ ಮತ್ತು ಆ

# ಇಸ್ರಾಯೇಲ್ಯರ ಎರಡೂ ಮನೆತನದವರು

## "Both The Houses of Israel"

### – ಕಾಲ ಸಮಾನಾಂತರಗಳು –

| | | | | | |
|---|---|---|---|---|---|
| ಯೆಹೂದ್ಯ ಕೃಪಾಕಾಲ, ರಾಜ್ಯಕ್ಕಾಗಿ ಕಾಯುವಿಕೆ<br>1845 + 3½ ವರ್ಷಗಳು | ಯಾಕೋಬನ ಮಕ್ಕಳ ರಾಷ್ಟ್ರೀಯ ಅಸ್ಥಿತ್ವ,<br>ಇಸ್ರಾಯೇಲ್ಯರೆಂಬ ಉಪನಾಮ,<br>ಪಿತೃವಾದ ಯಾಕೋಬನ ಮರಣದಿಂದ<br>ದಿನಾಂಕಗೊಳಿಸುವಿಕೆ | ಕ್ರಿ.ಪೂ 1813 | ಕ್ರಿ.ಶ. 33 | ಕ್ರೈಸ್ತರ ಕೃಪಾಕಾಲ ಮತ್ತು ವಿಶ್ವಾಸಿಗಳಿಗೆ ಮಹಾಕರೆ.<br>ಮೇಸ್ಸೀಯನ ಮರಣದಿಂದ<br>ಬಾಬೇಲಿನ ತಿರಸ್ಕಾರ ಮತ್ತು<br>ಪತನದ ವರೆಗೆ ದಿನಾಂಕಗೊಳಿಸುವಿಕೆ | ಕ್ರೈಸ್ತರ ಕೃಪಾಕಾಲ ರಾಜ್ಯಕ್ಕಾಗಿ ಕಾಯುವಿಕೆ<br>ಯೆಹೂದ್ಯರ ಕಾಲದಲ್ಲಿ ದ್ವಿಗುಣ 1845 + 3½ ವರ್ಷಗಳು |
| 70ನೇ ವಾರ | | ಕ್ರಿ.ಶ. 29 | ಕ್ರಿ.ಶ. 1874 | | |
| | ಅರಸನು ಬಂದಿದ್ದಾನೆ | ಕ್ರಿ.ಶ. 33 | ಕ್ರಿ.ಶ. 1878 | ಅರಸನು ಬಂದಿದ್ದಾನೆ | |
| | | ಕ್ರಿ.ಶ. 36 | ಕ್ರಿ.ಶ. 1881 | | |
| ಯೆಹೂದ್ಯ ಸುಗ್ಗಿ ಕಾಲ<br>3½ +3½ +33 = 40 ವರ್ಷಗಳು | ಇಸ್ರಾಯೇಲ್ಯರ ಪತನ | | | ಬಾಬೇಲಿನ ಪತನ | ಕ್ರೈಸ್ತರ ಸುಗ್ಗಿ ಕಾಲ<br>3½ + 3½ +33 = 40 ವರ್ಷಗಳು |
| | ಪ್ರತೀಕಾರದ ದಿನಗಳು | | | ಪ್ರತೀಕಾರದ ದಿನಗಳು | |
| | (ಲೂಕ 21:22) | | | (ದಾನಿಯೇಲ 12:1) | |
| | ಸಂಕಷ್ಟದ ಸಮಯ ಮತ್ತು ಅಂತಿಮವಾಗಿ ಹೊರಹಾಕುವಿಕೆ | ಕ್ರಿ.ಶ. 70 | ಕ್ರಿ.ಶ. 1915 | ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು. | |

ವರ್ಷವನ್ನು ಅದು ಬರುವದಕ್ಕೆ ಮುಂಚೆ ಮತ್ತು (ಹಾಗೆಂದು ಬೇರೆ ಯಾವುದೇ ಘಟನೆಯು ಸ್ಪಷ್ಟವಾಗುವ ಮೊದಲೇ ಪ್ರಕಟಿಸಲಾಗಿದೆ. ಈ ಸಂಪುಟದ ಗ್ರಂಥಕರ್ತನು ಈ ಸಿದ್ಧಾಂತಗಳನ್ನು ಪರಿಶುದ್ಧ ಗ್ರಂಥಗಳಿಂದ ತೆಗೆದು ಕರಪತ್ರಗಳ ರೂಪದಲ್ಲಿ 1877ರ ವಸಂತ ಋತುವಿನಲ್ಲಿಯೇ ಪ್ರಕಟಿಸಿದ್ದಾರೆ.

ಈ ಸಾಕ್ಷ್ಯವು ಅಪರೂಪವಾಗಿ ಪ್ರಬಲವಾಗಿದ್ದು ಇದನ್ನು ಜ್ಞಾನವು ಹೆಚ್ಚುವವರೆಗೆ ಮತ್ತು ಜ್ಞಾನವಂತರು ಪರಲೋಕದ ಬೋಧನೆಗಳನ್ನು ಅರ್ಥಮಾಡಿಕೊಳ್ಳುವಂತೆ ಗುಪ್ತವಾಗಿ ಇಡಲಾಗಿತ್ತು. ಇಸ್ರಾಯೇಲ್ಯರ ತಿರಸ್ಕಾರದ ನಿಖರವಾದ ವರ್ಷವು, ಹೌದು ದಿನವೂ ಸಹ ನಮಗೆ ತಿಳಿದದೆ; ಅವರು (mishneh) ಮಿಶ್ನಃ ಅಥವಾ ಎರಡು ಪಟ್ಟು ಹೊಂದಿಕೊಳ್ಳಬೇಕಾಗಿದೆ ಎಂದು ಪ್ರವಾದಿಯು ಸ್ಪಷ್ಟವಾಗಿ ಹೇಳಿದ್ದಾನೆ. ಈ ಸಮಾನಾಂತರ ಅವಧಿಯು 1845 ವರ್ಷಗಳಷ್ಟು ದೀರ್ಘವಾಗಿದ್ದು 1878 ಕ್ರಿ.ಶ.ದಲ್ಲಿ ಅದು ಕೊನೆಗೊಂಡಿತು ಎಂದು ನಾವು ತೋರಿಸಿದ್ದೇವೆ, ತಿಳುಕೊಂಡಿದ್ದೇವೆ ಮತ್ತು ಇದು ದಯೆಯಿಂದ ಗುರುತಿಸಲ್ಪಟ್ಟಿದೆ ಎಂಬುದು ಯಾವುದೇ ತಕರಾರಿಲ್ಲದ ಸತ್ಯವಾಗಿದೆ. ಆದರೆ ಮನಸ್ಸಿನಲ್ಲಿಟ್ಟುಕೊಳ್ಳಿ ಅದು ಅವರ ದುಪ್ಪಟ್ಟಿನ ನಿಮಿತ್ತವೆಂದು ಪ್ರೊ॥ ಡೆಲಿಚ್ (Delitzch) ಎಂಬುವವರು ಅವರ ನೂತನ ಒಡಂಬಂಡಿಕೆಯ ಇಬ್ರಿಯ ಭಾಷಾಂತರದಲ್ಲಿ ಪ್ರಕಟಿಸಿದ್ದಾರೆ. ಇದು ಈಗಾಗಲೇ ಸಾವಿರಾರು ಇಬ್ರಿಯರ ಕೈಯಲ್ಲಿದ್ದು ಅವರಲ್ಲಿ ಕುತೂಹಲವನ್ನು ಎಬ್ಬಿಸಿದೆ. ಅದೂ ಅಲ್ಲದೇ, ಅಪೋಸ್ತಲರ ಕಾಲದ ನಂತರ ಯೆಹೂದ್ಯರ ಮಧ್ಯದಲ್ಲಿ ರಬಿನೋವಿಚ್ (Rabinowitsch) ಮತ್ತಿತರ ಮುಂದಾಳತ್ವದಲ್ಲಿ ನಡೆದ ಮಹಾ ಚಳುವಳಿಯು ಇನ್ನೂ ರಷ್ಯಾದಲ್ಲಿ ಪ್ರಗತಿಯಲ್ಲಿದೆ. ಅದರ ಪ್ರಾರಂಭವು ಇಸ್ರಾಯೇಲ್ಯರ ದ್ವಿಗುಣವು ಅಂತ್ಯವಾದ 1878ರ ಬಹಳ ಸಮಯದ ನಂತರ ಉಂಟಾಗಿದ್ದು ಕ್ರಿ.ಶ. 33ರಲ್ಲಿ ಇಸ್ರಾಯೇಲ್ಯರ ತಿರಸ್ಕಾರದ ನಂತರ ಅನ್ಯಜನರ ನಡುವೆ ಎಚ್ಚೆತ್ತುಕೊಳ್ಳುವ ಸಮಯವಾಗಿತ್ತು.

ಈಗ ನಾವು ಅಪೋಸ್ತಲರ ಮಾತುಗಳನ್ನು ನಮ್ಮ ಮನಸ್ಸಿಗೆ ತಂದುಕೊಳ್ಳೋಣ. ಅದು ಅನ್ಯಜನರ ಸಂಖ್ಯೆಯು ಪೂರ್ಣವಾಗುವವರೆಗೂ, ಸುವಾರ್ತಾ ಕರೆಯು ಅಂತ್ಯದವರೆಗೂ ಅವರದಾಗಿದ್ದ ದೇವರ ದಯೆಯಿಂದ ಮತ್ತು ಭೂಲೋಕದ ಒಡಂಬಡಿಕೆಗಳಿಂದ ಅವರು ತೆಗೆದುಹಾಕಲ್ಪಟ್ಟಿದ್ದಾರೆಂದು ಸ್ಪಷ್ಟವಾಗಿ ತೋರಿಸುವುದಾಗಿದೆ. ನಂತರದಲ್ಲಿ 1878ನೇ ವರ್ಷವು ಆತ್ಮೀಕ ಇಸ್ರಾಯೇಲ್ಯರ ಆಳವಾದ ಆಸಕ್ತಿಗೆ ಗುರುತಿಸಲ್ಪಟ್ಟ ವರ್ಷವಾಗಿತ್ತು ಎಂದು ನೀವು ನೋಡಬಹುದು. ಇದು ಶಾರೀರಿಕ ಇಸ್ರಾಯೇಲ್ಯರಿಗಿಂತ ಕಡಿಮೆ ಪ್ರಾಮುಖ್ಯ ವಾದುದೇನಲ್ಲ.

ನಮ್ಮ ಕರ್ತನಾದ ಯೇಸುವಿಗಲ್ಲದೆ ಬೇರೆ ಯಾರಿಗೂ ಧರ್ಮಶಾಸ್ತ್ರಯುಗದ ಅಂತ್ಯ ಮತ್ತು ಸುವಾರ್ತಾಯುಗದ ಪ್ರಾರಂಭದ ಅರ್ಥ ಸೂಚಿಸುವಿಕೆಯ ಬಗ್ಗೆ ತಿಳಿಯದೇ ಇರುವುದರಿಂದ (ಅಪೋಸ್ತಲರೂ ಸಹ ಭಾಗಶಃ ಪಂಚಾಶತ್ತಮದವರೆಗೆ ಮಾತ್ರವೇ ಮತ್ತು ಅದನ್ನು ಮಸುಕಾಗಿ ತಿಳಿದಿದ್ದರು). ಆದುದರಿಂದ ಅದೇ ಆತ್ಮನಿಂದ ಅಭಿಷೇಕಿಸಲ್ಪಟ್ಟ ಕ್ರಿಸ್ತನ ದೇಹವು ಮಾತ್ರವೇ ಸುವಾರ್ತಾ ಯುಗದ ಅಂತ್ಯವನ್ನು ಮತ್ತು ಅದರ ಪ್ರಮುಖವಾದ ಅರ್ಥಸೂಚಿಕೆಯನ್ನು ಕಾಣಬಹುದೆಂದು ನಾವು ನಿರೀಕ್ಷಿಸಬಹುದು. ಅಲ್ಪರಾದ ಯೆಹೂದ್ಯರಿಗೆ ಮತ್ತು ಕ್ರೈಸ್ತರೆಂದು ಹೇಳಿಕೊಳ್ಳುವ ಕೆಲವರಿಗೆ ಪ್ರಥಮ ಆಗಮನದಲ್ಲಿ ಕಂಡು ಬಂದ ದೈವ ನಿರ್ವಹಣೆಯ ಮಹಾ ಬದಲಾವಣೆಗಳ ಬಗ್ಗೆ – ಯೆಹೂದ್ಯ ಕಾಲದ ಸಮಾಪ್ತಿಯ ಬಗ್ಗೆ ಮತ್ತು ಸುವಾರ್ತಾಯುಗದ ಪ್ರಾರಂಭದ ಬಗ್ಗೆ ಇನ್ನೂ ಅರಿವಿಲ್ಲ. ಅದರಂತೆ ಈಗಲೂ, ಸ್ವಾಭಾವಿಕ ಸಾಕ್ಷ್ಯಗಳು ಕಂಡುಬರುವವರೆಗೆ ನಾವು ಸುವಾರ್ತಾಯುಗದ ಸುಗ್ಗಿಯ ಕಾಲದ ಅಂತ್ಯದಲ್ಲಿದ್ದೇವೆಂಬುದು ಮತ್ತು 1878ನೇ ಇಸವಿಯು ಈ ಅಂಶಕ್ಕೆ ಮಾಡಿರುವಂತೆ ಬಹಳ ಮುಖ್ಯವಾಗಿದೆ ಎಂಬುದು ಕೆಲವರಿಗೆ ಮಾತ್ರವೇ ತಿಳಿದಿದೆ ಅಥವಾ ತಿಳುಕೊಳ್ಳುವರು. ಅದು ಎಲ್ಲರಿಗಿಂತಲೂ, ಕೆಲವು ವಿಶ್ವಾಸಿಗಳಿಗೆ ಮಾತ್ರವೇ ತಿಳಿದಿರಬೇಕು, ಪ್ರಪಂಚದೊಂದಿಗೆ ಅವರು ಕತ್ತಲೆಯಲ್ಲಿರಬಾರದು ಎಂಬುದು ಉದ್ದೇಶವಾಗಿದೆ. "ಪರಲೋಕ ರಾಜ್ಯದ ಮರ್ಮಗಳನ್ನು ತಿಳಿದು ಕೊಳ್ಳುವುದಕ್ಕೆ ನಿಮಗೆ ಕೊಡಲ್ಪಟ್ಟಿದೆ" ಎಂದು ಕರ್ತನು ಹೇಳಿದ್ದಾನೆ (ಮತ್ತಾಯ 13:11).

"ಯೆರೆಮೀಯನು ನಿಜವಾಗಿಯೂ ಕರ್ತನ ಪ್ರವಾದಿಯಾಗಿರುವ ನಾದರೂ, (misneh) 'ಮಿಶ್ನಃ' ಅಥವಾ ಇಸ್ರಾಯೇಲ್ಯರ ಅನುಭವಗಳ ದ್ವಿಗುಣತೆಯ ಬಗ್ಗೆ ಆತನ ಸಾಕ್ಷ್ಯಕ್ಕೆ ಗೌರವಿಸಲೇಬೇಕಾದರೂ, ಇನ್ನೊಬ್ಬ ಪ್ರವಾದಿ ಇದೇ ಸಂಗತಿಗಳ ಬಗ್ಗೆ ಇನ್ನೂ ಪ್ರಬಲವಾಗಿ ಹೇಳಿದ್ದರೆ ಅದನ್ನೂ ನಾವು ಗೌರವಿಸಬೇಕಾಗುತ್ತದೆ" ಎಂದು ಕೆಲವರು ಬಹುಶಃ ಹೇಳಬಹುದು. ಅಂಥವರಿಗೆ "ಒಬ್ಬ ನಂಬಲರ್ಹ ಪ್ರವಾದಿಯ ಹೇಳಿಕೆಯು ಒಳ್ಳೆಯದರ ಮತ್ತು ನಂಬಿಕೆಯ ಆಧಾರಕ್ಕೆ ಸಾಕು" ಎಂದು ನಾವು ಉತ್ತರಿಸುತ್ತೇವೆ. ಯಾಕೆಂದರೆ, ಮೊದಲನೆಯ ಆಗಮನದಲ್ಲಿ ಗಮನಾರ್ಹವಾದ ಅನೇಕ ಸಾಕ್ಷ್ಯಗಳು ಒಬ್ಬ ಏಕಾಂಗಿ ಪ್ರವಾದಿಯ ಮೂಲಕ ಮುಂತಿಳಿಸಲ್ಪಟ್ಟಿದ್ದವು; ಪರಂತು, ಕೃಪೆಯಲ್ಲಿ ಐಶ್ವರ್ಯವಂತನೂ, ಅತ್ಯಂತ ಕರುಣಾಳುವೂ ಆದ ದೇವರು ನಮ್ಮ ವಿಶ್ವಾಸದ ಬಲಹೀನತೆಯನ್ನು ಪರಿಗಣಿಸಿ ನಮ್ಮ ಹೃದಯದ ಪ್ರಾರ್ಥನೆಗಳಿಗೆ ಮುಂಚಿತವಾಗಿಯೇ ಉತ್ತರಿಸಿದ್ದಾನೆ ಮತ್ತು ಒಂದಕ್ಕಿಂತ ಹೆಚ್ಚು ಸಾಕ್ಷ್ಯಗಳನ್ನು ಒದಗಿಸಿದ್ದಾನೆ.

ಜೆಕರ್ಯನ ಪ್ರವಾದನೆಯನ್ನು (9:9–12) ನೋಡಿರಿ. ಪ್ರವಾದಿಯ ದರ್ಶನದಲ್ಲಿ ಆತನು ಕ್ರಿ.ಶ. 33ರಲ್ಲಿ ಕ್ರಿಸ್ತನು ಶಿಲುಬೆಗೆ ಹಾಕಲ್ಪಡುವ ಐದು ದಿನಗಳ ಮೊದಲು ಯೇಸುವಿನ ಸಂಗಡ ನಡೆಯುತ್ತಾನೆ (ಯೋಹಾನ 12:1–12), ಮತ್ತು ಜನರಿಗೆ ಪ್ರವಾದಿಯು "ಯೆರೂಸಲೇಮ್ ನಗರಿಯೇ, ಬಹು ಸಂತೋಷಪಡು; ಯೆರೂಸಲೇಮ್ ಪುರಿಯೇ, ಹರ್ಷಧ್ವನಿಗೈ! ನೋಡು, ನಿನ್ನ ಅರಸನು ನಿನ್ನ ಬಳಿಗೆ ಬರುತ್ತಾನೆ; ಆತನು ನ್ಯಾಯವಂತನು, ಸುರಕ್ಷಿತನು; ಶಾಂತತೆಯುಳ್ಳವನಾಗಿಯೂ, ಕತ್ತೆಯನ್ನು, ಹೌದು ಪ್ರಾಯದ ಕತ್ತೆಯನ್ನು ಹತ್ತಿದವನಾಗಿಯೂ ಬರುತ್ತಾನೆ" ಎಂದು ಕೂಗಿ ಹೇಳಿದಂತೆಯೇ, ಯೇಸುವು ಯೆರೂಸಲೇಮ್ ನಗರವನ್ನು ಕತ್ತೆಯ ಮೇಲೆ ಕೂತು ಪ್ರವೇಶ ಮಾಡುವಾಗ ಜನಸಮೂಹದವರು ಕೂಗಿ ಹೇಳಿದರು (ಮತ್ತಾಯ 21:4–9, 43; ಯೋಹಾನ 12:12–15; ಲೂಕ 19:40–42). ಪ್ರತಿಯೊಂದು ಸಂಗತಿಯೂ ನೆರವೇರಿತು ಎಂಬುದನ್ನು ಗುರುತಿಸಿ. ಜನರು ಹೊಸನ್ನ! ಎಂದು ಕೂಗಿದಾಗ ಫರಿಸಾಯರು ಅವರನ್ನು ಗದರಿಸುವಂತೆ ಯೇಸುವಿಗೆ ಹೇಳಿದರು, ಆದರೆ ಯೇಸು ಅದನ್ನು ನಿರಾಕರಿಸಿ "ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವುವು" (ಲೂಕ 19:42) ಎಂದು ಉತ್ತರಿಸಿದನು. ಯಾಕೆ? ಆರ್ಭಟಿಸುವಿರುವುದೆಂದು ಪ್ರವಾದಿಸಲ್ಪಟ್ಟಿತ್ತು, ಪ್ರವಾದನೆಯ ಎಲ್ಲಾ ಮಾತುಗಳು ನೆರವೇರಬೇಕಾಗಿದೆ. ಪ್ರವಾದನೆಯ ನೆರವೇರುವಿಕೆಯ ಈ ವೈಶಿಷ್ಟ್ಯವು ನಮಗೆ ಇದು ಮತ್ತು ಇತರೆ ಪ್ರವಾದಿಗಳ ಹೇಳಿಕೆಯ ಮೇಲೆ ಭರವಸೆಯನ್ನುಂಟು ಮಾಡುವಂತಾಗಲಿ.

ಅವರು ಅರಸನನ್ನು ತಿರಸ್ಕರಿಸಿದ ನಂತರದಲ್ಲಿ ಉಂಟಾಗುವ ಕೆಟ್ಟ ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಗಮನಿಸಿದ ನಂತರ (ಜೆಕರ್ಯ 9:10) ಯೆಹೋವನ ಪರವಾಗಿ ಮಾತನಾಡುವ ಪ್ರವಾದಿಯು ಅವರನ್ನು ಉದ್ದೇಶಿಸಿ "ಸುನಿರೀಕ್ಷೆಯುಂಟಾದ ಸೆರೆಯವರೇ, ನಿಮ್ಮ (ಕ್ರಿಸ್ತನಿಗೆ) ದುರ್ಗಕ್ಕೆ ಹಿಂದಿರುಗಿರಿ; ನಿಮಗೆ ಎರಡರಷ್ಟು (ಸುಖವನ್ನು) ದಯಪಾಲಿಸುವೆನು ಎಂದು ಈಗಲೂ ಪ್ರಕಟಿಸುತ್ತೇನೆ" (ಜೆಕರ್ಯ 9:12) ಎಂದು ಹೇಳುತ್ತಾನೆ. ಇಲ್ಲಿ 'ಎರಡರಷ್ಟು' ಎಂದು ಹೇಳಿರುವ ಪದವು ಯೆರೆಮೀಯನು ಉಪಯೋಗಿಸಿರುವ ಮಿಶ್‌ನ್ಹ 'mishneh' ಎಂಬ ಪದವೇ ಆಗಿದೆ. ಇದು ಪುನರಾವರ್ತನೆ ಅಥವಾ ಮತ್ತೊಂದು ಸಮಭಾಗವೆಂಬ ಅರ್ಥನೀಡುತ್ತದೆ. ಇಸ್ರಾಯೇಲ್ಯರು ವರ್ಷಾನುಕಾಲ ರೋಮಿನ ನೊಗ ಹೊತ್ತಿದ್ದರು. ಆದರೆ ಅವರು ನಿರೀಕ್ಷೆಯುಳ್ಳ ಕೈದಿಗಳಾಗಿದ್ದರು. ಬರಲಿರುವ ಅರಸನು ತಮ್ಮನ್ನು ಬಿಡುಗಡೆಗೊಳಿಸಿ ಈ ಲೋಕದಲ್ಲಿ ಅವರಿಗಾಗಿ ವಾಗ್ದಾನ ಮಾಡಿದ ರಾಜ್ಯದ ಘನತೆಗೇರಿಸುತ್ತಾನೆ ಎಂಬ ಭರವಸೆಯನ್ನು ಹೊಂದಿದ್ದರು. ಈಗ ಅವರ ಅರಸನೂ, ಅವರ ಬಲವಾದ ಬುರುಜೂ ಆಗಿರುವಾತನು ಬಂದಿದ್ದಾನೆ. ಆದರೆ ಆತನು ಸಾಧು ಸ್ವಭಾವದವನೂ, ತನ್ನನ್ನು ತಗ್ಗಿಸಿಕೊಂಡವನೂ ಆದ ಕಾರಣ ಅವರ ಹೆಮ್ಮೆಯ ಹೃದಯವು ಆತನನ್ನು ತಮ್ಮನ್ನು ಬಿಡುಗಡೆ ಗೊಳಿಸುವಾತನು ಎಂಬುದನ್ನು ಒಪ್ಪಗೊಡಲಿಲ್ಲ. ಇನ್ನೂ ಹೆಚ್ಚಾಗಿ ಅವರು ಪಾಪಕ್ಕೆ ದಾಸರಾಗಿದ್ದರು ಮತ್ತು ಈ ಮಹಾವಿಮೋಚಕನಿಗೂ ಅದರಿಂದ ಅವರನ್ನು ಇನ್ನೂ ಹೆಚ್ಚಾಗಿ ವಿಮೋಚಿಸುವ ಉದ್ದೇಶಹೊಂದಿದ್ದನು. ನಮ್ಮ ಕರ್ತನು ಅವರೊಂದಿಗೆ ಮೂರುವರೆ ವರ್ಷಗಳ ಕಾಲವಿದ್ದು ಪರಿಶುದ್ಧ ಗ್ರಂಥಗಳ ಬರಹಗಳನ್ನೆಲ್ಲಾ ಅವರ ಮಧ್ಯದಲ್ಲಿ ಈಡೇರಿಸಿದನು. ಈಗ ಆತನು ಕಟ್ಟಕಡೆಯ ಪರೀಕ್ಷೆಗೆ ಬಂದಿರುವಾಗ ಅವರು ಆತನನ್ನು ಕರ್ತನ ಅಭಿಷಕ್ತನು, ತಮ್ಮ ಅರಸನು ಎಂದು ಒಪ್ಪಿಕೊಳ್ಳುತ್ತಾರೋ? ದೇವರ ಭವಿಷ್ಯಜ್ಞಾನದಲ್ಲಿ ಅವರು ತಮ್ಮ ಮೆಸ್ಸೀಯನನ್ನು ನಿರಾಕರಿಸುತ್ತಾರೆ ಎಂಬುದನ್ನು ಪ್ರವಾದಿಯ ಮಾತುಗಳು ತೋರಿಸುತ್ತವೆ. ಇಂದು ಸಹಾ ಆತನು ಎರಡುಪಟ್ಟು ನಮಗೆ ಅನುಗ್ರಹಿಸುವೆನೆಂದು ಪ್ರಕಟಿಸುತ್ತಿದ್ದಾನೆ.

ಈ ಪ್ರವಾದನೆಯು ಎರಡು ಪಟ್ಟು, ಇಸ್ರಾಯೇಲ್ಯರು ಮೆಸ್ಸೀಯನನ್ನು ನಿರಾಕರಿಸಿದ್ದರಿಂದ ಅವರ ಅನುಭವಕ್ಕೆ ಇಮ್ಮಡಿ ದಂಡನೆ ಸೇರಿಸಲ್ಪಟ್ಟಿದೆ ಎಂಬುದಕ್ಕೆ ಯಾವುದೇ ಅನುಮಾನವಿಲ್ಲವೆಂದು ತಿಳಿಸುವುದಲ್ಲದೆ, ಅದು ಪ್ರಾರಂಭವಾದ ನಿಖರವಾದ ದಿನವನ್ನೂ ಗುರುತಿಸುತ್ತದೆ – ಮತ್ತು ಯೆರೆಮೀಯನ ಪ್ರವಾದನೆಯಿಂದ ವರ್ಣಿಸಿದ ತೀರ್ಮಾನಗಳಿಗೆ ಮತ್ತು ನಮ್ಮ ಕರ್ತನ ಮಾತುಗಳಾದ "ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" (ಮತ್ತಾಯ 23:38) ಎಂಬ ಮಾತುಗಳಿಗೆ ಎರಡರಷ್ಟು ಬಲವಾಗಿ ಮತ್ತು ಸ್ಪಷ್ಟವಾಗಿ ಒಗ್ಗಿಕೊಳ್ಳುತ್ತದೆ.

ಈ ಅಂಶದ ಬಗ್ಗೆ ಈ ಸಮಯದಲ್ಲಿ "ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವುದಕ್ಕೆ ನನಗೆ ಎಷ್ಟೋಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ, ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ. ಈಗಿನಿಂದ – ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು (ಹೃತ್ಪೂರ್ವಕವಾಗಿ) ಹೇಳುವ ತನಕ ನೀವು ನನ್ನನ್ನು ನೋಡುವುದೇ ಇಲ್ಲವೆಂದು ನಿಮಗೆ ಹೇಳುತ್ತೇನೆ" (ಮತ್ತಾಯ 23:37–39) ಎಂಬ ನಮ್ಮ ಕರ್ತನ ಮಾತುಗಳನ್ನು ನಿಮ್ಮ ಮನಸ್ಸಿಗೆ ತಂದುಕೊಳ್ಳಿರಿ. ಅವರ ಪರೀಕ್ಷೆಯ ಕಡೇ ದಿನದಲ್ಲಿ ಯೇಸು ಯೆರೂಸಲೇಮಿನ ಸಮೀಪಕ್ಕೆ ಬಂದಾಗ (ಕತ್ತೆಯನ್ನು ಏರಿದವನಾಗಿ) ಆ ಪಟ್ಟಣವನ್ನು ನೋಡಿ ಅದರ

ವಿಷಯವಾಗಿ ಅತ್ತು – ನೀನಾದರೋ ಸಮಾಧಾನಕ್ಕೆ ಬೇಕಾದುದ್ದನ್ನು ಇದೇ ದಿನದಲ್ಲಿ ಕಂಡುಕೊಂಡರೆ ಎಷ್ಟೋ ಒಳ್ಳೇದು, ಆದರೆ ಈಗ (ಇಲ್ಲಿಂದ ಮುಂದಕ್ಕೆ) ಅದು ನಿನ್ನ ಕಣ್ಣಿಗೆ ಮರೆಯಾಗಿದೆ" (ಲೂಕ 19:41–42) ಎಂದು ದುಃಖಿಸುತ್ತಾನೆ. ದೇವರಿಗೆ ಸ್ತೋತ್ರವಾಗಲಿ!, ಅವರ ಈ ಎರಡರಷ್ಟು ಪೂರ್ತಿಯಾಗಿದೆ, ಅವರ ಕುರುಡುತನ ಬದಲಾಗಲು ಪ್ರಾರಂಭವಾಗುತ್ತಿರುವುದನ್ನು ನಾವು ಕಾಣಬಹುದು. ಇದು ಭಕ್ತರಿಗೆ ಅವರ ಸ್ವಂತ ಲೆಕ್ಕಕ್ಕೆ ಸಂತೋಷವನ್ನು ಸಹಾ ನೀಡುತ್ತದೆ, ಯಾಕೆಂದರೆ ಅವರು ಕ್ರಿಸ್ತನ ದೇಹದ ಮಹಿಮೆಯು ಹತ್ತಿರವಾಗುತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಂಡಿರುತ್ತಾರೆ.

ಆದರೆ ನಮ್ಮ ಪ್ರೀತಿಯ ತಂದೆಯು ಸ್ಪಷ್ಟವಾಗಿ ಇಚ್ಚಿಸಿ, ನಮ್ಮ ಹೃದಯಗಳು ಸಂಶಯಪಡದಂತೆ, ನೆಲೆಗೊಳಿಸಲು ಮತ್ತು ದೃಢಪಡಿಸಲು ಒಂದು ಸಣ್ಣ ವಿಷಯವು ಅದು ನಿರ್ಧಾರಾತ್ಮಕವೂ ರುಜುವಾತುಪಡಿಸುವಂತದ್ದಾಗಿದೆ. ಅದೇನೆಂದರೆ ಇಸ್ರಾಯೇಲ್ಯರ ಎರಡರಷ್ಟರ ಬಗ್ಗೆ ತಿಳಿಸುವಂತೆ, ದೇವರು ತನ್ನ ಮತ್ತೊಬ್ಬ ಗೌರವಾನ್ವಿತ ಸೇವಕರಲ್ಲಿ ಒಬ್ಬನಾದ ಪ್ರವಾದಿಯಾದ ಯೆಶಾಯನ ಮೂಲಕ ಕಳುಹಿಸಿದ್ದಾನೆ.

ಪ್ರವಾದಿಯು ತನ್ನ ದೃಷ್ಟಿಕೋನವನ್ನು ಈ ಅಂತ್ಯದವರೆಗೆ ತೆಗೆದುಕೊಳ್ಳುತ್ತಾನೆ. ಆ ಸಮಯದಲ್ಲಿ (ಕ್ರಿ.ಶ. 1878) ದ್ವಿಗುಣವು (mishneh) ನೆರವೇರುತ್ತದೆ. ಈಗ ಜೀವಿಸುತ್ತಿರುವ ನಮ್ಮನ್ನು ಸಂಬೋಧಿಸಿ ಆತನು ನಮಗೆ "ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ; ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತನಾಡಿರಿ; ಅದಕ್ಕೆ ಗಡು ತೀರಿತು, ವಿಧಿಸಿದ ದೋಷ ಫಲವೆಲ್ಲಾ ನೆರವೇರಿತು. ಅದರ ಎಲ್ಲಾ ಪಾಪಗಳಿಗೂ ಯೆಹೋವನ ಕೈಯಿಂದ ಎರಡರಷ್ಟು* ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ; ಇದೇ ನಿಮ್ಮ ದೇವರ ಆಜ್ಞೆ" (ಯೆಶಾಯ 40:1–2) ಎಂಬ ಸಂದೇಶವನ್ನು ನೀಡುತ್ತಾನೆ.

ಪ್ರವಾದನೆಗಳ ವಿದ್ಯಾರ್ಥಿಯು ಗಮನಿಸ ಬೇಕಾದುದೇನೆಂದರೆ, ಪ್ರವಾದಿಗಳು ತಮ್ಮ ಉಚ್ಚಾರಣೆಯ ದೃಷ್ಟಿಕೋನದಲ್ಲಿ ಬದಲಾಗುತ್ತಾರೆ, ಕೆಲವೊಮ್ಮೆ ಭವಿಷ್ಯದ ಸಂಗತಿಗಳಲ್ಲಿ ಭವಿಷ್ಯವೋ ಎಂಬಂತೆ ಮಾತನಾಡುತ್ತಾರೆ ಮತ್ತು ಕೆಲವೊಮ್ಮೆ ಒಂದು ಭವಿಷ್ಯದ ಸ್ಥಾನವನ್ನು ತಾವಿರುವಂತೆ ಊಹಿಸಿಕೊಂಡು ಆ ಊಹನಾ ಸ್ಥಳದ ದೃಷ್ಟಿಕೋನದಿಂದಲೇ ಮಾತನಾಡುತ್ತಾರೆ. ಉದಾಹರಣೆಗೆ, ಯೆಶಾಯನು ಕರ್ತನ ಜನನದ ಬಗ್ಗೆ ಮಾತನಾಡುತ್ತಾ, ತಾನು ಕಂದನಾದ ಯೇಸು ಜನಿಸಿದ ಗೋದಲಿಯ ಬಳಿಯಲ್ಲಿ ನಿಂತಿದ್ದೇನೆಂದು ಊಹಿಸುವವನಾಗಿ "ಒಂದು ಮಗುವು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು. ಆಡಳಿತವು ಆತನ ಬಾಹುವಿನ ಮೇಲಿರುವುದು" (ಯೆಶಾಯ 9:6) ಎಂಬ ಮಾತುಗಳನ್ನು ಬರೆಯುತ್ತಾನೆ. ಈ ತತ್ವವನ್ನು ಮಾನ್ಯ ಮಾಡದೆ ಕೀರ್ತನಾ ಸಂಗ್ರಹವನ್ನು ಬುದ್ಧಿಪೂರ್ವಕವಾಗಿ ಓದಿಕೊಳ್ಳಲಾಗದು. ಈಗಾಗಲೇ ಗಮನಿಸಿರುವ ಇಸ್ರಾಯೇಲ್ಯರ 'ದ್ವಿಗುಣ'ಕ್ಕೆ ಸಂಬಂಧಿಸಿದ ಮೂರು ಪ್ರವಾದನೆಯ ಮಾತುಗಳಿಗಿಂತ ಉತ್ತಮವಾದ ಉದಾಹರಣೆ ಮತ್ತೊಂದಿಲ್ಲ. ಯೆರೆಮೀಯನು "ದೇವರು ಇವರನ್ನು ಜನಾಂಗಗಳೊಳಗೆ ಚದುರಿಸಿ ಬಿಡುವ ದಿನವು ಬರುವುದು, ಅವರು ದ್ವಿಗುಣದ ಕಾಲದ ನಂತರ ಹಿಂತಿರುಗುವಾಗ, ದೇವರು ಅವರ ಪರವಾಗಿ ತೋರಿದ ಬಲವು, ಅವರು ಐಗುಪ್ತದ ದಾಸತ್ವದಿಂದ ಹೊರಬಂದಾಗ ತೋರಿದ ಬಲಕ್ಕಿಂತಲೂ ಹೆಚ್ಚಾಗಿತ್ತು"ಎಂದು ಬರೆಯುತ್ತಾನೆ. ಜೆಕರ್ಯನು ಕ್ರಿಸ್ತನು ತನ್ನನ್ನು ಅರಸನಂತೆ ಇಸ್ರಾಯೇಲ್ಯರಿಗಾಗಿ ಸಮರ್ಪಿಸಿ ಕೊಂಡ ಕಾಲದಲ್ಲಿ ತಾನು ಜೀವಿಸಿದ್ದಾನೋ ಎಂಬಂತೆ "ಆ ದಿನದಲ್ಲಿ ಅವರ ದ್ವಿಗುಣತ್ವವು ಪ್ರಾರಂಭವಾಯಿತು" ಎಂದು ಹೇಳುತ್ತಾನೆ. ಯೆಶಾಯನು ಕ್ರಿ.ಶ. 1878ರಲ್ಲಿ ನಮ್ಮ ಬಳಿ ನಿಂತುಕೊಳ್ಳುತ್ತಾನೆ, ಮತ್ತು ದೇವರು ಇಸ್ರಾಯೇಲ್ಯರಿಗೆ ಮೇಲನ್ನುಂಟುಮಾಡುವ ಸೂಕ್ತಸಮಯದ ಏರ್ಪಾಡು ಈಗಾಗಲೇ ಮಾಡಿದ್ದಾನೆ. ಇದು ಅವರ ಹಿಂದಿನ ದಯೆಯ ಅಥವಾ ಅದರ ಪ್ರತಿರೂಪದ ದುಪ್ಪಟ್ಟಾಗಿದೆ ಎಂಬ ಅಂಶಕ್ಕೆ ನಮ್ಮ ಗಮನವನ್ನು ಸೆಳೆಯುತ್ತಾನೆ ಮತ್ತು ನಾವೀಗ ಇಸ್ರಾಯೇಲ್ಯರಿಗೆ ಅವರ ದ್ವಿಗುಣವು ನೆರವೇರಿದೆ, ನಿಗದಿಪಡಿಸಿದ ಸಮಯವು ಬಂದಿದೆ ಎಂಬ ಸಂತೈಸುವ ಸಂದೇಶವನ್ನು ನೀಡಬೇಕು ಎಂದು ನಮಗೆ ಹೇಳುತ್ತಾನೆ. ಈ ಮೂರು ಪ್ರವಾದನೆಗಳಲ್ಲಿ ಯಾವುದು ಹೆಚ್ಚು ಬಲವುಳ್ಳದ್ದು ಮತ್ತು ಪ್ರಾಮುಖ್ಯವಾದುದು ಎಂದು ನಿರ್ಧರಿಸುವುದು ಕಷ್ಟ. ಅವುಗಳಲ್ಲಿ ಪ್ರತಿಯೊಂದೂ ಮುಖ್ಯವಾದುದು ಮತ್ತು ಪ್ರತಿಯೊಂದೂ ಒಂಟಿಯಾಗಿ ಬಲವುಳ್ಳದ್ದಾಗಿದೆ; ಆದರೆ ಇವುಗಳನ್ನು ಒಂದು ಗೂಡಿಸಿದಾಗ ಅವು ಮೂರುಪಟ್ಟು ಹೆಣೆದ ಅದ್ಭುತವಾಗಿ ಬಲವಾದ ಹಗ್ಗದಂತೆ ನಮ್ರರಿಗೆ, ಅಭ್ಯಾಸಶೀಲರಿಗೆ, ದೇವರ ನಿಜವಾದ ಮಕ್ಕಳಿಗೆ ನೀಡುವುದಾಗಿದೆ.

ಈ ಪ್ರವಾದಿಗಳು ನೂರಾರು ವರ್ಷಗಳ ಅಂತರದಲ್ಲಿ ಜೀವಿಸಿ ಇವುಗಳನ್ನು ಬರೆದರು ಮತ್ತು ಅವರ ಈ ಬರಹಗಳು ಯೆಹೂದ್ಯರ ನಿರೀಕ್ಷೆಗೆ ತೀವ್ರ ವಿರೋಧವಾಗಿದ್ದವು ಎಂಬುದನ್ನು ನಾವು ನೆನಪು ಮಾಡಿಕೊಳ್ಳುವಾಗ ಪ್ರವಾದನೀಯ ಹೇಳಿಕೆಯ ಬಲವು ಹೆಚ್ಚುತ್ತದೆ. ಖಂಡಿತವಾಗಿಯೂ ಅಪನಂಬಿಕೆ ಮತ್ತು ದೇವರು ಪ್ರವಾದಿಗಳ ಮೂಲಕ ಹೇಳಿದ್ದನ್ನೆಲ್ಲಾ ನಂಬದಿರುವ ಮಂದ ಹೃದಯದವರು ಈ ಸಾಮರಸ್ಯಕರ ಸಾಕ್ಷ್ಯದಲ್ಲಿ ದೇವರ ಕೈವಾಡವನ್ನು ನೋಡದವರಾಗಿದ್ದಾರೆ.

* ಇಬ್ರಿಯ ಪದ ಎರಡರಷ್ಟು ಎಂಬುದಕ್ಕೆ (Kephel) ಎಂಬ ಪದವನ್ನು ಅನುವಾದಿಸಲಾಗಿದೆ. ಅಂದರೆ ಒಂದು ವಿಷಯವು ಮಧ್ಯದಲ್ಲಿ ದ್ವಿಗುಣಗೊಳ್ಳುವುದು.

ಬರ್ಲಿನ್ ಕಾಂಗ್ರೆಸ್ ಮತ್ತು ಅದರ ಕಾರ್ಯಗಳಲ್ಲಿ ಇಸ್ರಾಯೇಲ್ಯರು ದೇವರ ಕೃಪೆಗೆ ಹಿಂತಿರುಗುವ ಪ್ರಾರಂಭಕ್ಕೆ ಸಾಕಷ್ಟು ಗುರುತು ಎಂದು ಯಾರಾದರೂ ವಿರೋಧಿಸುವವರಾದರೆ, ಅಂಥವರಿಗೆ ಅದು ನಮ್ಮ ಕರ್ತನು ಯೆರೂಸಲೇಮಿಗೆ ಸವಾರಿಮಾಡಿದ್ದು ಒಂದು ಅವಕೃಪೆಯ ಗುರುತಾಗಿದ್ದಕ್ಕಿಂತ ಹೆಚ್ಚಾದ ಕೃಪೆಯ ಹಿಂತಿರುಗುವಿಕೆಯ ಗುರುತಾಗಿದೆ ಎಂದು ನಾವು ಉತ್ತರಿಸುತ್ತೇವೆ. ಅದು ಸಂಭವಿಸುವಾಗ ಅದು ಪ್ರವಾದನೆಯ ಸಂಪೂರ್ಣ ನೆರವೇರಿಕೆ ಎಂದು ಯಾರೂ ಗ್ರಹಿಸಲಿಲ್ಲ. ಪಂಚಾಶತ್ತಮದವರೆಗೂ 'ದ್ವಿಗುಣ' ಶಿಕ್ಷೆಯು ಪ್ರಾರಂಭವಾದದರ ಕುರಿತು ಅಂದು ತಿಳಿದು ಕೊಂಡಿದ್ದಕ್ಕಿಂತಲೂ ಇಂದು, ಸಾವಿರಾರು ಜನರು ಅವರ ನೆರವೇರಿಕೆಯ ಬಗ್ಗೆ ಹೆಚ್ಚಾಗಿ ತಿಳಿದಿದ್ದಾರೆ. ಈ ರೀತಿಯಲ್ಲಿ ಸಿಮೆಯೋನನು ಯೇಸು ಕಂದನನ್ನು ಕುರಿತು ಹೇಳಿದ "ಇಗೋ ಈತನು ಇಸ್ರಾಯೇಲ್ ಜನರಲ್ಲಿ ಅನೇಕರು ಬೀಳುವುದಕ್ಕೂ, ಅನೇಕರು ಏಳುವುದಕ್ಕೂ ಕಾರಣನಾಗಿರುವನು" (ಲೂಕ 2:34) ಎಂಬ ಮಾತುಗಳು ಇಲ್ಲಿ ತಿಳಿಸಲಾಗುತ್ತದೆ. ಶಾರೀರಿಕ ಇಸ್ರಾಯೇಲ್ಯರು ಒಂದು ಜನಾಂಗವಾಗಿ ಬೀಳುವ ಅಥವಾ ಮುಗ್ಗರಿಸುವ ಕಲ್ಲುಗಳಾಗಿದ್ದಾರೆ ಎಂಬುದು ಇಲ್ಲಿ ರುಜುವಾತಾಗುತ್ತದೆ. ಆತ್ಮೀಕ ಇಸ್ರಾಯೇಲ್ಯರ ಶಿರಸ್ಸೂ, ನಾಯಕನೂ ಆದಾತನು ಈಗ ಹೇಗೆ ವಿಮೋಚಕನಾಗಿದ್ದಾನೆ, ಆತನು ವಿಮೋಚಕನಾಗಿ ಶಾರೀರಿಕ ಮನೆಯನ್ನು ಪುನಃ ಎತ್ತುವವನಾಗಿದ್ದಾನೆ, ಮತ್ತು ಸೂಕ್ತ ಸಮಯದಲ್ಲಿ ಎಲ್ಲವನ್ನು ಪುನಃವಶಪಡಿಸುತ್ತಾನೆ, ಅವರ ದ್ವಿಗುಣವು ಸಂಪೂರ್ಣಗೊಂಡಿದೆ ಎಂಬುದನ್ನು ನಾವಿಲ್ಲಿ ಕಂಡಿದ್ದೇವೆ. ಈಗ ನಾವು ಈ ದ್ವಿಗುಣದ ಪೂರ್ಣತೆ ಮತ್ತು ಇಸ್ರಾಯೇಲ್ಯರ ಕೃಪಾಕಾಲವು ಪ್ರಾರಂಭವಾಗಿರುವುದನ್ನು ಕಾಣುತ್ತೇವೆ. ದೇವರ ಮಾತುಗಳ ನೆರವೇರಿಕೆಯನ್ನು ನಾವು ಕಾಣುವಾಗ ನಮ್ಮ ಹೃದಯಗಳು ಈ ರೀತಿಯಾಗಿ ಹಾಡಬಹುದು,

"How firm a foundation,
ye saints of the Lord.
Is laid for your faith,
in his excellent Word"
"ಎಂತಹ ಭದ್ರ ಬುನಾದಿ, ಕರ್ತನ ಭಕ್ತರೇ,
ಆತನ ಬಹುಶ್ರೇಷ್ಠ ವಾಕ್ಯದಲ್ಲಿ
ನಿಮ್ಮ ನಂಬಿಕೆಗಾಗಿ ಸ್ಥಾಪಿಸಿದೆ'

ಈ ರೀತಿಯಾಗಿ ನಾವು ಇಸ್ರಾಯೇಲ್ಯರು ದೇವರ ಕೃಪೆಯಿಂದ ಬಿದ್ದುಹೋದದನ್ನು ಮತ್ತು ಅದರ ಪರಿಣಾಮವಾಗಿ ಉಂಟಾದ ನಷ್ಟವನ್ನು, ಮತ್ತು ಇವುಗಳೆಲ್ಲವುಗಳಿಗೆ ಕಾರಣಗಳನ್ನು ಗಮನಿಸುವಾಗ, ಇದರಲ್ಲಿಯೂ ಸಹ ಅವರು ಹೆಸರಿಗೆ ಮಾತ್ರದ ಆತ್ಮೀಕ ಇಸ್ರಾಯೇಲ್ಯರೆಂಬ ಪೂರ್ವ ಛಾಯೆಯನ್ನು ತೋರಿಸಿದರು ಮತ್ತು ಅದೇ ಪ್ರವಾದಿಗಳು ಇಸ್ರಾಯೇಲರ ಎರಡೂ ಮನೆತನದವರ ಮುಗ್ಗರಿಸುವಿಕೆ ಮತ್ತು ಬೀಳುವಿಕೆಯನ್ನು ಮುಂತಿಳಿಸಿದ್ದಾರೆ ಎಂಬುದನ್ನು ಮರೆಯದಿರೋಣ – "ಆತನು ಇಸ್ರಾಯೇಲ್ಯರ ಎರಡೂ ಮನೆತನಕ್ಕೆ ಎಡವುವ ಕಲ್ಲೂ, ಮುಗ್ಗರಿಸುವ ಬಂಡೆಯೂ, ಯೆರೂಸಲೇಮಿನ ನಿವಾಸಿಗಳಿಗೆ ಬಲೆಯೂ ಬೋನೂ ಆಗುವನು" – ಯೆಶಾಯ 8:14.

ಹೆಸರಿಗೆ ಮಾತ್ರದ ಶಾರೀರಿಕ ಇಸ್ರಾಯೇಲ್ಯರ ಹೊರಹಾಕುವಿಕೆ ಪತನವು ಸತ್ಯವಾಗಿರುವಂತೆಯೇ ಹೆಸರಿಗೆ ಮಾತ್ರದ ಆತ್ಮೀಕ ಇಸ್ರಾಯೇಲ್ಯರ, ಹೆಸರು ಮಾತ್ರದ ಸುವಾರ್ತಾ ಸಭೆಯ ಹೊರಹಾಕುವಿಕೆ ಹಾಗೂ ಪತನವೂ ಅವೇ ಕಾರಣಗಳಿಗಾಗಿಯೇ ಇದೆ ಎಂದು ಕಾಣುತ್ತೇವೆ. ಒಂದರಂತೆ ಮತ್ತೊಂದರ ಹೊರಹಾಕುವಿಕೆ ಮತ್ತು ಪತನವು ಸತ್ಯವೇದದಲ್ಲಿ ಸ್ಫುಟವಾಗಿ ವರ್ಣಿಸಲ್ಪಟ್ಟಿದೆ. ನಿಶ್ಚಯವಾಗಿ ಹೆಸರು ಮಾತ್ರದ ಆತ್ಮೀಕ ಇಸ್ರಾಯೇಲ್ಯರ ಉಳಿಕೆಯವರು ಕುರುಡುತನದಿಂದ ಮತ್ತು ಪತನದಿಂದ ನಮ್ರತೆ ಮತ್ತು ನಂಬಿಕೆಯಿಂದ ಕಾಪಾಡಲ್ಪಡುವಂತೆಯೇ ಆತ್ಮೀಕ ಇಸ್ರಾಯೇಲ್ಯರ ಉಳಿಕೆಯವರು ಸಹಾ ಸುಗ್ಗಿ ಕಾಲದಲ್ಲಿ ಅಥವಾ ಈ ಯುಗದ ಅಂತ್ಯದಲ್ಲಿ ಕಾಪಾಡಲ್ಪಡುವರು. ಈ ರೀತಿಯಲ್ಲಿ ಕ್ರಿಸ್ತನ ದೇಹವಾದ ಸತ್ಯಸಭೆಯ ಕಡೆಯ ಸದಸ್ಯರುಗಳು ಹೆಸರು ಮಾತ್ರದ (ನಾಮಾಂಕಿತ) ಸಭೆಯಿಂದ ಬೇರ್ಪಡಲಟ್ಟು ತಮ್ಮ ಶಿರಸ್ಸಿನೊಡನೆ ಕೂಡಿಕೊಂಡು ಮಹಿಮೆ ಹೊಂದ ಬೇಕಾಗಿದೆ. ಅವರ ಪತನದಲ್ಲಿ ದೈಹಿಕ ಇಸ್ರಾಯೇಲ್ಯರಿಂದ ಆರಿಸಿಕೊಂಡ ಉಳಿಕೆಯವರು ಮತ್ತು ಸುವಾರ್ತಾಯುಗದ ಕೆಲವು ಪ್ರಾಮಾಣಿಕರು ಮತ್ತು ಅದರ ಅಂತ್ಯದಲ್ಲಿ ಉಳುಕೊಂಡ ಶೇಷಭಾಗದವರು ಮಾತ್ರವೇ ದೇವರ ನಿಜವಾದ ಇಸ್ರಾಯೇಲ್ಯರಾಗಿ ನೇಮಿಸಲ್ಪಡುತ್ತಾರೆ. ಇವರುಗಳು ಆಯ್ಕೆಗೊಂಡವರೂ, ಕ್ರಿಸ್ತನ ವಿಮೋಚನಾ ಕಾರ್ಯದಲ್ಲಿ ನಂಬಿಕೆಯ ಮೂಲಕ ಸಮರ್ಥಿಸಲ್ಪಟ್ಟವರೂ ಆಗಿದ್ದು ಆತ್ಮನ ಪವಿತ್ರಪಡಿಸುವಿಕೆ ಮತ್ತು ಸತ್ಯದ ನಂಬಿಕೆಯಲ್ಲಿ, ಹಾಗೂ ಮರಣದ ಪರ್ಯಂತ ನಿಷ್ಠಾವಂತರಾಗಿದ್ದು ಜಂಟಿಸಮರ್ಪಣೆಗೆ ಮತ್ತು ಕ್ರಿಸ್ತನೊಂದಿಗೆ ಸಹಬಾಧ್ಯರಸ್ಥರಾಗಲು ಕರೆಯಲ್ಪಟ್ಟವರೂ ಆಗಿದ್ದಾರೆ. ಈ ತಂಡದ ಆಯ್ಕೆಯ ಮುಗಿಯುವಿಕೆ ಯೊಂದಿಗೆ ಈ ಯುಗದ ಸುಗ್ಗಿಯ ಕಾಲದಲ್ಲಿ ಗೋಧಿ ಮತ್ತು ಹಣಜಿಗಳ ನಡುವೆ ಸಾಕಷ್ಟು ಕೋಲಾಹಲಗಳನ್ನು ನಿರೀಕ್ಷಿಸಬಹುದು. ಯಾಕೆಂದರೆ ಅನೇಕ ದೈವಿಕ ಕೃಪೆಯು ಕೆಲವೇ ನಂಬಿಗಸ್ತರ ಕಾರಣ ದಯಪಾಲಿಸಲ್ಪಡುತ್ತದೆ, ಮತ್ತು ಚಿಕ್ಕಹಿಂಡಿನ ಅಭಿವೃದ್ಧಿಗಾಗಿ ದಯಪಾಲಿಸಲ್ಪಟ್ಟ ದೈವಿಕ ಕೃಪೆಯು ಪೂರ್ಣಗೊಂಡ ನಂತರ ಹೆಸರು ಮಾತ್ರದ ಸಮೂಹದವರಿಂದ ಅದು ಹಿಂತೆಗೆಯಲ್ಪಡುತ್ತಾರೆ.

ಇಲ್ಲಿಯ ಕ್ರಮವು ಸಾಂಕೇತಿಕ ಯೆಹೂದ್ಯ ಸುಗ್ಗಿಯಂತೆಯೇ ಇರುತ್ತದೆಂದು ನಾವು ನಿರೀಕ್ಷಿಸ ಬಹುದಾಗಿದೆ. ಇದೊಂದು ಬೇರ್ಪಡಿಸುವ ಕ್ರಿಯೆಯಾಗಿದ್ದು "ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸುತ್ತಾನೆ" (ಕೀರ್ತನೆ 50:5) ಎಂಬ ದಾವೀದನ ಮಾತುಗಳು ಈ ರೀತಿಯಲ್ಲಿ ನೆರವೇರುತ್ತವೆ. ಕ್ರಿ.ಶ. 33ನೇ ವರ್ಷವು ಹೆಸರು ಮಾತ್ರದ ಯೆಹೂದ್ಯ ಮನೆಯನ್ನು ಅವಕೃಪೆಯ, ಒಡೆಯುವಿಕೆಯ ಮತ್ತು ಹೊರಹಾಕುವಿಕೆಯ ಒಂದು ಪದ್ಧತಿಯಂತೆ ನೀಡುವ ವರ್ಷವಾಗಿ ಗುರುತಿಸಲ್ಪಟ್ಟಿರುವಂತೆ, ಅದಕ್ಕೆ ಅನುರೂಪವಾದ ಕ್ರಿ.ಶ. 1878ನೇ ವರ್ಷವು ಅವಕೃಪೆಯ, ಒಡೆಯುವಿಕೆಯ ಮತ್ತು ಹೆಸರು ಮಾತ್ರದ ಆತ್ಮೀಕ ಇಸ್ರಾಯೇಲ್ಯರ ಹೊರಹಾಕುವಿಕೆಯ ವರ್ಷವಾಗಿ ಗುರುತಿಸಲ್ಪಟ್ಟಿದೆ. ಈ ಬಗ್ಗೆ ನಾವು ಮುಂದಿನ ಅಧ್ಯಾಯಗಳಲ್ಲಿ ಬಹಳಷ್ಟು ಹೇಳುವುದಿದೆ.

## ಗಣಿತ ಶಾಸ್ತ್ರಕ್ಕೆ ಅನುಗುಣವಾದ ಪ್ರತಿಪಾದನೆ
## Mathematical Demonstration

ಈ ಹಿಂದಿನ ಸಾಕ್ಷ್ಯಗಳು ನಿರ್ಧಾರಾತ್ಮಕ ಮತ್ತು ತೃಪ್ತಿಕರವಾದವುಗಳು ಎಂದು ಊಹಿಸಿಕೊಂಡು ನಾವು ಇದನ್ನು ಕಾಲಗಣನೆಯ ಕ್ರಮವಾಗಿ ಸಾಬೀತುಪಡಿಸಲು ಮುಂದುವರೆಯುತ್ತೇವೆ. ಮೊದಲನೆಯದಾಗಿ, ಯಾಕೋಬನ ಮರಣದಿಂದ ಪ್ರಾರಂಭವಾದ ಎಣಿಕೆಯ ಯೆಹೂದ್ಯ ಯುಗವು ಅವರ ಮನೆಯು ನಿರ್ಜನಗೊಳ್ಳುವವರೆಗೆ, ಅದರ ದ್ವಿಗುಣ ಅಥವಾ ಎರಡರಷ್ಟು ಭಾಗವು ಪ್ರಾರಂಭವಾದಾಗ 1845 ವರ್ಷಗಳ ದೀರ್ಘ ಕಾಲವು ದಾಟಿ ಹೋದವು ಮತ್ತು ಎರಡನೆಯದಾಗಿ, ದ್ವಿಗುಣವು 1878ರಲ್ಲಿ ಮುಕ್ತಾಯಗೊಂಡಿತು ಮತ್ತು ಕೃಪಾಕಾಲವು ಅಲ್ಲಿ ಆರಂಭವಾಗಲು ಯುಕ್ತವಾಗಿದ್ದು – ಸುವಾರ್ತಾಯುಗದ ಕೃಪೆಗಳು ಅಲ್ಲಿಗೆ ತೀರಿತೆಂದು ಸಾಬಿತುಪಡಿಸುವುದಾಗಿತ್ತು.

ಎರಡನೆಯ ಅಂಶಕ್ಕೆ ಯಾವ ರುಜುವಾತಿನ ಅಗತ್ಯವಿಲ್ಲ. ಯಾಕೆಂದರೆ ನಮ್ಮ ಕರ್ತನು ಕ್ರಿ.ಶ. 33ರಲ್ಲಿ ಮರಣಪಟ್ಟನು ಎಂಬುದು ಸತ್ಯವಾಗಿದೆ. ಹೀಗಾಗಿ 1845ನ್ನು 33ಕ್ಕೆ ಕೂಡಿಸಿ ಬರುವ ಮೊತ್ತ 1878ರಲ್ಲಿ ಇಸ್ರಾಯೇಲ್ಯರ ಕೃಪೆಯು ಪ್ರಾರಂಭವಾಗುವ ಯುಕ್ತ ಸಮಯವಾಗಿದೆ ಎಂದು ಕಂಡುಕೊಳ್ಳುವುದು ಸುಲಭ. ಈ ಶರತ್ತಿನ ಮೇಲೆ ನಾವು ನಮ್ಮ ಮೊದಲನೆಯ ಪ್ರಸ್ತಾಪವಾದ ಇಸ್ರಾಯೇಲ್ಯರು ದೇವರ ವಾಗ್ದಾನಗಳ ನೆರವೇರಿಕೆಗಾಗಿ ಆತನ ಕೃಪೆಯ ಅಡಿಯಲ್ಲಿ ಕಾಯುತ್ತಿದ್ದುದು ಒಂದು ಸಾವಿರದ ಎಂಟನೂರ ನಾಲ್ವತ್ತೈದು ವರ್ಷಗಳ ದೀರ್ಘಕಾಲವಾಗಿತ್ತು ಎಂಬುದನ್ನು ಸಾಬೀತುಪಡಿಸಬಹುದಾಗಿದೆ.

ಈ ಅವಧಿಯ ವಿಸ್ತಾರವನ್ನು ಒಂದು ವಿಷಯ ಹೊರತುಪಡಿಸಿ ಕಾಲಗಣನೆಗಳ ಬಗೆಗಿನ ಅಧ್ಯಾಯದಲ್ಲಿ ಸೂಚಿಸಲಾಗಿದೆ. ಯಾವುದೆಂದರೆ, ಯಾಕೋಬನ ಮರಣದಿಂದ ಐಗುಪ್ತದಿಂದ ಹೊರಗೆ ಬರುವ ಅವಧಿ. ಈ ಅವಧಿಯು ಇತ್ತೀಚಿನವರೆಗೆ ವಿಚಿತ್ರವಾಗಿ ಅಡಗಿಸಲ್ಪಟ್ಟಿದೆ ಅಥವಾ ಮರೆಮಾಡಲ್ಪಟ್ಟಿದೆ. ಅದು ಗಮನಕ್ಕೆ ಬರುವವರೆಗೆ ಯೆಹೂದ್ಯ ಯುಗದ ವಿಸ್ತಾರವು ತಿಳಿದಿರಲಿಲ್ಲ. ಅದಿಲ್ಲದೆ ದ್ವಿಗುಣದ (ಎರಡರಷ್ಟು) ಬಗೆಗಿನ ಪ್ರವಾದನೆಗಳು ನಮ್ಮ ಗಮನಕ್ಕೆ ಬಂದಿದ್ದು ನಾವು ಅರ್ಥಮಾಡಿಕೊಂಡಿದ್ದರೂ ಅದರ ವಿಸ್ತಾರವನ್ನು ಅಳೆಯಲು ಸಾಧ್ಯವಿದ್ದಿಲ್ಲ. ಕಾಲಗಣನೆಗಳು ಯಾಕೋಬನ ಮರಣದವರೆಗೆ ಸುಸೂತ್ರವಾಗಿ ಜರುಗಿದವು. ಆದರೆ, ಆ ದಿನಾಂಕದಿಂದ – ಐಗುಪ್ತದಿಂದ ಹೊರಬರುವವರೆಗೆ ಯಾವುದೇ ಪೂರ್ಣಪ್ರಮಾಣದ ದಾಖಲೆಗಳಿರುವುದಿಲ್ಲ. ಅಲ್ಲೊಂದು, ಇಲ್ಲೊಂದು ಕೆಲವಾರು ತುಣುಕುಗಳನ್ನು ನೀಡಲಾಗಿದೆ.

| | |
|---|---|
| ಒಡಂಬಡಿಕೆಯಿಂದ ಇಸಾಕನ ಜನನದವರೆಗೆ | .......... 25 ವರ್ಷಗಳು |
| ಇಸಾಕನಿಂದ ಯಾಕೋಬನ ಜನನದವರೆಗೆ (ಆದಿ. 25:26) | .......... 60 ವರ್ಷಗಳು |
| ಯಾಕೋಬನ ಜನನದಿಂದ ಆತನ ಮರಣದವರೆಗೆ (ಆದಿ. 47:28) | .......... 147 ವರ್ಷಗಳು |
| ಅಬ್ರಹಾಮನ ಒಡಂಬಡಿಕೆಯಿಂದ ಯಾಕೋಬನ ಮರಣದವರೆಗೆ ಒಟ್ಟು ವರ್ಷಗಳು | .......... 232 ವರ್ಷಗಳು |
| ಒಡಂಬಡಿಕೆಯಿಂದ ಐಗುಪ್ತದೇಶವನ್ನು ಇಸ್ರಾಯೇಲ್ಯರು ಬಿಟ್ಟ ದಿನದವರೆಗೆ (ವಿಮೋಚನಾ ಕಾಂಡ 12:41) ಪಸ್ಕದವರೆಗೆ | .......... 430 ವರ್ಷಗಳು |
| ಇದರಿಂದ ಒಡಂಬಡಿಕೆಯ ಕಾಲದಿಂದ ಯಾಕೋಬನ ಮರಣದವರೆಗಿನ ಅವಧಿಯನ್ನು ಕಳೆದರೆ | ........ –232 ವರ್ಷಗಳು |
| ಆದುದರಿಂದ ವಿಮೋಚನಾ ಕಾಲ | .......... 198 ವರ್ಷಗಳು |

ಈ ರೀತಿಯಲ್ಲಿ ಇಸ್ರಾಯೇಲ್ಯರ ರಾಷ್ಟ್ರೀಯ ಅಸ್ತಿತ್ವದ ವಿಸ್ತಾರತೆಯ ಬಗ್ಗೆ ಇದ್ದ ಎಲ್ಲಾ ತೊಡಕುಗಳನ್ನು ಸ್ಪಷ್ಟಪಡಿಸಲಾಗಿದೆ. ಯಾಕೋಬನ ಮರಣದಿಂದ ವಿಮೋಚನೆಯವರೆಗೆ ಅಡಗಿದ್ದ ಅವಧಿಯು ಉದ್ದೇಶಪೂರ್ವಕವಾಗಿ ಅದನ್ನು ನೋಡುವ ಯುಕ್ತಕಾಲವು ಬರುವರೆಗೆ ರಹಸ್ಯವಾಗಿಡಲಾಗಿತ್ತು ಎಂಬುದು ನಿಸ್ಸಂದೇಹವಾಗಿದೆ. ನಾವು ಇದಕ್ಕೆ ಕಾಲಗಣನೆಗಳ ಪಟ್ಟಿಯಲ್ಲಿ ಪ್ರಸ್ತುತಪಡಿಸಿರುವ ಅವಧಿಯನ್ನು ಈ ಕೆಳಕಂಡಂತೆ ಕೂಡಿಸುತ್ತೇವೆ :–

| | |
|---|---|
| ಯಾಕೋಬನ ಮರಣದಿಂದ ವಿಮೋಚನೆಯವರೆಗಿನ ಅವಧಿ | .......... 198 ವರ್ಷಗಳು |
| ಅರಣ್ಯದಲ್ಲಿ ಇಸ್ರಾಯೇಲ್ಯರು ಪಯಣಿಸಿದ ಅವಧಿ | .......... 40 ವರ್ಷಗಳು |
| ಕಾನಾನಿನ ವಿಭಜನೆಗೆ | .......... 6 ವರ್ಷಗಳು |
| ನ್ಯಾಯಸ್ಥಾಪಕರ ಕಾಲ | .......... 450 ವರ್ಷಗಳು |
| ಅರಸರುಗಳ ಕಾಲ | .......... 513 ವರ್ಷಗಳು |
| ದೇಶದ ಪಾಳು ಬಿದ್ದಿದ್ದ ಅವಧಿ | .......... 70 ವರ್ಷಗಳು |
| ಕೋರೇಷನ ಮೊದಲನೆಯ ವರ್ಷದಿಂದ ಕ್ರಿ.ಶ. 1ರವರೆಗೆ | .......... 536 ವರ್ಷಗಳು |
| ಯಾಕೋಬನ ಮರಣದಿಂದ ನಮ್ಮ ಕ್ರಿಸ್ತ ಶಕದವರೆಗೆ ಒಟ್ಟು | .......... 1813 ವರ್ಷಗಳು |
| ಕ್ರಿ.ಶ. 1ರಿಂದ ಕ್ರಿಸ್ತನು ಕ್ರೂಜೆಗೆ ಹಾಕಲ್ಪಡುವ ವಸಂತ ಋತುವಿನ ಕ್ರಿ.ಶ. 33 ವರೆಗಿನ ಪಸ್ಕಕಾಲದವರೆಗೆ ಒಟ್ಟು ವರ್ಷಗಳು (ಯೆಹೂದ್ಯ ಧರ್ಮದ ಪ್ರಕಾರ)* | .......... 32 ವರ್ಷಗಳು |
| ಯೆಹೂದ್ಯರು ದೇವರ ಕೃಪೆಯಲ್ಲಿ ಮತ್ತು ಮಾನ್ಯತೆಯಲ್ಲಿ ತಮ್ಮ ರಾಜ್ಯಕ್ಕಾಗಿ ಕಾದುಕೊಂಡಿದ್ದ ಒಟ್ಟು ವರ್ಷಗಳು | .......... 1845 ವರ್ಷಗಳು |

ಅದರೆ ಇದನ್ನು ನಿಖರವಾಗಿ ತಿಳಿದುಕೊಳ್ಳುವಂತೆ ಯಾವುದೇ ಸಂಬಂಧಿಸುವ ಎಳೆ ಇರುವುದಿಲ್ಲ. ಈ ಕಾರಣದಿಂದ ಕಾಲಗಣನೆಗಳ ಪಟ್ಟಿಯಲ್ಲಿ ನಾವು ಹೊಸ ಒಡಂಬಡಿಕೆಯನ್ನು ನೋಡುವಂತೆ ಒತ್ತಾಯಿಸಲಾಯಿತು. ಅಲ್ಲಿ ಸ್ಫೂರ್ತಿಯುಳ್ಳ ಅಪೋಸ್ತಲನಿಂದ ಸಹಾಯ ದೊರೆಯಿತು. ಆತನು ನಮಗೆ ಈ ಸಂಬಂಧ ಕಲ್ಪಿಸುವ ಜೋಡಣೆಯನ್ನು ಒದಗಿಸಿದನು. ಈ ರೀತಿಯಲ್ಲಿ ಅದು ಅಬ್ರಹಾಮನ ತಂದೆಯಾದ ತೆರಹನ ಮರಣದಿಂದ, ಆರಂಭಗೊಂಡ ಒಡಂಬಡಿಕೆಯಿಂದ ಹಿಡಿದು ಇಸ್ರಾಯೇಲ್ಯರು ಐಗುಪ್ತದಿಂದ ವಿಮೋಚನೆಗೊಳ್ಳುವ ವರೆಗಿನ ನಾನೂರ ಮೂವತ್ತು ವರ್ಷಗಳು (430) ಇಸ್ರಾಯೇಲ್ಯರು ಐಗುಪ್ತದಿಂದ ಬಿಟ್ಟಕಾಲದಿಂದ ಎಂದು ನಾವು ತಿಳುಕೊಂಡೆವು.

ಯಾಕೋಬನ ಮರಣದಿಂದ ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಹೊರಬರುವವರೆಗಿನ ಮರೆಯಾಗಿದ್ದ ಕಾಲವು ತೆರಹನ ಮರಣದಿಂದ ಯಾಕೋಬನ ಮರಣದವರೆಗೆ ಲೆಕ್ಕ ಹಾಕಿ ಆ ಮೊತ್ತವನ್ನು ನಾನೂರಮೂವತ್ತು ವರ್ಷಗಳಿಂದ ಕಳೆಯುವುದರ ಮೂಲಕ ಈ ರೀತಿಯಾಗಿ ಕಂಡುಕೊಳ್ಳುತ್ತೇವೆ :–

ತೆರಹನ ಮರಣದಲ್ಲಿ ದೇವರು ಅಬ್ರಹಾಮನೊಡನೆ ಒಡಂಬಡಿಕೆಯು ಮಾಡಲ್ಪಟ್ಟಾಗ ಆತನಿಗೆ ಎಪ್ಪತ್ತೈದು (75) ವರ್ಷಗಳು (ಆದಿ. 12:4). ಇದಾದ ಇಪ್ಪತ್ತೈದು (25) ವರ್ಷಗಳ ನಂತರ ಇಸಾಕನ ಜನನವಾಯಿತು (ಆದಿ. 21:5). ಆದುದರಿಂದ :

ಕಾಲದ ದ್ವಿಗುಣದ ಅಳತೆಯನ್ನು ಈ ರೀತಿಯಲ್ಲಿ ಎಣಿಕೆ ಮಾಡಲಾಗಿದೆ. ಹೆಸರಿಗೆ ಮಾತ್ರ ಆತ್ಮೀಕ ಇಸ್ರಾಯೇಲ್ಯರಿಂದ ಅನುಗ್ರಹವು ಹೊರಟು ಹೋಗಲು ಪ್ರಾರಂಭವಾದಾಗ ಯೆಹೂದ್ಯರಿಗೆ ಈ ಅನುಗ್ರಹವು ಪ್ರಾರಂಭವಾಯಿತು – ನಾವು 1845 ವರ್ಷಗಳನ್ನು ಕ್ರಿ.ಶ. 33ರ ವಸಂತ ಋತುವಿನಿಂದ ಎಣಿಸಲು ಪ್ರಾರಂಭಿಸಿ 1878ರ ಪಸ್ಕಕ್ಕೆ ತಲುಪುತ್ತೇವೆ. ಅಲ್ಲಿಂದ ಪುನಃ ಕ್ರಿ.ಶ. 1878 ರಿಂದ ಕ್ರಿ.ಶ. 1915 (ಅಂದರೆ ಅನ್ಯಜನಾಂಗಗಳ ಸಮಯ ಮುಗಿಯುವವರೆಗೆ) (ಬರಹಗಾರನ ಮುನ್ನುಡಿಯನ್ನು ನೋಡಿರಿ). ಇವರು ತಾವು ನಿರಾಕರಿಸಿದ ಅರಸನ ಅನುಗ್ರಹದಲ್ಲಿ ಇದ್ದೇವೆ ಎಂದು ಆತನನ್ನು ಗುರುತಿಸುತ್ತಾರೆ. ಈ ಕಾಲವು ಅವರ 37, ಅಂದರೆ ವರ್ಷ ಕ್ರಿ.ಶ. 33 ರಿಂದ ಕ್ರಿ.ಶ. 70. ಹೊರಹಾಕುವಿಕೆಯ ಆ ಅವಧಿಗೆ ತಮ್ಮನ್ನು ಇನ್ನು ಜನಾಂಗವಾಗಿ ಹೊರಹಾಕಿದ್ದಕ್ಕೆ ಅನುರೂಪವಾಗಿದೆ.

ನಾವೀಗಾಗಲೇ ಯೆಹೂದ್ಯ ಯುಗದ ಛಾಯೆ ಅಥವಾ ನಮೂನೆ ಮತ್ತು ಸುವಾರ್ತಾಯುಗದ ಮಹತ್ವದ ಭಾಗ ಅಥವಾ ಪ್ರತಿಸಂಕೇತ ಇವುಗಳ ನಡುವೆ ಎದ್ದುಕಾಣುವ ಅನೇಕ ಸಮಾನಾಂತರಗಳನ್ನು

* ಯೆಹೂದ್ಯ ಧರ್ಮದ ವರ್ಷವು ವಸಂತ ಋತುವಿನಲ್ಲಿ ಪ್ರಾರಂಭಗೊಳ್ಳುತ್ತದೆ. ಮತ್ತು ಪಸ್ಕ ಹಬ್ಬವು ಅವರ ಪ್ರತಿ ಧಾರ್ಮಿಕ ನೂತನ ವರ್ಷದ ಮೊದಲನೆಯ ತಿಂಗಳ ಹದಿನೈದನೇ ದಿನದಂದು ಪ್ರಾರಂಭಗೊಳ್ಳುತ್ತದೆ.

ಪರೀಕ್ಷಿಸಿದ್ದೇವೆ ಮತ್ತು ಇಲ್ಲಿ ನಾವು "ಎರಡು ಯುಗಗಳ ವಿಸ್ತಾರತೆಯು ನಿಷ್ಕೃಷ್ಟವಾಗಿ ಹೊಂದಿಕೊಳ್ಳುತ್ತದೆ" ಎಂಬ ಮತ್ತೊಂದನ್ನು ಯುಕ್ತವಾಗಿ ಸಾಬೀತುಪಡಿಸಿದ್ದೇವೆ, ಇಸ್ರಾಯೇಲ್ಯರ ಅಥವಾ ಅವಕೃಪೆಯ ದುಪ್ಪಟ್ಟು ಅವಧಿಯ ಕಾಲದಲ್ಲಿ (mishneh) ಸುವಾರ್ತಾ ಸಭೆಯು ಕರೆಯಲ್ಪಟ್ಟಿದೆ. ಇತರೆ ಹೊಂದಿಕೆಗಳು ಗಮನಾರ್ಹವಾಗಿ, ಎರಡು ಯುಗಗಳ, ಅವುಗಳ ಸುಗ್ಗಿಗಳ. ಕೊಯ್ಲು ಕಾಲದ ಮತ್ತು ಅದಕ್ಕಾಗಿ ನೀಡಿದ ಸಮಯವು ಮುಗಿಯುವ ಲಕ್ಷಣಗಳೂ ಹಾಗೆಯೇ ಇರುತ್ತವೆ ಮತ್ತು ಎಲ್ಲವೂ ನಮಗೆ ಮುಗಿಯುವ ಕಾರ್ಯಗಳ ನೆರವೇರಿಕೆಯ ಮುಖ್ಯ ಅಂಶಗಳನ್ನು ನೀಡುತ್ತವೆ. ಇದುವೇ ಈ ಯುಗದ ಸಮಾಪ್ತಿ. ನಾವು ಸಂಕ್ಷಿಪ್ತಗೊಳಿಸುವಾಗ ಈ ಎರಡೂ ಸುಗ್ಗಿಕಾಲಗಳ ಅನುರೂಪತೆಗಳನ್ನು ಗಮನಿಸಿರಿ :

## ಸುಗ್ಗಿಕಾಲದ ಸಮಾನಂತರಗಳ ವಿಮರ್ಶೆ
## Review of Harvest Parallels

ಯೆಹೂದ್ಯರ ಕಾಲವು ಒಂದು ಸುಗ್ಗಿಯೊಂದಿಗೆ ಮುಕ್ತಾಯವಾಯಿತು, ನಮ್ಮ ಕರ್ತನೂ, ಅಪೋಸ್ತಲರೂ ಫಲವನ್ನು ಕೊಯ್ಲು ಮಾಡುವ ಕೆಲಸವನ್ನು ಮಾಡಿದ್ದಾರೆ, ಅದರ ಬೀಜವು ಮೋಶೆಯಿಂದಲೂ, ಪ್ರವಾದಿಗಳಿಂದಲೂ ಬಿತ್ತಲ್ಪಟ್ಟಿದೆ. "ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ; ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ; ಆತನು ನಿತ್ಯಜೀವಕ್ಕೆ ಫಲವನ್ನು ಕೂಡಿಸುತ್ತಾನೆ; ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವುದು. 'ಬಿತ್ತುವವನೊಬ್ಬ, ಕೊಯ್ಯುವವನೊಬ್ಬ' ಎಂಬ ಗಾದೆಯಂತೆ ಆಯಿತು. ನೀವು ಕಷ್ಟ ಮಾಡದಂಥ ಬೆಳೆಯನ್ನು ಕೊಯ್ಯುವುದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು; ಬೇರೊಬ್ಬರು ಕಷ್ಟ ಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ" (ಯೋಹಾನ 4:35–38) ಎಂದು ಯೇಸು ಹೇಳಿದ್ದಾನೆ. ಸುವಾರ್ತಾ ಯುಗದ ಅಂತ್ಯವನ್ನು ಸಹಾ ಸುಗ್ಗಿಯೆಂದು ಕರೆಯುತ್ತಾರೆ "ಸುಗ್ಗಿಯ ಕಾಲ ಅಂದರೆ ಯುಗದ ಸಮಾಪ್ತಿ" (ಮತ್ತಾಯ 13:39). "ಸುಗ್ಗಿ ಕಾಲದಲ್ಲಿ ಕೊಯ್ಯುವವರಿಗೆ – ಮೊದಲು ಹಣಜಿಯನ್ನು ಆರಿಸಿ ತೆಗೆದು ಅದನ್ನು ಸುಡುವುದಕ್ಕೆ ಹೊರೆಕಟ್ಟಿಹಾಕಿ, ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ" (ಮತ್ತಾಯ 13:30) ಎಂದು ಯೇಸುವೇ ಹೇಳಿದ್ದಾನೆ.

ಸ್ನಾನಿಕನಾದ ಯೋಹಾನನು ಯೆಹೂದ್ಯರ ಸುಗ್ಗಿಯ ಕಾರ್ಯದ ಬಗ್ಗೆ "ಆತನು (ಯೇಸುವು) ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿನ ರಾಶಿಯನ್ನು ತೂರಿ ಹಸನುಮಾಡಿ ತನ್ನ ಗೋಧಿಯನ್ನು (ನಿಜವಾದ ಇಸ್ರಾಯೇಲ್ಯರನ್ನು) ಕಣಜದಲ್ಲಿ (ಕ್ರೈಸ್ತ ಸಭೆಗೆ) ತುಂಬಿಕೊಂಡು, ಹೊಟ್ಟನ್ನು (ದೇಶದ ಕಸ) ಆರದ ಬೆಂಕಿಯಲ್ಲಿ (ಒಂದು ರಾಷ್ಟ್ರವಾಗಿ ದಹಿಸಿದ ಬೆಂಕಿ) ಸುಟ್ಟು ಬಿಡುವನು" (ಮತ್ತಾಯ 3:12) ಎಂದಿದ್ದಾನೆ. ಈ ಕಷ್ಟವು ಅವರನ್ನು ರಾಷ್ಟ್ರೀಯವಾಗಿ ಆಹುತಿ ತೆಗೆದುಕೊಂಡಿತು. ಇಲ್ಲಿ ಪವಿತ್ರಾತ್ಮನ ಮತ್ತು ಬೆಂಕಿಯ ದೀಕ್ಷಾಸ್ನಾನದ ಬಗ್ಗೆ ಹೇಳಲ್ಪಟ್ಟಿದೆ – ಈ ಪವಿತ್ರಾತ್ಮನು ಪಂಚಾಶತ್ತಮ "ನಿಜವಾದ ದಿನದಂದು ಇಸ್ರಾಯೇಲ್ಯರ" ಮೇಲೆ ಬೆಂಕಿಯ ನಾಲಿಗೆಯ ರೂಪದಲ್ಲಿ ಇಳಿದು ಬಂತು. ಆದರೆ ಅವರ ನಿರಾಕರಣೆಯ ನಂತರ ಬೆಂಕಿಯೆಂಬ ಸಂಕಷ್ಟವು ಮೂವತ್ತೇಳು ವರ್ಷಗಳ ಕಾಲ ಇತರರ ಮೇಲೆ ಎರಗಿತು (ಮತ್ತಾಯ 3:11). ಈ ತೊಂದರೆಯಲ್ಲಿ ಇಸ್ರಾಯೇಲ್ಯರು ಒಂದು ಜನಾಂಗವಾಗಿ ನಾಶವಾದರು, ವ್ಯಕ್ತಿಗತವಾಗಿ ಅಲ್ಲ. ಪ್ರಕಟನೆಗಾರನಾದ ಯೋಹಾನನು ಈ ಯುಗದ ಸುಗ್ಗಿಯನ್ನು ಸತ್ಯದ ಕುಡುಗೋಲಿಗೆ ಹೋಲಿಸುತ್ತಾನೆ, ಯಾಕೆಂದರೆ ಕೊಯ್ಯುವ ಕಾಲವು ಬಂದದೆ. ಅದು ಎರಡರಷ್ಟು ಕಾರ್ಯಗಳನ್ನು ತೋರಿಸುತ್ತದೆ. ಇದರ ಒಂದು ಭಾಗವು ಈ ಭೂಮಿಯ ದ್ರಾಕ್ಷೆ ಬಳ್ಳಿಗೆ ಸಂಬಂಧಿಸಿದೆ ಮತ್ತು ಇದನ್ನು ದೇವರು ನೆಟ್ಟ ಕ್ರಿಸ್ತ ಯೇಸು ಮತ್ತು ಆತನ ಸದಸ್ಯರು ಅಥವಾ ಕೊಂಬೆಗಳುಳ್ಳ ನಿಜವಾದ ದ್ರಾಕ್ಷೆ ಬಳ್ಳಿಯಿಂದ ಬೇರ್ಪಡಿಸಬಹುದು (ಯೋಹಾನ 15:1–6). ಈ ಯುಗದ ಸುಗ್ಗಿಯು ಗೋಧಿ ಮತ್ತು ಹಣಜಿಯಿಂದ ಕೂಡಿದೆ (ಮತ್ತಾಯ 13:24–30, 36–39). ಹೀಗಾಗಿ ಯೆಹೂದ್ಯರ ಯುಗವನ್ನು ಗೋಧಿ ಮತ್ತು ಹೊಟ್ಟಿನ ಒಂದು ಕಾಲವೆಂದು ಕರೆಯುತ್ತಾರೆ. ಅಲ್ಲಿ ಹೊಟ್ಟು ಹೆಚ್ಚು ಪ್ರಬಲವಾಗಿರುವುದರಿಂದ, ಇತರೆ ಪ್ರತಿಯೊಂದು ಲಕ್ಷಣಗಳಲ್ಲಿ ಗುರುತಿಸಲ್ಪಟ್ಟಿರುವ ಸಮಾನಾಂತರದ ಹೋಲಿಕೆಯು ಈ ಸುಗ್ಗಿಯಲ್ಲಿ ಗೋಧಿಗಿಂತ ಹಣಜಿಯು ಅಧಿಕವಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತದೆ.

ಯೆಹೂದ್ಯ ಸುಗ್ಗಿಯು, 40 ವರ್ಷಗಳ ಒಂದು ಅವಧಿಯಾಗಿದೆ. ಅದು ನಮ್ಮ ಕರ್ತನ ಸುವಾರ್ತಾ ಸೇವೆಯಲ್ಲಿ ಪ್ರಾರಂಭವಾಗಿ ಹೆಸರಿಗೆ ಮಾತ್ರದ ಇಸ್ರಾಯೇಲ್ಯರು ಕರ್ತನನ್ನು ನಿರಾಕರಿಸಿದ ನಂತರ ಮತ್ತು ಅವರು ತಳ್ಳಲ್ಪಟ್ಟದ್ದರಲ್ಲಿ ಹಾಗೂ ಅವರು ಒಂದು ರಾಷ್ಟ್ರವಾಗಿ ನಾಶಕ್ಕೆ ಒಳಗಾದಾಗ ಆ ಅವಧಿ ಅಂತ್ಯವಾಗುತ್ತದೆ. ಅದನ್ನು ರೋಮನ್ನರು ಕಿ.ಶ. 70ರಲ್ಲಿ ನಿರ್ವಹಿಸಿದರು ಮತ್ತು ಈ ಯುಗದ ಸುಗ್ಗಿಯು ನಮ್ಮ ಕರ್ತನ ಪ್ರತ್ಯಕ್ಷತೆಯಲ್ಲಿ ಭೂಮಿಯ ಮಹಾ ಜೂಬಿಲಿಯು 1874ರಲ್ಲಿ ಪ್ರಾರಂಭವಾಗಿರುವುದನ್ನು ಅಧ್ಯಾಯ 6 ರಲ್ಲಿ ತೋರಿಸಲಾಗಿದೆ ಮತ್ತು ಕ್ರಿ.ಶ. 1914ರಲ್ಲಿ ಅನ್ಯಜನಾಂಗದ ಅಧಿಕಾರ ತಳ್ಳಲ್ಪಡುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ – ಅಂತೆಯೇ 40 ವರ್ಷಗಳ ಅವಧಿ ಮತ್ತೊಂದು ಅದ್ಭುತವಾದ ಎರಡು ಯುಗಗಳ ಸಮಾನಾಂತರವಾಗಿದೆ.

ಯೆಹೂದ್ಯರ ಸುಗ್ಗಿ ಕಾಲವು ಕರ್ತನ ಸೇವೆಯಿಂದ ಆರಂಭವಾಗಿರಲಾಗಿ, ದೇವರ ಕೃಪೆಯು ಮೂರುವರೆ

ವರ್ಷಗಳ ಕಾಲದ ನಂತರ ಅವರ ಹೆಸರುಮಾತ್ರದ ಹಳೇ ವ್ಯವಸ್ಥೆಯಿಂದ ಹೊರಟುಹೋಗಿದ್ದು, ಮೂವತ್ತೇಳು ವರ್ಷಗಳ ಕಾಲದ ಕಷ್ಟವು ಆ ವ್ಯವಸ್ಥೆಯ ಮೇಲೆ ಬಂದಿದೆಯಾದರೂ ಆ ಜನಾಂಗದ ಕೆಲವು ವ್ಯಕ್ತಿಗಳ ಮೇಲೆ ಮಾತ್ರ ಕೃಪೆಯು ಮುಂದುವರೆದದೆ ಮತ್ತು ಉತ್ತಮ ಸ್ಥಾನದ ಬಾಧ್ಯಸ್ಥಿಕೆಯನ್ನು ಕ್ರಿಸ್ತನೊಂದಿಗೆ ಹೊಂದಿಕೊಳ್ಳುವ ಸೌಭಾಗ್ಯದ ಕರೆಯನ್ನೂ ಕ್ರಿಸ್ತನನ್ನು ತಿರಸ್ಕರಿಸಿದ ಅದರಲ್ಲೂ ವಿಶೇಷವಾಗಿ 3½ ವರ್ಷಗಳ ನಂತರದಲ್ಲಿಯೂ ಅವರಿಗೆ ನೀಡಲಾಗಿದ್ದು ಆ ಮೂಲಕವಾಗಿ ದಾನಿಯೇಲನ ವಾಗ್ದಾನದ ನೆರವೇರಿಕೆಯನ್ನು ಉಲ್ಲೇಖಿಸಬಹುದಾಗಿದೆ (ದಾನಿ. 9:27). ಆ ಕೃಪೆಯು ಆತನ ಜನರಿಗೆ ಎಪ್ಪತ್ತನೆಯ ವಾರದ ಪೂರ್ಣ ಅಂತ್ಯದವರೆಗೂ ತೋರಿಸಲಾಗುವುದು. ಅದರ ಮಧ್ಯಭಾಗದಲ್ಲಿ ಮೆಸ್ಸೀಯನು ಛೇಧಿಸಲ್ಪಡುತ್ತಾನೆ. ಅದನ್ನು ಹಿಡಿದಿಟ್ಟ ವ್ಯವಸ್ಥೆಯನ್ನು ಖಂಡಿಸಿ, ವಾರ ಮಧ್ಯದಲ್ಲಿ ಹೊರಹಾಕಿದಾಗಲೂ ಈ ಎಲ್ಲಾ ನಿಜವಾದ ಗೋಧಿ ವರ್ಗಕ್ಕೆ ಮಾಡಿದ ವಾಗ್ದಾನವು ನೆರವೇರುವುದು. ಯೆಹೂದ್ಯರ ಕಾಲದ ಗೋಧಿಯ ಸುಗ್ಗಿಯು ನಮ್ಮ ಕರ್ತನ ಸೇವಾಕಾಲದಲ್ಲಿ ಪ್ರಾರಂಭವಾಗಿದ್ದು ಆತನ ಮರಣ ಕಾಲದಿಂದ ಮೂರುವರೆ ವರ್ಷಗಳ ಕಾಲ ಉಳಿದೆಲ್ಲಾ ವಿಶೇಷ ಕೃಪೆಗಳು ನಿಂತುಹೋದರೂ ಅದು ಮಾತ್ರ ಹಲವು ವರ್ಷಗಳವರೆಗೂ ಉಳಿದಿತ್ತು. ಆ ದೇಶದ ಮೇಲೆ ಸಂಕಷ್ಟವು (ಬೆಂಕಿ) ಬೇಗನೇ ಉರಿಯಲು ಪ್ರಾರಂಭವಾಯಿತು, ಆದರೆ "ರಾಷ್ಟ್ರದ ಗೋಧಿ"ಯು ಉಗ್ರಾಣ ತುಂಬುವವರೆಗೂ ಅದರ ಭೀಷಣ ಉಗ್ರತೆಗೆ ತಲುಪಲಿಲ್ಲ.

ಮುಗಿಯುತ್ತಿರುವ ಈ ಯುಗದ ಸುಗ್ಗಿಯಲ್ಲಿಯೂ ಅದೇ ರೀತಿಯ ಅವಧಿಗಳು ಆ ಸುಗ್ಗಿಗೆ ಅನುಗುಣವಾಗಿ ಗುರುತಿಸಲ್ಪಟ್ಟಿವೆ. ನಮ್ಮ ಕರ್ತನ ದ್ವಿತೀಯಾಗಮನದ ಸಮಯವು ಸನ್ನಿಹಿತವಾಗಿದೆ ಜೂಬಿಲಿ ಕಾಲ ಸುಗ್ಗಿಯ ವೃತ್ತವು 1874ಕ್ಕೆ ಆತನು ಸೂಚಿಸುವಂತೆ ಸ್ನಾನದೀಕ್ಷೆ ಮತ್ತು ಪವಿತ್ರಾತ್ಮನಿಂದ ಅಭಿಷೇಕ ಹೊಂದಿ ಅರಸನಾದ ಮೆಸ್ಸೀಯನಾಗಿ ಯೆಹೂದ್ಯ ಸುಗ್ಗಿಯ ಕೊಯ್ಲನ್ನು ಪ್ರಾರಂಭಿಸುವಾಗ ಉಂಟಾಗುವ ಇವುಗಳ ಸಮಯಕ್ಕೆ ಅನುಗುಣವಾಗಿದೆ (ದಾನಿ. 9:25). ಮೂರುವರೆ ವರ್ಷಗಳ ನಂತರದಲ್ಲಿ 1878ರ ವಸಂತಕಾಲವು, ಇದೇ ಸಂಬಂಧಿತವಾಗಿ ಯೇಸು ಅರಸನಾಗಿ ಅಧಿಕಾರ ವಹಿಸಿಕೊಳ್ಳುವ, ಕತ್ತೆಯ ಮೇಲೆ ಸವಾರಿ ಮಾಡಿದ, ದೇವಾಲಯವನ್ನು ಚಿನಿವಾರರಿಂದ ಶುದ್ಧೀಕರಿಸಿದ, ಯೆರೂಸಲೇಮ್ ದೇವಾಲಯವನ್ನು ನೋಡಿ ಕಣ್ಣೀರಿಟ್ಟದ್ದು ಮತ್ತು ನಾಮಾಂಕಿತ ಸಭೆಯು ಅಥವಾ ರಾಜ್ಯವು ನಿರ್ಜನವಾಗುತ್ತದೆಂದು ತಿಳಿಸಿದ ಆ ದಿನಾಂಕದ ಸಂಬಂಧಕ್ಕೆ ಅನುಗುಣವಾಗಿದೆ. ಅದು ಹೆಸರು ಮಾತ್ರದ ಸಭೆಯು ಕರ್ತನ ಬಾಯಿಂದ ಕಾರಲ್ಪಟ್ಟ ದಿನವನ್ನು ಗುರುತಿಸುತ್ತದೆ (ಪ್ರಕಟನೆ 3:16) ಮತ್ತು ಆ ಸಮಯದಿಂದ (1878) ಅವರು ದೇವರ ಮುಖವಾಣಿಗಳಾಗಿರುವುದಿಲ್ಲ, ಯಾವುದೇ ಮಟ್ಟದಲ್ಲಿ ದೇವರಿಂದ ಮಾನ್ಯರಾಗಿರುವುದಿಲ್ಲ. 1878ರ ವಸಂತದ ನಂತರದ ಮೂರೂವರೆ ವರ್ಷಗಳು 1881ರ ಅಕ್ಟೋಬರ್‌ನಲ್ಲಿ ಮುಕ್ತಾಯಗೊಂಡಿದ್ದು ಅದು ಯೆಹೂದ್ಯರ ಕೃಪಾಕಾಲದ ಕಡೆಯ ಎಪ್ಪತ್ತನೆಯ ವಾರದ 1/2 ಭಾಗವು ವೈಯಕ್ತಿವಾಗಿ ಯೆಹೂದ್ಯರಿಗೆ ವ್ಯಕ್ತಿಗತವಾಗಿ ಉಂಟಾದ ಕೃಪೆಯ ಮೂರೂವರೆ ವರ್ಷಗಳ ಕಾಲಕ್ಕೆ ಅನುಗುಣವಾಗಿದೆ. ನಮೂನೆಯಲ್ಲಿದ್ದಂತೆ ದಿನಾಂಕವು, ಕ್ರಿಸ್ತನ ಮರಣದ ನಂತರದ ಮೂರೂವರೆ ವರ್ಷಗಳು ಯೆಹೂದ್ಯರ ಎಲ್ಲಾ ವಿಶೇಷ ಕೃಪೆಯ ಅಂತ್ಯದ ಮತ್ತು ಅನ್ಯಜನರಿಗೆ ಕೃಪಾಕಾಲದ ಪ್ರಾರಂಭದ ಗುರುತಾಗಿದೆ. ಆದುದರಿಂದ ನಾವು 1881ನ್ನು ಅನ್ಯಜನರ ಕೃಪಾಕಾಲದ ಅಂತ್ಯದ ದಿನಗಳೆಂದೂ, ಮಹಾಕರೆಯ ಅಥವಾ ಈ ಯುಗಕ್ಕೆ ವಿಶಿಷ್ಟವೆನಿಸುವ ದೈವಿಕ ಸ್ವಭಾವದ ಕ್ರಿಸ್ತನೊಂದಿಗೆ ಬಾಧ್ಯಸ್ಥರಾಗುವ ಮತ್ತು ಆತನ ಆ ಸ್ವಭಾವದಲ್ಲಿ ಪಾಲುಗಾರರಾಗುವ ಆಶೀರ್ವಾದದ ಆಹ್ವಾನದ ಅಂತ್ಯವೆಂದೂ ಗುರುತಿಸುತ್ತೇವೆ. ನಾವು ಕಂಡುಕೊಂಡಂತೆ, ಇದು ಯೆಹೂದ್ಯರಲ್ಲಿ ಕ್ರೈಸ್ತತ್ವದ ಕಡೆಗೆ ನಡೆಸುವ ಚಳುವಳಿಯಾಗಿ ಗುರುತಿಸಲ್ಪಡುತ್ತದೆ ಮತ್ತು ಇದನ್ನು 'ಕಿಶನಿವ್ ಚಳುವಳಿ' (Kishenev Movement) ಎಂದು ಕರೆಯುತ್ತಾರೆ. ನಾಮಾಂಕಿತ ಕ್ರೈಸ್ತ ರಾಜ್ಯದ ಮೇಲೆ ಕಷ್ಟಗಳು ಈಗ ಸಮೀಪವಾಗುತ್ತಿವೆ, ಆದರೆ ಈ ಬಿರುಗಾಳಿಯು ಗೋಧಿ ಉಗ್ರಾಣ ಸೇರುವ ತನಕ, ದೇವರ ಸಂದೇಶಕರುಗಳು ಆತನ ಸೇವಕರ ಹಣೆಯ (ಬುದ್ಧಿ ಶಕ್ತಿ) ಮೇಲೆ ಸತ್ಯದಿಂದ ಮುದ್ರಿಸುವವರೆಗೆ ತಡೆಹಿಡಿಯಲ್ಪಟ್ಟಿದೆ (ಪ್ರಕಟನೆ 7:3).

ಈ ಸುಗ್ಗಿಯ ಲಕ್ಷಣಗಳು ಯೆಹೂದ್ಯ ಸುಗ್ಗಿಗೆ ಅನುಗುಣವಾಗಿ ಮಾಡಿದ ಬೋಧನೆಗಳೊಂದಿಗೆ ಸಹಾ ಬಹಳವಾಗಿ ಗುರುತಿಸಲ್ಪಟ್ಟಿವೆ. ಯೆಹೂದ್ಯ ಸುಗ್ಗಿಯ ಮೊದಲನೆಯ ಮೂರೂವರೆ ವರ್ಷಗಳಲ್ಲಿ ಯೇಸು ಮತ್ತು ಆತನ ಶಿಷ್ಯರುಗಳು ವಿಶೇಷವಾದ ಮೂಲ ಪಾಠದ ಸಮಯವನ್ನು ಮೆಸ್ಸೀಯನ ಪ್ರಸನ್ನತೆಯನ್ನೂ ಹೊಂದಿದ್ದರು. ಅವರ ಘೋಷಣೆಯು "ಕಾಲವು ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು" (ಮಾರ್ಕ 1:15, ಮತ್ತಾಯ 10:7) ಎಂಬುದೇ. ಈ ಸುಗ್ಗಿಯಲ್ಲಿಯೂ ಸಹಾ ಹಾಗೆಯೇ. 1878 ರವರೆಗೆ ಸಮಯ ಪ್ರವಾದನೆಗಳೂ ಮತ್ತು ಕರ್ತನ ಪ್ರಸನ್ನತೆಯ ಸತ್ಯವು ಇಲ್ಲಿ ಪ್ರಸ್ತುತಿಪಡಿಸಿದಂತೆ ಕಡಿಮೆ ಸ್ಪಷ್ಟವಾದಾಗ್ಯೂ ಗಣನೀಯವಾಗಿ ನಮ್ಮ ಸಂದೇಶವಾಗಿತ್ತು. ಅಂದಿನಿಂದ ಕಾರ್ಯವು ವಿಸ್ತಾರಗೊಂಡಿತು ಮತ್ತು ಇತರೆ ಸತ್ಯಗಳ ದೃಷ್ಟಿಕೋನವು ಹೆಚ್ಚು ಪ್ರಕಾಶಮಾನವೂ, ಸ್ಪಷ್ಟವೂ ಆಯಿತು. ಆದರೆ ಅದೇ ಸತ್ಯ ಸಂಗತಿಗಳೂ, ದೇವರ ವಾಕ್ಯಗಳೂ,

ಅದೇ ಸಮಯ ಮತ್ತು ಪ್ರಸನ್ನತೆಯ ಬೋಧನೆಗಳು ಯಾವುದೇ ಸವಾಲು ಹಾಕದೆ, ಯಾವುದೇ ವಿವಾದಾಸ್ಪದವಿಲ್ಲದೆ ಸ್ಥಿರಗೊಂಡಿದ್ದವು. ವೈಯಕ್ತಿಕವಾಗಿ ಇಸ್ರಾಯೇಲ್ಯರಿಗೆ ಅವರ ಹೆಸರು ಮಾತ್ರದ ಮನೆತನದವರಿಗೆ ನಿಲ್ಲಿಸಲ್ಪಟ್ಟ ಕೃಪೆಯು ಮುಂದುವರೆದು ಅದು ಅವರ ಹೆಸರು ಮಾತ್ರದ ಸಭಾಪದ್ಧತಿಯನ್ನು ಬದಲಿಸುವ ಅಥವಾ ಸುಧಾರಿಸುವ ಉದ್ದೇಶ ಹೊಂದಿರಲಿಲ್ಲ ಅಥವಾ ಅವರ ಹೊಟ್ಟನ್ನು ಗೋಧಿಯನ್ನಾಗಿ ಬದಲಾಯಿಸುವ ನಿರೀಕ್ಷೆಯನ್ನು ನೀಡಿರಲಿಲ್ಲ, ಆದರೆ ಅವರಲ್ಲಿ ಬೇರ್ಪಡಿಸಿ ಮಾಗಿದ ಪ್ರತಿಯೊಂದು ಗೋಧಿ ಕಾಳನ್ನೂ ಉಗ್ರಾಣಕ್ಕೆ ಸೇರಿಸುವ ಉದ್ದೇಶ ಹೊಂದಿತ್ತು. ಅದರಂತೆ ಈ ಸುಗ್ಗಿಯಲ್ಲಿ ಮುಂದುವರಿದ ಸಮೃದ್ಧವಾದ ಸತ್ಯದ ಕೃಪೆಯು ಸಮಗ್ರ ವರ್ಗಗಳವರನ್ನು ಬದಲಿಸುವ ಅಥವಾ ರಾಷ್ಟ್ರೀಯ ಸುಧಾರಣೆಗಳ ವಿನ್ಯಾಸವನ್ನು ಹೊಂದಿಲ್ಲ, ಆದರೆ ಇದಕ್ಕೆ ವ್ಯತಿರಿಕ್ತವಾಗಿ ಗೋಧಿ ವರ್ಗವನ್ನು ಹಣಜಿ ವರ್ಗದವರಿಂದ ಸಂಪೂರ್ಣವಾಗಿ ಬೇರ್ಪಡಿಸುವುದಾಗಿದೆ. ಶತಮಾನಗಳಿಂದ ಅವುಗಳು ಒಟ್ಟೊಟ್ಟಾಗಿ ಬೆಳೆದವು, ಮತ್ತು ಶುದ್ಧವಾದ ಪೂರ್ಣ ಗೋಧಿ ವರ್ಗವು ಅಜ್ಞಾತವಾಗಿದೆ; ಆದರೆ ಈಗ ಸುಗ್ಗಿಯಲ್ಲಿ ಬೇರ್ಪಡಿಸುವಿಕೆಯು ಬರಬೇಕಾಗಿದೆ ಮತ್ತು ಸೋಸುವಿಕೆಯು ತೀವ್ರವಾಗಿದೆ. ಅದರ ಅರ್ಥ, ಪ್ರತಿಯೊಂದು ಸಂದರ್ಭದಲ್ಲಿಯೂ, ಈ ಲೋಕದ ಸ್ನೇಹಗಳ ಬುಡಮೇಲು ಮಾಡುವಿಕೆಯು ಮತ್ತು ಹಲವಾರು ದುರ್ಬಲ ಸಂಬಂಧಗಳ ವಿಂಗಡಿಸುವಿಕೆಯನ್ನು ಸತ್ಯವು ಬೇರ್ಪಡಿಸುವ ಕಾರ್ಯವನ್ನು ಮಾಡುತ್ತವೆ. ಪ್ರಥಮ ಆಗಮನದಲ್ಲಿ ಕರ್ತನು ಸುಗ್ಗಿಯ ವಿಷಯದಲ್ಲಿ ನುಡಿದ ಭವಿಷ್ಯವು ಪ್ರಸ್ತುತ ಸುಗ್ಗಿಯಲ್ಲಿಯೂ ಸತ್ಯವಾಗಿದೆ (ಮತ್ತಾಯ 10:35–38, ಲೂಕ 12:51–53). ಸತ್ಯವು ತಂದೆಯನ್ನು ಮಗನಿಗೆ ವಿರೋಧಿಯನ್ನಾಗಿಯೂ, ಮಗಳನ್ನು ತಾಯಿಗೆ ವಿರೋಧಿಯಾಗಿಯೂ, ಅತ್ತೆಯನ್ನು ಸೊಸೆಗೆ ವಿರೋಧಿಯನ್ನಾಗಿಯೂ ಮಾಡುತ್ತದೆ. ಅದೇ ರೀತಿ ಪುನಃ ಮನುಷ್ಯನಿಗೆ ಹಲವೊಮ್ಮೆ ಅವರ ಮನೆಯವರೇ ವೈರಿಗಳಾಗುತ್ತಾರೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲ. ಯಾರು ಶಾಂತಿಯನ್ನು ಸತ್ಯಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾರೋ ಅವರನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ಮತ್ತು ಸತ್ಯವನ್ನು ಪ್ರಧಾನವಾಗಿ ಪ್ರೀತಿಸುವವರನ್ನು ಯೆಹೂದ್ಯ ಸುಗ್ಗಿಯಲ್ಲಿರುವಂತೆ ಸ್ವೀಕರಿಸಲಾಗುವುದು ಮತ್ತು ಜಯಹೊಂದಿದವರೆಂದು ಒಪ್ಪಿಕೊಳ್ಳಲಾಗುವುದು.

ಯೆಹೂದ್ಯ ಸುಗ್ಗಿಯಲ್ಲಿ ಆಯ್ದುಕೊಂಡ ಸಂದೇಶವಾಹಕರುಗಳು ಮತ್ತು ಅರಸನ ಮತ್ತು ರಾಜ್ಯದ ರಾಜಘೋಷಕ ದೂತರೆಂದು ಕಳುಹಿಸಲ್ಪಟ್ಟವರು ನಮ್ರರಾಗಿದ್ದರು, ಯಾವುದೇ ಬಿರುದುಗಳಿಲ್ಲದವರಾಗಿದ್ದರು. ಆದರೆ ಸಂದೇಶವನ್ನು ವಿರೋಧಿಸುವವರು ಮಹಾ ಯಾಜಕರಾಗಿದ್ದರು, ಶಾಸ್ತ್ರಿಗಳಾಗಿದ್ದರು, ಫರಿಸಾಯರಾಗಿದ್ದರು ಮತ್ತು ದೈವತ್ವದ ಪಂಡಿತರುಗಳಾಗಿದ್ದರು. ನಾವು ನಿರೀಕ್ಷಿದಂತೆ ನಾವಿಲ್ಲಿ ಹೆಚ್ಚು ಕುರುಡುತನವಾಗಿರುವವರು ಕುರುಡರ (ವಿವೇಚನಾಹೀನತ) ನಾಯಕರಾಗಿರುತ್ತಾರೆ ಎಂದು ಕಂಡುಕೊಳ್ಳುತ್ತೇವೆ. ಅವರು ಅವರ ಯೆಹೂದ್ಯರ ಮಾದರಿಯಂತೆ ದೇವರು ದರ್ಶನ ಕೊಟ್ಟ ಸಮಯವನ್ನು ತಿಳಿದಿರುವುದಿಲ್ಲ (ಲೂಕ 19:44).

ಪ್ರತ್ಯಕ್ಷತೆಯು ಅಲ್ಲಿ ಮುಖ್ಯವಾದ ಪರೀಕ್ಷೆಯಲ್ಲಿ ಒಂದಾಗಿತ್ತು. ಮತ್ತು ಶಿಲುಬೆಯ ಸಂಗತಿ ಮತ್ತೊಂದಾಗಿತ್ತು. ಸ್ನಾನಿಕನಾದ ಯೋಹಾನನು ಅವರಿಗೆ "ನೀವು ಅರಿಯದೇ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ" (ಯೋಹಾನ 1:26) ಎಂದು ಕೂಗಿ ಹೇಳಿದ್ದಾನೆ. ಆದರೆ, ನಿಜ ಇಸ್ರಾಯೇಲ್ಯರು ಮೆಸ್ಸೀಯನ ಪ್ರಸನ್ನತೆಯ ಸತ್ಯವನ್ನು ಗ್ರಹಿಸಲು ಶಕ್ತರಾದರು; ಇವರಲ್ಲಿ ಅನೇಕರು ಶಿಲುಬೆಯ ವಿಷಯದಲ್ಲಿ ಮುಗ್ಗರಿಸುವವರಾದರು. ಅವರು ಮೆಸ್ಸೀಯನನ್ನು ತಮ್ಮ ಬಿಡುಗಡೆ ಮಾಡುವಾತನೆಂದು ಅಂಗೀಕರಿಸಲು ಮನಸ್ಸುಳ್ಳವರಾಗಿದ್ದರೂ ಅವರ ಅಹಂಕಾರವು ಆತನನ್ನು ತಮ್ಮ ವಿಮೋಚಕನನ್ನಾಗಿ ಅಂಗೀಕರಿಸಲು ಇಷ್ಟವಿಲ್ಲದಂತೆ ಮಾಡಿಬಿಟ್ಟಿತು. ಅದರಂತೆ ಇಲ್ಲಿ, ಕ್ರಿಸ್ತನ ಪ್ರತ್ಯಕ್ಷತೆಯು, ಸುಗ್ಗಿಯು ಜಾರಿಯಲ್ಲಿದೆ ಮತ್ತು ಹೆಸರು ಮಾತ್ರ ಪಂಡಿತ ಗುಂಪಿನವರ ತಿರಸ್ಕಾರವು ಅನೇಕರನ್ನು ಮುಗ್ಗರಿಸಿತು; ಮತ್ತು ಯಾವಾತನ ಬರೋಣಕ್ಕಾಗಿ, ರಾಜ್ಯಕ್ಕಾಗಿ ಅನೇಕರು ಪ್ರಾರ್ಥಿಸುತ್ತಿದ್ದರೋ (ಯೆಹೂದ್ಯರು ಮಾಡಿದಂತೆ) ಆ ಮಹಾವಿಮೋಚಕನನ್ನು ಅವರು ಸ್ವೀಕರಿಸಲು ಸಿದ್ಧರಾಗಲಿಲ್ಲ. ಪುನಃ "ಆದರೆ ನೀವು ಅರಿಯದೇ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ" (ಯೋಹಾನ 1:26) ಎಂಬ ಮಾತು ನಿಜವಾಯಿತು. ಪುನಃ ಕ್ರಿಸ್ತನ ಶಿಲುಬೆಯು ಯಾರೂ ನಿರೀಕ್ಷಿಸಿರದ ಪರೀಕ್ಷೆಯಾಯಿತು, ಮುಗ್ಗರಿಸುವ ಕಲ್ಲಾಯಿತು. ಈಗ ಅನೇಕಾನೇಕರು ಅದರ ಮೇಲೆ ಬೀಳುವವರಾಗಿದ್ದು "ನಾವು ಕ್ರಿಸ್ತನನ್ನು ನಮ್ಮ ಬಿಡುಗಡೆಗೊಳಿಸುವಾತನೆಂದು ಒಪ್ಪಿಕೊಳ್ಳುತ್ತೇವೆ. ಆದರೆ ಆತನು ನಮ್ಮ ವಿಮೋಚಕನೆಂಬುದನ್ನು ಅಥವಾ ನಮಗಾಗಿ ಈಡುಬಲಿಯಾದವನೆಂಬುದನ್ನು ತಿರಸ್ಕರಿಸುತ್ತೇವೆ" ಎಂದು ಹೇಳುತ್ತಾರೆ.

ನಿಶ್ಚಯವಾಗಿಯೂ, ಯಾರು ಈ ವಿಷಯವನ್ನು ಜಾಗರೂಕತೆಯಿಂದ ಪರಿಗಣಿಸುತ್ತಾರೋ ಅಂಥವರು ನಮ್ಮ ಕರ್ತನು ಈಗ ಪ್ರಸನ್ನನಾಗಿದ್ದಾನೆ, ಆತನು ಆತ್ಮಸ್ವರೂಪಿಯಾಗಿದ್ದು ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುವುದಿಲ್ಲ ಎಂಬ ಪುರಾವೆಯನ್ನು ಅಂಗೀಕರಿಸಿಕೊಳ್ಳಬೇಕು. ಆತನು ತನ್ನ ಪ್ರಥಮ ಆಗಮನದಲ್ಲಿ ಯೆಹೂದ್ಯರಿಗೆ ದೇಹಧಾರಿಯಾಗಿ ಕಾಣಿಸಿಕೊಂಡನು ಎಂಬುದಕ್ಕಿಂತ ಇದು

ಮಹತ್ವವಾದುದೂ ಮತ್ತು ಸ್ಪಷ್ಟವಾದುದೂ ಆಗಿದೆ. ಕರ್ತನ ಪ್ರಸನ್ನತೆಯ ಬಗ್ಗೆ ಪ್ರವಾದನೀಯ ಪುರಾವೆಗಳು ಈಗ ವಿಫುಲವಾಗಿರುವುದು, ಪೂರ್ಣಗೊಂಡಿರುವುದು ಮತ್ತು ಅನೇಕವಾಗಿರುವುದು ಮಾತ್ರವಲ್ಲದೆ, ಆದರೆ ಆ ಸಮಯದ ಸೂಚನೆಗಳು ಎಲ್ಲೆಡೆಯಲ್ಲಿಯೂ ನಮಗೆ ಸಂಬಂಧಿಸಿದ ಸುಗ್ಗಿಯ ಕಾರ್ಯವು ಪ್ರಗತಿಯಲ್ಲಿದೆ ಎಂಬುದನ್ನು ತೋರಿಸುತ್ತಿದೆ ಎಂಬುದು ಇನ್ನೂ ಹೆಚ್ಚಾಗಿ ಸುವ್ಯಕ್ತವಾಗಿದೆ ಮತ್ತು ಯಾರ ಕಣ್ಣುಗಳು ಅಭಿಷೇಕಿಸಲ್ಪಟ್ಟಿದೆಯೋ ಅವರನ್ನು ಮೊದಲನೇ ಆಗಮನದ ಪರಿಸ್ಥಿತಿಗಿಂತಲೂ ಹೆಚ್ಚಾಗಿ ಮನದಟ್ಟು ಪಡಿಸುವುದಾಗಿದೆ (ಪ್ರಕಟನೆ 3:18). ಮೊದಲನೆಯ ಆಗಮನದಲ್ಲಿ ಯೇಸು ಕೆಲವೇ ಅನುಯಾಯಿಗಳೊಂದಿಗೆ, ಬಹಳಷ್ಟು ವಿರೋಧದ ನಡುವೆಯೂ ಮತ್ತು ಅನೇಕ ಅನಾನುಕೂಲಕರ ಸ್ಥಿತಿಯಲ್ಲಿಯೂ "ಕಾಲವು ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ", (ಮಾರ್ಕ 1:15) ಎಂದು ಪ್ರಕಟಿಸಿದನು. ಮಹಾನ್ ಯೆಹೋವನ ಸಂದೇಶವಾಹಕನಾದ ಮೆಸ್ಸೀಯನು ನಿಮ್ಮ ಪಿತೃಗಳಿಗೆ ಮಾಡಿದ ವಾಗ್ದಾನಗಳನ್ನು ನೆರವೇರಿಸಲು ಬಂದಿದ್ದಾನೆ, ನಮ್ರ ಹೃದಯರು ಮಾತ್ರವೇ ನಮ್ರನಾದ ನಜರಾಯನನ್ನು ಮಹಾವಿಮೋಚಕನೆಂದು ಅಂಗೀಕರಿಸುವವರು, ಅಥವಾ ದೀನರು, ಪ್ರಖ್ಯಾತವಲ್ಲದವರು ಆತನ ಸರ್ಕಾರದ ಸಂಪುಟದ ಭಾಗವಾಗಿ ಆತನ ರಾಜ್ಯದಲ್ಲಿ ಆತನ ಅಡಿಯಲ್ಲಿ ಅರಸರಾಗಿ ಆಳುವುದು ಎಂಥಾ ಆಶ್ಚರ್ಯ! ಕೆಲವರು ಮಾತ್ರವೇ ಕತ್ತೆಯ ಮೇಲೆ ಸವಾರಿ ಮಾಡಿದಾತನನ್ನು, ಯೆರೂಸಲೇಮ್ ನಗರವನ್ನು ನೋಡಿ ಕಣ್ಣೀರಿಟ್ಟವನನ್ನು ಜೆಕರ್ಯನು ಪ್ರವಾದಿಸಿದಂತೆ "ಚಿಯೋನ್ ಆತನನ್ನು ಸಂತೋಷದ ಮಹಾಘೋಷದೊಡನೆ ಆತನನ್ನು ಅರಸನನ್ನಾಗಿ ಸ್ವೀಕರಿಸಿತು" ಎಂಬುದನ್ನು ಕಂಡುಕೊಳ್ಳುವರು.

ಪ್ರಥಮ ಆಗಮನದಲ್ಲಿ ಆತನು ತನ್ನನ್ನು ತಗ್ಗಿಸಿಕೊಂಡು ಮಾನವ ರೂಪವನ್ನು ಧರಿಸಿದನು (ಇಬ್ರಿಯ 22: 9,14). ಆ ಮೂಲಕವಾಗಿ ಆತನು ತನ್ನನ್ನೇ ಈಡುಬಲಿಯನ್ನಾಗಿ ಅರ್ಪಿಸುವುದರ ಮೂಲಕ ನಮ್ಮ ವಿಮೋಚನೆಯನ್ನು ಪೂರೈಸಿದನು. ಈಗ ಆತನು ಅತ್ಯುನ್ನತ ಸ್ಥಿತಿಗೆ ಏರಿಸಲ್ಪಟ್ಟಿದ್ದಾನೆ (ಫಿಲಿಪ್ಪಿ 2:9). ಆತನು ಇನ್ನು ಮರಣ ಹೊಂದುವವನಲ್ಲ ಮತ್ತು ಆತನ ದ್ವಿತೀಯಾಗಮನದಲ್ಲಿ ಅಧಿಕಾರ ವಸ್ತ್ರವನ್ನು ಧರಿಸಿದವನಾಗಿ, ಆತನು ತನ್ನ 'ದೇಹ'ವನ್ನು ಘನತೆಗೇರಿಸುತ್ತಾನೆ ಮತ್ತು ಲೋಕದ ಮೇಲೆ ಆತನು ತನ್ನ ಪ್ರಥಮ ಆಗಮನದಲ್ಲಿ ಪರಿಶುದ್ಧವಾದ ಸ್ವರಕ್ತದಿಂದ ಕೊಂಡುಕೊಂಡ ಪುನರ್‌ವಶದ ಆಶೀರ್ವಾದವನ್ನು ಸುರಿಸುತ್ತಾನೆ. ಆತನು ಇನ್ನು ಮುಂದೆ ದೇಹಧಾರಿಯಲ್ಲ, ಆತ್ಮಸ್ವರೂಪಿ ಮತ್ತು ಸಧ್ಯದಲ್ಲೇ ಆತನ ಅಂಗಗಳಾದ, ಜೊತೆ ಬಾಧ್ಯಸ್ಥರನ್ನು ಮತ್ತು ಎಲ್ಲಾ ಆತನ ನಂಬಿಗಸ್ತ ಅನುಯಾಯಿಗಳನ್ನು ಮಹಿಮೆಪಡಿಸುವನು ಎಂಬುದನ್ನು ನೆನಪಿನಲ್ಲಿಡಿ.

ಯೆಹೂದ್ಯ ಮನೆತನದವರಿಗೆ ಯೇಸು ತನ್ನನ್ನು ಮದಲಿಂಗನಾಗಿ, ಕೊಯ್ಲುಗಾರನಾಗಿ (ಯೋಹಾನ 3:29; 4:35,38) ಮತ್ತು ಅರಸನಾಗಿ (21:5,9,4) ಮೂರು ವಿಧದಲ್ಲಿ ಪ್ರಕಟಿಸಿಕೊಂಡನು. ಕ್ರೈಸ್ತ ಮನೆತನದವರಿಗೆ ಸಹಾ ಆತನು ಅದೇ ರೀತಿಯಲ್ಲಿ ಮೂರು ವಿವಿಧ ಗುಣಲಕ್ಷಣಗಳೊಡನೆ ತನ್ನನ್ನು ಪ್ರಕಟಿಸಿಕೊಂಡಿದ್ದಾನೆ (2 ಕೊರಿಂಥ 11:2; ಪ್ರಕಟನೆ 14:14,15; 17:14). ಯೆಹೂದ್ಯ ಮನೆತನದವರಿಗೆ ಅವರ ಸುಗ್ಗಿಯ ಆರಂಭದಲ್ಲಿ (ಆತನ ಸೇವೆಯ ಪ್ರಾರಂಭದಲ್ಲಿ) ಮದುಮಗನಾಗಿಯೂ, ಕೊಯ್ಲುಗಾರನಾಗಿಯೂ ಅವರ ಬಳಿಗೆ ಬಂದನು; ಮತ್ತು ಆತನು ಶಿಲುಬೆಗೆ ಹಾಕಲ್ಪಡುವ ಸ್ವಲ್ಪ ಮೊದಲು ಆತನು ತನ್ನನ್ನು ಅವರ ಅರಸನನ್ನಾಗಿ ಪ್ರಕಟಿಸಿಕೊಂಡು ತನ್ನ ಅರಸನ ಅಧಿಕಾರವನ್ನು ಪ್ರಯೋಗಿಸಿ ಅವರ ಮನೆಯನ್ನು ನಿರ್ಜನ ಮಾಡುವ ನ್ಯಾಯತೀರ್ಪನ್ನು ಪ್ರಕಟಿಸಿದನು ಮತ್ತು ಅವರ ದೇವಾಲಯವನ್ನು ಶುದ್ಧೀಕರಿಸುವ ಸಾಂಕೇತಿಕ ಕಾರ್ಯವನ್ನು ಮಾಡಿದನು (ಲೂಕ 19:41–46; ಮಾರ್ಕ 11:15–17). ಹೀಗಾಗಿ ಈ ಸುಗ್ಗಿಯ ಕಾಲದಲ್ಲಿ 1874ರಿಂದ 1878ರವರೆಗಿನ ಮೂರೂವರೆ ವರ್ಷಗಳ ಕಾಲದಲ್ಲಿ ಮದುಮಗನಾಗಿ ಮತ್ತು ಕೊಯ್ಲುಗಾರನಾಗಿ ಯೇಸುವಿನ ಪ್ರಸನ್ನತೆಯು ಗ್ರಹಿಸಲ್ಪಟ್ಟಿತು. ಆ ಸಮಯದಿಂದ 1878ರಲ್ಲಿ ಅರಸನ ತೀರ್ಪು ದೇವರ ಮನೆಯಲ್ಲಿ ಪ್ರಾರಂಭವಾಗಬೇಕಾದ ಸಮಯವು ಬಂದಿದೆ ಎಂಬುದು ಸ್ಪಷ್ಟವಾಗಿ ಪ್ರಕಟಗೊಂಡಿತು. ಇಲ್ಲಿ ಪ್ರಕಟನೆ 14:14–20ರಲ್ಲಿನ ಮಾತುಗಳು ಅನ್ವಯವಾಗುತ್ತವೆ ಮತ್ತು ನಮ್ಮ ಕರ್ತನು ಕಿರೀಟಧಾರಿಯಾದ ಕೊಯ್ಲುಗಾರನಾಗಿ ಕಾಣಿಸಿಕೊಳ್ಳುತ್ತಾನೆ. ಕ್ರಿ.ಶ. 1878ರ ವರ್ಷವು ಆತನು ಸಾಂಕೇತಿಕವಾಗಿ ತನ್ನ ಶಕ್ತಿ ಮತ್ತು ಅಧಿಕಾರವನ್ನು ವಹಿಸಿಕೊಂಡ ವರ್ಷಕ್ಕೆ ಸಮಾನಾಂತರವಾಗಿದೆ ಮತ್ತು ನಿಜವಾಗಿ ನಮ್ಮ ಪ್ರಸ್ತುತ, ಆತ್ಮೀಕ ಮತ್ತು ಅದೃಶ್ಯನಾದ ಕರ್ತನು ರಾಜಾಧಿರಾಜನಾಗಿ ಅಧಿಕಾರವಹಿಸಿ ಕೊಂಡದ್ದನ್ನು, ಆತನು ತನ್ನ ಮಹಾಅಧಿಕಾರವನ್ನು ತನ್ನ ಮೇಲೆ ತಕ್ಕೊಂಡು ಆಳುವ ಸಮಯವನ್ನು ಗುರುತಿಸುತ್ತದೆ. ಅದು ಆತನ ನಂಬಿಗಸ್ತರ ಪುನರುತ್ಥಾನ ಮತ್ತು ಜನಾಂಗಗಳ ಮೇಲೆ ಬರುವ ಮಹಾಸಂಕಟದ, ರೌದ್ರದ ಆರಂಭ ಇವುಗಳ ಬಗ್ಗೆ ಇರುವ ಪ್ರವಾದನೆಯಲ್ಲಿ ನಿಕಟವಾಗಿ ಸಂಯೋಜಿಸಲ್ಪಟ್ಟಿದೆ (ಪ್ರಕಟನೆ 11:17,18). ಇಲ್ಲಿ ಸಂಕೇತದಲ್ಲಿದ್ದಂತೆ, ತೀರ್ಪು ಹೆಸರುಮಾತ್ರದ ಕ್ರೈಸ್ತಸಭೆಯೊಂದಿಗೆ, ಪದ್ಧತಿಗಳನ್ನು ಖಂಡಿಸಿ

ನಾಶಗೊಳಿಸುವುದರೊಂದಿಗೆ ಪ್ರಾರಂಭಗೊಳ್ಳುತ್ತದೆ, ಆದರೆ ಬಾಹ್ಯವಾಗಿ ಸತ್ಯ ಸಭೆಯನ್ನು, ಕ್ರಿಸ್ತನ ದೇಹವನ್ನು ಪ್ರತಿನಿಧಿಸುತ್ತದೆ. ಇಲ್ಲಿಯೂ ಸಹ ಕ್ರಿಸ್ತನ ದೇಹವಾದ ನಿಜವಾದ ಸಭೆಯ (ದೇವಾಲಯದ), ಪ್ರತಿಷ್ಠೆ ಹೊಂದಿದ ವರ್ಗದವರಿಗೆ ಶುದ್ಧೀಕರಣವಿದೆ (1 ಕೊರಿಂಥ 3:16; ಪ್ರಕಟನೆ 3:12). ನಾಮಾಂಕಿತ ಸಭೇಯ ಈ ಪ್ರತಿಷ್ಠಿತ ಅಥವಾ ದೇವಾಲಯದ ವರ್ಗವು ಸಮಗ್ರವಾಗಿ ನಾಮಾಂಕಿತ ಸಭೆ ಸಂಬಂಧಿಸಿದವರಾಗಿರುತ್ತಾರೆ. ಹೇಗೆಂದರೆ ಅಕ್ಷರಶಃವಾದ ದೇವಾಲಯುವು ಯೆರೂಸಲೇಮಿನ ಪರಿಶುದ್ಧ ಪಟ್ಟಣಕ್ಕೆ ಸಮಗ್ರವಾಗಿ ಸಂಬಂಧಪಟ್ಟಂತೆಯೂ ಇರುತ್ತದೆ. ನಗರವನ್ನು ಬಿಟ್ಟುಕೊಟ್ಟ ಮೇಲೆ ದೇವಾಲಯುವನ್ನು ಶುದ್ಧೀಕರಿಸಲಾಯಿತು. ಅದರಂತೆ ಈಗ ದೇವಾಲಯ ವರ್ಗದವರನ್ನೂ ಶುದ್ಧೀಕರಿಸಬೇಕಾಗಿದೆ. ಪ್ರತಿಯೊಬ್ಬ ಸ್ವಾರ್ಥ, ವಿಷಯ ಲಂಪಟ ಆಲೋಚನೆಯುಳ್ಳವರನ್ನು ಶುದ್ಧೀಕರಿಸಿ ಎಲ್ಲಾ ಲೌಕಿಕತೆಯನ್ನೂ ನಿವಾರಿಸಿ ದೇವಾಲಯವನ್ನು ದೇವರ ಪವಿತ್ರಾತ್ಮನ ವಾಸಸ್ಥಳ ವಾಗುವಂತೆ, ಜೀವಸ್ವರೂಪನಾದ ದೇವರ ನಿವಾಸವಾಗುವಂತೆ ಶುದ್ಧೀಕರಿಸಬೇಕು.

1878ರ ನಂತರದ ವಿಶೇಷ ಕಾರ್ಯವು ಅರಸನ ಆಜ್ಞೆಯಂತೆ "ನನ್ನ ಪ್ರಜೆಗಳೇ, ಅವಳನ್ನು (ಬಾಬೇಲನ್ನು) ಬಿಟ್ಟು ಬನ್ನಿರಿ. ನೀವು ಆಕೆಯ ಪಾಪಗಳಲ್ಲಿ ಪಾಲುಗಾರರಾಗಬೇಡಿರಿ. ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು" (ಪ್ರಕಟನೆ 18:4). "ತೊಲಗಿರಿ, ತೊಲಗಿರಿ, ಬಾಬೇಲಿನಿಂದ ಹೊರಡಿರಿ, ಅಶುದ್ಧವಾದ ಯಾವುದನ್ನೂ ಮುಟ್ಟದಿರಿ, ಅದರ ಮಧ್ಯದೊಳಗಿಂದ ತೆರಳಿರಿ, ಯೆಹೋವನ ಆಲಯದ ಉಪಕರಣಗಳನ್ನು ಹೊರುವವರೇ (ರಾಜವಂಶಸ್ಥ ಯಾಜಕ ವರ್ಗದವರೇ), ಶುದ್ಧರಾಗಿರ್ರಿ" (ಯೆಶಾಯ 52:11) ಎಂಬ ಘೋಷಣೆಗಳೇ ಆಗಿದೆ.

ಪ್ರಥಮ ಹಾಗೂ ದ್ವಿತೀಯ ಆಗಮನವನ್ನು ಗುರುತಿಸುವ ಮತ್ತೊಂದು ಹೋಲಿಕೆಯ ಅಂಶವೆಂದರೆ ಒಬ್ಬ ಬಿಡುಗಡೆಗಾರನ ಅಗತ್ಯದ ಅರಿವು ಮತ್ತು ಎಲ್ಲಾ ದೇಶಗಳಲ್ಲಿಯೂ ಇರುವ ವ್ಯಾಪಕವಾದ ಅಭಿಪ್ರಾಯವು ಬಿಡುಗಡೆಯು ಆದಷ್ಟು ಬೇಗನೇ ಬರಲಿದೆ ಎಂಬದೇ ಮತ್ತು ಕೆಲವರ ಅಭಿಪ್ರಾಯುವು ಸತ್ಯಕ್ಕೆ ಸಮೀಪಿಸುವುದಾಗಿದೆ. ಆದರೆ ಪ್ರತಿಯೊಂದು ಪ್ರಕರಣದಲ್ಲಿಯೂ ಕೆಲವರು ಮಾತ್ರವೇ ವಿಮೋಚಕನನ್ನು ಗ್ರಹಿಸಲು ಶಕ್ತರಾಗುತ್ತಾರೆ ಮತ್ತು ಆತನ ಪತಾಕೆಯ ಅಡಿಯಲ್ಲಿ ಸತ್ಯದ ಸೇವೆಗೆ ದಾಖಲುಪಡಿಸಿಕೊಳ್ಳುತ್ತಾರೆ. ಯೆಹೂದ್ಯರ ಸುಗ್ಗಿಕಾಲದಲ್ಲಿ ಎಲ್ಲಾ ಜನರು ಕರ್ತನ ನಿರೀಕ್ಷೆಯಲ್ಲಿರುವಾಗ, ಆತನು ತನ್ನ ಸೇವೆಯ ಆರಂಭದಲ್ಲಿ ಮೆಸ್ಸೀಯನಾಗಿ ಅಭಿಷಕ್ತನಾಗುವ ಮೂವತ್ತು ವರ್ಷಗಳ ಹಿಂದೆಯೇ ಅನೇಕರು ಆತನ ಜನನದ ಸಮಯದಲ್ಲಿ ಆತನನ್ನು ಸಂಧಿಸಲು ಮುಂದುವರೆದರು (ಲೂಕ 3:15), ಹೀಗಾಗಿ ಅನೇಕರ ಪಾಲಿಗೆ ಅನುಗುಣವಾದ ನಿರೀಕ್ಷೆ ಮತ್ತು ಚಲನವಲನ ಇತ್ತು. ನಂತರದಲ್ಲಿ ಈ ದೇಶದಲ್ಲಿ ಸಹೋದರರಾದ ವಿಲಿಯಂ ಮಿಲ್ಲರ್, ಮತ್ತು ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಮಿಸ್ಟರ್ ವೂಲ್ಫ್ (Mr. Wolff) ಮತ್ತು ಇತರರ ನೇತೃತದಲ್ಲಿದ್ದ ಅವರನ್ನು 'ಅಡ್ವೆಂಟಿಸ್ಟ್' (Adventist) ಎಂದು ಕರೆಯಲಾಯಿತು. ಇದು 1874ಕ್ಕಿಂತ ಕೇವಲ ಮೂವತ್ತು ವರ್ಷಗಳ ಮುಂಚೆ ಜೂಬಿಲಿ ಬೋಧನೆಗಳಲ್ಲಿ ಕಂಡುಬರುವಂತೆ ಮದಲಿಂಗ ಮತ್ತು ಕೊಯ್ಲುಗಾರನಾದ ಕ್ರಿಸ್ತನು 1874ರಲ್ಲಿ ನಿಜವಾಗಿಯೂ ಆಗಮಿಸಿದಾಗ ಉನ್ನತ ಸ್ಥಿತಿಗೇರಿತು. ಇಲ್ಲಿ ನಾವು ಈ ಯುಗಗಳ ನಡುವೆ ಮತ್ತೊಂದು ಎದ್ದು ಕಾಣುವಂತ ಸಮುಯ-ಸಮಾನಾಂತರವನ್ನು ನೋಡುತ್ತೇವೆ. ಯಾವುದೆಂದರೆ, ಕಂದನಾದ ಕ್ರಿಸ್ತನ ಜನನದ ಮೂವತ್ತು ವರ್ಷಗಳ ನಂತರದಲ್ಲಿ ಅಭಿಷಕ್ತನಾದ ಮೆಸ್ಸೀಯನು – ದೀಕ್ಷಾಸ್ನಾನ ಹೊಂದಿದ ನಂತರ ಮದಲಿಂಗನು, ಕೊಯ್ಲುಗಾರನು ಎಂದು ತನ್ನನ್ನು ಪರಿಚಯಿಸಿಕೊಂಡನು (ಮತ್ತಾಯ 3:11 ಯೋಹಾನ 3:29).

ಈ ಎರಡೂ ಪ್ರಕರಣದಲ್ಲಿಯೂ ನಿರಾಶೆ ಮತ್ತು ಮೂವತ್ತು ವರ್ಷಗಳ ಕಾಯುವ ಸಮಯ ಇತ್ತು. ಆ ಸಮಯದಲ್ಲಿ ಎಲ್ಲರೂ ನಿದ್ರಿಸುವವರಾದರು. ಪ್ರತಿ ಪ್ರಕರಣದಲ್ಲಿಯೂ ಕೆಲವರು ಮಾತ್ರವೇ ಸರಿಯಾದ ಸಮಯಕ್ಕೆ ಕರ್ತನ ಪ್ರಸನ್ನತೆಯನ್ನು ಗ್ರಹಿಸುವಂತೆ ಎಚ್ಚತ್ತಿದ್ದರು. ಎರಡೂ ಮನೆತನದವರ ನಾಮಾಂಕಿತ ಸಮೂಹದವರು ಭೇಟಿಯನ್ನು ಗ್ರಹಿಸಲು ವಿಫಲರಾದರು. ಯಾಕೆಂದರೆ ಅವರುಗಳು ವಿಪರೀತವಾಗಿ ಪ್ರಪಂಚದ ಚಿಂತೆಗಳ ಭಾರ ಹೊತ್ತವರೂ (ಲೂಕ 21:34) , ಉತ್ಸಾಹವಿಲ್ಲದವರೂ ದೇವರ ಆಜ್ಞೆಯನ್ನು ಗಮನಿಸಿ ಆ ಬಗ್ಗೆ ಜಾಗರೂಕತೆ ವಹಿಸುವುದನ್ನು ನಿರ್ಲಕ್ಷಿಸುವವ ರಾಗಿದ್ದರು. ಈ ರೀತಿಯಲ್ಲಿ "ಇಸ್ರಾಯೇಲಿನ ಎರಡು ಮನೆತನಕ್ಕೆ ಎಡವುವ ಕಲ್ಲೂ ಮುಗ್ಗರಿಸುವ ಬಂಡೆಯೂ ಯೆರೂಸಲೇಮಿನ ನಿವಾಸಿಗಳಿಗೆ ಬಲೆಯೂ ಬೋನೂ ಆಗುವುವು" (ಯೆಶಾಯ 8:14) ಎಂಬ ಯೆಶಾಯನ ಪ್ರವಾದನಾ ವಾಕ್ಯವು ನೆರವೇರಿತು. ಶಾರೀರಿಕ ಮನೆತನವು ಮುಗ್ಗರಿಸಿತು. ಯಾಕೆಂದರೆ, ಅವರು ಸಂಪ್ರದಾಯಗಳಿಗೆ ಗಮನಕೊಟ್ಟು ದೇವರ ನ್ಯಾಯುವಿಧಿಗಳನ್ನು ನಿರರ್ಥಕಗೊಳಿಸಿದ್ದರು (ಮಾರ್ಕ 7:9,13). ಹೀಗಾಗಿ ಅವರಿಗೆ ಪ್ರಥಮ ಆಗಮನದ ರೀತಿ ಮತ್ತು ಉದ್ದೇಶಗಳ ಯೋಗ್ಯವಾದ ವಿಚಾರಗಳು ದೊರೆಯದಾಯಿತು. ಈ ಕಾರಣದಿಂದಾಗಿ, ಅವರು ಆತನನ್ನು ಆತನು ಬಂದ ರೀತಿಯಲ್ಲಿ ಅಂಗೀಕರಿಸಲಾಗಲಿಲ್ಲ. ಹೀಗಾಗಿ ಅವರುಗಳು

ಆತನ ವಿಷಯದಲ್ಲಿ ಆತನ ಸಮರ್ಪಣೆಯ ವಿಷಯದಲ್ಲಿ ಮುಗ್ಗರಿಸುವವರಾದರು. ಹೆಸರು ಮಾತ್ರದ (ನಾಮಾಂಕಿತ) ಆತ್ಮೀಕ ಇಸ್ರಾಯೇಲ್ಯರ ಸಮೂಹವು ಈಗ ಅದೇ ಬಂಡೆಯ ಮೇಲೆ, ಅದೇ ಕಾರಣಕ್ಕಾಗಿ ಮುಗ್ಗರಿಸುತ್ತಿದೆ. ಮಾನವರ ಸಂಪ್ರದಾಯಗಳಿಂದ ಕುರುಡರಾಗಿ ಮತ್ತು ದೇವರ ವಾಕ್ಯದಿಂದ ದೊರೆಯುವ ಜ್ಞಾನೋದಯಕ್ಕೆ ಅಡ್ಡಿಯಾಗಿರುವ ಭಿನ್ನಪಂಥೀಯ ಹಗೆಗಳಿಂದ ಅವರಿಗೆ ಕರ್ತನ ಎರಡನೆಯ ಬರೋಣದ ರೀತಿ ಮತ್ತು ಉದ್ದೇಶಗಳ ಬಗ್ಗೆ ಸರಿಯಾದ ಕಲ್ಪನೆ ಇಲ್ಲವಾಗಿದೆ. ಇಲ್ಲಿ ಸಹ ಕ್ರೂಜೆ, ಈಡುಬಲಿಯ ವಿಚಾರ ಇವುಗಳು ಎಲ್ಲರಿಗೂ ಪರೀಕ್ಷೆಯಾಗುತ್ತಿದೆ. ಬಂಡೆಯು ಇರದಿದ್ದರೆ ಮನೆತನವು ಎಡಹುವುದಿಲ್ಲ ಅಥವಾ ಬೀಳುವುದಿಲ್ಲ ಎಂಬುದನ್ನು ಎಚ್ಚರಿಕೆಯಿಂದ ಗಮನಿಸುವುದು ಯೋಗ್ಯವಾಗಿದೆ. ಬಂಡೆಯು ಈಗ ಪ್ರಸ್ತುತವಾಗಿದೆ, ಹೆಸರು ಮಾತ್ರದ ಪದ್ಧತಿಗಳು ಎಡವುತ್ತಿವೆ, ಬಿದ್ದು ಚೂರುಚೂರಾಗುತ್ತಿವೆ; ಈಗ ಈ ವೇಳೆಯಲ್ಲಿ ಪ್ರಥಮ ಆಗಮನದಲ್ಲಿದ್ದಂತೆ ನಿಜವಾದ ಇಸ್ರಾಯೇಲ್ಯರು ವೈಯಕ್ತಿಕವಾಗಿ ಬಂಡೆಯನ್ನು ಗ್ರಹಿಸುತ್ತಿದ್ದಾರೆ ಮತ್ತು ಒಪ್ಪಿಕೊಳ್ಳುತ್ತಿದ್ದಾರೆ. ಮತ್ತು ಈ ಸತ್ಯದ ಮೇಲೆ ಹತ್ತಿದವರಾಗಿ ಎಡವುದರಿಂದ, ಕ್ರೈಸ್ತ ಸಮಾಜವನ್ನು ತಿರಸ್ಕರಿಸಿ, ಆತ್ಮೀಕವಾಗಿ ಸಾಕಷ್ಟು ಮೇಲಕ್ಕೆ ಎತ್ತಲ್ಪಡುತ್ತಿದ್ದಾರೆ.

ಯಾರಿಗೆ ತಿಳುವಳಿಕೆಯ ಜ್ಞಾನೋದಯದ ಕಣ್ಣುಗಳು ಇವೆಯೋ ಅಂಥವರು ಮುಗ್ಗರಿಸುವುದಿಲ್ಲ; ಆದರೆ ಅವರು ಬಂಡೆಯನ್ನು ಹತ್ತುವಾಗ, ಅದರ ಎತ್ತರದ ದೃಷ್ಟಿಕೋನದಲ್ಲಿ ಅವರು ದೇವರ ಯೋಜನೆಯ ಹಿಂದಿನವುಗಳನ್ನೂ, ಮುಂದಿನವುಗಳನ್ನೂ ಬಹಳ ಸ್ಪಷ್ಟವಾಗಿ ನೋಡುತ್ತಾರೆ, ಸಭೆಗೆ ಮಹಿಮೆ ತರುವುದಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಮತ್ತು ಭೂಲೋಕದ ವೈಭವ ದಿನದ ಬಗ್ಗೆ ಹೇಳಲು ಸಾಧ್ಯವಿಲ್ಲ. ಯಾರು ದೇವರಲ್ಲಿ ನಂಬಿಕೆಯನ್ನಿಡುತ್ತಾರೋ ಅವರುಗಳು ಎಂದಿಗೂ ಗೊಂದಲಕ್ಕೊಳಗಾಗುವುದಿಲ್ಲ.

ಜೂಬಿಲಿ ಕಾಲಚಕ್ರಗಳು ಮತ್ತು ಅನ್ಯಜನಗಳ ಕಾಲಗಳು ಈ ಯೆಹೂದ್ಯ ಸಮಾನಾಂತರಗಳಿಗೆ ಸರಿಯಾದ ರೀತಿಯಲ್ಲಿ ಅನುಗುಣವಾಗಿದೆ ಎಂಬುದನ್ನು ಗುರುತಿಸದೇ ಹೋದರೆ ಈ ಸಮಾನಾಂತರದ ಪೂರ್ಣ ಸತ್ಯವು ದೊರೆಯುವುದಿಲ್ಲ. ಯೆಹೂದ್ಯ ಮತ್ತು ಕ್ರೈಸ್ತ ಯುಗಗಳ ಸಂಕೇತ ಮತ್ತು ಪ್ರತಿ ಸಂಕೇತವೆಂಬುದು ಕಲ್ಪನೆಯಲ್ಲ – ಅಪೋಸ್ತಲರೂ ಮತ್ತು ಪ್ರವಾದಿಗಳೂ ಅದರ ಅನುರೂಪತೆಗೆ ಸಾಕ್ಷಿಹೇಳಿದ್ದಾರೆ. ನಾವು ಈಗ ಪ್ರಗತಿಯಲ್ಲಿರುವ ಕ್ರೈಸ್ತಯುಗದ ಸುಗ್ಗಿ ಕಾರ್ಯದ ಸಮಾನಾಂತರಗಳ ರುಜುವಾತುಗಳ ಮೇಲೆ ಆತುಕೊಳ್ಳುವುದೂ ಅಲ್ಲ; ಈ ಸುಗ್ಗಿಯು ಈಗಾಗಲೇ ತೋರಿಬಂದಂತೆ, ಅದರ ಪ್ರಾರಂಭ ಮತ್ತು ಅಂತ್ಯ ಎರಡೂ ಬೇರೆ ರೀತಿಯಲ್ಲಿ ಗುರುತಿಸಲ್ಪಟ್ಟಿದೆ. ಜೂಬಿಲಿ ಚಕ್ರಗಳು ಯೇಸುವಿನ ಪ್ರತ್ಯಕ್ಷತೆಯ ಮತ್ತು ಪುನರ್ವಶದ ಕಾರ್ಯವನ್ನು 1874ರ ಶರತ್ಕಾಲದಲ್ಲಿ ಪ್ರಾರಂಭಿಸುವ ಉಚಿತ ಸಮಯವಾಗಿದೆ ಎಂಬುದನ್ನು ರುಜುವಾತುಪಡಿಸುತ್ತದೆ ಮತ್ತು ಮೇಲೆ ಉಲ್ಲೇಖಿಸಿದ ಸಮಾನಾಂತರಗಳ ಆ ದಿನವು ಯೆಹೂದಿ ಸುಗ್ಗಿಯ ಆರಂಭದಲ್ಲಿ, ಪ್ರಥಮ ಆಗಮನದಲ್ಲಿನ ಯೇಸುವಿನ ಅಭಿಷೇಕದ ದಿನಕ್ಕೆ ಸರಿಯಾಗಿ ಅನುಗುಣವಾಗಿದೆ ಎಂಬುದನ್ನು ತೋರಿಸುತ್ತದೆ. ಅನ್ಯಜನರ ಕಾಲಗಳು ಪ್ರಸ್ತುತ ಸರ್ಕಾರಗಳು 1915ರ (ಬರಹಗಾರನ ಮುನ್ನುಡಿಯಲ್ಲಿ ನೋಡಿ (1916)) ಅಕ್ಟೋಬರ್ ತಿಂಗಳಲ್ಲಿ ಉರುಳಲು ಪ್ರಾರಂಭವಾಗಬೇಕಾಗಿದೆ ಎಂಬುದನ್ನು ರುಜುವಾತುಪಡಿಸುತ್ತದೆ; ಮೇಲೆ ಈ ಸಮಾನಾಂತರ ಅವಧಿಯು ಸರಿಯಾಗಿ 70ನೇ ವರ್ಷಕ್ಕೆ ಹೊಂದಿಕೆಯಾಗಿದೆ ಎಂಬುದನ್ನು ತೋರಿಸುತ್ತದೆ. ಇದು ಯೆಹೂದ್ಯ ರಾಜ್ಯಾಡಳಿತದ ಉರುಳುವಿಕೆಯ ಪ್ರಾರಂಭಕ್ಕೆ ಸಾಕ್ಷಿಯಾಗಿದೆ. ಆಗ, ಮತ್ತು ಎಲ್ಲರ ದೃಷ್ಟಿಕೋನದಲ್ಲಿ ಸಮಂಜಸವಾದ ಪ್ರಶ್ನೆ ಏನೆಂದರೆ "ಈ ಎಲ್ಲಾ ಸಮಯ ಹೊಂದಾಣಿಕೆಗಳು ಕೇವಲ ಆಕಸ್ಮಿಕವೋ? ಅಥವಾ ಅವುಗಳು ನಾವು ನೋಡಿದಂತೆ ಶಾರೀರಿಕ ಮನೆತನದ ಇತರೆ ವ್ಯವಹಾರಗಳನ್ನು ಈ ದೈವನಿರ್ವಹಣೆ ಸತ್ಯತೆಗಳ ಛಾಯೆಯಾಗುವಂತೆ ವ್ಯವಸ್ಥಿತಗೊಳಿಸಿದ ಅದೇ ದೈವಿಕ ಅಪ್ಪಣೆಗನುಸಾರವಾದುದೋ?" ಎಂಬುದು.

ಇಲ್ಲ, ಅವುಗಳು ಆಕಸ್ಮಿಕವಾದವುಗಳಲ್ಲ. ನಿಸ್ಸಂದೇಹವಾಗಿ ನಮಗೆ ಕಾಲಗಣನೆಯಲ್ಲಿ ಜ್ಞಾನಿಯಾದ ದೇವರು ಕಲಿಸಿಕೊಟ್ಟಂತೆ ಆದಾಮನ ಸೃಷ್ಟಿಯಿಂದ ಆರುಸಾವಿರ ವರ್ಷದಲ್ಲಿ ಅಂದರೆ 1872ರಲ್ಲಿ ಅಂತ್ಯಗೊಂಡದ್ದೇ ಆಗಿದೆ ಮತ್ತು ಅಲ್ಲಿ ಏಳನೆಯ ಸಹಸ್ರಮಾನವು ಪ್ರಾರಂಭವಾಗುತ್ತದೆ. ಅವರು ಜೂಬಿಲಿ ಚಕ್ರಗಳ ಮೂಲಕ ಕರ್ತನು ಪ್ರಸನ್ನಗೊಳ್ಳುತ್ತಾನೆ ಮತ್ತು ಪುನಃವಶದ ಸಮಯವು 1874ರ ಶರತ್ಕಾಲದಲ್ಲಿ ಪ್ರಾರಂಭವಾಗುತ್ತದೆ ಎಂಬುದನ್ನು ನಮಗೆ ಕಲಿಸಿಕೊಟ್ಟಿದ್ದಾರೆ. ಮತ್ತು ಅವರುಗಳು ಅನ್ಯಜನಗಳ ಮೂಲಕ ಈ ಸಂಗತಿಗಳು ತ್ವರೆಯಾಗಿ ಆಗುವುದೆಂದು ನಾವು ನಿರೀಕ್ಷಿಸಬಾರದೆಂದೂ ತಿಳಿಸಿಕೊಟ್ಟಿದ್ದಾರೆ. ಆದರೆ ತೋರಿಕೆಯಾಗಿ ಸ್ವಾಭಾವಿಕ ಸಂಗತಿಗಳ ಮೂಲಕ ನಾಲ್ವತ್ತು ವರ್ಷಗಳಲ್ಲಿ ಸಮಾನಾಂತರ ದೈವೇಚ್ಛೆಗಳಲ್ಲಿ ಇಸ್ರಾಯೇಲ್ಯರ ದ್ವಿಗುಣದಲ್ಲಿ ಗುರುತಿಸಲ್ಪಟ್ಟಿದೆ ಎಂಬುದನ್ನು ನಮಗೆ ಕರ್ತನ ಪ್ರಸನ್ನತೆಯನ್ನು, ಸುಗ್ಗಿ ಮತ್ತು ಶಾರೀರಿಕ ಇಸ್ರಾಯೇಲ್ಯರಿಗೆ ಕೃಪೆಯಿಂದ ಪ್ರಾರಂಭವಾಗುವ ಪುನಃವಶದ ಸಂಗತಿಗಳನ್ನು ಬೋಧಿಸುವುದಲ್ಲದೆ, ಅದೇ ಸಮಯದಲ್ಲಿ ಇತರೆ ಪ್ರವಾದನೀಯ ಸಾಕ್ಷಿಗಳ ಸತ್ಯತೆಯನ್ನು ಮತ್ತು ಕಾಲಗಣನೆಯನ್ನು

ರುಜುವಾತುಗೊಳಿಸುತ್ತದೆ. ಸುಸ್ಪಷ್ಟವಾಗಿ ಕಂಡು ಬರುವುದೆಂದರೆ, ಕಾಲಗಣನೆಯನ್ನು ಅಥವಾ ಯಾವುದಾದರೂ ಈ ಕಾಲಾವಧಿಗಳು ಒಂದು ವರ್ಷ ಹೊರತುಪಡಿಸಿ ಬದಲಾಯಿಸುವುದಾದರೆ ಈ ಸಮಾನಾಂತರಿಕೆಯ ಸೌಂದರ್ಯ ಮತ್ತು ಸತ್ಯವು ನಾಶವಾಗುತ್ತದೆ. ಉದಾಹರಣೆಗೆ, ಕಾಲಗಣನೆಯನ್ನು ಒಂದು ವರ್ಷ ಬಿಟ್ಟು ಬದಲಾಯಿಸುವುದಾದರೆ, ಹೆಚ್ಚು ಕಡಿಮೆ ಒಂದು ವರ್ಷವನ್ನು ಕೂಡಿಸುವುದಾದರೆ, (ಅರಸರು ಅಥವಾ ನ್ಯಾಯಸ್ಥಾಪಕರ ಕಾಲ ಎಂದು ಅದನ್ನು ಹೇಳಬಹುದು) ಅಥವಾ ಅದನ್ನು ಒಂದು ವರ್ಷ ಕಡಿಮೆಗೊಳಿಸಿದರೆ, ಅದು ಸಮಾನಾಂತರಿಕೆಯನ್ನು ಹಾಳುಮಾಡುತ್ತದೆ. ನಾವು ಒಂದು ವರ್ಷ ಕೂಡಿಸಿದರೆ ಅದು ಮೊದಲಿಗೆ ಇಸ್ರಾಯೇಲ್ಯರ ಮೊದಲ' ಅವಧಿಯನ್ನು 1846 ವರ್ಷಗಳಷ್ಟು ಉದ್ದವನ್ನಾಗಿ ಮಾಡುತ್ತದೆ, ಅದರ ದ್ವಿಗುಣ ಅಥವಾ ಅದರ ಮತ್ತೊಂದು ಅರ್ಧ ಭಾಗವು ಒಂದು ವರ್ಷ ನಂತರಕ್ಕೆ ಎಸೆಯಲ್ಪಡುತ್ತದೆ. ಅದೇ ಸಮಯದಲ್ಲಿ ವ್ಯತಿರಿಕ್ತವಾಗಿ, ಕಾಲಗಣನೆಯ ಅಂಥಾಃ ಬದಲಾವಣೆಯಿಂದ ಜೂಬಿಲಿ ಚಕ್ರಗಳು ಒಂದು ವರ್ಷ ಹಿಂದಕ್ಕೆ ಅಂದರೆ 1873ಕ್ಕೆ ಎಸೆಯಲ್ಪಡುತ್ತದೆ. ಮತ್ತು ಅದು 1871ರಲ್ಲಿ 6000 ವರ್ಷಗಳು ಮುಗಿಯುವಂತೆ ಮಾಡುತ್ತದೆ. ಅದೇ ಸಮಯದಲ್ಲಿ ಅನ್ಯಜನಗಳ ಕಾಲಕ್ಕೆ ಯಾವ ಪರಿಣಾಮವೂ ಉಂಟಾಗುವುದೇ ಇಲ್ಲ. ಸಾಮರಸ್ಯ ಅಥವಾ ಸಮಾನಾಂತರಿಕೆಯು ಈ ರೀತಿಯಲ್ಲಿ ಶೋಚನೀಯವಾಗಿ ಸೋತುಹೋಗುತ್ತದೆ ಎಂಬುದನ್ನು ಎಲ್ಲರೂ ನೋಡಬಹುದು. ಅಥವಾ ಒಂದು ವರ್ಷವನ್ನು ಕಾಲಗಣನೆಯ ಎಣಿಕೆಯಲ್ಲಿ ಕಡಿತಗೊಳಿಸುವುದಾದರೆ ಗೊಂದಲವು ಅಷ್ಟೇ ದೊಡ್ಡದಾಗಿರುತ್ತದೆ. ಅನೇಕ ಅವಧಿಗಳ ಬದಲಾವಣೆಗಳು ವಿರುದ್ಧ ದಿಕ್ಕಿನಲ್ಲಿರುತ್ತವೆ. ಹೀಗಾಗಿ ಈ ವಿವಿಧ ಸಮಯ ಪ್ರವಾದನೆಗಳು ಪರಸ್ಪರ ಸಮರ್ಥಿಸಿಕೊಳ್ಳುತ್ತವೆ, ಅದೇ ಸಮಯದಲ್ಲಿ ಎರಡೂ ದೈವೇಚ್ಛೆಗಳ (ಯುಗಗಳ) ಸಮಾನಾಂತರಿಕೆಗಳು ಅವುಗಳ ಸಾಕ್ಷ್ಯವನ್ನು ಧೃಢಪಡಿಸಿಕೊಳ್ಳುತ್ತವೆ.

ಲೆಕ್ಕಾಚಾರದ ಪರಿಚಯವಿರುವವರೆಲ್ಲರೂ ಸಾಮಾನ್ಯವಾಗಿ ಎರಡನೆಯ ಆಗಮನವಾದಿಗಳಿಂದ ಮಾಡಲ್ಪಟ್ಟಿರುವ ಮತ್ತು ಇತರರು, ಪ್ರವಾದಿಗಳ ಅವಧಿಗಳು ಮುಂತಾದವುಗಳಿಗೆ ಸಂಬಂಧಪಟ್ಟಂತೆ ಈ ವ್ಯವಹಾರದ ಪದ್ಧತಿಯು ಅವರುಗಳದಕ್ಕಿಂತ ಭಿನ್ನವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಅವರುಗಳು ಸಾಮಾನ್ಯವಾಗಿ ಎಲ್ಲಾ ಪ್ರವಾದನೆಗಳು ಯಾವುದಾದರೂ ಒಂದು ದಿನಾಂಕದಲ್ಲಿ ಮುಗಿಯುತ್ತವೆ ಎಂದು ತಿಳಿಸುವ ಪ್ರಯತ್ನವನ್ನು ಮಾಡುತ್ತಾರೆ. ಈ ರೀತಿಯ ಅವರ ತಪ್ಪಾದ ನಿರೀಕ್ಷೆಗಳು ಅವರನ್ನು ಇದಕ್ಕೆ ನಡೆಸುತ್ತವೆ. ಸಾವಿರ ವರ್ಷಗಳನ್ನು ಆಕ್ರಮಿಸುವ ಕರ್ತನ ಆಗಮನ, ಪುನರುತ್ಥಾನ ಮತ್ತು ಲೋಕದ ಅಂತಿಮ ತೀರ್ಪು ಮುಂತಾದ ಸಮಗ್ರ ಕಾರ್ಯಕ್ರಮಗಳು ಕೆಲವೇ ಕ್ಷಣಗಳಲ್ಲಿ ನೆರವೇರುತ್ತವೆ ಎಂದು ಎದುರು ನೋಡುತ್ತಾರೆ ಮತ್ತು ಅವರ ನಿರೀಕ್ಷೆಯ ಅಂತ್ಯದಲ್ಲಿ ಈ ಲೋಕವು ಕೆಲವೇ ಕ್ಷಣಗಳಲ್ಲಿ ಅಗ್ನಿಯಿಂದ ನಾಶವಾಗುವುದೆಂದು ಅವರು ಭಾವಿಸುತ್ತಾರೆ. ವಿವಿಧ ಹಂತಗಳ ವಿವಿಧ ದಿನಾಂಕಗಳನ್ನು ಸೂಚಿಸುವ ಪ್ರವಾದನೆಗಳನ್ನು ಮೆಚ್ಚಿಕೊಳ್ಳುವುದು ಮತ್ತು ಅವುಗಳನ್ನು ಅಂಗೀಕರಿಸುವುದಕ್ಕೆ ಮೊದಲು 'ಯುಗಗಳ ಯೋಜನೆ'ಗಳನ್ನು ಮತ್ತು ಕರ್ತನ ಎರಡನೆಯ ಆಗಮನದ ಸರಿಯಾದ ರೀತಿಯನ್ನು ಮೊದಲು ಅರ್ಥಮಾಡಿಕೊಳ್ಳುವ ಅಗತ್ಯ ಅವರಿಗಿದೆ. ಆದರೆ ಹೆಚ್ಚಿನವರು ತಮ್ಮದೇ ಆದ ಸಿದ್ಧಾಂತಗಳಿಂದ ಮತ್ತು ಪೂರ್ವಕಲ್ಪಿತ ಅಭಿಪ್ರಾಯಗಳಿಂದ ಇದನ್ನು ಮಾಡುವ ಬಹಳಷ್ಟು ಅಂಧರಾಗಿದ್ದಾರೆ. ಅವರ ತಪ್ಪು ನಿರೀಕ್ಷೆಗಳಿಗೆ ಎಲ್ಲಾ ಪ್ರವಾದನೆಗಳೂ ಯಾವುದಾದರೂ ಒಂದು ದಿನದಲ್ಲಿ ಮುಗಿಯುತ್ತದೆ ಎಂಬುದನ್ನು ತಿಳಿಸುವ ಅವರ ಸಾಹಸದಲ್ಲಿ ಈ ಪ್ರವಾದನೆಗಳನ್ನು ಅನ್ವಯಿಸುವ ಅವರ ಪ್ರಯತ್ನಗಳು ಪ್ರಕರಣದ ಅಗತ್ಯಗಳಿಗನುಸಾರವಾಗಿ ಹಲವೊಮ್ಮೆ ತಿರುವುಗಳಿಗೆ, ಹಿಗ್ಗುವಿಕೆಗಳಿಗೆ ಅಥವಾ ದೂರಸರಿಯುವಿಕೆಗೆ ಎಡೆಮಾಡಿಕೊಡುತ್ತವೆ. ಈ ಸ್ನೇಹಿತರು ತಮ್ಮ ತಪ್ಪಿಗೆ ಈ ದೆಸೆಯಲ್ಲಿ ಎಚ್ಚತ್ತುಕೊಳ್ಳಬೇಕು; ಯಾಕೆಂದರೆ ಅವರ ನಿರೀಕ್ಷೆಗಳು ಒಂದರ ನಂತರ ಒಂದು ವಿಫಲವಾಗುತ್ತವೆ. ಅದೇ ಸಮಯದಲ್ಲಿ ಅವರು ಉಪಯೋಗಿಸಿದ ಕೆಲವೊಂದು ಪ್ರವಾದನೆಗಳನ್ನು ಹಿಂದಿನ ಕಾಲಗಳಿಗೆ ಸೇರಿದವುಗಳು ಅದನ್ನು ಈಗ ಮುಂದೂಡಲು ಸಾಧ್ಯವಿಲ್ಲ ಎಂಬುದನ್ನು ನಾವು ಮತ್ತು ಅವರು ತಿಳಿದಿದ್ದೇವೆ, ಹಿಂದಿನವುಗಳನ್ನು ಅವರು ಈಗ ತೊರೆದುಬಿಟ್ಟಿದ್ದಾರೆ. ಅವುಗಳು ನೆರವೇರಲ್ಪಟ್ಟಿವೆ, ಆದರೆ ಅವರು ನಿರೀಕ್ಷಿಸಿದಕ್ಕಿಂತ ಬೇರೆ ರೀತಿಯಲ್ಲಿ, ಆದರೆ ಇದು ಅವರಿಗೆ ತಿಳಿದಿರುವುದಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ, ಇಲ್ಲಿ ಪ್ರಸ್ತುತಿಪಡಿಸಿರುವ ಪ್ರವಾದನೆಗಳು ಮತ್ತು ಇನ್ನೂ ಪರಿಗಣಿಸಬೇಕಾದವುಗಳು ನಿರ್ಬಂಧವಿಲ್ಲದವುಗಳು, ಯಾವುದೇ ತಿರುವುಗಳೂ, ಹಿಗ್ಗುವಿಕೆಗಳೂ ಇಲ್ಲದವುಗಳಾಗಿವೆ, "ದೇವರ ಯುಗಗಳ ಯೋಜನೆ"ಯ "Plan of the Ages" ಬಗ್ಗೆ ಸರಿಯಾದ ನಿರೀಕ್ಷೆಯುಳ್ಳವರಾಗಿ ನಾವು ದೇವರ ವಾಕ್ಯದಲ್ಲಿರುವಂತೆ ಅವನ್ನು ಸರಳವಾಗಿ ಪ್ರಸ್ತುತಿಪಡಿಸುತ್ತೇವೆ. ಇದನ್ನು ಸ್ಪಷ್ಟವಾಗಿ ನೋಡುವುದರಿಂದ, ಯಾವ ರೀತಿಯಲ್ಲಿ ಪ್ರವಾದನೀಯ ಸರಪಣಿಗಳು ಅವಕ್ಕೆ ಹೊಂದಿಕೊಳ್ಳುತ್ತವೆ ಮತ್ತು ಅವನ್ನು ಅಳತೆಮಾಡುತ್ತವೆ ಎಂಬುದನ್ನು ಗಮನಿಸುವುದು ಸುಲಭ. ಒಬ್ಬರು ಒಂದು ಮುಖ್ಯವಾದ ಅಂಶದಲ್ಲಿ, ಮತ್ತೊಬ್ಬರು ಮತ್ತೊಂದರಲ್ಲಿ ಅದನ್ನು ಗುರುತಿಸುತ್ತಾರೆ. ಅಂಥವರು ಇಷ್ಟನ್ನು ನೋಡುವಾಗ,

# “ಇಸ್ರಾಯೇಲಿನ ಎರಡೂ ಮನೆತನಗಳು”

## ಮೋಶೆ ಮತ್ತು ಕ್ರೈಸ್ತ ಯುಗ ಹಂಚಿಕೆಗಳ ಸಂಬಂಧಿತ ಸರಿಹೊಂದುವಿಕೆ

**"BOTH THE HOUSES OF ISRAEL" correspondencies of THE MOSAIC AND CHRISTIAN DISPENSATIONS**

ಯಾಕೋಬನ ಮರಣದಿಂದ ಕ್ರೂಜೆಯವರೆಗೆ ಹೆಸರಿಗೆ ಮಾತ್ರದ ಸೇವಕರ ಮನೆತನದವರವರೆಗಿನ ಅವಧಿ 1845 ವರ್ಷಗಳು
ನಂತರ ಕೆಲವು ನಂಬಿಗಸ್ತರ ಉನ್ನತಿ ಹಾಗೂ ತಳ್ಳಿಹಾಕುವುದು, ಇತರರ ಮೇಲೆ ಸಂಕಟಗಳು ಮತ್ತು ನ್ಯಾಯತೀರ್ಪು

| ಶಾರೀರಿಕ ಇಸ್ರಾಯೇಲ್ಯರು | ಆತ್ಮೀಕ ಇಸ್ರಾಯೇಲ್ಯರು |
|---|---|
| ಸೇವಕರ ಒಂದು ಮನೆ<br>1 ಕೊರಿಂಥ 10:18; ರೋಮಾ. 9:7,8; 4:16; ಇಬ್ರಿಯ 3:5 | ಪುತ್ರರ ಒಂದು ಮನೆ<br>ಗಲಾತ್ಯ 4:5–7,30,31; 6:15,16;<br>ಯೋಹಾನ 1;12; ರೋಮಾ. 8:15 |
| ಯಾಕೋಬನ ಹನ್ನೆರಡು ಮಕ್ಕಳೊಡನೆ ಸ್ಥಾಪಿತವಾದುದು<br>1 ಅರಸು 18:31 | ಯೇಸುವಿನ 12 ಮಂದಿ ಅಪೋಸ್ತಲರ ಮೂಲಕ ಸ್ಥಾಪಿತವಾದುದು<br>ಪ್ರಕಟನೆ 21:14 |
| ರಾಜ್ಯ ಮತ್ತು ಯಾಜಕತ್ವ, ಪರಿಶುದ್ಧ ದೇಶ<br>ವಿಮೋ. 19:6 | ರಾಜವಂಶ ಯಾಜಕತ್ವ, ಪವಿತ್ರ ದೇಶ<br>1 ಪೇತ್ರ 2:5,9 |
| ಶಾರೀರಿಕ ಮಹಾ ಯಾಜಕನಾದ ಆರೋನ<br>ಇಬ್ರಿಯ 9:7 | ಆತ್ಮೀಕ ಮಹಾಯಾಜಕನಾದ ಯೇಸು<br>ಇಬ್ರಿಯ 9:11 |
| ದೇಹದ ಸುನ್ನತಿ<br>ರೋಮಾ. 2:28,29 | ಹೃದಯದ ಸುನ್ನತಿ<br>ರೋಮಾ. 2:28,29 |
| ಪಾಪ ಮತ್ತು ಮರಣದ ವಿಧಿನಿಯಮ<br>ರೋಮಾ. 8:2 | ಕ್ರಿಸ್ತ ಯೇಸುವಿನಲ್ಲಿ ಜೀವಾತ್ಮನ ನ್ಯಾಯವಿಧಿ<br>ರೋಮಾ. 8:2 |
| ಭೂಲೋಕದ ವಾಗ್ದಾನಗಳು<br>ಆದಿ. 13:14–17; ಅ.ಕೃ. 7:2–5 | ಮೇಲಾದ ಉತ್ತಮ ವಾಗ್ದಾನಗಳು<br>ಇಬ್ರಿಯ 9:23; 11:40 |
| ಅಕ್ಷರಶಃ ಬಾಬೇಲಿಗೆ ಸೆರೆ<br>2 ಪೂರ್ವ 36:20 | ಸಾಂಕೇತಿಕ (ಗೂಢಾರ್ಥ) ಬಾಬೇಲಿಗೆ ಸೆರೆ<br>ಪ್ರಕಟನೆ 17:5; 18:4 |
| ಕೃಪಾಕಾಲದ ವಿಸ್ತಾರ 1845 ವರ್ಷಗಳು<br>ಇಸ್ರಾಯೇಲ್ಯರನ್ನು ನಿರಾಕರಿಸಿದ್ದು ಹಾಗೂ<br>ಆತ್ಮೀಕ ಇಸ್ರಾಯೇಲ್ಯರ ಆರಂಭ ಕ್ರಿ.ಶ. 33 | ಕೃಪಾಕಾಲದ ವಿಸ್ತಾರ 1845 ವರ್ಷಗಳು, ಯೇಸುವಿನ ಮರಣದಿಂದ<br>ಮೊದಲುಗೊಂಡು ಕ್ರಿಸ್ತನ ಅಧಿಪತ್ಯ ಪ್ರಾರಂಭ ಮತ್ತು ಕ್ರಿ.ಶ. 1878ರಲ್ಲಿ<br>ಬಾಬೇಲಿನ ನಿರಾಕರಣೆ ಪ್ರಾರಂಭದವರೆಗೆ 1845 ವರ್ಷಗಳು |
| ಹೆಸರಿಗೆ ಮಾತ್ರದ ಪದ್ಧತಿಯು ಕ್ರಿ.ಶ. 33ರಲ್ಲಿ ಹೊರಹಾಕಲ್ಪಟ್ಟಿತು<br>ಮತ್ತಾಯ 23:38 | ಹೆಸರು ಮಾತ್ರದ (ನಾಮಾಂಕಿತ) ಪದ್ಧತಿಯು ಕ್ರಿ.ಶ 1878ರಲ್ಲಿ ಕಾರಲ್ಪಟ್ಟಿತು<br>ಪ್ರಕಟನೆ 3:16 |
| 37 ವರ್ಷಗಳ ಬಿದ್ದುಹೋದ ಕಾಲದಿಂದ ಕ್ರಿ.ಶ. 70ರವರೆಗೆ<br>40 ವರ್ಷಗಳ ಸುಗ್ಗಿಕಾಲದ ಅಂತ್ಯ<br>ಲೂಕ 10:2,16 | 37 ವರ್ಷಗಳ ಬಿದ್ದುಹೋದ ಕಾಲದಿಂದ ಕ್ರಿ.ಶ.1915ರವರೆಗೆ<br>40 ವರ್ಷಗಳ ಸುಗ್ಗಿಕಾಲದ ಅಂತ್ಯ<br>ಮತ್ತಾಯ 13:24–30, 36–43 |
| ಕೊಯ್ಲುಗಾರನಾಗಿ ದೇಹಧಾರಿಯಾದ ಕ್ರಿಸ್ತನ ಪ್ರಸನ್ನತೆ<br>ಯೋಹಾನ 4:35–38 | ಕೊಯ್ಲುಗಾರನಾಗಿ ಆತ್ಮಸ್ವರೂಪಿಯಾದ ಕ್ರಿಸ್ತನ ಪ್ರತ್ಯಕ್ಷತೆ<br>ಪ್ರಕಟನೆ 14:14,15 |
| ನಮ್ಮ ಕರ್ತನ ಪ್ರಸನ್ನತೆ ಮತ್ತು ಆತನ ಮರಣದಲ್ಲಿ<br>ಸಮರ್ಪಣಾ ಗುಣಲಕ್ಷಣ, ಎಡವುವ ಕಲ್ಲು | ನಮ್ಮ ಕರ್ತನ ಪ್ರಸನ್ನತೆ ಮತ್ತು ಆತನ ಮರಣದಲ್ಲಿ<br>ಸಮರ್ಪಣಾ ಗುಣಲಕ್ಷಣ, ಎಡವುವ ಕಲ್ಲು |

**ಇಸ್ರಾಯೇಲ್ಯರ ಎರಡೂ (ಹೆಸರು ಮಾತ್ರದ ಶಾರೀರಿಕ ಮತ್ತು ಆತ್ಮೀಕ ಮನೆತನಕ್ಕೆ) ಆತನು ಎಡುವುವ ಕಲ್ಲೂ ಮುಗ್ಗರಿಸುವ ಬಂಡೆಯೂ ಆಗುವನು (ಯೆಶಾಯ 8:14)**

### ಆತನ ದರ್ಶನದ ಸಮಯ ಅವರಿಗೆ ತಿಳಿದಿರಲಿಲ್ಲ

ಲೂಕ 19:44; ಮತ್ತಾಯ 24:38,39

**ನಮ್ಮ ಕರ್ತನು ಅವರಿಗೆ ಮೂರು ಪಾತ್ರದಲ್ಲಿ ಪ್ರಕಟಿಸಿಕೊಂಡನು – ಮದಲಿಂಗನು, ಕೊಯ್ಲುಗಾರನು ಮತ್ತು ಅರಸನು**

ಯೋಹಾನ 3:29; 4:35,38;ಮತ್ತಾಯ 21:5,9,4; 2ಕೊರಿಂಥ 11:2 ಪ್ರಕಟನೆ 14:14,15; 17:14

| | |
|---|---|
| ಕ್ರಿಸ್ತನ ಜನನದ ಸಮಯದಲ್ಲಿ ಮತ್ತು ಆತನು ಮೆಸ್ಸೀಯನಾಗಿ<br>ಅಭಿಷಿಕ್ತಗೊಳ್ಳುವ ಮತ್ತು ದೀಕ್ಷಾಸ್ನಾನದ 30 ವರ್ಷಗಳ<br>ಹಿಂದೆ ಒಂದು ಆಗಮನ ಚಳುವಳಿ<br>ಮತ್ತಾಯ 2:1–16; ಅ.ಕೃ. 10:37,38 | ಆತನ ಪ್ರಸನ್ನತೆಯ ನಿಜವಾದ ಸಮಯದ ಮೂವತ್ತು<br>ವರ್ಷಗಳ ಹಿಂದೆ ಸಭೆಯನ್ನು ಎಚ್ಚರಿಸಲು ಮತ್ತು ಸಭೆಯನ್ನು<br>ಪರೀಕ್ಷಿಸಲು ಒಂದು ಆಗಮನ ಚಳುವಳಿ 1844ರಲ್ಲಿ<br>ಮತ್ತಾಯ 25:1 |
| ಮದಲಿಂಗನಾಗಿ, ಕೊಯ್ಲುಗಾರನಾಗಿ ಕರ್ತನ ನಿಜವಾದ<br>ಪ್ರಸ್ತುತಿ ಕ್ರಿ.ಶ. 29ರ ಅಕ್ಟೋಬರ್. | ಕರ್ತನ ನಿಜವಾದ ಪ್ರಸ್ತುತಿ ಮದಲಿಂಗನಾಗಿ,<br>ಕೊಯ್ಲುಗಾರನಾಗಿ ಕ್ರಿ.ಶ. 1874ರ ಅಕ್ಟೋಬರ್. |
| ಅರಸನಾಗಿ ಅಧಿಕಾರ ಮತ್ತು ಬಿರುದನ್ನು<br>ಮೂರುವರೆ ವರ್ಷಗಳ ನಂತರ ಕ್ರಿ.ಶ. 33ರಲ್ಲಿ ವಹಿಸಿಕೊಂಡನು | ಅರಸನಾಗಿ ಅಧಿಕಾರ ಮತ್ತು ಬಿರುದನ್ನು<br>ಮೂರುವರೆ ವರ್ಷಗಳ ನಂತರ ಕ್ರಿಶ. 1878ರಲ್ಲಿ ವಹಿಸಿಕೊಂಡನು |

### ಅರಸನ ಮೊದಲನೆಯ ಕಾರ್ಯ – ನ್ಯಾಯ ತೀರ್ಪು

| | |
|---|---|
| ಹೆಸರು ಮಾತ್ರದ (ನಾಮಾಂಕಿತ) ಯೆಹೂದ್ಯ ಮನೆತನವು<br>ತಿರಸ್ಕಾರಗೊಂಡಿತು; ಅಕ್ಷರಶಃವಾದ ದೇವಾಲಯವು ಶುದ್ಧೀಕರಿಸಲ್ಪಟ್ಟಿತು<br>ಮತ್ತಾಯ 20:18; 21:5–15; 23:37; 24:2 | ಹೆಸರು ಮಾತ್ರದ (ನಾಮಾಂಕಿತ) ಕ್ರೈಸ್ತ ಮನೆತನವು<br>ತಿರಸ್ಕಾರಗೊಂಡಿತು; ಆತ್ಮೀಕ ದೇವಾಲಯವು ಶುದ್ಧೀಕರಿಸಲ್ಪಟ್ಟಿತು<br>1 ಪೇತ್ರ 4:17; ಪ್ರಕಟನೆ 3:16; ಮಲಾಕಿ 3:2 |
| ಸಮಗ್ರ ಯೆಹೂದ್ಯ ರಾಜ್ಯಾಡಳಿತದ ನಾಶವು<br>32 ವರ್ಷಗಳ ನಂತರ – ಅಥವಾ ಸುಗ್ಗಿಯ ನಾಲ್ವತ್ತು ವರ್ಷಗಳ<br>ನಂತರ ಕ್ರಿ.ಶ. 70ರಲ್ಲಿ ಪ್ರಾರಂಭವಾಯಿತು | ಸಮಗ್ರ ಹೆಸರುಮಾತ್ರ ಕ್ರೈಸ್ತ ರಾಜ್ಯದ ನಾಶನವು ಹೊರದೂಡಲ್ಪಟ್ಟ<br>37 ವರ್ಷಗಳ ನಂತರ – ಅಥವಾ ಸುಗ್ಗಿಯ ಪ್ರಾರಂಭದಿಂದ<br>ಕ್ರಿ. ಶ. 1915ರಲ್ಲಿ ಪ್ರಾರಂಭವಾಯಿತು 40 ವರ್ಷಗಳು |

ಕ್ರಿಸ್ತನ ಮರಣದಿಂದ ಕ್ರಿ.ಶ 1878ರವರೆಗೆ ಹೆಸರು ಮಾತ್ರದ ಮಕ್ಕಳ ಮನೆತನದವರಿಗೆ ಕೃಪಾಕಾಲದ ಅವಧಿಯು 1845 ವರ್ಷಗಳು, ನಂತರದಲ್ಲಿ
ಕೆಲವು ನಂಬಿಗಸ್ಥರನ್ನು ಉನ್ನತಿಗೇರಿಸುವುದು ಮತ್ತು ಹೊರಹಾಕುವಿಕೆ ಸಂಕಟಗಳು ಹಾಗೂ ಇತರರ ನ್ಯಾಯತೀರ್ಮಾನಗಳು

ಯೆಹೂದ್ಯ ಮತ್ತು ಕ್ರೈಸ್ತ ಸಮಾನಾಂತರಿಕೆಗಳು ನಿಸ್ಸಂದೇಹವಾಗಿ ಇತರೆ ಎಲ್ಲವುಗಳೂ ಸರಿಯಾದವುಗಳೆಂದು ಶ್ರುತಪಡಿಸುತ್ತವೆ.

ಪ್ರವಾದನೆಗಳಲ್ಲಿ ದೇವರ ಯೋಜನೆಯ ಸಮಯ ಅವಧಿಗಳ ಹೇಳಿಕೆಯು ಮನೆಯ ಬಗ್ಗೆ ಒಬ್ಬ ವಾಸ್ತುಶಿಲ್ಪಿಯ ವಿಶೇಷಣೆಗಳಿಗೆ ಸಮಾನ ರೂಪವಾಗಿದೆ. ಯೆಹೂದ್ಯ ಯುಗದ ಸಮಾನಾಂತರಗಳು ಆತನ ರೇಖಾಕೃತಿಯ ಬಾಹ್ಯ ರೇಖೆಗೆ ಅನುರೂಪವಾಗಿವೆ. ನಮ್ಮಲ್ಲಿ ಒಂದು ಮನೆಯ ವಾಸ್ತುಶಿಲ್ಪಿಯ ಯಾವುದೇ ರೇಖಾಚಿತ್ರಗಳಿಲ್ಲದೆ ವಿಶೇಷಣೆಗಳೂ ಮಾತ್ರವೇ ಇದೆ ಮತ್ತು ನಾವೇ ಕುಳಿತು ಆ ವಿಶೇಷಣೆಗಳಿಂದ ರೇಖಾಚಿತ್ರವನ್ನು ಮಾಡಬೇಕಾಗಿದೆ ಮತ್ತು ನಂತರದಲ್ಲಿ ವಾಸ್ತುಶಿಲ್ಪಿಯಿಂದ ಆ ನಿರೀಕ್ಷಿತ ಕಟ್ಟಡದ ಆತನ ರೇಖಾಕೃತಿಯ ಹೊರರೇಖೆಗಳನ್ನು ಪಡೆದುಕೊಳ್ಳುತ್ತೇವೆಂದು ಊಹಿಸೋಣ – ನಮ್ಮ ಸ್ವಂತ ರೂಪರೇಖೆಯೊಡನೆ ಹೋಲಿಸಿನೋಡುವಾಗ ಎಲ್ಲಾ ಮೂಲೆಗಳೂ ಮತ್ತು ಅಳತೆಗಳೂ ಒಂದೇ ರೀತಿಯಲ್ಲಿವೆ ಎಂದು ಕಂಡು ಬಂದರೆ ನಾವು ಆತನ ವಿಶೇಷಣೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇವೆ ಎಂಬ ಬಗ್ಗೆ ದುಪ್ಪಟ್ಟು ಭರವಸೆಯುಂಟಾಗುತ್ತದೆ. ಹೀಗಾಗಿ ಇಲ್ಲಿ ರೇಖಾಚಿತ್ರ, ನಮೂನೆ ಅಥವಾ ಸಂಕೇತವು ನಮಗೆ ಯೆಹೂದ್ಯರ ಯುಗದಲ್ಲಿ ಒದಗಿಸಲ್ಪಟ್ಟ ಸುವಾರ್ತಾ ಯುಗದ ಛಾಯೆ ಮತ್ತು ಪ್ರವಾದನೆಗಳು ಮತ್ತು ಪೂರ್ವಛಾಯೆಯನ್ನೊಳಗೊಂಡಿರುವ ಘಟನೆಗಳು ಸರಿಹೊಂದುವಂತವುಗಳಾಗಿದ್ದು, ನಮಗೆ ವಿಶೇಷಣೆಗಳ ಊಹೆಯನ್ನು "ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ" (2 ಕೊರಿಂಥ 5:7)" ಎಂಬ ಮಾತಿನಂತೆ ನಾವು ಸರಿಯಾಗಿ ಅರ್ಥಮಾಡಿ ಕೊಂಡಿದ್ದೇವೆಂಬ ಪ್ರಬಲವಾದ ಭರವಸೆಯನ್ನು ನೀಡುತ್ತವೆ.

ಇನ್ನೂ ಪರೀಕ್ಷಿಸಬೇಕಾದ ಇತರೆ ಪ್ರವಾದನೀಯ ಸಾಕ್ಷ್ಯಗಳು ಸಹಾ ಈ ಸಮಾನಾಂತರಗಳಿಗೆ ಸಮರ್ಪಕವಾಗಿ ಕಂಡುಬರುತ್ತವೆ. ಅದರಲ್ಲಿ ಒಂದು ದಾನಿಯೇಲನ ದಿನಗಳು. ಇವು ಕ್ರಿ.ಶ. 1875ರ ಮತ್ತು ಅದರ ನಂತರದಲ್ಲಿ ಜೀವಿಸಿದ ಪ್ರತಿಷ್ಠಿತರಿಗೆ ಮಹಾ ಆಶೀರ್ವಾದಗಳನ್ನು ಸೂಚಿಸುತ್ತವೆ – ಈ ಆಶೀರ್ವಾದಗಳು ಖಂಡಿತವಾಗಿಯೂ ಅದುವರೆಗೆ ಭವ್ಯವಾಗಿ ಬಿಚ್ಚಿಹೇಳಲಾದ ದೇವರ ವಾಕ್ಯದ ಸತ್ಯಗಳನ್ನು ನೆರವೇರಿಸುವುದಾಗಿದೆ. ಕತ್ತಲೆಯಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನಿಗೆ ಸ್ತೋತ್ರವಾಗಲಿ – 1 ಪೇತ್ರ 2:9.

ನಾಲ್ವತ್ತು ವರ್ಷಗಳ ಯೆಹೂದ್ಯ ಸುಗ್ಗಿಯು ಕ್ರಿ.ಶ. ಅಕ್ಟೋಬರ್ 69ಕ್ಕೆ ಮುಕ್ತಾಯವಾಯಿತು ಮತ್ತು ರಾಜ್ಯದ ಸಂಪೂರ್ಣ ಪರಾಭವವು ಇದನ್ನು ಅನುಸರಿಸಿತು ಎಂಬುದನ್ನು ನೆನಪಿನಲ್ಲಿಡಿ; ಮತ್ತು ಅದರಂತೆಯೇ ಸುವಾರ್ತಾಯುಗದ ನಾಲ್ವತ್ತು ವರ್ಷಗಳು ಕ್ರಿ.ಶ. 1914ರಲ್ಲಿ ಮುಕ್ತಾಯಗೊಳ್ಳುತ್ತದೆ ಮತ್ತು ಅದರಂತೆಯೇ "ಕ್ರೈಸ್ತರಾಜ್ಯಾಧಿಪತ್ಯ"ದ ಪರಾಭವವು ಅದನ್ನು ಶೀಘ್ರದಲ್ಲಿಯೇ ಅನುಸರಿಸುತ್ತದೆ ಎಂಬುದನ್ನು ನಿರೀಕ್ಷಿಸಬಹುದು. 'ಒಂದೇಘಳಿಗೆಯಲ್ಲಿ' ಆಕೆಯ (ಬಾಬೇಲಿನ) ಮೇಲೆ ನ್ಯಾಯತೀರ್ಪು ಬರಲಿದೆ (ಪ್ರಕಟನೆ 18:10,17,19).

ಓದುಗರ ಗಮನವನ್ನು ಮುಂದಿನ ಎರಡು ಪುಟಗಳಲ್ಲಿ ಕೊಡಲ್ಪಟ್ಟ ಹೊಂದಾಣಿಕೆಗಳ ಪಟ್ಟಿಗಳ ಕಡೆಗೆ ನಿರ್ದೇಶಿಸಲಾಗಿದೆ. ಅವುಗಳು ಜಾಗರೂಕ ಅಧ್ಯಯನಕ್ಕೆ ಪ್ರತ್ಯರ್ಪಿಸುವವುಗಳಾಗಿವೆ.

* * * * * * *

# ಅಧ್ಯಯನ – 8 Study VIII

# ಎಲೀಯನು ಬರುತ್ತಾನೆ

## Elias Shall First Come

**ಈ ಮುಖ್ಯವಾದ ಪ್ರವಾದನೆಯು ಎರಡನೆಯ ಬರೋಣಕ್ಕೆ ಎಷ್ಟರಮಟ್ಟಿಗೆ ಸಂಬಂಧಿಸಿದೆ. ಸ್ನಾನಿಕನಾದ ಯೋಹಾನನಲ್ಲಿ ಇದು ಭಾಗಶಃ ಮತ್ತು ಸಾಂಕೇತಿಕವಾಗಿ ನೆರವೇರಿದೆ. ನಿಜವಾದ ನೆರವೇರಿಕೆ. ಪವಿತ್ರ ಬೆಟ್ಟದ ಮೇಲಿನ ದರ್ಶನ. ಸಾಂಕೇತಿಕ ಎಲೀಯ ಮತ್ತು ಪ್ರತಿ ಸಾಂಕೇತಿಕ ಎಲೀಯ ಇವುಗಳ ನಡುವಣ ಗಮನೀಯವಾದ ಅನುರೂಪತೆಗಳು. ಕಾಲವು ಸಮೀಪಿಸಿದೆ. ಹೊರನೋಟ. ಎಲೀಯನ ಉತ್ತರಾಧಿಕಾರಿಯಾದ ಎಲೀಷನು.**

"ಜ್ಞಾಪಕಮಾಡಿಕೊಳ್ಳಿರಿ. ನಾನು ಬಂದು ದೇಶವನ್ನು ಶಾಪದಿಂದ ಹತಮಾಡದಂತೆ ಯೆಹೋವನ ಆಗಮನದ ಭಯಂಕರವಾದ ಮಹಾದಿನವು ಬರುವುದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು. ಅವನು ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ, ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು" – ಮಲಾಕಿಯ 4:5–6.

ಭೂಲೋಕದಲ್ಲಿ ಮೆಸ್ಸೀಯನ ರಾಜ್ಯ ಸ್ಥಾಪನೆಯು ಸಮೀಪಿಸುತ್ತಿರುವ ಕಾಲವನ್ನು ಪರಿಗಣಿಸುವಾಗ ಎಲೀಯನ ಬರೋಣದ ಬಗ್ಗೆ ಪ್ರಾಶಸ್ತ್ಯ ನೀಡುವುದನ್ನು ನಾವು ಕಡೆಗಣಿಸಬಾರದು.

ನಮ್ಮ ವಾಕ್ಯಭಾಗದ ಹೇಳಿಕೆಯು ವಿಚಿತ್ರವಾಗಿದೆ. ಇದರ ಆಲೋಚನೆ ಎಲೀಯನ ಕಾರ್ಯವು ತಂದೆತಾಯಿಗಳನ್ನು ಮಕ್ಕಳ ರೀತಿಯ ಸ್ಥಿತಿಗೆ ನಮ್ರರನ್ನಾಗಿ ಬದಲಾಯಿಸುವುದು, ಪರಿವರ್ತಿಸುವುದು ಮತ್ತು ನಂತರದಲ್ಲಿ ಅವರು ಮಕ್ಕಳ ರೀತಿಯಲ್ಲಿ ಕಲಿತುಕೊಳ್ಳುವಂತೆ ಮಾಡಿದ ಮೇಲೆ, ಅವರ ಹೃದಯಗಳನ್ನು ತಪ್ಪಿನಿಂದ, ಪಾಪ ಮತ್ತು ಅಪನಂಬಿಕೆಯಿಂದ ದೂರಮಾಡುವುದು ಮತ್ತು ಅವರನ್ನು ಅವರ ತಂದೆಗಳೊಡನೆ ಇಬ್ರಿಯರು ನಿಷ್ಠಾವಂತ ಪಿತೃಗಳಿಗೆ ಮತ್ತು ಪ್ರವಾದಿಗಳಿಗೆ ನೀಡಿದ ಹೆಸರಿನ ಪ್ರಕಾರ ಸಾಮರಸ್ಯಕ್ಕೆ ಹಿಂತಿರುಗಿಸುವುದು.

ಮಲಾಕಿಯ ಪ್ರವಾದನೆಯು ಯೆಹೋವನು ಇಸ್ರಾಯೇಲ್ಯರಿಗೆ ಕಳುಹಿಸಿದ ಅಂತಿಮ ಸಂದೇಶವಾಗಿದ್ದು ಅದು ವಿಶೇಷವಾಗಿ ಮೆಸ್ಸೀಯನ ಆಗಮನದ ಬಗ್ಗೆ ಮತ್ತು ಅದರೊಂದಿಗೆ ಕರ್ತನ ಪ್ರಸನ್ನತೆಯ ದಿನದಲ್ಲಿ ಉಂಟಾಗಲಿರುವ ವಿಶೇಷ ಶೋಧನೆಗಳ ಬಗ್ಗೆ ವಿಶಿಷ್ಟವಾಗಿ ತಿಳಿಸುವ ಕಡೆಯ ಎರಡು ಅಧ್ಯಾಯಗಳು ಅವರ ಮೇಲೆ ಆಳವಾದ ಪರಿಣಾಮವನ್ನು ಬೀರಿದೆಯೆಂದು ತೋರಿಬರುತ್ತದೆ. (ಮಲಾಕಿಯ 3:1–3; 13–18, 4:1–6). ಆ ಶೋಧನೆಗಳು ವಿಶಿಷ್ಟವಾಗಿರುತ್ತದೆಂದು ಇವುಗಳಿಂದ ತಿಳಿದು, ಅವರು ಎಲೀಯನ ಬರೋಣದ ಬಗ್ಗೆ ವಾಗ್ದಾನ ಮಾಡುವ ಮತ್ತು ಮೇಲೆ ಉಲ್ಲೇಖಿಸಿದ ಕಡೆಯ ವಚನಗಳಿಂದ ಸಮಾಧಾನ ಪಡಕೊಳ್ಳುತ್ತಾರೆ, ಆ ಎಲೀಯನು ತನ್ನ ಕಾಲದಲ್ಲಿ ಬಾಳನ ಆರಾಧಕರೆಲ್ಲರನ್ನೂ ಯೆಹೋವನ ಆರಾಧನೆಗೆ ಕರೆ ತಂದವನಾಗಿದ್ದನು. ಈಗ ಆತನು ಕರ್ತನ ಬರೋಣದ ಕಾಲದಲ್ಲಿ ಸಂಭವಿಸುವ ಸಂಕಟಗಳನ್ನು ಎದುರಿಸುವಂತೆ ಅವರನ್ನು ಸಿದ್ಧಪಡಿಸಲು ಮತ್ತೊಮ್ಮೆ ಬರಲಿದ್ದಾನೆ.

ಈ ಪ್ರವಾದನೆಯು ಮೆಸ್ಸೀಯನಿಗೆ ಸಂಬಂಧಪಟ್ಟ ಭಾಗವಾಗಲೀ ಅಥವಾ ಎಲೀಯನಿಗೆ ಸಂಬಂಧಿಸಿದ್ದಾಗಲೀ ನಮ್ಮ ಕರ್ತನ ಮೊದಲ ಆಗಮನದಲ್ಲಿ ನೆರವೇರಲಿಲ್ಲ. ಈ ಪ್ರವಾದನೆಯು ವಿಶದವಾಗಿ ಎರಡನೆಯ ಆಗಮನಕ್ಕೆ ಸಂಬಂಧಿಸಿದ್ದು; 'ಒಡಂಬಡಿಕೆಯ ದೂತನ' ಮಹಿಮೆ ಮತ್ತು ಅಧಿಕಾರದೊಡನೆ ಬರುವ ಬಗ್ಗೆ, ಆ ಸಮಯದಲ್ಲಿನ ಪರೀಕ್ಷೆಗಳು, ಕರ್ತನ ದಿನದಲ್ಲಿನ ಮಹಾ ಸಂಕಟಗಳಿಗೆ ಸಂಬಂಧಿಸಿದವುಗಳು. ಹೇಗೂ ಯೇಸುಕ್ರಿಸ್ತನನ್ನು ಸಾಂಕೇತಿಕ ಇಸ್ರಾಯೇಲ್ಯರಿಗೆ ಪ್ರಸ್ತುತಿಪಡಿಸುವ, ಅವರು ಆತನನ್ನು ತಿರಸ್ಕರಿಸಿದ ನಂತರದಲ್ಲಿ ಒಂದು ರಾಷ್ಟ್ರವಾಗಿ ಅನುಭವಿಸಲಿಕ್ಕಿರುವ ಸಂಕಟಗಳು ಮತ್ತು ಮತ್ತೊಂದು ಛಾಯೆಯು ಇನ್ನೂ ಹೆಚ್ಚಾಗಿ ಉದಾಹರಿಸಿದ ಅನೇಕ ವಿಶೇಷತೆಗಳು ದೇವರು ಮುನ್ನೋಡಿದಂತೆಯೇ ಮತ್ತು ಉದ್ದೇಶಿಸಿದಂತೆಯೇ ಅವೆ. ದೀಕ್ಷಾಸ್ನಾನ ಕೊಡುವಾತನಾದ (ಸ್ನಾನಿಕನಾದ) ಯೋಹಾನನು ಎಲೀಯನ ಉತ್ಸಾಹದಲ್ಲಿ ಎಲೀಯನು ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಿದಂತ ಕಾರ್ಯಗಳಿಗೆ ಸಮಾನರೂಪವಾದವುಗಳನ್ನೇ ಮಾಡಿದನು. ಆದರೆ ಜಯಹೊಂದುವಲ್ಲಿ ವಿಫಲನಾದನು. ಇದರ ಫಲವಾಗಿ ರಾಷ್ಟ್ರದ ಮೇಲೆ ಸಂಕಟಗಳು, ಶಾಪ ಇವುಗಳು ಹಿಂಬಾಲಿಸಿದವು. ಪ್ರವಾದಿಯು ಉಲ್ಲೇಖಿಸಿದ ನಿಜವಾದ ಎಲೀಯನು ಸಮಗ್ರ ಪ್ರಪಂಚಕ್ಕೆ ಮಹಾಕಾರ್ಯವನ್ನು ಮಾಡಬೇಕಿದೆ, ಎಲ್ಲಾ ಮಾನವ ಜಾತಿಯವರನ್ನು ತನ್ನ ಎರಡನೆಯ ಬರೋಣಕ್ಕೆ ಸಿದ್ಧಮಾಡಬೇಕಿದೆ. ಆತನು ಸಹ ಕೆಲವು ಸಮಯದವರೆಗೆ ಜಯವನ್ನು ಹೊಂದುವಲ್ಲಿ ವಿಫಲನಾಗುವನು ಮತ್ತು ಇದರ ಫಲವಾಗಿ ಮಹಾ ಸಂಕಟದ ಸಮಯ, ಶಾಪ ಇವುಗಳು ಸಮಗ್ರ ಭೂಲೋಕವನ್ನು ಕಾಡುವುದು.

ಪ್ರವಾದಿಯು ಪ್ರಸ್ತಾಪಿಸಿದ ಎಲೀಯನ ಬರುವಿಕೆಯು ಯೆಹೋವನ ಈ ಮಹಾ ಭಯಂಕರ ದಿನದ ಮೊದಲು*. ಮತ್ತು ಈ ನಿಮಿತ್ತ, ನಾವು ತೋರಿಸಿದಂತೆ, 'ಯೆಹೋವನ ಆಗಮನದ ಭಯಂಕರವಾದ ಆ ಮಹಾ ದಿನವು' 1874ರಲ್ಲಿ ಪ್ರಾರಂಭವಾಗಿದ್ದು ನಾಲ್ವತ್ತು ವರ್ಷಗಳವರೆಗೆ ಮುಂದುವರೆಯುವುದು ಮತ್ತು ಅನ್ಯಜನಗಳ ಕಾಲಾವಧಿಯು ಮುಗಿಯುವಾಗ ಲೌಕಿಕ ಮತ್ತು ಸೈತಾನನ ರಾಜ್ಯವು ಪರಾಭವಗೊಳ್ಳುವಾಗ ಅದು ಮುಕ್ತಾಯ ಗೊಳ್ಳುತ್ತದೆ ಮತ್ತು ಇಮ್ಮಾನುವೇಲನ ಪೂರ್ಣ ಅಧಿಕಾರ ಪ್ರತಿಷ್ಠಾಪನೆ ಯೇಸುಕ್ರಿಸ್ತನು ಮತ್ತು ಆತನ ಸಂತರು – ತಮ್ಮ ಎಲ್ಲಾ ಬಲ ಮತ್ತು ಪ್ರಭುತ್ವದೊಡನೆ ಎಲೀಯನು ಬಂದಿದ್ದಾನೆ ಎಂದು ತೋರಿಸುವುದು ಇಲ್ಲಿ ನಮಗೆ ಮುಖ್ಯವಾಗಿದೆ. ಆತನು ಈ ಲೋಕದವರ ಹೃದಯವನ್ನು ಮಕ್ಕಳ ಹೃದಯದಂತೆ, ಮತ್ತು ಅವರ ವಿವೇಕವನ್ನು ನ್ಯಾಯುವಂತರಿಗೆ ತಕ್ಕಂತೆ ಮಾರ್ಪಡಿಸುವಲ್ಲಿ ವಿಫಲನಾಗಿದ್ದಾನೆ. ಹೀಗಾಗಿ ದೇವರು ಮುನ್ನೋಡಿದಂತೆ ಮತ್ತು ಮುನ್ಸೂಚಿಸಿದಂತೆ ಸಂಕಟ ಸಮಯವು ಬರಲಿದೆ. ಅದರಲ್ಲಿ ದೇವರು ಮಾನವ ಜಾತಿಯವರಿಗೆ ಕಠೋರವಾದ ಮತ್ತು ಕಹಿಯಾದ ಅನುಭವಗಳೊಂದಿಗೆ ಅವರು ಚೆನ್ನಾಗಿ ಕಲಿತುಕೊಳ್ಳಬೇಕಾದ ಪಾಠಗಳನ್ನು ಕಲಿಸಿಕೊಡುತ್ತಾನೆ ಮತ್ತು ಅವರು ನೂತನ ಒಡಂಬಡಿಕೆಯ ಯೆಹೋವನ ದೂತನಾದ ಯೇಸುವನ್ನು ಒಡಂಬಡಿಕೆಯ ಎಲ್ಲಾ ನ್ಯಾಯವಾದ ವ್ಯವಸ್ಥೆ, ನಿಯಮಗಳು ಮುಂತಾದವು ಗಳೊಡನೆ ಕೃತಜ್ಞತಾಪೂರ್ವಕವಾಗಿ ಅಂಗೀಕರಿಸುವಂತೆ ಮಾಡುತ್ತಾನೆ.

ಪ್ರಥಮ ಆಗಮನದಲ್ಲಿ, ನಾವು ಕಂಡುಕೊಂಡಂತೆ, ದೇವರ ಅನೇಕ ವಾಗ್ದಾನಗಳು ಮತ್ತು ಯೋಜನೆಗಳು ಇಸ್ರೇಲ್ ಎಂಬ ಒಂದು ರಾಷ್ಟ್ರದೊಡನೆ ಅಲ್ಪ ಪ್ರಮಾಣದಲ್ಲಿ ಪಾಲಿಸಲಾಯಿತು. ಯೇಸುವಿನ ದ್ವಿತೀಯಾಗಮನದಲ್ಲಿ ಅದು ಬೃಹತ್ತಾಗಿ, ಭವ್ಯವಾದ ಯಥಾವತ್ತಾದ ರೂಪದಲ್ಲಿ ನೆರವೇರುವುದರ ದೃಷ್ಟಾಂತವಾಗಿದೆ. ಅದ್ಭುತಗಳು, ಗುಣಪಡಿಸುವಿಕೆ ಮುಂತಾದವುಗಳು ಸಹಸ್ರಮಾನ ಯುಗದ ಮಹತ್ವವಾದ ಕಾರ್ಯಗಳನ್ನು ಪ್ರತಿನಿಧಿಸುತ್ತದೆ ಮತ್ತು ನಮ್ಮ ಕರ್ತನು ಕತ್ತೆಯ ಮೇಲೆ ಅರಸನಂತೆ ಸವಾರಿಮಾಡಿದ್ದು ಆತನು ತನ್ನ ಎರಡನೆಯ ಬರೋಣದಲ್ಲಿ ರಾಜಾಧಿರಾಜನೂ, ಕರ್ತರ ಕರ್ತನಾಗಿ ಇನ್ನೂ ಹೆಚ್ಚಿನ ಅಧಿಕಾರವನ್ನು, ಭವ್ಯತೆಯನ್ನು ಗೌರವವನ್ನು ವಹಿಸಿಕೊಂಡಿರುತ್ತಾನೆಂಬುದನ್ನು ಪ್ರತಿನಿಧಿಸಿತು. ಹೀಗಾಗಿ ಮಾನವನಾದ ಯೇಸು ಮತ್ತು ಆತನ ಶಿಷ್ಯರ ಚಿಕ್ಕ ಗುಂಪು ಎರಡನೆಯ ಬರೋಣದಲ್ಲಿ ಎಲ್ಲಾ ಭಕ್ತರೊಡನೆ, ಆತನ ಮದಲಗಿತ್ತಿಯೊಡನೆ, ಸಹ ಬಾಧ್ಯಸ್ತರೊಡನೆ ಒಂದುಗೂಡಿ ಉನ್ನತಕ್ಕೇರುವ ಮಹಿಮಾಕರ್ತನನ್ನು ಪ್ರತಿನಿಧಿಸಿತು. ಈ ರೀತಿಯಲ್ಲಿ ಸ್ನಾನಿಕನಾದ ಯೋಹಾನನು ಮತ್ತು ಆತನ ಶಿಷ್ಯರು ಆತನೊಡನೆ ಮತ್ತು ಆತನ ಅಡಿಯಲ್ಲಿ ಇಸ್ರಾಯೇಲ್ಯರನ್ನು ಪರಿವರ್ತಿಸುವ ಪ್ರಯತ್ನದಲ್ಲಿ ಮತ್ತು ಮೆಸ್ಸೀಯನ ಸ್ವೀಕಾರಕ್ಕೆ ಸಿದ್ಧತೆಮಾಡುವ ಅದೇ ಕೆಲಸದಲ್ಲಿ ನಿರತರಾಗಿದ್ದರು, ಈ ಯೋಹಾನನು ನಿಜವಾದ ಎಲೀಯನನ್ನು, ಪ್ರತಿನಿಧಿಸುವವನಾಗಿದ್ದು (ಅಂದರೆ ಸತ್ಯವಾದ ಕ್ರೈಸ್ತಸಭೆ), ಆತನ ಕಾರ್ಯವು ಮಹಿಮೆಯ ಅರಸನೂ, ಮಹಿಮೆಯ ಆತ್ಮಿಕ ಅರಸನೂ, ರಾಜಾಧಿರಾಜನೂ ಆದ ಕ್ರಿಸ್ತನ ಬರೋಣದ ಮೊದಲು ಸಮಸ್ತ ಲೋಕವನ್ನು ಪರಿವರ್ತಿಸುವುದಾಗಿತ್ತು. ದೀಕ್ಷಾಸ್ನಾನ ಮಾಡಿಸುವಾತನಾದ ಯೋಹಾನನು ಎಲೀಯನ ಆತ್ಮ ಮತ್ತು ಅಧಿಕಾರದಲ್ಲಿ ಇಸ್ರಾಯೇಲ್ಯರನ್ನು ಸುಧಾರಿಸುವಲ್ಲಿ ವಿಫಲನಾದನು (ಮತ್ತಾಯ 17:12) ಮತ್ತು ಇದರ ಫಲವಾಗಿ ಇಸ್ರಾಯೇಲ್ಯರು ದೇಹಧಾರಿಯಾಗಿದ್ದ ಯೇಸುವನ್ನು ತಿರಸ್ಕರಿಸಿ ತಮ್ಮ ಮೇಲೆ ಮಹಾ ಪ್ರತೀಕಾರದ, ಸಂಕಟದ ಮತ್ತು ರೌದ್ರದ ದಿನವನ್ನು ಬರಮಾಡಿಕೊಂಡರು (ಲೂಕ 21:22). ಹೀಗೆ, ಅದರಂತೆ, ಹೆಚ್ಚಿನ ಪ್ರಮಾಣದಲ್ಲಿ ಮಾತ್ರವೇ, ನಿಜವಾದ ಮತ್ತು ಮಹಾ ಎಲೀಯನು ಲೋಕವನ್ನು ಪರಿವರ್ತಿಸಿ ಅವರು ಮಹಿಮೆಯ ಅರಸನನ್ನು ಸ್ವೀಕರಿಸುವಂತೆ ಮಾಡಲು ವಿಫಲನಾದನು ಮತ್ತು ಈಗ, ಇದರ ಪರಿಣಾಮವಾಗಿ ಮಹಾ ರೌದ್ರದ ದಿನವು ಈ ಲೋಕದ ಮೇಲೆ ಅವರನ್ನು ಕರಗಿಸಿ, ಹದಗೊಳಿಸಿ, ನಮ್ರರನ್ನಾಗಿಸಿ ಅವರೆಲ್ಲರೂ ತಮ್ಮ ಹೃದಯದ ಅಂತರಾಳದಿಂದ "ಹೊಸನ್ನ!, ಯೆಹೋವನ ನಾಮದಲ್ಲಿ ಬರುವಾತನು ಧನ್ಯನು" ಎಂದು ಕೂಗುವಂತೆ ಸಿದ್ಧತೆ ಮಾಡಲೇಬೇಕಾಗಿದೆ.

ಈ ರೀತಿಯಲ್ಲಿ ಶಾರೀರಿಕವಾದ ಸಭೆಯು (ದೇಹಧಾರಿಯಾದ ಕ್ರಿಸ್ತನು, ಸಭೆಯ ಶಿರಸ್ಸೂ ಮತ್ತು ದೇಹವು) ಎಲೀಯನು ಅಥವಾ ಯೆಹೋವನಿಂದ ಪ್ರತಿಷ್ಠೆ ಹೊಂದಿದ ಮಹಿಮೆಯುಳ್ಳ ಸಭೆಯ ಮುಂದೂತನು ಎಂಬುದನ್ನು ನೋಡಬಹುದು. ಹೆಸರು ಮಾತ್ರದ ಸಭೆಯಲ್ಲ, ಆದರೆ ನಿಜವಾದ ಪ್ರತಿಷ್ಠಿತ ಸಭೆಯವರು, ಸಮಾಧಿಯ ಮತ್ತೊಂದೆಡೆಯಲ್ಲಿ ಅಭಿಷೇಕಿಸಲ್ಪಟ್ಟ ಮಹಾವಿಮೋಚಕರಾಗುವವರು – ಇವರು ಎಲೀಯನನ್ನು ಒಳಗೊಂಡಿದ್ದಾರೆ. ಅವರ ಅಯೋಗವೆಂದರೆ ತಪ್ಪು ಬೋಧನೆಗಳನ್ನೂ, ಪಾಪವನ್ನೂ ಖಂಡಿಸುವುದು ಮತ್ತು ಬರಲಿರುವ ಮಹಿಮಾ ರಾಜ್ಯದ ಕಡೆಗೆ ಸೂಚಿಸುವುದಾಗಿದೆ. ಯೇಸು ಮತ್ತು ಅಪೋಸ್ತಲರು ಮತ್ತು ಅಂದಿನಿಂದ ಕ್ರಿಸ್ತ ಯೇಸುವಿನಲ್ಲಿ ನಿಷ್ಠೆಯುಳ್ಳ ಇವರೆಲ್ಲರೂ ಈ ಮಹಾ ಸಾಂಕೇತಿಕನೂ, ಪ್ರವಾದಿಯೂ ಬೋಧಕನೂ ಆದ ಎಲೀಯನವರು, ಅದೇ ವರ್ಗ, ಶಿರಸ್ಸು ಮತ್ತು ದೇಹ, ಅವರು ಶೀಘ್ರದಲ್ಲೇ ಮಹಿಮಾ ಅರಸನೊಡನೆ

* ಸಂಪುಟ I ಅಧ್ಯಾಯ xv ನೋಡಿರಿ

ರಚನೆಗೊಳ್ಳುತ್ತಾರೆ. ಲೋಕದ ಸುಧಾರಣೆಗಳಿಗೆ ಸಂಬಂಧಿಸಿದಂತೆ ಸಭೆಯು ಈಗ ನಿರತವಾಗಿರುವ ಕಾರ್ಯವು ಅದರ ಮುಂದಿನ ಕಾರ್ಯದ ಪೂರ್ವಭಾವಿಯಾಗಿದೆ. ಆದರೆ ಬೋಧಕನಾದ ಎಲೀಯನು ವಿಫಲನಾದದನ್ನು ಸಭೆಯ ರಾಜತ್ವ ಕಾರ್ಯಭಾರಿಯ ಸ್ಥಾನವು ಲೋಕಕ್ಕೆ ನೆರವೇರಿಸಿ ಕೊಡುತ್ತದೆ.

ನಾವು ತಪ್ಪಾಗಿ ಏನನ್ನೂ ಅರ್ಥಮಾಡಿಕೊಳ್ಳಬಾರದು ಎಂದರೆ; ದೇವರ ಯೋಜನೆಯು ಸುವಾರ್ತಾ ಯುಗದಲ್ಲಿ ಪ್ರಪಂಚವನ್ನು ಪರಿವರ್ತಿಸುವಂತೆ ವಿಸ್ತರಿಸಲ್ಪಟ್ಟಿಲ್ಲ ಎಂಬುದನ್ನು ನಾವೀಗಾಗಲೇ ತೋರಿಸಿದ್ದೇವೆ. ಹಾಗೆ ಮಾಡುವುದು ಆತನ ಉದ್ದೇಶವಾಗಿರಲಿಲ್ಲ. ಆದರೆ ಈಗ ಕೇವಲ ಸಭೆಯ ಆಯ್ಕೆಯನ್ನು, ಪರೀಕ್ಷೆಯನ್ನು ಮತ್ತು ಸಭೆಯ ಹಾಗೂ ಕ್ರಿಸ್ತನ ಮೂಲಕ ಲೋಕವನ್ನು ಆಶೀರ್ವದಿಸುವುದನ್ನು ಇದನ್ನನುಸರಿಸುವ ಕಾಲದಲ್ಲಿ ವಿನ್ಯಾಸಗೊಳಿಸಲಾಗಿದೆ. ನಾವು ಎಲೀಯನು, ದೇಹಧಾರಿಯಾದ ಕ್ರಿಸ್ತನು ಪ್ರಪಂಚವನ್ನು ಪರಿವರ್ತಿಸಲು ಪ್ರಯತ್ನಿಸಿ ಭಾಗಶಃ ಸುಧಾರಣೆಯನ್ನುಂಟು ಮಾಡಿದ್ದನ್ನು ಹೊರತುಪಡಿಸಿ ಸೋತುಹೋದನು ಎಂದು ಹೇಳುವಾಗ ನಾವು ಅದನ್ನು ವಿರೋಧಿಸುವುದಿಲ್ಲ. ಈ ಸಲುವಾಗಿ ದೇವರು ಈ ಲೋಕದಲ್ಲಿ ನಮ್ಮ ನಿಯೋಗವು ಒಂದು ಚಿಕ್ಕ ಹಿಂಡನ್ನು ಆಯ್ಕೆಮಾಡುವುದರ ಹೊರತಾಗಿ ಬಹಳಷ್ಟು ವಿಫಲವಾಗುವುದು ಎಂದು ಮುಂತಿಳಿಸಿದ್ದರೂ, ಮತ್ತೂ ಈ ಪ್ರಯತ್ನವು ನಮ್ಮ ಮೇಲೆ ಅನುಕೂಲಕರವಾದ ಪರಿಣಾಮ ಬೀರುವುದಾಗಿದೆ ಎಂದು ತಿಳಿದು ಬರುತ್ತದೆ. ನಮ್ಮ ಕರ್ತನ ಮೂಲಕ ಆತನು ನಮಗೆ ನೀಡಿದ ಕರೆ "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15). ಆತನು ನಮ್ಮ ಪ್ರಸ್ತುತ ವಿಫಲತೆಯ ಬಗ್ಗೆ, ಆದರೆ ಮುಂಬರುವ ನಮ್ಮ ಸಫಲತೆಯ ಬಗ್ಗೆ ಮುಂತಿಳಿದ್ದಾನೆ. ತರುವಾಯ ನಮ್ಮನ್ನು ಮಹಿಮೆಗೊಳಿಸಿ ದೈವಿಕ ಶಕ್ತಿಯನ್ನು ಕೊಡುವನು ಮತ್ತು ಕಳೆದ ಹದಿನೆಂಟು ಶತಮಾನಗಳಲ್ಲಿನ ತುಲನಾತ್ಮಕವಾದ ವಿಫಲತೆಯನ್ನು ಕಾಣುವಾಗಲೂ ನಿಜವಾದ ಎಲೀಯನ ವರ್ಗದ ಶ್ರಮವು ವ್ಯರ್ಥವಾಗಲಿಲ್ಲ ಎಂದು ಅರಿತು ಸಂತೋಷಿಸಲು ಸಾಧ್ಯವಾಗುತ್ತದೆ. ಆದರೆ ಅದು ಸತ್ಯವಾದ ಸಭೆಯ ಅಭಿವೃದ್ಧಿಮಾಡುವ ದೈವಿಕ ಉದ್ದೇಶವನ್ನು ಸಾಧಿಸಿದೆ ಎಂದು ಗ್ರಹಿಸಿ ಲೋಕದವರ ಮುಂದೆ ಸಾಕ್ಷಿ ಹೇಳುವಾಗ ಅದು ನಮಗೆ ಸೂಕ್ತಕಾಲದಲ್ಲಿ ಲಾಭವನ್ನುಂಟುಮಾಡುತ್ತದೆ.

ಸ್ನಾನಿಕನಾದ ಯೋಹಾನನು ವಾಸ್ತವವಾಗಿ ಈ ಲೋಕಕ್ಕೆ ಹಿಂತಿರುಗಿ ಬಂದ ಎಲೀಯನಾಗಿರಲಿಲ್ಲ, ಸಭೆಯೂ ಕೂಡ ಅಲ್ಲ; ಆದರೆ ಯೋಹಾನನು ಇಸ್ರಾಯೇಲ್ಯರಿಗೆ ಎಲೀಯನು ಮಾಡಿದ ಕೆಲಸವನ್ನು ಮಾಡಿದನು ಎಂಬುದು ಸತ್ಯ (ಲೂಕ 1:17). ಅವರನ್ನು ಸಿದ್ಧಪಡಿಸಿ ದೇಹಧಾರಿಯಾದ ಕರ್ತನಿಗೆ ಪರಿಚಯಿಸಿದನು. ಹೀಗೆ ಅದು ಸಭೆಗೆ ನಿಜವಾಯಿತು = ಅದು ಎಲೀಯನ ಗುಣಶಕ್ತಿಗಳಿಂದ ಕಲೂಡಿದ ಕಾರ್ಯದ ಮೂಲಕವಾಗಿ ಮುಂತಿಳಿಸಿದ್ದ ಎಲೀಯನ ಕಾರ್ಯಗಳನ್ನು ಈ ಲೋಕದವರಿಗೆ ಮಾಡಿತು ಮತ್ತು ಯೋಹಾನನು ಕರ್ತನ ಪ್ರಥಮ ಆಗಮನದಲ್ಲಿ ಸಾರಿದ್ದನು. ಸುಮಾರಾಗಿ ಅದೇ ಮಾತುಗಳಲ್ಲಿ ನಮ್ಮ ಕರ್ತನ ಎರಡನೆಯ ಬರೋಣವನ್ನು ಹೀಗೆ ಸಾರಿತು. –"ಆದರೆ ನೀವು ಅರಿಯದೇ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; ಆತನೇ ನನ್ನ ಹಿಂದೆ ಬರತಕ್ಕವನು. ಆತನ ಕೆರದ ಬಾರುಗಳನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ" – ಯೋಹಾನ 1:26–27.

ಎಲ್ಲರೂ ಯೋಹಾನನ ಈ ಸಾಕ್ಷ್ಯವನ್ನು ಅರ್ಥ ಮಾಡಿಕೊಳ್ಳುವುದಿಲ್ಲ ಮತ್ತು ಆತನು ದೇಹಧಾರಿಯಾದ ಯೇಸುವಿನ ಮುಂದೂತನು ಎಂಬುದನ್ನು ಗ್ರಹಿಸಿ ಕೊಳ್ಳುವುದಿಲ್ಲ. ಅವರು ಹಾಗೆ ಮಾಡುತ್ತಿದ್ದರೆ, ಅವರು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಲು ಯೋಗ್ಯರಾಗಿರುತ್ತಿದ್ದರು. ಎಷ್ಟು ಮಂದಿ ಯೋಹಾನನ ಸಂದೇಶವನ್ನು ಅಂಗೀಕರಿಸಿ ಕ್ರಿಸ್ತನನ್ನು ಸ್ವೀಕರಿಸಿದ್ದರೋ ಅವರಿಗೆ ಯೋಹಾನನು ಎಲೀಯನ ಕಾರ್ಯವನ್ನು ಮಾಡಿದ್ದಾನೆ. ಯೋಹಾನನ ವಿಷಯವಾಗಿ ನಮ್ಮ ಕರ್ತನು – "ನಿಮಗೆ ಗ್ರಹಿಸುವುದಕ್ಕೆ ಮನಸ್ಸಿದ್ದರೆ ಬರತಕ್ಕ ಎಲೀಯನು ಇವನೇ ಎಂದು ತಿಳುಕೊಳ್ಳಿರಿ" (ಮತ್ತಾಯ 11:14) ಎಂದಿದ್ದಾನೆ. ಯೋಹಾನನು ಮತ್ತು ಆತನ ಕಾರ್ಯಗಳು ಎಲೀಯನ ಬಗ್ಗೆ ಮುಂತಿಳಿಸಿದಂತೆ ಪೂರ್ಣಗೊಳಿಸಲಿಲ್ಲವಾದರೂ, ದೇಹಧಾರಿಯಾದ ನಮ್ಮ ಕರ್ತನಾದ ಯೇಸುವು ಕೂಡ ಶರೀರದಲ್ಲಿದ್ದಾಗ ಮೆಸ್ಸೀಯನ ಬಗ್ಗೆ ಮುಂತಿಳಿಸಿದ್ದೆಲ್ಲವನ್ನೂ ಪೂರೈಸಲಿಲ್ಲ. ಮೆಸ್ಸೀಯನನ್ನು ಅಂಗೀಕರಿಸಿದವರೆಲ್ಲರಿಗೂ, ಆತನು ತನ್ನ ಬಲಿದಾನದ ಸಮರ್ಪಣೆಯನ್ನು ಮುಗಿಸುವ ಮುಂಚೆಯೇ, ಮಹಿಮೆ ಹೊಂದಿಕೊಳ್ಳುವ ಮೊದಲೇ ಅಥವಾ ಪುನಃ ಬಂದು ತನ್ನ ಮೆಸ್ಸೀಯನ ಅಥವಾ ವಿಮೋಚಕನ ಕಾರ್ಯಗಳನ್ನು ಮಾಡುವುದಕ್ಕೆ ಮುನ್ನವೇ ಆತನು ಯೆಹೋವನ ಅಭಿಷಕ್ತನು. ಯೋಹಾನನು ಮೊದಲನೆಯ ಆಗಮನದಲ್ಲಿ ಎಲೀಯನ ಛಾಯೆಯಾದ ವ್ಯಕ್ತಿಯಾಗಿ ಆರಂಭಿಸಿದ ಕಾರ್ಯಗಳನ್ನು ಒಂದು ಮಟ್ಟದಲ್ಲಿ ಮುಗಿಸಿದನು, ಮತ್ತು ಪ್ರಥಮ ಆಗಮನದಲ್ಲಿ ಯೋಹಾನನ ಕಾರ್ಯವು ಎರಡನೆಯ ಆಗಮನದಲ್ಲಿ ಸಭೆಯ ಮುಕ್ತಾಯದ ಕಾರ್ಯದ ಮುಂಛಾಯೆಯಾಗಿತ್ತು. ಇವುಗಳು, ದೇಹಧಾರಿಯಾಗಿದ್ದ ಕ್ರಿಸ್ತನ ಪಾದವು, ಎಲೀಯನ ಪಾದವು ರಾಜ್ಯವನ್ನು ಪ್ರಕಟಿಸಿತು (ಯೆಶಾಯ 52:7). ಅದನ್ನು ಸ್ವೀಕರಿಸುವವರು ಮಹಿಮೆ ಹೊಂದಿದ

ಕ್ರಿಸ್ತನ ಆಳ್ವಿಕೆಗೆ ಹತ್ತಿರವಾಗಿದ್ದಾರೆಂದು ನಾವು ಪ್ರಕಟಿಸುತ್ತೇವೆ; ಮತ್ತು ಅದನ್ನು ಸ್ವೀಕರಿಸುವವರಿಗೆ ನಾವು ಮುಂತಿಳಿಸಿದ ಪ್ರತಿಸಾಂಕೇತಿಕ ಎಲೀಯನನ್ನು ತೋರಿಸುತ್ತೇವೆ. ಕೆಲವರು ಬಹುಶಃ ಅದನ್ನು ಅಂಗೀಕರಿಸುವುದಿಲ್ಲ, ಆದರೆ, ಇನ್ನೂ ಯಾರಾದರೂ ಮಲಾಕಿಯ ಭವಿಷ್ಯ ನುಡಿಗಳನ್ನು ಪೂರೈಸುವರೆಂದು ಎದುರು ನೋಡುತ್ತಾರೆ ಮತ್ತು ಸಂಕಟದ ದಿನದಲ್ಲಿ ಬೆಂಕಿಯು ಭಟ್ಟಿಯಂತೆ ಉರಿಯುವವರೆಗೆ ಅವರ ದಂಡನೆಯ ಸಮಯವನ್ನು ತಿಳಿಯುವುದಿಲ್ಲ.

ಆಗ, ಎಲೀಯನು, ಪ್ರಪಂಚವನ್ನು ಪರಿವರ್ತಿಸಿ ಪುನಃ ಸ್ಥಾಪಿಸುವುದು ವಿಫಲವಾದಂತೆಯೇ, ಯೋಹಾನನು ಇಸ್ರಾಯೇಲ್ಯರನ್ನು ಪರಿವರ್ತಿಸಲು ವಿಫಲವಾದುದರ ಮುಂಗಾಣುವಿಕೆಯಾಗಿದೆ ಎಂದು ಕಂಡುಬರುವುದು. ಪರಂತು, ಅದು ಅದೇ ಎಲೀಯನ ವರ್ಗವು ಮಹಿಮೆ ಮತ್ತು ಶಕ್ತಿಯನ್ನು ಹೊಂದಿಕೊಂಡು ಪೂರ್ವದಲ್ಲಿಯೇ ಪರಿಶುದ್ಧ ಪ್ರವಾದಿಗಳು ವಾಗ್ದಾನ ಮಾಡಿದಂತೆ ಸಹಸ್ರಮಾನ ಯುಗದಲ್ಲಿ ಪ್ರಪಂಚಕ್ಕೆ ಬೋಧಿಸಿ ಎಲ್ಲವನ್ನೂ ಪುನಃವಶಪಡಿಸುವುದು (ಅ.ಕೃ. 3:19–21); ಹೆಸರು ಮತ್ತು ಹೋಲಿಕೆಯಿಂದ ಮಾತ್ರವೇ ಎಲೀಯನ ನಮೂನೆಯು ನಮ್ಮ ಭೂಲೋಕದ ಜೀವನಕ್ರಮವು ವಿರಮಿಸುವುದು. ಇದರೊಂದಿಗೆ ಸಾಮರಸ್ಯವಾಗಿ ಯೇಸುವಿನ ಶಿಷ್ಯರು ಯೇಸುವಿಗೆ "ಎಲೀಯನು ಮೊದಲು* ಬರುವುದು ಅಗತ್ಯವೆಂಬುದಾಗಿ ಶಾಸ್ತ್ರಿಗಳು ಹೇಳುತ್ತಾರಲ್ಲಾ, ಇದು ಹೇಗೆ? ಎಂದು ಆತನನ್ನು ಕೇಳಿದ್ದಕ್ಕೆ ಆತನು – ಎಲೀಯನು ಬರುವುದು ನಿಜ; ಬಂದು ಎಲ್ಲವನ್ನು ತಿರುಗಿ ಸರಿಮಾಡುವನು" (ಮತ್ತಾಯ 17:10–11) ಎಂದು ಉತ್ತರಿಸುತ್ತಾನೆ. ನಮ್ಮ ಕರ್ತನ ಈ ಉತ್ತರವು ಎಲೀಯನು ಒಬ್ಬ ಛಾಯೆಯಾಗಿ ಮತ್ತು ಯೋಹಾನನು ಆತನ ಮುಂದುವರಿಕೆ ಮತ್ತು ಅದೇ ಸಮಯದಲ್ಲಿ ನೆರವೇರಿಕೆಯ ಛಾಯೆ ಮುಂತಾದ ಸಂಪೂರ್ಣವಾದ ವಿವರಣೆಯನ್ನು ನೀಡಲು ಪ್ರಯತ್ನಿಸುವುದಿಲ್ಲ – ಇವುಗಳನ್ನು ಆ ಶಿಷ್ಯರು ಅರ್ಥಮಾಡಿಕೊಳ್ಳಲು ಸಿದ್ಧರಿದ್ದಿಲ್ಲ ಮತ್ತು ಅದಕ್ಕೆ ಅದು ಸೂಕ್ತ ಸಮಯವೂ ಆಗಿರಲಿಲ್ಲ; ಆದಕಾರಣ, ಯೋಹಾನನ ವಿಫಲತೆಗಳನ್ನು ಪ್ರವಾದನೆಯ ಭಾಗಶಃ ನೆರವೇರಿಕೆ ಎಂದು ಸೂಚಿಸುವಾಗ, ಯೇಸು "ಎಲೀಯನು ಬರುವುದು ನಿಜ ಬಂದು ಎಲ್ಲವನ್ನು ಸರಿಮಾಡುವನು" ಎಂಬ ಮಾತುಗಳನ್ನು ಕೂಡಿಸುತ್ತಾನೆ. ನಿಚ್ಚಳವಾಗಿ, ಆತನ ಮನಸ್ಸಿನಲ್ಲಿ ಬರುವ ಯುಗದಲ್ಲಿ ತನ್ನ ಮಹಿಮಾಯುತ ಕಾರ್ಯವನ್ನು ಕುರಿತಾಗಿತ್ತು. ಸುವಾರ್ತಾಯುಗದಲ್ಲಿ ಅಲಿಸಿ, ಪರೀಕ್ಷಿಸಿರುವ ಆತನ ಮಹಿಮಾಯುತ 'ಶರೀರ'ದೊಡನೆ ಆಳುವವರ ಬಗ್ಗೆ ಯೋಚಿಸಿದರು. ಆತನು ಪರದೆಯ ಆಚೆಯ ಸಹಸ್ರಮಾನವನ್ನು, ಮತ್ತು ಎಲೀಯ ವರ್ಗವು ಶಕ್ತಿ ಮತ್ತು ಮಹಾ ಮಹಿಮೆಯೊಡನೆ ಬೆಂಕಿಯ ರಥದಲ್ಲಿ ಹಿಡಿದಿರುವುದನ್ನು – ಆತ್ಮೀಕ ಉನ್ನತಿಯನ್ನು ಎದುರು ನೋಡುವವನಾಗಿದ್ದನು.

ಸಭೆಯನ್ನು ಮಾತ್ರವೇ ಉಲ್ಲೇಖಿಸುವಾಗ ಕರ್ತನು ಶಿರಸ್ಸೂ, ಆದ ಮದಲಿಂಗನಿಂದ ಪ್ರತ್ಯೇಕಗೊಂಡ, ವಿಭಿನ್ನಳಾದ ಒರ್ವ ಸ್ತ್ರೀಯು ಚಿತ್ರಣವನ್ನು ಉಪಯೋಗಿಸಲಾಗಿದೆ. ಆಕೆಯು ನಿಶ್ಚಯಗೊಂಡ ಕನ್ಯೆಯಾಗಿದ್ದಾಳೆ. ಆದರೆ ಈ ಪ್ರಕರಣದಲ್ಲಿ ಒಬ್ಬ ಮಾನವ, ಎಲೀಯನ ವಿಷಯದಲ್ಲಿ ಈ ಚಿತ್ರಣವನ್ನು ಉಪಯೋಗಿಸಲಾಗಿದೆ. ಯಾಕೆಂದರೆ ಮುಂದಾಗಿ ಚಿತ್ರಿಸಲ್ಪಟ್ಟಿರುವ ಕಾರ್ಯವು ಕ್ರಿಸ್ತನಿಂದ ಪ್ರತ್ಯೇಕಗೊಂಡ ಸಭೆಯ ಕಾರ್ಯವಲ್ಲ, ಆದರೆ ಇಬ್ಬರದೂ ಒಂದೇ ಕಾರ್ಯವಾಗಿದೆ. ನಮ್ಮ ಕರ್ತನಾದ ಕ್ರಿಸ್ತನು ಶರೀರಧಾರಿಯಾಗಿದ್ದಾಗ ಸಭೆಯ ಶಿರಸ್ಸು ಮತ್ತು ಮುಂದೂತನೂ ಆಗಿದ್ದನು (ಎಲಿಯ) (Head and Foreman). ಆ ಸತ್ಯದಂತೆಯೇ ವಿಜಯಶಾಲಿ ಸಭೆಯ ಶಿರಸ್ಸು – ಕ್ರಿಸ್ತನು ತಲೆ ಮತ್ತು ಸಭೆ ಶರೀರ. ಮನುಷ್ಯನನ್ನು ಚಿತ್ರದಂತೆ ಉಪಯೋಗಿಸಿರುವ ಮತ್ತು ಸಂದರ್ಭಗಳೆಂದರೆ, ಕ್ರಿಸ್ತನಾದ ಯೇಸುವಿನ ಮತ್ತು ಆತನ ದೇಹವಾದ ಸಭೆಯ ಜಂಟಿ ಕಾರ್ಯವು ಮುಂಗುರುತಾಗಿ ತೋರುವಾಗ ಅಸಂಖ್ಯವಾಗಿದೆ; ಉದಾಹರಣೆಗೆ, ಆರೋನ ಮತ್ತು ಮಹಾಯಾಜಕನ ಉದ್ಯೋಗದಲ್ಲಿದ್ದ ಆತನ ಎಲ್ಲಾ ಉತ್ತರಾಧಿಕಾರಿಗಳು ಕರ್ತನನ್ನು ಮತ್ತು ಆತನ ದೇಹದ ಅಂಗಗಳನ್ನು ಪ್ರತಿನಿಧಿಸುವ ಉಪ ಯಾಜಕರನ್ನು ಪ್ರತಿನಿಧಿಸುವ ವರಾಗಿದ್ದರು. ಮೆಲ್ಕಿಚೇದೇಕನು ಅದೇ ರೀತಿಯಲ್ಲಿ ಮಹಿಮೆಯ ಪೂರ್ಣ ಶರೀರವನ್ನು ಪ್ರತಿನಿಧಿಸಿದನು. ಹಾಗೆಯೇ ಮೋಶೆಯೂ. ದಾವೀದ ಮತ್ತು ಸೊಲೊಮೋನರೂ. ಹೀಗಾಗಿ ಎಲೀಯನನ್ನು ಕ್ರಿಸ್ತನು ಮತ್ತು ಆತನ ಸಭೆಯ ಸಂಯುಕ್ತ ಕಾರ್ಯದಲ್ಲಿ ಒಂದು ಚಿತ್ರಣವನ್ನಾಗಿ ಉಪಯೋಗಿಸುವುದು ಪರಿಶುದ್ಧ ಗ್ರಂಥದ ಉಪಯೋಗದಲ್ಲಿ ಸಾಮರಸ್ಯವುಳ್ಳದ್ದಾಗಿದೆ.

ಎಲೀಯನು ಪ್ರತಿನಿಧಿಸುವ ವರ್ಗದ ದೃಷ್ಟಿಯಲ್ಲಿ ನಮ್ಮ ಕರ್ತನು ಪ್ರಕಾಶರೂಪ ಧರಿಸಿದ ಆ ಬೆಟ್ಟದಲ್ಲಿನ ದರ್ಶನದಲ್ಲಿ ಮೂರು ಶಿಷ್ಯರುಗಳನ್ನು ತೋರಿಸುವುದು ಎಷ್ಟೋ ಪ್ರಭಾವಯುತವಾದ (ಮತ್ತಾಯ 17:1–9) ವಾಕ್ಚಾತುರತೆಯಿಂದ ಕೂಡಿದೆ. ಅದು ಬರಲಿರುವ ರಾಜ್ಯದ ದರ್ಶನವಾಗಿದೆ ಎಂದು ಪೇತ್ರನು ಹೇಳಿದ್ದಾನೆ (2 ಪೇತ್ರ 1:16–18). ಯೇಸು ಪ್ರಕಾಶರೂಪ ಹೊಂದಿದ್ದು ಅವರ ಕಣ್ಣ ಮುಂದೆ ಹೊರಸೂಸುವುದಾಗಿರುವಾಗ, ಮೋಶೆಯ ಚಿತ್ರಣವು ಮೋಶೆಯ ಧರ್ಮಶಾಸ್ತ್ರ ಅಥವಾ ಆಜ್ಞಾನಿಯಮಗಳು ಮತ್ತು ಎಲಿಯನ ಚಿತ್ರಣವು ಸುವಾರ್ತೆ

* ಪುರಾತನ ಹಸ್ತ ಪ್ರತಿಗಳಲ್ಲಿ ಮೊದಲು (First) ಎಂಬ ಪದವನ್ನು ಕೈಬಿಡಲಾಗಿದೆ

ಅಥವಾ ಕ್ರೈಸ್ತ ಆಜ್ಞಾವಿಧಿಗಳನ್ನು ಪ್ರತಿನಿಧಿಸುವುದಾಗಿತ್ತು. ಎರಡೂ ದೈವ ಸಂಕಲ್ಪಗಳು ಕ್ರಿಸ್ತನ ಶ್ರಮೆಯ ಬಗ್ಗೆ ಮತ್ತು ಅದನ್ನು ಅನುಸರಿಸುವ ಮಹಿಮೆಯ ಬಗ್ಗೆ ಎದುರು ನೋಡುವುದಾಗಿದ್ದು ಆ ಬಗ್ಗೆಯೇ ಮಾತನಾಡು ವುದಾಗಿತ್ತು.

ಈ ಪ್ರಸ್ತಾಪವನ್ನು ಮುಗಿಸುವ ಮೊದಲು ನಾವು ಪ್ರವಾದಿಯಾದ ಎಲೀಯನ ಜೀವನದಲ್ಲಿನ ಛಾಯೆಯಲ್ಲಿ ಕೆಲವೊಂದು ಲಕ್ಷಣಗಳನ್ನೂ, ಘಟನೆಗಳನ್ನೂ ಪ್ರಸ್ತುತಿಪಡಿಸುತ್ತೇವೆ. ಇದನ್ನು ಸಭೆಯ ಇತಿಹಾಸದೊಂದಿಗೆ ಹೋಲಿಸಬಹುದು, ಪ್ರತಿಸಂಕೇತಿಕನಾದ ಎಲೀಯನ ಬಗ್ಗೆ ಗಮನಿಸಿದೇ ಇರುವವರಿಗೆ ಇವು ನಿಶ್ಚಯವಾಗಿಯೂ ಆಶ್ಚರ್ಯವನ್ನು ಉಂಟುಮಾಡುತ್ತದೆ. ಈ ಹೋಲಿಕೆಯನ್ನು ಕೆಳಕಂಡ ಸಮಾಂತರ ಸಾಲುಗಳಲ್ಲಿ ಕೂಡಲೇ ನೋಡಬಹುದಾಗಿದೆ :–

| ಎಲೀಯ | ಕ್ರೈಸ್ತಸಭೆ |
|---|---|
| ಎಲೀಯನನ್ನು ಸತ್ಯದ ಮತ್ತು ನೀತಿವಂತಿಕೆಗಳ ಬಗ್ಗೆ ನಿಷ್ಠೆಯ ಕಾರಣ ಹಿಂಸಿಸಲಾಯಿತು. | ಕ್ರೈಸ್ತ ಸಭೆಯನ್ನು ಸತ್ಯದ ಮತ್ತು ನೀತಿವಂತಿಕೆಗಳ ಬಗ್ಗೆ ನಿಷ್ಠೆಯ ನಿಮಿತ್ತ ಹಿಂಸಿಸಲಾಯಿತು. |
| ಆತನ ಪ್ರಮುಖ ಹಿಂಸೆಕಾರಳು ಯೆಜೆಬೇಲೆಂಬ ಸ್ತ್ರೀ, ಇಸ್ರೇಲಿನ ದುಷ್ಟ ರಾಣಿ. ಆಕೆಯನ್ನು ಭಕ್ತರ ಶತ್ರುವೆಂದು ಹೆಸರಿಸಲಾಗಿದೆ (ಪ್ರಕಟನೆ 2:20) | ಪ್ರಮುಖ ಹಿಂಸಾಕಾರರು ರೋಮಿನ ಸ್ವಧರ್ಮಭ್ರಷ್ಟ (*apostate*) ಸಭೆ. ಅದು ತನ್ನನ್ನು ಆತ್ಮೀಕ ಇಸ್ರೇಲಿನ ಮೇಲೆ ಆಳುವ ರಾಣಿ ಎಂಬುದಾಗಿ ಹೇಳಿಕೊಂಡಿತ್ತು (ಪ್ರಕ. 18:7). |
| ಯೆಜೆಬೇಲಳ ಹಿಂಸಿಸುವ ಅಧಿಕಾರವನ್ನು ಆಕೆಯ ಪತಿ ಅರಸನಾದ ಆಹಾಬನ ಮೂಲಕ ಕಾರ್ಯಚರಣೆ ಗೊಳಿಸಲಾಗುತ್ತಿತ್ತು . | ಪೋಪರ ಹಿಂಸಿಸುವ ಅಧಿಕಾರವನ್ನು ರೋಮ್ ಸಾಮ್ರಾಜ್ಯದ ಮೂಲಕ ಜಾರಿಗೊಳಿಸಲಾಗುತ್ತಿದ್ದು ಆಕೆಯು ಅದರೊಂದಿಗೆ ಕೂಡಿಕೊಂಡಿದ್ದಳು. |
| ಎಲೀಯನು ಈಜೆಬೇಲ ಮತ್ತು ಅಹಾಬನಿಂದ ಪಲಾಯನ ಮಾಡಿ ದೇವರಿಂದ ಸಿದ್ಧಪಡಿಸಿದ ನಿರ್ಜನ ಪ್ರದೇಶಕ್ಕೆ ಓಡಿ ಹೋದನು. ಅಲ್ಲಿ ದೇವರು ಆತನನ್ನು ಅದ್ಭುತವಾದ ರೀತಿಯಲ್ಲಿ ಪೋಷಿಸಿದನು (1 ಅರಸು 17: 5–9). | ಸತ್ಯ ಸಭೆಯು ಸಾಂಕೇತಿಕ ನಿರ್ಜನ ಪ್ರದೇಶಕ್ಕೆ ಪಲಾಯನ ಮಾಡಿತು ಅಥವಾ ಬೇರ್ಪಡಿಸುವಿಕೆ ಪರಿಸ್ಥಿತಿ ಅಕೆಯ ಸ್ಥಳದಲ್ಲಿ ಪ್ರತ್ಯೇಕತೆಯ ಪರಿಸ್ಥಿತಿ ಇದ್ದು ಅದು ದೇವರಿಂದ ಸಿದ್ಧಪಡಿಸಲಾಗಿತ್ತು. ಅಲ್ಲಿ ಆಕೆಯನ್ನು ಸಂರಕ್ಷಿಸಲಾಯಿತು (ಪ್ರಕಟನೆ 12:6,16). |
| ಎಲೀಯನು ಮೂರೂವರೆ ವರ್ಷಗಳ ಕಾಲ ಆ ನಿರ್ಜನ ಪ್ರದೇಶದಲ್ಲಿದ್ದನು. ಆ ಸಮಯದಲ್ಲಿ ಮಳೆ ಇಲ್ಲವಾಗಿತ್ತು ಮತ್ತು ಆ ದೇಶದಲ್ಲಿ ಘೋರ ಬರಗಾಲವಿತ್ತು (ಯಾಕೋಬ 5–17; 1 ಅರಸು 17:7; 1,8:2.) | ಸಭೆಯು ಮೂರೂವರೆ ಸಂಕೇತಿಕ ವರ್ಷಗಳು (ಒಂದು ವರ್ಷಕ್ಕೆ ಒಂದು ದಿನ, ಅಕ್ಷರಶಃ 1260 ವರ್ಷಗಳು) ನಿರ್ಜನ ಸ್ಥಿತಿಯಲ್ಲಿತ್ತು, ಆ ಕಾಲದಲ್ಲಿ ಸತ್ಯವೆಂಬ ಜೀವಜಲವಿಲ್ಲದೆ ಆತ್ಮೀಕ ಬರಗಾಲವಿತ್ತು (ಪ್ರಕಟನೆ 12:6; 11:3; ಆಮೋಸ 8:11). |
| ಮೂರೂವರೆ ವರ್ಷಗಳ (1260 ದಿನಗಳ) ನಂತರ, ಎಲೀಯನು ಆ ನಿರ್ಜನ ಪ್ರದೇಶದಿಂದ ಹಿಂತಿರುಗಿದ ಮೇಲೆ, ಈಜೆಬೇಲಳ ಪ್ರವಾದಿಗಳ ತಪ್ಪುಗಳು ಪ್ರಕಟವಾಯಿತು, ಸತ್ಯ ದೇವರನ್ನು ಸನ್ಮಾನಿಸಲಾಯಿತು ಮತ್ತು ಧಾರಾಳವಾದ ಮಳೆಯು ಅನುಸರಿಸಿತು (1 ಅರಸು 18:41–45). | 1260 ವರ್ಷಗಳ ಅಂತ್ಯದಲ್ಲಿ ಸತ್ಯದ ಶಕ್ತಿಯು ಮತ್ತು ಅದರ ಸಾಕ್ಷಿಗಳು ಪ್ರಕಟವಾದವು (ಕ್ರಿ. 1799) ಮತ್ತು ಅಲ್ಲಿಂದ ಸತ್ಯವು ಮಿಲಿಯಾಂತರ ಪ್ರಮಾಣದಲ್ಲಿ ಸತ್ಯವೇದಗಳ ಪ್ರತಿ ವರ್ಷವೂ ಹರಿಯತೊಡಗಿ ಪ್ರಪಂಚವನ್ನು ಹಸನು ಮಾಡಿ ಉತ್ತಮ ಫಲಗಳನ್ನು ತಂದಿತು. |
| ಅರಸನು ಮತ್ತು ಜನರು ಮೊದಲಿಗೆ ಸಂತೋಷಪಟ್ಟರು ಮತ್ತು ಎಲೀಯ ಹಾಗೂ ಆತನ ದೇವರನ್ನು ಸನ್ಮಾನಿಸಲಾಯಿತು; ಆದರೆ ಯೆಜೆಬೇಲಳ ಆತ್ಮವು ಬದಲಾಗಲಿಲ್ಲ. ಆಕೆಯು ಇನ್ನೂ ಎಲೀಯನ ಪ್ರಾಣವನ್ನು ಬಯಸುತ್ತಿದ್ದಳು. ಹೀಗಾಗಿ ಆತನು ಪುನಃ ನಿರ್ಜನ ಪ್ರದೇಶಕ್ಕೆ ಪಲಾಯನಮಾಡುವಂತೆ ಬಲವಂತಿಕೆ ಉಂಟಾಯಿತು (1 ಅರಸು 18:40, 45,46; 19:1–4) | ಸತ್ಯವೇದವು ಪ್ರಪಂಚದ ರಾಜ್ಯಗಳು ಕರ್ತನ ಕೈಯನ್ನು ಗ್ರಹಿಸುವಂಥಃ ಆಶೀರ್ವಾದಗಳನ್ನು ತಂದಿತು. ಆದಾಗ್ಯೂ ಪೋಪನ ವಿಚಾರಗಳು – ಯೆಜೆಬೇಲಳು – ಪ್ರೊತೆಸ್ತಾಂತ ಪಂಥವೆಂದು ಕರೆಸಿಕೊಳ್ಳುವವರು, ಭಕ್ತರನ್ನು ನಿರ್ಜನ ಪರಿಸ್ಥಿತಿಗೆ ಓಡಿಹೋಗುವಂತೆ ಬಲವಂತಪಡಿಸಿತು. |
| ಎಲೀಯನ ಜೀವನ ವೃತ್ತಿಯು ಆತನನ್ನು ಈ ಲೋಕದಿಂದ ಕೊಂಡೊಯ್ದಾಗ ಮುಕ್ತಾಯಗೊಂಡಿತು. | ಭಕ್ತರುಗಳು ಈ ಲೋಕದ ಸ್ಥಿತಿಯಿಂದ ಪರಲೋಕದ ಪರಿಸ್ಥಿತಿಗೆ ಬದಲಾಗುವರು |

ಇವುಗಳು ಎದ್ದುಕಾಣುವಂತೆ ಹೊಂದಿಕೆಯಾಗುವ ಸಂಗತಿಗಳೇ ಹೊರತು ಆಕಸ್ಮಿಕವಾದವುಗಳಲ್ಲ. ಎಲೀಯನು ಮಹಾ ದಿನದ ಮುಂಚೆ ಬರಬೇಕಾಗಿರುವದು ಎಂಬ ಸತ್ಯವು, ಮತ್ತು ಈವಾಗ ನಾವು ಸಭೆಯಲ್ಲಿ ಪ್ರತಿಸಂಕೇತಿಕನಾಗಿ ಕಾಣುವ ಎಲೀಯನನ್ನು ಮಲಾಕಿಯು ಉಲ್ಲೇಖಿಸುವ, ಮತ್ತು ಸ್ನಾನಿಕನಾದ ಯೋಹಾನನು ಮತ್ತು ಮುಂದೆ ಎಲೀಯನನ್ನು ಹಾಗಾಗಿ, ಸಂಕೇತಪಡಿಸಿದ ಕರ್ತನ ಮಹಾದಿನ ಆ "ಕಾಲವು ಸಮೀಪವಾಗಿದೆ" ಎಂಬುದನ್ನು ಮತ್ತೊಂದು ಸಾಕ್ಷಿಯಾಗಿ ಪರಿಗಣಿಸಬೇಕು. ಆದರೆ ಇದಕ್ಕೂ ಮೇಲ್ಪಟ್ಟು ಈ ನಮೂನೆಯ ಸಲಹೆಗಳು, ಇತರೆ ದೇವರ ವಾಕ್ಯಗಳಿಂದ ಬೆಂಬಲ ಹೊಂದಿ, ಭಕ್ತರಿಗಾಗಿ ಮಾರ್ಗದರ್ಶನ ನೀಡುವಂತೆ ಮತ್ತು ಅವರು ತಮ್ಮ ಪಾತ್ರವನ್ನು ಒಳ್ಳೆಯದಾಗಿ ನಿರ್ವಹಿಸಲು ಒಪ್ಪುವಂತೆ ವಿನ್ಯಾಸಗೊಂಡು, ನಮ್ಮ ಮೇಲೆ ಬರಲಿರುವ ರೌದ್ರದ ದಿನಗಳಲ್ಲಿ ಅವರನ್ನು ಸಂರಕ್ಷಿಸುವಂತೆ ಬಲಪಡಿಸುವ ದಾಗಿದೆ.

ನಾವು ಮನಸ್ಸಿನ ಮೇಲೆ ಕಪ್ಪು ಚಿತ್ರಣವನ್ನು ಬರೆಯಲು ಬಯಸುವುದಿಲ್ಲ; ಪೂರ್ಣ ಸೂರ್ಯಪ್ರಕಾಶದ ಮುಂಚಿತವಾಗಿ ಕ್ರೋಧದ ದಿನಗಳಲ್ಲಿ ಸಂಭವಿಸುವ ಹತ್ತಿರದ ಭವಿಷ್ಯದಲ್ಲಿ ಉಂಟಾಗುವ ಕ್ಲೇಶ ಮತ್ತು ನಿರುತ್ಸಾಹಗಳ ಬದಲಾಗಿ ನಂತರದಲ್ಲಿ ಬರಲಿರುವ ಮಹಿಮೆಯನ್ನು ಮತ್ತು ಸಹಸ್ರಮಾನದ ಸಂತೋಷಗಳನ್ನು ಸೂಚಿಸಲು ಯೋಚಿಸುತ್ತೇವೆ. ಆದರೆ ಭಕ್ತರುಗಳನ್ನು ಕನಿಷ್ಟ ಪಕ್ಷ ಸ್ವಲ್ಪಮಟ್ಟದಲ್ಲಾದರೂ ಸಮೀಪದಲ್ಲಿ ತೂಗುತ್ತಿರುವ ದುರ್ಘಟನೆಗಳ ಬಗ್ಗೆ ಅಂಥವುಗಳು ಹಾದುಹೋಗುವಾಗ ಅವರುಗಳು ಗಾಬರಿಗೊಳ್ಳದಂತೆ ಅಥವಾ ಮನಗುಂದದಂತೆ, ಅವುಗಳು ಸಂಭವಿಸುವಾಗ ಅವುಗಳನ್ನು ಧೈರ್ಯದಿಂದ ಎದುರಿಸಲು ಶಕ್ತರಾಗುವಂತೆ ಎಚ್ಚರಿಸುವ ಅಗತ್ಯವಿದೆ. ಮತ್ತು ಅವರುಗಳು ಪ್ರಸ್ತುತದ ಆಶೀರ್ವಾದಗಳನ್ನು ಪೂರ್ಣವಾಗಿ ಮೆಚ್ಚಿಕೊಳ್ಳುವಂತೆ ಮತ್ತು ಆ ಕರೆಯ ದಿನದಲ್ಲಿ ಪರಿಶ್ರಮದಿಂದ ಕಾರ್ಯವೆಸಗುವಂತೆ ಮಾಡಬೇಕಾಗಿದೆ. ಯಾಕೆಂದರೆ "ಕಾರ್ಯಗಳನ್ನು ಹಗಲಿರುವಾಗಲೇ ನಡಿಸಬೇಕು; ರಾತ್ರಿ ಬರುತ್ತದೆ (ಕರೆಯ ದಿನವು ಮತ್ತು ಕತ್ತಲಿನ ಸಮಯ ಈಗಿರುವುದಕ್ಕೆ ಹೋಲಿಸಿದರೆ) ಅದು ಬಂದು ಮೇಲೆ ಯಾರೂ ಕೆಲಸ ಮಾಡಲಾರರು".

ಎಲೀಯನ ಮತ್ತು ಸ್ನಾನಿಕನಾದ ಯೋಹಾನ ಇವರಿಬ್ಬರ ಫಲದಾಯಕ ದಿನಗಳಿಗೆ ಅನುಗುಣವಾದ ಬಿರುಗಾಳಿಯ ಮೋಡದ ಮೊದಲಿನ ಅಲ್ಪ ಕಾಲವು ಎಲೀಯನ ವರ್ಗದವರಿಗೆ ಕಾರ್ಯವೆಸಗಲು ಸೂಕ್ತ ಕಾಲವಾಗಿದೆ. ಅದು ಕೃಪೆಯಲ್ಲಿ ವೈಯಕ್ತಿಕ ಬೆಳವಣಿಗೆಗೆ, ಜ್ಞಾನಕ್ಕೆ ಮತ್ತು ಸತ್ಯದ ಹರಡುವಿಕೆಗೆ ಅನುಕೂಲಕರವಾಗಿದೆ – ಮತ್ತು ಹಿಂದೆಂದೂ ತಿಳಿಯದ ಉಪಯುಕ್ತ ಸಮಯವಾಗಿದೆ. ಹಿಂದಿನ ಸತ್ಯಶೋಧಕರು, ಉದಾಹರಣೆಗೆ, ಬೆರೋಯ ಪಟ್ಟಣದವರು ಮುಂತಾದವರಿಗೆ ನಾವು ಹೊಂದಿರುವ ಸಂಪೂರ್ಣವಾದ ಮತ್ತು ಮುದ್ರಿತವಾದ ಆಧಾರಗಳನ್ನೊಳಗೊಂಡ ಸತ್ಯವೇದಗಳು, ಹೊಂದಾಣಿಕೆಗಳು, ಇತಿಹಾಸಗಳು, ಜ್ಞಾನಕೋಶಗಳು, ನಿಘಂಟುಗಳು ಮತ್ತಿತರ ಮೌಲ್ಯಾಧಾರಿತ ಕಾರ್ಯಗಳುಳ್ಳ ಮುಂತಾದ ಮಾಹಿತಿಗಳು ವಿದ್ಯಾರ್ಥಿಗಳಿಗೆ ಸಹಾಯ ಒದಗಿಸುವಲ್ಲಿ ಎಲ್ಲರಿಗೂ ಎಟಕುವ ದರದಲ್ಲಿ, ಮಧ್ಯಮ ಪಟ್ಟಣಗಳಲ್ಲಿನ ಸಾರ್ವಜನಿಕ ಗ್ರಂಥಾಲಯ ಗಳಲ್ಲಿಯೂ ಯಾವುದೇ ಕ್ರಯವಿಲ್ಲದೆ ಸಿಕ್ಕಿದ್ದಲ್ಲಿ. ಇದರೊಂದಿಗೆ, ಉದಯವಾಗಲಿರುವ ಸಹಸ್ರಮಾನ ದಿನದಲ್ಲಿನ ಹೆಚ್ಚುತ್ತಿರುವ ಬೆಳಕು ಮತ್ತು ಎಲ್ಲಾ ವರ್ಗದವರೂ ಓದಿ, ಬುದ್ಧಿವಂತಿಕೆಯಿಂದ ತಮ್ಮಷ್ಟಕ್ಕೆ ಆಲೋಚಿಸುವ ಅವಕಾಶ ದೊರೆಯುತ್ತಿದ್ದರೆ ಅವರು ಎಷ್ಟೋ ಸಂತೋಷ ಪಟ್ಟಿರುತ್ತಿದ್ದರು. ಅಂಥಾಃ ಸಹಾಯಗಳೊಂದಿಗೆ ದೇವರವಾಕ್ಯದ ಬಗ್ಗೆ, ಯೋಜನೆಗಳ ಬಗ್ಗೆ, ಒಂದೇ ವರ್ಷದಲ್ಲಿ, ಕಡಿಮೆ ಅನುಕೂಲ ಸಮಯದಲ್ಲಿ ಕಲಿಯಬಹುದಾದುದಕ್ಕಿಂತ ಹೆಚ್ಚಾಗಿ ಒಂದೇ ದಿನದಲ್ಲಿ ಕಲಿತುಕೊಳ್ಳಬಹುದು. ಕ್ರಿಸ್ತನ ಪ್ರಸನ್ನತೆ ಮತ್ತು ಬರಲಿರುವ ದೇವರ ರಾಜ್ಯದ ಮಹೋನ್ನತ ಸುಗ್ಗಿಯ ಶುಭಸಂದೇಶವನ್ನು ಪ್ರಕಟಿಸುವ ಈ ಕಾಲದಲ್ಲಿರುವ ಕ್ರೈಸ್ತ ಪ್ರಯತ್ನಕ್ಕೆ ಅನುಕೂಲಕರವಾದ, ಮತ್ತು ಕ್ರೈಸ್ತ ಉತ್ಸುಕತೆಯನ್ನು, ಮತ್ತು ಚಟುವಟಿಕೆಗಳನ್ನು ಉತ್ತೇಜಿಸುವ ಮಂಗಳಕರವಾದ ಸಮಯ ಹಿಂದೆಂದೂ ಇದ್ದಿಲ್ಲ.

ನಾವು ಸ್ಥಳದಿಂದ ಸ್ಥಳಕ್ಕೆ ವಿಶ್ವಾಸಿಗಳನ್ನು ಭೇಟಿ ಮಾಡಲು ಹೋಗುವುದಿದ್ದರೆ, ಪೌಲನು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಪ್ರಯಾಣಿಸುತ್ತಿದ್ದ ಸ್ಥಳಗಳನ್ನು ನಾವು ಒಂದೇ ದಿನದಲ್ಲಿ ಇನ್ನೂ ಹೆಚ್ಚು ಅನುಕೂಲತೆಗಳೊಂದಿಗೆ ವ್ಯಾಪಿಸಬಹುದು. ನಾವು ನಮ್ಮ ಸ್ವರದೊಂದಿಗೆ ಮಾತನಾಡುವುದಾದರೆ ನಮಗೆ ಯಾರೂ ಉಪದ್ರವ ಕೊಡದಂತೆ, ಹೆದರಿಸದಂತೆ ಅದನ್ನು ಮಾಡಬಹುದು. ಜನಸಮೂಹವು ಓದುವ, ಬರೆಯುವ ಸಮಯದಲ್ಲಿ ನಾವು ಜೀವಿಸುತ್ತಿದ್ದೇವೆ. ಇದನ್ನು ಹಿಂದಿನ ಕಾಲದಲ್ಲಿ ಕೆಲವರು ಮಾತ್ರವೇ ಮಾಡಬಹುದಿತ್ತು. ಮುದ್ರಿತ ಸುವಾರ್ತೆಯು ಅಗ್ಗವಿರುವ, ಅನುಕೂಲಕರ ಮತ್ತು ಬಾಯಿಮಾತಿನ ಪ್ರಸಂಗಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುವ ಈ ದಿನಗಳಲ್ಲಿ ನಾವಿದ್ದೇವೆ. ಸ್ವಯಿಚ್ಛೆಯುಳ್ಳ ಮನಸ್ಸಿನವರು ಅಕ್ವಿಲ, ಪ್ರಿಸ್ಕಿಲ್ಲರು ಅವರ ಸಮಯದಲ್ಲಿ ಮಾಡಿದ್ದಕ್ಕಿಂತ ಬಹಳಷ್ಟು ಹೆಚ್ಚಾದುದನ್ನು ಅಷ್ಟೇ ಪ್ರಯತ್ನದೊಂದಿಗೆ ಮಾಡಬಹುದು. ನಾವು ಮುದ್ರಿಸಿದ, ಬರೆದ ಪುಟಗಳೆರಡರಿಂದಲೂ ನಮ್ಮ ಕಾಲದ ಅದ್ಭುತವಾದ 'ಮೈಲ್' ಪದ್ಧತಿಯ ಮೂಲಕ ಲೋಕದ ನಮ್ಮ ಎಲ್ಲಾ ಈ ಸ್ನೇಹಿತರಿಗೂ ಮಾತ್ರವಲ್ಲದೆ

ಅಪರಿಚಿತರಿಗೂ, ಸುಮಾರಾಗಿ ಯಾವುದೇ ವೆಚ್ಚವಿಲ್ಲದೆ ಪ್ರಸಂಗಿಸಬಹುದು.

ಆದರೆ ಅಪೋಸ್ತಲನು ಈ ಕಡೇಗಾಲದ ಹೆಸರು ಮಾತ್ರದ ಕ್ರೈಸ್ತರನ್ನು ಉದ್ದೇಶಿಸಿ "ಸ್ವಸ್ಥ ಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ" (2 ತಿಮೋಥೆ 4:3) ಎಂದು ಖಂಡಿತವಾಗಿ ಹೇಳುವವನಾಗಿದ್ದಾನೆ, ಇದು ಶತಮಾನಗಳಿಂದ ಸತ್ಯವಾಗಿರುವಂತೆ ಈಗಲೂ ಸತ್ಯವಾಗಿರುವಾಗ, ಅದಕ್ಕೆ ಇನ್ನೂ ಪ್ರಭಾವಯುಕ್ತವಾದ ಮತ್ತು ಸ್ಪಷ್ಟವಾದ ನೆರವೇರಿಕೆ ಬರಬೇಕಾಗಿದೆ. ಈಗ ಹೆಸರು ಮಾತ್ರದ ಸಭೆಯವರು ತಮ್ಮ ಪಂಥದ ವಿಶ್ವಾಸ ಸೂತ್ರವನ್ನು ಪರಿಗಣಿಸದೆ, "ದೇವರ ಸಮಸ್ತ ಯೋಜನೆಯ" (ಸಮಾಲೋಚನೆ) ಬಗೆಗಿನ "ವಾಕ್ಯವನ್ನು ಬೋಧಿಸುವ" ಬೋಧಕರನ್ನು ಸಹಿಸಿಕೊಳ್ಳುವುದಿಲ್ಲ ಎಂಬುದು ಸತ್ಯ. ಆದರೆ ಅವರು ದೇವರ ವಾಕ್ಯಗಳಿಗಿಂತಲೂ ಹೆಚ್ಚಾಗಿ "ತೀಟೆ ಕಿವಿ"ಗಳುಳ್ಳವರಾಗಿ ವಿಕಾಸವಾದದ ಬಗ್ಗೆ ಮಾನವ ಊಹಾಪೋಹಗಳನ್ನು ಮತ್ತು ವೇದಾಂತಗಳೆಂದು ಹೇಳಿಕೊಳ್ಳುವ ಸಂಗತಿಗಳನ್ನು ಕೇಳಿಸಿಕೊಳ್ಳಲು ಇಷ್ಟಪಡುತ್ತಾರೆ.

ಆದಾಗ್ಯೂ ಅವರು ಅದನ್ನು ಅಡ್ಡಿ ಮಾಡಲಾಗದ ಕಾರಣ, ಅವರು ರೋಮ್ ತನ್ನ ಜಯಪ್ರದ ದಿನಗಳಲ್ಲಿ ಸಹಿಸಿಕೊಂಡಿರಬಹುದಾದಂತೆ ಸ್ವಸ್ಥ ವಿಚಾರಸರಣಿಗಳನ್ನು ಕೆಲಮಟ್ಟಿಗೆ ಸಹಿಸಿಕೊಳ್ಳುತ್ತಾರೆ.

ನಾವು ಇಲ್ಲಿ ಎತ್ತಿ ಹೇಳುವ ಮಾತುಗಳ ಸ್ವಲ್ಪ ಮೊದಲು ಅಪೋಸ್ತಲನು ಈ ಯುಗದ ಕಡೆಯ ದಿನಗಳ ಅಪಾಯಕರವಾದ ಸಮಯವನ್ನು ಉಲ್ಲೇಖಿಸುತ್ತಾನೆ (2 ತಿಮೋ. 3:1–13) ಮತ್ತು ಅದರಲ್ಲಿನ ಅಹಂಕಾರದ ಮನಸ್ಸಿನ, ಭೋಗಾಸಕ್ತರಾದ ಮತ್ತು ಒಳ್ಳೆಯದನ್ನು ನಿಂದಿಸುವ ಗುಣಗಳನ್ನು, ಅದರ ಸಂಪ್ರದಾಯ ಬದ್ಧತೆ, ಲೋಭ, ಅಹಂ ಮತ್ತು ಕೃತಘ್ನತೆ (unthankfulness) ಇವುಗಳನ್ನು ತೋರಿಸಿಕೊಡುತ್ತಾನೆ. ಆತನು ಸಭೆಯಲ್ಲಿ ಕೆಡುಕರು ಮತ್ತು ಸತ್ಯದ ಸನ್ಮಾರ್ಗವನ್ನು ಬಿಟ್ಟುಹೋದವರು ಕೆಟ್ಟತನದಿಂದ ಮತ್ತಷ್ಟು ಕೆಟ್ಟತನಕ್ಕೆ ಹೋಗುವವರಾಗಿ ಇತರರನ್ನು ಮೋಸಗೊಳಿಸುವುದು ಮಾತ್ರವಲ್ಲದೇ ತಮ್ಮ ಕುತರ್ಕ ವಾದಗಳಿಂದ ತಮ್ಮನ್ನೇ ಮೋಸಪಡಿಸಿಕೊಳ್ಳುತ್ತಾರೆ ಎಂದು ಸಾರಿ ತಿಳಿಸುತ್ತಾನೆ. ಅಪೋಸ್ತಲನು ಮಧ್ಯಯುಗಗಳ ಬಗ್ಗೆ ಆಲೋಚಿಸದೆ, ವಿಶೇಷವಾಗಿ ಕಡೆಯ ದಿನಗಳ ಬಗ್ಗೆ ಆಲೋಚಿಸುವನಾಗಿರುವುದರಿಂದ, ನಮ್ಮ ಮುಂದಿರುವ ಸಮಯವು ಸ್ವಲ್ಪವೇ ದೂರದಲ್ಲಿದೆಯಲ್ಲವೋ ಎಂದು ಪ್ರಶ್ನಿಸುತ್ತಾನೆ. "ಕಡೆ ದಿನಗಳಲ್ಲಿ" ಸ್ವಸ್ಥ ಬೋಧನೆಯನ್ನು ಸಹಿಸುವುದಿಲ್ಲ ಅಥವಾ ಯಾವ ಮಟ್ಟದಲ್ಲಿಯೂ ಅನುಮತಿಸಲ್ಪಡುವುದಿಲ್ಲ ಎಂದು ಕೇಳುವುದು ನಿಶ್ಚಯವಾಗಿಯೂ ನ್ಯಾಯವಾಗಿಯೂ ಇದೆ.

ಈಗ ನಿಜವಾಗಿರುವಂತೆ, ಬಹಳ ಮಟ್ಟಿಗೆ, ಯಾರಿಗೂ ಈಗ ಸತ್ಯವನ್ನು ಮಾರಾಟ ಮಾಡಲು, ಸಾಮಾನ್ಯ ಅಂಗಡಿ, ಮಾರುಕಟ್ಟೆಗಳಲ್ಲಿ, ಸಭಾಮಂದಿರಗಳಲ್ಲಿ ಕೊಂಡುಕೊಳ್ಳಲು ಅಥವಾ ಮಾರಲು ಮೃಗದ ಗುರುತು ಅಂದರೆ ಅದರ ಹೆಸರು ಅಥವಾ ಅದನ್ನು ಸೂಚಿಸುವ ಸಂಖ್ಯೆ ಇಲ್ಲದ ಯಾರಿಗೂ ಅನುಮತಿ ಇರದು (ಪ್ರಕಟನೆ 13:17). ಆದಾಗ್ಯೂ ಪೂರ್ಣವಾಗಿ ಪ್ರತಿಷ್ಠೆಗೊಂಡವರು ಅಪೋಸ್ತಲರ ಸಮಯಕ್ಕಿಂತ ಹೆಚ್ಚಾಗಿ ಇನ್ನುಮುಂದೆ ಸುವಾರ್ತೆಯನ್ನು ಸಾರಲು ವಿಶೇಷ ವಿನ್ಯಾಸವುಳ್ಳ ಭವ್ಯವಾದ ದೇವಾಲಯಗಳ ಅವಶ್ಯಕತೆ ಇರುವುದಿಲ್ಲ. ಮತ್ತು ಭವ್ಯವಾದ ಆರ್ಗನ್ ವಾದ್ಯಗಳು ಮತ್ತು ತರಬೇತಿ ಹೊಂದಿದ ಗಾಯಕ ವೃಂದದವರು ಜನರ ಆಕರ್ಷಣೆಯನ್ನು ಸೆಳೆಯುವ ಅಗತ್ಯತೆ ಇರದು. ಹಿಂದಿನ ಕಾಲದಲ್ಲಿದ್ದಂತೆ ಜನ ಸಾಮಾನ್ಯರು ಸಂತೋಷದಿಂದ ಬೀದಿ ಮೂಲೆಗಳಲ್ಲಿ, ಮಾರುಕಟ್ಟೆಯ ಸ್ಥಳಗಳಲ್ಲಿ, ಅಂಚೆಯ ರವಾನೆ ಮತ್ತು ಮುದ್ರಿತ ಹಾಳೆಗಳ ಮೂಲಕವಾಗಿ ಸಂತೋಷದಿಂದ ಸುವಾರ್ತೆಯನ್ನು ಕೇಳಿಸಿಕೊಳ್ಳುವರು ಮತ್ತು ಓದುವರು. ಪ್ರಕಟನೆಗಾರನ ಈ ಹೇಳಿಕೆಯು ಈಗ ಅನುಭವಿಸುತ್ತಿರುವುದಕ್ಕಿಂತ ಹೆಚ್ಚಾಗಿರಲಿಕ್ಕಿಲ್ಲ ಅಲ್ಲವೇ? ಅಪೋಸ್ತಲನಾದ ಪೌಲನ ಹೇಳಿಕೆಯಂತೆ, ಕಡೆಯ ದಿನಗಳಲ್ಲಿ ಸ್ವಸ್ಥ ಬೋಧನೆಯನ್ನು ಸಹಿಸಲಾಗದ ಒಂದು ಸಮಯವು ಬರುತ್ತದೆ. ಈ ಬಗ್ಗೆ ನಮ್ಮ ಅನುಭವವು ಕಾರಾಗೃಹದಲ್ಲಿ ಬಂಧಿಸಲಾದ ಸಾಂಕೇತಿಕ ಸ್ನಾನಿಕನಾದ ಯೋಹಾನನ ಅನುಭವಕ್ಕೆ ಅನುಗುಣವಾಗಿರಲಾರದೋ? ಮತ್ತೊಂದು ಮಾತುಗಳಲ್ಲಿ, ನಾವು ಅಪೇಕ್ಷಿಸುವ ತುಲನಾತ್ಮಕವಾದ ಅನುಕೂಲಕರ ಸಮಯವು ಕಷ್ಟಗಳಿಲ್ಲದೆ ಇಲ್ಲವಾದರೂ, ಬರಲಿರುವ ಸಂತೋಷ ಸಮಯದಲ್ಲಿಯೂ ನೀತಿವಂತಿಕೆಯ ಅಡತಡೆಯಿಲ್ಲದ ಅದು ಈಗಿನಂತೆ ದ್ರಾಕ್ಷಾತೋಟದಲ್ಲಿ ಶ್ರಮಿಸುವಂತೆ ಹೆಚ್ಚು ಅಥವಾ ಕಡಿಮೆ ಅನುಕೂಲಕರವಾಗಿ ಮುಂದುವರೆಯುತ್ತದೆಯೋ?. ಈ ನಮೂನೆಗಳು ಏನನ್ನು ಸೂಚಿಸುತ್ತದೆಂದು ಗಮನಿಸೋಣ. ನಮ್ಮ ಕರ್ತನು ನಮ್ಮ ಗಮನವನ್ನು ಅದರ ಕಡೆಗೆ ತಿರುಗಿಸಿರುವುದರಿಂದ ನಾವು ಎಲೀಯನ ಅಥವಾ ಯೋಹಾನನ ಜೀವನ ಮತ್ತು ಅನುಭವಗಳಲ್ಲಿ ಏನನ್ನು ಕಂಡುಕೊಳ್ಳುತ್ತೇವೆಯೋ ಅವುಗಳು ಸಭೆಯ ಅನುಭವಕ್ಕೆ ಮತ್ತು ಒಂದು ನಮೂನೆಯೆಂದು ಸಮರ್ಥಿಸುವ ಅದರ ಭವಿಷ್ಯದ ಕ್ರಮದ ಸಾಕ್ಷಿಗಳಿಗೆ ಸರಿಯಾಗಿ ಹೊಂದಿಕೆಯಾಗುತ್ತವೆ ಎಂದು ಕಂಡುಬರುತ್ತದೆ.

ಎಲೀಯನು ಒಂದು ಬೆಂಕಿಯ ರಥದ ಮೂಲಕವಾಗಿ ಈ ಭೂಲೋಕದ ದೃಶ್ಯಗಳಿಂದ ಪ್ರತ್ಯೇಕಿಸಲ್ಪಟ್ಟನು. ಇದು ಜೀವಂತವಾಗಿರುವ ಸಭೆಯ ಮತ್ತು ಅಂತ್ಯ ದಿನಗಳಲ್ಲಿ ಉಳಿದಿರುವವರ ಭೂಲೋಕದ

ಓಟ ಕ್ರಮದ ಅಂತ್ಯದಲ್ಲಿ ನಿರೀಕ್ಷಿಸುವ ಆತ್ಮೀಕ ಮಹಿಮೆ ಮತ್ತು ಉನ್ನತಿಯ ಸಚಿತ್ರಣವಾಗಿದೆ. ಆದರೆ ಆತನು ಸುಂಟರ ಗಾಳಿ ಅಥವಾ ಬಿರುಗಾಳಿಯ ಮೂಲಕವಾಗಿ ತೆಗೆದುಕೊಳ್ಳಲ್ಪಟ್ಟನು ಎಂಬುದನ್ನು ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು; ಉರಿಯುವ ರಥವು ಎಷ್ಟರ ಮಟ್ಟಿಗೆ ವಿಜಯದ ಮತ್ತು ತೊಂದರೆಯಿಂದ ಪಾರಾಗುವ ಚಿತ್ರಣವಾಗಿದೆಯೋ ಅಂತೆಯೇ ಬಿರುಗಾಳಿಯು ಕಷ್ಟದ ಸಂಕೇತವಾಗಿದೆ.

ಸ್ನಾನಿಕನಾದ ಯೋಹಾನನ ಮುಕ್ತಾಯದ ಅನುಭವಗಳು ಸ್ಪಷ್ಟವಾಗಿ ಬಾಧೆಯ ಲಕ್ಷಣಗಳಿಂದ ಗುರುತಿಸಲ್ಪಟ್ಟಿದೆ. ಜನರು ಆತನಿಗೆ ವಿಧೇಯರಾಗ ಲಿಲ್ಲವಾದರೂ (ಮತ್ತಾಯ 17:12), ಅವರು ಸ್ವಲ್ಪ ಸಮಯದ ಮಟ್ಟಿಗೆ ಆತನನ್ನು ದೇವರ ಸೇವಕ ಮತ್ತು ಪ್ರವಾದಿಯೆಂದು ಮನ್ನಣೆ ಕೊಟ್ಟರು (ಯೋಹಾನ 5:35). ಆದಾಗ್ಯೂ ಆತನು ಮೆಸ್ಸೀಯನ ಪ್ರಸನ್ನತೆಯನ್ನು ಪ್ರಕಟಿಸಿದಾಗ, "ನಾನು ಕುಗ್ಗಿಸಲ್ಪಡಬೇಕು", "ನಾನು ಕಡಿಮೆಯಾಗಬೇಕು" ಎಂದು ಸಾಕ್ಷಿ ಹೇಳಿದಂತೆಯೇ ಆ ಕೂಡಲೇ ಆತನ ಪ್ರಭಾವವು ಕುಗ್ಗತೊಡಗಿತು. ಆದುದರಿಂದ ಅದು ಹಾಗೆಯೇ ಈ ಯುಗದ ಅಂತ್ಯದಲ್ಲಿರಬೇಕು. ಯೋಹಾನನ ವರ್ಗದವರ (ಎಲೀಯನ ವರ್ಗದವರ) ಕಾರ್ಯವು "ದೇವರ ರಾಜ್ಯವು ಸಮೀಪವಾಗಿದೆ, ಅರಸನು ಪ್ರಸನ್ನನಾಗಿದ್ದಾನೆ" ಎಂಬ ಪ್ರಕಟನೆಯೊಂದಿಗೆ ಮುಕ್ತಾಯವಾಗುವುದು. ಇದು ಈಗ ನಡೆಯುತ್ತಿದೆ; ಮಾತುಗಳು ಕರ್ತನ ದ್ವಿತೀಯಾಗಮನದ ಈ ಸಮಯದಲ್ಲಿಯೂ ಯೋಹಾನನ ಸಾಕ್ಷಿಯ ಅದೇ ಭರದಲ್ಲಿ ಅನ್ವಯವಾಗುತ್ತದೆ. "ನೀವು ಅರಿಯದೇ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; ಆತನೇ ನನ್ನ ಹಿಂದೆ ಬರತಕ್ಕವನು" (ಯೋಹಾನ 1:26). "ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋಧಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು" – ಆ ಮಹಾ ಸಂಕಟದ ದಿನ – ಮತ್ತಾಯ 3:12.

ಯೋಹಾನನು ಕುಗ್ಗಿಸಲ್ಪಟ್ಟಾಗ ಆತನ ಸಂದೇಶವು ಬಿತ್ತರಿಸಲ್ಪಡುವಾಗ ಆತನ ವಿಶೇಷ ಕಾರ್ಯವು ನೆರವೇರಿತು. ಹೀಗೆ ಶಾರೀರಿಕ ಸಭೆಯು ಅದರ ಅಂತಿಮ ಸಂದೇಶವು ಬಿತ್ತರಿಸಲ್ಪಟ್ಟಾಗ ಕುಗ್ಗಿಸಲ್ಪಡಬೇಕು, ಕಡೆಯ ಸದಸ್ಯನು ತನ್ನ ಪ್ರತಿಷ್ಠೆಗೊಂಡ ಜೀವನವನ್ನು ತ್ಯಜಿಸಿದಾಗ, ಮತ್ತು ತೆರೆಯ ಆಚೆ ಮಹಿಮೆಗೆ ಹಾದು ಹೋಗುವಾಗ, ಇನ್ನು ಮುಂದಕ್ಕೆ ಮಹಿಮೆಯಿಂದ ಆಳುವ ಕ್ರಿಸ್ತನ ಅಂಗವಾಗುತ್ತಾನೆ. ಯೋಹಾನನು 'ಯೇಸು ವೃದ್ಧಿಹೊಂದಬೇಕು' ಎಂದು ಹೇಳಿದಂತೆ, ಈಗ ನಿಜವಾದ ರಾಜ್ಯವು ಸ್ಥಾಪನೆಗೊಳ್ಳಲಿರುವಾಗ ಅರಸನು ಪ್ರಸನ್ನನಾಗಿದ್ದಾನೆ, ಆತನ ರಾಜ್ಯವು ಭೂಲೋಕವೆಲ್ಲಾ ತುಂಬಿಕೊಳ್ಳುವತನಕ ಹೆಚ್ಚುತ್ತಾ ಹೋಗುತ್ತದೆ ಎಂದು ನಾವು ಭರವಸದಿಂದ ಹೇಳಬಹುದು. ಗೋಧಿಯನ್ನು ಕೂಡಿಸುವ ಹಾಗೂ ಹೊಟ್ಟಿಗೆ ಬರುವ ಸಂಕಟದ ಸುಗ್ಗಿಯ ಕಾರ್ಯಗಳ ಬಗ್ಗೆ ಯೋಹಾನನ ಪ್ರಕಟನೆಯು ಸಹ ಪ್ರಸ್ತುತ ಸಮಯದಲ್ಲಿ ಅದರ ಸಮಾನಾಂತರವನ್ನು ಕಂಡುಕೊಳ್ಳುವುದು.

'ಪತನಗೊಂಡಾತನ ಬಗ್ಗೆ ಘೋಷಿಸುವ' ಮತ್ತು ಆತನ ಮುಂದಿರುವ ಕಾರ್ಯಗಳ ಬಗೆಗಿನ ಸಂದೇಶವು ಬಿತ್ತರಿಸಲ್ಪಟ್ಟ ಕೂಡಲೇ ಯೋಹಾನನ ಸ್ವಾತಂತ್ರ್ಯವು ನಿಗ್ರಹಿಸಲ್ಪಟ್ಟಿತು. ನಂತರದಲ್ಲಿ, ಅರಸನು ಒಬ್ಬ ಹೆಂಗಸಿನೊಡನೆ ಮಾಡಿದ ಅಕ್ರಮ ಕೃತ್ಯದ ಬಗ್ಗೆ ಯೋಹಾನನು ನಿಂದಿಸಿದಾಗ ಆತನನ್ನು ಕಾರಾಗೃಹಕ್ಕೆ ತಳ್ಳಲಾಯಿತು (ಮತ್ತಾಯ 14;3–4). ದೇವರ ನಿಷ್ಠಾವಂತ ಮಕ್ಕಳು ಹಲವೊಮ್ಮೆ ಕ್ರೈಸ್ತ ಸಭೆ ಮತ್ತು ನಾಗರೀಕ ಅಧಿಕಾರದ ಸಂಯೋಗವು ಸರಿಯಾದುದಲ್ಲ, ಅದು ವೇದ ವಚನದ ಪ್ರಕಾರ 'ವ್ಯಭಿಚಾರ' ಎನಿಸಿಕೊಳ್ಳುತ್ತದೆಂದು (ಪ್ರಕಟನೆ 17:5) ಸೂಚಿಸುವಾಗ, ದೊಡ್ಡ ಅಳತೆಯಲ್ಲಿ ಈ ಲೋಕವು ಸಭೆಗಳಿಂದ ಹಿಂತೆಗೆದು ಕೊಂಡಿದೆಯಾದರೂ, ಈ ಅನ್ಯೋನ್ಯತೆಯು ಇನ್ನೂ ಇದೆ. ದೇವರ ವಾಕ್ಯಗಳು ಹೇಳುವಂತೆ ಬರುವ ಸಂಕಷ್ಟದ ಕಾಲದಲ್ಲಿ ಕ್ರಿಸ್ತನ ಕನ್ಯೆಯರು ಎಂದು ಹೇಳಿಕೊಳ್ಳುವ ನಾಮಾಂಕಿತ ಸಭೆಗಳು ಈ ಲೋಕದ ಅರಸರ ಪರವಾಗಿದ್ದು ಅವರೊಂದಿಗೆ ಒಂದಾಗುವರು; ಮತ್ತು ಸತ್ಯ ಸಭೆಯು ಸ್ನಾನಿಕನಾದ ಯೋಹಾನನ ನಮೂನೆಯಂತೆ ಜನಪ್ರಿಯವಾಗಿರುವುದಿಲ್ಲ ಮತ್ತು ತನ್ನ ಸ್ವತ್ರಂತ್ರದಿಂದ ನಿಗ್ರಹಿಸಲ್ಪಡುವುದು. ಯಾಕೆಂದರೆ ನಂಬಿಗಸ್ತರಾಗಿ ತಪ್ಪುಗಳನ್ನು ವಿರೋಧಿಸುವವರಿಂದ ಹಾಗೂ ಖಂಡಿಸುವವರಿಂದ ಹಾಗಾಗುವುದು.

ಯೋಹಾನನ ಮತ್ತು ಎಲೀಯನ ಪ್ರಕರಣಗಳಲ್ಲಿ, ಒಬ್ಬ ಹೆಂಗಸೇ ಅವರನ್ನು ಹಿಂಸೆಪಡಿಸಿರುವುದಾಗಿದೆ. ಒಬ್ಬ ಅರಸನು ಆಕೆಯ ನಿಯೋಗಿಯೂ, ಕೈಗೊಂಬೆಯೂ ಆಗಿ ಕಾರ್ಯವೆಸಗಿದನು. ಇದು ಹಿಂದಿನ ಕಾಲದಲ್ಲಿನ ಸತ್ಯ ಸಭೆಯನ್ನು ಸಾಂಕೇತಿಸುತ್ತದೆ ಮತ್ತು ಭವಿಷ್ಯದಲ್ಲಿಯೂ ಸಾಂಕೇತಿಸುತ್ತದೆ ಎಂಬುದು ಸಂದೇಹಾತೀತವಾಗಿದೆ. ನಾಮಾಂಕಿತ ಸಭೆಯು ಆ ಸ್ತ್ರೀಯನ್ನು ಪ್ರತಿನಿಧಿಸಲ್ಪಡುವಾಗ, ಅರಸನು ನಾಗರೀಕ ಸರ್ಕಾರವನ್ನು ಪ್ರತಿನಿಧಿಸುತ್ತಾನೆ. ಈ ಪ್ರವಾದನೆಯು ಅವರ ಮಧ್ಯೆ ಈಗ ಇರುವ ನಿಕಟ ಒಗ್ಗಟ್ಟನ್ನು ಮಾತ್ರ ತೋರುವುದಲ್ಲದೆ, ಆಸಕ್ತರಾದವರಿಗೆ ಏನನ್ನು ತೋರ್ಪಡಿಸುತ್ತದೆಂದರೆ, ಈ ಅರಸೊತ್ತಿಗೆ ಶ್ರೀಮಂತ ವರ್ಗದವರು ದೇವರು ನೇಮಿಸಿದ ಜನ ಸಮೂಹವನ್ನು ರಾಜ್ಯಭಾರ ಮಾಡುವ ಮಹಾಪುರುಷರು ಎಂಬ ಮೂಢನಂಬಿಕೆಯಲ್ಲಿಟ್ಟಿರುವ

ಪ್ರಧಾನ ಸನ್ನೆಗೋಲಾಗಿದೆ. ಇದು ಆಗಾಗ್ಗೆ ಒಂದು ಬಲಹೀನವಾದ ಹಾಗೂ ಕೆಡುಕನ ವ್ಯವಸ್ಥೆ. ಇದನ್ನು ಉಪಯೋಗಿಸಿ ಸತ್ಯಸಭೆಯ ಮೇಲೆ ಆಡಳಿತ ನಡೆಸುತ್ತದೆ. ಮತ್ತು ಈ ದಬ್ಬಾಳಿಕೆ ಹಾಗೂ ಅನ್ಯಾಯದ ವಿರುದ್ಧವಾಗಿ ನ್ಯಾಯಕ್ಕಾಗಿ, ಸ್ವಾತಂತ್ರಕ್ಕಾಗಿ ಹಾಗೂ ಸಮಾನ ಹಕ್ಕಿಗಾಗಿ ದಂಗೆ ದೇವರ ಚಿತ್ತವನ್ನು ವಿರೋಧಿಸುವದೆಂದು ಸಾಧಿಸುತ್ತಾರೆ. ಮುಂದೆ ಬರಲಿರುವ ಚಂಡಮಾರುತದಲ್ಲಿ (ಸಂಕಟದ ಸಮಯ) ಇವರಿಗೆ ಕ್ಷೇಮಾಭ್ಯುದಯ ಮತ್ತು ರಕ್ಷಣೆ ಆಗುವುದಕ್ಕೆ ಸರ್ಕಾರ ಆಡಳಿತ ಮತ್ತು ನಾಮಾಂಕಿತ ಸಭೆಗಳು ಬಹಿರಂಗವಾಗಿ ಅಥವಾ ಗುಪ್ತವಾದ ಸಂಯೋಗವಾಗುವುದು ಇವರ ಧೋರಣೆಯಾಗಿದೆ.

ಹೀಗೆ ಮಾತ್ರವಲ್ಲ, ನಿರಂಕುಶಾಧಿಕಾರದೊಡನೆ ಮತ್ತು ಪ್ರತಿಯೊಂದು ನಾಗರೀಕ ರಾಜ್ಯಗಳ ನಡುವಣ ಬರಲಿರುವ ಹೋರಾಟವು ಎಷ್ಟೋ ವಿಚಿತ್ರವಾಗಿರುತ್ತದೆ, ಅಲ್ಲದೇ, ಹಿಂದಿನ ಅನುಭವದ ರೀತಿಯಲ್ಲಿರುವುದಿಲ್ಲ. ಸುಧಾರಿತ, ಸಂಪ್ರದಾಯಪಾಲಕರಾದ, ಧಾರ್ಮಿಕತೆಯ ಒಲವುಳ್ಳ ಜನರು ಅಸ್ಥವ್ಯಸ್ತತೆ ಮತ್ತು ಅರಾಜಕತೆಯ ನಿಮಿತ್ತ ಉಂಟಾಗಬಹುದಾದ ಸಮಾಜದ ಭಗ್ನತೆಯು ಬಹಳ ಕೆಟ್ಟದ್ದೆಂಬುದರ ಬಗ್ಗೆ ಭಯಗೊಂಡು ಸ್ವಭಾವಿಕವಾಗಿ ರಾಜಪ್ರಭುತ್ವವನ್ನು, ದಬ್ಬಾಳಿಕೆಯನ್ನು ಮತ್ತು ದಾಸತ್ವವನ್ನು ನಿಶ್ಚಯವಾಗಿ ಆಯ್ದುಕೊಳ್ಳುತ್ತಾರೆ. ಆದುದರಿಂದ ಅಂಥವರು ಸಭೆ ಮತ್ತು ಚಕ್ರಾಧಿಪತ್ಯದೊಂದಿಗೆ ಸಂಪತ್ತು ಮತ್ತು ಶ್ರೀಮಂತ ವರ್ಗದೊಡನೆ ಸಂಯೋಜನೆಗೊಳ್ಳುತ್ತಾರೆ ಮತ್ತು ಅಡಗಿಸಲಾಗದ ಘರ್ಷಣೆಯನ್ನು ಹತ್ತಿಕ್ಕುವ ಹಾಗೂ ನಿವಾರಿಸುವ ಸಲುವಾಗಿ ಸ್ವೀಕಾರಮಾಡಿಕೊಳ್ಳುವ ಸಾಮಾನ್ಯ ಪ್ರಯತ್ನವಾಗಿದೆ, "ಇದು ಸರ್ವಶಕ್ತನಾದ ದೇವರ ಮಹಾದಿನದ ಕದನವಾಗಿದೆ".

ಪರಿಣಾಮವಾಗಿ, ಬಹುಶಃ ಈ ಕ್ರಮಕ್ಕೆ ಮಾತ್ರವೇ ಹೊರತುಪಡಿಸಿದವರಲ್ಲಿ, ಶಾಂತಿ ಮತ್ತು ಸತ್ಯ ಧರ್ಮವನ್ನು ಪ್ರೀತಿಸುವವರಲ್ಲಿ ಮಾತ್ರವೇ ರಾಜಾಧಿರಾಜನು ತನ್ನ ವಾಕ್ಯದ ಮೂಲಕವಾಗಿ ಆತನ ಯೋಜನೆಗಳನ್ನು ಬಹಿರಂಗಪಡಿಸಲು ಸಂಪ್ರೀತಿಗೊಳ್ಳುವನು (ಯೋಹಾನ 16:13) ಮತ್ತು ಯಾರು ಆತನ ಜ್ಞಾನ ಮತ್ತು ಪ್ರೀತಿಯ ಬಗ್ಗೆ, ಮಾತ್ರವಲ್ಲದೆ ಎಲ್ಲಾ ಕಾರ್ಯಗಳು ಆತನ ವಾಗ್ದಾನಕ್ಕನುಸಾರವಾಗಿ ಕಾರ್ಯವೆಸಗುವನು ಎಂಬ ಭರವಸೆಯುಳ್ಳವರನ್ನು ಮಾತ್ರವೇ ಮೆಚ್ಚಿಕೊಳ್ಳುತ್ತಾನೆ. ಅಂಥಾಃ ಸಂಪ್ರದಾಯ ಪಾಲಕರುಗಳಲ್ಲಿ *(Conservatives)* ಆಜ್ಞೆಯನ್ನು ಪ್ರೀತಿಸುವವರಲ್ಲಿ ಬರಲಿರುವ ಸಾಮಾಜಿಕ ಕ್ರಾಂತಿಯು, ಹಿಂದಿನ ಬಲಹೀನ ವ್ಯವಸ್ಥೆಗಳನ್ನು ತೆಗೆದುಹಾಕಲು ಲೋಕವನ್ನು ಸಮತಟ್ಟು ಮಾಡುವ ಪ್ರಕ್ರಿಯೆಯಲ್ಲಿ ತೊಡಗಿ, ಮಿಲಿಯಾಂತರದ ನೀತಿಯ ರಾಜ್ಯಾಡಳಿತಕ್ಕೆ ಸಿದ್ಧ ಮಾಡುವ ದೇವರ ಯೋಜನೆಯ ಒಂದು ಭಾಗವಾಗಿದೆ ಎಂದು ಮನಗಾಣುತ್ತಾನೆ. ಅದೇ ಪ್ರಕಾರವಾಗಿ ಗ್ರಹಿಸಲು ಮತ್ತು ಅದರಂತೆ ವರ್ತಿಸಲು ಶಕ್ತರಾಗುತ್ತಾರೆ. ಆದರೆ ಇವುಗಳನ್ನು ತಪ್ಪಾದ ಅರ್ಥ ಮಾಡಿಕೊಳ್ಳಲಾಗುತ್ತದೆ, ಮತ್ತು ಪ್ರಕರಣದ ನಿಜಸ್ಥಿತಿಯನ್ನು ಗುರಿ ಇಟ್ಟು ತೋರಿಸುವ ಅವರ ಪ್ರಯತ್ನವು ಸತ್ಯವಾದ ಮತ್ತು ಒಂದೇ ನಿವಾರಣೋಪಾಯವಾಗಿರುವಾಗ ಭವ್ಯವಾದ ಫಲಿತಾಂಶವನ್ನು ಕಾಣದ ಅವರು (ಜನರು) ಮಧ್ಯ ಪ್ರವೇಶಿಸುವರು ಮತ್ತು ಅವರು ತಮ್ಮ ಸ್ವಂತ ಚಿತ್ತವನ್ನು, ಅಲೋಚನೆಗಳನ್ನು ಅಧೀನಪಡಿಸಲು ಇಷ್ಟಪಡದೇ ಇರುವುದರಿಂದ ಅವರು ದೇವರ ಯೋಜನೆಗಳನ್ನು ನೋಡುವಲ್ಲಿ ವಿಫಲಗೊಳ್ಳುವರು. ಯಾವಾಗ ದಬ್ಬಾಳಿಕೆಯ, ನಿರ್ಬಂಧಿತ ಮತ್ತು ಕಡ್ಡಾಯವಾದ ಮಾನದಂಡಗಳು ಅವಶ್ಯವೆಂದು ಭಾವಿಸಲಾಗುತ್ತದೆಯೋ ಅಂಥಾಃ ಮಾನದಂಡಗಳು ಬಹುಶಃ ಕಾರ್ಮಿಕ ಸಂಘಟನೆಗಳನ್ನು ಮಾತ್ರವಲ್ಲದೆ ಅವುಗಳ ತಪ್ಪು ಒಪ್ಪುಗಳ ಬಗ್ಗೆ ವಾದಿಸುವ ಪ್ರಕಟನೆಗಳನ್ನು ಒಳಗೊಂಡಿರುತ್ತವೆ. ಅಲ್ಲದೇ ದೇವರ ಯೋಜನೆಗೆ ಗುರಿ ತೋರಿಸುತ್ತದೆ, ಮತ್ತು ಇದು ಮಾತ್ರವೇ ರಾಷ್ಟಗಳ ಅಂಥಾಃ ದುರವಸ್ಥೆಗೆ ಕಾರಣಗಳನ್ನು ಮತ್ತು ನಿವಾರಣೋಪಾಯಗಳನ್ನು ಸೂಚಿಸುತ್ತವೆ. ಹೌದು, ಬರಲಿರುವ ದೇವರ ರಾಜ್ಯದ ಬಗ್ಗೆ ಸುವಾರ್ತೆಯನ್ನು ಹರಡುವ ಭಕ್ತರ ಪ್ರತಿಯೊಂದು ಪ್ರಯತ್ನಕ್ಕೆ ದಮನಕಾರಿ ಮಾನದಂಡವನ್ನು ತರುವ ಸಮಯವು ಬಹುಶಃ ಹೆಚ್ಚು ವರ್ಷಗಳಷ್ಟು ದೂರವಿಲ್ಲ. ಎಲ್ಲರೂ ಸಮಾನ ಹಿತ ಮತ್ತು ಸಾರ್ವಜನಿಕ ಕ್ಷೇಮದ ಕಾರಣವು ಅಂಥಾಃ ಕ್ರಮವನ್ನು ಒತ್ತಾಯಿಸುತ್ತದೆ.

ಈ ರೀತಿಯಲ್ಲಿ ಎರಡನೆಯ ಕೀರ್ತನೆಯ ಭವಿಷ್ಯ ನುಡಿಗಳು ಬಹುಶಃ ಅಂತ್ಯದಲ್ಲಿ ಮತ್ತು ಈಗ ಊಹಿಸಿರುವುದಕ್ಕಿಂತಲೂ ಕಠಿಯಾದ ರೀತಿಯಲ್ಲಿ ನೆರವೇರುತ್ತವೆ. ಅದು ದೇಹದ ಶಿರಸ್ಸಿನ ಮೇಲೆ (upon the Head and Body) ಈಗಾಗಲೇ ಭಾಗಶಃ ನೆರವೇರಿದೆ – ಅ.ಕೃ 4:25–29.

ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಮೇಲೆ ಪ್ರಶ್ನಿಸಲು ಎಷ್ಟು ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಅಗತ್ಯವಿದೆಯೋ, ಅಷ್ಟರಮಟ್ಟಿಗೆ ಧಾರ್ಮಿಕ ಪ್ರಶ್ನೆಗಳ ಭಾವನೆಗಳನ್ನು ವ್ಯಕ್ತಪಡಿಸುವ ಅಡಚಣೆ ಒಂದೂ ಇಲ್ಲದೇ ಪೂರ್ಣ ಸ್ವಾತಂತ್ರ ಕೊಡಲ್ಪಟ್ಟಿವೆ – ಇದೇ ಎಲ್ಲಾ ಸ್ವಾತಂತ್ರಕ್ಕೆ ಇರುವ ಅಡಿಪಾಯ. ಒಂದು ಪ್ರಬಲವಾದ ಸರ್ಕಾರ ಅಥವಾ ರಾಜಪ್ರಭುತ್ವವು ಒಂದು ದಿನ ಪ್ರಸ್ತುತ ಮಹಾಪ್ರಜಾಪ್ರಭುತ್ವವನ್ನು ಸ್ಥಾನಪಲ್ಲಟಗೊಳಿಸಿದರೆ ಆಶ್ಚರ್ಯಪಡಬೇಕಿಲ್ಲ. ಮತ್ತು ಒಂದು

ಸರ್ವೇಸಾಮಾನ್ಯವಾದ ಧಾರ್ಮಿಕ ನಂಬಿಕೆಯನ್ನು ಸ್ಥಾಪಿಸಿ ಅದನ್ನು ಜಾರಿಗೆ ತರುವುದರಲ್ಲಿ ಮತ್ತು ಇದಕ್ಕೆ ವಿರೋಧವಾಗಿ ಮಾತಾಡುವರು ಅಥವಾ ಬೋಧಿಸುವುದನ್ನು ರಾಜಕೀಯ ಅಪರಾದವೆಂದು ಪರಿಗಣಿಸಿ ಶಿಕ್ಷಿಸಲಾಗುವದು. ಅಂಥಾಃ ಕಿರುಕುಳವು ಈ ಯುಗದ ಅಂತ್ಯ ಅಥವಾ ಸುಗ್ಗಿ ಎಂದು ಸಜ್ಜುಗೊಳಿಸುವುದಲ್ಲದೇ ಯೆಹೂದ್ಯ ಯುಗದ ಮತ್ತೊಂದು ಸಮಾನಾಂತರ ಸುಗ್ಗಿಯೆಂದು ಒದಗಿಸುತ್ತದೆ (ಅ.ಕೃ 4:10–13, 23–30; 5:29–41; 11:19). ಅಪೋಸ್ತಲರಾದ ಪೌಲ ಮತ್ತು ಯೋಹಾನರ ಮಾತುಗಳಿಗೆ (2, ತಿಮೋಥಿ 4:3; ಪ್ರಕಟನೆ 13:17) ಮತ್ತು ಎಲೀಯನ ಸುಂಟರಗಾಳಿಯಲ್ಲಿನ ನಿರ್ಗಮನದಲ್ಲಿ ಮತ್ತು ಸ್ನಾನಿಕನಾದ ಯೋಹಾನನ ಸೆರೆ ಮತ್ತು ಶಿರಚ್ಛೇಧನದಲ್ಲಿ ಪ್ರತಿಪಾದಿಸಿರುವಂತೆ ಕ್ರೈಸ್ತ ಸಭೆಯ ಭೂಲೋಕದ ವೃತ್ತಿ ಜೀವಿತದ ಅಂತ್ಯದಲ್ಲಿನ ಸಾಂಕೇತಿಕ ಉದಾಹರಣೆಗಳಿಗೆ ವ್ಯಾಪಕವಾದ ಮತ್ತು ಆಳವಾದ ಮಹತ್ವವನ್ನು ಕೊಡುವುದಾಗಿದೆ.

ನಾವು ನಮ್ಮ ಅನುಕೂಲತೆಗಾಗಿ ಎರಡು ಪಾಠಗಳನ್ನು ತೆಗೆದುಕೊಳ್ಳಬಹುದು. ಇವುಗಳಿಂದ ನಾವು ಪ್ರವಾದಿಯ ಸಾಕ್ಷಿಯನ್ನು ಸರಿಯಾದ ರೀತಿಯಲ್ಲಿ ಅಥವಾ ತಪ್ಪಾದ ರೀತಿಯಲ್ಲಿ ಓದಿಕೊಂಡಿದ್ದೇವೆಯೋ ಎಂಬುದನ್ನು ಪ್ರಗತಿ, ಇಲ್ಲವೇ ಅಭಿವೃದ್ಧಿಯು ರುಜುವಾತುಪಡಿಸುತ್ತವೆ. ಅವುಗಳೆಂದರೆ, ಮೊದಲನೆಯದಾಗಿ, ನಾವು ಅಜೇಯವಾದ ಸತ್ಯದಿಂದ ಸಮಗ್ರವಾಗಿ ಒದಗಿಸಲ್ಪಟ್ಟ ಮತ್ತು ಉಪದ್ರವವು ನಮ್ಮನ್ನು ಹೆಚ್ಚಿನ ಉತ್ಸಾಹಕ್ಕೆ ಕೊಂಡೊಯ್ಯುವಂತೆ ಶಸ್ತ್ರಸಜ್ಜಿತರಾಗಬೇಕು. ನಮ್ಮ ಮಟ್ಟವನ್ನು ಆಶ್ಚರ್ಯದ ಮೂಲಕವಾಗಲೀ ಭಯದ ಮೂಲಕವಾಗಿಯಾಗಲೀ ಕೆಳಮಟ್ಟಕ್ಕೆ ಕೊಂಡೊಯ್ಯ ಬಾರದು ಅಥವಾ ಈ ಲೋಕದ ಅರಸುಗಳು ಮತ್ತು ಧಾರ್ಮಿಕ ಮುಖಂಡರುಗಳೂ ನಮ್ಮನ್ನು ಮತ್ತು ಸತ್ಯಕ್ಕೆ ಎದುರು ಒಗ್ಗೂಡಿದಾಗ ನಾವು ಶರಣಾಗಬಾರದು. ದೇವರು ನಮಗೆ ಆತನ ಸೇವಕರಂತೆ ಮತ್ತು ರಾಯಭಾರಿಗಳಂತೆ ಸಾಕ್ಷಿಕೊಡುವ ಸವಲತ್ತನ್ನು ನೀಡಿದ್ದಾನೆ (1 ಯೋಹಾನ 3:1). ಎರಡನೆಯದಾಗಿ, ಭವಿಷ್ಯಕ್ಕೆ ಸಂಬಂಧಪಟ್ಟ ಅಂಥಾಃ ಪ್ರತಿಫಲನಗಳು ಪ್ರಸ್ತುತದೊಂದಿಗೆ ವಿಭಿನ್ನತೆಯನ್ನು ಹೊಂದಿದ್ದು ಪ್ರತಿಯೊಬ್ಬ ಪ್ರತಿಷ್ಠೆಗೊಂಡ ದೇವರ ಮಗುವನ್ನು ಪ್ರಸ್ತುತ ಸುಗ್ಗಿಯ ಅನುಕೂಲತೆ ಮತ್ತು ಸವಲತ್ತುಗಳ ಪರಿಶ್ರಮಶೀಲ ಉಪಯೋಗವನ್ನು ಮಾಡುವಂತೆ ಚೇತನಗೊಳಿಸಬೇಕು ಮತ್ತು ಕೊಯ್ಯುವವನಿಗೆ ಕೂಲಿಯು ದೊರಕುತ್ತದೆ ಎಂದು ನೆನಪುಮಾಡಬೇಕು, ನಿಜವಾಗಿಯೂ ಯಾರು ನೆಟ್ಟು ನೀರುಹಾಕುತ್ತಾನೋ ಅವನಿಗೆ ದೊರೆತಂತೆಯೇ ಈಗಲೇ ಉನ್ನತಿಗೆ ಮುಂಚಿತವಾದ ನಿತ್ಯಜೀವದ ಫಲವನ್ನು ಕೂಡಿಸುವ ಸಮಯವಾಗಿದೆ. ಅನುಕೂಲಕರವಾದ ಪ್ರಸ್ತುತ ಸಮಯವು ಸ್ವಲ್ಪಮಟ್ಟಿಗೆ ಸಾಕಷ್ಟು ತನ್ನ ಹೆಚ್ಚಿನ ಸ್ವಾತಂತ್ರ್ಯ ಮತ್ತು ಎಲ್ಲಾ ರೀತಿಯ ಅನುಕೂಲಗಳೊಂದಿಗೆ ದೇವರ ನಿಜವಾದ ಸೇವಕರ ಹಣೆಯ ಮೇಲೆ (ಬೌದ್ಧಿಕವಾಗಿ, ಸತ್ಯದೊಡನೆ) ಮುದ್ರಿಸುವಂತೆ ದೈವೀಕವಾದ ಕ್ರಮದಲ್ಲಿ ಅಣಿಪಡಿಸಲಾಗಿದೆ (ಪ್ರಕಟನೆ 7:3).

*"Let the 'little while' between*
*in its golden light be seen"*

"ಕೊಂಚ ಕಾಲದ ನಡುವೆ
ಬಂಗಾರದ ಬೆಳಕು ಕಾಣಿಸಲಿ"

ಪ್ರಭುವು ಹೇಳುವುದೇನೆಂದರೆ – "ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾನು ಹಗಲಿರುವಾಗಲೇ ನಡೆಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸಮಾಡಲಾರರು". "ಕೆಟ್ಟು ಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ".

ಆದುದರಿಂದ, ಸೂಕ್ತ ಸಮಯದಲ್ಲಿ, ಮುಂತಿಳಿಸಿದಂತೆ ಪ್ರವಾದಿಯಾದ ಎಲೀಯನು ನಮ್ಮ ಕರ್ತನ ಮಹಾ ಹಾಗೂ ಗಮನಾರ್ಹ ದಿನಕ್ಕೆ ಮುಂಚೆ ಬಂದದ್ದನ್ನು ನಾವು ನೋಡುತ್ತೇವೆ. ನಾವು ಆತನ ಮುಕ್ತಾಯದ ಸಾಕ್ಷ್ಯವನ್ನು ಕೇಳಿಸಿಕೊಳ್ಳುತ್ತೇವೆ, "ನೀವು ಅರಿಯದೇ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ" (ಯೋಹಾನ 1:26) ಮತ್ತು "ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋಧಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು" (ಹೊಟ್ಟಿನಂತೆ – ಮನುಷ್ಯರಂತಲ್ಲ). ಆ ಮಹಾ ಸಂಕಟದ ಸಮಯದಲ್ಲಿ ತಣಿಸಲಾಗದ ಬೆಂಕಿಯಿಂದ ಸುಡಲಾಗುವುದು ಎಂದು ಯೋಹಾನನು ಹೇಳಿದಂತೆ ಅಂಥಾಃ ಶಾಪವು ರಾಜಾಧಿರಾಜನ ಹಾದಿ ಸಿದ್ಧಮಾಡುವಂತೆ ಬರಬೇಕಾಗಿದೆ. ಆತನು ಹೆಚ್ಚಿಸಲ್ಪಡಬೇಕು, ಎಲೀಯನು ಕುಗ್ಗಿಸಲ್ಪಡಬೇಕು ಮತ್ತು ಅಂತಿಮವಾಗಿ ಸಂಪೂರ್ಣವಾಗಿ ಅಂಕೆಯಲ್ಲಿಡಲ್ಪಡಬೇಕು. ಇಂಥಾಃ ಸಾಕ್ಷಿಯನ್ನು ನಾವು ಎಲೀಯನ ವರ್ಗದವರ ಕೆಲವರಿಂದ ಮಾತ್ರವೇ ಆಲಿಸುವುದು ಮಾತ್ರವಲ್ಲ, ಎಲೀಯನ ವರ್ಗದ ಎಲ್ಲರೂ ಇದುವರೆಗೆ ಈ ಸಂದೇಶವನ್ನು ಸಾರುತ್ತಾ ಇದ್ದಾರೆ ಮತ್ತು ಎಲೀಯನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಿಷ್ಠಾವಂತರಾದ ಅಂಥವರೇ ಮಹಿಮೆಗೊಂಡ ಎಲೀಯನವರು ಮತ್ತು ಅವರು ಸಹಸ್ರಮಾನ ಕಾಲದಲ್ಲಿ ಎಲ್ಲಾ ಸಂಗತಿಗಳ ಪುನಃವಶದ ಕಾರ್ಯದಲ್ಲಿ

ಅನುಮತಿಸಲ್ಪಟ್ಟಿದ್ದಾರೆ ಮತ್ತು ಅದು ಅದ್ಧೂರಿಯಾಗಿ ಫಲಪ್ರದವಾಗುತ್ತದೆ. ಎಲೀಯನ ಹೆಸರಿನ ಅರ್ಥದಲ್ಲಿ ಆಳವಾದ ಆಲೋಚನೆಯೊಂದು ಕಂಡುಬಂದಿದೆ. ಅದು ಯೆಹೋವನು ನೇಮಿಸುವ (ಪರಾಕ್ರಮಿ) ದೇವರು ಎಂಬುದನ್ನು ಸಂಕೇತಿಸುತ್ತದೆ. ಅದು ಕರ್ತನ ಅಭಿಷಕ್ತನು ಎಂಬ ಸೂಕ್ತವಾದ ಹೆಸರು. ಆತನ ಭವ್ಯವಾದ ಕಾರ್ಯವು ಆತನ ಪವಿತ್ರ ಪ್ರವಾದಿಗಳ ಮೂಲಕ ಲೋಕಾದಿಯಿಂದ ನುಡಿದ ಎಲ್ಲಾ ಸಂಗತಿಗಳನ್ನೂ ಪುನರ್ ವಶಪಡಿಸಿ ಕೊಳ್ಳುವುದು.

ಈ ಪ್ರಸ್ತಾಪವನ್ನು ಮುಕ್ತಾಯಗೊಳಿಸುತ್ತಾ, ನಾವು ಕೆಲವೊಂದು ಸತ್ಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಗಮನಿಸೋಣ:

ಎಲೀಯನ ಕಾರ್ಯಾವಧಿಯ ಅಂತ್ಯಭಾಗದಲ್ಲಿ ಆತನು ಎಲೀಷನನ್ನು ಕರೆದನು. ಎಲೀಷನು ಎಲ್ಲವನ್ನೂ ತ್ಯಾಗ ಮಾಡಿ ಎಲೀಯನನ್ನು ಹಿಂಬಾಲಿಸಿದನು. ಮತ್ತು ಎಲೀಯನನ್ನು ಸುಂಟರಗಾಳಿಯ ಮೂಲಕ ಕರೆದೊಯ್ಯುವ ಸಂಧರ್ಭದಲ್ಲಿ ಆತನ ಅಪ್ಪಣೆಯ ಪ್ರಕಾರ ಎಲೀಷನು ಎಲೀಯನ ಅಧಿಕಾರದ ಕಂಬಳಿಯನ್ನು ಹೊದ್ದುಕೊಂಡು ಅದರ ಮೂಲಕವಾಗಿ ಎಲೀಯನ ಅಧಿಕಾರ ಮತ್ತು ಆತನ ಆತ್ಮನ ಅಂತಸ್ತು ಮತ್ತು ಶಕ್ತಿಯನ್ನು ಹೊಂದಿದವನಾಗಿನಿಂದ ಆತನ ಉತ್ತರಾಧಿಕಾರಿಯಾದನು (2 ಅರಸು 2:9–16). ಎಲೀಯನು ದೇಹದಾರಿಯಾದ ಯೇಸುವಿನ, ಜಯಹೊಂದುವ ಸಭೆಯ, ಸಮೂಹದ, ಒಂದುಸಂಖ್ಯೆಯ ನಮೂನೆಯಾಗಿರುವಂತೆಯೇ, ಎಲೀಷನೂ ಕೂಡ ಒಂದು ವರ್ಗವನ್ನು ಪ್ರತಿನಿಧಿಸುತ್ತಾನೆ ಎಂಬುದ ಸಮಂಜಸವಾಗಿದೆ ಎಂದು ತೀರ್ಮಾನಿಸಿದ್ದೇವೆ. ಅಲ್ಲದೇ ಅವರು ಎಲೀಯನ ವರ್ಗದೊಡನೆ ಆಳವಾದ ಅನುಕಂಪ ಹೊಂದುವ ವರ್ಗವಾಗಿ ಕರ್ತನನ್ನು ಅನುಸರಿಸುತ್ತಾರೆ. ಆದರೆ ಮಹಿಮೆಯನ್ನು ಹೊಂದುವ ವರ್ಗದ ನಿರೀಕ್ಷೆಯಿಲ್ಲ. ಇವರುಗಳು ಕಷ್ಟಗಳೆಂಬ ಸುಂಟರಗಾಳಿಯ ಮೂಲಕ ಎಲೀಯನ ವರ್ಗದಿಂದ ಪ್ರತ್ಯೇಕಿಸಲ್ಪಡುವರು. ಪರಂತು ಆಸಕ್ತಿಯನ್ನು ಉಳಿಸಿಕೊಂಡು ಆಶೀರ್ವಾದವನ್ನು ಹೊಂದಿಕೊಳ್ಳುವರು. ಎಲೀಯನು ಹೊರಟುಹೋದ ಮೇಲೆ, ಎಲೀಷನು ಧೈರ್ಯ ಮತ್ತು ಶಕ್ತಿಯನ್ನು ಹೊಂದಿಕೊಂಡನು. ಆ ಕಾಲದ ವೇದಪಂಡಿತರುಗಳು (ಪ್ರವಾದಿಗಳ ಮಕ್ಕಳು) "ಎಲೀಯನ ಆತ್ಮನು ಈ ಎಲೀಷನ ಮೇಲೆ ನೆಲೆಸಿದೆ" ಎಂದು ಹೇಳಿದರು.

ಎಲೀಯ ಎಂಬ ಹೆಸರಿನ ಅರ್ಥ "ಬಲಶಾಲಿಯಾದ ಬಿಡಿಸುವಾತನು" (ಅಥವಾ ನನ್ನ ದೇವರು ಕಾಪಾಡುತ್ತಾನೆ). ಎಲೀಷನ ಕಾರ್ಯವು ಪುನರ್ವಶದ ಕಾರ್ಯವಾಗಿದೆ. ಇದು ಮುಂದಣ ದಿನಗಳಲ್ಲಿ ಮಹಿಮೆ ಹೊಂದುವ ಸಭೆಯ ಅಧಿಕಾರದಲ್ಲಿ ಪುನರ್ವಶ ಕಾರ್ಯವನ್ನು ಮುನ್ನಡೆಸುವವರ ಜನರ ನಿಯೋಗಗಳ ಮುಂಛಾಯೆ ಯಾಗಿದೆ. ಮತ್ತಿತರ ಅದ್ಭುತ ಕಾರ್ಯಗಳಲ್ಲಿ ಎಲೀಷನು ಬಂಜರು ಭೂಮಿಯಾಗಲೀ ಯಾವ ದುರ್ಮರಣವಾಗಲೀ ಉಂಟಾಗದಂತೆ ನೀರುಗಳನ್ನು ಸ್ವಸ್ಥ(ಸ್ವಚ್ಛ)ಪಡಿಸಿದನು. ಆತನು ಒಬ್ಬ ವಿಧವೆಯೊಬ್ಬಳ ಸಾಲವು ತೀರುವಂತೆ ಆಕೆಯಲ್ಲಿದ್ದ ಎಣ್ಣೆಯನ್ನು ಹೆಚ್ಚಿಸಿದನು. ಆತನು ಸತ್ತುಹೋಗಿದ್ದ ಒಬ್ಬ ಶೂನೇಮ್ಯಳ ಮಗನನ್ನು ಬದುಕಿಸಿದನು. ಆ ರಾಜ್ಯದಲ್ಲಿ ಬರಗಾಲ ಬರಲು, ವೇದಪಂಡಿತರುಗಳಿಗೆ (ಪ್ರವಾದಿಯ ಮಕ್ಕಳಿಗೆ) ಆಹಾರದಲ್ಲಿ ವಿಷಪ್ರಾಶಾಣವಾಗಿದೆ ಎಂಬ ಗೊಂದಲಗಳುಂಟಾಗಿ, ಯಾರೂ ಅದನ್ನು ತಿನ್ನದಿರುವಾಗ, ಎಲೀಷನು ಅದನ್ನು ಸರಿಪಡಿಸಿ ತಿನ್ನಲು ಯೋಗ್ಯವನ್ನಾಗಿ ಮಾಡಿದನು. ಆತನು ಕೆಲವು ರೊಟ್ಟಿಗಳನ್ನು ಹೆಚ್ಚಿಸಿ ಅನೇಕರಿಗೆ ಅವನ್ನು ಹಂಚಲಿಕ್ಕಾಗುವಂತೆ ಮಾಡಿದನು. ಆತನು ಕುಷ್ಟರೋಗಿಯಾಗಿದ್ದ ನಾವಮಾನನ್ನು ಗುಣಪಡಿಸಿದನು. ಯೇಹುವಿಗೆ ರಾಜ್ಯಾಭಿಷೇಕ ಮಾಡುವುದರಲ್ಲಿ ಎಲೀಷನು ದೇವರ ನಿಯೋಗಿ ಯಾಗಿದ್ದನು. ಎಲೀಯನು ಹೇಳಿದ ದೇವರ ಮಾತಿನ ಪ್ರಕಾರ ಆಹಾಬನ ರಾಜವಂಶವು ಯೆಜೆಬೇಲಳನ್ನೂ ಆಕೆಯ ಎಲ್ಲಾ ಯಾಜಕರೂ ಯೇಹುವಿನ ಮೂಲಕ ಹತರಾದರು (2 ಅರಸು 2:19–22; 4:1–7, 18–44; 5:1–14; 9:1–37; 10:28).

ಎಲೀಷನ ಈ ಕಾರ್ಯಗಳು ಇದುವರೆಗೆ ನಿರೀಕ್ಷಿಸುತ್ತಿರುವ ಪುನರ್ವಶದ ಕಾರ್ಯಗಳನ್ನು ಹೋಲುತ್ತಿರುವುದನ್ನು ಕಂಡುಹಿಡಿಯಲು ಕಷ್ಟವಾಗದು. ಇನ್ನು ಸತ್ಯದ ಜಲಗಳು ಇನ್ನುಮುಂದೆ ತಪ್ಪಾಗಿಯೂ ಉಪ್ಪಾಗಿಯೂ ಇರುವುದಿಲ್ಲ, ದೇವರ ವಾಕ್ಯವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದರ ಮೂಲಕ ಅದು ಶುದ್ಧೀಕರಿಸಲ್ಪಡುವುದು. ಸತ್ತವರು ಪುನರ್ವಶಗೊಳ್ಳುವಾಗ, ಬಡವರು ಪ್ರಯಾಸದ ಆತ್ಮಕ್ಕೆ ಸಂತೋಷದ ತೈಲವನ್ನು ಭದ್ರಪಡಿಸಿಕೊಳ್ಳುವಂತೆ ಸಹಾಯ ಹೊಂದಲ್ಪಡುವರು; ಬರಗಾಲದಲ್ಲಿ ಆಹಾರವು (ಸತ್ಯವು) ಆರೋಗ್ಯಕರವಾಗಿ ಅಧಿಕವಾಗುವುದು; ಆಹಾಬನಿಂದ, ಯೆಜೆಬೇಲಳಿಂದ ಪ್ರತಿನಿಧಿಸಲ್ಪಟ್ಟ ಅಧಿಕಾರಿಗಳು ಮತ್ತು ಪದ್ಧತಿಗಳು, ಮತ್ತು ದೇವರ ವಿರೋಧವಾಗಿ ಒಟ್ಟುಗೂಡಿದ ಎಲ್ಲರೂ ಸಂಪೂರ್ಣವಾಗಿ ಮತ್ತು ಅಂತಿಮವಾಗಿ ಹೊರ ಹಾಕಲ್ಪಡುವರು.

* * * * * * *

# ಅಧ್ಯಯನ – 10 Study X

# ಕಾಲವು ಸಮೀಪಿಸಿದೆ

## The Time is at Hand

**ಯಾವುದೂ ಅಡ್ಡಬರುವುದಿಲ್ಲ. ಕ್ರಿಸ್ತನ ರಾಜ್ಯದ ಸ್ಥಾಪನೆ, ಪ್ರಗತಿಯಲ್ಲಿರುವ ಈ ಕಾರ್ಯವು ಪ್ರವಾದನೆಗಳ ಸಾಕ್ಷ್ಯಕ್ಕೆ ಹೊಂದಿಕೆಯಾಗುತ್ತದೆ. ಪ್ರಪಂಚದಾದ್ಯಂತ ಇರುವ ಬುದ್ಧಿವಂತರು ಇದನ್ನು ಹೆಚ್ಚಾಗಿ ನೋಡುವರು. ನಿರೀಕ್ಷಿಸುವ ಸಂತರುಗಳು ಹೆಚ್ಚು ಸುಸ್ಪಷ್ಟವಾಗಿ ನೋಡುವರು. ಸರಿಯಾದ ಮಾರ್ಗದಲ್ಲಿ ಎಲ್ಲರೂ ಕಣ್ಣುತೆರೆಯಬೇಕಾದ ಪ್ರಾಮುಖ್ಯತೆ.**

ವಿಮೋಚಕನ ರಾಜ್ಯವು ಸ್ಥಾಪನೆಯಾಗುವಂತೆ 'ಕಾಲವು ಸಮೀಪವಾಗಿದೆ". ಇದುವೇ ಹಿಂದಿನ ಅಧ್ಯಾಯಗಳ ಏಕಾಭಿಪ್ರಾಯವುಳ್ಳ ಸಾಕ್ಷ್ಯವಾಗಿದೆ. ಯಾವುದೂ ಅಡ್ಡ ಬರುವುದಿಲ್ಲ. ನಾವು ಈಗಾಗಲೇ ಕ್ರಿ.ಶ. 1872ರಿಂದೀಚೆಗಿನ ಏಳನೆಯ ಸಹಸ್ರಮಾನದಲ್ಲಿ ಜೀವಿಸುತ್ತಿದ್ದೇವೆ. ಅನ್ಯಜನರ ರಾಜ್ಯಗಳಿಗೆ ನೀಡಿರುವ ಗುತ್ತಿಗೆಯು 1914 ರಲ್ಲಿ ಮುಗಿಯಬೇಕಾಗಿದೆ. ಮಹಾ ಪ್ರತಿಸಂಕೇತದ ಜೂಬಿಲಿಯು, ಎಲ್ಲಾ ಸಂಗತಿಗಳ ಪುನಃವಶದ ಕಾಲದ ಪ್ರಾರಂಭವು ಮಹಾ ಪುನರ್‌ವಶಕಾರನ ಆಗಮನವಾಗಬೇಕಾಗಿರುವ ಕ್ರಿ.ಶ. 1874ರಲ್ಲಿ ನೆರವೇರಿದೆ. ಆತನ ಬರೋಣದ ವಿಧಾನ ಮತ್ತು ಪ್ರಸ್ತುತದ ಸಮಯದವರೆಗಿನ ಆತನ ಕೆಲಸಗಳ ಗುಣಲಕ್ಷಣಗಳು ಇದುವರೆಗೆ ಇರುವ ಪ್ರವಾದನೆಗಳ ವಿವರಗಳಿಗೆ ಅನುರೂಪವಾಗಿಯೇ ಅವೆ. ಗಮನಿಸುತ್ತಿರುವ ಈ ದೈವೇಚ್ಛೆಯ ಅಂತಿಮ ಲಕ್ಷಣಗಳು ಯೆಹೂದ್ಯ ರೀತಿಗೆ ಸಮರ್ಪಕವಾಗಿವೆ. ಎಲೀಯನು ಬಂದಿದ್ದಾನೆ ಎಂದು ಮುಂತಿಳಿಸಿದಂತೆಯೇ ಆತನನ್ನು ಸ್ವೀಕರಿಸಲಾಯಿತು. ಭವಿಷ್ಯರೂಪದಲ್ಲಿ ಮುಂತಿಳಿಸಿದ ಶಾಪವು, ಮಹಾಸಂಕಟದ ಸಮಯವು ಈಗಾಗಲೇ ಸನ್ನಿಹಿತವಾಗಿದೆ. ಅಧರ್ಮ ಸ್ವರೂಪನು ತನ್ನೆಲ್ಲಾ ಹಗೆ ತುಂಬಿದ ವಿಕಾರಗಳೊಡನೆ ಈಗಾಗಲೇ ಪ್ರಕಟಗೊಂಡಿದ್ದಾನೆ ಮತ್ತು ತನ್ನ ವಿಷಯವಾಗಿ ಮುಂತಿಳಿಸಿದ ಕ್ರಮಪ್ರಕಾರವಾಗಿಯೇ ಮುಂದುವರೆಯುತ್ತಿದ್ದಾನೆ. ಅದುದರಿಂದ, ದೀರ್ಘಕಾಲದಿಂದ ವಾಗ್ದಾನಪಡಿಸಿದ ಮೆಸ್ಸೀಯನ ರಾಜ್ಯಸ್ಥಾಪನೆಯು ನಮ್ಮ ಮುಂದಿರುವ ಮಹಾಘಟನೆ ಯಾಗಿದೆ. ಹಾಗೆ ಮಾತ್ರವಲ್ಲ, ಅದರ ಸ್ಥಾಪನೆಯು ಈಗಾಗಲೇ ಪ್ರಗತಿಯಲ್ಲಿದೆ. ಅಂಧಕಾರದ ಅಧಿಪತಿಯ "ಇಹಲೋಕಾಧಿಕಪತಿ" ಅಡಿಯಲ್ಲಿರುವ ಈ ಲೋಕದ ರಾಜ್ಯಗಳನ್ನು ಅವಶ್ಯವಾಗಿ ತಳ್ಳಿಹಾಕುವ, ಉರುಳಿಸುವುದನ್ನು ಈಗ ಈ ಲೋಕದ ಮಕ್ಕಳ ಸ್ವಾಭಾವಿಕ ಕಣ್ಣುಗಳಿಗೂ ಸ್ವಲ್ಪ ಮಟ್ಟಿಗೆ ಕಂಡುಬರುತ್ತಿದೆ. ಆದರೆ ಇನ್ನೂ ಸ್ಪಷ್ಟವಾಗಿ ದೇವರವಾಕ್ಯವೆಂಬ ಬಯಲು ದುರ್ಬೀನನ್ನು ಧರಿಸುವವರಿಗೆ, ಸಂಭವಿಸುವ ಘಟನೆಗಳು ಅದು ಕಾಣಬೇಕಾಗಿರುವಂತೆ ಮತ್ತಷ್ಟು ಸ್ಪಷ್ಟವಾಗಿ ಕಾಣಬರುತ್ತಿದೆ. ಆ ಕನ್ನಡಕವನ್ನು ಸರಿಯಾದ ರೀತಿಯಲ್ಲಿ ಏಕಾಗ್ರತೆಗೊಳಿಸಿದರೆ, ದೂರದ ಸಂಗತಿಗಳಿಗೆ ಹತ್ತಿರದ ದೃಷ್ಟಿಕೋನವನ್ನು ಒದಗಿಸಿಕೊಡುತ್ತದೆ ಮತ್ತು ಸ್ವಾಭಾವಿಕ ಕಣ್ಣುಗಳಿಗೆ ತಿಳಿಯಲಾಗದ, ಮತ್ತು ಪರಿಣಾಮಗಳಿಗೆ ಮಹಾ ರಾಜಕೀಯ ಮುತ್ಸದ್ದಿಗಳೂ, ತತ್ವಜ್ಞಾನಿಗಳೂ ಮಂದವಾಗಿ ಕಾಣುವ ವಿವರಗಳನ್ನು ಅದು ದೇವರ ಮಕ್ಕಳು ನಿಖರವಾಗಿ ಗ್ರಹಿಸುವಂತೆ ಮಾಡುತ್ತದೆ. ಈ ಲೋಕದ ಜ್ಞಾನಿಗಳು ಸಹಾ ಕೆರಳುತ್ತಿರುವ ಸಾಮಾಜಿಕ ತೊಂದರೆಗಳನ್ನು ಗ್ರಹಿಸಬಹುದು, ಯಾಕೆಂದರೆ ಅಜ್ಞಾನದ ಪರಮಾವಧಿಯು ಹೆಚ್ಚಿನ ಸಾಮಾನ್ಯಜ್ಞಾನಕ್ಕೆ ಮತ್ತು ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಅನುವು ಮಾಡಿಕೊಡುತ್ತದೆ. ಕೆಲವು ತಿಳಿಯದ ಮತ್ತು ನಿರೀಕ್ಷಿಸದ ಅನುಕೂಲತೆಗಳು ಉಂಟಾಗಬಹುದೆಂಬುದಾಗಿ ಅವರುಗಳು ವ್ಯರ್ಥವಾಗಿ ನಿರೀಕ್ಷಿಸಬಹುದಾದರೂ, ದೇವರ ವಾಕ್ಯದಲ್ಲಿ ವಿವರಿಸಿರುವಂತೆ "ಆಕಾಶದ ಶಕ್ತಿಗಳು ಕದಲುವುದರಿಂದ ಮನುಷ್ಯರು ಭಯ ಹಿಡಿದವರಾಗಿ ಲೋಕಕ್ಕೆ ಏನು ಬರುವುದೋ ಎಂದು ಎದುರು ನೋಡುತ್ತಾ ಪ್ರಾಣಹೊಂದಂತಾಗುವುದು'' (ಲೂಕ 21:26). ಯಾಕೆಂದರೆ ಅವರು ಈಗ ಮುಂದುವರೆಯುತ್ತಿರುವ ಸಾಂಕೇತಿಕ ಪರಲೋಕದ ಕಂಪನವನ್ನು ನೋಡುತ್ತಾರೆ ಮತ್ತು ಅಂಥಾಃ ಕಂಪನದಿಂದ ಜನ ಸಮೂಹದವರಿಂದ ತಪ್ಪುಗಳ ಶಕ್ತಿಯನ್ನು ಮೂಢನಂಬಿಕೆಗಳೂ ಮತ್ತು ಧಾರ್ಮಿಕ ಆತ್ಮ ಸಂಯಮವೂ ತೆಗೆದುಹಾಕುವುದರಿಂದ ಹಿಂಸಾಚಾರ ಮತ್ತು ಅರಾಜಕತೆಗಳೂ ಫಲಿಸುತ್ತವೆ.

ಆದರೆ ದೇವರ ದೃಷ್ಟಿಕೋನದಲ್ಲಿ ಜಾಗರೂಕರಾದ ನಂಬಿಗಸ್ತ ಮನೆಯವರ ತೊಂದರೆಯ ತೀವ್ರತೆಯು ಹೆಚ್ಚು ಭಿನ್ನವಾಗಿದೆ ಎಂಬುದನ್ನು ನೋಡುವುದು ಮಾತ್ರವಲ್ಲ, ಅದರ ಆಶೀರ್ವದಿತ ಫಲಗಳನ್ನು ಸಹ ನೋಡುವ ಸವಲತ್ತು ಹೊಂದಿರುತ್ತಾರೆ. ದೇವರ ಮುನ್ನೆಚ್ಚರಿಕೆಯ ಅಡಿಯಲ್ಲಿ ಅದು ಸಹಸ್ರಮಾನಯುಗದಲ್ಲಿ ಪ್ರಾರಂಭಿಸುವುದರ ಮೂಲಕ ಉಪಯೋಗಕ್ಕೆ ಬರುವುದಾಗಿದೆ. ಮತ್ತು ಈ ಸಂಕಟಗಳ ಮೊಳಕೆಯನ್ನು ನಾವು ಅಥವಾ ನಮ್ಮ ಪ್ರೀತಿಪಾತ್ರರು ಪಾಲು ಹೊಂದಬೇಕಾದರೂ ಇದು ಅನುಕೂಲವಾಗಿದೆ.

ನಾವೀಗ ಈ ಜ್ಞಾನದ ಅನುಕೂಲತೆಯನ್ನು ಪಡಕೊಳ್ಳೋಣ, ಅನುಮಾನದಲ್ಲಿಯಾಗಲೀ,

ದಿಗ್ಭ್ರಮೆಯಲ್ಲಾಗಲೀ ಇಲ್ಲದೇ ಇರೋಣ, ಆದರೆ ಕಾಲ ಪ್ರವಾದನೆಗಳನ್ನು ನೀಡುವ ಉದ್ದೇಶದ ಭಾಗವಾಗಿರೋಣ. ಮತ್ತೊಂದು ಉದ್ದೇಶವೆಂದರೆ, ಜನರಲ್ಲಿ ಆ ರಾಜ್ಯದ ಪ್ರತಿನಿಧಿಗಳಾಗಿ ನಮಗೆ ಈಗ ಪ್ರಗತಿಯಲ್ಲಿರುವ ದೈವನಿರ್ವಹಣೆ ಮಹಾ ಬದಲಾವಣೆಗಳ ಬಗ್ಗೆ ಅರಿವಿರಬೇಕು ಮತ್ತು ಲೋಕದ ಮುಂದೆ ದೇವರ ಯೋಜನೆ ಮುಂತಾದವುಗಳ ಬಗ್ಗೆ ಸಾಕ್ಷ್ಯಗಳನ್ನು ಹೊರುವವರಾಗಬೇಕು. ಅದಕ್ಕೆ ಈಗ ಅವರು ಗಮನಕೊಡದೇ ಹೋದರೂ, ನಂತರದಲ್ಲಿ ಅದರಿಂದ ಅವರು ಲಾಭ ಪಡೆಯುವವರಾಗಿದ್ದಾರೆ ಮತ್ತು ಅವರನ್ನೂ ಸಮೀಪಿಸುತ್ತಿರುವ ರೌದ್ರದ ಆ ಮಹಾ ದಿನದಲ್ಲಿ ಕರ್ತನ ಪ್ರತ್ಯಕ್ಷತೆಯನ್ನು ಬೇಗನೇ ಗ್ರಹಿಸಿಕೊಳ್ಳುವಂತೆ ಸಹಾಯಮಾಡುತ್ತದೆ. ಮತ್ತೊಂದು ಉದ್ದೇಶವೆಂದರೆ, ನಂಬಿಗಸ್ತರು ಈ ರೀತಿಯಲ್ಲಿ ಕರ್ತನ ವಾಕ್ಯದಿಂದ ಬಲಗೊಂಡು ಸುಸಜ್ಜಿತರಾದಮೇಲೆ, ಅನೇಕರು ಸಧ್ಯದಲ್ಲೇ "ಕ್ರೈಸ್ತ ಪ್ರಪಂಚದ" ಪಾಷಾಂಡವಾದ ಮತ್ತು ಅನೇಕ ಮೋಸಕರ ತಪ್ಪುಗಳಿಗೆ ಬಲಿಯಾಗಿ ಬಿದ್ದುಹೋಗುವಾಗ, ಅವರು ಹಾಗಾಗದೆ ಬಲವಾಗಿ ನಿಂತುಕೊಳ್ಳಲು ಸಹಾಯವಾಗಬಹುದು. ಮತ್ತೊಂದು ಉದ್ದೇಶವೆಂದರೆ, ಸಾಮಾನ್ಯ ಅನುಭವದ ಪ್ರಕಾರ, ಯುಗಗಳ ಸಮಸ್ತ ಯೋಜನೆಗೆ ಬಲ ಮತ್ತು ಪ್ರಧಾನ ಅಂಶವನ್ನು ನೀಡುವುದು. ಯಾಕೆಂದರೆ, ಸಹಸ್ರಮಾನ ಯುಗದಲ್ಲಿ ಸಮಗ್ರ ಲೋಕವನ್ನು ಸಭೆಯ ಮೂಲಕ ಆಶೀರ್ವದಿಸುವ ದೇವರ ಕೃಪಾ ಯೋಜನೆಯ ಪ್ರಥಮ ಕ್ಷಣಿಕ ದರ್ಶನವು ಆತನ ನಿಷ್ಠಾವಂತ ಮಕ್ಕಳ ಹೃದಯಗಳನ್ನು ತುಂಬಿಸಿ, ಅವರಲ್ಲಿ ಮಿತಿಮೀರಿದ ಉತ್ಕಂಠತೆಯನ್ನು ದಾಖಲಿಸುತ್ತದೆ, ಆದಾಗ್ಯೂ ಇತರರನ್ನು ಜ್ಞಾನೋದಯಗೊಳಿಸುವ ಅವರ ಪ್ರಯತ್ನಗಳು ನಿರುತ್ಸಾಹವನ್ನು ಪಡಕೊಳ್ಳುತ್ತದೆ ಮತ್ತು ಅವರು ತುಲನಾತ್ಮಕವಾಗಿ ಕೆಲವರು ಮಾತ್ರವೇ 'ಕೇಳಿಸಿಕೊಳ್ಳುವ ಕಿವಿ'ಯುಳ್ಳವರಾಗಿದ್ದಾರೆ ಎಂದು ಕಾಣುತ್ತಾರೆ. ಇಂತಹವರ ಪ್ರವೃತ್ತಿ ಏನೆಂದರೆ ಅಮೂಲ್ಯವಾದ ಜ್ಞಾನವೇ ಪ್ರಶಾಂತವಾದ ನೆಲೆಯಾಗಿರುವುದು ಎಷ್ಟೆಂದರೆ ಕನಿಷ್ಟ ನಿಂದನೆ ಮತ್ತು ವಿರೋಧಗಳಿಲ್ಲದೆ ತೆಪ್ಪಗೆ ಇರುವುದಾಗಿದೆ.

ನಮ್ಮ ಈ ಸ್ವಾಭಾವಿಕ ಬಲಹೀನತೆಯನ್ನು ನೋಡಿ, ದೇವರು ಕಾಲ ಪ್ರವಾದನೆಗಳನ್ನು ಉತ್ತೇಜಕವನ್ನಾಗಿ ನಮ್ಮನ್ನು ಪೂರ್ಣವಾಗಿ ಉತ್ತೇಜಿಸಲು ಮತ್ತು ಎಚ್ಚರಗೊಳಿಸಲು ಮತ್ತು ಆತನ ಸೇವೆಯಲ್ಲಿ ಚುರುಕಾಗಿರುವಂತೆ ಒದಗಿಸಿಕೊಟ್ಟಿದ್ದಾನೆ. ಈಗಾಗಲೇ 'ಸುಗ್ಗಿಯ ಸಮಯ'ದಲ್ಲಿದ್ದು, ಸುಗ್ಗಿಯ ಕೆಲಸವು ಕರ್ತನ ಸೇವಕರ ಸಮಯ, ಸೇವೆ ಮತ್ತು ಆಲೋಚನೆಗಳಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಅವರು ಈಗ, ಮೊದಲನೆಯ ಆಗಮನದಲ್ಲಿದ್ದ ಶಿಷ್ಯರುಗಳಂತೆ ಕೊಯ್ಲಿನ ಕೆಲಸವನ್ನು ಮಾಡಬೇಕಾಗಿದೆ – (ಯೋಹಾನ 4: 35–38). ನಾವು ನಮ್ಮ ಕೈಗಳು ಯಾವುದನ್ನು ಮಾಡುವಂತೆ ಕಂಡುಕೊಳ್ಳುತ್ತಿದೆಯೋ ಅದನ್ನೇ ಮಾಡುವಂತೆ ಮುಖ್ಯ ಕೊಯ್ಲುಗಾರನ ಸೂಚನೆಗಳಿಗೆ ವಿಧೇಯರಾಗಿ ಹುಡುಕೋಣ. ಆದರೆ, ಈ ಸುಗ್ಗಿ ಘಟನೆಯ ಸಮಯ ಮತ್ತು ಕ್ರಮಕ್ಕೆ ಹೆಚ್ಚು ನಿರ್ದಿಷ್ಟವಾಗಿ ನಾವು ಮುಂದಿನ ಸಂಪುಟಗಳ ಬಗ್ಗೆ ಓದುಗರ ಗಮನ ಸೆಳೆಯಬೇಕು, ಅದರಲ್ಲಿ ಈ ಹಿಂದಿನ ಮತ್ತು ಇತರೆ ಸಮಯ ಪ್ರವಾದನೆಗಳ ತೀರ್ಮಾನಗಳನ್ನು ಒಂದು ತೇಜೋದೃಷ್ಟಿಗೆ ತರಲಾಗಿದೆ ಮತ್ತು ವಿವಿಧವಾಗಿ ಮುಂತಿಳಿಸಿದ ಪ್ರಭುವಿನ ಪ್ರತ್ಯಕ್ಷತೆ ಮತ್ತು ಆತನ ಕಾರ್ಯಗಳ ಪ್ರಗತಿಯ ಸಂಕೇತಗಳು ಮತ್ತು ಅವನ್ನು ಸಮರ್ಥಿಸುವ ಸಾಕ್ಷ್ಯಗಳು ಗುರುತಿಸಲ್ಪಟ್ಟಿವೆ ಮತ್ತು ಅಂತ್ಯದ ಸಮಯವು ಬಂದಿದೆ ಎಂದು ಸಾಬೀತುಪಡಿಸುತ್ತಿವೆ; ದೇವರ ರಾಜ್ಯಕ್ಕಾಗಿ ಕಾಯುವ ದಿನಗಳು ನೆರವೇರಿದೆ; ಪವಿತ್ರ ಸ್ಥಳದ ಶುದ್ಧೀಕರಣವು ನೆರವೇರಿದೆ; ಸುಗ್ಗಿಯ ಮಹಾಕಾರ್ಯವು ಪ್ರಗತಿಯಲ್ಲಿದೆ; ಇಸ್ರಾಯೇಲ್ಯರ ಪುನಃ ಒಗ್ಗೂಡಿಸುವುದು ಸುವ್ಯಕ್ತವಾಗಿದೆ; ಸರ್ವಶಕ್ತನಾದ ದೇವರ ಮಹಾದಿನದ ಕದನವು ಸಮೀಪವಾಗಿದೆ ಮತ್ತು ದೇವರ ರಾಜ್ಯದ ಮಹಾ ವೈಭವಯುತ ಸ್ಥಾಪನೆಯು ನೇಮಿತವಾದ ಸಮಯದಲ್ಲಿ, ಅನ್ಯಜನಗಳ ಕಾಲದ ಅಂತ್ಯದಲ್ಲಿ ನೆರವೇರುವುದು ಪ್ರಶ್ನಾತೀತವಾಗಿ ನಿಶ್ಚಯವಾಗಿದೆ; ಮತ್ತು ಮುಂದಕ್ಕೆ ತೋರಿಸುವಂತೆ, ಸುಗ್ಗಿಯ ಕಾಲದಲ್ಲಿ ಸಂತರುಗಳ ಕಾರ್ಯ; "ಮಹಾಕರೆಯ" ಅಂತ್ಯವನ್ನು ಗುರುತಿಸುವುದು ಮತ್ತು ಉಳಿದಿರುವ ಮತ್ತು ಜೀವಂತವಿರುವ ಭಕ್ತರ ಬದಲಾವಣೆ; ಮತ್ತು ಐಗುಪ್ತದ ಮಹಾಪಿರಮಿಡ್ಡು ದೇವರ ಸಾಕ್ಷ್ಯಗಳಲ್ಲಿ ಒಂದಾಗಿದೆ ಎಂಬುದನ್ನು ತೋರಿಸುವುದು (ಯೆಶಾಯ 19:19,20) ಅವುಗಳ ಅದ್ಭುತವಾದ ಸಂದೇಶವು ದೇವರ ಯುಗಗಳ ಯೋಜನೆಯ ಮತ್ತು ಅವುಗಳ ಸಮಯಗಳು ಮತ್ತು ಕಾಲಗಳೊಂದಿಗೆ ಪೂರ್ಣವಾದ, ಸಾಧ್ಯಂತವಾದ ಸಮರ್ಥನೆಯಾಗಿದೆ.

## MILLENNIAL DAWN

"All things are onward moving! – Let the blessed time begin!

The old is swiftly passing, and new is coming in!'

The Golden bells are ringing, and the pageant sweeps along

Like an army that is speeding to the measure of a song.

"Dark theories now are waning; they are weak to build upon;

The light is on the hill-tops, and the truth is marching on: -

Many land marks are but shadows, which now fade and flee away

Before the mighty forces that are coming in to-day.

"O brother, why this waiting? And sister, why so mute?

Up with the earthy sunshine! Watch for the golden fruit!

O poet, why this sorrow? O minstrel, why this hush?

And painter, why so long delay the heavenly tint and blush?

"Up with the larks of morning! Up with the rising sun

Waiting not for noon-day, nor halting when begun!

For everything is moving; let the blessed time begin!

The old is swiftly passing, and the new is coming in!

The heavenly light is spreading, - spreading at the kings Command!

It is spreading in its glory, speeding onward through the land

Human creeds are downward tending; let them droop and fade way.

Following in the dawning sunlight, we can see a better way.

Oh, let us all be ready for the work we have to do, -

Toiling late and early, for the laborers are few!

Reaping, as instructed, in the morning light;

Reaping in the harvest field, toiling for the RIGHT!

All things are onward moving! Let earth's jubilee begin!

The old is swiftly passing, and the new is coming in!

It is coming! Oh 'tis coming! My raptured eyes behold!

The light is on the hill-tops, the Shepherd with his Fold"

## ಮಿಲಿಯಾಂತರದ ಉದಯ

ಎಲ್ಲಾ ಸಂಗತಿಗಳು ಮುಂದುವರೆಯುತ್ತಾ ಹೋಗುತ್ತಿವೆ !

ಆಶೀರ್ವಾದದ ಸಮಯ ಪ್ರಾರಂಭವಾಗಲಿ

ಹಳೆಯದು ಶೀಘ್ರವಾಗಿ ಗತಿಸಿಹೋಗುತ್ತಿದೆ, ಹೊಸದು ಬರುತ್ತಲಿದೆ !

ಬಂಗಾರದ ಗಂಟೆಯು ಮೊಳಗುತ್ತಿದೆ, ವೈಭವದ ಉತ್ಸವವು ರಭಸವಾಗಿ ಬರಲಿದೆ,

ಹಾಡಿಗೆ ಲಯಬದ್ಧವಾಗಿ ಚಲಿಸುತ್ತಿರುವ ವೇಗದ ಸೈನ್ಯದ ಹಾಗೆ.

ಕತ್ತಲಿನ ಸಿದ್ಧಾಂತಗಳು ಈಗ ಕ್ಷೀಣಿಸುತ್ತಿವೆ; ನಿರ್ಮಿಸಲು ಅವು ಅಶಕ್ತವಾಗಿವೆ.

ಬೆಟ್ಟದ ಶಿಖರದ ಮೇಲೆ ಹೊಳೆಯುತ್ತಾ, ಸತ್ಯವು ಮುನ್ನಡೆಯುತ್ತಿದೆ.

ಆ ದಿನದಲ್ಲಿ ಬರುವ ಪ್ರಬಲ ಶಕ್ತಿಯು ಮುಂದೆ ಅನೇಕ ಹೆಗ್ಗುರುತುಗಳು ಈಗ ನೆರಳು ಮಾತ್ರ, ಈಗ ಕಳೆಗುಂದಿ ಮರೆಯಾಗುತ್ತಿದೆ.

ಓ ಸಹೋದರರರೇ, ಏಕೆ ಈ ಕಾಯುವಿಕೆ ಮತ್ತು ಸಹೋದರಿಯೆ ಏಕೆ ಈ ಮೌನ!

ಮುಂಜಾವಿನ ಸೂರ್ಯನ ಬೆಳಕಿಗೆ ಏಳು, ಬಂಗಾರದ ಫಲಕ್ಕಾಗಿ ಗಮನವಿಡು

ಓ ಕವಿಯೇ, ಏಕೆ ಈ ದುಃಖ ? ಓ ಅಲೆಮಾರಿಯೇ ಏಕೆ ಈ ನೀರವ ?

ಓ ವರ್ಣಚಿತ್ರಕಾರರೇ ? ಪರಲೋಕದ ಛಾಯೆಗೆ ನಸುಗೆಂಪಿಗೆ ಯಾಕಿಷ್ಟು ತಡ ?

ಹಾಡುವ ಪಕ್ಷಿಯೊಡನೆ ಎದ್ದೇಳಿ ! ಉದಯಿಸುವ ಸೂರ್ಯನೊಡನೆ ಏಳಿರಿ !

ಮಧ್ಯಾಹ್ನಕ್ಕಾಗಿ ಕಾಯದಿರಿ. ಪ್ರಾರಂಭಿಸಿದ ಮೇಲೆ ನಿಲ್ಲಿಸಲಾಗದು !

ಎಲ್ಲವೂ ಮುಂದುವರೆಯುತ್ತಿದೆ; ಆಶೀರ್ವಾದಕರ ಸಮಯವು ಪ್ರಾರಂಭವಾಗಲಿ.

ಹಳೆಯದು ಶೀಘ್ರವಾಗಿ ಗತಿಸಿಹೋಗುತ್ತಿದೆ. ಹೊಸದು ಬರುತ್ತಲಿದೆ !

*ಪರಲೋಕದ ಬೆಳಕು ಹರಡುತ್ತಿದೆ, ಅರಸನ ಆಜ್ಞೆಯಂತೆ ಪಸರಿಸುತ್ತಿದೆ!*

*ತನ್ನ ಮಹಿಮೆಯನ್ನು ಹರಡುತ್ತಿದೆ, ಭೂಮಿಯ ಎಲ್ಲೆಡೆ ವೇಗವಾಗಿ ಮುಂದೋಗುತ್ತಿವೆ.*


*ಮಾನವ ಪಂಥಗಳು ಕೆಳಮುಖವಾಗಿ ಸಾಗುತ್ತಿವೆ. ಅವು ಮಸುಕಾಗಿ ಇಳಿಮುಖವಾಗಲಿ, ಮುಂಜಾನೆಯ ಸೂರ್ಯನ ಬೆಳಕನ್ನು ಅನುಸರಿಸಿರಿ, ನಾವು ಉತ್ತಮ ಮಾರ್ಗವನ್ನು ಕಾಣಬಹುದು.*

*ಆಹಾ, ಮಾಡಬೇಕಾಗಿರುವ ಕಾರ್ಯ ನಡೆಸಲು ನಾವೆಲ್ಲರೂ ಸಿದ್ಧರಾಗೋಣ. ಹಗಲು ರಾತ್ರಿ ದುಡಿಯುವ, ಕೆಲಸಗಾರರು ಅಲ್ಪವೇ ಇದ್ದಾರೆ. ಕೊಯ್ಲು ಮಾಡುವ, ನಿರ್ದೇಶನದಂತೆ, ಹಗಲಿನ ಬೆಳಕಿನಲ್ಲಿ ಸುಗ್ಗಿಯ ಹೊಲದಲ್ಲಿ, ಕೊಯ್ಲು ಮಾಡಿ, ಸರಿಯಾದದಕ್ಕಾಗಿ ಪರಿಶ್ರಮಪಡೋಣ.*

*ಎಲ್ಲಾ ಸಂಗತಿಗಳು ಮುಂದುವರೆಯುತ್ತಾ ಹೋಗುತ್ತವೆ ! ಭೂಮಿಯ ಮಹೋತ್ಸವದ ಸಮಯ ಪ್ರಾರಂಭವಾಗಲಿ ಹಳೆಯದು ಶೀಘ್ರವಾಗಿ ಗತಿಸಿಹೋಗುತ್ತಿದೆ, ಹೊಸದು ಬರುತ್ತಲಿದೆ ! ಅದು ಬರುತ್ತದೆ, ಆಹಾ, ಬಂದೇ ಬರುತ್ತದೆ ! ನನ್ನ ಅತ್ಯಾನಂದದ ಕಣ್ಣುಗಳು ವೀಕ್ಷಿಸುತ್ತಿವೆ ! ಕುರುಬನು ತನ್ನ ನಂಬಿಗಸ್ಥರೊಂದಿಗೆ ಉನ್ನತ ಶಿಖರದಲ್ಲಿ ಬೆಳಗುತ್ತಿದ್ದಾನೆ.*

* * * * * * *

# Studies in the Scripture



*The Most Comprehensive Bible Study Available!*

**THE DIVINE PLAN OF THE AGES -** Gives an outline of the Divine Plan revealed in the Bible, relating to man's redemption and restitution. Contains 358 pages. Cloth bound pocket edition.

**THE TIME IS AT HAND -** Deals with Bible chronology and time prophecies, identifies the Antichrist, and. points out the time and manner of our Lord's return. Contains 371 pages. Cloth bound pocket edition.

**THY KINGDOM COME -** Discusses time prophecies relating to the work of the church at this end of the age, the restoration of Israel, and the setting up of Christ's kingdom. One chapter pertains to the Great Pyramid of Egypt. Contains 384 pages. Cloth bound edition.

**THE BATTLE OF ARMAGEDDON -** Shows the dissolution of the present order. It discusses many prophecies relating to the end of the age, noting especially our Lord's great prophecy of Matt. 24. Contains 660 pages. Cloth bound pocket edition.

**THE ATONEMENT BETWEEN GOD AND MAN -** Contains 498 pages devoted to the fact and philosophy of Christ's atoning work; the nature of man, the divine punishment for sin, the truth about hell, and the operation of the Holy Spirit. Cloth bound pocket edition.

**THE NEW CREATION -** The first chapter deals with the Genesis account of creation. The remainder of the book discusses the laws, duties, privileges, and hopes of the consecrated followers of Jesus. Contains 738 pages. Cloth bound pocket edition.

Write publishers for further information.

**For Translated Kannada Publications :**

**BIBLE STUDENTS**